
॥ ಶ್ರೀಃ ಹರಿಃ ಓಂ ॥

ಶ್ರೀ ಹರಿದಾಸಸಾಹಿತ್ಯ ಪ್ರಚಾರ ಗ್ರಂಥಮಾಲೆ

ಪ್ರಕಟಣೆ (೩)

T. V..KANN.. B.
7th Cross.
BAN.ALORE - 560 0



ಶ್ರೀ ಜಗನ್ನಾಥದಾಸವರ್ಯ ಕೃತ

# ಶ್ರೀಮದ್ಧರಿಕಥಾಮೃತಸಾರ

## ಸರ್ವವ್ಯಾಖ್ಯಾನಸಾರ ಸಂಗ್ರಹ

### ತೃತೀಯ ಸಂಪುಟ

### ವ್ಯಾಪ್ತಿ ಸಂಧಿ

ಪ್ರಕಾಶಕರು :

**ಹೆಚ್. ಎಸ್. ಶ್ರೀನಿವಾಸಮೂರ್ತಿ**

ನಂ. ೬೧, ೫ನೆಯ ಅಡ್ಡರಸ್ತೆ, ನರಸಿಂಹರಾಜಾ ಕಾಲೋನಿ

ಬೆಂಗಳೂರು-೫೬೦ ೦೧೯

ಶ್ರೀಮದ್ಧರಿಕಥಾಮೃತಸಾರ
ಸರ್ವವ್ಯಾಖ್ಯಾನಸಾರ ಸಂಗ್ರಹ
ತೃತೀಯ ಸಂಪುಟ
ವ್ಯಾಪ್ತಿ ಸಂಧಿ.

ಪ್ರಥಮ ಮುದ್ರಣ : ಕ್ರಿ. ಶ. ೧೯೮೬
ಪ್ರತಿಗಳು ಸಂಖ್ಯೆ : ೧೦೦೦

**ಬೆಲೆ . ಹನ್ನೆರಡು ರೂಪಾಯಿಗಳು**

ದ್ವಿತೀಯ ಸಂಪುಟ (ಕರುಣಾ ಸಂಧಿ)
ಬಿಡುಗಡೆಯಾದ ದಿನಾಂಕ : ೨-೨-೧೯೮೬

**ಬೆಲೆ : ಹದಿನೈದು ರೂಪಾಯಿಗಳು**

ಪ್ರತಿಗಳು ದೊರೆಯುವ ಸ್ಥಳ :

೧) **ಹೆಚ್. ಎಸ್. ಶ್ರೀನಿವಾಸಮೂರ್ತಿ**
ಪ್ರಕಾಶಕರು :
ನಂ. ೬೧, ೫ನೆಯ ಅಡ್ಡರಸ್ತೆ,
ನರಸಿಂಹರಾಜಾ ಕಾಲೋನಿ,
ಬೆಂಗಳೂರು-೫೬೦೦೦೯.

೨) **ವೇದಾಂತ ಬುಕ್ ಹೌಸ್,**
ಉಮಾ ಚಿತ್ರಮಂದಿರ ಬಳಿ,
ಚಾಮರಾಜಪೇಟೆ.
ಬೆಂಗಳೂರು-೫೬೦೦೧೮.

ಮುದ್ರಕರು :
**ಪರಿಮಳ ಎಂಟರ್‌ಪ್ರೈಸಸ್,**
ಲಾಲ್‌ಬಾಗ್ ಫೋರ್ಟ್ ರಸ್ತೆ,
ಬೆಂಗಳೂರು-೫೬೦೦೦೪,

# ಪ್ರಕಾಶಕರನುಡಿ

ಶ್ರೀ ಹರಿದಾಸ ಸಾಹಿತ್ಯಾಭಿಮಾನಿಗಳೂ ತತ್ರಾಪಿ ಶ್ರೀಮದ್ಧರಿಕಥಾಮೃತಸಾರ ಗ್ರಂಥರತ್ನದ ಅಧ್ಯಯನದಲ್ಲಿ ಆಸಕ್ತಿಯುಳ್ಳ ಸಮಸ್ತ ಭಗವದ್ಭಕ್ತರಾದ ತಮ್ಮೆಲ್ಲರ ಪಾದಪದ್ಮಂಗಳಿಗೆ ಭಕ್ತಿಯಿಂದ ಪ್ರಣಮಿಸುತ್ತಾ, ನಮ್ಮ ಒಂದೆರಡು ಮಾತುಗಳನ್ನು ತಮ್ಮ ಮುಂದೆ ನಿವೇದಿಸಿಕೊಳ್ಳಲು ಅಪೇಕ್ಷಿಸುತ್ತೇನೆ.

**ಶ್ರೀಮದ್ಧರಿಕಥಾಮೃತಸಾರವು** ಅಪರೋಕ್ಷೀಕೃತಶ್ರೀಶರಾದ ಶ್ರೀ ಜಗನ್ನಾಥದಾಸವರ್ಯರ ಅಮರ ಹಾಗೂ ಅತ್ಯುತ್ಕೃಷ್ಟ ಕೃತಿರತ್ನ. ಅತ್ಯಮೂಲ್ಯ ಹಾಗೂ ಅಪೂರ್ವ ತತ್ತ್ವಾರ್ಥ ರಹಸ್ಯ ಪ್ರಮೇಯರತ್ನಗಳನ್ನು ಒಳಗೊಂಡ ೩೨ ಸಂಧಿಗಳಿಂದ ಘಟಕವಾದ ಈ ಗ್ರಂಥರತ್ನಕ್ಕೆ ಅನೇಕ ಜ್ಞಾನಿಶ್ರೇಷ್ಠರು ಅಮೋಘ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಈಗ ಆ ವ್ಯಾಖ್ಯಾನಗ್ರಂಥಗಳಾವುವೂ ಉಪಲಬ್ಧವಿಲ್ಲ. ಅಲ್ಲದೆ, ಪ್ರಕಟವಾಗಿದ್ದ ಕೆಲವು ವ್ಯಾಖ್ಯಾನಗಳು ದೊರೆಯುತ್ತಿಲ್ಲ. ಈ ಕೊರತೆಯನ್ನು ಮನಗಂಡು, ನಮ್ಮ ಪೂರ್ವಿಕರು ಬರೆದಿಟ್ಟಿರುವ ವಹಿಗಳಿಂದಲೂ ಮತ್ತು ಇತರ ಮೂಲಗಳಿಂದಲೂ ವಾಖ್ಯಾನಗಳನ್ನು ಸಂಗ್ರಹಿಸಿ, ಪ್ರತಿಪದ್ಯಕ್ಕೂ ಮೂಲದಲ್ಲಿರುವಂತೆಯೇ ಸಮಗ್ರರೂಪದಲ್ಲಿ ಮುದ್ರಿಸಿ, ಪ್ರಕಟಿಸುತ ಬೃಹತ್ ಯೋಜನೆಯನ್ನು ಹಾಕಿಕೊಂಡು, **ಶ್ರೀಹರಿದಾಸಸಾಹಿತ್ಯಪ್ರಚಾರ ಗ್ರಂಥಮಾಲೆ**ಯನ್ನು ಪ್ರಾರಂಭಿಸಿ, ಆ ಶ್ರೇಣಿಯಲ್ಲಿ **"ಸರ್ವವ್ಯಾಖ್ಯಾನಸಾರಸಂಗ್ರಹ"** —ಎಂಬ ಮಾಲಿಕೆಯಲ್ಲಿ ಶ್ರೀಮದ್ಧರಿಕಥಾಮೃತಸಾರಕೃತಿರತ್ನವನ್ನು **ಆರು ಪ್ರಮುಖ ವ್ಯಾಖ್ಯಾನಗಳೊಡನೆ** ಪ್ರಕಟಿಸುವ ಕಾರ್ಯಾರಂಭವಾಗಿದೆ. ಪ್ರತಿಸಂಧಿಗೂ ಒಂದರಂತೆ, ಒಟ್ಟು ೩೩ ಪ್ರತ್ಯೇಕ ಸಂಪುಟಗಳಲ್ಲಿ (೩೨ ಮೂಲ ಸಂಧಿಗಳು + ಫಲಸ್ತುತಿ ಸಂಧಿ ಒಂದು = ೩೩ ಸಂಪುಟಗಳು) ಈ ಗ್ರಂಥರತ್ನವನ್ನು ಪ್ರಕಟಿಸಲಾಗುವುದು.

ಶ್ರೀ ಹರಿವಾಯುಗಳ ಅನುಗ್ರಹವಿಶೇಷದಿಂದ, ಮೇಲ್ಕಂಡ ಮಾಲಿಕೆಯಲ್ಲಿ ಈಗಾಗಲೇ ಮೊದಲನೆಯ ಎರಡು ಸಂಧಿಗಳನ್ನು ಪ್ರಥಮ ಹಾಗೂ ದ್ವಿತೀಯ ಸಂಪುಟಗಳ ರೂಪದಲ್ಲಿ ಮುದ್ರಿಸಿ, ಪ್ರಕಟಿಸಲಾಗಿದೆ.

(೧) **ಮಂಗಳಾಚರಣಸಂಧಿ**— ಪ್ರಥಮಸಂಪುಟ (ಪ್ರತಿಯಬೆಲೆ 8 ರೂ. ಗಳು) ಈ ಸಂಪುಟವನ್ನು ದಿನಾಂಕ: ೭–೪–೧೯೮೫ ರಂದು ಶ್ರೀಮನ್ಮಧ್ವಶಾಸ್ತ್ರಸಂಪನ್ನರಾದ ಪರಮಪೂಜ್ಯ ಶ್ರೀ ಬಾಳಿಗಾರು ಶ್ರೀನಿವಾಸಾಚಾರ್ಯರು ತಮ್ಮ ಅಮೃತ ಹಸ್ತದಿಂದ ಬಿಡುಗಡೆಮಾಡಿದರು.

(೨) **ಕರುಣಾಸಂಧಿ**—ದ್ವಿತೀಯಸಂಪುಟ (ಪ್ರತಿಯ ಬೆಲೆ 15 ರೂ. ಗಳು) ಈ ಸಂಪುಟವು ದಿನಾಂಕ: ೨–೨–೧೯೮೬ ರಂದು, ಸುಪ್ರಸಿದ್ಧ ಕೀರ್ತನಕಾರರಾದ ಪೂಜ್ಯ ಶ್ರೀ ಟಿ. ಕೆ. ವೇಣುಗೋಪಾಲದಾಸರ ಅಮೃತಹಸ್ತದಿಂದ ಬಿಡುಗಡೆಯಾಯಿತು.

ಈಗ ಕೇವಲ ಆರು ತಿಂಗಳ ಅವಧಿಯಲ್ಲಿ ಇದೇ ಮಾಲಿಕೆಯಲ್ಲಿ **ವ್ಯಾಪ್ತಿಸಂಧಿ**ಯನ್ನು ತೃತೀಯಸಂಪುಟದ ರೂಪದಲ್ಲಿ ಸನ್ಮಾನ್ಯ ವಾಚಕರ ಕೈಯ್ಯಲ್ಲಿಡಲು ಅಂತ್ಯಂತ ಸಂತೋಷಿಸುತ್ತೇನೆ. ಆರು ಪ್ರಮುಖ ವ್ಯಾಖ್ಯಾನಗಳಪೈಕಿ. ತಾಮ್ರಪರ್ಣೀಯ ಸಂಸ್ಕೃತಮೂಲ ವ್ಯಾಖ್ಯಾನವು ನಮಗೆ ಪೂರ್ಣರೂಪದಲ್ಲಿ ದೊರೆಯದಿದ್ದ ಪ್ರಯುಕ್ತ (ದೊರೆತಿರುವುದು ಅಪೂರ್ಣ) ಪ್ರತಿಪದ್ಯಕ್ಕೂ ಇತರ ಐದು ಪ್ರಮುಖ ವಾಖ್ಯಾನಗಳನ್ನು ಮಾತ್ರ ಮೂಲದಲ್ಲಿರುವಂತೆಯೇ, ಸಮಗ್ರರೂಪದಲ್ಲಿ ಕೊಡಲಾಗಿದೆ, ಇದಕ್ಕೆ ಸಮಸ್ತ ಹರಿದಾಸ ಸಾಹಿತ್ಯಾಭಿಮಾನಿಗಳಲ್ಲಿ ಕ್ಷಮೆ ಕೋರುತ್ತೇವೆ, ತಾಮ್ರಪರ್ಣೀಯ ವ್ಯಾಖ್ಯಾನದ ವಹಿಗಳು, (ವ್ಯಾಪ್ತಿಸಂಧಿಗೆ ಸಂಬಧಿಸಿದಂತೆ) ಯಾವ ಮಹನೀಯರಲ್ಲಿ ಇದ್ದರೂ, ಅವುಗಳನ್ನು ನಮಗೆ ಕೃಪೆಮಾಡಿ ಕೊಟ್ಟರೆ, ಅದರ ನಕಲನ್ನು ತಯಾರಿಸಿಕೊಂಡು, ಜೋಪಾನವಾಗಿ ಆ ವಹಿಗಳನ್ನು ಅವರಿಗೆ ವಾಪಸ್ಸು ಮಾಡಲಾಗುವುದು, ಪುನರ್ಮುದ್ರಣವಾಗುವ ಸಂದರ್ಭದಲ್ಲಿ, ಆ ವ್ಯಾಖ್ಯಾನವನ್ನು ಅಳವಡಿಸಲು ಅನುಕೂಲ

ವಾಗುವುದು. ಸಹಕರಿಸಬೇಕಾಗಿ ವಿನಂತಿ. ಸನ್ಮಾನ್ಯರಾದ ಸಕಲ ಭಗವದ್ಭಕ್ತರೂ ಈ ಪ್ರಕಟಣೆಯನ್ನು ತುಂಬು ಹೃದಯದ ಅಭಿಮಾನದಿಂದ ಸ್ವಾಗತಿಸುತ್ತಾರೆಂದು ಭಾವಿಸುತ್ತೇನೆ.

## ಮಹನೀಯರಲ್ಲಿ ಸವಿನಯ ವಿನಂತಿ :

ಸನ್ಮಾನ್ಯರೆ,

ಮುಂದಿನ ಸಂಪುಟಗಳು ಆದಷ್ಟು ಬೇಗ ಬೇಗ ಮುದ್ರಣವಾಗಿ, ಅತ್ಯಲ್ಪ ಕಾಲಾವಧಿಯಲ್ಲಿ ಸನ್ಮಾನ್ಯ ವಾಚಕರ ಕೈ ಸೇರುವಂತೆ ಮಾಡಲು, ಪ್ರಕಾಶನದ **ಸಲಹಾಮಂಡಲಿ**ಯು ಒಂದು ರಚನಾತ್ಮಕವಾದ ಸಲಹೆಯನ್ನು ತಮ್ಮೆಲ್ಲರ ಮುಂದೆ ಇಟ್ಟಿದೆ. **ಆ ಸಲಹೆ**ಯ ಪ್ರಕಾರ, 108ರೂ. ಅಥವಾ ಅದಕ್ಕೆ ಮೇಲ್ಪಟ್ಟು ದ್ರವ್ಯಸಹಾಯ ನೀಡುವ ಮಹನೀಯರನ್ನು **ಅಭಿಮಾನಿ**ಗಳೆಂದು ಪರಿಗಣಿಸಲಾಗುವುದು. ಅಂತಹ ಅಭಿಮಾನಿಗಳಿಗೆ ದ್ವಿತೀಯ ಸಂಪುಟದಿಂದ ಪ್ರಾರಂಭಿಸಿ ಅಷ್ಟಮ ಸಂಪುಟದವರೆಗೆ (**ಮಾತೃಕಾಸಂಧಿ**) ಏಳು ಸಂಪುಟಗಳನ್ನು ಒದಗಿಸಲಾಗುವುದು. ಬೆಂಗಳೂರಿನಿಂದ ಹೊರಗಿರುವ ಮಹನೀಯರಿಗೆ ಪ್ರತಿಗಳನ್ನು ರಿಜಿಸ್ಟರ್ಡ್ ಪೋಸ್ಟಿನ ದ್ವಾರಾ ಕಳುಹಿಸಲಾಗುವುದು. ಅಂಚೆವೆಚ್ಚ ಉಚಿತ.

ಈಗಾಗಲೇ ಕೆಲವು ಮಹನೀಯರು ಅಭಿಮಾನಿಗಳಾಗಿ ನೋಂದಾಯಿಸಲ್ಪಟ್ಟಿದ್ದಾರೆ. ಅಂತಹವರ ಹೆಸರಿನ ಪಟ್ಟಿಯನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ, ಅವರ ಉದಾರರೂಪವಾದ ನೆರವಿನಿಂದಲೇ ಈ ತೃತೀಯ ಸಂಪುಟದ ಪ್ರಕಟಣೆಯನ್ನು ಇಷ್ಟು ಬೇಗನೆ ಹೊರತರಲು ಸಾಧ್ಯವಾಯಿತು. ಇಂತಹ ಅಭಿಮಾನಿಗಳು ಕನಿಷ್ಠಪಕ್ಷ ೫೦ ಮಂದಿಯಾದರೂ ದ್ರವ್ಯಸಹಾಯ ಮಾಡಲು ಮುಂದೆ ಬಂದರೆ, ನಾಲ್ಕನೆಯ ಹಾಗೂ ಐದನೆಯ ಸಂಪುಟಗಳನ್ನು ಮುದ್ರಿಸಿ, ಪ್ರಕಟಿಸಲು ಸಹಾಯವಾಗುವುದು. ಅವೆರಡು ಸಂಧಿಗಳ **(ಭೋಜನರಸವಿಭಾಗಸಂಧಿ ಮತ್ತು ವಿಭೂತಿಸಂಧಿ)** ಹಸ್ತಪ್ರತಿಗಳು

ಈಗ ನಮ್ಮಲ್ಲಿ ಸಿದ್ಧವಾಗಿವೆ. ಅಭಿಮಾನಿಗಳು ದೊರೆಯದಿದ್ದಲ್ಲಿ, ತೃತೀಯ ಸಂಪುಟದ ಪ್ರತಿಗಳು ಮಾರಾಟವಾದಂತೆಲ್ಲಾ ಬರುವ ಉತ್ಪತ್ತಿಯಿಂದ ಪ್ರಕಟಿಸಲಾಗುವುದು. ಇದರಿಂದ ಮುದ್ರಣ ಕಾರ್ಯವು ವೃಥಾ ವಿಳಂಬ ವಾಗುವುದು. ಇಂತಹ ಬೃಹತ್ ಪ್ರಕಟನಾ ಯೋಜನೆ ಕಾರ್ಯಗತವಾಗ ವಾಗಬೇಕಾದರೆ, ನನ್ನ ಸಮಸ್ತ ಬಂಧು ಹಾಗೂ ಮಿತ್ರವರ್ಗ, ಅಷ್ಟೇ ಅಲ್ಲದೆ ಕರ್ನಾಟಕ ಹಾಗೂ ಹೊರನಾಡಿನ ಸಕಲ ಹರಿದಾಸ ಸಾಹಿತ್ಯಾಭಿಮಾನಿ ಗಳ ತುಂಬು ಹೃದಯದ ನೆರವು, ಪ್ರೋತ್ಸಾಹ ಮತ್ತು ಸಹಕಾರಗಳು ಅತ್ಯಗತ್ಯ. 108 ರೂ. ದ್ರವ್ಯಸಹಾಯ ಮಾಡುವ ಅಭಿಮಾನಿಗಳಿಗೆ ಏಳು ಸಂಪುಟಗಳನ್ನು ಒದಗಿಸುವುದರಿಂದ, ಅವರಿಂದ ಪಡೆಯುವ ಮೊಬಲಗು ಈ ಸಂಪುಟಗಳಿಗೆ ಮುಂಗಡರೂಪದ ಮೌಲ್ಯವಾಗುವುದು. ಆದರೆ ಇದರಿಂದ ಮುದ್ರಣಕಾರ್ಯ (ಪ್ರತ್ಯೇಕ ಮುದ್ರಣಾಲಯಗಳಲ್ಲಿ) ತ್ವರಿತವಾಗಿ ಸಾಗಲು ಅನುಕೂಲವಾಗುವುದು.

ಈ ತೃತೀಯಸಂಪುಟವನ್ನು ಪಡೆಯುವ ಎಲ್ಲಾ ಸನ್ಮಾನ್ಯರಲ್ಲಿ ಇನ್ನೊಂದು ವಿಶೇಷ ವಿನಂತಿ :—

(೧) ತಾವೂ ಸಹ 108 ರೂ. ಗಳನ್ನು ಪಾವತಿಮಾಡಿ. ಒಬ್ಬರು ಅಭಿಮಾನಿಗಳಾಗಿ ಜ್ಞಾನಪ್ರಚಾರರೂಪವಾದ ಈ ಪುಣ್ಯಕಾರ್ಯದಲ್ಲಿ ಭಾಗಿ ಗಳಾಗಬೇಕೆಂದು ಕೋರಲಾಗಿದೆ. 108 ರೂ. ಗಳನ್ನು ಒಂದೇ ಕಂತಿನಲ್ಲಿ ಪಾವತಿ ಮಾಡಿದರೆ, ಮುದ್ರಣ ಕಾರ್ಯಕ್ಕೆ ತುಂಬಾ ಸಹಾಯವಾಗುವುದು. ಅದು ಸಾಧ್ಯವಿಲ್ಲದಿದ್ದರೆ, 58ರೂ. +50 ರೂ. ಈ ರೀತಿ ಎರಡು ಮಾಸಿಕ ಕಂತುಗಳಲ್ಲಿ ಪಾವತಿ ಮಾಡಬಹುದು.

(೨) ತಾವು ಈ ಪ್ರಕಟಣೆಯ ವಿವರಗಳನ್ನು ತಮ್ಮ ಪರಿಚಯವಿರುವ ಬಂಧು ಹಾಗೂ ಮಿತ್ರವರ್ಗದವರಿಗೆಲ್ಲಾ ತಿಳಿಸಿ, ತಮ್ಮಕಡೆಯಿಂದ ಕನಿಷ್ಠ ಪಕ್ಷ ಮೂರುಮಂದಿ ಅಭಿಮಾನಿಗಳನ್ನು ನೊಂದಾಯಿಸಿಕೊಡಬೇಕೆಂದು ತಮ್ಮಲ್ಲಿ ನನ್ನ ವಿಶೇಷ ಪ್ರಾರ್ಥನೆ. ಈ ದಿಶೆಯಲ್ಲಿ ತಾವೆಲ್ಲರೂ ಪ್ರಯತ್ನಿ

ದರೆ, ಮುಂದಿನ ಸಂಪುಟಗಳ ಪ್ರಕಟಣೆ ತ್ವರಿತಗಿತಿಯಿಂದ ಸಾಗಿ, ಹೊರ ತರಲು ಸಾಧ್ಯವಾಗುವುದು.

**ಮುಖ್ಯಾಂಶ :—**

ಪ್ರಥಮ ಸಂಪುಟದ (ಮಂಗಳಾಚರಣ ಸಂಧಿ) ಒಂದು ಪ್ರತಿಯೂ ಈಗ ಉಳಿದಿಲ್ಲ, ಎಲ್ಲವೂ ಪೂರ್ಣವಾಗಿ ವಿನಿಯೋಗವಾಗಿದೆ. ಅಭಿಮಾನಿಗಳ ನೆರವಿನಿಂದಲೂ ಮತ್ತು ತೃತೀಯ ಸಂಪುಟದ ಪ್ರತಿಗಳ ಮಾರಾಟದಿಂದ ಬರುವ ಉತ್ಪನ್ನದ ಒಂದು ಅಂಶದಿಂದಲೂ ಇದರ ಪುನರ್ಮುದ್ರಣ ಕಾರ್ಯವನ್ನು ಆರಂಭಿಸಬೇಕೆಂಬ ಯೋಜನೆ ಇದೆ. ಇದಕ್ಕೋಸ್ಕರ ಯಾರಾದರೂ ಮಹನೀಯರು ಧನಸಹಾಯ ನೀಡಿದರೆ, ಪುನರ್ಮುದ್ರಣಕಾರ್ಯವನ್ನು ತಕ್ಷಣ ಪ್ರಾರಂಭಿಸಲಾಗುವುದು. ಅಭಿಮಾನಿಗಳಾಗಿ ನೋಂದಾಯಿಸಲ್ಪಡುವ ಮಹನೀಯರಿಗೆ ಪುನರ್ಮುದ್ರಣವಾದ ನಂತರ ಪ್ರಥಮಸಂಪುಟದ ಪ್ರತಿಯನ್ನು ಪೂರೈಸಲಾಗುವುದು.

ತೃತೀಯ ಸಂಪುಟದ ಪ್ರಕಟಣಾ ಕಾರ್ಯದಲ್ಲಿ ಅನೇಕ ಮಹನೀಯರು ನಾನಾ ರೀತಿಗಳಲ್ಲಿ ತಮ್ಮ ಅತ್ಯಮೂಲ್ಯ ಸಹಕಾರಗಳನ್ನು ನೀಡಿರುತ್ತಾರೆ. ಪ್ರಪ್ರಥಮವಾಗಿ 108 ರೂ. ಮತ್ತು ಅದಕ್ಕಿಂತ ಹೆಚ್ಚಾಗಿ ದ್ರವ್ಯಸಹಾಯವನ್ನು ನೀಡಿ, ಈ ಸಂಪುಟವು ಇಷ್ಟು ಜಾಗ್ರತೆಯಾಗಿ ಪ್ರಕಟವಾಗಲು ಕಾರಣರಾದ ಅಭಿಮಾನಿವರ್ಗದವರಿಗೆ ನಮ್ಮ ಕೃತಜ್ಞತೆಯ ವಂದನೆಗಳು. ಅವರ ಮೇಲ್ಪಂಕ್ತಿಯನ್ನು ಅನುಸರಿಸಿ, ಇತರರೂ ಅಭಿಮಾನಿಗಳಾಗಿ ಮುಂದಿನ ಸಂಪುಟಗಳ ಪ್ರಕಟಣೆಗಳಿಗೆ ನೆರವು ನೀಡಬೇಕಾಗಿ ಸವಿನಯ ವಿನಂತಿ. ಶ್ರೀ ಜಗನ್ನಾಥದಾಸವರ್ಯರ ಸಾಕ್ಷಾತ್ ಶಿಷ್ಯರಾಗಿದ್ದ ಶ್ರೀ ಕಮಲಾಪತಿ ದಾಸರಿಂದ ವಿರಚಿತ **"ಭಾವದರ್ಪಣ ಟೀಕಾ"** —ವ್ಯಾಖ್ಯಾನಗ್ರಂಥವನ್ನು ಕೊಟ್ಟು ಉಪಕರಿಸಿರುವ ಸೀತಾರಾಮವಿಠ್ಠಲಾಂಕಿತ ಸನ್ಮಾನ್ಯ ಶ್ರೀ ವಿ. ಶ್ರೀನಿವಾಸಮೂರ್ತಿಗಳಿಗೆ ನಾನು ಚಿರಋಣಿ. ಅವರಿಗೆ ನನ್ನ ಅನಂತ ವಂದನೆಗಳು. ಪ್ರಥಮ ಹಾಗೂ ದ್ವಿತೀಯ ಸಂಪುಟಗಳನ್ನು ಕೊಂಡು, ನೆರವು ನೀಡಿದ್ದಲ್ಲದೆ, ತಮ್ಮ ಮೂಲಕ ಅಭಿಮಾನಿಗಳನ್ನು ನೋಂದಾಯಿಸಿಕೊಟ್ಟ ಮಹನೀಯರಿಗೆಲ್ಲಾ ನನ್ನ ಕೃತಜ್ಞತೆಯ ಪ್ರಣಾಮಗಳು. ಆಗಾಗ್ಗೆ ಕೆಲವು

ವ್ಯಾಖ್ಯಾನಗಳನ್ನು ಒದಗಿಸಿಕೊಟ್ಟ ಹಿರಿಯರಾದ ಶ್ರೀ ಎನ್. ವಿ. ಕೃಷ್ಣಮೂರ್ತಿಗಳಿಗೂ ಮತ್ತು ಶ್ರೀ ಲಕ್ಷ್ಮಣದಾಸರಿಗೂ ನನ್ನ ಸಾಷ್ಟಾಂಗ ಪ್ರಣಾಮಗಳು. ಈ ಪ್ರಕಟಣೆಯ ಮುದ್ರಿತ ಕರಡುಪ್ರತಿಗಳನ್ನು ತಿದ್ದುವ ಕಾರ್ಯದಲ್ಲಿ ಸಹಾಯ ಮಾಡಿದ ನನ್ನ ಧರ್ಮಪತ್ನಿ ಶ್ರೀಮತಿ ಪದ್ಮಾಮೂರ್ತಿ ಯವರ ಉಪಕಾರ ಸ್ಮರಣೆ ಮಾಡುವುದು ನನ್ನ ಕರ್ತವ್ಯ. ನನ್ನ ವಿನಂತಿ ಪತ್ರಕ್ಕೆ ಮನ್ನಣೆಕೊಟ್ಟು, ಪ್ರತಿಗಳನ್ನು ತರಿಸಿಕೊಂಡ ಹಾಗೂ ಸ್ವಯಂ ಪಡೆದ ಮಹನೀಯರಿಗೆಲ್ಲಾ ನಾನು ಅಭಾರಿಯಾಗಿದ್ದೇನೆ. ಮೊದಲನೆಯ ಎರಡು ಸಂಪುಟಗಳು ಬಿಡುಗಡೆಯಾದಾಗ, ಆಮಂತ್ರಣಕ್ಕೆ ಮನ್ನಣೆ ಇತ್ತು ಸಮಾ ರಂಭಕ್ಕೆ ಬಂದು, ಪ್ರಕಟಣಾಕಾರ್ಯವನ್ನು ಮೆಚ್ಚಿ, ಪ್ರೋತ್ಸಾಹಿಸಿದ ಸರ್ವರಿಗೂ ನನ್ನ ಕೃತಜ್ಞತೆಯ ವಂದನೆಗಳು.

ಇಷ್ಟು ಅತ್ಯಲ್ಪ ಕಾಲಾವಧಿಯಲ್ಲಿ ಈ ಸಂಪುಟವನ್ನು ಅಂದವಾಗಿ ಹಾಗೂ ಹೆಚ್ಚು ಮುದ್ರಣ ದೋಷಗಳಿಲ್ಲದಂತೆ ಮುದ್ರಿಸಿಕೊಟ್ಟ ಶ್ರೀ ಪರಿಮಳ ಎಂಟರ್‌ಪ್ರೈಸಸ್ ಮಾಲೀಕರಾದ ಶ್ರೀ ಪಿ. ಆರ್. ಎಮ್. ದೇಸಾಯಿಯವರಿಗೂ ಮತ್ತು ಅವರ ಮಿತ್ರರಾದ ಶ್ರೀ ಎಸ್. ಎಲ್. ಗುರುಶಾಂತಮೂರ್ತಿಯವರಿಗೂ ನನ್ನ ಅಭಿಮಾನದ ವಂದನೆಗಳನ್ನು ಅರ್ಪಿಸುತ್ತೇನೆ.

ಮುಂದಿನ ಚತುರ್ಥಸಂಪುಟ— **"ಭೋಜನ ರಸವಿಭಾಗಸಂಧಿ"** ಈ ಸಂಪುಟವು ಬೇಗನೆ ಮುದ್ರಿತವಾಗಿ ಪ್ರಕಟವಾಗಲು ತಮ್ಮೆಲ್ಲರ ತುಂಬು ಹೃದಯದ ಅಭಿಮಾನ, ನೆರವು ಮತ್ತು ಸಹಕಾರಗಳನ್ನು ಕೋರುತ್ತಾ, ನನ್ನ ಪ್ರಾಸ್ತಾವಿಕ ರೂಪವಾದ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

ಇಂತಿ ನಮಸ್ಕಾರಗಳು

ಸಜ್ಜನರ ಪಾದಪದ್ಮಾರಾಧಕ

**ಹೆಚ್. ಎಸ್. ಶ್ರೀನಿವಾಸಮೂರ್ತಿ**

(ಪ್ರಕಾಶಕರು)

## ದ್ವಿತೀಯ ಮತ್ತು ತೃತೀಯ ಸಂಪುಟಗಳ ಪ್ರಕಟನಾ ಕಾರ್ಯಕ್ಕೆ ಉದಾರ ಹೃದಯದಿಂದ ದ್ರವ್ಯಸಹಾಯ ನೀಡಿದ ಮಹನೀಯರು

| ಕ್ರಮ ಸಂಖ್ಯೆ | ಮಹನೀಯರ ಹೆಸರು | ಮೊಬಲಗು ರೂಗಳಲ್ಲಿ |
|---|---|---|
| ೧. | ಶ್ರೀ ಎ. ಗೋಪಾಲಕೃಷ್ಣ, ಮದ್ರಾಸು | 1000 |
| ೨. | ಶ್ರೀ ಹೆಚ್. ಎಸ್. ಜಯರಾಯರು, ಬೆಂಗಳೂರು | 501 |
| ೩. | ಶ್ರೀ ಸಿ. ಗೋಪಿನಾಥ್, ಬೆಂಗಳೂರು | 501 |
| ೪. | ಶ್ರೀ ಸಿ. ಕೆ. ಶ್ರೀನಿವಾಸರಾಯರು, ಬೆಂಗಳೂರು | 301 |
| ೫. | ಶ್ರೀಮತಿ ಆರ್. ಎಂ. ಸುಶೀಲಾ ಬಾಯಿ, ಬೆಂಗಳೂರು | 200 |
| ೬. | ಶ್ರೀ ಎಂ. ಎಸ್. ಶ್ರೀನಿವಾಸರಾವ್, ಗೌರಿಬಿದನೂರು | 101 |
| ೭. | ಶ್ರೀಮತಿ ಎಸ್. ಕೆ. ಪರಿಮಳ, ಭದ್ರಾವತಿ | 101 |
| ೮. | ಶ್ರೀ ಕೆ. ಅನಂತಾಚಾರ್, ಬೆಂಗಳೂರು | 101 |
| ೯. | ಶ್ರೀಮತಿ ಸತ್ಯಭಾಮಮ್ಮ, ಬೆಂಗಳೂರು | 101 |
| ೧೦. | ಶ್ರೀ ಕೆ. ಪ್ರಾಣೇಶರಾವ್, ಹೈದರರಾಬಾದ್ | 101 |
| ೧೧. | ಶ್ರೀ ಟಿ. ಕೆ. ಮಾಧವಮೂರ್ತಿ, ಬೆಂಗಳೂರು | 101 |
| ೧೨. | ಶ್ರೀ ಹೆಚ್.ಜಿ.ಎಸ್. ಮೂರ್ತಿ, ಯು.ಎಸ್.ಎ. | 201 |
| ೧೩. | ಶ್ರೀ ಕೆ. ಎನ್. ಶ್ರೀಹರಿ, ಬೆಂಗಳೂರು | 101 |
| ೧೪. | ಶ್ರೀ ಕೆ. ಎಸ್. ವೆಂಕಟೇಶ್, ಹುಲಿಯೂರುದುರ್ಗ | 101 |
| ೧೫. | ಶ್ರೀ ಬಿ. ಕೆ. ಶ್ರೀನಿವಾಸಮೂರ್ತಿ, ಬಳ್ಳಾರಿ | 110 |
| ೧೬. | ಶ್ರೀ ಪಿ. ಆರ್. ಸತ್ಯಮೂರ್ತಿ. ಮೈಸೂರು | 108 |
| ೧೭. | ಶ್ರೀ ಎಸ್. ಎಮ್. ಕಲ್ವಾದ್. ಹೈದರಾಬಾದ್ | 101 |
| ೧೮. | ಶ್ರೀ ಎಮ್. ಎನ್. ರಾಘವೇಂದ್ರರಾವ್. ಬೆಂಗಳೂರು | 125 |
| ೧೯. | ಡಾ. ಕೋಟೀವಾಲ್ ನಾಗರಾಜ್. ಬಳ್ಳಾರಿ | 101 |
| ೨೦. | ಶ್ರೀ ಸಿ. ಆರ್. ಗೋಪಾಲಕೃಷ್ಣ, ಭದ್ರಾವತಿ | 101 |
| ೨೧, | ಶ್ರೀ ಎಮ್. ಟಿ. ವಿಠ್ಠಲ್, ಬೆಂಗಳೂರು | 108 |
| ೨೨. | ಶ್ರೀ ಬಿ. ಕೃಷ್ಣಮೂರ್ತಿ. ಬೆಂಗಳೂರು | 100 |

| 1 | 2 | 3 |
|---|---|---|
| ೨೩. | ಶ್ರೀ ಎಸ್. ವಿ. ಆದಿಶೇಷ್. ಬೆಂಗಳೂರು | 101 |
| ೨೪ | ಶ್ರೀ ಹೆಚ್, ಬಿ. ಕೃಷ್ಣರಾವ್. ನಾಗಪುರ | 108 |
| ೨೫. | ಶ್ರೀ ಎಸ್. ಬಿ. ನಾಗರಾಜರಾವ್. ನಾಗಪುರ | 108 |
| ೨೬ | ಶ್ರೀ ಜಿ. ಅಶ್ವತ್ಥನಾರಾಯಣ. ಬೆಂಗಳೂರು | 108 |
| ೨೭, | ಶ್ರೀ ಹೆಚ್. ಗುರುರಾಜಾರಾವ್. ಬಾಗಿಲಕೋಟೆ | 108 |
| ೨೮. | ಶ್ರೀ ಬೇಲೂರು ಕೃಷ್ಣಮೂರ್ತಿ. ಬೆಂಗಳೂರು | 101 |
| ೨೯. | ಶ್ರೀ ಲಕ್ಷ್ಮೀನಾರಾಯಣರಾವ್. ಬೆಂಗಳೂರು | 110 |
| ೩೦. | ಶ್ರೀ ಸಿ. ರಾಘವೇಂದ್ರರಾವ್. ಕಾಂಚೀಪುರಂ | 101 |
| ೩೧. | ಶ್ರೀ ಬಿ. ಹೆಚ್. ಜೋಷಿ. ರಾಯಚೂರು | 108 |
| ೩೨. | ಶ್ರೀ ಶೇಷಗಿರಿ ಆಚಾರ್ ಚೆಲಿಗೇರಿ. ರಾಯಚೂರು | 108 |
| ೩೩. | ಶ್ರೀ ನರಹರಿರಾವ್ ಸಿರಸಿ. ಬೆಂಗಳೂರು | 108 |
| ೩೪. | ಶ್ರೀ ಪಿ. ವಿ. ಮುದ್ದೇಬಿಹಾಳ್. ಬೆಂಗಳೂರು | 101 |

**ಭಾಗಶಃ (ಮೊದಲನೆಯ ಕಂತಿನರೂಪದಲ್ಲಿ) ಕೊಟ್ಟವರು :—**

| | | |
|---|---|---|
| ೧, | ಶ್ರೀ ಪ್ರಾಣೇಶರಾವ್. ರಾಯಚೂರು | 50 |
| ೨. | ಶ್ರೀ ಎಮ್. ಬಿ. ಅಂಬೇಕರ್, ತಿರಾಳ್ ಪೋಸ್ಟ್ | 50 |

**ವಿನಂತಿ :—**

ಮೇಲ್ಕಂಡ ಮಹನೀಯರ ಶ್ರೇಣಿಯನ್ನು ಮುಂದುವರಿಸಿ, ಹರಿದಾಸ ಸಾಹಿತ್ಯಾಭಿಮಾನಿಗಳು ಮುಂದೆ ಬಂದು, ೧೦೮ ರೂ. ಅಥವಾ ಆದಕ್ಕಿಂತ ಹೆಚ್ಚು ಧನಸಹಾಯವನ್ನು ನೀಡುವುದರ ಮೂಲಕ ಮುಂದಿನ ಸಂಪುಟಗಳ ಶೀಘ್ರ ಪ್ರಕಟಣೆಗೆ ಸಹಕಾರವನ್ನು ನೀಡಬೇಕೆಂದು ಸವಿನಯ ಪ್ರಾರ್ಥನೆ. ಅಲ್ಲದೆ ಅಂತಹ ಮಹನೀಯರು ತಮ್ಮ ಮುಖಾಂತರ ಪ್ರತಿಯೊಬ್ಬರೂ ಕನಿಷ್ಠಪಕ್ಷ ಮೂರು ಮಂದಿ ದ್ರವ್ಯಸಹಾಯ ನೀಡುವ ಅಭಿಮಾನಿಗಳನ್ನು ನೋಂದಾಯಿಸಿಕೊಡಬೇಕಾಗಿ ವಿಶೇಷ ವಿನಂತಿ.

॥ ಶ್ರೀಃ ಹರಿಃ ಓಂ ॥

# ಸಂಧಿ (೩)

# ವ್ಯಾಪ್ತಿಸಂಧಿ

**ಸಂಧಿಯ ಸಾರ :—**

ಅಪರೋಕ್ಷೀಕೃತಶ್ರೀಶರಾದ ಶ್ರೀ ಜಗನ್ನಾಥದಾಸವರೇಣ್ಯರು ತಮ್ಮ ಮೇರುಕೃತಿಯಾದ **ಶ್ರೀಮದ್ಧರಿಕಥಾಮೃತಸಾರದ** ಪ್ರಥಮಸಂಧಿ **ಮಂಗಳಾಚರಣಸಂಧಿಯ**ಲ್ಲಿ ಶ್ರೀರಮಾದೇವಿಯರ ಕರಕಮಲಗಳಿಂದ ಪೂಜಿತನಾದ ಪಾದಪದ್ಮವುಳ್ಳ, ಬ್ರಹ್ಮಾದಿ ಸಮಸ್ತದೇವತಾವರ್ಗದಿಂದ ಸಂಸ್ತೂಯಮಾನನಾದ ಶ್ರೀಹರಿಯ ಮಹಿಮಾತಿಶಯಗಳನ್ನು ಮುಕ್ತಕಂಠದಿಂದ ಸ್ತೋತ್ರಗೈದು, ನಂತರ ತ್ರಿಗುಣಾಭಿಮಾನಿಗಳಾದ ಶ್ರೀ ಲಕ್ಷ್ಮೀದೇವಿಯರಿಂದ ಪ್ರಾರಂಭಿಸಿ, ಮಹರುದ್ರದೇವರವರೆಗೆ ಅವರೋಹಣತಾರತಮ್ಯಕ್ರಮದಲ್ಲಿ ಆಯಾಯಾ ದೇವತೆಗಳನ್ನು ಕೊಂಡಾಡಿ, ಕೊನೆಯಲ್ಲಿ ಪಾಕಶಾಸನ ಮುಖ್ಯಸಕಲದೇವತಾವರ್ಗಕ್ಕೆ ನಮಿಸಿ, ಋಷಿ, ಪಿತೃ, ಗಂಧರ್ವ, ಚಕ್ರವರ್ತಿಗಳ ಸಮೂಹಕ್ಕೆ ವಂದನೆಗೈದು, ಶ್ರೀಸರ್ವಜ್ಞಾಚಾರ್ಯರ ಮಹಾಪೀಠದಲ್ಲಿ ವಿರಾಜಮಾನರಾಗಿದ್ದ ಶ್ರೀಪದ್ಮನಾಭತೀರ್ಥಾದಿ ಯತಿವರ್ಗಕ್ಕೆ ಆನಮಿಸಿ, ದಾಸಶ್ರೇಷ್ಠ ಶ್ರೀ ಪುರಂದರಾದಿ ತಮ್ಮ ಸ್ವರೂಪೋದ್ಧಾರಕರಾದ ಶ್ರೀ ಭಾಗಣ್ಣದಾಸರವರಿಗೆ ಶ್ರದ್ಧಾಭಕ್ತಿಗಳಿಂದ ನಮಿಸಿ, ತಮ್ಮ ಅಮರ ಕೃತಿಯಾದ ಈ ಗ್ರಂಥವನ್ನು ತಮ್ಮ ಬಿಂಬಮೂರ್ತಿ **ಶ್ರೀ ಜಗನ್ನಾಥವಿಠ್ಠಲನ** ಚಾರುಚರಣಾರವಿಂದಗಳಿಗೆ ಸಮರ್ಪಿಸಿ, ಮುಂದಿನ **ಕರುಣಾಸಂಧಿ**ಯನ್ನು ಪ್ರಾರಂಭಿಸುತ್ತಾರೆ.

ಬ್ರಹ್ಮಾದಿಗಳ ಮನೋಮಂದಿರದಲ್ಲಿ ತೋರಿ ತೋರದಲೆ ಇರುತಿಹ ಶ್ರೀ ಜಗನ್ನಾಥವಿಠ್ಠಲನ **ಕರುಣ** ಪಡೆವ ಮುಮುಕ್ಷು ಜೀವರು ಪರಮ ಭಾಗ

ವತರುನು ಕೊಂಡಾಡುವುದು ಅನುದಿನವು–ಎಂದು ಪ್ರಥಮಸಂಧಿಗತ ವಿಷಯ ವನ್ನು ಪರಿಸಮಾಪ್ತಿಗೊಳಿಸುತ್ತಾ, ಮುಂದಿನ **ಕರುಣಾಸಂಧಿಯಲ್ಲಿ** ಶ್ರೀ ಹರಿಯ ಕಾರುಣ್ಯಾತಿಶಯವನ್ನು ಅನೇಕ ಪುರಾಣೋಕ್ತದೃಷ್ಟಾಂತಗಳಿಂದ ಹೃದಯಂಗಮವಾಗಿ ವಿವರಿಸಿದ್ದಾರೆ. ಮೂವತ್ತೊಂದು ಪದ್ಯಗಳಿಂದ ಘಟಕ ವಾಗಿರುವ ಈ ಸಂಧಿಯಲ್ಲಿ ಶ್ರುತಿ ಸ್ಮೃತಿಗಳ ಮೂಲಗಳಿಂದ ಅನೇಕ ಪ್ರಮಾಣ ಗಳನ್ನು ಉದಹರಿಸಿ, ಉಪನಿಷತ್ಪ್ರಸ್ಥಾನದ್ವಾರಾ ವಿವರಣೆಗೈದು, ಶ್ರೀಮನ್ಮಹಾಭಾರತ, ರಾಮಾಯಣ ಪಂಚರಾತ್ರಾದಿಗಳಿಂದ ಸಮಂಜಸವಾದ ದೃಷ್ಟಾಂತಗಳನ್ನು ಕೊಟ್ಟು, ಪುರಾಣಪ್ರಸ್ಥಾನದಿಂದ ತದನುಗುಣವಾದ ಪ್ರಸಂಗವಿಶೇಷಗಳನ್ನು ಸಮಯೋಚಿತವಾದ ಕ್ರಮದಲ್ಲಿ ಉಲ್ಲೇಖಿಸಿ, ಶರಣಾ ಗತವತ್ಸಲನಾದ ಭಗವಂತನ ಕರುಣಾತಿಶಯವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ ಪೂತಾತ್ಮರಾದ ದಾಸವರ್ಯರು. ಈ ಸಂಧಿಯಲ್ಲಿ ಶ್ರೀ ದಾಸರಾಯರು ಸಮಂಜಸವಾದ ಅನೇಕ ಉಪಮಾಲಂಕಾರಗಳನ್ನು ಉಪ ಯೋಗಿಸಿರುತ್ತಾರೆ. ಹೃದಯವನ್ನು ಸೆರೆಹಿಡಿಯಬಲ್ಲ ಇಂತಹ ಉಪಮಾ ಲಂಕಾರಗಳ ಪ್ರಯೋಗದಿಂದ ಕನ್ನಡ ಸಾರಸ್ವತಭಂಡಾರವನ್ನು ಶ್ರೀಮಂತ ಗೊಳಿಸಿದ್ದಾರೆ ಜ್ಞಾನಿವರೇಣ್ಯರಾದ ದಾಸವರ್ಯರು. ಸ್ವಭಕ್ತವರ್ಗಕ್ಕೆ ಕಾಮಿತಾರ್ಥಪ್ರದನಾದ ಜಗತ್ಪ್ರಭುವಿನ ದಶಾವತಾರ ಸ್ತೋತ್ರದ್ವಾರಾ **ಕರುಣಾಸಂಧಿಯನ್ನು** ಉಪಸಂಹಾರ ಮಾಡಿದ್ದಾರೆ.

ಈಗ ಪ್ರಕಟವಾಗಿರುವ ತೃತೀಯಸಂಪುಟವು **ವ್ಯಾಪ್ತಿಸಂಧಿಗತ** ವಿಷಯಗಳಿಂದ ಯುಕ್ತವಾಗಿದೆ. ಈ ತೃತೀಯಸಂಧಿಯಲ್ಲಿ ಭಗವದ್ವಿಭೂತಿ ಸಂಪನ್ನರಾದ ಶ್ರೀಜಗನ್ನಾಥದಾಸವರ್ಯರು ಅಣುರೇಣುತೃಣಕಾಷ್ಠಾದಿ ಗಳಲ್ಲಿ ಪರಿಪೂರ್ಣನಾಗಿದ್ದು, ಸರ್ವತ್ರ ವ್ಯಾಪ್ತನಾಗಿರುವ ಶ್ರೀಹರಿಯ ಮಹಿಮಾತಿಶಯಗಳನ್ನು ಕೊಂಡಾಡಿದ್ದಾರೆ.

ಅನಂತಕಲ್ಯಾಣಗುಣರತ್ನಾಕರನಾದ ಶ್ರೀಹರಿಯು ಸರ್ವತ್ರವ್ಯಾಪ್ತನಾಗಿರು ವನು. ಸರ್ವೋತ್ತಮನಾದ ಜಗಚ್ಚೇಷ್ಟಕನಾದ ವಿಷ್ಣುವು ಬ್ರಹ್ಮಾಂಡದಲ್ಲಿ ಪರಿ ಪೂರ್ಣರೂಪನಾಗಿ ತುಂಬಿರುವುದರಿಂದಲೇ, ಚೇತನಾಚೇತನಾತ್ಮಕವಾದ ಈ

ಜಗತ್ತಿನ ವ್ಯಾಪಾರಗಳೆಲ್ಲವೂ ನಿಯಮಿತವಾಗಿ ನಡೆಯುತ್ತಿರುವುವು. ಆಯಾಯಾ ಪದಾರ್ಥಗಳ ಸ್ವಭಾವಸಿದ್ಧವಾದ ಗುಣವಿಶೇಷಗಳ ಪ್ರಾಚುರ್ಯಕ್ಕೆ ಆ ಅಧಿಷ್ಠಾನಾಂತರ್ಗತ ಶ್ರೀಹರಿಯ ವ್ಯಾಪ್ತರೂಪಗಳೇ ಮುಖ್ಯಕಾರಣವು. ಬ್ರಹ್ಮಾಂಡದ ಒಳಗೂ ಹೊರಗೂ ಓತಪ್ರೋತನಾಗಿ ವ್ಯಾಪಿಸಿರುವ ಪರಬ್ರಹ್ಮನು ಪುರುಷರೂಪತ್ರಯನು. ಪುರುಷಶಬ್ದವಾಚ್ಯನಾದ ಶ್ರೀಮನ್ನಾರಾಯಣನು ಪುರಾತನ ಪುರುಷನಷ್ಟೇ ಅಲ್ಲ; ನಿತ್ಯನೂತನನೂ ಹೌದು. ಅಕ್ಷರನಾಮಕಗಳಾದ ಶ್ರೀ ರಮಾದೇವಿಯರಿಂದ ಪೂಜಿತಪಾದಪದ್ಮನು. ಕ್ಷರಕೋಟಿಪ್ರವಿಷ್ಟನಾದ ಬ್ರಹ್ಮಾದಿ ದೇವತೆಗಳಿಂದ ಸಂಸೇವ್ಯಮಾನನು. ಪರಮ ವಿಲಕ್ಷಣವಾದ ಜ್ಞಾನ ಆನಂದಾದಿಮಯನಾದ ಪುರುಷನಾಮಕ ಶ್ರೀಹರಿಯು ಪುರುಷಸೂಕ್ತಪ್ರತಿಪಾದ್ಯನು. ಅಖಂಡಚೇತನವರ್ಗದ ಹೃತ್ಕಮಲನಿವಾಸಿಯಾದ ಶ್ರೀಹರಿಯು ಸರ್ವತ್ರವ್ಯಾಪ್ತನಾಗಿದ್ದಾಗ್ಯೂ ಜಗದ್ವಿಲಕ್ಷಣನು. ಇದಲ್ಲವೇ ಪುರುಷೋತ್ತಮನಾದ ಆತನ ಮಹಿಮಾವಿಶೇಷ !

ಸ್ತ್ರೀ, ನಪುಂಸಕ, ಪುರುಷ ಮುಂತಾದ ಜೀವವರ್ಗಗಳಿಂದ ಪರಮವಿಲಕ್ಷಣನು. ಪಂಚಭೂತಾತ್ಮಕವಾದ ಈ ಜಗತ್ತಿನಿಂದ (ಜಡಸಮೂಹದಿಂದ) ಅತ್ಯಂತಭಿನ್ನನು. ಪ್ರಪಂಚವನ್ನೇ ಬೆಳಗುತ್ತಿರುವ ಸೂರ್ಯ, ಚಂದ್ರ, ತೇಜೋಮಯನಾದ ಅಗ್ನಿ, ಪ್ರವಾಹತೋನಿತ್ಯವಾದ ಕಾಲ. ವಸ್ತುಗಳ ಸಹಜವಾದ ಗುಣವಿಶೇಷಗಳು, ಜಗತ್ತಿನ ಸೃಷ್ಟಿಗೆ ಉಪಾದಾನಕಾರಣವಾದ ಪ್ರಕೃತಿ ಇವುಗಳಲ್ಲಿ ಒಂದೂ ತಾನಲ್ಲ. ಆದರೆ ಸರ್ವಾಧಿಷ್ಠಾನಗಳಲ್ಲಿ ತಾನು ಅಂತರ್ಯಾಮಿರೂಪದಿಂದ ವ್ಯಾಪ್ತನಾಗಿದ್ದು, ತದಾಕಾರ, ತದ್ರೂಪ, ತದ್ವಾಚ್ಯ, ತನ್ನಾಮಕನಾಗಿ ವ್ಯಾಪಾರಗಳನ್ನು ನಿರ್ವಹಿಸುತ್ತಲಿರುವ ಪರಬ್ರಹ್ಮನು ಅವುಗಳಿಂದ ಪರಮಭಿನ್ನನಾಗಿದ್ದಾನೆ. ಅಜಭವಾದಿ ದೇವತೆಗಳು ಆತನ ಮಹಿಮಾತಿಶಯಗಳನ್ನು ಸಾಕಲ್ಯೇನ ತಾವರಿಯಲಸಾಧ್ಯ.

ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದ – ಈ ಪಂಚತನ್ಮಾತ್ರಗಳ ಹೆಸರುಗಳಿಂದ ತಾನೇ ವಾಚ್ಯನಾಗಿದ್ದು, ಅವುಗಳ ಅಭಿಮಾನಗಳಲ್ಲಿ ಅಂತರ್ಯಾಮಿ ರೂಪದಿಂದ ಕ್ರೀಡಾಗಳನ್ನು ಮಾಡಿ, ಮಾಡಿಸಿ, ಪರಮ ಕರುಣಾ

ಸಿಂಧುವಾದ ಶ್ರೀಹರಿಯು ಮನವೆ ಮೊದಲಾದ ಇಂದ್ರಿಯಗಳಲ್ಲಿ ಹಾಗೂ ಕರಣಾಭಿಮಾನಿಗಳಿಲ್ಲಿ ತಾನೇ ನಿಂತು, ಇಂದ್ರಿಯದ್ವಾರಾ ಕ್ರಿಯಾದಿಗಳನ್ನು ಮಾಡಿ, ಮಾಡಿಸಿ, ಜೀವನಿಗೆ ತೃಪ್ತಿಯನ್ನೀಯುವನು.

ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಾಭಿಮಾನಿದೇವತೆಗಳಲ್ಲಿ ಸ್ಥಿತನಾಗಿದ್ದು, ವಿಹರಿಸುವನು. ಅವಯುವಗಳಲ್ಲಿ, ತತ್ಸಂಬಂಧವಾದ ಗುಣಗಳಲ್ಲಿ, ತದಭಿಮಾನಿತತ್ತ್ವದೇವತೆಗಳಲ್ಲಿ ಪ್ರವಿತತನಾಗಿದ್ದು, ಕೃತಿ ಪತಿ ಪದ್ಯುಮ್ನನು ವಿವಿಧ ಕರ್ಮಗಳನ್ನು ಬಿಂಬರೂಪಿಯಾಗಿ ತಾನೇ ಮಾಡಿ, ತದಭಿಮಾನಿಗಳ ದ್ವಾರಾಮಾಡಿಸಿ, ತನ್ನ ಮಹಿಮೆಯನ್ನು ತಿಳಿಸದೆ, ಜೀವರ ಬಂಧನಕ್ಕೆ ಮುಖ್ಯ ಕಾರಣನಾಗಿ ವ್ಯಾಪಿಸಿದ್ದಾನೆ.

ಗುಣವಿಶೇಷಗಳು ಮತ್ತು ವಿಶಿಷ್ಟರಾದ ಗುಣಿಗಳಲ್ಲ ತಾನು ವ್ಯಾಪ್ತನಾಗಿದ್ದು. ಅವುಗಳಿಂದ ಬದ್ಧನಾಗದೆ ನಿರ್ಲಿಪ್ತನಾಗಿದ್ದು, ಆಯಾಯಾ ಗುಣ ಜನ್ಯವಾದ ಪುಣ್ಯ ಪಾಪರೂಪವಾದ ಫಲಗಳನ್ನು ಜೀವವರ್ಗಕ್ಕೆ ಉಣಿಸುತ್ತಾ, ಸಚ್ಚಿದಾನಂದವಿಗ್ರಹನಾದ ಜಗತ್ಪ್ರಭುವು ಪ್ರಳಯಕಾಲದಲ್ಲಿ ಜಗದ್ಭುಕ್ ಎಂದೆನಿಸಿ, ಸಮಗ್ರ ಬ್ರಹ್ಮಾಂಡವನ್ನು ತನ್ನ ಉದರದಲ್ಲಿ ಪ್ರವೇಶಗೊಳಿಸುವನು.

ಶಾಂತೀರಮಣನಾದ ಅನಿರುದ್ಧನು ವಿದ್ಯೆ ಎಂದೆನಿಸಿಕೊಂಡು, ಸರ್ವ ಜೀವರ ಬುದ್ಧಿಯಲ್ಲಿ ನೆಲೆಸಿದ್ದು, ಕೃತಿಪತಿಯಾದ ಪ್ರದ್ಯುಮ್ನನು ಬುದ್ಧಿ ಎಂದು ಕರೆಯಿಸಿಕೊಳ್ಳುತ್ತಾ ನಿಶ್ಚಯ ಜ್ಞಾನವನ್ನುಂಟುಮಾಡುವನು. ಜಯಾಧವ ನಾದ ಸಂಕರ್ಷಣನು ಸಿದ್ಧಿ ಎಂದೆನಿಸಿ, ಮನೋನಿಯಾಮಕನಾಗಿದ್ದು, ಮಾಯಾಪತಿಯಾದ ವಾಸುದೇವನು ಪ್ರಸಿದ್ಧನಾಮಕನಾಗಿ ಸಮಸ್ತ ಜೀವ ರಾಶಿಗಳಲ್ಲಿ ವ್ಯಾಪ್ತ ರೂಪಗಳಿಂದ ವಿರಾಜಿಸುತ್ತಾ ಮೂಲ ನಾರಾಯಣರೂಪ ದಿಂದ ಸರ್ವರ ಅಂತಃಕರಣಸ್ಥಿತನಾಗಿದ್ದು, ಫಲಭೋಗಗಳನ್ನು ಜೀವರಿಗೆ ಕೊಡುತ್ತಿರುವನು.

ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲವೆಂಬ ಈ ತನು ಚತುಷ್ಟಯಗಳಲ್ಲಿ ಹೃತ್ಕಮಲವಾಸಿಯಾಗಿದ್ದು, ಅನಿರುದ್ಧಾದಿ ರೂಪಗಳಿಂದ

ಪರಿಶೋಭಿಸುತ್ತಾ ಆಯಾಯಾ ದೇವತೆಗಳಿಂದ ಸೇವೆಯನ್ನು ಸ್ವೀಕರಿಸುತ್ತಾ ಸೇವ್ಯಮಾನನಾಗಿ, ತನ್ನ ಸೇವಕರಾದ ದೇವತೆಗಳಲ್ಲಿ ಅಂತರ್ಯಾಮಿರೂಪತ್ವೇನ ಇದ್ದು, ಸೇವಕವಾಚ್ಯನಾಗಿ ನಿರಂತರವೂ ಅವರಿಂದ ಸಂಸೇವ್ಯಮಾನನಾಗಿದ್ದಾನೆ.

ವಿಶ್ವ, ತೈಜಸ ಮತ್ತು ಪ್ರಾಜ್ಞ ರೂಪಗಳಿಂದ ಜೀವರಿಗೆ ಕ್ರಮವಾಗಿ ಜಾಗ್ರತಾವಸ್ಥೆ, ಸ್ವಪ್ನಾವಸ್ಥೆ ಮತ್ತು ಸುಷುಪ್ತ್ಯವಸ್ಥೆಗಳಿಗೆ ಮುಖ್ಯ ಪ್ರೇರಕನಾಗಿದ್ದು ಆಯಾಯಾ ಅವಸ್ಥಾವಿಶಿಷ್ಟಗಳಾದ ವ್ಯಾಪಾರಗಳನ್ನು ತಾನೇ ಮಾಡಿ, ಮಾಡಿಸಿ ಜೀವರಿಗೆ ಫಲಪ್ರದನಾಗಿದ್ದು. ಅವರ ಅನುಭವಕ್ಕೆ ತಂದು ಕೊಡುತ್ತಿರುವನು.

ಜಗತ್ತಿನ ಸೃಷ್ಟಿಗೆ ಉಪಾದಾನಕಾರಣವಾದ ಮೂಲಜಡಪ್ರಕೃತಿ ಮುಂತಾದ ಕಾರಣವಸ್ತುಗಳಲ್ಲಿಯೂ ಮತ್ತು ಸೃಷ್ಟವಾದ ನವಾವರಣ ಸಹಿತವಾದ ಬ್ರಹ್ಮಾಂಡ ಇವೇ ಮುಂತಾದ ಕಾರ್ಯವಸ್ತುಗಳಲ್ಲಿಯೂ ಪ್ರೇರಕ ಮತ್ತು ಪ್ರೇರ್ಯ ರೂಪಗಳಿಂದ ವಸ್ತ್ರದ ದಾರಗಳಿದ್ದಂತೆ ಓತಪ್ರೋತನಾಗಿ ವ್ಯಾಪಿಸಿಕೊಂಡು, ಶ್ರೀ ಭೂ ದುರ್ಗಾಸಮೇತನಾಗಿ, ಸೂರ್ಯನು ಯಾವ ರೀತಿಯಲ್ಲಿ ತೇಜೋಮಯನಾಗಿ ಜಗತ್ತನ್ನು ಬೆಳಗುತ್ತಿರುವನೋ ಅಂತೆಯೇ ಸರ್ವತ್ರವ್ಯಾಪ್ತ ಶ್ರೀಹರಿಯು ಲೋಕವ್ಯಾಪಾರಗಳನ್ನು ಸ್ವಸಾಮರ್ಥ್ಯದಿಂದಲೇ ನಿರ್ವಹಿಸುತ್ತಿರುವನು, ಇಂತಹ ಪರಮಾತ್ಮನ ಅಂಚಿತ್ಯಾದ್ಭುತ ಶಕ್ತಿ ಯಾರಿಂದಲೂ ತಿಳಿಯಲು ಅಸಾಧ್ಯ.

ಲೋಕದಲ್ಲಿ ತಂದೆಯಾದವನು ತನ್ನ ಮಕ್ಕಳಿಗೆ ಶ್ರೇಷ್ಠವಾದ ವಸ್ತ್ರಾಭರಣಗಳನ್ನು ತೊಡಿಸಿ, ಅವರಿಂದ ನಮಸ್ಕೃತನಾಗಿ, ಅವರನ್ನು ಹರಸಿ, ಸಂತೋಷಪಡುವಂತೆ. ಲೋಕಜನಕನಾದ ಪುಂಡರೀಕದಳಾಯತಾಕ್ಷನು ಪೂಜೋಪಕರಣಗಳಲ್ಲಿ ವ್ಯಾಪಿಸಿದ್ದು ಪೂಜ್ಯನೆಂತಲೂ, ಪೂಜೆ ಮಾಡುವವರಲ್ಲಿ ಅಂತರ್ಯಾಮಿಯಾಗಿದ್ದು ಪೂಜಕವಾಚ್ಯನಾಗಿ, ಸ್ವಭಕ್ತರಿಗೆ ಅವರ ಯೋಗ್ಯತಾನುಸಾರ ಫಲಗಳನ್ನು ಕೊಡುವನು.

ಈ ಜಗತ್ತಿನಲ್ಲಿ ತಂದೆಯು ಅತ್ಯಂತ ವೈಭವದಿಂದ ತನ್ನ ಬಂಧು, ಮಿತ್ರ ಪರಿವಾರವನ್ನು ಕೂಡಿಸಿಕೊಂಡು, ಸಂಭ್ರಮದಿಂದ ತನ್ನ ಮಕ್ಕಳಿಗೆ ಲಗ್ನ ಸಮಾರಂಭವನ್ನು ಏರ್ಪಡಿಸುವನು. ಅಂತೆಯೇ ಇಂದಿರಾಧವನು ತನ್ನ ಅಘಟನಾಘಟನ ಶಕ್ತಿವಿಶೇಷದಿಂದ ಜೀವನಸ್ವರೂಪಕ್ಕೆ ಮೂಲ ಜಡ ಪ್ರಕೃತ್ಯಾತ್ಮಕವಾದ ಗುಣತ್ರಯಗಳಿಂದ ಬಂಧನವನ್ನುಂಟುಮಾಡಿ, ಕರ್ಮಕ್ಷಯಾನಂತರ ಬಂಧವಿಮೋಚಕನಾಗಿ ತ್ರಿವಿಧ ಜೀವರಿಗೆ ಅವರವರ ಸ್ವರೂಪಯೋಗ್ಯ ತಾನುಸಾರ ಗತಿಯನ್ನೀಯುವನು.

ಹುಲ್ಲಿನಿಂದ ನಿರ್ಮಿತವಾದ ಜೋಪಡಿಯಲ್ಲಿ ಸಣ್ಣ ಸಣ್ಣ ರಂಧ್ರಗಳ ದ್ವಾರಾ ಹೊಗೆಯು ಸಂದಣಿಸಿ, ಸರ್ವತ್ರ ವ್ಯಾಪಿಸುವುದು. ಆದರೆ ಒಳಗಿರುವ ಅಗ್ನಿಯು ದೂರದಲ್ಲಿರುವವರಿಗೆ ಕಾಣಿಸುವುದಿಲ್ಲ. ಧೂಮಮಾತ್ರ ಗೋಚರವಾಗುವುದು. ಅಂತೆಯೇ ಬ್ರಹ್ಮಾಂಡದಲ್ಲಿಪ್ಪ ಅಖಿಳ ಜೀವರ ದೇಹಗಳಲ್ಲಿ ತಾನು ವ್ಯಾಪಿಸಿದ್ದು, ತತ್ವೇಶರ ದ್ವಾರಾ, ದೇಹಗತ ಇಂದ್ರಿಯಗಳ ದ್ವಾರಾ, ತಾನೇ ಸಕಲಕರ್ಮಗಳನ್ನು ಮಾಡಿ, ಮಾಡಿಸುತ್ತಿದ್ದರೂ, ಆತನು ಮಾತ್ರ ಅಗೋಚರನಾಗಿಯೇ ಇರುವನು. ಜೀವಕೃತ ಕರ್ಮಗಳನ್ನು ಬಿಂಬಕ್ರಿಯಾರೂಪದಿಂದ ಆಚರಿಸುತ್ತಿರುವ ಶ್ರೀಹರಿಯು ಅದೆಂತಹ ಅಚಿಂತ್ಯಾದ್ಭುತಶಕ್ತನು !

ಮರಗಳ ಬೇರುಗಳಿಗೆ ನೀರನ್ನು ಹಾಕಿದಾಗ, ಉದಕದಿಂದ ಬೇರುಗಳು ನೆನೆದು, ಶಾಖೋಪಶಾಖೆಗಳಿಗೆ ಪ್ರವಹಿಸಿ, ಹೂಬಿಟ್ಟು, ಅತಿ ಮಧುರವಾದ ಫಲಗಳನ್ನು ಕೊಡುವಂತೆ, ಜಗದಾಧಾರನಾದ ಭಗವಂತನು ಸ್ವಭಕ್ತರು ಅರ್ಪಿಸುವ ಸೇವೆಯನ್ನು ಕೈಗೊಂಡು, ಬ್ರಹ್ಮ ರುದ್ರಾದಿ ನಾಮಗಳಿಂದ ವಾಚ್ಯನಾಗಿ, ಅವರ ದ್ವಾರಾ ಐಶ್ವರ್ಯಾದಿ ಫಲಗಳನ್ನೀಯುವನು. ತನ್ನ ಮಹಿಮೆಯನ್ನು ಜಗತ್ತಿಗೆ ತೋರಗೊಡದೆ ಅಗೋಚರನಾಗಿರುವನು.

ಅಗಮ್ಯಮಹಿಮನಾದ ಪರಮಾತ್ಮನು ಶ್ರುತಿಪ್ರತಿಪಾದ್ಯನು. ಆದರೆ ಶ್ರುತಿಗತಿಳು ಆತನ ಗುಣಾತಿಶಯಗಳನ್ನು ಸಂಪೂರ್ಣವಾಗಿ ವಿವರಿಸಲಾರವು.

ಅಂತೆಯೇ ಶ್ರೀ ಹರಿಯು ವೇದಾತೀತನು. ಉತ್ಪತ್ತಿಶೂನ್ಯನಾದ್ದ ರಿಂದ ಅಜನಾಮಕನು. ಜ್ಞಾನಾನಂದಮಯನು. ನಾಶರಹಿತನಾದ್ದರಿಂದ ಅಚ್ಯುತನು. ಸಮಸ್ತಬ್ರಹ್ಮಾಂಡಕ್ಕೆ ಆಧಾರಭೂತನಾಗಿ, ಜ್ಞಾನಯುಕ್ತ ರಾದ ರುದ್ರಾದಿ ದೇವತೆಗಳಿಗೆ ನಿಯಾಮಕನು. ಆದಿಮಧ್ಯಾಂತರಹಿತನಾದ ಆ ವಿಧಿಜನಕನು ಪ್ರಕೃತಿಸಂಬಂಧವಾದ ಸ್ಥೂಲದೇಹಯುಕ್ತರಾದ ಚೇತನ ರೊಳಗೆ ಕೂಡಿಕೊಂಡು, ದೇಹಾಂತರ್ಗತನಾಗಿ ಬಿಂಬನಾಗಿರುವನು. ತತ್ವೇಶ ರಿಗೆ ನಿಯಾಮಕನಾಗಿದ್ದು ತನ್ನಿಂದ ನಿಯಮ್ಯರಾದ ಸಕಲ ಇಂದ್ರಿಯಾಭಿಮಾನಿ ದೇವತೆಗಳ ದ್ವಾರಾ, ವ್ಯಾಪಾರ ಮಾಡುತ್ತಾನೆ.

ಮನಸ್ಸು ಅತಿ ಚಂಚಲ. ಮನಸ್ಸನ್ನು ವಿಷಯಗಳ ಕಡೆ ತಿರುಗಿಸಿ, ವಿಷಯಾಸಕ್ತರನ್ನಾಗಿ ಮಾಡಿಸಿ, ಪ್ರಾಪಂಚಿಕಭೋಗಾದಿಗಳಲ್ಲಿ ಜೀವರಿಗೆ ಇಚ್ಛೆ ಹುಟ್ಟಿಸಿ, ಕನಸಿನಲ್ಲಿಯೂ ಸಹ ಜೀವರಿಗೆ ಭಗವತ್ಸಂಬಂಧವಾದ ಸ್ಮರಣೆ ಹಾಗೂ ಜ್ಞಾನವನ್ನು ಕೊಡದೆ, ಸರ್ವತ್ರ ವ್ಯಾಪಿಸಿದ್ದು, ಸರ್ವಸಾರ ಭೋಕ್ತ ನೆಂದೆನಿಸಿ, ವಿಶ್ವನಾಮಕನಾಗಿ ವಿಹರಿಸುತ್ತಿರುವನು.

ಶ್ರೀ ಪರಮಾತ್ಮನು ಸ್ವಸೌಖ್ಯಪೂರ್ಣನು. ಸ್ವರಮಣನು. ಆದಾಗ್ಯೂ ಮನವೆ ಮೊದಲಾದ ಇಂದ್ರಿಯಗಳಲ್ಲಿ ಪ್ರೇರಕನಾಗಿದ್ದು, ಗ್ರಾಹ್ಯನೆಂದೆನಿಸು ವನು. ಭಾಗ್ಯಸಂಪನ್ನನಾದ ಶ್ರೀ ಹರಿಯು ಅಜ್ಞಜನರಿಗೆ ತಿಳಿಯದವನೋ-ಪಾದಿಯಂತೆ ತಾನಿದ್ದು, ನಿತ್ಯಾನಂದನಾಗಿ ಜೀವರಿಗೆ ಆನಂದಪ್ರದನಾಗಿ-ದ್ದಾನೆ.

ಶಶ್ವದೇಕಪ್ರಕಾರನಾದ ಪರಮಾತ್ಮನು ಶ್ರುತಿಸಮೂಹಕ್ಕೆ ನಿಲುಕದ ವನು. ಅಪ್ರಾಕೃತಗುಣವಿಶಿಷ್ಟನು. ಭಕ್ತವತ್ಸಲನಾದ ಭಗವಂತನು ಸತ್ಯ ಸಂಕಲ್ಪನು. ತನ್ನ ಅಚಿಂತ್ಯ ಶಕ್ತಿಯಿಂದ ಬಹಿರಂತವ್ಯಾಪ್ತನಾಗಿ, ಪರಾ ಪೇಕ್ಷೆಯಿಲ್ಲದೆ ಪರಮಾಪ್ತನಾಗಿ ವಿಹಾರ ಮಾಡುವನು.

ರಮಾಪತಿಯು ತ್ರಿವಿಧಜೀವರಲ್ಲಿ ವ್ಯಾಪ್ತನಾಗಿದ್ದುಕೊಂಡು, ತ್ರಿಗುಣ ಸ್ವಭಾವಕ್ರಿಯೆಗಳನ್ನು ಅಭಿವ್ಯಕ್ತಿ ಮಾಡುತ್ತಾ, ಪ್ರಾಣಾದಿ ತತ್ವೇಶಾಂತರ್ಗತ

ನಾಗಿ, ಅವರವರ ಕರ್ಮರೂಪವಾದ ಫಲಗಳನ್ನು ಅವರ ಅನುಭವಕ್ಕೆ ತಂದುಕೊಡುವನು. ವಜ್ರದಂತೆ ಶುಭ್ರ ರೂಪದಿಂದ ದೇವತೆಗಳಲ್ಲಿಯೂ, ಹವಳದಂತೆ ರಕ್ತವರ್ಣದಿಂದ ಮಾನವರಲ್ಲಿಯೂ, ನೀಲಮಣಿಯಂತೆ ಕಪ್ಪು ವರ್ಣದಿಂದ ದಾನವರಲ್ಲಿಯೂ ವಿರಾಜಮಾನನಾಗಿದ್ದು, ಅವರವರ ಯೋಗ್ಯತಾನುಸಾರ ಕ್ರಿಯಾದಿಗಳನು ಮಾಡಿ, ಮಾಡಿಸುತ್ತಿರುವನು.

ಅಣುರೂಪವಸ್ತುಗಳಲ್ಲಿ ಅತ್ಯಂತ ಸೂಕ್ಷ್ಮರೂಪದಿಂದಲೂ, ಮಹತ್ತಿನಲ್ಲಿ ಸ್ಥೂಲರೂಪಗಳಿಂದಲೂ ಇದ್ದು, ಅಚಿಂತ್ಯಾದ್ಭುತಶಕ್ತನಾದ ಶ್ರೀಹರಿಯು ಈ ಬ್ರಹ್ಮಾಂಡದಲ್ಲಿ ಕ್ರೀಡಾವಿಶಿಷ್ಟನಾಗಿರುವನು. ಸರ್ವಶಕ್ತನಾದ ಭಗವಂತನ ಮುಂದೆ ಯಾರ ಆಟವೂ ನಡೆಯದು. ಒರಳಿನಲ್ಲಿ ಹಾಕಿರುವ ಧಾನ್ಯಗಳನ್ನು ಒನಕೆಯು ಮರ್ಧಿಸುವಂತೆ, ಜಗತ್ತನ್ನು ಸಂಹರಿಸುವನು.

ಜೀವವರ್ಗದಲ್ಲಿ ದೇವ, ಮಾನವ ಮತ್ತು ದಾನವ ಎಂದು ತ್ರಿವಿಧ. ಇವರಲ್ಲಿ ನಿರಂತರ ವ್ಯಾಪ್ತನಾಗಿದ್ದರೂ, ಶ್ರೀಹರಿಗೆ ಅವರಲ್ಲಿ ಸ್ನೇಹವಾಗಲೀ ಉದಾಸೀನವಾಗಲೀ, ದ್ವೇಷವಾಗಲೀ ಇಲ್ಲ. ಜೀವರಿಂದ ಅತ್ಯಂತ ಭಿನ್ನನು, ಅವರವರ ಅಧಿಕಾರಾನುಸಾರ ಸುಖ, ಮಿಶ್ರ ಫಲ ಮತ್ತು ದುಃಖಪ್ರದನು. ವಿಷಯಗಳಿಗೆ ಪ್ರೇರಕನಾಗಿದ್ದರೂ, ನಿರ್ಲೇಪನು. ಇದರಿಂದ ಶ್ರೀ ಪರಮಾತ್ಮನು ವೈಷಮ್ಯ ನೈರ್ಘೃಣ್ಯಶೂನ್ಯನು.

ಶ್ರವಣ, ದರ್ಶನ, ಯಾಚನ, ಗಮನಾಗಮನ ಇತ್ಯಾದಿ ಕ್ರಿಯಾ ವಿಶೇಷಗಳಲ್ಲಿ ತಾನೇ ತಾನಾಗಿದ್ದು, ಕಾರ್ಯ ಪ್ರೇರಕನಾಗಿದ್ದಾನೆ. ಅಪ್ರತಿಮಲ್ಲವಾದ ಶ್ರೀ ಹರಿಗೆ ಸಮರಾಗಲೀ, ಅಧಿಕರಾಗಲೀ ಈ ಜಗತ್ತಿನಲ್ಲಿ ಯಾರೂ ಇಲ್ಲ. ಅಂದರೆ ಸಮಾಭ್ಯಧಿಕ ರಹಿತನು.

ಕಾದ ಕಬ್ಬಿಣವು ನೋಡುವರಿಗೆ ಅಗ್ನಿಯಂತೆಯೇ ತೋರುವುದು. ಆದರೆ ಅದು ಆರಿದಾಗ ಪೂರ್ವಸ್ಥಿತಿಗೆ ಬಂದು, ಬರೀ ಲೋಹವಾಗಿ ಸುಡುವ ಕ್ರಿಯಾಶಕ್ತಿಯನ್ನು ಕಳೆದುಕೊಳ್ಳುವುದು. ಅಂತೆಯೇ ಮನಸ್ಸು, ಬುದ್ಧಿ,

ಇಂದ್ರಿಯಗಳಲ್ಲಿ ಭಗವಂತನು ವ್ಯಾಪ್ತನಾಗಿರುವುದರಿಂದಲೇ ಸರ್ವರೂ ನಮಗೆ ಆಪ್ತರಾಗಿ ವರ್ತಿಸುವರು. ಆತನ ದಯೆ ತಪ್ಪಿದರೆ, ಎಲ್ಲರೂ ವಿಮುಖ ರಾಗುವರು.

ಮೇಘಗಳು ಮಳೆಯನ್ನು ಸುರಿಸಿದಾಗ ವೃಕ್ಷಗಳು ಚಿಗುರೊಡೆದು, ರಸಭರಿತವಾದ ಫಲಗಳನ್ನು ಕೊಡುವುವು. ವಿವಿಧ ಫಲಗಳ ರಸವಿಶೇಷವು ಭಿನ್ನ ಭಿನ್ನವಾಗಿರುವುದು. ಸುರಿಯುವ ಮಳೆ ಒಂದೇ ಆದರೂ, ಫಲಗಳು ಮಾತ್ರ ಬೇರೆ ಬೇರೆ. ಅಂತೆಯೇ ರಮಾಧವನು ಜೀವಾಂತರ್ಯಾಮಿಯಾ ಗಿದ್ದುಕೊಂಡು, ಅವರವವರ ಯೋಗ್ಯತಾನುಸಾರ ಗುಣ ಕರ್ಮಗಳ ವ್ಯಾಪಾರಗಳನ್ನು ಅಭಿವ್ಯಕ್ತಿ ಮಾಡುವುದರಿಂದ, ದೋಷರಹಿತನಾದ ಜಗ ತ್ಸ್ವಾಮಿಗೆ ವೈಷಮ್ಯವೆಂದಿಗೂ ಇಲ್ಲ.

ರಂಗಸ್ಥಳದ ಮೇಲೆ ನಟನೋರ್ವನು ವೇಷಭೂಷಣಗಳಿಂದಲಂಕೃತ ನಾಗಿ ತನ್ನ ಕೌಶಲ್ಯದಿಂದ ನೆರೆದ ಜನರನ್ನು ಸಂತೋಷಪಡಿಸುವಂತೆ, ಪೂರ್ಣಾ ನಂದಜ್ಞಾನಮಯನಾದ ಶ್ರೀಹರಿಯು ಜೀವರಿಗೆ ಮನಸ್ಸಿನಲ್ಲಿ ಅನಾದಿ ಕರ್ಮವಾಸನಾರೂಪವಾದ ಕೋರಿಕೆಗಳನ್ನು ನೆರವೇರಿಸುತ್ತಾ, ಆಯಾಯಾ ದೇಶ ಭಾಷಾ ವ್ಯಾಪ್ತರೂಪಗಳಿಂದ ಪೋಷಿಸುವನು.

ಶ್ರೀ ಪರಮಾತ್ಮನ ಒಂದೊಂದು ಗುಣದಲ್ಲಿ ಅನಂತಗುಣಗಳು ಪೂರ್ಣ ವಾಗಿರುವುವು. ಅನಂತಕಲ್ಯಾಣಗುಣಗಣಸಂಪನ್ನನಾದ ಶ್ರೀ ಹರಿಯು ಸರ್ವಪ್ರಕಾರಗಳಲ್ಲಿಯೂ ಪರಿಪೂರ್ಣನು. ಆನಂದ, ಬಲ, ಸೌಂದ ರ್ಯಾದ್ಯನಂತ ಗುಣಗಳು ಒಂದೇ ಗುಣದಲ್ಲಿ ಒಂದೇ ರೂಪದಲ್ಲಿದ್ದು, ಆ ಒಂದು ರೂಪ ಮಾತ್ರದಿಂದಲೇ ಸಕಲ ಲೋಕಗಳನ್ನೂ ಧರಿಸಿ, ಆ ಲೋಕಗತ ಸಮಸ್ತಪದಾರ್ಥಗಳ ಒಳ ಹೊರಗೆ ಆಕಾಶದಂತೆ ವ್ಯಾಪ್ತನಾಗಿದ್ದು, ನಾನಾ ನಾಮಗಳಿಂದ ಕರೆಯಿಸಿಕೊಳ್ಳುತ್ತಾ, ಸರ್ವಸ್ವರ ಶಬ್ದವಾಚ್ಯನಾಗಿದ್ದು, ಪೂರ್ಣಜ್ಞಾನಾನಂದಾದಿ ರೂಪವಿಶಿಷ್ಟನಾದ ಶ್ರೀಮನ್ನಾರಾಯಣನು ನಾನಾ ಪ್ರಕಾರವಾಗಿ ಕ್ರೀಡೆಯನ್ನಾಡಿ ಜೀವರನ್ನಾಡಿಸುವನು.

ಭಗವಂತನ ವ್ಯಾಪ್ತಿ ಮಹಿಮೆಯನ್ನು ಕೊನೆಯ ಪದ್ಯದಲ್ಲಿ ಜ್ಞಾನಿವರ್ಯರಾದ ಶ್ರೀ ದಾಸರಾಯರು– "ಶ್ರೀಹರಿಯು ಸರ್ವರಲ್ಲಿಯೂ/ ವ್ಯಾಪ್ತನಾಗಿದ್ದಾನೆ. ತನ್ನಲ್ಲಿ ಎಲ್ಲರನ್ನೂ ಧರಿಸಿದ್ದಾನೆ. ಆತನ ಶೌರ್ಯ ಸಾಹಸಗಳು ಅಪ್ರತಿಮ. ಮನ್ಮಥಪಿತನಾದ ಶ್ರೀ ಹರಿಯು ಅನಂತಗುಣಪೂರ್ಣನು. ಜಗತ್ತಿನ ಆದಿ ಮಧ್ಯಾಂತಗಳ ವಿಷಯವನ್ನು ಅರಿತವನು. ಶ್ರೀ ಹರಿಯು ಸರ್ವತ್ರ ವ್ಯಾಪ್ತನೆಂದು ಸಾರಿದ ಶ್ರೀಪ್ರಹ್ಲಾದರಾಜರ ಸೊಲ್ಲನ್ನು ಲಾಲಿಸಿ, ನಿಜಭೃತ್ಯನ ಮಾತನ್ನು ಸತ್ಯವನ್ನಾಗಿ ಮಾಡುವದಕ್ಕಾಗಿ, ದಾನವದಲ್ಲಣನಾದ ಶ್ರೀ ಲಕ್ಷ್ಮೀನರಸಿಂಹಾಭಿನ್ನ ಜಗನ್ನಾಥವಿಠ್ಠಲನು ಸ್ತಂಭದಿಂದೊಗೆದು ಬಂದು ದುಷ್ಟನಾದ ಹಿರಣ್ಯಕಶಿಪುವನ್ನು ಸಂಹರಿಸಿ, ನಿಜಭಕ್ತನಾದ ಪ್ರಹ್ಲಾದನನ್ನು ಸಂರಕ್ಷಿಸಿದನು" ಎಂದು ಉಪಸಂಹಾರ ಮಾಡಿದ್ದಾರೆ.

*

|| ಶ್ರೀಃ ಹರಿಃ ಓಂ ||

|| ಶ್ರೀ ಲಕ್ಷ್ಮೀನಾರಸಿಂಹಾಭಿನ್ನ ಶ್ರೀ ಜಗನ್ನಾಥವಿಠ್ಠಲಾಯ ನಮಃ ||

## ತೃತೀಯ ಸಂಧಿ

## ವ್ಯಾಪ್ತಿಸಂಧಿ ಪ್ರಾರಂಭ

**ಹರಿಕಥಾಮೃತಸಾರ ಗುರುಗಳ |**
**ಕರುಣದಿಂದಾಪನಿತು ಪೇಳುವೆ |**
**ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||ಪ||**

## ಪದ್ಯ (೧)

**ಮೂಲ: —**

**ಪುರುಷರೂಪತ್ರಯ ಪುರಾತನ |**
**ಪುರುಷ ಪುರುಷೋತ್ತಮ ಕ್ಷರಾಕ್ಷರ |**
**ಪುರುಷಪೂಜಿತಪಾದ ಪೂರ್ಣಾನಂದಜ್ಞಾನಮಯ ||**
**ಪುರುಷಸೂಕ್ತ ಸುಮೇಯ ತತ್ತ |**
**ತ್ಪುರುಷ ಹೃತ್ಪುಷ್ಕರನಿಲಯ ಮಹ |**
**ಪುರುಷಜಾಂಡಾಂತರದಿ ಬಹಿರದಿವ್ಯಾಪ್ತ ನಿರ್ಲಿಪ್ತ ||೧||**

**ಅವತರಣಿಕೆ :—**

ಸರ್ವತ್ರವ್ಯಾಪ್ತನಾಗಿರುವ, ವ್ಯಾಪ್ತಿರೂಪದಿಂದ ಇದ್ದರೂ, ಜಗದ್ವಿಲಕ್ಷಣನಾದ ಶ್ರೀ ಪರಮಾತ್ಮನ ವ್ಯಾಪ್ತಿಮಹಿಮಾ ವಿಶೇಷಗಳನ್ನು ವಿವರಿಸುತ್ತಾರೆ "ಪುರುಷರೂಪತ್ರಯ" ಎಂಬ ತೃತೀಯಸಂಧಿಗತ ಈ ಪ್ರಥಮ ಪದ್ಯದಿಂದ.

**ಪ್ರತಿಪದಾರ್ಥ :—**

**ಪುರೂಷರೂಪತ್ರಯ** = ಮೂರು ಪುರುಷ ರೂಪಗಳನ್ನು ಧರಿಸಿದ. ಪ್ರಥಮತಃ ಸೃಷ್ಟಿ ಪ್ರಾರಂಭದಲ್ಲಿ ವಟಪತ್ರಶಾಯಿಯಾದ ಶ್ರೀಮನ್ನಾರಾಯಣ ದೇವರಿಂದ ಅಭಿವ್ಯಕ್ತವಾದ ವಾಸುದೇವನಿಗೆ **ಪುರುಷ** ಎಂದು ಪ್ರಸಿದ್ಧಿ. ಈ ಮೂರು ಪುರುಷ ರೂಪಗಳು ಯಾವುವೆಂದರೆ :— (೧) ಒಂದು ರೂಪದಿಂದ ಮಹತ್ತತ್ವಪ್ರವಿಷ್ಟವಾದದ್ದು (೨) ಒಂದು ರೂಪದಿಂದ ಅಂಡ ಖರ್ಪರ ಪ್ರವಿಷ್ಠವಾದದ್ದು ಮತ್ತು (೩) ಒಂದು ರೂಪದಿಂದ ಸರ್ವಜೀವರಲ್ಲಿ ಪ್ರವಿಷ್ಠವಾದದ್ದು. **ಪುರಾತನಪುರುಷ** = ಸೃಷ್ಟಿಗಿಂತ ಪ್ರಾರಂಭದಲ್ಲಿಯೇ ಇದ್ದ ಶ್ರೀಮನ್ನಾರಾಯಣನಾಮಕ ಪುರುಷರೂಪ. ಅಂದರೆಆದಿಪುರುಷ ಎಂದರ್ಥ **ಪುರುಷೋತ್ತಮ** = ರಮಾಬ್ರಹ್ಮಾದಿಗಳಿಗಿಂತಲೂ ಉತ್ತಮನಾದವನು. **ಕ್ಷರಾಕ್ಷರ** = ಅನಾದಿಕಾಲದಿಂದ ಲಿಂಗದೇಹಬಂಧಕರಾಗಿದ್ದು, ಕೊನೆಯಲ್ಲಿ ಅದರ ನಾಶವನ್ನು ಹೊಂದತಕ್ಕ ಬ್ರಹ್ಮಾದಿತೃಣಾಂತತ್ರಿವಿಧ ಜೀವವರ್ಗಕ್ಕೆ **ಕ್ಷರರು** ಎಂದು ಹೆಸರು. ಲಿಂಗದೇಹವೂ ಇಲ್ಲದೆ, ಅದರ ನಾಶವೂ ಇಲ್ಲದೆ, ನಿತ್ಯಮುಕ್ತರಾದ ಶ್ರೀ ರಮಾದೇವಿಯರಿಗೆ **ಅಕ್ಷರ** ಎಂದು ಹೆಸರು. **ಪುರುಷ** = ರಮಾದೇವಿಯರು ಹಾಗೂ ಜೀವಕೋಟಿ ಪ್ರವಿಷ್ಠರಾದ ಬ್ರಹ್ಮಾದಿತೃಣಾಂತಜೀವರಿಗೆ ನಿಯಾಮಕನಾದ **ಪೂಜಿತಪಾದ** = ಅಕ್ಷರ ನಾಮಕರಾದ ಶ್ರೀಲಕ್ಷ್ಮೀದೇವಿಯರಿಂದಲೂ ಮತ್ತು ಕ್ಷರನಾಮಕರಾದ ಬ್ರಹ್ಮಾದಿತೃಣಾಂತಜೀವವರ್ಗದವರಿಂದಲೂ ಪೂಜಿಸಲ್ಪಟ್ಟ ಪಾದಪದ್ಮವುಳ್ಳವನು. **ಪೂರ್ಣ** = ಪರಿಪೂರ್ಣವಾದ (ಪ್ರಚುರವಾದ) **ಆನಂದ** =

**ಅಪ್ರಾಕೃತ**ವಾದ ಸಂತೋಷ **ಜ್ಞಾನ** = ಜ್ಞಾನವೂ ಇವುಗಳೇ **ಮಯ** = ಸ್ವರೂಪವಾಗುಳ್ಳ. ಅಂದರೆ ಜ್ಞಾನಾನಂದ ಪ್ರಚುರವಾದ ದೇಹವುಳ್ಳ **ಪುರುಷ ಸೂಕ್ತ** = ಪುರುಷಸೂಕ್ತದಿಂದ **ಸು** = ಚೆನ್ನಾಗಿ **ಮೇಯ** = ತಿಳಿಸಿಕೊಳ್ಳಲ್ಪ ಡುವ, ಅಂದರೆ ಪುರುಷಸೂಕ್ತಪ್ರತಿಪಾದ್ಯನಾದ **ತತ್ತತ್ಪುರುಷ** = ಕ್ಷರಾ ಕ್ಷರಪುರುಷಶಬ್ದವಾಚ್ಯರಾದ ರಮಾ ಬ್ರಹ್ಮಾದಿ ಸಕಲಪುರುಷರ **ಹೃತ್ಪು ಷ್ಕರ** = ಸ್ವರೂಪಶರೀರಗತ ಹಾಗೂ ಸ್ಥೂಲ ದೇಹಗತ ಅಷ್ಟದಳಾತ್ಮಕ ಹೃದಯಕಮಲದಲ್ಲಿ (ಶ್ರೀ ರಮಾದೇವಿಯರಿಗೆ ಸ್ಥೂಲದೇಹವಿಲ್ಲದ ಪ್ರಯುಕ್ತ ಸ್ವರೂಪದೇಹಗತ ಹೃದಯಕಮಲವನ್ನು ಪರಿಗಣಿಸಬೇಕು) **ನಿಲಯ** = ಆವಾಸವಾಗಿರತಕ್ಕ (ಹೃತ್ಕಮಲನಿವಾಸಿಯಾದ) **ಮಹಾಪುರುಷ** = ಪುರುಷೋ ತ್ತಮನಾದ ಪರಮಾತ್ಮನಿಂದ **ಜ** = ಉತ್ಪನ್ನವಾದ **ಅಂಡ** = ಬ್ರಹ್ಮಾಂಡ **ಅಂತರದಿ** = ಒಳಗೂ **ಬಹಿರದಿ** = ಹೊರಭಾಗದಲ್ಲಿಯೂ **ವ್ಯಾಪ್ತ** = ವ್ಯಾಪಿಸಿಕೊಂಡಿದ್ದಾನೆ. **ನಿರ್ಲಿಪ್ತ** = ಆದರೆ ಅದರ ಸಂಬಂಧವಿಲ್ಲದೆ ಇರು ವನು. ಅಂದರೆ ಚೇತನಾಚೇತನವಿಲಕ್ಷಣನು.

# ವ್ಯಾಖ್ಯಾನಗಳು

## (೧) ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :—

ಪರಮಾತ್ಮನು ಎಂಥಾವನೆಂದರೇ • **ಪುರುಷ** ಎಂತ ಕರೆಸಿಕೊಂಡು, ಮೂರು ರೂಪಗಳಿಂದ ಮೂರು ವಿಧ ವ್ಯಾಪಾರಗಳ ಮಾಡಿದವ. ಅದು ದಾವದೆಂದರೇ, ಒಂದು ರೂಪದಿಂದ ಮಹತ್ತತ್ವದಲ್ಲಿಯೂ, ಎರಡನೇ ರೂಪದಿಂದ ಬ್ರಹ್ಮಾಂಡದಲ್ಲಿಯೂ, ಮೂರನೇ ರೂಪದಿಂದ ಸರ್ವ ಜೀವರು ಗಳಲ್ಲಿಯೂ ಇರತಕ್ಕವನು ಮತ್ತು ಅನಿರುದ್ಧಾದಿರೂಪಗಳು ಅಭಿವ್ಯಕ್ತವಾಗು ವುದಕ್ಕಿಂತಲೂ ಮುಂಚಿತವಾಗಿ ಅಭಿವ್ಯಕ್ತವಾದವನಾದ ವಾಸುದೇವರೂಪ ಉಳ್ಳವನು. ಆದಕಾರಣ ಇವನು **ಪುರಾತನಪುರುಷ** (ಬಹುಕಾಲದ

ಹಿಂದಿನವ ಎಂತರ್ಥ) ಎನಿಸತಾನೆ. ಲಕ್ಷ್ಮೀದೇವೇರಕ್ಕಿಂತಲೂ, ಬ್ರಹ್ಮಾದಿ ಜೀವರಕ್ಕಿಂತಲೂ, ಉತ್ತಮನಾದವ. ಲಿಂಗದೇಹಬಂಧಕರಾಗಿದ್ದು, ಆ ಲಿಂಗದೇಹನಾಶ ಐದತಕ್ಕ ಬ್ರಹ್ಮಾದಿತೃಣಾಂತಜೀವರಿಗೂ, ಲಿಂಗದೇಹ ವಿಲ್ಲದ ನಿತ್ಯಮುಕ್ತಳಾದ ಲಕ್ಷ್ಮಿಗೂ ವಿಲಕ್ಷಣನಾಗಿ, ಅವರ ಅಂತರ್ಗತನಾಗಿ, ಅವರಿಂದ ಪೂಜೆ ಮಾಡಿಸಿಕೊಳ್ಳಲ್ಪಟ್ಟ ಪಾದದ್ವಯವುಳ್ಳವನು. ಪೂರ್ವೋಕ್ತ ತ್ರಿವಿಧರಲ್ಲಿ ಇದ್ದಾಗ್ಯೂ ಅವಿಕಾರನಾಗಿ ಸಂತೋಷ, ಜ್ಞಾನ, ಇವುಗಳಿಂದ ಪ್ರಚುರವಾದ ಶರೀರ ಉಳ್ಳವನು. ವೇದಸೂಕ್ತವಾದ ಪುರುಷಸೂಕ್ತ ದಿಂದ ಛಂದಾಗಿ ತಿಳಿಸಿಕೋತಕ್ಕವ. ಇಂಥಾ ಪರಮಾತ್ಮ ತನ್ನ ಅವಯವ ಗಳಿಂದ ಅಂಡದ ಒಳಗೆ ಜಗತ್ಸೃಷ್ಟಿಮಾಡಿ. ಆ ಜಗತ್ತಿನಲ್ಲೂ, ಅದರ ಲ್ಲಿರುವಂಥಾ ರಮಾದೇವೇರ ಸ್ವರೂಪ ದೇಹದಲ್ಲೂ, ತ್ರಿವಿಧ ಜೀವರ ಸ್ಥೂಲ ದೇಹದಲ್ಲೂ ಆವಾಸನಾಗಿ ಮತ್ತು ತಾನೇ (ಇಂಥಾ ಪರಮಾತ್ಮನೇ) ಮೂರು ರೂಪ ಧರಿಸಿದವನಂಥಾವನಾಗಿ, ಒಂದು ರೂಪದಿಂದ ಬ್ರಹ್ಮಾಂಡ ಖರ್ಪರದಲ್ಲಿ, ಇನ್ನೊಂದುರೂಪದಿಂದ ಬ್ರಹ್ಮಾಂಡದ ಒಳಗೆ, ಇನ್ನೊಂದು ರೂಪದಿಂದ ಅಂಡದಹೊರಗೆ ಪೃಥಿವ್ಯಾವರಣ ಆಆರಂಭಮಾಡಿ ನವಾವರಣಪರ್ಯಂತ ವ್ಯಾಪ್ತನಾಗಿರತಕ್ಕವ. ಈ ನವಾವರಣಗಳು ಯಾವುವೆಂದರೆ :— (1) ಜಲ (2) ಅಗ್ನಿ (3) ವಾಯು (4) ಆಕಾಶ (5) ಅಹಂಕಾರತತ್ವ (6) ಮಹ ತ್ತತ್ವ (7) ತಮೋ ಆವರಣ (8) ರಜೋ ಆವರಣ ಮತ್ತು (9) ಸತ್ವಾವರಣ. ಹೀಗೆ ಒಂಭತ್ತು ಆವರಣಗಳು. ಹೀಂಗೆ ವ್ಯಾಪ್ತನಾಗಿದ್ದಾ ಗ್ಯೂನೂ ತತ್ಸಂಬಂಧಪಡದೆ ಇರತಕ್ಕವ. ರಮಾದೇವೇರಿಗೆ ಕೂಡ ಲಭ್ಯ ವಾಗದ ಸ್ವಾಖ್ಯಪ್ರದೇಶ ಉಳ್ಳವನಾಗಿ, ಅಪರಿಚ್ಛಿನ್ನವ್ಯಾಪ್ತನಾಗಿರತಕ್ಕವ (ಯಾಕೆಂದರೆ ರಮಾದೇವಿ ಗುಣತಃ ಅಸಮಳು. ಆದಪ್ರಯುಕ್ತ ಸಮವ್ಯಾಪ್ತಿ ಇಲ್ಲ ಮತ್ತು ತಾರತಮ್ಯದಲ್ಲಿ ನೀಚಳಾಗಿದ್ದರಿಂದ ವ್ಯಾಪ್ತಿ ವಿಷಯದಲ್ಲಿಯೂ ನೀಚಳೇನೇ. ಆದರೂ ನಿತ್ಯಾವಿಯೋಗಿನಿಯಾದ್ದರಿಂದ ಸ್ಥೂಲವಾದ ಪದಾ ರ್ಥದ ಏಕದೇಶಸ್ಪರ್ಶದಿಂದ ಅವಿಯೋಗಿತ್ವ ಹ್ಯಾಂಗೋ ತದ್ವತ್ ಅವಿಯೋ ಗಿತ್ವ. ಈ ಪ್ರಕಾರ ಪರಮಾತ್ಮನ ಮಹಿಮಾ ತಿಳಿಯಬೇಕು ಎಂತ ತಾತ್ಪರ್ಯ)

**ವಿಶೇಷಾರ್ಥ :—**

**"ಪುರುಷಃ ಪರಮಾತ್ಮಾಜೋ ಬ್ರಹ್ಮ ನಾರಾಯಣಃ ಪರಃ"** ಎಂಬಂಥ **ಶ್ರುತಿಪ್ರಮಾಣ**ದಿಂದ ಪ್ರತಿಪಾದಿತ ಪುರುಷಃ ಎಂದರೇ ದೇಹದಲ್ಲಿ ವಾಸವಾಗಿ ಇರತಕ್ಕವ ಅಥವಾ ಉತ್ತಮಾಧಿಷ್ಠಾನರಾದಂಥಾ ಮುಖ್ಯಪ್ರಾಣ ದೇವರ ದೇಹದಲ್ಲಿ ವಾಸವಾಗಿ ಇರತಕ್ಕವ. ಅಥವಾ ಷಡ್ಗುಣೈಶ್ವರ್ಯ ಸಂಪನ್ನನಾದವ ಎಂದರ್ಥ. ಅಥವಾ ಜೀವರಿಗೆ ಕರ್ಮಫಲ ಕೊಡತಕ್ಕವ ಎಂದರ್ಥ.

**"ರೂಪತ್ರಯ"** ಎಂಬ ಶಬ್ದದ ವಿವರಣೆ :— ಒಂದು ರೂಪ ಮಹತ್ತತ್ವ ಪ್ರವಿಷ್ಟವಾದದ್ದು ಎಂತ ಹೇಳಿತು. **ಇದಕ್ಕೆ ಪ್ರಮಾಣ :— "ಮಹತ್ತತ್ವಂ ತತೋವಿಷ್ಣುಃ ಸೃಷ್ಟವಾನ್ ಬ್ರಹ್ಮಣಸ್ತನುಮ್"** —ಎಂದು **ಮಣಿಮಂಜರಿಯ ಸರ್ಗ (೧); ಶ್ಲೋಕ (೨)** ದ್ವಿತೀಯರೂಪದಿಂದ ಬ್ರಹ್ಮಾಂಡದಾಕಾರನಾಗಿ ಒಳಗೆ ಪ್ರವಿಷ್ಟನಾಗಿದ್ದಾನೆ. **ಇದಕ್ಕೆ ಪ್ರಮಾಣ :— "ಚಿದಾನಂದಶರೀರಸ್ತು ಪ್ರವಿಷ್ಟಾಂಡೋ ಹರಿಃ ಸ್ವಯಂ"— ಇತಿ ಏಕಾದಶ ತಾತ್ಪರ್ಯೇ.** ಮೂರನೆಯ ರೂಪದಿಂದ ಜೀವರುಗಳಲ್ಲಿ ಅಂತರ್ಯಾಮಿಯಾಗಿದ್ದು ತತ್ತನ್ನಾಮದಿಂದ ಕರೆಸುತ್ತಾನೆಂಬುದಕ್ಕೆ ಪ್ರಮಾಣ :— **"ಸ ಜೀವನಾಮಾ ಭಗವಾನ್ ಪ್ರಾಣಧಾರಣ ಹೇತುತಃ" —ಇತಿ ಐತರೇಯಭಾಷ್ಯೇ.**

**"ಪುರುಷ"** ಶಬ್ದಾರ್ಥ ಹೀಗಿದೆ. **"ಪೂರ್ಣಾನಂದಂ ಷನೋತಿ ದದಾತಿ ಇತಿ ಪುರುಷಃ".**

ಪುರುಷರೂಪತ್ರಯಕ್ಕೆ ಸೃಷ್ಟ್ಯಾದಿಗಳಿಗೆ ಕಾರಣಗಳಾದ ಅನಿರುದ್ಧ, ಪ್ರದ್ಯುಮ್ನ ಮತ್ತು ಸಂಕರ್ಷಣ ರೂಪಗಳು ಎಂತಲೂ, ಈಶ್ವರಾಭಿನ್ನವಾದ ವಿಷ್ಣು, ಬ್ರಹ್ಮ, ಶಿವರೂಪಗಳೆಂತಲೂ ಹೇಳುತ್ತಾರೆ.

**ಇದಕ್ಕೆ ಪ್ರಮಾಣ :—**

**"ವಿಷ್ಣೋಸ್ತು ತ್ರೀಣಿ ರೂಪಾಣಿ ಪುರುಷಸ್ಯ ಮಹಾತ್ಮನಃ। ಪ್ರಥಮಂ ಮಹತಃ ಸೃಷ್ಟ್ಯ ದ್ವಿತೀಯಂತ್ವಂಡಸಂಸ್ಥಿತಂ। ತೃತೀಯಂ ಸರ್ವಭೂತಸ್ಥಂ ತಾನಿಜ್ಞಾತ್ವಾ ವಿಮುಚ್ಯತೇ"— ಇತಿ ಭಾಗ್ವತೇ.**

**"ಕ್ಷರಾಕ್ಷರರು" ಎಂಬುವುದಕ್ಕೆ ವಿವರ :—**

**ಬ್ರಹ್ಮಾ ಶಿವಃ ಸುರೇಶಾದ್ಯಾಃ ಶರೀರಕ್ಷರಣಾತ್ಕ್ಷರಾಃ। ಲಕ್ಷ್ಮೀರಕ್ಷರ ದೇಹತ್ವಾದಕ್ಷರಾ ತತ್ಪರೋ ಹರಿಃ ॥**
**—ಎಂದು ವಿಷ್ಣು ತತ್ವ ವಿನಿರ್ಣಯ ವಚನವಿದೆ.**

**(೨) "ಭಾವಪ್ರಕಾಶಿಕೆ" —ವ್ಯಾಖ್ಯಾನ :—**

ಶ್ರೀ ಪರಮಾತ್ಮನು ಸೃಷ್ಟಿಕಾಲದಲ್ಲಿ ಮೂರು ಪುರುಷರೂಪಗಳನ್ನು ಸ್ವೀಕರಿಸಿದನು. ಪುರಾಣಪುರುಷನು. ರಮಾಬ್ರಹ್ಮಾದಿ ಸಕಲ ದೇವ-ದೈತ್ಯ-ಉರಗ-ಗರುಡ-ಗಂಧರ್ವ ಜೀವರಾಶಿಗಳಿಗಿಂತಲೂ ಉತ್ತಮನು. ಕ್ಷರಾಕ್ಷರ ಪುರುಷರಾದ ರಮಾ ಬ್ರಹ್ಮಾದಿಗಳಿಂದ ಪೂಜಿತವಾದ ಪಾದಗಳುಳ್ಳವನು. ಪೂರ್ಣಾನಂದ ಜ್ಞಾನಸ್ವರೂಪನು. ಪುರುಷಸೂಕ್ತದಿಂದ ತಿಳಿದುಕೊಳ್ಳಲು ಅರ್ಹವಾದ ಸ್ವರೂಪ ಉಳ್ಳವನು. ಆಯಾ ಪುರುಷರ ಹೃದಯಕಮಲದಲ್ಲಿ ವಾಸವಾಗಿರುವನು. ಬ್ರಹ್ಮಾಂಡದ ಒಳಗೂ ಹೊರಗೂ ಸಹ ಸರ್ವತ್ರ ವ್ಯಾಪ್ತನಾಗಿದ್ದರೂ ನಿರ್ಲಿಪ್ತನಾಗಿರುವನು.

**ವಿಶೇಷಾರ್ಥ :—**

**"ಪುರುಷರೂಪತ್ರಯ"** —ಶ್ರೀ ಪರಮಾತ್ಮನು ಮೂರು ಪುರುಷ ರೂಪಗಳನ್ನು ಸ್ವೀಕರಿಸಿದುದು ಯಾವ ಕಾಲದಲ್ಲಿ ಅಂದರೆ- **ಭಾಗವತದಲ್ಲಿ "ಭಗವಾನೇಕ ಆಸೀದಮಗ್ರ ಆತ್ಮಾತ್ಮನಾಂ ವಿಭುಃ ॥"** ಎಂಬ ವಚನ

ರೀತ್ಯಾ, ಸಕಲ ಜೀವರಾಶಿಗಳಿಗೂ ಪ್ರಭುವಾದ ಶ್ರೀ ಪರಮಾತ್ಮನು, ಸೃಷ್ಟಿಗೆ ಪೂರ್ವದಲ್ಲಿ ತಾನೊಬ್ಬನೇ ಇರುತ್ತಿದ್ದನು. ಎಂದು ಉಪಕ್ರಮಿಸಿ, ಶ್ರೀ ಪರಮಾತ್ಮನು ಜಗತ್ತನ್ನು ಸೃಷ್ಟಿಸಬೇಕೆಂದು ಯೋಚಿಸಿದನೆಂಬ ವಿಷಯವನ್ನು ೨ ಮತ್ತು ೩ನೆಯ ಶ್ಲೋಕಗಳಿಂದ ಹೇಳಿದರು. ೪ ನೆಯ ಶ್ಲೋಕದಲ್ಲಿ—

**"ಕಾಲವೃತ್ತ್ಯಾಂತು ಮಾಯಾಯಾಂ ಗುಣಮಯ್ಯಾಮಧೋಕ್ಷಜಃ । ಪುರುಷೇಣಾತ್ಮಭೂತೇನ ವೀರ್ಯಮಾಧತ್ತ ವೀರ್ಯವಾನ್ ತತೋ ಭವನ್ಮಹತತ್ವಮವ್ಯಕ್ತಾತ್ಕಾಲ ಚೋದಿತಾತ್ ॥"** ಅಂದರೆ, ಕಾಲಾನುಗುಣವಾಗಿ ಭಗವತ್ಸೇವಾ ಮಾಡುತ್ತಿರುವ ಸತ್ವರಜಸ್ತಮೋಗುಣಾತ್ಮಕಳಾದ ಮಾಯಾನಾಮಕಳಾದ ಪ್ರಕೃತಿಯಲ್ಲಿ ಸ್ವಯಂ ಪುರುಷರೂಪವನ್ನು ಸ್ವೀಕರಿಸಿದ ಶ್ರೀ ಪರಮಾತ್ಮನು ವೀರ್ಯದಾನ ಮಾಡಿದನು. ಆಗ ಕಾಲಪ್ರೇರಿತವಾದ ಅವ್ಯಕ್ತತತ್ವಭೂತಳಾದ ಪ್ರಕೃತಿಯ ದೆಶೆಯಿಂದ ಮಹತ್ತತ್ವವು ಹುಟ್ಟಿತು ಎಂದು ಹೇಳಿರುವರು. ಹೀಗೆ ಪ್ರಥಮ ಸೃಷ್ಟಿ ಕಾಲದಲ್ಲಿ ಮಹತ್ತತ್ವಾದಿಗಳನ್ನು ಸೃಷ್ಟಿಸಲು ತೆಗೆದುಕೊಂಡ ರೂಪವೇ ಮೊದಲನೆಯ ಪುರುಷರೂಪವು. ತದನಂತರ ಮಹತ್ತತ್ವದ ದೆಸೆಯಿಂದ ವೈಕಾರಿಕ, ತೈಜಸ, ತಾಮಸವೆಂಬ ಮೂರು ವಿಧವಾದ ಅಹಂಕಾರತತ್ವವು ಹುಟ್ಟಿತು. ಅವರ ದೆಶೆಯಿಂದ ಪಂಚಮಹಾಭೂತಗಳು, ತನ್ಮಾತ್ರಾಗುಣಗಳು. ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಚಿತ್ತ. ಬುದ್ಧಿ, ಮನಸ್ಸು ಮತ್ತು ಅಹಂಕಾರಗಳೆಂಬ 24 ತತ್ವಗಳೂ. ತತ್ವಾಭಿಮಾನಿದೇವತೆಗಳೂ ಹುಟ್ಟಿದರು. ಆ ದೇವತೆಗಳು ಎಲ್ಲರೂಕೂಡಿ ಒಂದು ವಾಸಸ್ಥಾನವನ್ನು ಸೃಷ್ಟಿಸಲು ಪ್ರಯತ್ನಮಾಡಿ ಸಾಧ್ಯವಾಗದೆ ಪರಮಾತ್ಮನನ್ನು ಸ್ತೋತ್ರಮಾಡಿದ ವಿಷಯವನ್ನು ಆ ಅಧ್ಯಾಯದ ಶೇಷದಿಂದ ಹೇಳಿರುವರು. ಆರನೇ ಅಧ್ಯಾಯದಲ್ಲಿ ಹೀಗೆ ಶ್ರೀಪರಮಾತ್ಮನು ತತ್ವಾಭಿಮಾನಿದೇವತೆಗಳಿಂದ ಸ್ತುತ್ಯಮಾನನಾಗಿ ಚಿತ್ತಾಭಿಮಾನಿಯಾದ ಶ್ರೀ ವಾಯುದೇವರಿಂದ ಕೂಡಿ 23 ತತ್ವಗಳನ್ನು ಒಂದೇಕಾಲದಲ್ಲಿ ಪ್ರವೇಶಿಸಿ, ಅವರೊಳಗಿದ್ದು ಪ್ರೇರಿಸಿದನು.

**"ಪ್ರಬುದ್ಧಕರ್ಮಾದೈವೇನ ತ್ರಯೋವಿಂಶತಿಕೋಗಣಃ । ಪ್ರೇರಿತೋಜನಯತ್ ಸ್ವಾಭಿರ್ಮಾತ್ರಾಭಿರಪಿಪೂರುಷಂ ಹಿರಣ್ಮಯಃ**

**ಸ ಪುರುಷಃ ಸಹಸ್ರಪರಿವತ್ಸರಾನ್ ಅಂಡಕೋಶ ಉವಾಸಾಪ್ಸು ಸರ್ವಸತತ್ವೋಪ ಬೃಂಹಿತಃ ||"**

ಅಂದರೆ, ಪರಮಾತ್ಮನ ಪ್ರವೇಶದಿಂದ ಉದ್ಬೋದಿತವಾದ ಈ ೨೩ ತತ್ವಗಣವು ಭಗವತ್ಪ್ರೇರಣೆಯಿಂದಲೂ ತನ್ಮಾತ್ರಾಗುಣಗಳ ಸಹಾಯದಿಂದಲೂ ಒಂದು ಪುರುಷರೂಪವನ್ನು ಸೃಷ್ಟಿಸಿತು. ಆ ಭಂಗಾರಮಯವಾದ ಪುರುಷರೂಪವೇ ಬ್ರಹ್ಮಾಂಡವು. ಪರಮಾತ್ಮನು ತಾನೂ ಪುರುಷರೂಪವನ್ನು ಧರಿಸಿ ಬ್ರಹ್ಮಾಂಡದೊಳಗಿದ್ದು ಒಂದು ಸಹಸ್ರ ವರ್ಷ ನೀರಿನೊಳಗೆ ವಾಸವಾಗಿದ್ದನು. ತದನಂತರ ಬ್ರಹ್ಮಾಂಡವನ್ನು ೧೪ ಲೋಕಗಳನ್ನಾಗಿ ಭಾಗಮಾಡಿದನು ಎಂದು ಹೇಳಿರುವರು. ಇದರಿಂದ ಬ್ರಹ್ಮಾಂಡಪ್ರವಿಷ್ಟವಾದ ಪುರುಷರೂಪವು ಎರಡನೆಯದೆಂದು ಸ್ಪಷ್ಟವಾಯಿತು.

ಮೂರನೆಯ ಪುರುಷರೂಪವಾವುದೆಂದರೆ, ಪ್ರಥಮ ಸ್ಕಂಧದಲ್ಲಿ **"ಜಗೃಹೇ ಪೌರುಷಂ ರೂಪಂ ಭಗವಾನ್ಮಹದಾದಿಭಿಃ । ಸಂಭೂತಂ ಷೋಡಶಕಲಮಾದೌ ಲೋಕಸಿಸೃಕ್ಷಯಾ । ಯಸ್ಯಾಂಭಸಿ ಶಯಾನಸ್ಯ ಯೋಗನಿದ್ರಾಂ ವಿತನ್ವತಃ । ನಾಭಿಹ್ರದಾಂಬುಜಾದಾಸೀದ್ಬ್ರಹ್ಮಾ ವಿಶ್ವಸೃಜಾಂ ಪತಿಃ । ಪಶ್ಯಂತದೋರೂಪ ಮದಭ್ರಚಕ್ಷುಷಃ ಸಹಸ್ರಪಾದೋರು ಭುಜಾನನಾದ್ಭುತಂ । ಸಹಸ್ರಮೂರ್ಧ್ನ ಶ್ರವಣಾಕ್ಷಿನಾಸಿಕಂ ಸಹಸ್ರಮೌಲ್ಯಂಬರಕುಂಡಲೋಲ್ಲಸತ್ ||"**

ಅಂದರೆ, ಸೃಷ್ಟಿಕಾಲದಲ್ಲಿ ಸ್ಥೂಲಸೃಷ್ಟಿಯನ್ನು ಮಾಡುವುದಕ್ಕಾಗಿ ಮಹತ್ತತ್ವ, ಮಹಾಭೂತಗಳು, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಮಹತ್ತತ್ವಾದಿ ಹದಿನಾರು ಕಲೋಪೇತವಾದ ಪುರುಷಸಂಬಂಧವಾದ ರೂಪವನ್ನು ಧರಿಸಿದನು. ಯಾವ ಪುರುಷರೂಪಿಯಾದ ಶ್ರೀ ಪರಮಾತ್ಮನು ಪ್ರಳಯೋದಯಕಾಲದಲ್ಲಿ ಶಯನಿಸಿ, ಯೋಗನಿದ್ರೆಯನ್ನು ಪ್ರಕಟಿಸಿ, ನಿದ್ರೆಯನ್ನು ಮುಗಿಸುತ್ತಿರುವ

ಸಮಯದಲ್ಲಿ ನಾಭಿ ಎಂಬ ಮಡುವಿನಿಂದ ಉತ್ಪನ್ನವಾದ ಕಮಲದ ದೆಸೆಯಿಂದ ಪ್ರಜಾಸೃಷ್ಟಿಕರ್ತರಾದ ಬ್ರಹ್ಮದೇವರು ಉತ್ಪನ್ನರಾದರೋ ಅಂತಹ "ಸಹಸ್ರ ಶೀರ್ಷಾಪುರುಷಃ" :- ಎಂಬ ಪುರುಷಸೂಕ್ತದಲ್ಲಿ ಹೇಳಿದಂತೆ, ಸಹಸ್ರಾರು ಪಾದಗಳು, ತೊಡೆಗಳು, ಕಿವಿಗಳು, ಕಣ್ಣುಗಳು, ಮೂಗುಗಳಿಂದ ಕೂಡಿ ಸಹಸ್ರಾರು ಕಿರೀಟಗಳು, ವಸ್ತ್ರಗಳು, ಕುಂಡಲಾದಿಗಳಿಂದ ಶೋಭಿಸುವ ಶ್ರೀ ಪರಮಾತ್ಮನ ಪುರುಷರೂಪವನ್ನು ಅಲ್ಪಜ್ಞಾನಿಗಳಲ್ಲದ ಮಹಾತ್ಮರಾದ ಬ್ರಹ್ಮಾದಿಗಳು ಈಗಲೂ ನೋಡುತ್ತಿರುವರು ಎಂದು ಹೇಳಿರುವರು. ಹೀಗೆ ಮಹತ್ತತ್ವಾದಿಗಳ ಉತ್ಪತ್ತಿಗೆ ಕಾರಣವಾದ ಪುರುಷರೂಪ ಒಂದು. ಬ್ರಹ್ಮಾಂಡ ಪ್ರವಿಷ್ಟರೂಪ ಒಂದು ಮತ್ತು ನಾಭಿಕಮಲದಿಂದ ಬ್ರಹ್ಮದೇವ ರನ್ನು ಪಡೆದು, ಪದ್ಮನಾಭನೆಂಬ ನಾಮವನ್ನು ಪಡೆದ ಪುರುಷಸೂಕ್ತಪ್ರತಿ ಪಾದ್ಯರೂಪ ಒಂದು ಹೀಗೆ "ಪುರುಷರೂಪತ್ರಯ"ವನ್ನು **ಭಾಗವತದಲ್ಲಿ** ಸ್ಪಷ್ಟೀಕರಿಸಿರುವರು.

ಇದೇ ವಿಷಯದಲ್ಲಿ-**"ಪ್ರಥಮಂ ಮಹತಃಸ್ರಷ್ಟು ದ್ವಿತೀಯಂತ್ವಂಡ ಸಂಸ್ಥಿತಂ । ತೃತೀಯಂ ದೇಹಿನಾಂ ದೇಹೇ"— ಎಂದು ವಿಷ್ಣುಪುರಾಣ ವಚನವಿರುವುದು.**

ಈ ವಚನರೀತ್ಯಾ, ಮೊದಲನೆಯದು ಮಹತ್ತತ್ವವನ್ನು ಸೃಷ್ಟಿಸಿದ ರೂಪವೆಂತಲೂ, ಎರಡನೆಯದು ಬ್ರಹ್ಮಾಂಡಪ್ರವಿಷ್ಟವಾದ ರೂಪವೆಂತಲೂ ಸಮರ್ಥಿತವಾಯಿತು. ಆದರೆ ಮೂರನೆಯ ರೂಪವು- **"ದೇಹಿನಾಂ ದೇಹೇ"—** ಎಂತಿರುವುದರಿಂದ ಸರ್ವಜೀವರ ದೇಹದಲ್ಲಿ ಪ್ರವಿಷ್ಟವಾದ ಪುರುಷರೂಪವೆಂದು ವ್ಯಕ್ತವಾಗುವುದು. ಇದಕ್ಕೆ ಯಾವ ಪುರುಷರೂಪವು ಬ್ರಹ್ಮದೇವರಿಗೆ ಮೂಲಭೂತವಾಗಿ ಪದ್ಮನಾಭನೆಂದು ಖ್ಯಾತವಾಗಿದೆಯೋ, ಅದೇ ರೂಪವೇ ಸಕಲ ಜೀವರಾಶಿಗಳಲ್ಲಿಯೂ ಪ್ರವಿಷ್ಟವಾದುದೆಂದು ತಿಳಿಯ ಬೇಕು. ಇದರಿಂದ ಭಾಗವತ ವಾಕ್ಯಕ್ಕೂ ಮತ್ತು ವಿಷ್ಣುಪುರಾಣ ವಚನಕ್ಕೂ ಏಕವಾಕ್ಯತೆ ಸಿದ್ಧಿಸುವುದು.

ಇದಲ್ಲದೆ **ಭಾಗವತ ಪ್ರಥಮಸ್ಕಂಧತಾತ್ಪರ್ಯದಲ್ಲಿ-** **"ಬ್ರಹ್ಮಾ**

**ವಿಷ್ಣ್ವೀಶ ರೂಪಾಣಿ ತ್ರೀಣಿ ವಿಷ್ಣೋರ್ಮಹಾತ್ಮನಃ । ಬ್ರಹ್ಮಣಿ ಬ್ರಹ್ಮ ರೂಪಸಸ್ ಶಿವರೂಪೀ ಶಿವೇಸ್ಥಿತಃ ॥"** ಎಂಬ ವಚನಾನುಸಾರ. ಶ್ರೀವಿಷ್ಣುವಿಗೆ ಬ್ರಹ್ಮ, ವಿಷ್ಣು, ಮಹೇಶ್ವರ ಎಂಬ ಮೂರು ರೂಪಗಳುಂಟು. ಬ್ರಹ್ಮದೇವರಲ್ಲಿ ಬ್ರಹ್ಮರೂಪದಿಂದಲೂ, ರುದ್ರದೇವರಲ್ಲಿ ರುದ್ರರೂಪದಿಂದಲೂ ಇದ್ದು, ಸೃಷ್ಟಿ ಮತ್ತು ಸಂಹಾರಕಾರ್ಯಗಳನ್ನು ಮಾಡುವನು. ಸ್ವಯಂವಿಷ್ಣುರೂಪದಿಂದ ಪಾಲನ ಮಾಡುವನು. ಇದೊಂದು "ರೂಪತ್ರಯ" ವಿವರಣೆ.

ಅಲ್ಲದೆ, **"ನಮಃ ಶಾಂತಾಯ ಘೋರಾಯ ಮೂಢಾಯ ಕರ್ಮಣೇ । " – ಎಂದು ಭಾಗವತವಚನ (ಅಷ್ಟಮಸ್ಕಂಧ; 3ನೆಯ ಅಧ್ಯಾಯ).**

ಅಂದರೆ, ಶ್ರೀಪರಮಾತ್ಮನಿಗೆ ಶಾಂತಾವತಾರ, ಘೋರಾವತಾರ ಮತ್ತು ಮೂಢಾವತಾರಗಳೆಂದು ಮೂರು ಪ್ರಕಾರ ರೂಪಗಳಿವೆ. (೧) ವಾಸುದೇವಾದಿ ರೂಪಗಳು, ಶಾಂತಾವತಾರರೂಪಗಳು. (೨) ನರಸಿಂಹ, ಪರಶುರಾಮಾದಿರೂಪಗಳು ಘೋರಾವತಾರರೂಪಗಳು ಮತ್ತು (೩) ಮತ್ಸ್ಯಕೂರ್ಮಾದಿ ರೂಪಗಳು ಮೂಢಾವತಾರರೂಪಗಳು ಎಂದು ಮೂರು ಪ್ರಕಾರ. ಶ್ರೀ ಪರಮಾತ್ಮನ ಅವತಾರಗಳಲ್ಲಿ ಪರಸ್ಪರ ಭೇದವಿಲ್ಲದಿದ್ದರೂ, ದೇಶಕಾಲೋಚಿತವಾಗಿ ನಾನಾ ಪ್ರಕಾರ ಅವತಾರಗಳನ್ನೆತ್ತಿ ಪ್ರಕಟಿಸಿರುವನು. ಇಲ್ಲಿ "ರೂಪತ್ರಯ"ವೆಂದರೆ, ಕೇವಲ ಮೂರೇ ರೂಪಗಳೆಂದು ಅರ್ಥವಲ್ಲ. ಅನಂತರೂಪಗಳೆಂದು ತಾತ್ಪರ್ಯ. ಆದರೆ ವ್ಯೂಹರೂಪಗಳು (ಸಾಮೂಹಿಕ) ಮೂರು ಪ್ರಕಾರವಾದ್ದರಿಂದ "ಪುರುಷರೂಪತ್ರಯ" ಎಂಬ ಶಬ್ದಾರ್ಥವನ್ನು ವಿವರಿಸಬಹುದು.

✔ ಇನ್ನು **"ಪುರುಷ"** ಶಬ್ದಾರ್ಥನಿರ್ವಚನ :–

(೧) **"ಪೂರ್ಣಷಡ್ಗುಣತ್ವಾತ್ಪುರುಷಃ"** —ಎಂಬ ವಚನರೀತ್ಯಾ

ಷಡ್ಗುಣ್ಯೈಶ್ವರ್ಯಸಂಪನ್ನನಾದುದರಿಂದ ಶ್ರೀ ಪರಮಾತ್ಮನು "ಪುರುಷ" ಶಬ್ಧವಾಚ್ಯನು.

(೨) **"ಪುರುಸರತೀತಿಪುರುಷಃ"**— ಎಂಬಂತೆ. "ಪುರು" ಎಂದರೆ. ಕರ್ಮಫಲವನ್ನು ಜೀವರುಗಳಿಗೆ ಉಣಿಸುವವನಾದ್ದರಿಂದ "ಪುರುಷ" ನಾಮಕನು.

(೩) **ಪುರಾಣಿ ಶರೀರಾಣಿ ಸರತೀಗಚ್ಛತೀತಿ ಪುರುಷಃ" :**— ಎಂಬ ಶಬ್ದಾರ್ಥದಂತೆ, "ಪುರ" ಅಂದರೆ, ದೇಹ. ತಾನು ಉತ್ಪತ್ತಿಶೂನ್ಯನಾದರೂ ಸರ್ವಜೀವರ ದೇಹದಲ್ಲಿ ವ್ಯಾಪಾರಾದಿಗಳನ್ನು ಮಾಡುತ್ತಿರುವನು. ನಮ್ಮ ದೇಹವು "ದೇವಮಂದಿರ", ಇದರಲ್ಲಿ ಆತನು ಆವಾಸನಾಗಿದ್ದಾನೆ. ಇದರಿಂದ ಪುರುಷಶಬ್ದವಾಚ್ಯನು.

ಇನ್ನು **"ಪುರಾತನ ಪುರುಷ"**– ಎಂದು ದಾಸರಾಯರು ಪದಪ್ರಯೋಗ ಮಾಡಿದ್ದಾರೆ, ಅಂದರೆ, **"ಏಕೋ ನಾರಾಯಣೋ ಅಸೀನ್ನಬ್ರಹ್ಮಾ ನ ಚ ಶಂಕರಃ ।"**- ಎಂಬ ಪ್ರಮಾಣರೀತ್ಯಾ, ಬ್ರಹ್ಮಾದಿಗಳೆಲ್ಲರೂ ಉತ್ಪತ್ತಿಯಾಗುವುದಕ್ಕೆ ಮುಂಚೆಯೇ ಪೂರ್ವದಲ್ಲಿ ಶ್ರೀ ಪರಮಾತ್ಮನು ಇದ್ದನು. ಇದರಿಂದ "ಪುರಾತನ ಪುರುಷ"ನು ಎಂದಾಯಿತು.

"ಪುರುಷೋತ್ತಮನು"- ಎಂಬ ಪದಪ್ರಯೋಗಕ್ಕೆ **ಗೀತಾವಚನ ಪ್ರಮಾಣವಿದೆ. "ದ್ವಾವಿಮೌ ಪುರುಷೌಲೋಕೇ ಕ್ಷರಾಶ್ಚಾಕ್ಷರವಿವಚ । ಕ್ಷರಸ್ಸರ್ವಾಣಿಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ । ಉತ್ತಮಃಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ" ।** ಎಂಬ ವಚನಾನುಸಾರ, ಲೋಕದಲ್ಲಿ ಪುರುಷಶಬ್ದವಾಚ್ಯರು ಕ್ಷರಪುರುಷ ಮತ್ತು ಅಕ್ಷರಪುರುಷ ಎಂದು ಎರಡು ಪ್ರಕಾರ. "ಕ್ಷರ" ಅಂದರೆ ಸ್ಥೂಲದೇಹವನ್ನು ಹೊಂದಿ ಶರೀರನಾಶವುಳ್ಳ ಬ್ರಹ್ಮಾದಿಗಳೆಲ್ಲರೂ ಕ್ಷರಶಬ್ದವಾಚ್ಯರು, "ಅಕ್ಷರ" ಎಂದರೆ ಶರೀರನಾಶವಿಲ್ಲದ ನಿತ್ಯಮುಕ್ತಳಾದ, ನಿರ್ವಿಕಾರಳಾದ ರಮಾದೇವಿಯರು. ಅವರಿಗಿಂತಲೂ ಉತ್ತಮನಾದ್ದರಿಂದ ಶ್ರೀಪರಮಾತ್ಮನು "ಪುರುಷೋತ್ತಮನು".

೨೪ ತತ್ತ್ವಾಭಿಮಾನಿ ದೇವತೆಗಳಿಗೆ **ಪುರುಷ** ಶಬ್ದ ಉಂಟು. ಪುರುಷ ರೂಪಿಯಾದ ಪರಮಾತ್ಮನು ಆದಿಯಲ್ಲಿ ಅವರಲ್ಲಿ ಪ್ರವೇಶಮಾಡಿ, ಬ್ರಹ್ಮಾಂಡ ವನ್ನು ಸೃಷ್ಟಿಸಿದುದರಿಂದ ಪುರುಷರೆಂಬ ಹೆಸರು ಅವರಿಗುಂಟು. ಅಥವಾ **"ಪುರುಷು ಬಹುಷು ಶೇತೀತಿ ಪುರುಷಃ"**- ಎಂಬ ನಿರ್ವಚನರೀತ್ಯಾ ಪ್ರತಿ ಯೊಂದು ಪಾಂಚಭೌತಿಕಶರೀರದಲ್ಲಿಯೂ ತತ್ತ್ವಾಭಿಮಾನಿಗಳು ಇದ್ದೇಇರು ವರು. ಇದರಿಂದ ತತ್ತ್ವೇಶರಿಗೆ ಪುರುಷರೆಂದು ಹೆಸರು. ಇಂತಹ ೨೪ ತತ್ವೇಶರಿಗೆ ಉತ್ತಮನಾಗಿ ಶ್ರೀ ಪರಮಾತ್ಮನು ಇರುವುದರಿಂದ ಅವನಿಗೆ **ಪುರುಷೋತ್ತಮನೆಂದು** ಹೆಸರು.

**"ಬ್ರಹ್ಮಾ ಶಿವಸರ್ವೇಶಾದ್ಯಾಃ ಶರೀರ ಕ್ಷರಣಾತ್ಕ್ಷರಾಃ । ಲಕ್ಷ್ಮೀ ರಕ್ಷರದೇಹತ್ವಾದಕ್ಷರಾತ್ತ್ವರತೋ ಹರಿಃ ॥" ಎಂದು ವಿಷ್ಣುತತ್ತ್ವನಿರ್ಣಯದ** ವಚನಾನುಸಾರ ಬ್ರಹ್ಮ, ರುದ್ರ, ಇಂದ್ರಾದಿ ಸಮಸ್ತ ಜೀವವರ್ಗದವರೆಲ್ಲರೂ **ಶರೀರನಾಶವುಳ್ಳವರಾದ್ದರಿಂದ, "ಕ್ಷರ"** ರೆಂದೆನಿಸಿಕೊಳ್ಳುವರು. ಶ್ರೀ ರಮಾ ದೇವಿಯರಿಗೆ ಇಂತಹ ಶರೀರನಾಶವಿಲ್ಲದ್ದರಿಂದ "ಅಕ್ಷರ" ನಾಮಕಗಳು. ಇವರೆಲ್ಲರಿಗಿಂತಲೂ ಉತ್ತಮನು ಪರಮಾತ್ಮನು. ಈ ಆಧಾರದಿಂದ ಕ್ಷರ ಶಬ್ದಕ್ಕೆ ಬ್ರಹ್ಮರುದ್ರಾದಿಯೋಗ್ಯಜೀವರನ್ನು ಮಾತ್ರ -ಪರಿಗಣಿಸಬೇಕು. ಯದ್ಯಪಿ ಗೀತಾವಾಕ್ಯ ಪ್ರಕಾರ ಕಲಿ ಮೊದಲಾದ ತಮೋಯೋಗ್ಯರಿಗೂ ಕೂಡ ಪರಮಾತ್ಮನು ಉತ್ತಮನೇ ಆದರೂ, ಅವರಿಂದ ಪೂಜಿತಪಾದನು ಎಂದಲ್ಲ. ಪ್ರಕೃತ ದೈತ್ಯರು ಪರಮಾತ್ಮನಲ್ಲಿ ದ್ವೇಷಿಸುವರೇ ಹೊರತು ಪೂಜಿಸುವವರಲ್ಲ. ಆದುದರಿಂದ ರಮಾ ಬ್ರಹ್ಮಾದಿ ಯೋಗ್ಯಜೀವರಿಂದ ಪೂಜಿತವಾದ ಪಾದ ವುಳ್ಳವನೆಂದರ್ಥ.

**"ಪೂರ್ಣಾನಂದ ಜ್ಞಾನಮಯ"** ಎಂದು ಹೇಳಿರುವರು. ಅಂದರೆ, ಪರಿಪೂರ್ಣವಾದ ಆನಂದ ಮತ್ತು ಜ್ಞಾನ ಉಳ್ಳವನೆಂದರ್ಥ. **ಮಣಿಮಂಜರಿ ಯಲ್ಲಿ- "ವಂದೇ ಗೋವಿಂದಮಾನಂದಜ್ಞಾನದೇಹಂ ಪತಿಂ ಶ್ರಿಯಃ"** ಎಂದು ಹೇಳಿರುವರು. ಇದಲ್ಲದೆ, **"ಆನಂದೋ ಬ್ರಹ್ಮೇತಿ ವ್ಯಜನಾತ್ ವಿಜ್ಞಾನಂ ಬ್ರಹ್ಮೇತಿವ್ಯಜಾನಾತ್"- ಎಂಬ ಉಪನಿಷದ್ವಾಕ್ಯಗಳಿಂದ** ಆನಂದಸ್ವರೂಪನು ಬ್ರಹ್ಮ, ವಿಜ್ಞಾನಸ್ವರೂಪನೂ ಬ್ರಹ್ಮ –ಎಂದು ಬೇರೆ

ಬೇರೆಯಾಗಿ ಹೇಳಿರುವ ಬ್ರಹ್ಮಸ್ವರೂಪವನ್ನು ಇಲ್ಲಿ ದಾಸರಾಯರು ಒಂದೇ ವಾಕ್ಯದಿಂದ **ಪೂರ್ಣಾನಂದಜ್ಞಾನಮಯನೆಂದು** ಹೇಳಿರುವರು.

**"ಮಹಾಪುರುಷಜಾಂಡಾಂತರದಿ ಬಹಿರದಿ ವ್ಯಾಪ್ತ"**- ಅಂದರೆ ಮಹಾಪುರುಷನಾದ ಶ್ರೀ ಪರಮಾತ್ಮನಿಂದ ಜನ್ಯವಾದ ಬ್ರಹ್ಮಾಂಡದ ಒಳಗೂ ಹೊರಗೂ, ಸರ್ವತ್ರ ಅಣುರೇಣುತೃಣಕಾಷ್ಠಾದಿಗಳಲ್ಲಿಯೂ, ದೇವ ದೈತ್ಯೋರಗ ಪಶುಪಕ್ಷಿಗಳಲ್ಲಿಯೂ ವ್ಯಾಪ್ತನಾಗಿರುವನು. **"ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಸ್ಥಿತಃ"** ಎಂಬ **ಶ್ರುತಿಯು** ಇದಕ್ಕೆ ಆಧಾರ ವಾಗಿರುವುದು. ಆದರೂ ತತ್ಸಂಬಂಧವಾದ ಗುಣ ದೋಷಗಳಿಂದ ನಿರ್ಲಿಪ್ತ ನಾಗಿರುವನು. ಇದಕ್ಕೆ ಆಧಾರವಾಗಿ **"ತೇಜೋಽಬ್ಬನ್ನಮಯೈರ್ಭಾವೈ ರ್ಮೇಘೌಘೈರ್ವಾಯುನೇರಿತೈಃ || ನ ಸ್ಪೃಶ್ಯತೇ ನಭಸ್ತದ್ವತ್ ಕಾಲ ಸೃಷ್ಟೈರ್ಗುಣೈಃ ಪುಮಾನ್ ||"** ಎಂದು **ಭಾಗವತ ಏಕಾದಶಸ್ಕಂಧದ ಪ್ರಮಾಣವಚನವಿದೆ.** ಅಂದರೆ, ಅಗ್ನಿಯಿಂದಲೂ, ಉದಕದಿಂದಲೂ, ಭೂಸಂಬಂಧದಿಂದಲೂ, ಗಾಳಿಯಿಂದ ಚಲಿಸಲ್ಪಟ್ಟ ಮೇಘದ ಗುಂಪು ಗಳಿಂದಲೂ ಆಕಾಶವು ಹೇಗೆ ಲೇಪವಿಲ್ಲವೋ, ಹಾಗೆಯೇ ಪರಮಾತ್ಮನು ನರ, ಮೃಗ ಮೊದಲಾದ ಸರ್ವಪ್ರಾಣಿಗಳಲ್ಲಿ ವ್ಯಾಪ್ತನಾಗಿದ್ದರೂ, ಅವುಗಳ ಸಂಬಂಧವಾದ ಗುಣದೋಷಗಳ ಸಂಪರ್ಕವಿಲ್ಲದಿರುವನು ಎಂದು ತಾತ್ಪರ್ಯವು.

(೩) **"ಭಾವದರ್ಪಣ ಟೀಕಾ"- ವ್ಯಾಖ್ಯಾನ :-**

**"ಓಂ ಸರ್ವತ್ರ ಪ್ರಸಿದ್ಧೋಪದೇಶಾತ್ ಓಂ"** ಎಂಬ **ಸೂತ್ರಾರ್ಥ** ಭೃತ ಶ್ರೀವತ್ಸಲಾಂಛನನ ವ್ಯಾಪ್ತಿ ಸರ್ವತ್ರದಲ್ಲಿ ಉಂಟೆಂದು ಸಜ್ಜನರಿಗೆ ತಿಳಿಸುವುದಕ್ಕೋಸ್ಕರ ದಾಸಾರ್ಯರು **ವ್ಯಾಪ್ತಿಸಂಧಿ** ಉಪಕ್ರಮಿಸುತ್ತಾರೆ "ಪುರುಷ" ಎಂಬ ಪದ್ಯದಿಂದ.

**"ಪುರುಷಃ ಪರಮಾತ್ಮಜೋಽಬ್ರಹ್ಮ ನಾರಾಯಣಃ ಪರಃ"** ಎಂಬಂಥ **ಶ್ರುತಿಯಿಂದ** ಪ್ರತಿಪಾದಿತ. **ಕಿಂಚ ಪುರಿ ದೇಹೇ ಶೇತ ಇತಿ ಪುರುಷಃ"** ಅಂದರೆ, ದೇಹದಲ್ಲಿ ವಾಸವಾಗಿರತಕ್ಕವನೆಂದರ್ಥ. **"ಹಂಸಾಯ ತಸ್ಮೈ ಶುಚಿಸದ್ಮನೇ ನಮಃ"** ಎಂದು **ಷಷ್ಠಸ್ಕಂಧೋಕ್ತಿಃ** ಇರೋಣದರಿಂದ ಉತ್ತಮಾಧಿಷ್ಠಾನನಾದಂಥಾ ಮುಖ್ಯಪ್ರಾಣದೇವರ ದೇಹದಲ್ಲಿ ವಾಸವಾಗಿರ

ತಕ್ಕವನೆಂದರ್ಥ. ಅಥವಾ **"ಪೂರ್ಣಷಡ್ಗುಣತಾತ್ಪುರುಷಃ"**- ಅಂದರೆ ಷಡ್ಗುಣೈಶ್ವರ್ಯಸಂಪನ್ನನಾದವನೆಂದರ್ಥ. **"ಯದ್ವಾ ಪುರು ಕರ್ಮ ಫಲಂ ಜೀವಾನಾಂ ಸನೋತಿ ದದಾತೀತಿ ವಾ"**- ಅಂದರೆ, ಜೀವರಿಗೆ ಕರ್ಮ ಫಲ ಕೊಡತಕ್ಕವನೆಂದರ್ಥ. **"ರೂಪತ್ರಯ"** ಮೊದಲು ರೂಪದಿಂದ ಮಹತ್ತತ್ವ ಸೃಷ್ಟಿ ಎಂದರೆ, ಮಹತ್ತತ್ವಾತ್ಮಕಶರೀರನಾದಂಥ ಬ್ರಹ್ಮಎಂದರ್ಥ. ಈತನನ್ನು ಹಡೆದವ ಎಂತ ಭಾವ. **ಉಕ್ತಂಚಮಣಿಮಂಜರ್ಯಾಂ- "ಮಹತ್ತತ್ವಂ ತತೋ ವಿಷ್ಣುಃ ಸೃಷ್ಟವಾನ್ ಬ್ರಹ್ಮಣಸ್ತನುಮಿತಿ".** ದ್ವಿತೀಯರೂಪದಿಂದ ಬ್ರಹ್ಮಾಂಡದಾಕಾರವಾಗಿ ಒಳಗೇ ಪ್ರವಿಷ್ಟನಾಗಿದ್ದಾ ನೆಂಬುದಕ್ಕೆ **ಪ್ರಮಾಣ : ಉಕ್ತಂಚ ಏಕಾದಶ ತಾತ್ಪರ್ಯೇ— "ಚಿದಾ ನಂದಶರೀರಸ್ತು ಪ್ರವಿಷ್ಟೋಽಹಂ ಸ್ವಯಮಿತಿ"** ಮೂರನೇರೂಪದಿಂದ ದೇಹಧಾರಣ ಮಾಡಿದಂಥಾ ದೇಹಿ ಎಂದರೆ ಜೀವರುಗಳಲ್ಲಿ ಅಂತರ್ಯಾಮಿ ಯಾಗಿ ತತ್ತನ್ನಾಮದಿಂದ ಕರೆಸುತಾನೆಂಬುದಕ್ಕೆ **ಪ್ರಮಾಣ :— ಉಕ್ತಂಚ ಐತರೇಯಭಾಷ್ಯೇ— "ಸ ಜೀವನಾಮೋ ಭಗವಾನ್ ಪ್ರಾಣಧಾರಣ ತುತ್"** —ಇತಿ || ಎಂಬೋರೀತ್ಯಾ ತ್ರಿರೂಪನಾಗಿ ಪುರುಷ ಎನಿಸಿಕೊಂಡಲ್ಲಿ **ಪ್ರಮಾಣ :— "ಪ್ರಥಮಂ** ಮಹತಃ ಸೃಷ್ಟು **ದ್ವಿತೀಯಂತ್ವಂಡಸಂ ಸ್ಥಿತಂ । ತೃತೀಯಂ** ದೇಹಿನಾಂ **ದೇಹೇ"—** ಇತಿ **ವಿಷ್ಣುಪುರಾ ಣೋಕ್ತೇಃ ||**

**"ಪುರಾತನಪುರುಷ"**— ಬಹುಕಾಲದ ಪುರುಷ ಎಂದರ್ಥ. ಇದಕ್ಕೆ **ಪ್ರಮಾಣ :—**

"ಪುರಾಣಪುರುಷೋ ನಿತ್ಯಮಿತಿ"—ಪ್ರಕಾಶಸಂಹಿತಾಯಾಂ ||

**"ಪುರುಷೋತ್ತಮ"**— ಬ್ರಹ್ಮಾದಿಜೀವರು ಕ್ಷರಪುರುಷರು. ಲಕ್ಷ್ಮೀದೇವಿಯು ಅಕ್ಷರಪುರುಷಳು. ಇವರುಗಳಿಗೆ ಉತ್ತಮನೆಂದರ್ಥ. **ಉಕ್ತಂಚತತ್ತ್ವ ವಿನಿರ್ಣಯೇ— "ಬ್ರಹ್ಮಾ ಶಿವಸ್ಸುರೇಶಾದ್ಯಾಃ ಶರೀರಕ್ಷರಣಾತ್ಕ್ಷರಾಃ|| ಲಕ್ಷ್ಮೀರಕ್ಷರದೇಹತ್ವಾದಕ್ಷರಾತ್ಪರಮೋ ಹರಿರಿತಿ" ||**

**"ಕ್ಷರಾಕ್ಷರಪುರುಷಪೂಜಿತ"—** ಬ್ರಹ್ಮಾದಿಜೀವರು ಕ್ಷರಪುರುಷ ರೆಂದೂ ಪ್ರಮಾಣದಿಂದಲೂ ಪ್ರತ್ಯಕ್ಷಾನುಭವದಿಂದಲೂ ತೋರುತ್ತದೆ. ಲಕ್ಷ್ಮೀಸ್ವಭಾವತಃ ಸ್ತ್ರೀ ಎನಿಸಿಕೊಳ್ಳುತ್ತಾಳೆ. ಈಕೆಗೆ **ಪುರುಷ** ಶಬ್ದ ಹೇಗೆ ಕೂಡುತ್ತೆಂದು ಶಂಕಾ ಬಂದರೆ, ಸಮಾಧಾನ- ಈ ವಿಷಯದಲ್ಲಿ **ಪ್ರಮಾಣ :— "ದ್ವಾವಿಮೌ ಪುರುಷೌ ಲೋಕೇ ಕ್ಷರಾಕ್ಷರಏವ ಚ || ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋ ಅಕ್ಷರ ಉಚ್ಯತೇ"**—ಎಂತ ಇರೋಣದರಿಂದಲೂ ಮತ್ತು **ಪುಲ್ಲಿಂಗೇ ನೋಚ್ಯತೇ ಸ್ತ್ರೀಚಪುಂಚ್ಛಕ್ತಿ ಮತೀಯತಃ" —ಎಂಬ ಛಾಂದೋಗ್ಯಪ್ರಮಾಣವೂ** ಇದ್ದಪ್ರಯುಕ್ತ ಶ್ರೀ ದೇವಿಗೆ ಪುರುಷಶಬ್ದ ಸಾಧುವೆನಿಸುತ್ತದೆ. ಏತಾದೃಶಪುರುಷರುಗಳಿಂದ ಪೂಜಿತವಾದವುಳ್ಳವನೆಂದರ್ಥ.

**"ಪೂರ್ಣಾನಂದ ಜ್ಞಾನಮಯ"— "ಆನಂದಶ್ಚಜ್ಞಾನಂಚ ಆನಂದಜ್ಞಾನೇ, ಪೂರ್ಣೇ ಪ್ರಚುರೇಚ ತೇ ಆನಂದಜ್ಞಾನೇಚ ಪೂರ್ಣಾನಂದಜ್ಞಾನೇ, ಪೂರ್ಣಾನಂದಜ್ಞಾನಸ್ವರೂಪತ್ವಾತ್ ಪೂರ್ಣಾನಂದ ಜ್ಞಾನಮಯಃ ತಸ್ಯಸಂಬಂಧಿಃ"** ಇಲ್ಲಿ **"ಮಯಟ್"** ಪ್ರತ್ಯಯಕ್ಕೆ ತದಾತ್ಮ್ಯವೇ ಅರ್ಥ. ಪ್ರಚುರ ವಾದಂಥ ಆನಂದಜ್ಞಾನಗಳೇ ಸ್ವರೂಪದೇಹವಾಗಿ ಉಳ್ಳವನೆಂದು ಭಾವ. ಯದ್ಯಪಿ **ಸೂತ್ರಭಾಷ್ಯೋಕ್ತರೀತ್ಯಾ "ಮಯಟ್"** ಪ್ರತ್ಯಯಕ್ಕೆ ಪ್ರಾಚುರ್ಯಾರ್ಥವೇ ಹೇಳಬೇಕಾಗಿರುವುದೇ ಸರಿ. ಆದರೂ ಇಲ್ಲಿ **"ಪೂರ್ಣಾನಂದ ಜ್ಞಾನಮಯ"** ಯಂತ ಅದೆ. ಇದಕ್ಕೆ **"ಪೂರ್ಣ"** ಎಂತ ವಿಶೇಷಣ ಇರೋಣದರಿಂದ ಆನಂದ ಜ್ಞಾನಗಳಿಗೆ ಪ್ರಾಚುರ್ಯಲಾಭ ವಾಗುತ್ತದೆಂದು ತಾತ್ಪರ್ಯ ಮಾಡಿ, ಹೀಂಗೆ ವ್ಯಾಖ್ಯಾನ ಮಾಡಿರುತ್ತದೆ. **"ತಾದಾತ್ಮ್ಯಾರ್ಥೇ ವಿಕಾರಾರ್ಥೇ ಪ್ರಾಚುರ್ಯಾರ್ಥೇ ಮಯಟ್ತ್ರಿಧೇತಿ" ಟೀಕಾಯಾಂ ||** ಈ **"ಮಯಟ್"** ಪ್ರತ್ಯಯಕ್ಕೆ ತಾದಾತ್ಮ್ಯ ದಲ್ಲಿಯೂ ಪ್ರಯೋಗ ಕಂಡದೆಂತ ತಿಳಿಯಬೇಕು.

**"ಪುರುಷಸೂಕ್ತಸುಮೇಯ"— "ಮಾತುಂಯೋಗ್ಯಃ ಮೇಯಃ**

—ಸುಷ್ಟುಮೇಯಃ ಸುಮೇಯಃ ಪುರುಷಸೂಕ್ತೇನ ಸುಮೇಯಃ ಪುರುಷಸೂಕ್ತ ಸುಮೇಯಃ ತಸ್ಯ ಸಂಬುದ್ಧಿಃ ।। ಯಥೋಕ್ತಂ ಸೂತ್ರಭಾಷ್ಯೇ—"ಯಥೈವಪೌರುಷಂ ಸೂಕ್ತಂ ವಿಷ್ಣೋರೇವಾಭಿಧಾಯಕಮ್ ।। ನ ತಥಾ ಸರ್ವವೇದಾಶ್ಚ ವೇದಾಂಗಾನಿಚ ನಾರದೇತಿ" ।। ಪುರುಷಸೂಕ್ತದಿಂದ ಸರ್ವಾಪೇಕ್ಷಯಾ ಪ್ರಾಧಾನ್ಯವಾಗಿ ತಿಳಿಯೋದಕ್ಕೋಸ್ಕರ ಯೋಗ್ಯ ಎಂತರ್ಥ

"ತತ್ತತ್ಪುರುಷ ಹೃತ್ಪುಷ್ಕರನಿಲಯ" ।। "ತತ್ತತ್ಪುರುಷಾಣಾಂ ಪೂರ್ವೋಕ್ತ ಕ್ಷರಾಕ್ಷರ ಪುರುಷಾಣಾಂ ಹೃತ್ಕಮಲಮೇವ ನಿಲಯೋ ಯಸ್ಯೇತಿ" ।।

"ಅಥ ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮದ ಹರೋಸ್ಮಿನ್ನಂತರಾಕಾಶ" — ಇತಿ ಶ್ರುತಿಃ ।। ಪೂರ್ವೋಕ್ತ ಕ್ಷರಾಕ್ಷರಪುರುಷರ ಹೃದಯಾಬ್ಜವೇ ಮನೆಯಾಗಿ ಉಳ್ಳವನೆಂದು ತಾತ್ಪರ್ಯ. "ಮಹಾಪುರುಷ ಜಾಂಡಾಂತರದಿ ಬಹಿರ್ವ್ಯಾಪ್ತ ಎಂದರೇ ಬ್ರಹ್ಮಾಂಡಕ್ಕೂ ಶ್ರೀಶಗೂ ಸಂಬಂಧವಾಯಿತೇನೋ ಎಂದು ದಾಸಾರ್ಯರು ನಿರ್ಲಿಪ್ತನೆಂದು ಬಿಡಿಸ್ಯಾರೆ.

"ನಿರ್ಲಿಪ್ತೋನಿರ್ವಿಕಾರಶ್ಚ ಸದಾ ಸರ್ವತ್ರಸನ್ನಿಹಿತೇತಿ"— ಸತ್ತತ್ವರತ್ನಮಾಲಾವಚನಾತ್ ।। "ಅಸಂಗೋಹ್ಯಯಂ ಪುರುಷ"— ಇತಿಶ್ರುತಿಃ ।। ಏತಾದೃಶಪುರುಷನೇ ನನ್ನನ್ನು ಪರಿಪಾಲನ ಮಾಡು ಎಂತ ಪೂರ್ವೇಣಾನ್ವಯಃ ॥೧॥

## (೪) ಶ್ರೀಜಮಖಂಡಿವಾದಿರಾಜಾಚಾರ್ಯರ ವ್ಯಾಖ್ಯಾನ :— (ಸಂಸ್ಕೃತಮೂಲ)

ಶ್ರೀ ಹಯಗ್ರೀವಾಯನಮಃ ॥ ಅವತಾರಭೇದ ಪಂಚಕಧಿಯಃ ಮುಕ್ತ್ಯಂತರಂಗತ್ವವತ್ ತದ್ವ್ಯಾಪ್ತ ಹರಿಜ್ಞಾನಮಪೀತ್ಯತೋ ವ್ಯಾಪ್ತಿ

ಸಂಧ್ಯಾರಂಭಃ ॥ ಪದಗರ್ಭೋಕ್ತಿಃ ಹರೀತಿ ॥ ತ್ರೀನ್ ಪುರುಷಾನ್ ವ್ಯನಕ್ತಿ ॥ ಪುರುಷೇತಿ ॥ ಅನೇನ ಬ್ರಹ್ಮದೇಹಸ್ಥಂ ಮಹತ್ ಸೃಷ್ಟ್ವಾ, ಅಂಡಾಂತರದೀತಿ, ತತ್ತದಿತಿ ದೇಹಿದೇಹೇ ವಿಷ್ಣೋಸ್ತು ಪುರುಷಾಖ್ಯಾನಿ ತ್ರೀಣಿರೂಪಾಣ್ಯತೋ ವಿದುಃ ॥ "ಪ್ರಥಮಂ ಮಹತಃ ಸೃಷ್ಟ್ವಾ ದ್ವಿತೀಯಂ ತ್ವಂಡಸಂಸ್ಥಿತಂ ॥ ತೃತೀಯಂ ದೇಹಿನಾಂ ದೇಹೇ । ತಾನಿಜ್ಞಾತ್ವಾ ವಿಮುಚ್ಯತ ಇತಿ ಮಾತ್ಸ್ಯೇ ॥ ಪುರುಷೋತ್ತಮಃ ಇತ್ಯನುವಾದಃ । ವ್ಯಾಖ್ಯಾಕ್ಷರೇತಿ । ಶರೀರಕ್ಷಣಾತ್ ಕ್ಷರಾಃ ಅಜಾದಯಃ । ಲಕ್ಷ್ಮೀಃ ಅಕ್ಷರ ದೇಹತ್ವಾತ್ ಅಕ್ಷರಾ ॥ ಕ್ಷೀರನೀರವತ್ ಸಂವಲಿತಃ ಅಜದೇಹಃ ಮಹದಾತ್ಮಕಃ ವಿರಾಡಹ್ವಯಶ್ಚ ॥ ದ್ವಿತೀಯಾರ್ಥೇ ಪುರುಷೇತಿ ॥ ಪ್ರಥಮಂ ಅಜಗು ಮಹತ್‌ಸೃಷ್ಟ್ವಾ ತತ್ತದಿತಿ ತೃತೀಯಂ ॥ ಅಂಡಗತ್ವಾತ್ ಅಜಾಂಡೇತಿ ದ್ವಿತೀಯಾ ॥ ಜೀವವತ್ ವ್ಯಾಪ್ತಾಃ ಪ್ರಸಕ್ತಂ ಲೇಪಂವ್ಯವಚ್ಛಿನತ್ತಿ ನಿರ್ಲಿಪ್ತೇತಿ ॥೧॥

**ಕನ್ನಡಾನುವಾದ :—**

ಶ್ರೀ ಹರಿಯ ವ್ಯಾಪ್ತಿಸಂಬಧವಾದ ಜ್ಞಾನವು ಸತ್ಸಾಧನೆಗೆ ಉತ್ತಮ ಸಹಕಾರಿಸಾಮಗ್ರಿಯಾಗಿದೆ. "ಪುರುಷ ರೂಪತ್ರಯ" ಎಂಬ ಪದದಿಂದ ಶ್ರೀಹರಿಯ ಮೂರು ಪುರುಷರೂಪಗಳನ್ನು ವಿವರಿಸುತ್ತಾರೆ. (೧) ಮಹತತ್ವದಿಂದ ಬ್ರಹ್ಮದೇವರಸೃಷ್ಟಿ. ಇದನ್ನು ಸೃಷ್ಟಿಸಿರುವ ಒಂದುರೂಪ. (೨) ಬ್ರಹ್ಮಾಂಡಪ್ರವಿಷ್ಟವಾಗಿರುವುದು ಎರಡನೆಯರೂಪ. (೩) ಜೀವರ ದೇಹ ಪ್ರವಿಷ್ಟರೂಪ ಮೂರನೆಯದು. **"ವಿಷ್ಣೋಸ್ತು ಪುರುಷಾಖ್ಯಾನಿ"— ಎಂಬ ಮತ್ಸ್ಯಪುರಾಣ** ವಚನರೀತ್ಯಾ ಪುರುಷತ್ರಯರೂಪಗಳ ವಿವರಣೆ. ಶರೀರನಾಶವನ್ನು ಹೊಂದಿರುವ ಬ್ರಹ್ಮಾದಿಜೀವಕೋಟಿ ವರ್ಗವು "ಕ್ಷರ" ಎಂದೆನಿಸುವುದು. ಶ್ರೀ ಲಕ್ಷ್ಮೀದೇವಿಗೆ ಶರೀರದನಾಶವಿಲ್ಲ. ಆಕೆಯು "ಅಕ್ಷರ"ಳು. ಹಾಲಿನಲ್ಲಿ ನೀರು ಸೇರಿದಂತೆ ಬ್ರಹ್ಮದೇವರ ಶರೀರವು ಮಹದಾತ್ಮಕವಾದದ್ದು ಮತ್ತು ವಿರಾಟ್‌ನಾಮಕವೂ ಆಗಿದೆ "ಪುರುಷ" ಮುಂತಾದ ಪದಪ್ರಯೋಗಗಳು ಈ ರೂಪಗಳನ್ನೇ ಪ್ರತಿ

ಪಾದಿಸುವುವು. ಬ್ರಹ್ಮದೇವರಲ್ಲಿ ಮಹತ್ತತ್ವಸೃಷ್ಟವಾದ ರೂಪವು ಮೊದಲನೆಯದು. ದ್ವಿತೀಯ ಪುರುಷರೂಪವು ಬ್ರಹ್ಮಾಂಡಾಂತರ್ಗತವು. ಜೀವರ ದೇಹಪ್ರವಿಷ್ಟರೂಪವು ತೃತೀಯ ಪುರುಷರೂಪವು, ದೇಹಗತನಾದ ಜೀವನಿಗೆ ಪುಣ್ಯಪಾಪಗಳ ಲೇಪವಿದೆ. ಆದರೆ ಜೀವರ ದೇಹದಲ್ಲಿ ವ್ಯಾಪ್ತನಾದ ಶ್ರೀಹರಿಯು "ನಿರ್ಲಿಪ್ತ"ನು, ||೧||

## (ಆ) "ಗುರುಹೃದಯ ಪ್ರಕಾಶಿಕೆ"— ವ್ಯಾಖ್ಯಾನ :—

ವಾಪ್ತಿಮಹಿಮೆ ವರ್ಣಿಸುವ ಅಮೃತರಸಸದೃಶವಾದ ಭಗವತ್ಕಥೆಯನ್ನು ಮೂರನೆಯ ಸಂಧಿಯಲ್ಲಿ ಗುರುಕೃಪೆಯಿಂದ ಯಥಾಶಕ್ತಿ ಪೇಳುವೆ. ಅತ್ಯಂತ ಹರಿಭಕ್ತಿಯುಳ್ಳವರು ಆದರಿಸಿ ಕೇಳತಕ್ಕದ್ದು.

**"ಪುರುಷರೂಪವಾಪ ನಾರಾಯಣ ಆದಿದೇವಃ"**— ಎಂಬ **ಭಾಗವತೋಕ್ತಿ** ಪ್ರಕಾರ ಶ್ರೀಹರಿಯು ಮೂರುಪ್ರಕಾರವಾದ ಪುರುಷ ರೂಪವುಳ್ಳವನು. ಮೊದಲು ರಜೋಗುಣಕ್ಷೋಭವೆಂಬ ತ್ರಿಗುಣಗತ ರಜೋರಾಶಿಮೇಳನೆ ಎಂಬ ಗುಣವೈಷಮ್ಯದಿಂದ ಮಹತ್ತತ್ವವೆಂಬ ಚತುರ್ಮುಖಬ್ರಹ್ಮನ ಸೂಕ್ಷ್ಮಶರೀರ ಸೃಷ್ಟಿಸಿದ್ದು. ಅನಾದಿಪುರುಷ, ಪ್ರಾಕೃತದೇಹ ಇಲ್ಲದ್ದರಿಂದ ಅಕ್ಷರನಾಮಕಳಾದ ರಮೆಯಿಂದಲೂ, ನಶ್ವರ ದೇಹವುಳ್ಳ ಕ್ಷರರೆಂಬ ಬ್ರಹ್ಮಾದಿಜೀವರಿಂದಲೂ ಪೂಜಿತಪಾದವುಳ್ಳವ. ಆದ್ದರಿಂದ ಪುರುಷೋತ್ತಮನು. ಪೂರ್ಣಾನಂದಜ್ಞಾನರೂಪ ಪ್ರಥಮರೂಪ, ಪುರುಷಸೂಕ್ತದಿಂದ ತಿಳಿಯಬರುವ ಬ್ರಹ್ಮಾಂಡಸ್ಥ **ವೈರಾಜ** ಎಂಬ ಪುರುಷ ರೂಪ ಎರಡನೆಯದು, "ತತ್ತತ್ಪುರುಷ .ಹೃತ್ಪುಷ್ಕರನಿಲಯ"— ಎಂದರೆ, ಪೂರ್ವೋಕ್ತ ಕ್ಷರಾಕ್ಷರನಾಮಕ ಸರ್ವದೇಹಗತ ಪುರುಷರೂಪ ಮೂರನೆಯದು. ಹೀಗೆ ಪುರುಷರೂಪತ್ರಯನಾದಾಗ್ಯೂ ಬ್ರಹ್ಮಾಂಡಾಂತರ್ಬಹಿ-ವ್ಯಾಪ್ತನು. ತತ್ಕೃತದೋಷ ಲೇಪವಿಲ್ಲದವನು,

**"ವಿಷ್ಣೋಸ್ತು ........................ ವಿಮುಚ್ಯತೇ ||** —ಎಂದು **ಶ್ರುತಿಪ್ರಮಾಣ** (ಈ ಪ್ರಮಾಣದ ಪೂರ್ಣ ರೂಪವನ್ನು ಹಿಂದಿನ ವ್ಯಾಖ್ಯಾನ

ಗಳಲ್ಲಿ ಕೊಟ್ಟಿದೆ. ನೋಡುವುದು) "ಅಕ್ಷರಃ" –ಎಂಬ ಪುಲ್ಲಿಂಗಶಬ್ದವು ರಮಾದೇವಿಯರಿಗೆ **"ಪುಲ್ಲಿಂಗೇನೋಚ್ಯತೇ ಸ್ತ್ರೀ ಚ ಪುಂವತೆ ಶಕ್ತಿಮತೀಯತಃ"— ಎಂಬ ಪ್ರಮಾಣ** ಸಿದ್ಧಿಸುವುದು. ॥೧॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಈ ಪ್ರಥಮಪದ್ಯದಿಂದ ಜ್ಞಾನಿಶ್ರೇಷ್ಠರಾದ ಶ್ರೀ ಜಗನಾಥದಾಸವರೇಣ್ಯರು ಶ್ರೀ ಪರಮಾತ್ಮನ ವ್ಯಾಪ್ತಿಮಹಿಮಾತಿಶಯವನ್ನು ವಿವರಿಸುತ್ತಾರೆ. ಶ್ರೀಹರಿಯು ಪುರುಷನಾಮಕನು. ಬ್ರಹ್ಮಾದಿಸಮಸ್ತದೇವತೆಗಳ ಶರೀರದಲ್ಲಿ ಪ್ರವಿಷ್ಟನಾಗಿದ್ದು, ಜಗದ್ವ್ಯಾಪಾರಗಳನ್ನು ತನ್ನಾಮಕನಾಗಿ. ತತ್ತ್ವಶಬ್ದವಾಚ್ಯನಾಗಿದ್ದುಕೊಂಡು ನಡೆಯಿಸುವನು. ಸರ್ವಜೀವರ ಶರೀರವೂ ದೇವಮಂದಿರ. ಸರ್ವತ್ರವ್ಯಾಪ್ತನಾದ ಶ್ರೀಹರಿಯು ನಮ್ಮಗಳದೇಹಸ್ಥಿತನಾಗಿರುವುದರಿಂದಲೇ ಇದು ಸಾಧನಶರೀರವೆಂದೆನಿಸಿಕೊಳ್ಳುವುದು. ಅಂತಹ ದೇವಮಂದಿರವನ್ನು ಅಂತಃಕರಣಶುದ್ಧಿಗಳಿಂದ ನಿರ್ಮಲಗೊಳಿಸುವುದು ಅಗತ್ಯವಲ್ಲವೇ? ಹೀಗೆ ಪುರುಷನಾಮಕನಾದ ಶ್ರೀಮನ್ನಾರಾಯಣನು ಮೂರು ಪ್ರಕಾರವಾದ ರೂಪಗಳನ್ನು ಧರಿಸಿರುವನು. ಇದರಿಂದ ಶ್ರೀ ಪರಮಾತ್ಮನಿಗೆ **ಪುರುಷರೂಪತ್ರಯ**ವೆಂದು ಪ್ರಸಿದ್ಧಿ. (೧) ಚತುರ್ಮುಖಬ್ರಹ್ಮದೇವರ ಶರೀರವು ಮಹತ್ತತ್ವಾತ್ಮಕವಾದದ್ದು. ಇಂತಹ ಮಹತ್ತತ್ವದಲ್ಲಿ ಪ್ರವಿಷ್ಟನಾಗಿದ್ದು. ಬ್ರಹ್ಮದೇವರ ಸೃಷ್ಟಿಮಾಡಿದರೂಪ ಪ್ರಥಮಪುರುಷರೂಪವು. (೨) ತನ್ನಿಂದ ಸೃಷ್ಟರಾದ ಚತುರ್ಮುಖಬ್ರಹ್ಮದೇವರಲ್ಲಿ ತಾನು **ಅಜ**ನಾಮಕನಾಗಿಸ್ಥಿತನಾಗಿದ್ದು, ಬ್ರಹ್ಮಾಂಡವನ್ನು ಸೃಷ್ಟಿಸಿ, ಸಮಗ್ರಬ್ರಹ್ಮಾಂಡಪ್ರವಿಷ್ಟನಾಗಿರುವ ಪುರುಷರೂಪವು ಎರಡನೆಯದು. (೩) ಸರ್ವಜೀವರಾಶಿಗಳ ದೇಹಗಳಲ್ಲಿ ಪ್ರವಿಷ್ಟವಾಗಿರುವ ರೂಪವು ತೃತೀಯಪುರುಷರೂಪವು. ಇದಲ್ಲದೆ, ಚೇತನಾಚೇತನಾತ್ಮಕವಾದ ಈ ಬ್ರಹ್ಮಾಂಡದಲ್ಲಿ ಆವಾಸನಾಗಿರುವ (ವ್ಯಾಪ್ತನಾಗಿರುವ), ಉತ್ತಮಾಧಿಷ್ಠಾನವಾದ ಶ್ರೀಮುಖ್ಯಪ್ರಾಣದೇವರಲ್ಲಿ ವಾಸವಾಗಿರುವ, ಮತ್ತು ಷಡ್ಗುಣೈಶ್ವರ್ಯಸಂಪನ್ನನಾದ. ಅಣುರೇಣುತೃಣಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿರುವ ಶ್ರೀಹರಿಗೆ **ಪುರುಷ**

ನೆಂದು ಹೆಸರು. ಮಹತ್ತತ್ವಪ್ರವಿಷ್ಟ, ಬಹ್ಮಾಂಡಪ್ರವಿಷ್ಟ ಮತ್ತು ಸರ್ವ ಜೀವರುಗಳ ಶರೀರಪ್ರವಿಷ್ಟನಾಗಿರುವ ಶ್ರೀಪರಮಾತ್ಮನು ಸೃಷ್ಟ್ಯಾದಿವ್ಯಾಪಾರ ಗಳಿಗೆ ಮುಖ್ಯಕಾರಣಗಳಾದ ಅನಿರುದ್ಧ, ಪ್ರದ್ಯುಮ್ನ ಮತ್ತು ಸಂಕರ್ಷಣರೂಪಗಳನ್ನು ಧರಿಸಿದನು. ಈ ಮೂರುರೂಪಗಳಿಗೂ **ಪುರುಷ ರೂಪತ್ರಯ** ಎಂದು ಹೆಸರು. ಅಲ್ಲದೆ ಬ್ರಹ್ಮಾಂತರ್ಯಾಮಿ ಅಜರೂಪ ದಿಂದ ಸೃಷ್ಟಿ, ಸ್ವಯಂ ವಿಷ್ಣುರೂಪದಿಂದ ಜಗತ್ತಿನ ರಕ್ಷಣಾಕಾರ್ಯ ಮತ್ತು ರುದ್ರಾಂತರ್ಗತಸಂಕರ್ಷಣರೂಪದಿಂದ ಲಯಕಾರ್ಯ ಮಾಡುವ ಈಶ್ವರಾಭಿನ್ನವಾದ ಬ್ರಹ್ಮ, ವಿಷ್ಣು ಮತ್ತು ಶಿವರೂಪಗಳೆಂತಲೂ ವಿವ ರಣೆ ಇದೆ. ಇಂತಹ ಪುರುಷರೂಪತ್ರಯಪುರುಷನಾಮಕನಾದ ಶ್ರೀ ಹರಿಯು **ಪುರಾತನಪುರುಷನು.** ಅಂದರೆ, ಆದಿದೇವನು. ಸೃಷ್ಟಿ ವ್ಯಾಪಾರಕ್ಕೆ ಕಾರಣಗಳಾದ ಅನಿರುದ್ಧಾದಿರೂಪಗಳು ಅಭಿವ್ಯಕ್ತವಾಗುವದ ಕ್ಕಿಂತಲೂ ಮುಂಚಿತವಾಗಿಯೇ ವಾಸುದೇವರೂಪದಿಂದ ಅಭಿವ್ಯಕ್ತನಾದನು. ಆದಕಾರಣ ಇವನು ಪುರಾತನಪುರುಷನೆನಿಸುತ್ತಾನೆ. ಅಂದರೆ. ಅನಾದಿಕಾಲ ದಿಂದ ಇದ್ದವನು ಎಂದು ತಾತ್ಪರ್ಯ. ಬ್ರಹ್ಮಾದಿಗಳು ಸೃಷ್ಟರಾಗುವುದಕ್ಕೆ ಮುಂಚೆಯೇ ಇದ್ದ ಏಕಮೇವಾದ್ವಿತೀಯನಾದ ಶ್ರೀಮನ್ನಾರಾಯಣನೇ ಪುರಾ ತನಪುರುಷನು. ಈಶಕೋಟಿಪ್ರವಿಷ್ಟರಾದ ಶ್ರೀ ರಮಾದೇವಿಯರಿಗಿಂತ ಅನಂತಗುಣಗಳಿಂದ ಉತ್ತಮನಾದವನು. ಜೀವಕೋಟಿಪ್ರವಿಷ್ಟರಾದ ಬ್ರಹ್ಮಾದಿ ತೃಣಜೀವಪರ್ಯಂತ ಸಮಸ್ತಜೀವರಾಶಿಗಳಿಗಿಂತಲೂ ಉತ್ತಮೋತ್ತಮ ನಾದ ಶ್ರೀ ಪರಮಾತ್ಮನಿಗೆ **ಪುರುಷೋತ್ತಮ**ನೆಂದು ಹೆಸರು. ಬ್ರಹ್ಮಾದಿ ಜೀವರುಗಳಿಗೆ ಶರೀರನಾಶವುಂಟು. ಅವರು ಅನಾದ್ಯನಂತಕಾಲದಿಂದ ಲಿಂಗ ದೇಹದಿಂದ ಬಂಧಿತರಾಗಿರುತ್ತಾರೆ. ಇಂತಹ ಶರೀರನಾಶವುಳ್ಳ ಜೀವಕೋಟಿಗೆ **"ಕ್ಷರ"**ರು ಎಂದು ಹೆಸರು. ಆದರೆ ಶ್ರೀ ರಮಾದೇವಿಯರಿಗೆ ಇಂತಹ ಶರೀರನಾಶವಿಲ್ಲ. ಅವರು ನಿತ್ಯಮುಕ್ತರು ಮತ್ತು ನಿರ್ವಿಕಾರರು. ಅಂತಹ ಲಕ್ಷ್ಮೀದೇವಿಗೆ ಅಕ್ಷರೆಗಳೆಂದು ಹೆಸರು. ಇಂತಹ ಕ್ಷರಾಕ್ಷರವರ್ಗದಿಂದ ಉತ್ತಮೋತ್ತಮನಾದ ಪುರುಷೋತ್ತಮನು. ಅವರಿಂದ ಪೂಜಿತಪಾದಪದ್ಮ ವುಳ್ಳವನು. ಆದರಿಂದಲೇ **ಕ್ಷರಾಕ್ಷರಪುರುಷಪೂಜಿತಪಾದನು.** ಪರಿ

ಪೂರ್ಣವಾದ ಜ್ಞಾನ ಮತ್ತು ಆನಂದಗಳೇ ಸ್ವರೂಪವನಾಗಿ ಉಳ್ಳವನು. ಅಂದರೆ ಜ್ಞಾನಾನಂದಪರಿಪೂರ್ಣನು. **"ಮಯಟ್"** ಶಬ್ದಕ್ಕೆ ತದಾತ್ಮ್ಯ ವೆಂದು ಅರ್ಥಮಾಡಿರುವುದರಿಂದ, ಜ್ಞಾನ ಮತ್ತು ಆನಂದಗಳೇ ಅವನ ಸ್ವರೂಪವು. ಅನಂತಾನಂತಗುಣಗಳಿಂದ ಪರಿಪೂರ್ಣನಾದ ಗುಣನಿಧಿಯ ಒಂದೊಂದು ಗುಣವೂ ಪರಿಪೂರ್ಣವೇ. ಇದರಿಂದ **ಜ್ಞಾನಾನಂದಮಯ** ನೆಂದು ಹೇಳಿದ್ದಾರೆ. ಪುರುಷಸೂಕ್ತವೆಂಬ ವೇದಸೂಕ್ತದಿಂದ ಪ್ರತಿಪಾದ್ಯನು. ಪುರುಷಸೂಕ್ತವು. ಸರ್ವೋತ್ತಮನಾದ ಶ್ರೀ ವಿಷ್ಣುವನ್ನಲ್ಲದೆ ಅನ್ಯರ್ಯಾರನ್ನೂ ಪ್ರತಿಪಾದಿಸುವುದಿಲ್ಲವಾದ್ದರಿಂದ **ಪುರುಷಸೂಕ್ತಸುಮೇಯನು.** ಅಂದರೆ, ಆ ವೇದಸೂಕ್ತದಿಂದ ಚನ್ನಾಗಿ ತಿಳಿಯಲ್ಪಡುವವನು. ರಮಾ, ಬ್ರಹ್ಮಾದಿ ಸಮಸ್ತರಹೃತ್ಕಮಲನಿವಾಸಿಯಾಗಿದ್ದು. ಅವರವರ ಹೆಸರುಗಳಿಂದಲೇ ಸಮಸ್ತ ಜಗದ್ವ್ಯಾಪಾರಗಳನ್ನು ಮಾಡುತ್ತಿರುವನು. ಈ ಕಾರಣದಿಂದ **ತತ್ತತ್ಪುರುಷ**ನಾಮಕನಾಗಿ **ಹೃತ್ಪುಷ್ಕರನಿಲಯ**ನಾಗಿದ್ದಾನೆ. ಈ ಬ್ರಹ್ಮಾಂಡದ ಒಳಗೆ ಮತ್ತು ಹೊರಗೆ, ಎಲ್ಲೆಡೆಯಲ್ಲಿಯೂ ಓತಪ್ರೋತ ನಾಗಿ ವ್ಯಾಪಿಸಿರುವುದರಿಂದ, **ಬ್ರಹ್ಮಾಂಡಾಂತರ್ಬಹಿಶ್ಚವ್ಯಾಪ್ತನು.** ನಿಖಿಳ ಚೇತನಾತ್ಮಕವಾದ ಜೀವವರ್ಗ ಮತ್ತು ಅಚೇತನಾತ್ಮಕವಾದ ಜಡರಾಶಿ ಮತ್ತು ಕ್ಷರವರ್ಗಕ್ಕಿಂತಲೂ ಉತ್ತಮಳಾದ ಅಕ್ಷರನಾಮಕಳಾದ ಶ್ರೀ ಲಕ್ಷ್ಮೀದೇವಿಯ ರಲ್ಲಿ ವ್ಯಾಪ್ತನಾದಾಗ್ಯೂ, ತದ್ಗುಣ ಮತ್ತು ದೋಷಗಳ ಸಂಬಂಧವು ಸರ್ವತ್ರವ್ಯಾಪ್ತನಾದ ಹರಿಗೆ ಲವಲೇಶವೂ ಇಲ್ಲ. ಇದರಿಂದಲೇ ಜಗದ್ವಿ ಲಕ್ಷಣನಾದ ಜಗತ್ಪ್ರಭುವು **ನಿರ್ಲಿಪ್ತನು.** ॥೧॥

## ಪದ್ಯ (೨)

**ಮೂಲ: —**

**ಸ್ತ್ರೀ ನಪುಂಸಕ ಪುರುಷ ಭೂಸಲಿ ।**
**ಲಾನಲಾನಿಲ ಗಗನಮನ ಶಶಿ ।**
**ಭಾನು ಕಾಲಗುಣ ಪ್ರಕೃತಿಯೊಳಗೊಂದು ತಾನಲ್ಲ ॥**
**ಏನು ಇವನ ಮಹಾಮಹಿಮೆ ಕಡೆ ।**
**ಗಾಣರಜಭವಶಕ್ರಮುಖರು ನಿ ।**
**ಧಾನಿಸಲು ಮಾನವರಿಗಳವಡುವದೇ ವಿಚಾರಿಸಲು ॥೨॥**

**ಅವತರಣಿಕೆ: —**

ಸ್ತ್ರೀ, ಪುರುಷ, ನಪುಂಸಕ ಮುಂತಾದ ಜೀವರಾಶಿಗಳಲ್ಲಿ ಅಂತರ್ಯಾಮಿರೂಪದಿಂದ ಇದ್ದು, ಪೃಥ್ವ್ಯಾದಿಪಂಚಭೂತಗಳಲ್ಲಿ ಸ್ಥಿತನಾಗಿದ್ದು. ಕಾಲ, ಗುಣ, ಪ್ರಕೃತಿಗೆ ಸೂರ್ಯ ಚಂದ್ರಾದಿಗಳೇ ಮೊದಲಾದ ಅಧಿಷ್ಠಾನಗಳಲ್ಲಿ ನಿಯಾಮಕನಾಗಿದ್ದು. ಜಗದ್ವ್ಯಾಪಾರಗಳನ್ನು ನಿಯಂತ್ರಿಸುತ್ತಾ. ಅವುಗಳಿಂದ ತಾನು ಅತ್ಯಂತಭಿನ್ನವಾಗಿ, ಸರ್ವತ್ರ ವ್ಯಾಪ್ತನಾಗಿರುವ ಆ ಜಗದ್ವಿಲಕ್ಷಣರೂಪಿಯಾದಶ್ರೀ ಪರಮಾತ್ಮನ ಮಹಾಮಹಿಮೆಗಳನ್ನು ಸಾಕಲ್ಯೇನ ಅರಿಯಲು ರಮಾಬ್ರಹ್ಮಾದಿಗಳಿಗೆ ಅಸದಳವೆಂದು ಭಗವನ್ಮಹಿಮೆಯನ್ನು ಕೊಂಡಾಡುತ್ತಾರೆ. "ಸ್ತ್ರೀ ನಪುಂಸಕ" ಎಂಬ ಈ ಪದ್ಯದಿಂದ.

**ಪ್ರತಿಪದಾರ್ಥ : —**

**ಸ್ತ್ರೀ** = ಪೂರ್ವೋಕ್ತ ರೀತ್ಯಾ ಸರ್ವತ್ರ ವ್ಯಾಪ್ತನಾದ ಪರಮಾತ್ಮನು ಸ್ತ್ರೀ (ಹೆಂಗಸು) ಎಂತಲೂ **ನಪುಂಸಕ** = ನಪುಂಸಕನೆಂತಲೂ **ಪುರುಷ** = ಗಂಡಸು

ಎಂತಲೂ ಹೇಳಲಿಕ್ಕೆ ಇಲ್ಲ. **ಭೂ** = ಇನ್ನೂ ಪೃಥ್ವಿ **ಸಲಿಲ** = ಉದಕ (ನೀರು) **ಅನಲ** = ಅಗ್ನಿ **ಅನಿಲ** = ವಾಯು **ಗಗನ** = ಆಕಾಶ **ಮನ** = ಮನಸ್ಸು **ಶಶಿ** = ಎಡನೇತ್ರಾಭಿಮಾನಿ ಚಂದ್ರ **ಭಾನು** = ಬಲನೇತ್ರಾಭಿಮಾನಿ ಸೂರ್ಯ (ಇದರಿಂದ ಚತುರ್ವಿಂಶತಿತತ್ವಾಭಿಮಾನಿ ದೇವರು ಗ್ರಾಹ್ಯರು) **ಕಾಲ** = ಜೀವರುಗಳಿಗೆ ಆಯುಃ ಪರಿಮಿತಿಕಾಲ (ಪ್ರವಾಹತೋ ನಿತ್ಯವಾದ ಕಾಲಪರಿಮಾಣ) **ಗುಣ** = ಗುಣತ್ರಯಗಳು (ಸತ್ವ, ರಜೋ ಮತ್ತು ತಮೋಗುಣಗಳು) **ಪ್ರಕೃತಿ** = ಜಗತ್ಸೃಷ್ಟಿಗೆ ಉಪಾದಾನ ಕಾರಣವಾದ ಮೂಲಪ್ರಕೃತಿ. **ಒಳಗೊಂದು ತಾನಲ್ಲ** = ಈ ಸಮೂಹದಲ್ಲಿ ಯಾವುದೂ ತಾನಲ್ಲ. ಅವುಗಳೊಳಗೆ ಅಂತರ್ಗತನಾಗಿ ತದಾಕಾರನಾಗಿ, ತದ್ರೂಪನಾಗಿ ಇದ್ದಾನೆಯೇ ಹೊರತು, ಅವುಗಳೇ ಪರಮಾತ್ಮನ ಸ್ವರೂಪವಲ್ಲ ಎಂದು ತಾತ್ಪರ್ಯ. **ಏನು ಇವನ ಮಹಾಮಹಿಮೆ** = ಇಂತಹ ಶ್ರೀ ಪರಮಾತ್ಮನ ಅಂಚಿತ್ಯಾದ್ಭುತವಾದ ಮತ್ತು ಅಪರಿಚ್ಛಿನ್ನವಾದ ಮಹಿಮೆಯನ್ನು ಏನೆಂದು ಹೇಳೋಣ ? **ಅಜ** = ಚತುರ್ಮುಖಬ್ರಹ್ಮದೇವರು **ಭವ** = ಮಹರುದ್ರ ದೇವರು **ಶಕ್ರ** = ಇಂದ್ರದೇವರು **ಮುಖರು** = ಇವರೇ ಮೊದಲಾದ ದೇವತಾವರ್ಗ, ಅಂದರೆ ಬ್ರಹ್ಮರುದ್ರೇಂದ್ರಾದಿದೇವತೆಗಳು. **ನಿಧಾನಿಲು** = ಎಷ್ಟು ಆಲೋಚಿಸಿದರೂ **ಕಡೆಗಾಣರು** = ಕೊನೆಗಾಣರು. (ಸಾಕಲ್ಯೇನ ತಿಳಿಯಲು ಸಾಧ್ಯವೇ ಇಲ್ಲ) **ಮಾನವರಿಗೆ** = ಇಂತಿರಲು, ಅಲ್ಪಾಧಿಕಾರಿಗಳಾದ ಮನುಷ್ಯರಿಗೆ **ವಿಚಾರಿಸಲು** = ಯೋಚಿಸಿ ನೋಡಲು **ಅಳವಡುವದೇ** = ಸಾಧ್ಯವಾಗುವುದೇ ? ಎಂದರೆ ಎಂದೆಂದಿಗೂ ಅಸಾಧ್ಯವೆಂತ ತಾತ್ಪರ್ಯ.

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಶ್ರೀ ಪರಮಾತ್ಮನು ಸ್ತ್ರೀ ಎಂತಲೂ, ನಪುಂಸಕನಂತಲೂ ಹೇಳಲಿಕ್ಕೆ

ಇಲ್ಲ. ಆತನು ಇಂಥಾವನು ಎಂತ ಹೇಳಲಿಕ್ಕೆ ಸಾಧ್ಯವಲ್ಲದ ವಿಲಕ್ಷಣಗಳಾದ ಅನೇಕರೂಪಗಳಾದ ಸ್ತ್ರೀಯರಲ್ಲಿಯೂ, ನಪುಂಸಕರಲ್ಲಿಯೂ, ಪುರುಷರಲ್ಲಿಯೂ, ಅಂತರ್ಗತನಾಗಿರುವುದರಿಂದ. ದೇವರು ಸ್ತ್ರೀ ಎಂತಲೂ, ಪುರುಷ ಎಂತಲೂ, ನಪುಂಸಕ ಎಂತಲೂ ಹೇಳಿಸಿಕೊಳ್ಳುತ್ತಾನೆ.

**ಇದಕ್ಕೆ ಪ್ರಮಾಣ :—**

✔ **"ಸ ವೈ ನ ದೇವಾಸುರ ಮರ್ತ್ಯತಿರ್ಯಙ್ ನ ಸ್ತ್ರೀ ನ ಷಂಡೋ ನ ಪುಮಾನ್ನಜಂತುಃ ||" —ಎಂದು ಭಾಗವತದಲ್ಲಿ ಗಜರಾಜಸ್ತೋತ್ರವಿದೆ.**

ಇಂತಹ ಅಂಚಿತ್ಯಾದ್ಭುತನಾದ ಪರಮಾತ್ಮ ಜೀವರಿಗೆ ಪ್ರಾಪ್ತವಾದ **ಪಾಂಚ** ಭೌತಿಕಸ್ಥೂಲದೇಹಗಳಾದ ಸ್ತ್ರೀ ಪುರುಷ ನಪುಂಸಕ ದೇಹಗಳಲ್ಲಿ ೨೪ ತತ್ವಗಳಿಂದ ನಿರ್ಮಿತವಾದ ಅದರ ಒಳಗೆ ಪೃಥ್ವಿ, ಉದಕ, ಅಗ್ನಿ, ವಾಯು, ಆಕಾಶ, ಮನಸ್ಸು, ಈ ಆರು ತತ್ವಗಳು ಹೋಗತಾ, ಅವಶಿಷ್ಟತತ್ವಗಳಾದ ಎಡನೇತ್ರಾಭಿಮಾನಿ ಚಂದ್ರದೇವ, ಬಲನೇತ್ರಾಭಿಮಾನಿ ಸೂರ್ಯದೇವರು, ಈ ಪ್ರಕಾರ ೨೪ ತತ್ವಗಳಲ್ಲಿಯೂ, ಆಯಾಯಾತತ್ವಾಭಿಮಾನಿದೇವತೆಗಳಲ್ಲಿಯೂ ಜೀವರುಗಳಿಗೆ ಆಯಾ ಪ್ರಮಾಣದಲ್ಲಿಯೂ, ಆಯಾ ಭಿನ್ನಭಿನ್ನಜೀವರ ಭಿನ್ನಭಿನ್ನವಾದ ಸ್ಥೂಲದೇಹಗತ ಗುಣತ್ರಯಗಳಲ್ಲಿಯೂ, ಉಪಾದಾನಕಾರಣವಾದ ಶುಕ್ಲಶೋಣಿತಾಖ್ಯಪ್ರಕೃತಿಯಿಂದ ಉತ್ಪನ್ನವಾದ ಚರಾಚರ ಸರ್ವಪ್ರಾಣಿಗಳ ಸ್ಥೂಲದೇಹಗಳಲ್ಲಿಯೂ, ಅಂತರ್ಗತನಾಗಿ ಇರುತ್ತಾನೆಯೇ ಹೊರತು, ಇವುಗಳೊಳಗೆ ತಾನೇ ಆಕಾರಾದಿ ತತ್ವಗಳೇ ಅಲ್ಲ. ಇಂಥಾ ಪರಮಾತ್ಮನ ಅತ್ಯದ್ಭುತವಾದ, ಅಪರಿಚ್ಛಿನ್ನವಾದ ಮಹಿಮೆಯನ್ನು ಏನಂತ ಹೇಳಬೇಕು ? ಲಕ್ಷ್ಮೀದೇವರಿಗೂ ಬ್ರಹ್ಮರುದ್ರೇಂದ್ರಾದಿಗಳಿಗೂ ಅಸಾಧ್ಯವಾದ ಮೇಲೆ, ಮನುಷ್ಯರಿಗೆ, ಶ್ರೀಹರಿ ಮಹಾತ್ಮ್ಯ ಸಾಕಲ್ಯೇನ ತಿಳಿಕೊಂಬೋದಕ್ಕೆ ಸಾಧ್ಯವಾಗೋದೇ ಎಂದರೆ. ವಿಚಾರಮಾಡಿದರೂ ಸಾಧ್ಯವಾಗೋದಿಲ್ಲ ಎಂದು ಭಾವ. ಅನೇಕ ಧಾನ್ಯಗಳ **ಮೇಳಮಾಡಿ, ರಾಶೀಭೂತವಾದ ರಾಶಿಗೆ ಧಾನ್ಯರಾಶಿ** ಎಂತ ನಿರ್ಧಾರವೇ

ಹೊರತು, ಏಕಬೀಜರಾಶಿಗೆ ಧಾನ್ಯರಾಶಿ ಎಂತ ಹೇಳಲಿಕ್ಕೆ ಹ್ಯಾಂಗೆ ಆಗುವು ದಿಲ್ಲವೋ, ತದ್ವತ್ ಶ್ರೀ ಪರಮಾತ್ಮ ಇಂಥವನೆಂದು ನಿರ್ಧರಿಸಲು ಸಾಧ್ಯ ವಿಲ್ಲದ ವಿಲಕ್ಷಣರೂಪಗಳುಳ್ಳವನು. ಮೃದ್ಘಟದಂತೆ ಪರಿಣಾಮವಾದೋ ಪಾದಿಯಲ್ಲಿ ಪರಮಾತ್ಮನೇ ಉಪಾದಾನನಾಗಿ ಜಗದಾಕಾರತ್ವೇನ ಪರಿಣಮಿಸಿ ದವನಲ್ಲ. ಅವನು ತದ್ಭಿನ್ನನಾಗಿ, ತದಾಕಾರನಾಗಿ, ತದಂತರ್ಯಾಮಿ ಯಾಗಿ ಜಗದ್ವ್ಯಾಪಾರಗಳನ್ನು ನಡೆಸುತಾ ಇದ್ದಾನೆ.

**ವಿಶೇಷಾರ್ಥ :—**

(೧) ಪರಮಾತ್ಮ ಸ್ತ್ರೀ, ಪುರುಷ, ನಪುಂಸಕ ಜಂತುಗಳೊಳಗೆ ಒಂದೂ ತಾನಲ್ಲ ಎಂಬುದಕ್ಕೆ **ಪ್ರಮಾಣ :**

**"ನ ಸ್ತ್ರೀ ನ ಷಂಡೋ ನ ಪುಮಾನ್ನಜಂತುಃ" —ಇತಿ ಭಾಗವತೇ**

(೨) ಪರಮಾತ್ಮನಿಗೆ ಸ್ತ್ರೀ, ಪುರುಷರೂಪಗಳು ಅವೇ ಹೊರತು, ನಪುಂಸಕರೂಪ ಎಂದಿಗೂ ಇಲ್ಲ ಎಂಬುದಕ್ಕೆ **ಪ್ರಮಾಣ :**

**"ಪುಂ ರೂಪಃ ಪ್ರಮದಾರೂಪಃ ಸ್ವರೂಪೇ ರಮತೇ ಸ್ವಯಂ" —ಇತಿ ಸತ್ತತ್ವರತ್ನಮಾಲಾಯಾಂ**

**ಮತ್ತು** "ನಪುಂಸಕಂ ನೈವ ಸ್ವರೂಪಭೂತಂ ಅತೋಽಹತಾ ನಾಸ್ತಿ ವಿಂಚಿತನೀಯಂ" —ಇತಿ ಗಾರುಡೇ

ಮತ್ತು "ಸ್ತ್ರೀಪುಂದೋಷ ವಿಹೀನತ್ವಾದ್ಭಗವಾನ್ ನ ನಪುಂ ಸಕಃ" —ಇತಿ ಋಗ್ಭಾಷ್ಯೇ.

(೨) **"ಭಾವಪ್ರಕಾಶಿಕೆ" –ವ್ಯಾಖ್ಯಾನ :—**

ಶ್ರೀ ಪರಮಾತ್ಮನ ಸ್ವರೂಪವು ಎಂತಹುದು ಎಂದರೆ — ಅವನು ಸ್ತ್ರೀಯೂ ಅಲ್ಲ, ನಪುಂಸಕನೂ ಅಲ್ಲ, ಪುರುಷನೂ ಅಲ್ಲ. ಪೃಥ್ವಿ,.

ಅಪ್ಪು, ಮೊದಲಾದ ಪಂಚಭೂತಗಳಲ್ಲಿ ಒಂದೂ ತಾನಲ್ಲ. ತನ್ಮಾತ್ರಾಗುಣ ಗಳಲ್ಲಿ ಒಂದು ಗುಣಕ್ಕೂ ಸಂಭಂಧಿಸಿದವನಲ್ಲ. ಚಿತ್ತ, ಬುದ್ಧಿ, ಮನಸ್ಸು, ಅಹಂಕಾರ ಇವುಗಳಲ್ಲಿ ಯಾವುದೂ ತಾನಲ್ಲ. ಚಂದ್ರನೂ ಅಲ್ಲ. ಸೂರ್ಯನೂ ಅಲ್ಲ. ಕಾಲನೂ ಅಲ್ಲ. ಗುಣಪ್ರಕೃತಿಯೂ ಅಲ್ಲ. ಇವುಗಳಿಂದ ವಿಲ ಕ್ಷಣನು. ಇವುಗಳಲ್ಲದೆ ಯಾವುದು ಉಳಿದಿದೆಯೋ ಅದೇ ಭಗವತ್ಸ್ವರೂ ಪವು. ಇವನ ಮಹಿಮೆಯನ್ನು ಎಷ್ಟೆಂದು ವರ್ಣಿಸೋಣ ? ಎಷ್ಟು ಯೋಚಿಸಿದರೂ ಬ್ರಹ್ಮರುದ್ರೇಂದ್ರಾದಿಗಳಿಗೂಸಹ ಸಾಕಲ್ಯೇನ ಇವನ ಸ್ವರೂಪ ವನ್ನು ಕೊನೆಗಾಣಲಾರರು. ಇನ್ನು ವಿಚಾರಿಸಿ ನೋಡಲು ಮನುಷ್ಯರಿಂದ ಸಾಧ್ಯವೇ ? ಎಂದಿಗೂ ಅಲ್ಲವೆಂದು ಭಾವವು.

**ವಿಶೇಷಾರ್ಥ :—**

ಹಿಂದಿನ ಪದ್ಯದಲ್ಲಿ ಬ್ರಹ್ಮಾಂಡದ ಒಳಗೂ ಹೊರಗೂ ವ್ಯಾಪ್ತನಾಗಿ ನಿರ್ಲಿಪ್ತನಾಗಿರುವನು ಎಂದು ಹೇಳಿ, ಈ ಪದ್ಯದಲ್ಲಿ ಸ್ತ್ರೀಯೂ ಅಲ್ಲ, ಪುರುಷ ಮೊದಲಾದವುವೂ ಅಲ್ಲವೆಂದು ಹೇಳಿರುವರು. ಇದೇ ಅರ್ಥವನ್ನು **ಭಾಗವತ ಅಷ್ಟಮಸ್ಕಂಧದಲ್ಲಿ "ಸ ವೈ ನ ದೇವಾಸುರ ಮರ್ತ್ಯತಿರ್ಯ ಙ್ನ ಸ್ತ್ರೀ ನ ಷಂಡೋ ನ ಪುಮಾನ್ನಜಂತುಃ"**—ಎಂದು ಹೇಳಿರುವರು. ಪರಮಾತ್ಮನು ಸರ್ವತ್ರವ್ಯಾಪ್ತನಾಗಿರುವುದರಿಂದ, ಸರ್ವಶಬ್ದವಾಚ್ಯ ನಾಗಿರುವನು.

**ಭಾಗವತಏಕಾದಶಸ್ಕಂಧದಲ್ಲಿ —"ಖಂ ವಾಯುಮಗ್ನಿಂ ಸಲಿಲಂ ಮಹೀಂ ಚ ಜ್ಯೋತೀಂಷಿ ಸತ್ವಾನಿ ದಿಶೋದ್ರುಮಾದೀನ್ । ಸರಿತ್ಸ ಮುದ್ರಾಂಶ್ಚ ಹರೇಃ ಶರೀರಂ ಯತ್ಕಿಂಚ ಭೂತಂ ಪ್ರಣಮೇದನ ನ್ಯಮ್ ||"** ಎಂಬ ಶ್ಲೋಕದಲ್ಲಿ, ಆಕಾಶ, ವಾಯು, ಅಗ್ನಿ, ಉದಕ, ಭೂಮಿ ಮೊದಲಾದವುಗಳೆಲ್ಲವೂ ಭಗವಂತನ ಶರೀರವೆಂದು ಚಿಂತಿಸಬೇಕು ಎಂದು ಹೇಳಿದೆ.

**ಅಷ್ಟಮಸ್ಕಂಧದ —"ಸ ನೈನ ದೇವಾ"**—ಎಂಬ ಶ್ಲೋಕದಿಂದಲೂ, **"ಸ್ತ್ರೀ ನಪುಂಸಕ"** —ಎಂಬ ಈ ಪದ್ಯದಿಂದಲೂ ಇವು ಒಂದೂ ಪರಮಾತ್ಮ ನಲ್ಲ ಎಂದು ಹೇಳಿರುವರು. **ಏಕಾದಶಸ್ಕಂಧದ** ಶ್ಲೋಕರೀತ್ಯಾ ಸ್ತ್ರೀ. ಪುರುಷ, ಆಕಾಶ, ವಾಯು ಮೊದಲಾದ ವಸ್ತುಗಳಲ್ಲಿ ತಚ್ಛಬ್ದವಾಚ್ಯನಾಗಿ, ತದಾಕಾರನಾಗಿ, ಅವುಗಳಲ್ಲಿ ಇರುವುದರಿಂದ, ಆ ಸ್ಥಳಗಳಲ್ಲಿನ ಭಗವದ್ರೂಪ ಗಳನ್ನು ಚಿಂತಿಸಿ, ಪೂಜಿಸಬೇಕು. ಅಷ್ಟಮಸ್ಕಂಧದ ಶ್ಲೋಕದಿಂದಲೂ, ಈ ಪ್ರಕೃತಪದ್ಯದಿಂದಲೂ ಹೇಳಿರುವ ನಿಷೇಧವಾಕ್ಯಗಳ ರೀತ್ಯಾ ಪರಮಾತ್ಮನು ಆಕಾಶಾದಿಗಳಲ್ಲಿದ್ದರೂ ತದ್ಗತವಾದ ಗಂಧದೋಷಾದಿಗಳಿಗೆ ಸಂಬಂಧಪಡದೆ ನಿರ್ಲಿಪ್ತನಾಗಿರುವನು.

**"ಇವನ ಮಹಾಮಹಿಮೆ ಕಡೆಗಾಣರಜಭವಶಕ್ರ ಮುಖರು ನಿಧಾನಿ ಸಲು"**— ಹೀಗಿರಲು ಮನುಷ್ಯರು ಇವನ ಮಹಿಮೆಯನ್ನು ಕಾಣುವರೇ ? ಎಂದು ಹೇಳಿರುವರು. ಇದೇ ಅರ್ಥವನ್ನೇ **ಭಾಗವತ ಸಪ್ತಮಸ್ಕಂಧದ ೯ ನೆಯ ಅಧ್ಯಾಯದಲ್ಲಿ —"ಬ್ರಹ್ಮಾದಯಸ್ಸುರಗಣಾ ಮುನಯೋಥ** ಸಿದ್ಧಾಃ **ಸತ್ವೈಕತಾನಮತಯೋಃ ವಚಸಾಂ ಪ್ರವಾಹೈಃ । ನಾಂತಂ ಪರಸ್ಯ ಪರಿತೋಷ್ಯಧುನಾಪಿಯಾಂತಿ ಕಿಂತೋಷ್ಟುಮರ್ಹತಿ ಸಮೇ ಹರಿರುಗ್ರಜಾತೇಃ ॥ ೨೨ ॥** —ಎಂಬುದಾಗಿ ಬ್ರಹ್ಮಾದಿ ಸಕಲದೇವತಾ ಗಣಗಳು, ಋಷಿಗಣಗಳು, ಸಿದ್ಧರು ಮೊದಲಾದ ಮಹನೀಯರು ನಿನ್ನ ಮಹಿಮೆಗಳನ್ನು ಅವರ ಪ್ರವಾಹರೂಪವಾದ ವಾಕ್ಸರಣಿಯಿಂದ ಸ್ತುತಿಸುತ್ತಿ ದ್ದರೂ, ಇನ್ನೂ ಕೊನೆಗಾಣದಿರುವರೋ, ಅಂತಹ ನೀನು ಕ್ರೂರಜಾತಿ ಯಾದ ದೈತ್ಯಕುಲದಲ್ಲಿ ಹುಟ್ಟಿದ ನನಗೆ ಪ್ರಸನ್ನನಾದದ್ದು ನಿನ್ನ ಇಚ್ಛೆ ಯಿಂದಲೇ ಹೊರತು ಬೇರೆ ಅಲ್ಲವೆಂದು ಪ್ರಹ್ಲಾದನು ಸ್ತುತಿಸಿದನು. ಇದೇ ಅರ್ಥವನ್ನೇ ದಾಸರಾಯರು ಇಲ್ಲಿ ಹೇಳಿರುವರು. ॥ ೨ ॥

**(೩) "ಭಾವದರ್ಪಣಟೀಕಾ" — ವ್ಯಾಖ್ಯಾನ :—**

"ಸ್ತ್ರೀ" ಶಬ್ದ ಮೊದಲುಮಾಡಿ "ಪ್ರಕೃತಿ" ಶಬ್ದದವರೆಗೂ ೨೪ ಅಧಿ

ಷ್ಠಾನಗಳಾಗುತ್ತವೆ. ಈ ಪ್ರಾಕೃತವಸ್ತುಗಳೇ ಶ್ರೀಹರಿ ತಾನಲ್ಲವೆಂದು ಹೇಳುತ್ತಾರೆ- "ಸ್ತ್ರೀ ನಪುಂಸಕ" —ಎಂಬ ಪದ್ಯದಿಂದ.

**"ನ ಸ್ತ್ರೀ ನ ಷಂಡೋ ನಪುಂಮಾನ್ನಂಜುತುರಿತಿ" ಭಾಗವತೋಕ್ತೇಃ ||** ಮತ್ತು ಶ್ರೀ ಭಗವಂತನಿಗೆ ಸ್ವರೂಪಭೂತವಾದಂಥ ಸ್ತ್ರೀ ಪುರುಷ ರೂಪಗಳು ಅವೇ ಹೊರತು ನಪುಂಸಕ ರೂಪ ಎಂದಿಗೂ ಇಲ್ಲ ಹೇಳುತ್ತದೆ.

**"ಪುಂರೂಪ ಪ್ರಮಾದಾರೂಪಸ್ಸ್ವರೂಪೋ ರಮತೇ ಸ್ವಯಮಿತಿ" —ಸತ್ತತ್ವರತ್ನಮಾಲಾವಚನಾತ್ ||**

**"ನಪುಂಸಕ ನೈವಸ್ವರೂಪಭೂತಂ ಅತೋ ಹರೌ ನಾಸ್ತಿ ವಿಚಿಂತನೀಯಮಿತಿ" —ಗರುಡಪುರಾಣೋಕ್ತೇಃ ||**

ಈ ವಿಷಯದಲ್ಲಿ ಮತ್ತೊಂದು ಪ್ರಮಾಣ:— **ಸ್ತ್ರೀಪುಂದೋಷವಿಹೀನತ್ವಾದ್ಭಗವಾನ್ ನ ನಪುಂಸಕ" — ಇತಿ ಋಗ್ಭಾಷ್ಯೋಕ್ತೇಃ ||**

ಭೂ-ಭೂಮಿ. ಸಲಿಲ–ಉದಕ, ಅನಿಲ–ವಾಯು, ಅನಲ-ಅಗ್ನಿ, ಅಜ-ಬ್ರಹ್ಮ || "ಏನೋ ಇವನ ಮಹಾಮಹಿಮೆ" —ಬ್ರಹ್ಮಾದಿದೇವತೆಗಳೇ ಶ್ರೀಹರಿ ಮಹಾಮಹಿಮೆ ಕಡೆಗಾಣದೆ, ಎಂದರೆ ಕೊನೆಗಾಣರು ಎಂದರ್ಥ. ನಿಧಾನಿಸಲು-ಸುಮ್ಮಗಾಗಲು, ಮಾನವರಿಗಳವಡುವುದೇ -ಎಂದರೆ, ಮನುಷ್ಯರಿಗೆ ಸಾಧ್ಯವಾಗುವುದೇ ಎಂತ ಕಾಕು; ಎಂದಿಗೂ ಸಾಧ್ಯವಾಗಲಾರದೆಂದು ದಾಸರಾಯರ ಹೃದಯ. ವಿಚಾರಿಸಿ, ಎಂದ್ದರೆ, ಶಾಸ್ತ್ರಮುಖದಿಂದಲೂ, ಉಪಾಸನಾಮುಖರಿಂದಲೂ ಪರಿಯಾಲೋಚಿಸಲಾಗಿ–ಎಂದು ತಾತ್ಪರ್ಯ||೨||

## (೪) ಶ್ರೀ ಜಮಖಂಡಿವಾದಿರಾಜಾಚಾರ್ಯರ ವ್ಯಾಖ್ಯಾನ :— (ಸಂಸ್ಕೃತಮೂಲ)

ನನು ಈಶಃ "ಬಹ್ವೀಃ" ಇತ್ಯಾದೇಃ ಸೃಷ್ಟ ತ್ವಪ್ರವಿಷ್ಟತ್ವಾಭಿಧಾಯಿನಃ ವಚನಸ್ಯ ಸಚ್ಚತ್ಯಚ್ಚಾಭವದಿತಿಶ್ರುತಿ ವಿರೋದಾದ ಪ್ರಮಾಣ್ಯಮೇವ;

ಅತಃ ಹರಿಭಾವಃ ಏವ ಜಗತಃ ನ ವ್ಯಾಪ್ತಿರಿತಿ ಮಾಯಾವಾದಮತಂ ದೂಷ್ಯ ಯತಿ ॥ ಸ್ತ್ರೀತಿ ॥ ಶಬ್ದ ಪದೇಗೋತ್ತರ ಪದಗೇನ ಚ ಅಭೇದಮಪಾಕೃತ್ಯ ಪ್ರವಿಷ್ಟಸ್ತದಾಕಾರೋ ರಮಾಕರಾರ್ಚಿತಃ ॥ ಪೆಸರಿನಿಂದ ॥ ತಚ್ಛಬ್ದೈ ಗೀಯತೇ ತರ್ಪಕಃ । ನನು ಏವಂ ಚೇತ್ ನಪುಂಕಾಂತಸ್ಥ ಭಗವತಃ ತದಾಕಾರತಾಪಿ ಸ್ಯಾತ್ ॥ ಅದ್ದೇತಿಚೇನ್ನ । ನೈನಂ ಸ್ತ್ರೀಯಂ ಬ್ರುವನ್ ಇತ್ಯುಪನಿಷದ್ವ್ಯಾಖ್ಯಾನವಸರೇ ನಪುಂಸಕರೂಪೇ ಪ್ರಮಾವಾಚಾಭೀವಾ ತ್ಯುಕ್ತ್ವಾ ಸ್ತ್ರೀಪುಂರೂಪದ್ವಯಂ ವಿಷ್ಣೋಃ ನ ತೃತೀಯಂ ಕಥಂಚನೇತಿ ತತ್ರ ಪ್ರವಿಷ್ಟಸ್ಯಾಪಿ ತತ್ವಾಪಾಕರಣಾತ್ ॥ ಕಿಂತು ಪುಮಾಕಾರಸ್ಯೈವ ತತ್‌ಸ್ಥಿತಿ ರಿತಿ ಸರ್ವಮನಾಕುಲಮ್ । ಸಚ್ಚೇತಿವೇದಾರ್ಥಸ್ತು ಪ್ರತೀಕಂ ಧೃತ್ವಾ, ನಾಸ್ಯ ವಿಶ್ವತ್ವಮುಚ್ಯತೇ ಇತಿ ಪ್ರತಿಜ್ಞಾಯ ॥ ಸತ್ತತೀಯರ್ಾತನಾಚ್ಚೈವ ಹ್ಯ ಪ್ರಾಪ್ಯತ್ವಾಚ್ಯ ದುರ್ಜನೈಃ । ಸತ್ವಾತ್ತತೇಃ ವೈದಿಕತ್ವಾತ್ ಸಮ್ಯಗ್ ವಕ್ತುಮಶಕ್ಯತಃ । ಆಶ್ರಯತ್ವಾತ್ ಸ್ವಾಶ್ರಯತ್ವಾತ್ ಜ್ಞಾನದ್ವಾತ್ ದುರ್ವಿದತ್ವತಃ । ನಿತ್ಯಸಾಧುಗುಣವ್ಯಾಪ್ತಿಯಂತ್ಯರೂಪತ್ವತಃ ಸದಾ । ಸತ್ಯಮಿತ್ಯಾದಿ ಪ್ರವೃತ್ತಿನಿಮಿತ್ತಂ ವದತಾ. ಆಚಾರ್ಯವರ್ಯೇಣ ಪರಮಾ ಸ್ತಿಕ ಶಿರೋಮಣಿನಾ ಉದೀರಿತಃ ಏವೇತಿ ಸೂಕ್ಷ್ಮಂ ವ್ಯಾಪ್ತೀತಿ ॥ ಒಂದು ತಾನಲ್ಲೇತಿ ॥ ಭುಕ್ತ್ವಾ ಚರೀತೀತ್ಯಾದಿ ನ್ಯಾಯವರ್ಷಕಪ್ರಕೃತ್ಯಧಿಕರಣ ಸುಧಾಯಾಂ ಚ ವಿವೃತಮೇತತ್ ॥ ೨ ॥

**ಕನ್ನಡಾನುವಾದ :—**

"ಹರಿಗೂ ಮತ್ತು ಜಗತ್ತಿಗೂ ಅಭೇದವು. ಇದರಿಂದ ಅವನಿಗೆ ಜಗದ್ವ್ಯಾಪ್ತತ್ವವಿಲ್ಲ" —ಎಂದು ಮಾಯಾವಾದಿಗಳಮತ. ಅದನ್ನು ನಿರಾಕರಿಸುತ್ತಾರೆ— "ಸ್ತ್ರೀನಪುಂಸಕ" ಎಂಬ ಈ ಪದ್ಯದಿಂದ.

ಸರ್ವತ್ರ ವ್ಯಾಪ್ತನಾಗಿರುವ ಶ್ರೀ ಪರಮಾತ್ಮನು ತದಾಕಾರನಾಗಿದ್ದು, ತತ್ತಚ್ಛಬ್ದವಾಚ್ಯನಾಗಿದ್ದು ಇಂದಿರೆಯ ಕರಪದ್ಮಗಳಿಂದ ಪೂಜಿತನಾಗಿದ್ದಾನೆ. ಸಮಸ್ತ ವಸ್ತುಗಳಲ್ಲಿಯೂ ತನ್ನಾಮಗಳಿಂದ ವಿರಾಜಮಾನನಾಗಿದ್ದು, ಜೀವ ವರ್ಗಕ್ಕೆ ತೃಪ್ತ್ಯಾದಿ ಆನಂದಪ್ರದನು. ತತ್ತದಾಕಾರನಾಗಿರುವ ಭಗವಂತ

ನಿಗೆ ನಪುಂಸಕರಲ್ಲಿ (ಷಂಡ)ಯೂ ವ್ಯಾಪ್ತನಾಗಿರೋಣದರಿಂದ, ಆತನಿಗೆ ನಪುಂಸಕತ್ವವು ಇರುವುದೆಂದು ಹೇಳುವುದಾದರೆ, ಅದು ಅಸಮಂಜಸವಾಗುವುದು. ಏಕೆಂದರೆ, **ಉಪನಿಷದ್ವಾಕ್ಯರೀತ್ಯಾ– "ನೈನಂ ಪಾಚಾ ಸ್ತ್ರೀಯಂ ಬ್ರುವನ್"**— ಶ್ರೀ ಪರಮಾತ್ಮನಿಗೆ ಪುರುಷ ಮತ್ತು ಸ್ತ್ರೀರೂಪಗಳಿವೆ, ಆ ಕಾರಣ ಆತನು ಪುರುಷ ಸ್ತ್ರೀ ಶಬ್ದವ್ಯಾಚ್ಯನು. ಆದರೆ "ನಪುಂಸಕರೂಪ"ಕ್ಕೆ ಪ್ರಮಾಣವಿಲ್ಲ, ಅದು ಸಂಭಾವಿತವೇ ಅಲ್ಲವು. ಅವರಲ್ಲಿ ಪ್ರವಿಷ್ಟನಾಗಿದ್ದರೂ. ನಪುಂಸಕಾಕಾರವು ಇರುವುದಿಲ್ಲ. **"ಸಚ್ಚತ್ಯಚ್ಚಾಭವತ್" —ಎಂಬ ಶ್ರೀಮದಾಚಾರ್ಯರ** ವಚನದ ಉಲ್ಲೇಖದಂತೆ, ಭಗವಂತನು ಸರ್ವೋತ್ತಮನಾದುದರಿಂದ, **"ಸತ್"** ಎಂದೆನಿಸಿಕೊಳ್ಳುತ್ತಾನೆ. ವ್ಯಾಪ್ತಿ ಇರುವುದರಿಂದ **"ತ್ಯತ್"** —ಎನಿಸಿಕೊಳ್ಳುವನು. ವೇದಪ್ರತಿಪಾದ್ಯನಾಗಿರುವುದರಿಂದ —**"ನಿರುಕ್ತ"**ನು. ಸಾಕಲ್ಯೇನ ಅರಿಯಲು ಸಾಧ್ಯವಿಲ್ಲದಿರುವುದರಿಂದ **"ಅನಿರುಕ್ತ"**ನು. ಹೀಗೆ ಶ್ರೀ ಪರಮಾತ್ಮನು ಆಯಾಯಾ ವಸ್ತುಗತರೂಪಗಳಿಂದ ತನ್ನಾಮಕನಾಗಿದ್ದಾನೆಯೇ ಹೊರತು. ಆ ವಸ್ತುಗಳೇ ಭಗವತ್ಸ್ವರೂಪಗಳಲ್ಲ.

? **"ತತ್‌ಸೃಷ್ಟ್ವಾತದೇವಾನುಪ್ರವಿಶ್ಯ ತಚ್ಚತ್ಯಚ್ಚಾಭವತ್। ನಿರುಕ್ತಂಚಾನಿರುಕ್ತಂ ಚ।** ವಿಜ್ಞಾತಂಚಾ **ವಿಜ್ಞಾತಂಚ। ನಿಲಯನಂ ಚಾನಿಲಯನಂ ಚ ಸತ್ಯಂಚಾನೃತಂ ಚ" —ಎಂಬ ಶ್ರುತ್ಯರ್ಥವನ್ನು ಶ್ರೀ ಮದಾಚಾರ್ಯರು** ವಿವರಿಸಿರುವ ರೀತ್ಯಾ, ದಾಸರಾಯರು **"ಇವರೊಳಗೊಂದು ತಾನಲ್ಲ"** —ಎಂದು ಆಚಾರ್ಯರ ಹೃದ್ಭಾವವನ್ನೇ ನಿರೂಪಿಸಿರುತ್ತಾರೆ.

"ತತ್ಸಷ್ಟ್ವಾ ತದೇವಾನುಪ್ರವಿಶ್ಯ"—ಎಂಬ ವಾಕ್ಯವನ್ನು ವಿವರಿಸುತ್ತ ಅನುವ್ಯಾಖ್ಯಾನದ ಟೀಕೆಯಾದ **ಶ್ರೀಮನ್ನ್ಯಾಯಸುಧೆಯ ಪ್ರಕೃತ್ಯಧಿಕರಣವಲ್ಲಿ ಶ್ರೀ ಟೀಕಾಕೃತ್ಪಾದರು** ಈ ಅರ್ಥವನ್ನು ಸ್ಪಷ್ಟೀಕರಿಸಿದ್ದಾರೆ ॥ ೨ ॥

(ಆ) "ಗುರುಹೃದಯಪ್ರಕಾಶಿಕೆ" —ವ್ಯಾಖ್ಯಾನ :—

ಸ್ತ್ರೀ, ಪುರುಷ, ನಪುಂಸಕ ಮುಂತಾದ ದೇಹ ಹೊಂದಿರುವ ಜೀವರು ದೇವರಲ್ಲ. ಭೂ, ಜಲ, ವಾಯು, ಅಗ್ನಿ, ಆಕಾಶಗಳೆಂಬ ಪಂಚಭೂತವು ದೇವರಲ್ಲ. ಮನ, ತದಭಿಮಾನಿರುದ್ರಾದಿಗಳು, ಚಂದ್ರ. ಸೂರ್ಯ (ಶಶಿ ಮತ್ತು ಭಾನು) ದೇವರಲ್ಲ. ಕಾಲ, ಸತ್ವಾದಿಗುಣ, ಜಡವಸ್ತುಗಳು ದೇವರಲ್ಲ. ಬ್ರಹ್ಮರುದ್ರೇಂದ್ರಾದಿಗಳಿಂದ ಪಾರಗಾಣದ ಈ ಸ್ವಾಮಿಯ ಮಹಿಮೆ ಮನುಷ್ಯರಿಗೆ ನಿಧಾನಿಸಿ ತಿಳಿಯಲು ಸಾಧ್ಯವಾದೀತೇ ? ಆದ್ದರಿಂದ ಇವನ ಮಹಿಮೆ ಎಂಥಾದ್ದೋ ಎಂದು ವಿಚಾರಿಸಲು, ಎಂದರೆ ಶಾಸ್ತ್ರ ಉಪಾಸನಾಮುಖದಿಂದ ಆಲೋಚಿಸಲು ಸಾಧ್ಯಾವಾಗುವುದಿಲ್ಲ. ಅದನ್ನು ಅವನೇ ಬಲ್ಲನೆಂದು ಅರ್ಥ. ಇದರಿಂದ

**"ನ ಸ್ತ್ರೀ ನಷಂಡೋ ನಪುಮಾನ್ನಜಂತುಃ। ನಾಯಂ ಗುಣಃ ಕರ್ಮನಸನ್ನಚಾಸ। ನ್ನಿಶೇದಶೇಷೋ ಜಯತಾದಶೇಷಃ"** —ಎಂಬ **ಭಾಗವತಾರ್ಥ** ವಿವರಿಸಲ್ಪಟ್ಟಿದೆ. ॥ ೨ ॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಜೀವವರ್ಗದಲ್ಲಿ ಸ್ತ್ರೀ, ಪುರುಷ ಮತ್ತು ನಪುಂಸಕರೆಂಬ ಲಿಂಗಭೇದ ರೀತ್ಯಾ ಮೂರು ಪ್ರಕಾರ. ಇಂತಹ ದೇಹಲಕ್ಷಣಗಳನ್ನು ಹೊಂದಿರುವ ಜೀವರು ಆ ಹೆಸರಿನಿಂದಲೇ ವ್ಯವಹರಿಸಲ್ಪಡುತ್ತಾರೆ. ಇಂತಹ ದೇಹಗತರಾದ ಜೀವರಲ್ಲಿ ಅಂತರ್ಯಾಮಿಯಾಗಿ. ಇರುವ ಪರಮಾತ್ಮನು, ತತ್ತದಾಕಾರನಾಗಿ, ತನ್ನಾಮಕನಾಗಿದ್ದಾನೆ. ಆದರೆ ದೇವರು ಸ್ತ್ರೀಯೂ ಅಲ್ಲ ; ಪುರುಷನೂ ಅಲ್ಲ ಮತ್ತು ನಪುಂಸಕನಂತೂ ಅಸಂಭಾವ್ಯ. ಆಯಾಯಾ ಹೆಸರುಗಳಿಂದ ಕರೆಯಲ್ಪಡುವ ಜೀವರಲ್ಲಿ ವ್ಯಾಪ್ತನಾಗಿರುವುದರಿಂದ ಸ್ತ್ರೀ ಪುರುಷರೂಪಗಳಿಂದ ವಾಚ್ಯನಾಗಿದ್ದಾನೆ. ಇನ್ನು ಜಡವರ್ಗಕ್ಕೆ ಸೇರಿದ ಆಕಾಶ, ವಾಯು, ಅಗ್ನಿ, ನೀರು ಮತ್ತು ಭೂಮಿ ಎಂಬ ಪಂಚಭೂತಗಳಲ್ಲಿ ಒಂದೂ ತಾನಲ್ಲ. ಆ ಜಡಪದಾರ್ಥಗಳಲ್ಲಿಯೂ ಮತ್ತು ತದಭಿಮಾನಿದೇವತೆಗಳಲ್ಲಿಯೂ ನಿಯಾಮಕರೂಪದಿಂದ ವ್ಯಾಪ್ತನಾಗಿರುವನು ಮತ್ತು ತದ್ವಿದ್ವಿಲಕ್ಷಣವಾಗಿರು

ತ್ತಾನೆ. ಜಗತ್ತನ್ನೇ ಬೆಳಗುತ್ತಿರುವ ಹಾಗೂ ನೇತ್ರಾಭಿಮಾನಿಗಳಾದ ಸೂರ್ಯ, ಚಂದ್ರನಾಗಲೀ ಭಗವಂತನಲ್ಲ. ಅವರಲ್ಲಿ ಅಂತರ್ಯಾಮಿತ್ವೇನ ಜಗದ್ವ್ಯಾಪಾರಗಳನ್ನು ನಿಯಮನ ಮಾಡುತ್ತಿದ್ದಾನೆ. ಪ್ರವಾಹತೋನಿತ್ಯವಾದ ಕಾಲವೂ ಭಗವಂತನಲ್ಲ. ಆದರೆ ಕಾಲಾಂತರ್ಗತನಾಗಿ, ಕಾಲರೂಪಿಯಾಗಿ, ಕಾಲನಿಯಾಮಕನಾಗಿರುವನು. ಕಾಲಚಕ್ರವನ್ನು ನಡೆಯಿಸುತ್ತಿರುವ ಜಗತ್ಪ್ರಭುವೇ ಶ್ರೀ ಪರಮಾತ್ಮನು. ಸತ್ವ, ರಜ ಮತ್ತು ತಮ ಎಂದು ಪ್ರಾಕೃತಗುಣಗಳು ಮೂರುಪ್ರಕಾರ. ಈ ಗುಣತ್ರಯಗಳ ಅಭಿಮಾನಿಗಳಾದ ಶ್ರೀ ಭೂ ದುರ್ಗಾರೂಪಾತ್ಮಕರಾದ ಶ್ರೀ ದೇವಿಯರಿಗೆ ತಾನೇ ಮುಖ್ಯನಿಯಾಮಕನಾಗಿದ್ದು, ಗುಣಕ್ರಿಯಾಭಿವ್ಯಕ್ತಿಯನ್ನು ಮಾಡುವನು. ಜಗತ್ಸೃಷ್ಟಿಗೆ ಉಪಾದಾನಕಾರಣವಾದ ಪ್ರಕೃತಿಯು ದೇವರಲ್ಲ. ಪ್ರಕೃತಿಗೆ ನಿಯಾಮಕನಾಗಿ, ತಾನು ಮುಖ್ಯಕಾರಣನಾಗಿದ್ದು ಜಗತ್ತಿನ ಸೃಷ್ಟ್ಯಾದಿಕಾರ್ಯಗಳನ್ನು ನಿರ್ವಹಿಸುತ್ತಿರುವನು. ಅಚಿಂತ್ಯಾದ್ಭುತಶಕ್ತನಾದ ಶ್ರೀಹರಿಯ ಮಹಿಮಾತಿಶಯಗಳನ್ನು ರಮಾ, ಬ್ರಹ್ಮರುದ್ರೇಂದ್ರಾದಿದೇವತಾ ವರ್ಗ ಸಾಕಲ್ಯೇನ ಅರಿಯಲು ಸಾಧ್ಯವಿಲ್ಲ. ಇಂತಿರಲು, ಅಲ್ಪಾಧಿಕಾರಿಗಳಾದ ಮನುಷ್ಯರಿಗೆ ಇವನ ಮಹಿಮಾವಿಶೇಷಗಳನ್ನು ವಿಚಾರಿಸಿ ಹಾಗೂ ಆಲೋಚಿಸಿ ತಿಳಿಯಲು ಎಂದಿಗಾದರೂ ಸಾಧ್ಯವೇ! ಸಾಧ್ಯವಿಲ್ಲವೆಂದೇ ತಾತ್ಪರ್ಯವು ॥೨॥

## ಪದ್ಯ (೩)

**ಮೂಲ:** —

**ಗಂಧ ರಸ ರೂಪ ಸ್ಪರಶ ಶ ।**
**ಬ್ದೊಂದು ತಾನಲ್ಲದರದರ ಪೆಸ ।**
**ರಿಂದ ಕರೆಸುತ ಜೀವರಿಗೆ ತರ್ಪಕನು ತಾನಾಗಿ ॥**
**ಪೊಂದಿಕೊಂಡಿಹ ಪರಮಕರುಣಾ ।**
**ಸಿಂಧು ಶಾಶ್ವತ ಮನನೆ ಮೊದಲಾ ।**
**ದಿಂದ್ರಿಯಗಳೊಳಗಿದ್ದು ಭೋಗಿಸುತಿಹನು ವಿಷಯಗಳ ॥೩॥**

**ಅವತರಣಿಕೆ :—**

ರೂಪರಸಾದಿ ತನ್ಮಾತ್ರಗಳಲ್ಲಿ ಒಂದೂ ಭಗವತ್ಸ್ವರೂಪದವಲ್ಲ. ತತ್ತಚ್ಛಬ್ದವಾಚ್ಯನಾಗಿದ್ದು, ಜೀವಗಣಕ್ಕೆ ತದ್ವಾರಾ ತೃಪ್ತಿಯನ್ನೀಯುತ್ತಾ, ಕರುಣಾಸಾಗರನಾದ ಶ್ರೀಹರಿಯು ಮನತತ್ತ್ವದಿಂದಾರಂಭಿಸಿ. ಸಕಲ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳಲ್ಲಿ ಕರಣನಿಯಾಮಕನಾಗಿ ಇಂದ್ರಿಯದ್ವಾರಾ, ತದಭಿಮಾನಿದೇವತೆಗಳ ದ್ವಾರಾ, ತತ್ವೇಶ್ವರಿಗೆ ಒಡೆಯುರಾದ ಶ್ರೀ ಮುಖ್ಯಪ್ರಾಣದೇವರದ್ವಾರಾ, ಸಮಸ್ತವಿಷಯಗಳನ್ನು ದೇಹಾಭಿಮಾನಿಯಾದ ಜೀವನ ಅನುಭವಕ್ಕೆ ತಂದುಕೊಡುತ್ತಾನೆ. ಎಂಬ ತತ್ವಾರ್ಥವನ್ನು ವಿವದಸುತ್ತಾರೆ. "ಗಂಧರಸ" ಎಂಬ ಈ ಪದ್ಯದಿಂದ

**ಪ್ರತಿಪದಾರ್ಥ :—**

**ಗಂಧ** = ಭೂತತ್ವಗತವಾದ ಗಂಧ ಎಂಬ ಗುಣವು (ನಾಸಿಕೇಂದಿಯಕ್ಕೆ ವಿಷಯು) **ರಸ** = ಅಪ್‌ತತ್ವಸಂಬಂಧವಾದ ರಸತನ್ಮಾತ್ರವು (ಜಿಹ್ವೆ) **ರೂಪ** = ತೇಜೋತತ್ವಗತ ರೂಪ ಎಂಬ ಗುಣವಿಶೇಷವು (ನೇತ್ರೇಂದ್ರಿಯಕ್ಕೆ ವಿಷಯ) **ಸ್ಪರೆಶ** = ವಾಯುತತ್ವಸಂಬಂಧೀಸ್ಪರ್ಶತನ್ಮಾತ್ರವು (ತ್ವಗಿಂದ್ರಿಯ) **ಶಬ್ದ** = ಆಕಾಶತತ್ವಗತ ಶಬ್ದ ಎಂಬ ಗುಣವು (ಶ್ರವಣೇಂದ್ರಿಯ) **ಒಂದು ತಾನಲ್ಲ** = ಪೂರ್ವೋಕ್ತ ಪಂಚತನ್ಮಾತ್ರೆಗಳಲ್ಲಿ ಒಂದೂ ತಾನಲ್ಲ. ಆದರೆ ಅವುಗಳ ಅಂತರ್ಗತನಾಗಿ, ತದಾಕಾರ, ತಚ್ಛಬ್ದವಾಚ್ಯನಾಗಿ ಇದ್ದಾನೆ. **ಅದರಪರ** = ಆಯಾಯಾ ಗಂಧರಸರೂಪಾದಿ **ಪೆಸರಿನಿಂದ** = ನಾಮಗಳಿಂದ (ಹೆಸರುಗಳಿಂದ) **ಕರೆಸುತ** = ಅಂತರ್ಗತನಾಗಿ ಕರೆಸುತ್ತಾ **ಜೀವರಿಗೆ** = ಸಮಸ್ತರಾದ ಜೀವಗಣಕ್ಕೆ **ತರ್ಪಕನು** = ಆಯಾಯಾ ತನ್ಮಾತ್ರಗಳದ್ವಾರಾ ತೃಪ್ತಿಪಡಿಸತಕ್ಕವನಾಗಿ **ತಾನಾಗಿ** = ತನಗೆತಾನೇ (ಸ್ವಯಂನಿಮನವಾಡುತ್ತಾ) **ಪೊಂದಿಕೊಂಡಿಹ** = ಸೇರಿಕೊಂಡಿದ್ದಾನೆ (ತನ್ಮಾತ್ರಾದಿಗಳಲ್ಲಿ ವ್ಯಾಪ್ತರೂಪದಿಂದ ಇದ್ದಾನೆ) **ಪರಮ ಕರುಣಾಸಿಂಧು** = ಉತ್ತಮರಾದ ತನ್ನಭಕ್ತರ ವಿಷಯದಲ್ಲಿ ದಯಾಸಮುದ್ರನಾಗಿದ್ದಾನೆ. **ಶಾಶ್ವತ** = ಶಶ್ವದೇಕಪ್ರಕಾರನಾಗಿರುವ **ಮನವೆ ಮೊದಲಾದ** = ಮನಸ್ಸು ಆದಿಯಾಗಿ **ಇಂದ್ರಿಯಗಳೊಳಗಿ**

**ದ್ದು** = ಪಂಚಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳಲ್ಲಿ (ಮನಸ್ಸೂ ಸೇರಿದಂತೆ ಏಕಾದಶೇಂದ್ರಿಯಗಳಲ್ಲಿ) ಅಂತರ್ಭೂತನಾಗಿ ವ್ಯಾಪ್ತ ರೂಪದಿಂದ ಇದ್ದು **ವಿಷಯಗಳ** = ಸ್ವರೂಪೇಂದ್ರಿಯಗಳಿಗೆ ಅನ್ಯವಾದ ಪ್ರಾಕೃತೇಂದ್ರಿಯಗತ ರೂಪ ರಸಾದಿ ವಿಷಯಗಳನ್ನು **ಭೋಗಿಸುತಿಹನು** = ತನ್ನ ಪ್ರತಿಬಿಂಬರಾದ ಜೀವರ ಅನುಭವಕ್ಕೆ ತಂದುಕೊಡುವುದಕ್ಕಾಗಿ, ಬಿಂಬ ಕ್ರಿಯಾದ್ವಾರಾ ಅನುಭವಿಸುವನು. ಅಂದರೆ ವಿಷಯಾದಿಸುಖಗಳಿಂದ ಭಿನ್ನ ನಾದಾಗ್ಯೂ, ಬಿಂಬಕ್ರಿಯಾನುಸಾರ ಪ್ರತಿಬಿಂಬದ ಕ್ರಿಯೆನಡೆಯುವುದರಿಂದ. ಆ ವಿಷಯಗಳಿಗೆ ಪ್ರೇರಕರೂಪದಿಂದ್ದು. ಜೀವರ ಅನುಭವಕ್ಕೆ ಆ ವಿಷಯು ಗಳನ್ನು ಇಂದ್ರಿಯದ್ವಾರಾ ತಂದುಕೊಡುವನು. ॥೩॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

• ಚತುರ್ವಿಂಶತಿಜಡತತ್ವಗಳಲ್ಲಿ ಸೇರಿದ ರಸರೂಪಾದಿ ತನ್ಮಾತ್ರಗತ ಜೀವನ ಮತ್ತು ಪರಮಾತ್ಮನ ವಿಷಯಗಳನ್ನು ವಿವರಿಸುತ್ತಾರೆ. ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದಗಳೆಂಬ ಪಂಚತನ್ಮಾತ್ರಗುಣಗಳು ಕ್ರಮವಾಗಿ ಮೂಗು, ನಾಲಿಗೆ, ಕಣ್ಣು, ಚರ್ಮ ಮತ್ತು ಕಿವಿ ಎಂಬ ಪಂಚ ಜ್ಞಾನೇಂದ್ರಿಯಗಳಿಗೆ ವಿಷಯುಗಳಾಗಿವೆ. ಇಚ್ಛಾದಿಗಳು ಮನೋತತ್ವದಲ್ಲಿ ಅವೆ. ಈ ಪಂಚತನ್ಮಾತ್ರಗಳಲ್ಲಿ ಒಂದೂ ತಾನಲ್ಲ. ಆದರೆ ಅವುಗಳ ಅಂತರ್ಗತನಾಗಿ ತದಾಕಾರತಚ್ಛಬ್ದವಾಚ್ಯನಾಗಿ ಇದ್ದಾನೆ. ಈ ಗಂಧಾದಿ ಐದು ತತ್ವಗಳೊಳಗೆ ಒಂದಾದರೂ ತಾನೇ ಆ ತದ್ರೂಪಕಾರನಾಗಿ ಪರಿಣಮಿಸಿದವನಲ್ಲ. ತದ್ಭಿನ್ನ ತದಂತರ್ಯಾಮಿಯಾಗಿದ್ದಾನೆ ಎಂದರ್ಥ. ದಿವ್ಯಸುವಾಸನೆಯಿಂದ ನಾಸಿಕ ದ್ವಯಕ್ಕೂ ಚಲೋರಸಗಳಿಂದ ಜಿಹ್ವೇಂದ್ರಿಯಕ್ಕೂ, ಅನೇಕ ವಸ್ತುಗಳನ್ನು ನೋಡೋಣದರಿಂದ ನೇತ್ರಗಳಿಗೂ, ಸ್ಪರ್ಶಜ್ಞಾನದಿಂದ ತ್ವಕ್ಕಿಗೂ, ಶಬ್ದಾನು ಭವದಿಂದ ಕರ್ಣಕ್ಕೂ ಆಹ್ಲಾದ ಕೊಡತಕ್ಕವ, ಅಂದರೆ, ತೃಪ್ತಿ ಕೊಡ

ತಕ್ಕವ. ಸ್ವಯಂ ಪಂಚಜ್ಞಾನೇಂದ್ರಿಯಗಳಿಗೆ ಬಾಹ್ಯ ವಿಷಯಗಳ ಸನ್ನಿಕರ್ಷ (ಸಂಬಂಧ) ಮಾಡುವವನಾಗಿದ್ದಾನೆ. ತ್ರಿವಿಧ ಜೀವರಾಶಿಗಳಲ್ಲಿ ಪೂರ್ವೋಕ್ತ ಪ್ರಕಾರ ತರ್ಪಕನಾದ ಕಾಲಕ್ಕೂ ಪಂಚತನ್ಮಾತ್ರಗಳು ತನಗೆ ಪ್ರೀತ್ಯಾಸ್ಪದರಾದ ಸುಭಕ್ತರ ಸುಮಾರ್ಗದಲ್ಲಿ ವರ್ತಿಸುವಂತೆ ಆಯಾ ಜ್ಞಾನೇಂದ್ರಿಯಗಳ ದ್ವಾರಾ ಪ್ರೇರಿಸುವನು. ಅವರವರ ಸ್ವರೂಪ ಯೋಗ್ಯತಾನುಸಾರ ಕ್ರಿಯೆ ನಡೆಯಿಸುವನು. ಅತ್ಯಣುವಾದ ಜೀವನು ಲಿಂಗದೇಹಾಂತರ್ಗತನಾಗಿ ಇದ್ದಾನೆ. ಅಂತಹ ಜೀವನು ಸ್ಥೂಲದೇಹಗತ ಜಡಗಳಾದ ಏಕಾದಶೇಂದ್ರಿಯಗಳಲ್ಲಿ ಏಕದೇಶಗತ ಅಲ್ಪವಾದ ದೀಪದೋಪಾದಿಯಲ್ಲಿ ಪ್ರಕಾಶತಃ ವ್ಯಾಪ್ತನಾಗಿದ್ದು, ದೇಹಾಭಿಮಾನಿಯಾದ ಜೀವನು ಅಹಂ ಸುಖೀ, ಅಹಂ ದುಃಖೀ ಎಂತ ಪ್ರತಿಬಂಧಕ ಸಾಮಗ್ರಿಯಿಂದ ಅವಿದ್ಯಾಯುಕ್ತನಾಗಿ, ಆರೋಪಿತದಿಂದ ಏತಾದೃಶನಾಗಿ ಸುಖದುಃಖಭೋಗ ಮಾಡುತ್ತಾ, ಪ್ರಾಕೃತೇಂದ್ರಿಯಗಳಲ್ಲಿ ವ್ಯಾಪ್ತನಾಗಿ, ಲಿಂಗಭಂಗ ಪರಿಯಂತ ಇರೋವನಾಗತಾನೆ. ಶ್ರೀ ಪರಮಾತ್ಮನು ಪೂರ್ವೋಕ್ತ ಪುರುಷರೂಪತ್ರಯಗಳಿಂದ ಸ್ಥೂಲದೇಹದಲ್ಲಿ. ಮಹತ್ತತ್ವದಲ್ಲಿ ಒಂದು ರೂಪ ಮತ್ತು ಪಂಚಜ್ಞಾನೇಂದ್ರಿಯಗಳಲ್ಲಿ ಒಂದು ರೂಪ. ಪಂಚಕರ್ಮೇಂದ್ರಿಯಗಳಲ್ಲಿ ಒಂದು ರೂಪ, ಈ ಪ್ರಕಾರ ರೂಪತ್ರಯಗಳಿಂದ ವ್ಯಾಪ್ತನಾಗಿ, ತತ್ತದ್ರಕ್ಷಕನಾಗಿ, ತದ್ಭಿನ್ನನಾಗಿ ಇದ್ದಾನೆ ಎಂತ ತಾತ್ಪರ್ಯ ॥ ೩ ॥

## (೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :—

ಗಂಧ, ರಸ, ರೂಪ, ಸ್ಪರ್ಶ, ಶಬ್ದಗಳೆಂಬ ಮಾತ್ರಾಗುಣಗಳಲ್ಲಿ ಶ್ರೀ ಪರಮಾತ್ಮನು ಯಾವುದೂ ತಾನಲ್ಲ. ಆದರೂ ಅವುಗಳಲ್ಲಿದ್ದು ಅವುಗಳಿಂದಾಗುವ ಕಾರ್ಯಗಳನ್ನು ತಾನೇ ಮಾಡಿ ಮಾಡಿಸುತ್ತಿರುವುದರಿಂದ, ಪರಮಾತ್ಮನೇ ಗಂಧರಸಾದಿ ಶಬ್ದವಾಚ್ಯನೆಂದು ವೇದಾದಿಗಳು ಹೇಳುತ್ತಿರುವುವು. ಅಂತೂ, ಶಬ್ದ ಸ್ಪರ್ಶಾದಿಗಳಲ್ಲಿದ್ದು ಜೀವರಿಗೆ ಅವುಗಳಿಂದಾಗುವ ಸುಖ ದುಃಖಾದಿಗಳನ್ನು ಉಣಿಸಿ ತೃಪ್ತಿಗೊಳಿಸುವನು. ಕರುಣಾಸಮುದ್ರನಾದ ಸ್ವಾಮಿಯು, ಮನಸ್ಸು, ಚಕ್ಷು, ಶ್ರೋತ್ರ ಮೊದಲಾದ ಇಂದ್ರಿಯ

ಳೊಳಗೆ ತದಾಕಾರನಾಗಿದ್ದು, ನೋಡುವುದು. ಕೇಳುವುದು. ಮೊದಲಾದವುಗಳನ್ನು ಜೀವರ ಕರ್ಮಾನುಸಾರವಾಗಿ ಮಾಡಿಸುತ್ತಾ, ಸುಖವನ್ನು ಮಾತ್ರ ತಾನು ಅನುಭವಿಸುವನು. ಅದೂಕೂಡ ಜೀವರ ಕ್ಷೇಮಕ್ಕಾಗಿಯೇ ಹೊರತು. ಪೂರ್ಣಕಾಮನಾದ ಸ್ವಾಮಿಗೆ ಈ ಅಲ್ಪಸುಖದಿಂದ ಆಗುವುದೇನು ? ಪರಮಾತ್ಮನು ಆ ಸುಖವನ್ನು ಸ್ವೀಕರಿಸದಿದ್ದರೆ, ಜೀವರಿಗೆ ಸುಖವಾಗದು. ಆದ್ದರಿಂದಲೇ ಸ್ವೀಕರಿಸುವನೆಂಬ ಭಾವವು.

**ವಿಶೇಷಾರ್ಥ :—**

ಗಂಧರಸಾದಿ ಮಾತ್ರಾಗುಣಗಳ ವಿವರ :— ಪಂಚಮಹಾಭೂತಗಳ ಪೈಕಿ ಭೂತತ್ವದ ಮಾತ್ರಾಗುಣವು ಗಂಧ. ಈ ಭೂತತ್ವವು ಜ್ಞಾನೇಂದ್ರಿಯಗಳಲ್ಲಿ ಒಂದಾದ ನಾಸಿಕದಲ್ಲಿರುವುದು. ಇದರ ಮಾತ್ರಾಗುಣವೇ ಗಂಧವಾದುದರಿಂದ ಮನುಷ್ಯರು ಸುವಾಸನೆಯನ್ನೂ, ದುರ್ವಾಸನೆಯನ್ನೂ ತಿಳಿದುಕೊಳ್ಳುವುದು ಗಂಧ ಗುಣವಿಶಿಷ್ಟವಾದ ಭೂತತ್ವದ ಗುಣವೆಂದು ತಿಳಿಯಬೇಕು. ಶ್ರೀ ಪರಮಾತ್ಮನು ನಾಸಿಕೇಂದ್ರಿಯದಲ್ಲಿ ತದಾಕಾರನಾಗಿದ್ದು ನಾಸಿಕೇಂದ್ರಿಯ ಎಂಬ ಹೆಸರಿನಿಂದಲೂ ಅದರಲ್ಲಿ ಅಡಗಿರುವ ಭೂತತ್ವದಲ್ಲಿಯೂ, ತನ್ಮಾತ್ರಾಗುಣವಾದ ಗಂಧದಲ್ಲಿಯೂ ತಾನಿದ್ದು ಸುಗಂಧವನ್ನು ತಾನು ಸ್ವೀಕರಿಸಿ, ಅದರಿಂದ ಜೀವರನ್ನು ತೃಪ್ತಿಪಡಿಸುವನು. ದುರ್ಗಂಧದಿಂದುಂಟಾಗುವ ಅಸಹ್ಯತವಾದ ದುಃಖವನ್ನು ತಾನುಣದೆ ಜೀವರಿಗೆ ಮಾತ್ರ ಕರ್ಮಾನುಸಾರವಾಗಿ ಉಣಿಸುವನು. ಅದೇಕೆಂದರೆ, ಪರಮಾತ್ಮನಿಗೆ ಯಾವುದಾದರೊಂದು ಪುಣ್ಯವನ್ನು ಕೊಟ್ಟರೆ, "ಮರಳಿ ತನಗರ್ಪಿಸಲು ಕೊಟ್ಟುದನಂತ ಮಡಿಮಾಡಿ" —ಎಂದು ದಾಸರಾಯರು ಮೇಲೆ ಹೇಳಿದಂತೆ, ಅದನ್ನು ತಾನು ಭೋಗಿಸಿ, ಅನಂತಗುಣವಧಿಕ ಮಾಡಿ ಕೊಡುವನು. ಹೀಗೆ ಭಕ್ತರು ಕೊಟ್ಟ ಪಾಪಗಳನ್ನು ತಾನು ಭೋಗಿಸಿದರೆ, ಅದನ್ನು ಅನಂತಗುಣಗಳಧಿಕಮಾಡಿ ಭಕ್ತಜನರಿಗೆ ಕೊಡಬೇಕಾಗುವುದರಿಂದ, ಶ್ರೀ ಪರಮಾತ್ಮನು ಭಕ್ತರು ಮಾಡಿದ ಪುಣ್ಯ ಪಾಪಗಳೆಲ್ಲವನ್ನೂ ತನಗೆ ಸಮರ್ಪಿಸಿದರೆ, ಪಾಪಗಳನ್ನು ತಾನು ಸ್ವೀಕರಿಸದೆ ಭಸ್ಮಮಾಡಿಬಿಡುವನು. ಇದಲ್ಲದೆ ಪರಮಾ

ತ್ಮನು ಆನಂದಸ್ವರೂಪನಾದುದರಿಂದ ಭಕ್ತರು ತನಗೊಪ್ಪಿಸುವ ಪಾಪರಾಶಿಗಳನ್ನು ಸುಟ್ಟು ಬೂದಿ ಮಾಡಿಬಿಡುವನು, ಅಭಕ್ತರು ಮಾಡುವ ಪಾಪಕೃತ್ಯದ ಫಲವನ್ನು ಅವರಿಗೇನೇ ಉಣಿಸುವನು. ದೇಹಗತವಾದ ಸುಖವನ್ನಾದರೂ ಭಕ್ತರ ಕ್ಷೇಮಕ್ಕಾಗಿ ತನ್ನ ಇಚ್ಛೆಯಿಂದ ತಾನಾಗಿ ಸ್ವೀಕರಿಸುವನಲ್ಲದೆ, ಪುಣ್ಯಪಾಪಗಳು ಸ್ವತಃ ಪರಮಾತ್ಮನನ್ನು ಏನೂ ಮಾಡಲಾರವು. ನೀರು ಎಲ್ಲವನ್ನೂ ತೋಯಿಸುವ ಶಕ್ತಿವುಳ್ಳದ್ದಾದರೂ, ತಾವರೆ ಎಲೆಗಳನ್ನು ಹೇಗೆ ತೋಯಿಸಲಾರದೊ, ಅಂತೆಯೇ, ಚಕ್ಷು ಶೋತ್ರಾದಿ ಇಂದ್ರಿಯ ಜನ್ಯವಾದ ಸುಖದುಃಖಾದಿಗಳು ಪರಮಾತ್ಮನನ್ನು ಮುಟ್ಟಲಾರವು. ಪರಮಾತ್ಮನು ನಿರ್ಲಿಪ್ತನಾಗಿರುವನು. ಹೀಗೆಯೇ ಇತರ ಕರ್ಮೇಂದ್ರಿಯಗಳ ವ್ಯಾಪಾರವೆಂದು ತಿಳಿಯಬೇಕು. ಆದರೆ ಚಕ್ಷು ಶ್ರೋತ್ರಾದಿಇಂದ್ರಿಯಗಳ ಪ್ರವೃತ್ತಿಗೆ ಮುಖ್ಯ ಕಾರಣವು ಮನಸ್ಸು. ಅದನ್ನು ಚಕ್ಷುಶ್ರೋತ್ರಾದಿಗಳಲ್ಲಡರಿದ್ದರೆ, ಆ ಇಂದ್ರಿಯ ವ್ಯಾಪಾರಗಳು ಯಾವುದೂ ನಡೆಯುವುದಿಲ್ಲ. ನಾವು ಅನ್ಯಮನಸ್ಕರಾಗಿದ್ದರೆ, ನಮ್ಮೆದುರಿನಲ್ಲಿ ನಿಂತಿದ್ದರೂ, ನಮಗೆ ಗೋಚರವಾಗುವುದಿಲ್ಲ. ಯಾರು ಏನು ಹೇಳಿದರೂ ಕೇಳಿಸುವುದಿಲ್ಲ. ಈ ವಿಷಯವು ಪ್ರತಿಯೊಬ್ಬರ ಅನುಭವಸಿದ್ಧವು. ಅದುಗಿರಿಂದಲೇ ಭಾಗವತದಲ್ಲಿ— "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ"— ಎಂದು ಹೇಳಿರುವರು. ಆದುದರಿಂದ ಎಲ್ಲಾ ಇಂದ್ರಿಯಗಳಿಗಿಂತಲೂ ಮನಸ್ಸೆಂಬ ಇಂದ್ರಿಯವೇ ದೊಡ್ಡದು. ಶ್ರೀ ಪರಮಾತ್ಮನು ಮನೋನಾಮಕನಾಗಿ ಮನದೊಳಿದ್ದು, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳಲ್ಲಿದ್ದು, ಕರ್ಮಗಳನ್ನು ಮಾಡಿಸಿ, ಸುಖವನ್ನು ತಾನುಂಡು ಜೀವರನ್ನು ತೃಪ್ತಿಪಡಿಸಿ, ದುಃಖಗಳನ್ನು ನಿವಾರಿಸಿ, ತಾನುಮಾತ್ರ ನಿರ್ಲಿಪ್ತನಾಗಿರುವನು. ||೩||

## (೩) "ಭಾವದರ್ಪಣಟೀಕಾ"— ವ್ಯಾಖ್ಯಾನ :

ಗಂಧಾದಿ ಪಂಚತನ್ಮಾತ್ರದಲ್ಲಿಯೂ, ಕರಣಗಳಲ್ಲೂ, ಸಹ ತಾನೇ ನಿಂತು, ಜೀವರಿಗೆ ತೃಪ್ತಿಪಡಿಸುತ್ತ, ವಿಷಯಗತಸ್ವಸ್ವರೂಪ ಸ್ವೀಕರಿಸುತ್ತಾನೆಂದು ಹೇಳುತ್ತಾರೆ– "ಗಂಧ"–ಎಂಬ ಪದ್ಯದಿಂದ.

**"ತತ್ರತತ್ರ ಸ್ಥಿತಸ್ತತ್ತಚ್ಛಬ್ದೈರ್ವಾಚ್ಯಃ ಸ ಮುಖ್ಯತಃ ॥ ತತ್ತದಾಕಾರಸಂಯುಕ್ತಃ ಸೌಧಾರ್ಯೋರ್ನಾದ್ಯ ವಿರೋಧತಃ"**—ಎಂಬ ಸತ್ತತ್ವರತ್ನಮಾಲಾವಚನ ಇರೋಣದರಿಂದ ಹೀಗಿದ್ದು, ವಿಷಯಗಳಲ್ಲದಂಥ ಸ್ವಸ್ವರೂಪವೇ ಸ್ವೀಕರಿಸುತ್ತಾನೆಂದು ತಾತ್ಪರ್ಯ.

**ಉಕ್ತಂಚ ಸತ್ತತ್ವರತ್ನಮಾಲಾಯಾಂ — "ಭುಂಕ್ತೇ ಸ್ವರೂಪಭೂತಾಂಸ್ತ್ವೆ ವಿವಿಧಾನ್ ವಿಷಯಾನ್ ಶುಭಾನಿತಿ ॥"** ತರ್ಪಕನು ಅಂದರೆ ತೃಪ್ತಿಪಡಿಸುವನು ॥ ೩ ॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ— (ಸಂಸ್ಕೃತಮೂಲ) :—

ಏವಂ ತತ್ ಸೃಷ್ಟ್ವೇತಿಗಿರೈವಾಸ್ಯ ಪೂರ್ವಂ ವಿಶ್ವಸ್ಯ ಸಿದ್ಧಿತಃ । ಇತ್ಯಾರ್ಯವಾಙ್ಮುದ್ರಾ ಮುದ್ರಿತಾಂ ಪರತುಂಡಮಂಜೂಷಾಂ ವಿಧಾಯ, ನ ತು ತ್ಯಥಾದಿಭಾವಃ ಹರೇಃ ಅಪಿತು ಸೃಷ್ಟ್ಯುಪರಿ ತತ್ತದ್ವಾಚ್ಯತ್ವೇನ ತತ್ರ ತತ್ರ ಪ್ರವೇಶಃ ಏವೇತ್ಯುಕ್ತಂ ಸ್ವಾದ್ಯರ್ಥಪ್ರಕಾರಂ ಮಾತ್ರೇಂದ್ರಿಯೇಷ್ವತಿ ದಿಶತಿ ॥ ಗಂಧೇತಿ ॥ ರಮಾ ಬ್ರಹ್ಮಾದಿ ಪ್ರಕೃತ್ಯಾದಿ ಚೇತನಾ ಚೇತನಾತ್ಮಕಂ ಸರ್ವಮಿಾಶಾಶ್ರಿತಂ ॥ ಸೋಽಪಿ ಸದಾ ಸರ್ವತ್ರ ಸಂಸ್ಥಿತಃ ॥ ತಥಾಪಿ ಸ್ಪರ್ಶವೈಧುರ್ಯಾತ್ । ನೈವ ತತ್ರ ನ ಸೋಽತ್ರ ಚ । ಅಸಂಗತ್ವಾತ್ ಅಸ್ಪರ್ಶೇನ ಅವಸ್ಥಾನಂ ಸರ್ವತ್ರ ಹರೇಃ ॥ ನ ಅನ್ಯೋನ್ಯ ಧರ್ಮ ಸಂಕ್ರಾಂತಿ ರಿತಿ ಸತ್ತತ್ವಂ ॥ ಭೋಗಿಸುತಿಹನ್ವಿತಿ ॥ ಶ್ರೋತ್ರಂ ಚಕ್ಷುಃ ಪಾಡ್ವರ್ಗಿಕಂ ಜಿಘ್ರತಿ ಷಡ್ಗುಣೇಶಃ ಇತಿ, ಭುಕ್ತೇ ಹೃಷೀಕೈರ್ಮಧುಸಾರಘಮಿತಿ ॥ ಅವಧಾರಣೇ ಘ ಶಬ್ದಃ ಸ್ಯಾತ್ಸಾರಮಾತ್ರಂ ತು ಸಾರಘಂ ಇತಿ ಶಬ್ದನಿರ್ಣಯೇ ಚ ॥ ಇದಾನೀಂ ಸ್ವರೂಪಭೂತ ವಿಷಯಾನುಭವಪ್ರಕಾರಮಾಹೇತಿ ಶ್ರೀ ಸತ್ತತ್ವರತ್ನಮಾಲಾ ಟೀಕಾಯಾಂ ಚ ॥ ತನ್ಮೂಲೇ– "ಭುಂಕ್ತೇ ಸ್ವರೂಪಭೂತಾಂಸ್ತಾನ್ ವಿವಿಧಾನ್ವಿಷಯಾನ್ ಶುಭಾನ್"॥ ಭಕ್ಷ್ಯ ಭೋಜ್ಯಫಲಕ್ಷೀರ ಸ್ರಕ್ ಚಂದನಮುಖಾನಪಿ । ಅನಂತೇಂದ್ರಿಯ ಸಂಭೋಗ್ಯಾನ್ । ಶಬ್ದ

ರೂಪರಸಸ್ಪರ್ಶ ಗಂಧಾದ್ಯಾಕೃತಿರೀಶ್ವರಃ ॥ ಭೋಗ್ಯಂ ಭೋಕ್ತಾ ಚ ಭೋಗಶ್ಚ ಭೋಜಕಶ್ಚೈಕ ಏವ ತು । ಅತೋಹ್ಯೇಕೋ ಭೋಜ್ಯ ಭೋಕ್ತೃ ಭೋಗಾದಿ ವ್ಯವಹಾರ ಭಾಗಿತಿ ॥ ತಥಾಚೈವಂ ಬಿಂಬಾರ್ಚಕೇನ ಭಾವ್ಯಂ ತೇ ಸುಖಾತ್ಮಮೂರ್ತಿಷು ಇತಿ ರಸರಂಜನೀಮುದ್ರಯಾ ಪತ್ರಂ ಪುಷ್ಪಂ ಮಿತ್ಯತ್ರ ನಿಷಿದ್ಧಾನಾಮಪಿ ಅರ್ಪಣೀಯಕೋಟಿನಿವೇಶೇ, ನತ್ವವಿಹಿತಂ ಪತ್ರಾದಿ ; ತತ್ರ ನಿಷೇಧೋಕ್ತೇಃ ಪಾರಾಷದಾವಿತಿ ಗೀತಾಭಾಷ್ಯೋಕ್ತೇಶ್ಚ. ಸುಖರೂಪೋ ಬಿಂಬಃ ಬಹುರೂಪೀ ಭೂತ್ವಾ ವಿಧಿ ನಿಯತಾತ್ಮ ಪ್ರತಿಬಿಂಬಾರ್ಪಿತದ್ಭೋಜ್ಯ ಶುಭವಿಷಯಗ ಸುಖರೂಪೈಃ ಅಲಂ ರಮತೇ ॥ ಅಶುಭಸ್ಯ ಅಭೋಗ್ಯತ್ವಾನ್ನಾರ್ಪಣಂ । ನನು ಸುಖಾಕತ್ಮಕತ್ವೇ ಸ್ಮೃತಾ ಕುತಃ ಕ್ಲೇಶಾದಿ ? ತಥಾಚಿಂತನಂ ಚ ಕಥಂ ? ಇತಿಚೇದತ್ರಬ್ರೂಮಃ ॥ ಮೂಲಮವತಾರಿಕಂ ಸತ್ತತ್ವರತ್ನಮಾಲಾಟೀಕಾಯಾಂ ನನ್ವೇವಂ ಮುಕ್ತಿಯೋಗ್ಯಾನಾಂ ಅನಾದಿಕಾಲಮಾರಭ್ಯ ಜ್ಞಾನಾನಂದ ಸ್ವಭಾವತ್ವಾದಿಕಂ, ಕಥಂ ತರ್ಹಿ ಅಜ್ಞಾನ ಮಿಥ್ಯಾಜ್ಞಾನೇ ॥ ರಾಗ ದ್ವೇಷ ಭಯ ಕ್ರೋಧಾಃ ಕ್ಷುತ್ಪಿಪಾಸಾಶ್ರಮಸ್ತಥಾ ॥ ಚಿಂತಾಜನಿರ್ಜರೋತ್ಪತ್ತಿ ದುಃಖಾದ್ಯನ್ಯಾಕೃತಿಃ ಕುತಃ ॥ ಇತ್ಯತಸ್ತನ್ನಿಮಿತ್ತಮಾಹ ॥ ॥ ಗುಣೇತಿ ॥ "ಗುಣರೂಪಾ". ಅಪಿಹ್ಯೇತೇ ಸ್ಮೃತಿಸಂಸ್ಥಾಃ ಹರೀಚ್ಛಯಾ ॥ ಮಾಯಾಖ್ಯಯಾ ಮಹಾಲಕ್ಷ್ಮ್ಯಪ್ರಕೃತ್ಯಾದ್ಯಭಿಮಾನಯಾ । ತಥಾಹಿ ॥ ಪರಮೇಶ್ವರೇಚ್ಛಾಪ್ರೇರಿತಾ ಮಹಾಲಕ್ಷ್ಮೀಃ ಸ್ವಯಂಮೋಹಕತ್ವೇನ ಮಾಯಾನಾಮಿಕಾ ಸ್ವಾಭಿಮನ್ಯಮಾನ ಜೀವಾವರಣ ಭೂತಬಂಧಕಪ್ರಕೃತಿಂ ಅಧಿಷ್ಠಾಯ ಶ್ರೀ ಭೂ ದುರ್ಗಾರೂಪೇಣ ಗುಣತ್ರಯ ನಿಯಮನಪೂರ್ವಕಂ ॥

"ಸತ್ವಾತ್ ಸಂಜಾಯತೇ ಜ್ಞಾನಂ"-ಇತ್ಯಾದ್ಯುಕ್ತರೀತ್ಯಾ ತತ್ತದ್ಯೋಗ್ಯತಾನುಸಾರೇಣ ವಿವಿಧವಿಚಿತ್ರ ವಿಕಾರ ವಿಶೇಷಾನ್ ಜನಯಂತೀ, ಅಹ ಮಜ್ಞೋಮಾಮನ್ಯಂಚನ ಜಾನಾಮಿತ್ಯೇವಂ ಪ್ರಕಾರಂ ಅನಾದಿಸಿದ್ಧ ಭಾವ ರೂಪಮಜ್ಞಾನಮಪೋದ್ಬಲಯಂತೀ, ಸ್ವರೂಪ ಭೂತಜ್ಞಾನಾನಂದಾದಿ

ಗುಣಾನುಭವ ಪ್ರತಿಬಂಧಕತಯಾ ಅನಾದಿತಃ ಸ್ವಾತಿಸಮಿಾಪವರ್ತಮಾನಾ ನಾದಿ ಸಖಿಭೂತ ಪರಮಮಂಗಳಾಗಣಿತ ಗುಣಗಣಪರಿಪೂರ್ಣ ರಮಾರಮಣ ವಿಷಯಕ ಸ್ವಯೋಗ್ಯಾಪರೋಕ್ಷಪ್ರತಿಬಂಧಕತಯಾ ಚ ಜೀವಾಚ್ಛಾದಕ ಪರಮಾದಿಕಾಖ್ಯಂ ಪ್ರಕೃತ್ಯಪರನಾಮಕಂ ಸಂತತ ದುಃಖಾನುಭವಯೋಗ್ಯಂ ಜೀವೇತು ಪ್ರಾತಿಸ್ವಿಕಂ ಸ್ಥಿತಂ. ವಾಣ್ಯಾಮಾಶಚ್ಯಾದಿ ನಿಯತಂ ದ್ವಿವಿಧಂ ನಿರ್ವಿತ್ತೀಕೃತ್ಯಾನಾದಿಕರ್ಮಪರಂಪರಾಂ ಅಧಿಷ್ಠಾಯ ತಾನ್ ಉದ್ಬೋದಯಂತೀ, ಷೋಡಶಕಲಾತ್ಮಕ ಲಿಂಗದೇಹೇನ ಚ ಜೀವಮಾವೃತ್ಯ ತದ್ಗತಂ ಬಾಹ್ಯಾಂತಃಕರಣಾ ಅಧಿಷ್ಠಾಯ, ದೇಹೇಂದ್ರಿಯಾಂತಃಕರಣಾದೌ ತದನುಬಂಧಿಷು ಚ ದೃಢತರಾಭಿಮಾನಮುತ್ಪಾದ್ಯ ಅವಿದ್ಯಮಾನಸ್ವಾತಂತ್ರ್ಯಾದಿ ವಿಷಯಕ ವಿವಿಧಭ್ರಮಂ ಸಂಪಾದ್ಯ, ನಾನಾವಿಧಮೋಹಜಾಲಾವೃತೇ ಮನಸಿ ಸುಖದುಃಖ ಭ್ರಮ ಚಿಂತಾಕ್ಷುತ್ಪಿಪಾಸಾದಿಕಂ ವಿವಿಧವಿಕಾರಮುಪಜನಯಿತ್ವಾ, ಜಪಾಕುಸುಮ ಸನ್ನಿಧಾಪಿತ ಸ್ಫಟಿಕರಕ್ತಿಮೇವ ಪರಮಸ್ವಚ್ಛತಮೇ ಜೀವಸ್ವರೂಪೇ ಸತ್ಯಪಿ, ತದ್ಬಾಹ್ಯಮನಸಿ ಸುಖದುಃಖಾತ್ಮನಾ ವಿಕೃತೇ, ತತ್ರ ಸ್ವರೂಪಾಂತಃಕರಣಸ್ಯ ಅಂಗಾರವಹ್ನಿವತ್ ವಿಮಿಶ್ರೀಭಾವ ರೂಪ ಸನ್ನಿಧಾನಬಲೇನ ಭಿನ್ನಮೇವ ನೀಚ್ಚಚ್ಚೋತಾ ಚಿಂತನಾದಿರೂಪಂ ವಿಕ್ರಿಯಾವಿಶೇಷಂ ಸ್ವರೂಪಏವ ಜನಯಂತೀ, ಪುನಶ್ಚ ಕಾಮಕರ್ಮಾದೀನಿ ಕಾರಯಂತೀ, ಸರ್ವತ್ರ ಪರಮಪ್ರಯೋಜಕಂ ವಾಣೀವಲ್ಲಭಂ ಅವಾಂತರ ಪ್ರಯೋಜಕ ಭವಶಕ್ರಾದಿದೇವಾಂಶ್ಚ ನಿಯಾಮಯಂತೀ ಖಲುಬಂಧಿಕೇತಿ ॥ ಸ್ಥೂಲಭೋಗಕ್ರಮಾಶ್ಚಾಗ್ರೇ ವಕ್ಷ್ಯತೇ ॥ ೩ ||

**ಕನ್ನಡಾನುವಾದ :—**

ಭಗವಂತನು ಜಗತ್ತನ್ನು ಸೃಷ್ಟಿಮಾಡಿದನಂತರ, ಅದರಲ್ಲಿ ಪ್ರವೇಶಿಸುತ್ತಾನೆ. ಅಂದರೆ ಅಂತರ್ಭೂತನಾಗಿ ವ್ಯಾಪಕನಾಗಿರುತ್ತಾನೆ. ಇದರಿಂದಲೇ ಅವನಿಗೆ **"ಸತ್‌ತ್ಯತ್"** —ಎಂದು ನಾಮಧೇಯ. ಶ್ರುತಿವಚನರೀತ್ಯಾ ಪ್ರಥಮತಃ ವಿಶ್ವಸೃಷ್ಟಿ, ತದನಂತರ ಜಗತ್ತಿನಲ್ಲಿ ಪ್ರವೇಶ, ಸಂತರ **ಸತ್** ಶಬ್ದವಾಚ್ಯನಾಗಿರುತ್ತಾನೆ. **"ಸಚ್ಚತ್ಯಚ್ಚಾಭವತ್"** ಎಂಬ ವಾಕ್ಯದಲ್ಲಿ-

ಪೂರ್ವದಲ್ಲಿಯೇ ವಿಶ್ವಸೃಷ್ಟಿಯಾಗಿರುತ್ತದೆ. ಆಕಾರಣದಿಂದ ಜಗತ್ತಿಗೆ ಬ್ರಹ್ಮಭಾವವು ಎಂದೆಂದಿಗೂ ಬರುವುದಿಲ್ಲ" ಎಂದು ಶ್ರೀಮನ್ಮಧ್ವಮುನಿಗಳು ಜಗತ್ತಿಗೆ ಸಾರುತ್ತಾ, ಪರವಾದಿಗಳ ಬಾಯನ್ನು ದಿಗ್ಬಂಧನ ಮಾಡಿರುತ್ತಾರೆ. ಅಂತೆಯೇ ಜಯತೀರ್ಥ ಶ್ರೀಮಚ್ಚರಣರ ವಚನವಿದೆ.

ರಮಾ—ಬಹ್ಮ—ಪ್ರಕೃತಿ ಮುಂತಾದ ಚೇತನಾಚೇತನಾತ್ಮಕವಾದ ಸಮಸ್ತ ವಿಶ್ವಕ್ಕೆ ಶ್ರೀಹರಿಯೇ ಮುಖ್ಯಾಶ್ರಯನು. ಅಂತಹ ಪರಮಾತ್ಮನಾದರೋ ಸರ್ವತ್ರವ್ಯಾಪ್ತನು. ಆದರೂ ತತ್ಸಂಬಂಧವಾದ ಗುಣಧರ್ಮಗಳ ಸ್ಪರ್ಶವು ಅವನಿಗೆ ಲವಲೇಶವಾದರೂ ಇಲ್ಲವು. ಆದ್ದರಿಂದ **"ಅಸಂಗ"** ನೆನಿಸಿಕೊಳ್ಳುತ್ತಾನೆ. "ಪರಮಾತ್ಮನು ಅಸಂಗನು. ಸರ್ವತ್ರವ್ಯಾಪ್ತನಾದಾಗ್ಯೂ ನಿರ್ಲಿಪ್ತನು" —ಎಂದು **ಸತ್ತತ್ವರತ್ನಮಾಲಾ ವಚನ.**

**"ಭೋಗಿಸುತಿಹನು"** —ಎಂಬಲ್ಲಿ "ಶ್ರೋತ್ರಂ ಚಕ್ಷುಃ ಷಾಡ್ವರ್ಗಿಕಂ ಜಘ್ರತಿ ಷಡ್ಗುಣೇಶಃ" ಇತಿ ಭುಂಕ್ತೇ ಹೃಷೀಕೈಃ ಮಧುಸಾರಘಂ ಇತಿ ಎಂಬುದಾಗಿ **ಭಾಗವತವಚನವಿದೆ.** ಅಂದರೆ, "ಪರಮಾತ್ಮನು ಸ್ವರೂಪಭೂತವಾದ ಶುಭಸಾರವನ್ನು ಮಾತ್ರ ಸ್ವೀಕರಿಸುತ್ತಾನೆ. ಹರಿಯೇ ಭೋಗ್ಯರೂಪನೂ ಹೌದು. ಭೋಜಕನೂ ಸರಿ. ಭೋಜನವನ್ನು ಮಾಡಿಸುವವನೂ ಅವನೇ. ಭೋಗ್ಯ-ಭೋಕ್ತೃ-ಭೋಗ ಇವುಗಳಿಗೆ ಮುಖ್ಯ ವಿಷಯನು" ಎಂದು ಪ್ರಮಾಣವಿದೆ. **"ತೇ ಸುಖಾತ್ಮಮೂರ್ತಿಷು"— ಎಂದು ರಸರಂಜಿನಿಯ** ವಚನ. ಆದ್ದರಿಂದ ನಿಷಿದ್ಧಪದಾರ್ಥಗಳು ಸಮರ್ಪಣೆಗೆ ಯೋಗ್ಯವಲ್ಲ —ಎಂದು **ವರಹಾ** ಮುಂತಾದ ಪುರಾಣವಚನಗಳಿವೆ. ಬಿಂಬನು ಸುಖಸ್ವರೂಪನು (ಪೂರ್ಣಾನಂದಮಯನು) ಆ ಕಾರಣದಿಂದ ವಿಧಿಬದ್ಧನಾದ ಪ್ರತಿಬಿಂಬನು (ಜೀವನು) ಅರ್ಪಿಸುವ ಆಯಾ ಭೋಜ್ಯ ಪದಾರ್ಥಗಳ ಸಾರಗಳಲ್ಲಿರುವ ತನ್ನ ರೂಪಗಳಲ್ಲಿ ರಮಿಸುವನು.

ಜೀವರು ಜ್ಞಾನಾನಂದಸ್ವರೂಪರಾದರೂ ಹರಿಯ ಇಚ್ಛೆಯಂತೆ ಪ್ರಕೃತ್ಯಭಿಮಾನಿಗಳಾದ ಲಕ್ಷ್ಮೀದೇವಿಯರ ಮಾಯೆಯಿಂದ ಬದ್ಧರಾಗಿ ಸಂಸಾರದಲ್ಲಿ ಇರುತ್ತಾರೆ. ಶ್ರೀಹರಿಯ ಇಚ್ಛೆಯಿಂದ ಪ್ರೇರಿತಳಾಗಿ ಮಹಾ

ಲಕ್ಷ್ಮೀದೇವಿಯು ಮಾಯಾನಾಮಕಳಾಗಿ ಜೀವರ ಸ್ವರೂಪವನ್ನು ಆವರಿಸುವ ಬಂಧಕ ಜಡಪ್ರಕೃತಿಯಲ್ಲಿ ಇದ್ದು, ಶ್ರೀ ಭೂ ದುರ್ಗಾರೂಪಗಳಿಂದ ತ್ರಿಗುಣಾಭಿಮಾನಿಯಾಗಿ ಜೀವರನ್ನು ನಿಯಮಿಸುತ್ತಾಳೆ. ಅವರವರ ಯೋಗ್ಯತಾನುಸಾರ ಚಿತ್ರವಿಚಿತ್ರವಾದ ವಿಕಾರಗಳನ್ನುಂಟುಮಾಡುವಳು. ಆದರಿಂದ ಅನಾದಿಕಾಲದಿಂದಲೂ ಸಿದ್ಧವಾಗಿರುವ ಭಾವರೂಪಅಜ್ಞಾನವು ಇನ್ನೂ ಅಧಿಕವಾಗಿ, ಜೀವರ ಸ್ವರೂಪಭೂತವಾದ ಜ್ಞಾನಾನಂದ ಗುಣಗಳ ಅನುಭವವನ್ನು ಪ್ರತಿಬಂಧಿಸುತ್ತಾಳೆ. ಇದರಿಂದ ಅತ್ಯಂತಆಪ್ತನಾಗಿ ಸಮೀಪದಲ್ಲಿರುವ ಅಗಣಿತಗುಣಗಣಪರಿಪೂರ್ಣನಾದ ರಮಾಪತಿಯ ವಿಷಯಕವಾದ ಅಪರೋಕ್ಷಜ್ಞಾನವು ಪ್ರತಿಬಂಧಿತವಾಗುವುದು. ಜೀವರ ಅನಾದಿಕರ್ಮವನ್ನು ಉದ್ಬೋಧಿಸುತ್ತಾ, ಹದಿನಾರು ಕಳೆಗಳಿಂದ ಕೂಡಿದ (ಷೋಡಶಾತ್ಮಕವಾದ) ಲಿಂಗದೇಹದಿಂದ ಜೀವರನ್ನು ಆವರಿಸುತ್ತಾಳೆ. ಇದರಿಂದ ಜೀವನಿಗೆ ದೇಹಾಭಿಮಾನವುಂಟಾಗಿ, ಮನಸ್ಸಿನಲ್ಲಿ ಸುಖ, ದುಃಖ, ಭ್ರಮೆ, ಚಿಂತೆ, ಹಸಿವು, ನೀರಡಿಕೆ ಮುಂತಾದ ನಾನಾಪ್ರಕಾರದ ವಿಕಾರಗಳು ಹುಟ್ಟುತ್ತವೆ. ॥ ೩ ॥

೫) "ಗುರುಹೃದಯ ಪ್ರಕಾಶಿಕೆ"— ವ್ಯಾಖ್ಯಾನ :—

ಗಂಧ, ರಸ, ರೂಪ, ಸ್ಪರ್ಶಗಳು ಜಡವಾದ್ದರಿಂದ ದೇವರಲ್ಲ. ಗಂಧಾದಿನಾಮಗಳನ್ನು ತಾನು ಧರಿಸಿ, ಜೀವರಿಗೆ ಘ್ರಾಣೇಂದ್ರಿಯ ಪ್ರೀತಿ ಕೊಡುತ್ತಾ, ಮನಸ್ಸು ಮೊದಲಾದ ಕರಣಗಳಲ್ಲಿ ವ್ಯಾಪ್ತನಾಗಿ, ವಿಷಯಗತ ಸ್ವರೂಪರಸಾನುಭವಿಸುವನು. ಶಾಶ್ವತದಯಾಸಿಂಧುವುಇದರಿಂದ **"ಪುಣ್ಯೋಗಂಧಃ ಪೃಥಿವ್ಯಾಂಚ ತೇಜಶ್ಚಾಸ್ಮಿವಿಭಾವಸೌ।ರಸೋಽಹಮಪ್ಸು ಕೌಂತೇಯ ॥" ಎಂಬ ಗೀತಾವಚನವೂ ಮತ್ತು "ಅಪ್ಸುಸ್ಥಿತ್ವಾ ರಸಯತಿ ರಸನಾಮಾ ತತೋ ಹರಿಃ। ಪುಣ್ಯಾಪುಣ್ಯಂ ಗಂಧಯತಿ" ಇತ್ಯಾದಿ ಗೀತಾತಾತ್ಪರ್ಯ ರೀತ್ಯಾ** ತತ್ತದ್ಗುಣನಿಮಿತ್ತದಿಂದ ಆಯಾಯಾ ಹೆಸರುಳ್ಳವನು. ದೇವರು. ಜಡ ದೇವರಲ್ಲವೆಂಬರ್ಥ ವಿವರಿಸಿತು ॥೩॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಪೃಥ್ವಿ, ಅಪ್ಪು, ತೇಜಸ್ಸು, ವಾಯು ಮತ್ತು ಆಕಾಶವೆಂಬ ಜಡತತ್ವಗಳಿಗೆ ಪಂಚಮಹಾಭೂತಗಳೆಂದು ನಾಮ. ಈ ಪಂಚಭೂತಗಳಿಗೆ ಸಂಬಂಧಪಟ್ಟ ಮಾತ್ರಾಗುಣಗಳು ಕ್ರಮವಾಗಿ ಗಂಧ, ರಸ, ರೂಪ, ಸ್ಪರ್ಶ, ಮತ್ತು ಶಬ್ದ ಎಂಬುದಾಗಿ ತನ್ಮಾತ್ರಾಪಂಚಕಗಳು, ಪಂಚಜ್ಞಾನೇಂದ್ರಿಯಗಳಾದ ನಾಸಿಕ, ಜಿಹ್ವೆ, ನೇತ್ರ, ಚರ್ಮ ಮತ್ತು ಶ್ರವಣೇಂದ್ರಿಯ ಇವುಗಳಿಗೆ ಪಂಚಭೂತಸಂಬಂಧವಾದ ತನ್ಮಾತ್ರಾಗುಣಗಳ ವಿಷಯಸನ್ನಿಕರ್ಷವಾದಾಗ, ತತ್ಸಂಬಂಧವಾದ ಜ್ಞಾನವುಂಟಾಗುತ್ತದೆ. ಈ ಪಂಚತನ್ಮಾತ್ರಗಳೆಲ್ಲವೂ ಜಡವಾದ್ದರಿಂದ, ಜಡದಿಂದ ಪರಮಭಿನ್ನನಾದ ಪರಮಾತ್ಮನು ಅವುಗಳಲ್ಲಿ ಒಂದೂ ತಾನಲ್ಲ. ಆದರೆ ಪ್ರತಿಯೊಂದು ಪಂಚಮಹಾಭೂತಗಳಲ್ಲಿಯೂ ಪರಮಾತ್ಮನು ವ್ಯಾಪ್ತನಾಗಿದ್ದು, ತನ್ಮಾತ್ರಾಗುಣಗಳಿಗೆ ನಿಯಾಮಕನಾಗಿ, ಜೀವರಿಗೆ ಜ್ಞಾನವನ್ನು ಉದ್ಬೋಧಿಸುವನು. ತದಾಕಾರನಾಗಿ ಆಯಾಯಾ ಜಡಭೂತ, ತನ್ಮಾತ್ರ ಮತ್ತು ಇಂದ್ರಿಯಗಳ ಹೆಸರಿನಿಂದಲೇ ವಾಚ್ಯನಾಗಿದ್ದು, ಜೀವರಿಗೆ ತೃಪ್ತಿ ಕೊಡುವನು. ಇಂದ್ರಿಯಗಳಿಗೆ ತತ್ತತ್ಸಂಬಂಧವಾದ ವಿಷಯಗಳ ಸನ್ನಿಕರ್ಷವುಂಟಾದಾಗ, ಆ ವಿಷಯಗತ ಭಗವದ್ರೂಪಗಳಲ್ಲಿ ಸ್ವರಮಣನಾದ ಸ್ವಾಮಿಯು ಸ್ವಯಂ ರಮಿಸುತ್ತಾನೆ ಅಂದರೆ ಸ್ವಸ್ವರೂಪರಸಾನುಭವ ಮಾಡುತ್ತಾನೆ. ಹೀಗೆ ತನ್ನಿಂದ ಅಭಿನ್ನವಾದ ಜಡ ಹಾಗೂ ಚೇತನಾಂತರ್ಗತ ರೂಪಗಳಲ್ಲಿ ರಮಿಸುವುದರಿಂದಲೇ, ಬಿಂಬಕ್ರಿಯಾದ್ವಾರ, ಪ್ರತಿಬಿಂಬನಾದ ಜೀವನಿಗೆ ತೃಪ್ತಿಯುಂಟಾಗುವುದು. ಹೀಗೆ ಇಂದ್ರಿಯ—ಜಡಭೂತತ್ವ—ತನ್ಮಾತ್ರಾಗುಣ ಈ ತ್ರಿಕೋಣಗತ ವ್ಯೂಹದಲ್ಲಿ ವಿಷ್ಣುವು ತಾನೇ ತಾನಾಗಿ ಓತಪ್ರೋತನಾಗಿ ವ್ಯಾಪ್ತನಾಗಿರುವುದರಿಂದಲೇ ಆಯಾಯಾ ಇಂದ್ರಿಯಗತ ವ್ಯಾಪಾರಗಳು ನಡೆಯುವುವು. ಅವುಗಳಲ್ಲಿ ತಾನಿಟ್ಟಿರುವ ಸ್ವರೂಪವನ್ನು ತೆಗೆದುಬಿಟ್ಟರೆ, ಅವು ನಿಷ್ಕ್ರಿಯವಾಗುವುವು. ಜೀವರ ಅನಾದಿಕರ್ಮ ಮತ್ತು ಸ್ವರೂಪಯೋಗ್ಯತೆಗನುಸಾರ ವ್ಯಾಪಾರಗಳನ್ನು ಮಾಡಿ, ಮಾಡಿಸುತ್ತಾ, ಜೀವರ ಕರ್ಮಕ್ಷಯಕ್ಕೆ ತಾನೇ ಮುಖ್ಯ ಕಾರಣನಾಗಿರುವ ಶ್ರೀ ಪರಮಾತ್ಮನು ಪರಮಕರುಣಾಸಿಂಧು,

ಶಶ್ವದೇಕಪ್ರಕಾರನಾಗಿ ದೇಶ, ಕಾಲ ಗುಣಾತೀತನಾಗಿರುವ ಜಗತ್ಸ್ವಾಮಿಯು ಶಾಶ್ವತನು. ಇಂತಹ ಶಾಶ್ವತರೂಪೀ ಶ್ರೀ ಪರಮಾತ್ಮನು ಮನಸ್ಸೇ ಮೊದಲಾದ ಇಂದ್ರಿಯಗಳಿಗೆ ಪ್ರೇರಕನಾಗಿ ನಿಯಾಮಕನಾಗಿರುವನು. ಮನಸ್ಸು ಜ್ಞಾನೇಂದ್ರಿಯಗಳು ಮತ್ತು ಕರ್ಮೇಂದ್ರಿಯಗಳನ್ನು ನಿಯಂತ್ರಿಸುವುದು. ಇಂತಹ ಏಕಾದಶೇಂದ್ರಿಯಗಳು ಹಾಗೂ ಕರಣಾಭಿಮಾನಿಗಳಲ್ಲಿ ವ್ಯಾಪ್ತರೂಪದಿಂದ ಇದ್ದು, ಸ್ವರಮಣನಾಗಿ ವಿಷಯಗತ ಸ್ವಾಖ್ಯರಸವನ್ನು ಉಪಭೋಗಿಸುವನು. ಇದರಿಂದ ಬಿಂಬಕ್ರಿಯಾ; ತದ್ವಾರಾ ಜೀವರಿಗೆ ತೃಪ್ತಿಪ್ರದನು. ಗೋಳಕಗತ, ಇಂದ್ರಿಯಗತ, ಜಡತತ್ವಗತ, ತನ್ಮಾತ್ರಾಗುಣಗತ ಸ್ವಾಖ್ಯರೂಪವಾದ ಶುಭರಸವನ್ನು ಮಾತ್ರ ಸ್ವೀಕರಿಸುವನು. ಇದರಿಂದ ಜೀವರಿಗೆ ಪುಣ್ಯಪ್ರಾಪ್ತಿ. ಪಾಪಸಂಬಂಧವಾದ ಕರ್ಮಗಳನ್ನು ತನ್ನ ದೃಷ್ಟಿಯಿಂದ ಭಸ್ಮ ಮಾಡುವನು. ಇದರಿಂದ ಜೀವನಿಗೆ ಪಾಪಲೇಪವಿಲ್ಲ. ಈ ಉತ್ತಮಾನುಸಂಧಾನದಿಂದಲೇ ಜೀವನು ಪರಮಾತ್ಮನಲ್ಲಿ ಮಾಡುವ "ದ್ವಂದ್ವ ಕರ್ಮಸಮರ್ಪಣೆಯು" ಫಲಪ್ರಾಪ್ತಿಯು. ಹೀಗೆ ದಾಸರಾಯರು ಜಡ ಮತ್ತು ಆ ತತ್ವಾಭಿಮಾನಿಗಳಾದ ಚೇತನರಿಂದಲೂ ಪರಮಾತ್ಮನು ಅತ್ಯಂತಭಿನ್ನನು ಎಂದು ವಿವರಿಸಿದ್ದಾರೆ. || ೩ ||

## ಪದ್ಯ (೪)

**ಮೂಲ :—**

ಶ್ರವಣ ನಯನ ಘ್ರಾಣ ತ್ವಗ್ರಸ |
ನಿವುಗಳಲಿ ವಾಕ್ ಪಾಣಿಪಾದಾ |
ದ್ಯವಯವಗಳಲಿ ತದ್ಗುಣಗಳಲಿ ತತ್ಪತಿಗಳೊಳಗೆ ||
ಪ್ರವಿತತನು ತಾನಾಗಿ ಕೃತಿಪತಿ |
ವಿವಿಧಕರ್ಮವ ಮಾಡಿ ಮಾಡಿಸಿ |
ಭವಕೆ ಕಾರಣನಾಗಿ ತಿರುಗಿಸುತಿಹನು ತಿಳಿಸದೆಲೆ ||೪||

**ಅವತರಣಿಕೆ:—**

ಜ್ಞಾನ ಮತ್ತು ಕರ್ಮೇಂದ್ರಿಯಗಳಿಲ್ಲಿ ಹಾಗೂ ಆಯಾಯಾ ಕರಣಾಭಿಮಾನಿಗಳಲ್ಲಿ ತಾನು ವ್ಯಾಪ್ತನಾಗಿದ್ದು, ಕೃತಿಪತಿಯಾದ ಪ್ರದ್ಯುಮ್ನರೂಪೀ ಶ್ರೀಹರಿಯು ಜೀವರಲ್ಲಿ ವಿವಿಧ ಕರ್ಮಗಳನ್ನು ಮಾಡಿಸುವ ವ್ಯಾಪಾರ ವಿಶೇಷಗಳನ್ನು ಹೇಳುತ್ತಾರೆ— "ಶ್ರವಣನಯನ" —ಎಂಬ ಈ ಪದ್ಯದಿಂದ

**ಪ್ರತಿಪದಾರ್ಥ :—**

**ಶ್ರವಣ** = ಕಿವಿ (ಶಬ್ದವನ್ನು ಕೇಳುವ ಕ್ರಿಯೆ) **ನಯನ** = ಕಣ್ಣು (ವಸ್ತುಗಳ ದರ್ಶನ) **ಘ್ರಾಣ** = ಮೂಗು (ಗಂಧಸ್ವೀಕಾರ) **ತ್ವಕ್** = ಚರ್ಮ (ಸ್ಪರ್ಶಜ್ಞಾನ) **ರಸ** = ನಾಲಿಗೆ (ರಸಾನುಭವ) ಹೀಗೆ ಪಂಚ ಜ್ಞಾನೇಂದ್ರಿಯಗಳು ಮತ್ತು ತತ್ಸಂಬಂಧವಾದ ವ್ಯಾಪಾರವಿಶೇಷಗಳು **ವಾಕ್** = ನಾಲಿಗೆ (ಮಾತನಾಡುವ ಕ್ರಿಯೆ) **ಪಾಣಿ** = ಎರಡು ಕೈಗಳು (ದಾನ ಮತ್ತು ಸ್ವೀಕಾರರೂಪವಾದ ಕರ್ಮ) **ಪಾದ** = ಎರಡು ಕಾಲುಗಳು (ಗಮನಾಗಮನಕ್ರಿಯೆ) **ಆದಿ** = ಇವೇ ಮೊದಲಾದ (ಆದಿ ಶಬ್ದದಿಂದ ಅವಶಿಷ್ಟ ಗ್ರಾಹ್ಯ) **ಅವಯವಗಳಲಿ** = ದಶೇಂದ್ರಿಯಗಳಲ್ಲಿ (ಆದಿಶಬ್ದದಿಂದ ಪಾಯು = ಮಲವಿಸರ್ಜನೆ ಮತ್ತು ಉಪಸ್ಥ = ಮೂತ್ರವಿಸರ್ಜನೆ, ಮೈಥುನ ಮತ್ತು ರೇತಃಸ್ಖಲನ ಕಾರ್ಯಗಳು ಗ್ರಾಹ್ಯ) **ತದ್ಗುಣಗಳಲಿ** = ಈ ದಶೇಂದ್ರಿಯಗಳಲ್ಲಿ ವಿದ್ಯಮಾನವಾದ ಪ್ರಾಕೃತ ಗುಣತ್ರಯಗಳಲ್ಲಿ ಒಂದೊಂದು ಇಂದ್ರಿಯಕ್ಕೂ ಮೂರು ಪ್ರಕಾರ ಕರ್ಮವೃತ್ತಿಯು. **ತತ್ಪತಿಗಳೊಳಗೆ** = ಆಯಾಯ ಇಂದ್ರಿಯಾಭಿಮಾನಿದೇವತೆಗಳಲ್ಲಿ **ಪ್ರವಿತತನು** = ಛಂದಾಗಿ (ಪ್ರ) ವ್ಯಾಪ್ತನಾಗಿದ್ದುಕೊಂಡು (ವಿತತನು) **ತಾನಾಗಿ** = ಸರ್ವತಂತ್ರ ಸ್ವತಂತ್ರನಾಗಿ **ಕೃತಿಪತಿ** = ಕೃತಿನಾಮಕಲಕ್ಷ್ಮೀಪತಿಯಾದ ಪ್ರದ್ಯುಮ್ನರೂಪೀ ಪ್ರರಮಾತ್ಮನು **ವಿವಿಧ** = ನಾನಾಪ್ರಕಾರವಾದ (ಜೀವರಾ ಸ್ವರೂಪಭೂತ ಕರ್ಮ, ಅನಾದಿ ಕರ್ಮ, ಸಂಚಿತಗಾಮಿ ಕರ್ಮ ಇವೇ ಮುಂತಾದ) **ಕರ್ಮವ** = ಕ್ರಿಯಾವಿಶೇಷಗಳನ್ನು **ಮಾಡಿ** = ಬಿಂಬಕ್ರಿಯಾದ್ವಾರಾ ಮಾಡಿ **ಮಾಡಿಸಿ** = ತತ್ವಾಭಿಮಾನಿಗಳ ದ್ವಾರಾ ಹಾಗೂ ಜೀವನದ್ವಾರಾ ಪ್ರತಿಬಿಂಬ

ಕ್ರಿಯಾರೂಪದಿಂದ ಮಾಡಿಸಿ **ಭವಕೆ** = ಸಂಸಾರವೆಂಬ ಪ್ರವಾಹಕ್ಕೆ (ಜನನ ಮರಣಾಖ್ಯವಾದ ಸಂಸಾರ) **ಕಾರಣನಾಗಿ** = ನಿಮಿತ್ತಕಾರಣನಾಗಿ **ತಿಳಿಸದಲೆ** = ಜೀವರಿಗೆ ತನ್ನ ಮಹಿಮಾವಿಶೇಷಗಳನ್ನು ತೋರಗೊಡದೆ **ತಿರುಗಿಸುತಿಹನು** = ಜೀವರನ್ನು ೮೪ ಲಕ್ಷ ಯೋನಿಗಳಲ್ಲಿ ಹಾಗೂ ಸ್ವರ್ಗ, ಭೂಮಿ ಮತ್ತು ನರಕಾದಿ ಲೋಕಗಳಲ್ಲಿ, ಜನನಮರಣಾಖ್ಯವಾದ ಚಕ್ರದಲ್ಲಿ ತಿರುಗಿ ಸುತ್ತಿದ್ದಾನೆ. ||೪||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಕಿವಿಯು ಶ್ರವಣೇಂದ್ರಿಯವು. ಅದರ ವ್ಯಾಪಾರ ಶಬ್ದಗಳನ್ನು ಕೇಳುವುದು. ನೇತ್ರೇಂದ್ರಿಯದ ವ್ಯಾಪಾರವು ಪದಾರ್ಥಗಳನ್ನು ನೋಡೋಣ. ನಾಸಿಕೇಂದ್ರಿಯದಿಂದ ಗಂಧಸ್ವೀಕಾರ ಮಾಡೋಣ. ತ್ವಗಿಂದ್ರಿಯದಿಂದ ಶೀತೋಷ್ಣಗಳ ತಿಳಿಯೋಣ. ಜಿಹ್ವೇಂದ್ರಿಯದಿಂದ ರಸಸ್ವೀಕಾರ ಮಾಡೋಣ. ಹೀಗೆ ಪಂಚಜ್ಞಾನೇಂದ್ರಿಯಗಳು, ತಜ್ಜನಿತವಾದ ಕರ್ಮರೂಪವಾದ ವ್ಯಾಪಾರಗಳು ಐದು. ಇವುಗಳಲ್ಲಿ ತದ್ವಿಷಯಗಳಾದ ಕೇಳೋಣ ಮೊದಲಾದ ಐದು ಕರ್ಮಗಳಲ್ಲಿ, ತತ್ಕ್ರಿಯೆಗಳಲ್ಲಿ, ವಾಗಿಂದ್ರಿಯ ಮತ್ತೆ ಮಾತನಾಡೋಣ— ಕರಗಳು ಮತ್ತೆ ಕೊಡೋಣ, ತೆಗೆದುಕೊಂಬೋಣ— ಪಾದೇಂದ್ರಿಯ ಮತ್ತೆ ಗಮನಾಗಮನ ಮಾಡೋಣ. ಆದಿಶಬ್ದರಿಂದ ಅವಶಿಷ್ಟಕರ್ಮೇಂದ್ರಿಯಗಳು ಗ್ರಾಹ್ಯ. ಪಾಯುಇಂದ್ರಿಯ—ಮಲ ವಿಸರ್ಜನಕಾರ್ಯ, ಉಪಸ್ಥ—ಮೈಥುನ, ರೇತಃಸ್ಖಲನ ಕಾರ್ಯ ಮತ್ತು ಮೂತ್ರವಿಸರ್ಜನಾಕಾರ್ಯ. ಈ ಐದು ಕರ್ಮೇಂದ್ರಿಯಗಳು ಮತ್ತು ತತ್ಕಾರ್ಯರೂಪವಾದ ಕರ್ಮಗಳು ಐದು. ದೇಹಕ್ಕೆ ಅವಯವಗಳಾದ ಪೂರ್ವೋಕ್ತ ದಶೇಂದ್ರಿಯಗಳಲ್ಲಿ ಮತ್ತು ಅವುಗಳಲ್ಲಿ ವಿದ್ಯಮಾನವಾದ ಸಾತ್ವಿಕಾದಿ ಗುಣಗಳಲ್ಲಿ (ಒಂದೊಂದು ಇಂದ್ರಿಯಕ್ಕೂ ಮೂರುಪ್ರಕಾರ

ಕರ್ಮಪ್ರವೃತ್ತಿಯು) ಆ ದಶೇಂದ್ರಿಯಗಳ ನಿಯಾಮಕರಾದ ಇಂದ್ರಿಯಾಭಿಮಾನಿಗಳಲ್ಲಿ ಛಂದಾಗಿ ವ್ಯಾಪ್ತನಾಗಿದ್ದುಕೊಂಡು, ಅನ್ಯರ ಪ್ರೇರಣೆ ಇಲ್ಲದೆ ತನಗೆ ತಾನೇ ಆಗಿ, ಕೃತಿನಾಮಕಲಕ್ಷ್ಮೀಪತಿಯಾದ ಪ್ರದ್ಯುಮ್ನರೂಪೀ ಪರಮಾತ್ಮನು, ಎಂಭತ್ತುನಾಲ್ಕು ಲಕ್ಷ ಯೋನಿಜಾತರಾದ ಜೀವರು, ಅವರಲ್ಲಿ ಒಂದೊಂದು ಯೋನಿಯಲ್ಲಿ ಅನೇಕ ಸಂಖ್ಯಾತಜೀವರು, ಪರಸ್ಪರ ಸ್ವರೂಪಭೇದಯುಕ್ತರಾಗಿ, ಜ್ಞಾನಕರ್ಮಾದಿಗಳಿಂದ ಭಿನ್ನಭಿನ್ನರಾಗಿ ನಾನಾವಿಧವಾದವರು, ಅವರವರ ಸ್ವರೂಪಭೂತ ಕರ್ಮವೇನು, ಅನಾದಿಕರ್ಮವೇನು, ಸಂಚಿತಾಗಾಮಿ ಕರ್ಮವೇನು, ಈ ಪ್ರಕಾರ ಎಲ್ಲವೂ ಭಿನ್ನಭಿನ್ನಗಳಾಗಿ ನಾನಾವಿಧಗಳಾದ, ಈಶ್ವರನಿಂದ ರಚಿತವಲ್ಲದ ಅನಾದಿಯಿಂದ ಲಿಂಗದೇಹಸ್ಥವಾದ, ಅನಾದಿಕರ್ಮದ ದೆಶೆಯಿಂದ, ಪರಂಪರಾ ಬಂದ ಕರ್ಮವನ್ನನುಸರಿಸಿ, ಜನ್ಮಗಳು ಬಂದಕಾಲದಲ್ಲಿ, ಪೂರ್ವೋಕ್ತಕರ್ಮಗಳನ್ನನುಸರಿಸಿ, ನಾನಾವಿಧಕರ್ಮಗಳನ್ನು ಇಂದ್ರಿಯಗಳಿಂದ ಮಾಡಿ (ಬಿಂಬಸದೃಶನಾದ ಪುರುಷನು ಚಲನಮಾಡಿದರೆ, ಪ್ರತಿಬಿಂಬಸದೃಶವಾದ ನೆರಳು ಆಡಿದಂತೆ, ಪರಮಾತ್ಮ ತಾನು ತನ್ನ ಕ್ರಿಯಾದಿಂದಮಾಡಿ) ಆಯಾ ಇಂದ್ರಿಯಾಭಿಮಾನಿಗಳ ದ್ವಾರಾ ಮಾಡಿಸಿ (ರಮಾದೇವಿಯರಲ್ಲಿ ಸಾಕ್ಷಾತ್ತಾಗಿ ತಾನೇ ಮಾಡತ್ತಾನೆ, ತದನ್ಯರಲ್ಲಿ ಪರಂಪರಾದಿಂದ ಕ್ರಿಯಾ; ದೇವತೆಗಳ ದ್ವಾರಾ ವ್ಯಾಪ್ತನಾದ ಜೀವನಕ್ರಿಯಾ— ತದ್ವಾರಾ ದೇಹಕ್ಕೆ ಕ್ರಿಯಾ. ಜೀವ ಈಶಾಧೀನ ಎಂಬುದು ರಾಜಭೃತ್ಯನ್ಯಾಯವಲ್ಲ. ಪುರುಷನು ಛಾಯಾದ್ಯೋಪಾದಿಯಲಿ ಅಧೀನನು. ಆದ್ದರಿಂದ "ಮಾಡಿ ಮಾಡಿಸುವನು"— ಎಂಬ ಪ್ರಯೋಗ). ಪೂರ್ವೋಕ್ತಪ್ರಕಾರ ಮಾಡಿಸಿ, ರಮಾವ್ಯತಿರಿಕ್ತ ಅನ್ಯಜೀವರನ್ನು, ಪ್ರಾಣಿಗಳು ಸಂಸಾರದಲ್ಲಿ ಪರಿವರ್ತನ ಮಾಡಬೇಕಾದರೆ, ಅವರವರ ಈಶ್ವರನಿಂದ ರಚಿತವಲ್ಲದ ಅನಾದಿಕರ್ಮ, ಅದಕ್ಕೆ ಅನುಸರಿಸಿದ ಅನಾದಿಲಿಂಗ ಇವು ಮೂಲಕಾರಣಗಳು. ಇದನ್ನ ಅಭಿವ್ಯಕ್ತಿಮಾಡಿ ಜೀವರನ್ನ ಸಂಸಾರಕ್ಕೆ ತರೋದಕ್ಕೆ ನಿಮಿತ್ತಕಾರಣನಾಗಿ, ಪ್ರಾಣಿಗಳ ದೇಹವಿವಕ್ಷಯಾ ಜನನಮರಣಾದಿಗಳಿಂದ ತಿರುಗಿಸುತ, ದೇಹದಲ್ಲಿ ಆವಾಸವಾಗಿದ್ದಾನೆ. ಪಕ್ವಕಾಲದಲ್ಲಿ ಹೊರತು, ಅಪಕ್ವಕಾಲದಲ್ಲಿ ಬಿಂಬಕ್ರಿಯಾ ದ್ವಾರಾ, ಪ್ರತಿಬಿಂಬಕ್ರಿಯಾ ಎಂಬ ನಿರ್ಲಿಪ್ತ ಮಾರ್ಗವನ್ನು ತಿಳಿಸದೇನೇ ದೇಹದಲ್ಲಿ ಆವಾಸ

ನಾಗಿದ್ದಾನೆ. ಬಾಹ್ಯಕರ್ಮದಿಂದ ಸಂಸಾರ, ಸ್ವರೂಪಕರ್ಮದಿಂದ ಮೋಕ್ಷ-ತ್ರಿವಿಧರಿಗೆ ಯೋಗ್ಯತಾನುಸಾರವೆಂದು ತಾತ್ಪರ್ಯ ॥೪॥

(೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :—

ಕಿವಿ, ಕಣ್ಣು, ಮೂಗು, ಚರ್ಮ, ನಾಲಗೆಗಳೆಂಬ ಐದು ಜ್ಞಾನೇಂದ್ರಿಯಗಳಲ್ಲಿಯೂ, ಅವುಗಳ ಗುಣಗಳು, ಅಂದರೆ ಕೇಳುವುದು, ನೋಡುವುದು, ಆಘ್ರಾಣಿಸುವುದು, ಶೀತೋಷ್ಣಗಳನ್ನನುಭವಿಸುವುದು, ಉಪ್ಪು ಖಾರ ಮೊದಲಾದ ಷಡ್ರಸಗಳ ರುಚಿಯನ್ನರಿಯುವುದು, ಮಾತನಾಡುವುದು, ನಡೆಯುವುದು, ಮಲವಿಸರ್ಜನೆ, ಮೂತ್ರವಿಸರ್ಜನೆ, ರೇತೋತ್ಸರ್ಜನೆ. ಇವುಗಳೇ ದಶೇಂದ್ರಿಯಗಳ ಗುಣಗಳು. ಇವುಗಳಲ್ಲಿಯೂ, ತತ್ಪತಿಗಳು, ಅಂದರೆ, ಕಿವಿಗೆ ಅಭಿಮಾನಿ ದೇವತೆಗಳು ದಿಗ್ದೇವತಗಳು, ಕಣ್ಣುಗಳಿಗಭಿಮಾನಿ ಸೂರ್ಯ, ಮೂಗಿಗೆ ಅಭಿಮಾನಿ-ಅಶ್ವಿನಿ ದೇವತೆಗಳು. ಚರ್ಮಕ್ಕೆ-ವಾಯು. ರಸಕ್ಕೆ—ವರುಣ. ಮುಖಕ್ಕೆ—ಅಗ್ನಿ, ಕೈಗಳಿಗೆ ದಕ್ಷಪ್ರಜಾಪತಿ, ಪಾದಗಳಿಗೆ—ಜಯಂತ, ಗುದಕ್ಕೆ—ಮಿತ್ರ, ಉಪಸ್ಥಕ್ಕೆ—ಮನು ಇಂತಹ ತತ್ವಾಭಿಮಾನಿದೇವತೆಗಳಲ್ಲಿಯೂ ವ್ಯಾಪ್ತನಾಗಿ ತಾನಿದ್ದು, ಕೃತಿಪತಿಯಾದ ಪ್ರದ್ಯುಮ್ನನಾಮಕ ಪರಮಾತ್ಮನು ಜೀವರುಗಳಿಂದ ಅವರವರ ಅನಾದಿಕರ್ಮವನ್ನನುಸರಿಸಿ, ಸಂಸಾರಕ್ಕೆ ಕಾರಣಭೂತವಾದ ಕರ್ಮಗಳನ್ನು ತಾನು ಮಾಡಿ, ಮಾಡಿಸಿ ಸಂಸಾರದಲ್ಲಿ ಜೀವರುಗಳನ್ನು ತಗುಲಿಸಿ, ಅವರುಗಳಿಗೆ ತಿಳಿಸಿದೇನೇ, ಕರ್ಮಾನುಸಾರವಾಗಿ ಭೂಮಿಯಲ್ಲಿ ಹುಟ್ಟುವುದೂ, ನರಕಕ್ಕೆ ಹೋಗುವುದೂ, ಸ್ವರ್ಗಕ್ಕೆ ಹೋಗುವುದೂ, ಪುನಃ ಸಂಸಾರದಲ್ಲಿ ಹುಟ್ಟುವುದೂ, ಸಾಯುವುದು ಹೀಗೆ ತಿರುಗಿಸುತ್ತಿರುವನು.

**ವಿಶೇಷಾರ್ಥ:-**

ತತ್ವಾಭಿಮಾನಿ ದೇವತೆಗಳು ಯಾರುಯಾರೆಂಬ ವಿಷಯದಲ್ಲಿ **ಭಾಗವತ ತೃತೀಯಸ್ಕಂಧದ ೬ನೆಯ ಅಧ್ಯಾಯದಲ್ಲಿ— "ತಸ್ಯಾಗ್ನಿರಾಸ್ಯಂ**

**ನಿರ್ಭಿನ್ನಂ ಲೋಕಪಾಲೋವಿತತ್ಪದಂ । ನಿರ್ಭಿನ್ನಂತಾಲು ವರುಣೋ ಲೋಕಪಾಲೋ ಪಿಶದ್ಧರೇಃ ॥"** ಹೀಗೆ ಹನ್ನೆರಡೆಯ ಶ್ಲೋಕದಿಂದ ಮೊದಲು **"ಪಾದಾವಸ್ಯ ವಿನಿರ್ಭಿನ್ನಾ"**- ಎಂಬ ಇಪ್ಪತ್ತೆರಡನೆಯ ಶ್ಲೋಕದವರೆಗೂ ಹೇಳಿರುವರು. ಆದೇ ಆಧಾರದ ಮೇಲೆ ತತ್ವಾಭಿಮಾನಿ ದೇವತೆಗಳ ಸ್ಥಾನಗುಣಗಳು ಬರೆಯಲ್ಪಟ್ಟಿವೆ. ಹೀಗೆ ಕೃತಿಪತಿಯಾದ ಶ್ರೀ ಪ್ರದ್ಯುಮ್ನನಾಮಕ ಪರಮಾತ್ಮನು ಇಂದ್ರಿಯಗಳೊಳಗೂ, ಅವುಗಳ ಗುಣಗಳಲ್ಲಿಯೂ ತದಭಿಮಾನಿದೇವತೆಗಳಲ್ಲಿಯೂ, ವ್ಯಾಪ್ತನಾಗಿದ್ದು ಜೀವರ ಅನಾದಿಪ್ರಾರಬ್ಧಕರ್ಮಾನುಗುಣವ್ಯಾಗಿ ಬುದ್ಧಿಯನ್ನು ಪ್ರೇರಿಸಿ ಅದರಂತೆ ಕರ್ಮಗಳನ್ನು ಮಾಡಿ, ಅವರಿಂದಲೂ ಮಾಡಿಸುವನು. ಅದರಲ್ಲಿ ಸಂಚಿತಕರ್ಮಗಳೆಂದೂ, ಆಗಾಮಿಕರ್ಮಗಳೆಂದೂ, ನಶ್ವರ ಫಲಗಳನ್ನು ಕೊಡುವ ಎರಡು ವಿಧ ಕರ್ಮಗಳನ್ನೂ ಸಹ ಮಾಡಿಸಿ, ನಶ್ವರವಾದ ಸ್ವರ್ಗ ನರಕಾದಿ ಭೋಗಗಳನ್ನು ಕೊಡಿಸುವನು. ಸಂಚಿತ ಎಂದರೆ, ಅನಾದಿಯಾದ ಪ್ರಾರಬ್ಧ ಕರ್ಮಗಳನ್ನು ಮಾಡುತ್ತಿರುವಾಗಲೇ ಜೀವನು ಮನೋವಾಕ್ಕಾಯಗಳಿಂದ ಮಾಡುವ ಕರ್ಮಗಳು ದಿವಸ ಒಂದಕ್ಕೆ ಹತ್ತು ಜನ್ಮಗಳನ್ನು ಪಡೆಯುವುದಕ್ಕೆ ಬೇಕಾದಷ್ಟು ಕರ್ಮಗಳನ್ನು ಮಾಡುವನು. ಕರ್ಮಗಳಲ್ಲಿ ಹಿಂದೆ ಮಾಡಿದ ಕರ್ಮಗಳಿಗೆ "ಸಂಚಿತ"ವೆಂತಲೂ, ಮುಂದೆ ಮಾಡುವ ಕರ್ಮಗಳಿಗೆ "ಆಗಾಮಿ" ಎಂತಲೂ ಹೆಸರು. ಈಗ ಈ ಜನ್ಮದಲ್ಲಿ ನಾವು ಅನುಭವಿಸುತ್ತಿರುವುದು ಸಂಚಿತ ಕರ್ಮಗಳ ಫಲವೆಂತಲೂ, ಈಗ ಮಾಡುತ್ತಿರುವ ಆಗಾಮಿ ಕರ್ಮಗಳ ಫಲಗಳನ್ನು ಮುಂದೆ ಅನುಭವಿಸಬೇಕೆಂತಲೂ ತಿಳಿಯಬೇಕು. ಈ ಕರ್ಮಗಳನ್ನೆಲ್ಲ ಮಾಡಿಸಿ, ಜೀವರನ್ನು ಸಂಸಾರದಲ್ಲಿ ಪುನಃ ಪುನಃ ತಿರುಗಿಸುವುದಕ್ಕೆ ಶ್ರೀಪ್ರದ್ಯುಮ್ನನಾಮಕ ಪಸಮಾತ್ಮನೇ ಕಾರಣನು. ಇದರ ಕಾರಣವನ್ನು ಜೀವರು ಅರಿಯರು. ಶ್ರೀ ಪರಮಾತ್ಮನೇ ಬಲ್ಲನು. ಆದರೆ ಪರಮಾತ್ಮನೇ ಜೀವರಿಂದ ಸಂಸಾರಕ್ಕೆ ಕಾರಣವಾದ ಕರ್ಮಗಳನ್ನು ಮಾಡಿಸಿದರೂ, ಅವರವರ ಅನಾದಿಕರ್ಮಗಳನ್ನು ಅನುಸರಿಸಿ ಮಾಡಿರುವುದರಿಂದ, ಪರಮಾತ್ಮನಿಗೆ ವೈಷಮ್ಯಾದಿಗಳು ಇಲ್ಲವೆಂದು ತಾತ್ಪರ್ಯ. ॥೪॥

## (೩) "ಭಾವದರ್ಪಣಟೀಕಾ" — ವ್ಯಾಖ್ಯಾನ :—

ಶ್ರವಣಾದಿ ಸಮಸ್ತ ಅವಯುವಗಳೊಳಗಿದ್ದು ಶ್ರೀವಧೂವರನು ಜೀವರ ಕಾರ್ಯ ಸಾಕಲ್ಯೇನ ತಾ ಮಾಡಿ ಜೀವರಿಂದ ಮಾಡಿಸಿ ತಿಳಿಸಗೊಡದೇ ನಾನೇ ಮಾಡಿದೆ ಎಂದು ಚೇತನರಿಂದ ನುಡಿಸಿ, ಸಂಸಾರಾರಣ್ಯದೊಳು ತಿರುಗಿಸುವನೆಂದು ಹೇಳುತ್ತಾರೆ– "ಶ್ರವಣ" ಎಂಬ ಪದ್ಯದಿಂದ.

ಶ್ರವಣ = ಶ್ರೋತ್ರೇಂದ್ರಿಯ—ಕಿವಿ, ನಯನ = ಚಕ್ಷುರಿಂದ್ರಿಯ— ಕಣ್ಣು ಘ್ರಾಣ = ನಾಸಿಕ—ಮೂಗು, ತ್ವಕ್ = ತ್ವಗಿಂದ್ರಿಯ–ಚರ್ಮ, ರಸನ = ಜಿಹ್ವೇಂದ್ರಿಯ—ನಾಲಿಗೆ, ಆದಿಪದದಿಂದ ಪಾಯು, ಉಪಸ್ಥ ಇವೆರಡೂ ತೆಗೆದುಕೊಳ್ಳಬೇಕು. ವಾಕ್—ವಚನ, ಪಾಣಿ—ಕೈ, ಪಾದ— ಕಾಲು, ಪ್ರವಿತತ—ಅತ್ಯಂತವ್ಯಾಪ್ತನು, ಕೃತಿಪತಿ—ಪ್ರದ್ಯುಮ್ನ, ಭವಕೆ—ಸಂಸಾರಕ್ಕೆ ॥೪॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ —

### (ಸಂಸ್ಕೃತಮೂಲ)

ಉಕ್ತಮಿಂದ್ರಿಯಗತ್ವಂ ಇಂದ್ರಿಯೇಶಸ್ಯ ಪುನರುಕ್ತ್ವಾ, ಕರ್ಮಕರಣ ಪ್ರಕಾರಮಾಹ ॥ಶ್ರವಣೇತಿ॥ ಗುಣಾಃ ದೀಪ್ತಾಃ ವಿಷಯಾಃ॥ ಆದಿಸೃಷ್ಟ್ಯಾ ಬ್ರಹ್ಮದೇಹೇ ತಾತ್ವಿಕಾಭಾವೇಪಿ ಭೃತ್ಯಶೂನ್ಯ ರಾಜವತ್ ಸ್ವಯಂ ಕರೋತಿ॥ ಮುಖ್ಯತಃ ಸರ್ವತತ್ವಾನಾಂ ಚೇಷ್ಟಕೋ ಹರಿರೇಕಲಃ॥ ಯಥಾ ಸಚಿವರಾಹಿತ್ಯೇ ನೃಪತಿಃ ಸ್ವಯಮೇವತು ಕಾರ್ಯಂ ಕರೋತಿ ಕೈಶ್ಚಿದ್ಭಿರನ್ಯೈಃ ಸಚಿವಭೃತ್ಯಕೈಃ ॥ ತಥಾ ಸರ್ವೇಷು ತತ್ವೇಷು ಸ್ವಯಮೇವ ಸ್ಥಿತೋ ಹರಿಃ । ಉದ್ಬೋಧ್ಯ ನಿರ್ಮಮೋ ಸೃಷ್ಟೇರಾದೌ ಬ್ರಹ್ಮಾಣಮೇವ ಹಿ ॥ ಜಾತೇ ಜಾತೇ ತತ್ವದೇವೇ ತಂ ತಂ ತತ್ವೇ ಸ್ಯಯೋಜಯತ್ ॥ ಏವಮೇವಾಧಿಕೇ ದೇವೇ ತತ್ವದೇವೇಷು ವೈ ಹರಿಃ ॥ ನ್ಯೂನೇಚಾಧಿಕಜೀವೇ ಚ ಸ್ವಯಮೇವ ಪ್ರವರ್ತಯನ್ ॥ ನಿಮಿತ್ತಾಸ್ತತ್ವ ದೇವಾಃ । ಇತಿ **ವಿಷ್ಣು ರಹಸ್ಯ** ॥ ಕೃತಿಪತಿಃ –ಪ್ರದ್ಯುಮ್ನಃ ॥೪॥

**ಕನ್ನಡಾನುವಾದ :—**

ಕರಣನಿಯಾಮಕತ್ವವು ಇಂದ್ರಿಯಾಂತರ್ಗತ ಹರಿಗೆ ಉಂಟೆಂದು ವಿವರಿಸುತ್ತಾ, ಕರ್ಮ ಮಾಡಿಸುವ ಪ್ರಕಾರವನ್ನು ಹೇಳುತ್ತಾರೆ– "ಶ್ರವಣ" ಎಂಬ ಪದ್ಯದಿಂದ.

ಆದಿಯಲ್ಲಿ ಸೃಷ್ಟರಾದ ಬ್ರಹ್ಮದೇವರ ದೇಹದಲ್ಲಿ ಸ್ಥಿತನಾಗಿದ್ದು. ತಾತ್ವಿಕ ದೇವತೆಗಳ ಕಾರ್ಯವನ್ನು ತಾನೇ ಮಾಡುತ್ತಾನೆ. ಸರ್ವತತ್ವಗಳ ನಿರ್ವಾಹಕನು ಶ್ರೀ ಹರಿ ಒಬ್ಬನೇ, ಶ್ರೀಹರಿಯು ಸರ್ವತತ್ವಗಳಲ್ಲಿ ಸ್ವತಃ ಸನ್ನಿಹಿತನಾಗಿರುವನು. ಪ್ರಕೃತಿಯನ್ನು ಉದ್ಬೋಧಗೊಳಿಸಿ, ಮಹತ್ತತ್ವ ಶರೀರರಾದ ಚತುರ್ಮುಖ ಬ್ರಹ್ಮದೇವರನ್ನು ಮೊದಲು ಸೃಷ್ಟಿ ಮಾಡಿದನು. ಅನಂತರ ತತ್ವದೇವತೆಗಳ ಸೃಷ್ಟಿ. ಕ್ರಮವಾಗಿ ಆಯಾಯಾ ತತ್ವಗಳಿಗೆ ಅವರನ್ನು ಅಧಿಕಾರಿಗಳಾಗಿ ನಿಯೋಜಿಸಿದನು. ತತ್ಪ್ರಕಾರ, ಬ್ರಹ್ಮದೇವರಲ್ಲಿ ಅಧಿಕ ಸನ್ನಿಧಾನದಿಂದಲೂ, ಮಿಕ್ಕ ತತ್ವದೇವತೆಗಳಲ್ಲಿ ಆಯಾಯಾ ತತ್ವಗುಣಗಳಿಗನುಗುಣವಾಗಿಯೂ ಮತ್ತು ಜೀವಾಂತರ್ಯಾಮಿರೂಪದಿಂದಲೂ ಸ್ವಯಂ ಕಾರ್ಯಗಳನ್ನು ಪ್ರವರ್ತಿಸುತ್ತಾನೆ. ತತ್ತ್ವದೇವತೆಗಳು ಕೇವಲ ನಿಮಿತ್ತರು– ಇದು ವಿಷ್ಣುರಹಸ್ಯದವಚನ. ಕೃತಿಪತಿ = ಪ್ರದ್ಯುಮ್ನರೂಪೀ ಪರಮಾತ್ಮ ॥೪॥

**(ಆ) "ಗುರುಹೃದಯಪ್ರಕಾಶಿಕೆ" —ವ್ಯಾಖ್ಯಾನ :—**

ಶ್ರವಣ ಎಂದರೆ ಕಿವಿ, ನಯನ ಎಂದರೆ ಕಣ್ಣು, ಘ್ರಾಣ ಎಂದರೆ ಮೂಗು, ತ್ವಕ್ ಎಂದರೆ ಚರ್ಮ, ರಸನ ಎಂದರೆ ನಾಲಿಗೆ,- ಈ ಪಂಚ ಜ್ಞಾನೇಂದ್ರಿಯಗಳಲ್ಲಿಯೂ, ಕಾಲು, ಕೈ, ಬಾಯಿ, ಅಧೋದ್ವಾರ ಎರಡು- ಈ ಪಂಚಕರ್ಮೇಂದ್ರಿಯಗಳಲ್ಲಿಯೂ, ಅದನ್ನು ಅನುಗ್ರಹಿಸುವ ಇಂದ್ರಿಯ ವ್ಯಾಪಾರದಲ್ಲೂ, ತತ್ಪತಿಗಳೆಂದರೆ—ಆ ಇಂದ್ರಿಯಾಭಿಮಾನಿ ದೇವತೆಗಳಲ್ಲೂ, ಪ್ರವಿತತನು ಎಂದರೆ, ವ್ಯಾಪ್ತನು ತಾನಾಗಿ, ಕೃತಿಪತಿ ಪ್ರದ್ಯುಮ್ನನು ಆಯಾಯಾ ಕಾರ್ಯ ಪ್ರೇರಣೆ

ಮಾಡಿ. ಅವರಿಂದ ಮಾಡಿಸಿ. ಜೀವರಿಗೆ ಕರ್ತೃತ್ವಾಭಿಮಾನದಿಂದ ಬಂಧನಕ್ಕೆ ತಾನೇ ಕಾರಣನಾಗಿ, ಜೀವರನ್ನು ಲೋಕಗಳಲ್ಲಿ ತಿರುಗಿಸುತ್ತಾನೆ. ॥೪॥

**ಸರ್ವವ್ಯಾಖ್ಯಾನ ಸಾರಸಂಗ್ರಹ: —**

ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು ಈ ಐದೂ ಜ್ಞಾನೇಂದ್ರಿಯಗಳು. ಶ್ರವಣೇಂದ್ರಿಯಾಭಿಮಾನಿ ದಿಗ್ದೇವತೆಗಳಲ್ಲಿ ತಾನಿದ್ದು ಆ ಇಂದ್ರಿಯ ವ್ಯಾಪಾರವನ್ನು (ಶಬ್ದವನ್ನು ಕೇಳುವ ಕ್ರಿಯೆ) ತಾನೇ ಮಾಡಿ, ಆ ಇಂದ್ರಿಯಾಭಿಮಾನಿಗಳ ದ್ವಾರಾ ಮಾಡಿಸುವನು. ಅಂತೆಯೇ ತ್ವಗಿಂದ್ರಿಯ (ಚರ್ಮ)ದಲ್ಲಿದ್ದು. ಅದರೆ ತತ್ವಾಭಿಮಾನಿಯಾದ ಅಹಂಕಾರಿಕ ಪ್ರಾಣನಲ್ಲಿ ಬಿಂಬರೂಪದಿಂದ ಸ್ಪರ್ಶಜ್ಞಾನವನ್ನು (ಶೀತೋಷ್ಣಗಳ ಅರಿವು) ಜೀವರಿಗೆ ಕೊಡಿಸುವನು. ಹಾಗೆಯೇ ಚಕ್ಷುರಿಂದ್ರಿಯ (ಕಣ್ಣು) ಸ್ಥಿತನಾಗಿ ತತ್ಪತಿಗಳಾದ ಸೂರ್ಯ ಮತ್ತು ಚಂದ್ರರಲ್ಲಿ ನಿಯಾಮಕನಾಗಿ ವಸ್ತುಗಳ ದರ್ಶನರೂಪವಾದ ವ್ಯಾಪಾರವನ್ನು ಮಾಡಿಸುವನು. ತತ್ಪ್ರಕಾರ, ರಸನೇಂದ್ರಿಯದಲ್ಲಿದ್ದು (ನಾಲಿಗೆ). ಅದರ ಅಭಿಮಾನಿ ವರುಣದೇವರಲ್ಲಿ ಸ್ಥಿತನಾಗಿ, ರಸಾನುಭವವನ್ನು ಜೀವರಿಗೆ ತಂದುಕೊಡುವನು. ಅಂತೆಯೇ ನಾಸಿಕೇಂದ್ರಿಯಗತನಾಗಿ (ಮೂಗು), ಆಇಂದ್ರಿಯಾಭಿಮಾನಿಗಳಾದ ಅಶ್ವಿನೀದೇವತೆಗಳಲ್ಲಿದ್ದು, ಗಂಧಸ್ವೀಕಾರರೂಪವಾದ ಕಾರ್ಯಗಳನ್ನು ನಡೆಸುವನು. ಈ ಪ್ರಕಾರವಾಗಿ ಶ್ರೀ ಹರಿಯು ಪಂಚಜ್ಞಾನೇಂದ್ರಿಯಗಳು. ತತ್ಪತಿಗಳಾದ ಇಂದ್ರಿಯಾಭಿಮಾನಿ ದೇವತೆಗಳಲ್ಲಿ ನಿಯಾಮಕನಾಗಿದ್ದು ಬಿಂಬಕ್ರಿಯಾದ್ವಾರಾ ಆಯಾಯಾ ಇಂದ್ರಿಯಗಳ ವ್ಯಾಪಾರಗಳನ್ನು ಸ್ವಯಂ ಮಾಡಿ, ಮಾಡಿಸಿ, ಜೀವರ ಅನುಭವಕ್ಕೆ ತಂದೀಯುವನು. ಇದೇಪ್ರಕಾರ. ನಾಲಿಗೆ, ಕೈ, ಪಾದ, ಗುದ ಮತ್ತು ಉಪಸ್ಥಗಳೆಂಬ ಪಂಚ ಕರ್ಮೇಂದ್ರಿಯಗಳಲ್ಲಿ ವ್ಯಾಪ್ತನಾಗಿದ್ದು ಆಯಾಯಾ ಅಭಿಮಾನಿದೇವತೆಗಳಾದ, ಅಗ್ನಿ, ದಕ್ಷ, ಜಯಂತ, ಮಿತ್ರ, ಮನು ಇವರುಗಳಲ್ಲಿ ಅಂತರ್ಯಾಮಿತ್ವರೂಪದಿಂದ ಕರಣನಿಯಾಮಕನಾಗಿದ್ದು ಬಿಂಬಕ್ರಿಯಾದ್ವಾರಾ ಆಯಾಯಾ ಇಂದ್ರಿಯಸಂಬಂಧವಾದ ವಾಗ್ವ್ಯಾಪಾರ (ವದನ), ದಾನ ಮತ್ತು ಸ್ವೀಕಾರ (ಕೈಗಳು), ಗಮನಾಗಮನ (ಪಾದ)

ಮಲವಿಸರ್ಜನಾಕಾರ್ಯ (ಗುದ) ಮತ್ತು ಮೂತ್ರವಿಸರ್ಜನಾಕ್ರಿಯೆ (ಉಪಸ್ಥ) ಮುಂತಾದ ಕ್ರಿಯಾವಿಶೇಷಗಳನ್ನು ಮಾಡಿಸುವನು. ಈ ಪ್ರಕಾರ ಕೃತಿರಮಣನಾದ ಪ್ರದ್ಯುಮ್ನರೂಪೀ ಶ್ರೀ ಪರಮಾತ್ಮನು ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಸದ್ಗುಣಗಳು, ತದಭಿಮಾನಿದೇವತೆಗಳು ಈ ಅಧಿಷ್ಠಾನಗಳಲ್ಲಿ ಅತ್ಯಂತ ವ್ಯಾಪ್ತನಾಗಿದ್ದು, (ಪ್ರವಿತತನು) ಆಯಾಯಾ ಇಂದ್ರಿಯಗಳ ವ್ಯಾಪಾರಗಳನ್ನು ಜೀವರ ಅನಾದಿಕರ್ಮಪ್ರವಾಹವನ್ನು ಅನುಸರಿಸಿ, ಅವರವರ ಯೋಗ್ಯತಾನುಸಾರ ಸ್ವಯಂ ನಿಂತು ಮಾಡಿ ಮಾಡಿಸುತ್ತಾ, ತನ್ನ ಮಹಿಮಾವಿಶೇಷಗಳನ್ನು ಜೀವರಿಗೆ ಸರ್ವಥಾ ತಿಳಿಯಗೊಡದೆ, ದೇಹಾಭಿಮಾನಿಯಾದ ಜೀವನಿಗೆ ಕರ್ತೃತ್ವಾಭಿಮಾನವನ್ನುಂಟುಮಾಡಿ. ಬಂಧನ ರೂಪವಾದ ಸಂಸಾರಕ್ಕೆ ಕಾರಣರನ್ನಾಗಿ ಮಾಡಿ, ಈ ಜನನಮರಣಾಖ್ಯ ಪ್ರವಾಹರೂಪವಾದ ಭವವೆಂಬ ಸುಳಿಯೊಳಗೆ ಸುತ್ತಿಸುವನು. ಅವನ ಪರಮ ಪ್ರಸಾದವಿಲ್ಲದೆ, ಬಂಧವಿಮೋಚನೆಯಾಗಲಾರದು. ಕರ್ತೃತ್ವಾಭಿಮಾನ ರಹಿತನಾಗಿ ಜೀವನು ಸರ್ವವ್ಯಾಪಾರಗಳನ್ನೂ ಪ್ರವಿತತನಾದ ಪರಮಾತ್ಮನೇ ಮಾಡಿ ಮಾಡಿಸುತ್ತಿರುವನೆಂದು ಅನುಸಂಧಾನದಿಂದ ತಿಳಿದು, ಭಗವದುಪಾಸನೆಗೈದರೆ, ಅಂತಹ ಜೀವನಿಗೆ ಶ್ರೀಹರಿಯು ಪರಮಾನುಗ್ರಹ ಮಾಡಿ, ಭವಸುಳಿಯಿಂದೆತ್ತಿ ಪಾರುಮಾಡುವನು. ನಮ್ಮ ಇಂದ್ರಿಯ, ಮನಸ್ಸು, ಬುದ್ಧಿ, ದೇಹ ಸಮಸ್ತವೂ ಭಗವದಧೀನವೆಂದು ತಿಳಿಯುವುದೇ ತಾರಕವೆಂದು ದಾಸರಾಯರ ತಾತ್ಪರ್ಯವು ॥೪॥

# ಪದ್ಯ (೫)

**ಮೂಲ :—**

**ಗುಣಿಗುಣಗಳೊಳಗಿದ್ದು ಗುಣಿಗುಣ ।**
**ನೆನಿಸುವನು ಗುಣಬದ್ಧನಾಗದೆ ।**
**ಗುಣಜ ಪುಣ್ಯಾಪುಣ್ಯಫಲ ಬ್ರಹ್ಮಾದಿ ಚೇತನಕೆ ॥**
**ಉಣಿಸುತವರೊಳಗಿದ್ದು ವೃಜಿನಾ ।**
**ರ್ದನ ಚಿದಾನಂದೈಕದೇಹನು ।**
**ಕೊನಿಗೆ ಸಚರಾಚರಜಗದ್ಭುಕುವೆನಿಪನವ್ಯಯನು ॥೫॥**

**ಅವತರಣಿಕೆ :—**

ಗುಣವಿಶೇಷಗಳಿಂದ ಯುಕ್ತವಾದ ಸಮಸ್ತಚೇತನರಲ್ಲಿಯೂ ಮತ್ತು ತತ್ಸಂಬಂಧವಾದ ಗುಣಗಳಲ್ಲಿಯೂ ವಿಶಿಷ್ಟನಾಗಿದ್ದು, ತನ್ನಾಮಕನಾಗಿ ಆ ಗುಣಗಳಿಂದ ತಾನು ಅತ್ಯಂತಭಿನ್ನವಾಗಿ, ಪುಣ್ಯಾಪುಣ್ಯಫಲಗಳನ್ನು ಸಮಸ್ತ ಚೇತನ ವರ್ಗಕ್ಕೆ ತಂದುಕೊಡುವ, ಪಾಪಪರಿಹಾರಕನಾದ, ಮಹಾ ಪ್ರಳಯಕಾಲದಲ್ಲಿ ಸೃಷ್ಟವಾದ ಸಮಸ್ತಜಗತ್ತನ್ನೂ ನುಂಗಿ. ತನ್ನ ಉದರದಲ್ಲಿ ಇಟ್ಟುಕೊಳ್ಳುವ ಆ ಸರ್ವಶಕ್ತನ ಮಹಿಮಾತಿಶಯವನ್ನು ಕೊಂಡಾಡುತ್ತಾರೆ, "ಗುಣಿಗುಣಗಳೊಳಗಿದ್ದು"— ಎಂಬ ಈ ಪದ್ಯದಿಂದ. ॥ ೫ ॥

**ಪ್ರತಿಪದಾರ್ಥ: —**

**ಗುಣಿ** = ಗುಣಗಳುಳ್ಳವರಲ್ಲಿ, ಅಂದರೆ, ಸಾತ್ವಿಕರು, ರಾಜಸರು ಮತ್ತು ತಾಮಸರೆಂಬ ತ್ರಿವಿಧ ಜೀವರುಗಳಲ್ಲಿ **ಗುಣ** = ತತ್ಸಂಬಧವಾದ ಸತ್ವ. ರಸಸ್ತಮೋಗುಣಗಳೆಂಬ ಗುಣತ್ರಯಗಳಲ್ಲಿ **ಇದ್ದು** = ತಾನು ವ್ಯಾಪ್ತರೂಪ

ದಿಂದಿದ್ದು **ಗುಣಿಗುಣಿನೆನಿಸುವನು** = ಅಂತಹ ಅಧಿಷ್ಠಾನಗತನಾಗಿದ್ದು "ಗುಣಿ" ಎಂತಲೂ, ತತ್ಸಂಬಧವಾದ ಗುಣಪ್ರೇರಕನಾಗಿದ್ದು, "ಗುಣಿ" ಎಂತಲೂ ತತ್ತನ್ನಾಮಕನಾಗಿ (ಅದೇ ಹೆಸರಿನಿಂದ ಕರೆಸಲ್ಪಡುತ್ತಾನೆ) **ಗುಣಬದ್ಧನಾಗದೆ** = ಆಯಾಯಾ ಚೇತನರ ಮತ್ತು ವಸ್ತುಗಳ ಗುಣವಿಶೇಷಗಳಿಂದ ಅತ್ಯಂತ ಭಿನ್ನನಾಗಿ (ಆ ಗುಣಿ ಮತ್ತು ಗುಣಗಳೇ ಭಗವತ್ಸ್ವರೂಪಗಳಲ್ಲ; ತತ್ಸಂಬಧರಹಿತನು), ಅಂದರೆ ನಿರ್ಲೇಪನಾಗಿದ್ದು **ಗುಣಜ** = ಅಂತಹ ಸತ್ವ. ರಜೋಸ್ತಮೋಗುಣಗಳಿಂದ ಉತ್ಪನ್ನವಾದ **ಪುಣ್ಯಾಪುಣ್ಯಫಲ** = ಪುಣ್ಯ ಮತ್ತು ಪಾಪ ಫಲಗಳನ್ನು (ಪುಣ್ಯಕರ್ಮದಿಂದ ಪುಣ್ಯ ಫಲಪ್ರಾಪ್ತಿ; ಪಾಪ ಕರ್ಮಗಳಿಂದ ಪಾಪಫಲ ಲಭ್ಯ) **ಬ್ರಹ್ಮಾದಿ ಚೇತನಕೆ** = ಬ್ರಹ್ಮದೇವರು ಮೊದಲು ಮಾಡಿಕೊಂಡು ಕಲಿ ಪರ್ಯಂತ ಸಮಸ್ತಜೀವವರ್ಗಕ್ಕೆ **ಉಣಿಸುತ** = ಸತ್ವಗುಣಜನ್ಯವಾದ ಪುಣ್ಯಫಲಗಳನ್ನು ಮುಕ್ತಿಯೋಗ್ಯರಾದ ಬ್ರಹ್ಮಾದಿದೇವತೆಗಳಿಗೂ, ರಜೋಗುಣ ಜನ್ಯವಾದ ಸುಖದುಃಖ ಮಿಶ್ರಿತವಾದ ಫಲಗಳನ್ನು ನಿತ್ಯಸಂಸಾರಗಳಿಗೂ ಮತ್ತು ತಮೋಗುಣಜನ್ಯವಾದ ಪಾಪಫಲಗಳನ್ನು, ದೈತ್ಯರಿಗೂ ಕೊಟ್ಟು, ಅವರ ಅನುಭವಕ್ಕೆ ತಂದೀಯುತ್ತಾ **ವೃಜಿನ** = ಪಾಪಗಳನ್ನು **ಅರ್ದನ** = ನಾಶ ಮಾಡುವ, ಅಂದರೆ, ಪಾಪಪರಿಹಾರಕನಾದ **ಚಿದಾನಂದೈಕದೇಹನು** **ಚಿತ್** = ಜ್ಞಾನವೇನು **ಆನಂದ** = ಸಂತೋಷವೇನು ಇವುಗಳೇ **ಏಕ** = ಮುಖ್ಯವಾದ (ಸಮರಹಿತವಾದ) **ದೇಹನು** = ದೇಹವುಳ್ಳ ಶ್ರೀ ಪರಮಾತ್ಮನು, (ಅಂದರೆ ಸಚ್ಚಿದಾನಂದಸ್ವರೂಪಿಯು) **ಕೊನಿಗೆ** = ಪ್ರಳಯಾರಂಭಕಾಲದಲ್ಲಿ **ಸಚರಾಚರ** = ಜಂಗಮ, ಸ್ಥಾವರಜೀವರು ಹಾಗೂ ಜಡಪದಾರ್ಥಗಳಿಂದ ಯುಕ್ತವಾದ **ಜಗತ್** = ಈ ಬ್ರಹಾಂಡವನ್ನು **ಭುಕು** = ನುಂಗಿ, ತನ್ನದುದರದಲ್ಲಿಪ್ರವೇಶ ಮಾಡಿಸಿ, ನಾರಾಯಣನು "ಜಗದ್ಭುಕ್" (ಜಗತ್ತಿನ ಸಂಹಾರಕಾರಕ) ಎಂಬ ನಾಮದಿಂದ **ಅವ್ಯಯನು** = ಅನಾದ್ಯನಂತಕಾಲಕ್ಕೂ ನಾಶರಹಿತನಾದ ಅಚ್ಯುತರೂಪೀ ಶ್ರೀಪರಮಾತ್ಮನು **ಎನಿಪ** = ಆ ಹೆಸರಿನಿಂದ ಕರೆಯಿಸಿಕೊಳ್ಳಲ್ಪಡುತ್ತಾನೆ. ॥೫॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಗುಣಿಗಳು ಮೂರು ಪ್ರಕಾರ :— (೧) ಸತ್ವಗುಣ ಸ್ವಭಾವದವರಾದ ಸುಖರೂಪರಾದ ಭಗವದ್ಭಕ್ತರು, ವಿಷ್ಣು ಸರ್ವೋತ್ತಮ ಎಂಬುವರು, (೨) ರಜೋಗುಣ ಸ್ವಭಾವದವರಾದ ನಿತ್ಯಸಂಸಾರಿಗಳು. ಪಂಚಭೇದ ಅಂಗೀಕರಿಸಿ, ತಾರತಮ್ಯ ಅಂಗೀಕರಿಸದೆ, ಶ್ರೀಪರಮಾತ್ಮನು ಸರ್ವೋತ್ತಮನೆಂಬಲ್ಲಿ ಮಿಶ್ರಜ್ಞಾನ ಉಳ್ಳವರು. ಸುಖದುಃಖಮಿಶ್ರವಾದ ಸ್ವರೂಪವುಳ್ಳವರು. (೩) ತಮೋಗುಣಸ್ವಭಾವದವರು. ದುಃಖರೂಪವಾದ ತಮೋಯೋಗ್ಯರು. ಭಗವದ್ದ್ವೇಷಿಗಳು. ಅಹಂ ಬ್ರಹ್ಮಾಸ್ಮಿ ಎನತಕ್ಕವರು,

ಈ ಪ್ರಕಾರ ತ್ರಿವಿಧ ಗುಣವುಳ್ಳವರು (ಜೀವರು) "ಗುಣಿ"ಗಳೆಂದು ಸಾಂಕೇತರು. ಆಯಾಯಾ ಜೀವರುಗಳಲ್ಲಿ ಪೂರ್ವೋಕ್ತ ಅವರವರ ಸ್ವಭಾವ ಗುಣಗಳಲ್ಲಿ ವ್ಯಾಪ್ತನಾಗಿದ್ದಾನೆ. "ಗುಣ" ಎಂದರೇ ತ್ರಿಗುಣಾತ್ಮಕಲಿಂಗ ದೇಹ. ಇಂತಹ ದೇಹವುಳ್ಳವ ಜೀವನಾದ್ದರಿಂದ, ಇದರಿಂದಲೂ ಜೀವನಿಗೆ "ಗುಣಿ" ಎಂದು ಹೆಸರು. ಜೀವವೇನು, ಲಿಂಗದೇಹವೇನು, ಅನಾದಿಗಳಾದ ಉಭಯಪ್ರಕಾರವಾದ ಗುಣಗಳಲ್ಲಿ ಮತ್ತು ಜೀವನಲ್ಲಿ ಇದ್ದು, ಗುಣಿ ಸಾಂಕೇತನಾದ ಜೀವನ ಸ್ವರೂಪದಲ್ಲಿ ಇದ್ದು "ಗುಣಿ" ಎಂತಲೂ, ಸಾಂಕೇತವಾದ ಲಿಂಗದೇಹದಲ್ಲಿದ್ದು "ಗುಣ" ಎಂತಲೂ, ನಾಮಾತ್ಮಕನಾಗಿ ಪರಮಾತ್ಮನು ಕರೆಯಿಸಿಕೊಳ್ಳುತ್ತಾನೆ. ಆದರೆ, ತಾನುಮಾತ್ರ ತ್ರಿಗುಣಾತ್ಮಕ ಲಿಂಗದೇಹರಿಂದ ಬದ್ಧನಾಗದೇ, ತ್ರಿಗುಣಾತ್ಮಕ ಲಿಂಗದೇಹೋಪಾದಾನದಿಂದ ಜನಿತಗಳಾದ ಲಿಂಗದೇಹಕ್ಕೆ ಆವರಣಗಳಾದ ಶರೀರಗಳಿಂದ (ಲಿಂಗ ದೇಹದ ಮೇಲೆ ವೈಷಯಿಕ ಸಾದಿ ಲಿಂಗಶರೀರವಿದೆ.) ಅದರಮೇಲೆ ಮಹತ್ತತ್ವ ಶರೀರವು, ಇದರಮೇಲೆ ಅಹಂಕಾರ ತತ್ವಶರೀರವು, ಇದರ ಮೇಲೆ ಪಂಚ

ಭೂತಾತ್ಮಕ ಪಂಚಾವರಣಗಳಿಂದ ಸಹಿತವಾದ ಅನಿರುದ್ಧ ಶರೀರವು. ಈ ಅನಿರುದ್ಧ ಶರೀರಾಖ್ಯ ಪಂಚಭೂತಾವರಣಗಳಲ್ಲಿ ಲಿಂಗದೇಹಸ್ಥ ಚತುರ್ವಿಂಶತಿ ತತ್ವಾಂಶಗಳು ಇರೋದಾಗಿ ಅವೆ. ಈ ದೇಹಗಳಿಗೆ ಪರಂಪರಾದಿಂದ ಉತ್ಪತ್ತಿ. ಇದು ಯಾವತ್ತೂ ಅಂಡದ ಹೊರಗಿನ ಸಪ್ತಾವರಣಗಳಾದ ಅಸಂಸೃಷ್ಟ ತತ್ವಗಳ ಸದೃಶ ಲಿಂಗೋಪಾದಾನ ಗುಣತ್ರಯದಿಂದ ಪರಂಪರಾ ಜನಿತಗಳು ಮತ್ತು ತದನ್ಯವಾದ ಜಗದುಪಾದಾನಕಾರಣವಾದ ಮೂಲಪ್ರಕೃತಿಯಾದ ತ್ರಿಗುಣಜನಿತ ಪಾಂಚಭೌತಿಕಸ್ಥೂಲದೇಹವು ಅನಿರುದ್ಧ ಶರೀರದ ಮೇಲೆ ಸರ್ವಪ್ರಾಣಿಗಳಿಗೆ ಅಗೋದಾಗಿ ಅದೆ. ("ಗುಣ" ಶಬ್ದದ ತಾತ್ಪರ್ಯವು ಇಷ್ಟು) ತಜ್ಜನಿತಗಳಾದ (ಗುಣಜ), ಇಂದ್ರಿಯಗಳ ದ್ವಾರಾ, ಭಗವತ್ಪ್ರೀತಿಕರವಾದ ಪುಣ್ಯಕರ್ಮಗಳಿಂದ ಮತ್ತು ಭಗವದಪ್ರಿಯಕರಗಳಾದ ಪಾಪಕರ್ಮಗಳಿಂದ ಉಂಟಾಗುವ ಸುಸಾಧನಿ ಮತ್ತು ದುಸ್ಸಾಧನಿಗೆ ಸಾಧಕವಾದಂಥಾ ದೇಹದಿಂದ ಭೋಗಮಾಡಲ್ಪಡತಕ್ಕ ಕರ್ಮಜನ್ಯಫಲಗಳ ಬ್ರಹ್ಮದೇವರೇ ಮೊದಲಾದ ಎಲ್ಲಾ ತತ್ವಾಭಿಮಾನಿದೇವತೆಗಳಿಗೂ, ಇನ್ನೂ ಸಮಸ್ತ ದೇವತೆಗಳಿಗೂ, ಇನ್ನೂ ದೇಹಗತನಾದ ಜೀವನಿಗೂ, ಅವರವರ ಯೋಗ್ಯತಾನುಸಾರ ನಿತ್ಯಸಂಸಾರಿಗಳಿಗೆ ಉದಾಸೀನಫಲ ತಮೋಯೋಗ್ಯರಿಗೆ ಪಾಪಕರ್ಮಫಲಗಳು ಈ ಪ್ರಕಾರ ತ್ರಿವಿಧದೇಹಗತ ಜೀವರಿಗೆ ಬಿಂಬಕ್ರಿಯಾದ್ವಾರಾ ತನ್ನ ಸ್ವಾಖ್ಯರಸಗಳ ತಾನು ಉಂಡು, ತತ್ವೇಶರ ದ್ವಾರಾ ದೇಹಗತಜೀವನಿಗೆ ಕರ್ಮಫಲಗಳ ಉಣಿಸುತಾ, ಆಯಾ ದೇಹಗತ, ಆಯಾ ತತ್ವೇಶರ ಒಳಗೆ ಇದ್ದು, ಪಾಪಗಳ ನಾಶಮಾಡಕ್ಕವನೂ, ಸಚ್ಚಿದಾನಂದಮೂರ್ತಿಯೂ ಆದ ಪರಮಾತ್ಮನು ಸ್ಥಿತಿಕಾಲದ ಅಂತ್ಯಕ್ಕೆ ಸಂಕರ್ಷಣರೂಪದಿಂದ ಚರಾಚರ ನಾಶಮಾಡಿದ ನಂತರ, ಜಂಗಮಜೀವರು, ಸ್ಥಾವರಜೀವರು ಇವರಿಂದ ಸಹಿತರಾದ ತ್ರಿವಿಧಜೀವರ ಮುಖದ್ವಾರದಿಂದ ಅನ್ನಾದಿಗಳು ಭೋಜನಮಾಡಿ ಉದರದಲ್ಲಿ ಇಡುವಂತೆ, ಮುಖದ್ವಾರದಿಂದ ತನ್ನ ಉದರದಲ್ಲಿ ನಾರಾಯಣದೇವರು ಇಟ್ಟವನಾಗಿ, ಆಯಾಜೀವರ ಅನ್ನೋದಕಾದಿಗಳಿಗೆ ಉದರದಲ್ಲಿ ಸ್ಥಾನಭೇದಗಳು ಇದ್ದಂತೆ, ಇಡತಾನೆ. ಆದಕಾರಣ ಶ್ರೀಮನ್ನಾರಾಯಣದೇವರು "ಜಗದ್ಭುಕು" ಎಂತ ಎನಿಸೋವನಾಗತಾನೆ. ಇನ್ನು ಅನಂತಾನಂತ

ಬ್ರಹ್ಮಾಂಡಗಳ ಹಾಂಗೆ ಜೀವರು ಜನಿಸಿ ದೇಹದಿಂದ ನಾಶ ಐದಿ ಮುಕ್ತರಾಗಿ ಬೇರೆ ಬರೋವವರಾಗಿದ್ದಾರೆ. ಆದರೆ ಅನಾದ್ಯನಂತಕಾಲಕ್ಕೂ ನಾಶರಹಿತನಾದವನು ಪರಮಾತ್ಮನೊಬ್ಬನೇ, ಅನ್ಯದುದಾರೂ ಇಲ್ಲವಾದ ಕಾರಣ ಅವ್ಯಯನು, ಎಂತ ಕರಿಸೋವನಾಗತಾನೆ ಎಂತ ತಾತ್ಪರ್ಯ.

**ವಿಶೇಷಾರ್ಥ :—**

ನಿತ್ಯ ಸಂಸಾರಿಗಳಿಗೆ ಸರ್ವಜೀವರ ದೇಹಾಭಿಮಾನತ್ವ, ಇಂದ್ರಿಯ ನಿಯಾಮಕತ್ವ ಇದೆ ಎಂಬುದಕ್ಕೆ ಪ್ರಮಾಣ :—

**"ದೇಹೇಂದ್ರಿಯ ಪ್ರಾಣಧಿಯಾಂಸ್ತ ಥೈವತ್ವಭಿಮಾನಿನಃ ॥ ತತ್ರೋತ್ತಮಾದೇವತಾಸ್ತಾಃ ಸರ್ವದೋಷವಿವರ್ಜಿತಾಃ ॥ ಗುಣೈಸ್ಸರ್ವೈಃ ಸುಸಂಪನ್ನಾ ವಿರಿಂಚಾದುತ್ತರೋತ್ತರಂ ॥ ಮಧ್ಯಮಾ ಗುಣದೋಷೇತಾಃ ಅಥವಾ ಅಸುರಾಮತಾಃ ॥ ತೇ ಸರ್ವೇ ದೋಷ ಸಂಯುಕ್ತಾಃ ಅಚಿತ್ತಾದುತ್ತರೋತ್ತರಂ ॥ ತೇಭ್ಯೋಽನ್ಯೇ । ಮಾನುಷಾಜೀವಾಃ ತಾಭ್ಯಾಂ ದೇವಾಸುರಾ ಅಪಿ ॥".**

**"ತೇಭ್ಯೋಽನ್ಯೇ ಮಾನುಷಾ ಜೀವಾಃ"** –ಅಂದರೆ, ಪೂರ್ವೋಕ್ತ ದೇಹಾಭಿಮಾನಿ ತ್ರಿವಿಧ ಸಾಂಶರಕ್ಕಿಂತಲೂ ಅನ್ಯರಾದ ನಿರಂಶಜೀವರು ಎಂತ ತಾತ್ಪರ್ಯ. ತಾಭ್ಯಾಂ = ಈ ಸಾಂಶನಿರಂಶರಲ್ಲಿ ದೇವತೆಗಳು, ಅಸುರರು, ಅಪಿಶಬ್ದದಿಂದ ನಿತ್ಯಸಂಸಾರಿಗಳೂ ಇದ್ದಾರೆ ಎಂತ ತಾತ್ಪರ್ಯ. ಇದರಿಂದ ನಿತ್ಯ ಸಂಸಾರಿಗಳಿಗೆ ಸಾಂಶತ್ವವು, ತತ್ವಾಭಿಮಾನಿತ್ವವೂ ಏರ್ಪಡುತ್ತದೆ. ಅತಏವ ಪರಮಾತ್ಮ ಉದಾಸೀನ ಕರ್ಮಫಲವನ್ನು ದೇಹಗತ ತತ್ವಾಭಿಮಾನಿಗಳಾದ ನಿತ್ಯಸಂಸಾರಿಗಳಿಗೆ ವಿಭಾಗಿಸಿ ಕೊಡತಾನೆ. ಪುರಂಜನ ಎಂಬುವ ನಿತ್ಯಸಂಸಾರಿಜೀವರೊಳಗೆ ಬ್ರಹ್ಮಸದೃಶನಾದವನು ಎಂತ ವಿಜಯದಾಸರ ಸುಳಾದಿಯಲ್ಲಿಯೂ, ಪದಗಳಲ್ಲಿಯೂ, ಉಗಾಭೋಗಗಳಲ್ಲಿಯೂ ಹೇಳಿದೆ. ॥೫॥

## (೨) "ಭಾವಪ್ರಕಾಶಿಕೆ" –ವ್ಯಾಖ್ಯಾನ :—

ಗುಣವುಳ್ಳವರಿಗೆ "ಗುಣಿ" ಎಂದು ಹೆಸರು. ಇದರಲ್ಲಿ ಸತ್ವಗುಣ ಹೆಚ್ಚಾಗಿ ಉಳ್ಳವರು ಸಾತ್ವಿಕರೆನಿಸುವರು. ಇವರು ಬ್ರಹ್ಮಾದಿದೇವತೆಗಳು. ರಾಜಸರಾದ ಮನುಷ್ಯರು ರಜೋಗುಣವುಳ್ಳವರು. ತಾಮಸರೆಂದರೆ ತಮೋಗುಣವುಳ್ಳ ದೈತ್ಯರಾದವರು. ಇಂತಹ ಗುಣಗಳಾದ ದೇವ ಮನುಷ್ಯ ದೈತ್ಯಾದಿಗಳಲ್ಲಿಯೂ, ಸತ್ವರಜಸ್ತಮೋಗುಣಗಳಲ್ಲಿಯೂ ಇದ್ದು ಬ್ರಹ್ಮ ದೇವರಲ್ಲಿದ್ದು ಬ್ರಹ್ಮನಾಮಕನಾಗಿಯೂ, ರುದ್ರದೇವರಲ್ಲಿದ್ದು ರುದ್ರ ನಾಮಕನಾಗಿಯೂ, ಇಂದ್ರಾದಿ ದೇವತೆಗಳಲ್ಲಿದ್ದು ಇಂದ್ರಾದಿ ನಾಮವುಳ್ಳ ವನಾಗುವನು. ಹಾಗೆಯೇ ಮನುಷ್ಯರಲ್ಲಿದ್ದು ಮನುಷ್ಯರ ನಾಮಧೇಯ ಯುಕ್ತನಾಗುವನು. ದೈತ್ಯದಾನವರಲ್ಲಿದ್ದು ತನ್ನಾಮಧೇಯುವನ್ನು ಪಡೆಯು ವನು. ಸತ್ವಗುಣದಲ್ಲಿದ್ದು ಸತ್ವಗುಣನೆಂತಲೂ, ರಜೋಗುಣದಲ್ಲಿದ್ದು ರಜೋಗುಣನೆಂತಲೂ. ತಮೋಗುಣದಲ್ಲಿದ್ದು ತಮೋಗುಣನೆಂತಲೂ ಹೆಸರು ಪಡೆದಿರುವನು. ಹೀಗೆ ಪ್ರಾಕೃತವಾದ ಸತ್ವಾದಿಗುಣಗಳಲ್ಲಿದ್ದು ಸತ್ವಾದಿ ಶಬ್ದವಾಚ್ಯನಾಗುವನೇಹೊರತು, ಆ ಗುಣಗಳಿಗೆ ತಾನೆಂದೂ ಒಳ ಗಾಗನು. ಸಾತ್ವಿಕರಾದ ಬ್ರಹ್ಮಾದಿ ದೇವತೆಗಳಲ್ಲಿದ್ದು, ಸತ್ವಗುಣಜನ್ಯವಾದ ಪುಣ್ಯಫಲಗಳನ್ನು ಅವರವರ ಯೋಗ್ಯತಾನುಸಾರ ಅವರಿಗುಣಿಸುವನು. ರಾಜಸರಾದ ಮನುಷ್ಯರಲ್ಲಿದ್ದು ರಜೋಗುಣಜನ್ಯವಾದ ಮಿಶ್ರಫಲವನ್ನು ಅವರವರ ಯೋಗ್ಯತಾನುಸಾರ ಉಣಿಸುವನು. ತಾಮಸರಾದ ದೈತ್ಯದಾನವ ರೊಳಗಿದ್ದು ತಮೋಗುಣಜನ್ಯವಾದ ಪಾಪಫಲಗಳನ್ನು ಅವರವರ ಯೋಗ್ಯ ತಾನುಸಾರ ಉಣಿಸುವನು. ತಾನು ಪರಕೀಯರ ಪಾಪಗಳನ್ನು ಪರಿಹರಿಸುವು ದರಿಂದ ವೃಜಿನಾರ್ದನನೆಂದು ಪರಮಾತ್ಮನಿಗೆ ಹೆಸರು. ತಾನು ಪಾಪಿ ಯಾದರೆ, ಪರರ ಪಾಪಗಳನ್ನು ಪರಿಹರಿಸುವುದೆಂತು ? ಪರರ ಪಾಪ ಗಳನ್ನು ಪರಿಹರಿಸುವನೆಂದು ಹೇಳಿದುದರಿಂದ ಸ್ವತಃ ಪಾಪರಹಿತನೆಂದು ಸಿದ್ಧವೇ ಆಗುವುದು. ಕೇವಲ ಪಾಪರಹಿತನೇ ಅಲ್ಲದೆ ಜ್ಞಾನಾನಂದಸ್ವರೂಪನೂ ಆಗಿರುವನು. ರಮಾಬ್ರಹ್ಮಾದಿಗಳೂಕೂಡ ಜ್ಞಾನಾನಂದಸ್ವರೂಪರೇ

ಆದರೂ ಅವರುಗಳು ಪರಿಮಿತಿಯುಳ್ಳ ಜ್ಞಾನಾನಂದ ಉಳ್ಳವರು. ಪರಮಾತ್ಮನ ಜ್ಞಾನಾನಂದವು ಅಪರಿಮಿತವಾದದ್ದು ಮತ್ತು ಸಮಾನರಹಿತವಾದದ್ದು. ಅದಲ್ಲದೆ ಪರಾಪೇಕ್ಷೆಯಿಲ್ಲದೆ ಸ್ವತಂತ್ರದಿಂದ ಅನುಭವಿಸುವ ಜ್ಞಾನಾನಂದಸ್ವರೂಪವು ಪರಮಾತ್ಮನದು. ರಮಾದಿಗಳ ಜ್ಞಾನಾನಂದವು ಭಗವಧೀನವಾದುದು. ಆದುದರಿಂದ ಪರಮಾತ್ಮನೊಬ್ಬನೇ ಜ್ಞಾನಾನಂದಸ್ವರೂಪಿಗಳಲ್ಲಿ ಮುಖ್ಯನೆಂದು ತಾತ್ಪರ್ಯ. ಶ್ರೀಪರಮಾತ್ಮನು ಪ್ರಳಯಕ್ಕಾರಂಭಕಾಲದಲ್ಲಿ ರುದ್ರಾಂತರ್ಗತನಾಗಿದ್ದು, ಸಂಕರ್ಷಣನಾಮಕನಾಗಿ ಪ್ರಪಂಚವನ್ನೆಲ್ಲಾ ದಹಿಸುವನು. ಭಾಗವತ ದಶಮಸ್ಕಂಧದಲ್ಲಿ— **"ತತಃ ಸಾಂವರ್ತಕೋವಹ್ನಿಃ ಸಂಕರ್ಷಣಮುಖೋತ್ಥಿತಃ ॥ ದಹತ್ಯನಿಲವೇಗೋತ್ಥಃ ಶೂನ್ಯಾನ್ಭೂಮಿವರಾನ್ತಥಾ ॥"** ತದನಂತರ ಸಂಕರ್ಷಣನ ಮುಖದಿಂದ ಹೊರಟ ಸಂವರ್ತಾಗ್ನಿಯು ಶೂನ್ಯವಾದ ಭೂವಿವರಗಳನ್ನು ದಹಿಸುವುದೆಂದು ಬರದಿದೆ. ಚರಪ್ರಾಣಿಗಳೆಂದರೆ, ಚಲಿಸುತ್ತಿರುವ ನರಪಿಪೀಲಕಾದಿ ಸಕಲಪ್ರಾಣಿಗಳು. ಅಚಲವೆಂದರೆ ಚಲಿಸದೆ ಇರುವ ಸ್ಥಿರವಸ್ತುಗಳು. ಇವುಗಳಿಂದಕೂಡಿದ ಎಲ್ಲಾ ಪ್ರಪಂಚವನ್ನೂ ಪ್ರಳಯದಲ್ಲಿ ಪರಮಾತ್ಮನು ನುಂಗಿ, ತನ್ನುದರದಲ್ಲಿಟ್ಟುಕೊಂಡು ವಟಪತ್ರಶಾಯಿಯಾಗುವನು. ಆದುದರಿಂದ ಪರಮಾತ್ಮನು ಸಚರಾಚರಜಗದ್ಭುಕ್ ಎಂದೆನಿಸಿಕೊಳ್ಳುವನು. ಅವನಿಗೆ ಯಾವ ವಿಧವಾದ ನಾಶವೂ ಇಲ್ಲದ ಕಾರಣ ಅವ್ಯಯನೆಂದು ತಿಳಿಯಬೇಕು ॥೫॥

(೨) **"ಭಾವಪ್ರಕಾಶಿಕೆ"—ವ್ಯಾಖ್ಯಾನ :—**

ಗುಣಗಳುಳ್ಳವನಲ್ಲಿಯೂ, ಗುಣದಲ್ಲಿಯೂ ಸಹ ತಾನೇ ಇದ್ದು ಗುಣಜನ್ಯವಾದಂಥ ಪುಣ್ಯಪಾಪಾದಿಗಳು ಸರ್ವರಿಗೂ ಉಣಿಸುತ್ತಾನೆಂದೂ. ತಾನು ನಿರ್ಲಿಪ್ತನಾಗಿ ಇರುತ್ತಾನೆಂದೂ ಹೇಳುತ್ತಾರೆ— "ಗುಣಿ" —ಎಂಬ ಪದ್ಯದಿಂದ.

ವೃಜಿನ = ದೋಷ, ವೃಜಿನಾರ್ದನ = ದುಃಖನಾಶಮಾಡುವವ, ಕೊನೆ = ತುದಿ, ಕೊನಿಗೆ = ಕಡೆಯಲ್ಲಿ, ಸಚರಾಚರ = ಜೀವಜಡಸಹಿತ,

ಚರಾಚರಜಗದ್ಭುಕ್ = ಜಡಚೇತನಾತ್ಮಕ ಪ್ರಪಂಚವನ್ನು ಪರಮಾತ್ಮನೇವೇ ಭೋಜನಮಾಡುವವೆಂದರ್ಥ ॥ **ಯಥೋಕ್ತಂಚ ಭವಿಷ್ಯೋತ್ತರೇ—** **"ಭುಂಕ್ತೇ ವಿಶ್ವಭುಗವ್ಯಯಃ"** ಇತಿ ॥ ಅವ್ಯಯ ನಾಶರಹಿತನೆಂದರ್ಥ ॥೫॥

## (೪) ಶ್ರೀ ಜನುಖಂಡಿವಾದಿರಾಜಾಚಾರ್ಯರ ವ್ಯಾಖ್ಯಾನ :—

### (ಸಂಸ್ಕೃತಮೂಲ) :—

ಗುಣೇತಿ ಜೀವಾಃ ॥ ಗುಣಾಃ ಸತ್ವಾದ್ಯಾಃ ॥ ಅಂತರ್ಯಾಮಿಣ ಮಿತಿ ಶ್ರುತೇಃ ॥ ಆದಿನಃ ರಾಕ್ಷಸಾಃ ಪ್ರೋಕ್ತಾಃ ಇತ್ಯುಕ್ತೇಃ । ಆದಯಃ ಕಲ್ಯಾದ್ಯಾಃ । ವೃಜಿನಂ ಪಾಪಂ—ದುಃಖಂವಾ ॥ ಚರಾಚರೇತಿ ಅತ್ತ್ರ್ಯನಯಾರ್ಥಃ ॥೫॥

### ಕನ್ನಡಾನುವಾದ :—

ಸತ್ವ ಮುಂತಾದವು ಗುಣಗಳು. ಗುಣಯುಕ್ತವಾದ ಶರೀರಗಳಲ್ಲಿ ಮತ್ತು ಗುಣಿಯಾದ (ದೇಹಿ) ಜೀವರುಗಳಲ್ಲಿಯೂ ಪರಮಾತ್ಮನು ಅಂತ ರ್ಯಾಮಿತ್ವೇನ ಇರುವನು. ಇದರಿಂದ "ಗುಣಿ" ಮತ್ತು ಗುಣಶಬ್ದವಾಚ್ಯನು. ಸರ್ವಶಬ್ದಗಳೂ ಹರಿಯಲ್ಲಿಯೇ ಮುಖ್ಯ ತಾತ್ಪರ್ಯವನ್ನು ಹೊಂದುವುವು. "ಬ್ರಹ್ಮಾದಿ ಚೇತನಕೆ" —ಎಂಬಲ್ಲಿ "ಆದಿ" ಶಬ್ದದಿಂದ ಕಲಿ ಮೊದಲಾದವರು ಎಂದು ಪರಿಗಣಿಸಬೇಕು. ವೃಜಿನಾರ್ದನ ಎಂಬಲ್ಲಿ—ವೃಜಿನ ಅಂದರೆ ಪಾಪ ಗಳನ್ನು (ದುಃಖ) ನಾಶಮಾಡುವನು ಎಂದರ್ಥ, "ಸಚರಾಚರಜಗದ್ಭುಕ್" ಎಂಬ ವಿಶೇಷಣವು **"ಓಂ ಅತ್ತಾಚರಾಚರಗ್ರಹಣಾತ್ ಓಂ"** —ಎಂಬ **ಅಧಿಕರಣಾರ್ಥ**ವನ್ನು ವಿವರಿಸುವುದು ॥೫॥

## (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ:

ಸತ್ವಾದಿಬದ್ಧರಾದ ಗುಣಿಗಳೆಂಬ ಜೀವರಲ್ಲೂ, ಸತ್ವಾದಿಗುಣಗಳಲ್ಲೂ ವ್ಯಾಪ್ತನಾಗಿದ್ದು, ಗುಣಿಗುಣನೆಂಬ ಹೆಸರುಳ್ಳವನಾಗಿ, ಆ ಗುಣಸಂಗ ದೋಷರಹಿತನಾಗಿ, ಗುಣಕರ್ಮಗಳಿಂದ ಹುಟ್ಟುವ, ಪುಣ್ಯಾಪಾಪಗಳನ್ನೂ,

ಪುಣ್ಯಫಲ ಬ್ರಹ್ಮಾದಿಗಳಿಗೆ, ಪಾಪಫಲ ಅಸುರರಿಗೆ ಭೋಗಪಡಿಸುತ್ತಾ, ಅವರಲ್ಲಿದ್ದು ಪಾಪಹರನಾಗಿ, ಜ್ಞಾನಾನಂದವೇದೇಹವಾಗಿ ಉಳ್ಳವನು. ಪ್ರಳಯಕಾಲದಲ್ಲಿ ಚರಾಚರಜಗತ್ತನ್ನು ಸಂಹರಿಸಿ, "ಜಗದ್ಭುಕ್"ನೆಂದೆನಿಸುವನು. ನಾಶರಹಿತನು ವ್ಯಾಪ್ತನು.

**"ಸರ್ವೇಂದ್ರಿಯಗತೋ ವಿಷ್ಣುಃ ಸರ್ವಪ್ರಾಣಿಷುಸಂಸ್ಥಿತಃ । ಸರ್ವವೇದೋದಿತಶ್ಚಸಃ"— ಎಂಬ ಭಾಷ್ಯೋಕ್ತಿ** ವಿವರಿಸಿತು. ॥೫॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಗುಣವನ್ನು ಯಾವುದು ಹೊಂದಿದೆಯೋ ಅದಕ್ಕೆ "ಗುಣೀ" ಎಂದು ಹೆಸರು. ಹೀಗೆ ಗುಣವಿಶಿಷ್ಟವಾದ ಜೀವವರ್ಗವು ತ್ರಿವಿಧ. ಸತ್ವಗುಣ ವಿಶಿಷ್ಟರಾದ ಬ್ರಹ್ಮಾದಿ ದೇವತೆಗಳು "ಸಾತ್ವಿಕ"ರೆನಿಸಿಕೊಳ್ಳುವರು. ರಜೋಗುಣೋಪೇತರಾದ ಮಾನವರು "ರಾಜಸರು" ತಮೋಗುಣಾತ್ಮಕರಾದ ದೈತ್ಯರು "ತಾಮಸರು" ಹೀಗೆ ಸಾತ್ವಿಕ, ರಾಜಸ ಮತ್ತು ತಾಮಸರೆಂಬ ತ್ರಿವಿಧವರ್ಗದ ಗುಣಿಗಳಲ್ಲಿ ಅಂತರ್ಯಾಮಿರೂಪದಿಂದ ಪರಮಾತ್ಮನು ಇದ್ದು, ಅದೇ ಶಬ್ದವಾಚ್ಯನಾಗಿ, ತತ್ತನ್ನಾಮಗಳಿಂದ ಕರೆಯಿಸಿಕೊಳ್ಳುವನು. ಅಂತೆಯೇ ಸತ್ವ, ರಜಸ್ತಮೋಗುಣಗಳೆಂಬ ತ್ರಿಗುಣರಾಶಿಗಳಲ್ಲಿದ್ದು "ಗುಣ"ನೆಂದೆನಿಸಿಕೊಳ್ಳುವನು. ಅಯಾ, ಗುಣಿಗುಣಗಳೊಳಿಗೆ ವ್ಯಾಪ್ತರೂಪದಿಂದಿರುವ ಜಗತ್ಸ್ವಾಮಿಯು ಗುಣಿಗುಣನೆಂದೇ ವ್ಯವಹರಿಸಲ್ಪಡುತ್ತಾನೆ. ಆದರೆ ತತ್ಸಂಬಂಧವಾದ ಗುಣಗಳಿಂದ ನಿರ್ಲಿಪ್ತನಾಗಿದ್ದಾನೆ. ಆಯಾಯಾ ಗುಣಿಗುಣಗಳಲ್ಲಿದ್ದರೂ, ತಜ್ಜನ್ಯವಾದ ಗುಣದೋಷಗಳಿಂದ ಅಸ್ಪೃಷ್ಟನಾಗಿದ್ದಾನೆ. ಅಂದರೆ-ಅವುಗಳಿಂದ ಪರಮವಿಲಕ್ಷಣನು. ಇದರಿಂದ ಗುಣಿಯಾದ ಚೇತನರಿಂದಲೂ ಮತ್ತು ಗುಣಗಳಾದ ಜಡಗಳಿಂದಲೂ ಅತ್ಯಂತಭಿನ್ನನು. ಗುಣಕ್ಕನುಗುಣವಾದ ಕರ್ಮವಿಶೇಷಗಳು. ಕರ್ಮಾನುಸಾರ ಫಲಪ್ರಾಪ್ತಿ, ಸದ್ಗುಣಗಳಿಂದ ಸತ್ಕರ್ಮಾಚರಣೆ. ಅದರಿಂದ ಪುಣ್ಯಫಲಪ್ರಾಪ್ತಿ. ದುರ್ಗುಣಗಳಿಂದ ದುಷ್ಕರ್ಮಾಚರಣೆ. ತಜ್ಜನ್ಯವಾದ ಪಾಪಫಲಪ್ರಾಪ್ತಿ. ರಜೋಗುಣ

ದಿಂದ ಮಿಶ್ರಕರ್ಮ. ಅದರಿಂದ ಸುಖದುಃಖರೂಪವಾದ ಮಿಶ್ರಫಲಪ್ರಾಪ್ತಿ, ಈರೀತಿ ಗುಣಜನ್ಯವಾದ ಪುಣ್ಯಾಫಲಗಳನ್ನು ಬ್ರಹ್ಮಾದಿ ಜೀವರಿಗೆ ಅವರ ಯೋಗ್ಯತಾನುಸಾರ ಉಣಿಸುವನು. "ಬ್ರಹ್ಮಾದಿ" ಎಂಬ ಶಬ್ದದಲ್ಲಿ "ಆದಿ" ಶಬ್ದದಿಂದ ನಿತ್ಯಸಂಸಾರಿಗಳು ಮತ್ತು ಕಲ್ಯಾದಿಜೀವರನ್ನು ತೆಗೆದುಕೊಳ್ಳಬೇಕು. ಅಂದರೆ ಬ್ರಹ್ಮಾದಿ ದೇವತಾವರ್ಗಕ್ಕೆ ಸತ್ವಗುಣಜನ್ಯವಾದ ಪುಣ್ಯಫಲಗಳನ್ನೂ, ರಜೋಗುಣವಿಶಿಷ್ಟರಾದ ಮಧ್ಯಮಜೀವರಿಗೆ (ಮಿಶ್ರಜೀವರು) ರಜೋಗುಣಜನ್ಯವಾದ ಮಿಶ್ರಫಲವನ್ನೂ ಮತ್ತು ಕಲ್ಯಾದಿ ಜೀವರಿಗೆ ತಮೋಗುಣಜನಿತವಾದ ಪಾಪಫಲಗಳನ್ನೂ ಕೊಡುವನು. ಅವರವರ ಗುಣದಂತೆ ಕರ್ಮ. ಕರ್ಮಾನುಸಾರಫಲಪ್ರಾಪ್ತಿ. ಇದರಿಂದ ಪರಮಾತ್ಮನು ನಿಷ್ಪಕ್ಷಪಾತಿ ಎನಿಸುವನು. ಅವನಿಗೆ ವೈಷಮ್ಯಾದಿ ದೋಷಗಳಿಲ್ಲ. ಅಂತಹ ಬ್ರಹ್ಮಾದಿ ಚೇತನವರ್ಗದಲ್ಲಿ ಅಂತರ್ಭೂತನಾಗಿದ್ದು, ಸ್ವಭಕ್ತರು ಮಾಡಿದ ಪಾಪಗಳನ್ನು ನಾಶಮಾಡುತ್ತಾನೆ (ಉತ್ತಮಚೇತನರು ಪಾಪಕರ್ಮಗಳಿಗಾಗಿ ಪಶ್ಚಾತ್ತಾಪಪಟ್ಟು, ಪರಮಾತ್ಮನಲ್ಲಿ ಶರಣಾಗತರಾಗುತ್ತಾರೆ. ಭಗವದ್ಭಕ್ತಿಯೇ ಅವರ ಪರಮಲಕ್ಷಣ). ಇದರಿಂದ ಶ್ರೀಹರಿಗೆ "ವೃಜಿನಾರ್ದನ"ನೆಂದು ಹೆಸರು. ಪಾಪಪರಿಹಾರಕನಾದ ಶ್ರೀಹರಿಗೆ ತತ್ಸಂಬಂಧವಾದ ಪಾಪಲೇಪಗಳಾವುವೂ ಇಲ್ಲವೇ ಇಲ್ಲ. ಅತಏವ ಸಮಸ್ತದೋಷವಿವರ್ಜಿತನು. ಶ್ರೀ ಪರಮಾತ್ಮನು ಜ್ಞಾನಾನಂದಸ್ವರೂಪಿಯು. ಚಿದಾನಂದೈಕದೇಹಿಯಾದ ಆ ಮಂಗಳಸ್ವರೂಪಿಯು ಮಹಾ ಪ್ರಳಯಕಾಲದಲ್ಲಿ ಜಡ ಮತ್ತು ಚೇತನಾತ್ಮಕವಾದ ಈ ಸಮಸ್ತ ಜಗತ್ತನ್ನೂ ನುಂಗಿ (ಲಯಗೊಳಿಸಿ) ತನ್ನ ಉದರದಲ್ಲಿ ಆಶ್ರಯ ಕೊಡುವನು. ಆಗ ಜಗತ್ತಿನ ಸೃಷ್ಟಿಗೆ ಉಪಾದಾನಕಾರಣವಾದ ಚತುರ್ವಿಂಶತಿ ತತ್ವಗಳು ಮೂಲಪ್ರಕೃತಿಯಲ್ಲಿ ಲಯಹೊಂದುವುವು. ಹೀಗೆ ಗುಣಸಾಮ್ಯಕ್ರಮದಿಂದ ಲಯಕಾರಕನಾದ ಶ್ರೀ ಪರಮಾತ್ಮನಿಗೆ "ಜಗದ್ಭುಕ್" ಎಂದು ಹೆಸರು. ಅಂದರೆ, ಸಮಗ್ರವಿಶ್ವವನ್ನು ನುಂಗುವವನು ಎಂದು ತಾತ್ಪರ್ಯ. ಅನಾದ್ಯಂತಕಾಲಕ್ಕೂ ಶ್ರೀ ಪರಮಾತ್ಮನು ವಿಕಾರರಹಿತನು. ಶಶ್ವದೇಕಪ್ರಕಾರನಾಗಿ, ನಾಶರಹಿತನಾದ್ದರಿಂದ ಅವ್ಯಯನು. ॥೫॥

# ಪದ್ಯ (೬)

**ಮೂಲ :—**

ವಿದ್ಯೆ ತಾನೆಂದಿನಿಸಿಕೊಂಬನಿ ।
ರುದ್ಧದೇವನು ಸರ್ವಜೀವರ ।
ಬುದ್ಧಿಯೊಳ್ ನೆಲೆಸಿದ್ದು ಕೃತಿಪತಿ ಬುದ್ಧಿಯೆನಿಸುವನು ॥
ಸಿದ್ಧಿಯೆನಿಸುವ ಸಂಕರುಷಣ ಪ್ರ ।
ಸಿದ್ಧನಾಮಕ ವಾಸುದೇವನ ।
ವದ್ಯರೂಪ ಚತುಷ್ಟಯೆಗಳರಿತವನೆ ಪಂಡಿತನು ॥ ॥೬॥

**ಅವತರಣಿಕೆ :—**

ವಿದ್ಯಾ, ಬುದ್ಧಿ, ಸಿದ್ಧಿ ಮತ್ತು ಪ್ರಸಿದ್ಧಿ ಎಂಬ ರೂಪಚತುಷ್ಟಯಾತ್ಮಕನಾಗಿದ್ದು, ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ತನ್ನ ಪ್ರಾದುರ್ಭಾವರೂಪಗಳಿಂದ ವಿರಾಜಮಾನನಾಗಿ ನಿಯಾಮಕನಾದ ಶ್ರೀಹರಿಯ ವೈಭವವನ್ನು ನಿರೂಪಿಸುತ್ತಾರೆ "ವಿದ್ಯೆ" ಎಂಬ ಈ ಪದ್ಯದಿಂದ. ॥೬॥

**ಪ್ರತಿಪದಾರ್ಥ :—**

**ಅನಿರುದ್ಧದೇವನು** = ಅನಿರುದ್ಧನಾಮಕ ಪರಮಾತ್ಮನು **ವಿದ್ಯೆ** = ಅಹಂಕಾರವೃತ್ತಿಯಲ್ಲಿ ವಿದ್ಯಮಾನವಾದ ಅಹಂಮಮತಾದಿಗಳನ್ನು ಬಿಡಿಸಿ, ತಾರತಮ್ಯ ಪಂಚಭೇದಗಳ ಸುಜ್ಞಾನರೂಪವಾದ ವಿದ್ಯೆಯನ್ನು ಅಭಿವ್ಯಕ್ತಿಗೊಳಿಸುತ್ತಾ (ಜೀವೇಶ್ವರಿಗೆ ಪರಸ್ಪರ ಭೇದವನ್ನು ತಿಳಿಸುಸುವ ಜ್ಞಾನವಿಶೇಷವೇ ವಿದ್ಯೆಯು) **ತಾನೆಂದು** = ವಿದ್ಯಾಸ್ವರೂಪನಾಗಿ ಇರತಕ್ಕವನೆಂದು **ಎನಿಸಿಕೊಂಬನು** = ಎಂದೆನಿಸಿಕೊಳ್ಳುತ್ತಾನೆ. **ಕೃತಿಪತಿ** = ಕೃತಿನಾಮಕಳಾದ ಶ್ರೀ ರಮಾದೇವಿಯರಪತಿ ಪ್ರದ್ಯುಮ್ನನಾಮಕ ಪರಮಾತ್ಮನು **ಸರ್ವ**

**ಜೀವರ** = ಸಮಸ್ತಜೀವರ (ಮುಕ್ತಿಯೋಗ್ಯಜೀವರು ವಿಶೇಷವಾಗಿ ಗ್ರಾಹ್ಯ) **ಬುದ್ಧಿಯೊಳ್** = ಬುದ್ಧಿಸಾಂಕೇತ ವೃತ್ತಿಯಲ್ಲಿ **ನೆಲೆಸಿದ್ದು** = ಆವಾಸನಾಗಿದ್ದು (ವ್ಯಾಪ್ತರೂಪದಿಂದಿದ್ದು) **ಬುದ್ಧಿ ಎನಿಸುವನು** = ಪೂರ್ವೋಕ್ತ ರೀತ್ಯಾ ಉತ್ಪನ್ನವಾದ ಜ್ಞಾನವಿಷಯದಲ್ಲಿ ನಿಶ್ಚಯವಾದ ಬುದ್ಧಿಯನ್ನು ಕೊಟ್ಟು, ತದಂತರ್ಗತನಾಗಿ ನಿಶ್ಚಯಬುದ್ಧಿ ಎಂದು ಕರೆಯಿಸುತ್ತಾನೆ. **ಸಂಕರುಷಣ** = ಸಂಕರ್ಷಣನಾಮಕ ಶ್ರೀ ಪರಮಾತ್ಮನು **ಸಿದ್ಧಿಯೆನಿಸುವ** = ಹಾಗೆ ಉತ್ಪನ್ನವಾದ ಜ್ಞಾನವು ಪುನಃ ವಿಕಲ್ಪವಾಗದಂತೆ ಮನೋವೃತ್ತಿ ದ್ವಾರಾ ವಿಶೇಷವಾಗಿ ಸಿದ್ಧಿಮಾಡಿಕೊಟ್ಟು "ಸಿದ್ಧಿ" ಶಬ್ದವಾಚ್ಯನಾಗಿದ್ದಾನೆ. **ಪ್ರಸಿದ್ಧನಾಮಕ** = ಪ್ರಸಿದ್ಧ ಎಂಬ ಹೆಸರಿನಿಂದ ಖ್ಯಾತನಾಮನಾಗಿರುವ **ವಾಸುದೇವನ** = ವಾಸುದೇವಾತ್ಮಕನಾದ ಶ್ರೀಪರಮಾತ್ಮನ **ಅನವದ್ಯ** = ದೋಷರಹಿತವಾದ **ರೂಪಚತುಷ್ಟಯಗಳ** = ಪೂರ್ವೋಕ್ತ ಅನಿರುದ್ಧಾದಿ ನಾಲ್ಕು ರೂಪಗಳನ್ನು **ಅರಿತವನೇ** = ಶಾಸ್ತ್ರದ್ವಾರಾ ಚೆನ್ನಾಗಿ ತಿಳಿದಿರುವವನೇ **ಪಂಡಿತನು** = ಜ್ಞಾನಿಯು. ॥೬॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಅಹಂಕಾರವೆಂಬ ಮನೋವೃತ್ತಿಯಲ್ಲಿ ಅಹಂಮಮತಾದಿಗಳು ವಿದ್ಯಮಾನಗಳಾಗಿವೆ. ಇವುಗಳನ್ನು ಬಿಡಿಸಿ, ತಾರತಮ್ಯ, ಪಂಚಭೇದಗಳ ನೈಜ ರೂಪವಾದ ಸುಜ್ಞಾನವೆಂಬ ವಿದ್ಯೆಯನ್ನು ವ್ಯಕ್ತಮಾಡಿ, ವಿದ್ಯಾಸ್ವರೂಪನಾಗಿ, "ವಿದ್ಯೆ" ಎಂಬ ಹೆಸರಿನಿಂದ ಕರೆಯಿಸಿಕೊಳ್ಳುತ್ತಾ ಇರುವ ಭಗವದ್ರೂಪವೇ ಅನಿರುದ್ಧನು. ಮುಕ್ತಿಯೋಗ್ಯರಾದ ಸಮಸ್ತಜೀವರುಗಳ ಬುದ್ಧಿ ಎಂಬ ಸಾಂಕೇತವೃತ್ತಿಯಲ್ಲಿ ಆವಾಸವಾಗಿದ್ದು, ಬುದ್ಧಿ ಪ್ರಚೋದಕ ರೂಪವೇ ಕೃತಿಪತಿಯಾದ ಪ್ರದ್ಯುಮ್ನನಾಮಕನು. ಪೂರ್ವೋಕ್ತ ರೀತ್ಯಾ

ಉತ್ಪನ್ನವಾದ ಜ್ಞಾನವಿಷಯದಲ್ಲಿ ನಿಶ್ಚಯವಾದ ಬುದ್ಧಿಯನ್ನು ಕೊಟ್ಟು ತದಂತರ್ಗತನಾಗಿ ನಿಶ್ಚಯ ಬುದ್ಧಿ ಎಂತ ಕರಿಸತಾನೆ. ಹಾಗೆ ಹುಟ್ಟಿದ ನಿಶ್ಚಯ ಜ್ಞಾನ ಪುನಃ ವಿಕಲ್ಪವಾಗದಂತೆ, ಮನೋವೃತ್ತಿದ್ವಾರಾ ವಿಶೇಷವಾಗಿ ಸಿದ್ಧಿ ಮಾಡಿಕೊಟ್ಟು ಸಿದ್ಧಿನಾಮಕನಾಗಿದ್ದಾನೆ. ಸಂಕರ್ಷಣರೂಪೀ ಶ್ರೀಪರಮಾತ್ಮನು. ಅಂಥ ಸಿದ್ಧಿಯಾದ ಜ್ಞಾನದಿಂದ ಹೃದಯಾಕಾಶದಲ್ಲಿ ಪರಮಾತ್ಮನು ಧ್ಯಾನಾದಿಗಳ ಮಾಡಬೇಕೆಂಬ ಪ್ರಸಿದ್ಧವಾದ ಧ್ಯಾನೋಪಾಸನಾದಿಗಳ ಪ್ರಯತ್ನ ಚಿತ್ತದ್ವಾರಾ ನಡೆಯಿಸಿ, ಅದರಲ್ಲಿ ಪ್ರಸಿದ್ಧನಾಮಕನಾಗಿ ವಾಸುದೇವನು ಇರತಾನೆ. ಇಲ್ಲಿಗೆ ಅನಿರುದ್ಧಾದಿ ನಾಲ್ಕು ಭಗವದ್ರೂಪಗಳು ಮನಾದಿ ವೃತ್ತಿಗಳಲ್ಲಿ ಇರತಕ್ಕವುಗಳಾಗಿ ಜೀವರ ಉದ್ಧಾರಾರ್ಥ ಜ್ಞಾನಾದಿಗಳು ಪ್ರಕಾಶ ಮಾಡಿ, ಕಾರ್ಯಭೇದಗಳಿಂದ ಅನ್ಯವಾದ ಆಯಾ ನಾಮಗಳಿಂದ ಕರಿಸೋವರಾದರೂ, ದೋಷರಹಿತವಾದ, ಆ ನಾಲ್ಕು ವೃತ್ತಿಗತ ಕಾರ್ಯಭೇದರಿಂದ ಅನ್ಯನಾಮಗಳ ಸಹಿತ ಅನಿರುದ್ಧಾದಿರೂಪಚತುಷ್ಟಯಗಳನ್ನು ತಿಳಿದವನೇ ಜ್ಞಾನಿಯಾದವನು. ॥೬॥

## ರೂಪಚತುಷ್ಟಯಗಳ ವಿವರ:

| ಕ್ರಮ ಸಂಖ್ಯೆ | ಮನೋವೃತ್ತಿಗಳು | ಕಾರ್ಯವಿಶೇಷ | ಭಗವದ್ರೂಪ |
|---|---|---|---|
| ೧ | ಅಹಂಕಾರ | ಅಸ್ವರೂಪೇ ಸ್ವರೂಪತಾಮಿತಿ | ಅನಿರುದ್ಧ (ವಿದ್ಯಾನಾಮಕ) |
| ೨ | ಬುದ್ಧಿ | ನಿಶ್ಚಯಜ್ಞಾನ | ಪ್ರದ್ಯುಮ್ನ (ಬುದ್ಧಿನಾಮಕ) |
| ೩ | ಚಿತ್ತ | ಸ್ಮರಣೇಚ್ಛಾ | ವಾಸುದೇವ (ಪ್ರಸಿದ್ಧನಾಮಕ) |
| ೪ | ಮನಸ್ಸು | ಸಂಕಲ್ಪ, ವಿಕಲ್ಪ | ಸಂಕರ್ಷಣ (ಸಿದ್ಧಿನಾಮಕ) |

## (೨) "ಭಾವಪ್ರಕಾಶಿಕೆ"— ವ್ಯಾಖ್ಯಾನ :—

ಅನಿರುದ್ಧನು ವಿದ್ಯೆಯೊಳಗಿದ್ದು ವಿದ್ಯೆ ಎನಿಸಿಕೊಂಬನು. "ವಿದ್ಯೆ" ಎಂದರೆ, **"ವಿದ್ಯಾತ್ಮನಭಿದಾಬೋಧಃ"**—ಎಂಬ ಪ್ರಮಾಣರೀತ್ಯಾ, ಜೀವ ಪರಮಾತ್ಮರಿಗೆ ಪರಸ್ಪರ ಭೇದಚಿಂತನ ಎಂದು ಸಿದ್ಧವಾಗುವುದು. ಈ ಜ್ಞಾನವು ಸಾಮಾನ್ಯವಾಗಿ ವಾಯುಮತಾವಲಂಬಿಗಳಾರೋ ಅವರಲ್ಲಿ ಮಾತ್ರವೇ ಇರುವುದು. ಜೀವಬ್ರಹ್ಮೈಕ್ಯವನ್ನು ಹೇಳುವುದು ಅವಿದ್ಯೆ ಎಂದು ತಿಳಿಯ ಬೇಕು. **"ದೈವೋ ವಿಸ್ತರಶಃ ಪ್ರೋಕ್ತಃ ಆಸುರೀಂ ಪಾರ್ಥಮೇ ಶೃಣು । ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ ॥ ಅಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋಮಯಾ । ಯಕ್ಷ್ಯೇದಾಸ್ಯಾಮಿ ಮೋದಿಷ್ಯೆ ಇತ್ಯಜ್ಞಾನವಿಮೋಹಿತಾಃ ॥"** —ಎಂಬ ಗೀತಾವಚನರೀತ್ಯಾ, ಎಲೈ ಪಾರ್ಥ, ಆಸುರೀತ್ವವನ್ನು ಹೇಳು ತ್ತೇನೆ. ಕೇಳು. ನಾನೇ ಪರಮೇಶ್ವರನು. ನಾನೇ ಭೋಗಿ. ನಾನೇ ಸಿದ್ಧನು. ನಾನೇ ಬಲಾಢ್ಯನು; ಸುಖಿಯು, ಭಾಗ್ಯವಂತನು, ಜ್ಞಾನ ವಂತನು. ನನಗೆ ಸಮಾನರಾರಿರುವರು ? ಯಾಗವನ್ನು ಮಾಡುವೆನು. ದಾನವನ್ನು ಕೊಡುವೆನು. ಆನಂದಪಡುವೆನು —ಎಂದು ಇಂತಹ ಅಜ್ಞಾನ ದಿಂದ ಮೋಹಿತರಾಗಿರುವವರೇ ಅಸುರರು ಎಂಬಿವೇ ವಾಕ್ಯಗಳಿಂದ ಪಾರ್ಥ ನಿಗೆ ಶ್ರೀಕೃಷ್ಣನು ಉಪದೇಶಿಸಿರುವನು. ಈ ವಿದ್ಯೆ ಅವಿದ್ಯೆಗಳೆರಡೂ ಅಹಂಕಾರದಿಂದಲೇ ಹುಟ್ಟುವುವು. ನಾನು ಸೇವಕನು, ಪರಮಾತ್ಮನು ಸಕಲಜಗತ್ಪ್ರಭು, ಸರ್ವಜಗದ್ವಿಲಕ್ಷಣನು, —ಎಂದು ತಿಳಿಯಬೇಕಾದರೂ ಅಹಂಕಾರವೇ ಕಾರಣವು. ನಾನೇ ಪರಬ್ರಹ್ಮನೆಂದು ತಿಳಿಯಲಿಕ್ಕೂ ಅಹಂಕಾರವೇ ಕಾರಣವು. ಅದರಲ್ಲಿ ಜೀವಬ್ರಹ್ಮರಿಗೆ ಭೇದವನ್ನು ಹೇಳುವ ವಿದ್ಯೆದೊಳಗಿದ್ದು, "ವಿದ್ಯೆ" ಎಂಬ ಹೆಸರನ್ನು ಪಡೆಯುವವನು ಅನಿರುದ್ಧ ನಾಮಕ ಪರಮಾತ್ಮನೆಂದು ತಿಳಿಯಬೇಕು. ಕೃತಿಪತಿಯಾದ ಪ್ರದ್ಯುಮ್ನನು ಸರ್ವಜೀವರ ಬುದ್ಧಿಯೊಳಗೆ ವಾಸವಾಗಿದ್ದು "ಬುದ್ಧಿ" ಎಂಬ ಹೆಸರನ್ನು ಪಡೆದಿರುವನು. ಬುದ್ಧಿ ಎಂದರೇ **"ಬುದ್ಧ್ಯೈ ಸ್ವಾಂತೇ ನಯೇನಾಸಾ**

ನಿಶ್ಚಯಂ ಪ್ರತಿಪದ್ಯತೇ" —ಎಂಬ ಭಾಗವತವಚನದಿಂದ— ಇದೋ, ಅದೋ ಎಂಬ ಸಂಶಯವಿಲ್ಲದೆ ಇದೇ ಅಥವಾ ಅದೇ ಎಂದು ತೀರ್ಮಾನಿಸುವ ನಿಶ್ಚಯಜ್ಞಾನಕ್ಕೆ ಬುದ್ಧಿ ಎಂದು ಹೆಸರು. ಸಂಕರ್ಷಣನಾಮಕಪರಮಾತ್ಮನು ಸಿದ್ಧಿ ಎಂದು ಹೆಸರುಪಡೆದಿರುವನು. ಸಿದ್ಧಿ ಎಂದರೆ, ಚಿತ್ತಶುದ್ಧಿಯಿಂದ ಉಂಟಾದ ಭಗವತ್ಪ್ರಸಾದವು. ಚಿತ್ತವು ಬುದ್ಧಿಯ ಪ್ರಭೇದವೇ ಆದರೂ ಬುದ್ಧಿಯು ದುರ್ವಿಷಯ ಸದ್ವಿಷಯಗಳಲ್ಲಿಯೂ ಕೂಡ ಪ್ರವೇಶ ಮಾಡುವುದು. ಸದ್ವಿಷಯಗಳಲ್ಲಿ ಸ್ಥಿರವಾಗಿ ನಿಲ್ಲುವುದೇ ಚಿತ್ತವು. ಇದರಿಂದಾಗುವ ಭವವತ್ಪ್ರಸಾದವೇ ಸಿದ್ಧಿಯು. ಇಂತಹ ಸಿದ್ಧಿಯಲ್ಲಿ ಸಂಕರ್ಷಣನಿದ್ದು ಸಿದ್ಧಿ ಎಂಬ ಹೆಸರನ್ನು ಪಡೆದಿರುವನು.

ಎಲ್ಲಾ ಇಂದ್ರಿಯಗಳಿಗೂ ಮನಸ್ಸೇ ಪ್ರಧಾನವಾದುದು. ದಶೇಂದ್ರಿಯಗಳ ವ್ಯಾಪಾರವು-ನಡೆಯಬೇಕಾದರೆ. ಮನೋವೃತ್ತಿಯಿಂದಲ್ಲದೆ ಯಾವುದೂ ನಡೆಯುವಂತಿಲ್ಲ. ಮನೋನಿಗ್ರಹದಿಂದಲೇ ಮನುಷ್ಯನು ಜಿತೇಂದ್ರಿಯನೆಂದು ಪ್ರಸಿದ್ಧಿಯನ್ನು ಪಡೆಯಬೇಕು. ಮನೋನಿಗ್ರಹಮಾಡದೆ ಮನಬಂದಂತೆ ಕಾರ್ಯಮಾಡುವವನು ಪಾಪಿಯಾಗುವನು. ಇಂತಹ ಮನಃಸ್ವಾಧೀನತೆ ಎಂಬ ಜಿತೇಂದ್ರಿಯತ್ವಾದಿ ಪ್ರಸಿದ್ಧವಾದ ಕೀರ್ತಿಯಲ್ಲಿ ವಾಸುದೇವನಾಮಕ ಪರಮಾತ್ಮನಿದ್ದು, ಪ್ರಸಿದ್ಧನೆಂಬ ಹೆಸರನ್ನು ಪಡೆಯುವನು. ಹೀಗೆ ಅಹಂಕಾರಜನ್ಯವಾದ ವಿದ್ಯೆ, ಬುದ್ಧಿಯಿಂದಾಗುವ ನಿಶ್ಚಯಜ್ಞಾನ, ಚಿತ್ತದಿಂದಾಗುವ ಸಿದ್ಧಿ, ಮನಸ್ಸಿನಿಂದಾಗುವ ಪ್ರಸಿದ್ಧಿ ಎಂಬ ನಾಲ್ಕು ಸ್ಥಾನಗಳಲ್ಲಿ ಅನಿರುದ್ಧ. ಪ್ರದ್ಯುಮ್ನ, ಸಂಕರ್ಷಣ, ವಾಸುದೇವರೆಂಬ ನಾಲ್ಕು ರೂಪಗಳಿಂದ ಶ್ರೀ ಪರಮಾತ್ಮನು ವಿದ್ಯೆ, ಬುದ್ಧಿ, ಸಿದ್ಧಿ ಪ್ರಸಿದ್ಧಿ-ಎಂಬ ನಾಲ್ಕು ಹೆಸರುಗಳನ್ನು ಪಡೆಯುವವನಾದರೂ ಅನವದ್ಯನಾಗಿರುವನು. ಮತ್ತು ಅದರ ಸಂಬಂಧವಿಲ್ಲದೆ ನಿರ್ದೋಷನಾಗಿಯೂ ಇರುವನು. ಈ ರೀತಿಯಾದ ನಾಲ್ಕು ರೂಪಗಳನ್ನು ತಿಳಿದವನೇ ಪಂಡಿತನು. ||೬||

## (೩) "ಭಾವದರ್ಪಣಟೀಕಾ"— ವ್ಯಾಖ್ಯಾನ :

ವಿದ್ಯಾದಿ ಚತುಸ್ಥಾನದಲ್ಲಿ ತನ್ನಾಮದಿಂದ ಶ್ರೀಹರಿ ಕರಸುತ್ತಾನೆಂದು

ತಿಳಿದವನೇ ಪಂಡಿತನೆಂದು ಸೂಚಿಸುತ್ತಾರೆ– "ವಿದ್ಯಾ" —ಎಂಬ ಪದ್ಯದಿಂದ. ವಿದ್ಯಾ = ಬ್ರಹ್ಮವಿದ್ಯಾ ಎಂದರ್ಥ. ನೆಲೆಸಿದ್ದು = ನಿಂತುಕೊಂಡು. ಸಿದ್ಧಿ = ಜ್ಞಾನ. ಪ್ರಸಿದ್ಧಿ = ಮೋಕ್ಷಸಾಧನಜ್ಞಾನ. ಅನವದ್ಯ = ನಿರ್ಮಲ. ರೂಪ ಚತುಷ್ಟಯ = ನಾಲ್ಕುರೂಪಗಳು. ಅರಿತವನೆ = ತಿಳಿದವನು ಯಂತರ್ಥ. ॥೬॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ –

### (ಸಂಸ್ಕೃತಮೂಲ)

ವಿದ್ಯಾವಿದ್ಯೇ ಮಮತನೂ ಪಿದ್ಧೀತಿ ಉತ್ತಮಹಿತ್ವಂ ವಕ್ತಿವಿದ್ಯೇತಿ ॥ ಜ್ಞಾನಾತ್ಮಸ್ವರೂಪೇ ॥ ಬುದ್ಧ್ಯಾದಿರೂಪಲಿಂಗೇ ತತ್‌ಸಾಧಕಾನಿರುದ್ಧೇ ॥ ಪ್ರಸಿದ್ಧೇ ಸ್ಥೂಲೇ ॥೬॥

**ಕನ್ನಡಾನುವಾದ :—**

"ವಿದ್ಯೆ ಮತ್ತು ಅವಿದ್ಯೆಗಳು ನನ್ನ ದೇಹಗಳು. ಈ ರೀತಿಯಾಗಿ ತಿಳಿಯಬೇಕು" —ಎಂದು ಪುರಾಣೋಕ್ತಪ್ರಸಿದ್ಧವಾದ ಮಹಿಮೆಯನ್ನು ತಿಳಿಸುತ್ತಾರೆ– "ವಿದ್ಯೆ" —ಎಂಬ ಈ ಪದ್ಯದಿಂದ. ಅನಿರುದ್ಧನಾಮಕ ಪರಮಾತ್ಮನು ಜೀವನ ಸ್ವರೂಪದಲ್ಲಿ ಜ್ಞಾನವನ್ನು ಅಭಿವ್ಯಕ್ತಿಮಾಡುವನು. ಲಿಂಗದೇಹಗತನಾಗಿ ಮನಃ ಪ್ರಭೇದವೆನಿಸಿದ ಬುದ್ಧಿಯನ್ನು ಅಭಿವ್ಯಕ್ತಿಗೊಳಿಸುವನು ಪ್ರದ್ಯುಮ್ನರೂಪಿಯು. ಸಿದ್ಧರೂಪದಿಂದ ಜ್ಞಾನ, ಬುದ್ಧಿ ಮತ್ತು ಧರ್ಮಗಳನ್ನು ಸಾಧಿಸಿಕೊಡುವನು. ಸಂಕರ್ಷಣರೂಪೀ ಪರಮಾತ್ಮನು ಅನಿರುದ್ಧದೇಹಸ್ಥನಾಗಿದ್ದು. ಪ್ರಸಿದ್ಧವಾದ ಸ್ಥೂಲಶರೀರದಲ್ಲಿ ತನ್ನ ಬಿಂಬರೂಪದ ಅಪರೋಕ್ಷವನ್ನು ಕೊಟ್ಟು, ಮೋಕ್ಷವನ್ನು ಕೊಡುವವನಾದ್ದರಿಂದ ಸಾಧನಪ್ರಚಯಾಭಿಮಾನಿಯಾದ ವಾಸುದೇವರೂಪೀ ಪರಮಾತ್ಮನು ಸ್ಥೂಲದೇಹದಲ್ಲಿ ಪ್ರಸಿದ್ಧನಾಮಕನಾಗಿರುವನು. ಹೀಗೆ ನಿರ್ದಿಷ್ಟಗಳಾದ– "ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ" —ಎಂಬೀ ನಾಲ್ಕು ರೂಪಗಳನ್ನು ಚೆನ್ನಾಗಿ ಅರಿತು ಉಪಾಸಿಸುವವನೇ ಪಂಡಿತನು. ॥೬॥

## (೫) "ಗುರುಹೃದಯಪ್ರಕಾಶಿಕೆ" — ವ್ಯಾಖ್ಯಾನ :—

ಅನಿರುದ್ಧಮೂರ್ತಿ ವಿದ್ಯದಲ್ಲಿದ್ದು ವೇದಶಿಲ್ಪಾದಿವಿದ್ಯೆ ಎಂದು ಕರೆಯಿಸಿಕೊಳ್ಳುವನು. ಸರ್ವಜೀವರ ಬುದ್ಧಿಯಲ್ಲಿದ್ದು, ಕೃತಿಪತಿಪ್ರದ್ಯುಮ್ನನು ಬುದ್ಧಿ ಎನಿಸಿಕೊಳ್ಳುವನು. ಸಂಕರ್ಷಣಮೂರ್ತಿಯು ವಿದ್ಯಾಲಾಭವೆಂಬ ಸಿದ್ಧಿಯಲ್ಲಿದ್ದು ಸಿದ್ಧಿನಾಮಕನಾಗಿಹನು. ವಾಸುದೇವನು ವಿದ್ಯಾದಿ ವಿಶಾರದನೆಂಬ ಕೀರ್ತಿಯಲ್ಲಿದ್ದು ಪ್ರಸಿದ್ಧಿ ಎಂಬ ಹೆಸರುಳ್ಳವನು. ಹೀಗೆ ವಿದ್ಯಾ, ಬುದ್ಧಿ, ಸಿದ್ಧಿ ಮತ್ತು ಪ್ರಸಿದ್ಧಿಗಳಲ್ಲಿ ಅನಿರುದ್ಧಾದಿ ಚತುಷ್ಟಯವನ್ನು ತಿಳಿದವನು ಪಾಂಚರಾತ್ರಾಗಮ ತಿಳಿದ ಪಂಡಿತನು. ॥೬॥

## ಸರ್ವವ್ಯಾಖ್ಯಾನಸಾರಸಂಗ್ರಹ :—

ಮನೋವೃತ್ತಿಗಳಿಂದ ನಡೆಯುವ ಕಾರ್ಯವಿಶೇಷಗಳು ನಾಲ್ಕು ಪ್ರಕಾರವಾಗಿವೆ. (೧) ವಿದ್ಯೆ (೨) ಬುದ್ಧಿ) (೩) ಸಿದ್ಧಿ ಮತ್ತು (೪) ಪ್ರಸಿದ್ಧಿ. ಅಹಂಕಾರನೆಂಬ ಮನೊವೃತ್ತಿಯಲ್ಲಿ ಅಹಂಮಮತಾದಿಗಳು ವಿದ್ಯಮಾನಗಳಾಗಿವೆ. ಇಂತಹ ಅಹಂಮಮತಾದಿಪ್ರತಿಬಂಧಕಗಳನ್ನು ಬಿಡಿಸಿ, ಸುಜೀವರಿಗೆ ಪಂಚಭೇದ ತಾರತಮ್ಯ ಮತ್ತು ಜೀವೇಶಗಿರುವ ಅತ್ಯಂತ ಭೇದ ಇಂತಹ ಸಮೀಚೀನವಾದ ಜ್ಞಾನರೂಪವಾದ "ವಿದ್ಯೆ" ಯನ್ನು ಕೊಡತಕ್ಕ ರೂಪವೇ ಶಾಂತೀಶನಾದ ಅನಿರುದ್ಧರೂಪೀ ಪರಮಾತ್ಮನು. ಜೀವೇಶರ ಭೇದ ತತ್ತ್ವವನ್ನು "ವಿದ್ಯೆ"ಎಂದೂ. ಜೀವ ಬ್ರಹ್ಮೈಕ್ಯವಾದವನ್ನು "ಅವಿದ್ಯೆ" ಎಂದು ಶಾಸ್ತ್ರಪ್ರಮಾಣಗಳಿಂದ ಸಿದ್ಧವಾಗಿದೆ. ವಿಷ್ಣುಸರ್ವೋತ್ತಮ ಜ್ಞಾನವನ್ನು ಪಂಚಭೇದ ತಾರತಮ್ಯ ತತ್ತ್ವಗಳನ್ನು ಪ್ರತಿಪಾದಿಸುವ ಸಮೀಚೀನವಾದ ವಿದ್ಯೆಯಲ್ಲಿ ಅನಿರುದ್ಧರೂಪೀಪರಮಾತ್ಮನು ತನ್ನಾಮಕನಾಗಿದ್ದು ಜೀವರಿಗೆ (ಮುಕ್ತಿಯೋಗ್ಯಚೇತನರಿಗೆ) ಆ ವಿದ್ಯಾಪ್ರಬೋಧಕನಾಗಿರುವನು. "ಇದಮಿತ್ಥಂ" ಎಂಬ ನಿಶ್ಚಯರೂಪವಾದ ಜ್ಞಾನಕ್ಕೆ "ಬುದ್ಧಿ" ಎನ್ನುವರು. ಅಹಂಕಾರ ಮನೋವೃತ್ತಿಯಿಂದ ಜನ್ಯವಾದ ವಿದ್ಯೆಯ ಮೂಲಕ ಜೀವನಿಗೆ ಸಮೀಚೀನವಾದ ಜ್ಞಾನ ಉತ್ಪತ್ತಿಯಾಗಿ ಅದು ಧೃಢನಿಶ್ಚಯರೂಪವನ್ನು

ತಾಳಿ ಬುದ್ಧಿಸ್ಥವಾಗುವುದು. ಕೃತಿಪತಿಯಾದ ಪ್ರದ್ಯುಮ್ನರೂಪೀ ಪರಮಾತ್ಮನು ಇಂತಹ ನಿಶ್ಚಯಜ್ಞಾನರೂಪವಾದ ಬುದ್ಧಿಗೆ ಮುಖ್ಯ ಪ್ರಚೋದಕನು. ಕೃತಿಪತಿಪ್ರದ್ಯುಮ್ನನು ಬುದ್ಧಿಯಲ್ಲಿ ನೆಲೆಸಿದ್ದು ಅದೇ ಶಬ್ದ ವಾಚ್ಯನಾಗಿದ್ದಾನೆ. ಮನೋವೃತ್ತಿಯ ಮೂರನೆಯ ಪ್ರಭೇದವು "ಸಿದ್ಧಿ" ಎಂಬುದು. ವಿದ್ಯೆಯಿಂದ ಜನ್ಯವಾದ ನಿಶ್ಚಯಜ್ಞಾನವು ಪುನಃ ವಿಕಲ್ಪವಾಗದಂತೆ ಚಿತ್ತಶುದ್ಧಿಯನ್ನು ಹೊಂದುವುದೇ "ಸಿದ್ಧಿ" ಎನಿಸುವುದು. ಸದ್ವಿಷಯಗಳಲ್ಲಿ ಸ್ಥಿರವಾಗಿ ನಿಲ್ಲುವುದೇ ಚಿತ್ತವೃತ್ತಿಯು. ಅಂತಹ ಚಿತ್ತಶುದ್ಧಿಯಿಂದ ಭಗವತ್ಪ್ರಸಾದವು ಲಭ್ಯವಾಗುವುದು. ಜಯಾಪತಿ ಸಂಕರ್ಷಣರೂಪೀ ಪರಮಾತ್ಮನು ಮನೋವೃತ್ತಿದ್ವಾರಾ ಜೀವರಿಗೆ ವಿಶೇಷವಾಗಿ ಸಿದ್ಧಿ ಮಾಡಿಕೊಟ್ಟು, ಸಿದ್ಧಿನಾಮಕನಾಗಿದ್ದಾನೆ. ದಶೇಂದ್ರಿಯಗಳಿಗೂ ಮನಸ್ಸೇ ಪ್ರಧಾನವಾದುದು. ಮನಸ್ಸು ಆ ಇಂದ್ರಿಯಗಳನ್ನು ನಿಯಮನಮಾಡುವುದು. ಇಂತಹ ಚಂಚಲಭೂತವಾದ ಮನಸ್ಸನ್ನು ನಿಗ್ರಹಿಸಿ. ಜಿತೇಂದ್ರಿಯನಾಗಿರುವ ಪುರುಷನು "ಪ್ರಸಿದ್ಧ"ನೆನಿಸಿಕೊಳ್ಳುತ್ತಾನೆ. ಅಂತಹವನೇ ಜಗತ್ತಿನಲ್ಲಿ ಕೀರ್ತಿ ವೈಭವಗಳಿಂದ ಮೆರೆಯುತ್ತಾನೆ. ಇಂತಹ "ಪ್ರಸಿದ್ಧಿ" ಎಂಬ ವೃತ್ತಿಯಲ್ಲಿ ನಿಯಾಮಕನಾಗಿರುವ ರೂಪವೇ ಮಾಯಾಪತಿ ವಾಸುದೇವರೂಪವು. ಆ ವಾಸುದೇವರೂಪೀ ಪರಮಾತ್ಮನು ಪ್ರಸಿದ್ಧನಾಮಕವಾಗಿದ್ದು, ಜೀವರ ದ್ವಾರಾ ಸತ್ಸಾಧನೆಯನ್ನು ಮಾಡಿಸಿ, ಅವರನ್ನು ಮುಕ್ತಿಭಾಜನರನ್ನಾಗಿ ಮಾಡುವನು. ಅಂದರೆ, ತತ್ಸಂಬಂಧವಾದ ಮೋಕ್ಷಸಾಧನಜ್ಞಾನವನ್ನು ಉದ್ಬೋಧಿಸುವನು. ಹೀಗೆ ಶ್ರೀ ಪರಮಾತ್ಮನು ವಿದ್ಯೆ, ಬುದ್ಧಿ, ಸಿದ್ಧಿ ಮತ್ತು ಪ್ರಸಿದ್ಧಿಗಳೆಂಬ ನಾಲ್ಕು ಸ್ಥಾನಗಳಲ್ಲಿ ಕ್ರಮವಾಗಿ ಅನಿರುದ್ಧ, ಪ್ರದ್ಯುಮ್ನ; ಸಂಕರ್ಷಣ ಮತ್ತು ವಾಸುದೇವ ಎಂಬ ನಾಲ್ಕು ರೂಪಗಳಿಂದ ವಿರಾಜಮಾನನಾಗಿದ್ದು, ತತ್ತಚ್ಛಬ್ದವಾಚ್ಯನಾಗಿ, ಅಹಂಕಾರಜನ್ಯವಾದ ವಿದ್ಯೆ, ಬುದ್ಧಿಜನ್ಯವಾದ ನಿಶ್ಚಯಜ್ಞಾನ, ಚಿತ್ತದಿಂದಾಗುವ ಸಿದ್ಧಿ ಮತ್ತು ಮನಸ್ಸಿನಿಂದಾಗುವ ಪ್ರಸಿದ್ಧಿಗಳನ್ನು ಜೀವರಿಗೆ ಪ್ರಚೋದಿಸುವನು. ಇಂತಹ ಅನಿರುದ್ಧಾದಿರೂಪಚತುಷ್ಟಯಗಳು

ಸಮಸ್ತ ದೋಷವಿದೂರವಾದವು. ನಿರ್ದುಷ್ಟಗಳಾದ ಈ ರೂಪಚತುಷ್ಟಯಗಳನ್ನು ಶಾಸ್ತ್ರದ್ವಾರಾ ಅರಿತು, ಅದರಂತೆ ಉಪಾಸನೆ ಮಾಡಿ, ಸಾಧಕನಾಗಿರುವವನೇ ಪಂಡಿತನೆನಿಸಿಕೊಳ್ಳುವನು. ಶಾಸ್ತ್ರಜನ್ಯವಾದ ಜ್ಞಾನವನ್ನು ನಿರಂತರ ಭಗವಚ್ಚಿಂತನೆಯಲ್ಲಿ ನೆಲೆಗೊಳಿಸಿ, ಭಗವದುಪಾಸನೆಗೈಯ್ಯುವವನೇ ನಿಜವಾದ ಪಂಡಿತನು. ಅನ್ಯರಲ್ಲ ಎಂದು ತಾತ್ಪರ್ಯ ॥೭॥

## ಪದ್ಯ (೭)

**ಮೂಲ :—**

**ತನುಚತುಷ್ಟಯಗಳೊಳು ನಾರಾ ।**
**ಯಣನು ಹೃತ್ಕಮಲಾಖ್ಯ ಸಿಂಹಾ ।**
**ಸನದೊಳನಿರುದ್ಧಾದಿ ರೂಪಗಳಿಂದ ಶೋಭಿಸುತ ॥**
**ತನಗೆ ತಾನೇ ಸೇವ್ಯ ಸೇವಕ ।**
**ನೆನಿಸಿ ಸೇವಾಸಕ್ತಸುರರೊಳ ।**
**ಗನವರತ ನೆಲೆಸಿದ್ದು ಸೇವೆಯಕೊಂಬನವರಂತೆ॥ ॥೭॥**

**ಅವತರಣಿಕೆ :—**

ಸ್ಥೂಲ, ಅನಿರುದ್ಧ, ಲಿಂಗ ಮತ್ತು ಸ್ವರೂಪಗಳೆಂಬ ನಾಲ್ಕು ಶರೀರಗಳಲ್ಲಿ ಹೃದಯಸ್ಥ ಅಷ್ಟಕಮಲಗಳಲ್ಲಿ ಆವಾಸನಾಗಿದ್ದು, ಮೂಲರೂಪೀ ನಾರಾಯಣನು ಭಗವತ್ಸೇವಾನಿರತರಾದ ದೇವತಾವರ್ಗದಲ್ಲಿ ಅಧಿಷ್ಠಿತನಾಗಿದ್ದು, ಸೇವ್ಯಸೇವಕನೆನಿಸಿ, ಸೇವಾರೂಪವಾದ ಪೂಜಾದಿಗಳನ್ನು ಸ್ವೀಕರಿಸುತ್ತಾನೆ ಎಂದು ಹೇಳುತ್ತಾರೆ. "ತನುಚತುಷ್ಟಯ" —ಎಂಬ ಈ ಪದ್ಯದಿಂದ. ॥೭॥

**ಅವತರಣಿಕೆ :—**

**ತನುಚತುಷ್ಟಯಗಳೊಳು** = ಸ್ಥೂಲ, ಅನಿರುದ್ಧ, ಲಿಂಗ ಮತ್ತು ಸ್ವರೂಪಗಳೆಂಬ ನಾಲ್ಕು ಪ್ರಕಾರವಾದ ಶರೀರಗಳಲ್ಲಿ **ನಾರಾಯಣನು** = ಮೂಲರೂಪಿಯಾದ ಶ್ರೀಮನ್ನಾರಾಯಣನು **ಹೃತ್ಕಮಲಾಖ್ಯ** = ಹೃದಯ ಕಮಲವೆಂಬ **ಸಿಂಹಾಸನದೊಳು** = ಆವಾಸಸ್ಥಾನರೂಪವಾದ ಉನ್ನತ ಪೀಠದಲ್ಲಿ (ಸಿಂಹಾಸನವೆಂದರ್ಥ) **ಅನಿರುದ್ಧಾದಿರೂಪಗಳಿಂದ** = ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸದೇವ ಎಂಬ ಸ್ವಯಂ ಪ್ರಾದುರ್ಭೂತವಾದ ನಾಲ್ಕು ರೂಪವಿಶೇಷಗಳಿಂದ **ಶೋಭಿಸುತ** = ಪ್ರಕಾಶರೂಪದಿಂದ ವಿರಾಜಮಾನನಾಗಿ **ತನಗೆತಾನೇ** = ಸ್ವಾಭಿನ್ನಗಳಾದ ಅನಿರುದ್ಧಾದಿರೂಪಗಳಿಂದ, ಶ್ರೀಮನ್ನಾರಾಯಣಾಖ್ಯ ಮೂಲರೂಪದಿಂದ ತಾನೇ (ಶ್ರೀಹರಿಯು ಸ್ವರಮಣನು. ಅತಏವ ಪರಫಲಾಪೇಕ್ಷಾರಹಿತನು) **ಸೇವ್ಯ** = ಇತರ ದೇವತಾವರ್ಗದವರಿಂದ ಸೇವೆಯನ್ನು ಸ್ವೀಕರಿಸುತ್ತಾ, "ಸೇವ್ಯ"ನೆಂತಲೂ **ಸೇವಕ** = ತನ್ನ ದಾಸವರ್ಗಕ್ಕೆ ಸೇರಿದ ಆಯಾಯಾ ದೇವತೆಗಳಲ್ಲಿ ಅಂತರ್ಯಾಮಿತ್ವೇನ ಇದ್ದು, ತದ್ಬಿಂಬರೂಪದಿಂದ "ಸೇವಕ"ನೆಂತಲೂ **ಎನಿಸಿ** = ಕರೆಯಿಸಿಕೊಳ್ಳುತ್ತಾ **ಸೇವಾಸಕ್ತ** = ತನ್ನ ಸೇವೆಯಲ್ಲಿ ನಿರತನಾಗಿರುವ **ಸುರರೊಳಗೆ** = ರಮಾಬ್ರಹ್ಮಾದಿ ದೇವತಾವರ್ಗದಲ್ಲಿ **ಅನವರತ** = ಯಾವಾಗಲೂ **ನೆಲೆಸಿದ್ದು** = ಆವಾಸನಾಗಿದ್ದು **ಅವರಂತೆ** = ತನ್ನಾಮಕನಾಗಿ, ತದಾಕಾರರರೂಪದಿಂದ **ಸೇವೆಯಕೊಂಬನು** = ಸೇವಾದಿಗಳನ್ನು ಸ್ವೀಕರಿಸುತ್ತಾನೆ. ॥೭॥

## ವ್ಯಾಖ್ಯಾನಗಳು

**(೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—**

ಶರೀರಗಳು ನಾಲ್ಕು ಪ್ರಕಾರ ;— (೧) ಬ್ರಹ್ಮದೇವರು ಮೊದಲು ಶತಸ್ಥರವರೆಗೆ ದೇವಗಣ ಬಂದು. (೨) ಬಲ್ಯಾದಿ ಪುಷ್ಕರಾಂತ ಕರ್ಮಜ

ದೇವಗಣ ಎರಡನೆಯದು. (೩) ಅಜಾನಜರು ಮೊದಲು ಗಂಧರ್ವರವರೆಗೆ ಮೂರನೆಯ ಗಣ. ಮತ್ತು (೪) ಮನುಷ್ಯಗಂಧರ್ವಾರಭ್ಯ ತೃಣಾಂತ ಜೀವಗಣ ನಾಲ್ಕನೆಯದು. ಪೂರ್ವೋಕ್ತ ನಾಲ್ಕು ದೇಹಗಳಲ್ಲಿ ವಿದ್ಯಮಾನ ವಾದ ಅಂತಃಕರಣವೃತ್ತಿಗತನಾದವ ನಾರಾಯಣನು. ಪೂರ್ವೋಕ್ತ ನಾಲ್ಕು ವೃತ್ತಿಗಳ ಕಾರ್ಯವೂ ತನುಚತುಷ್ಟಯದಲ್ಲಿ ಉಂಟೆಂದು ತಿಳಿಯಬೇಕು. ತನುಚತುಷ್ಟಯಗತ ಮನೋವೃತ್ತಿಯಲ್ಲಿರುವ, ಶ್ರೀಮನ್ನಾರಾಯಣನು ಸ್ಥೂಲದೇಹಹೃದಯಗತ ಸುಷುಮ್ನಾನಾಡೀ ಮಧ್ಯಗತ, ರಮಾಭಿಮನ್ಯ ಮಾನವಾದ ಅಷ್ಟದಳಕಮಲವೆಂಬ ಸಿಂಹಾಸನದಲ್ಲಿ, ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವರೂಪಗಳಿಂದ (ಇವು ಅಭಿನ್ನರೂಪಗಳು) ಪ್ರಕಾಶಮಾನನಾಗುತ್ತಾ, ತನ್ನ ಅಸದೃಶವಾದ ಚಿದಾನಂದಾತ್ಮಕ ತನ್ನ ತನ್ನ ರೂಪಗಳಿಂದ ತಾನೇ ಆಗಿ (ಅಥವಾ ತನ್ನ ಅಸದೃಶವಾದ ಚಿದಾನಂದ ರೂಪಕ್ಕೆ ಪೂಜೋಪಯೋಗ್ಯವಾದ ದ್ರವ್ಯಗಳು ಸೇವೆ ತೆಗೆದುಕೊಂಬುವು ದೇನು (ಸೇವ್ಯ). ಸೇವೆಮಾಡುವನೇನು (ಸೇವಕ) (ಹಾಗೇವೇ ಪೂಜಾ ಮಾಡೋ ದ್ರವ್ಯಗಳೇನು, ಎಲ್ಲಾನೂ), ತನಗೆ ತಾನೇ ಆಗಿ ಪೂಜಾದಿಗಳ ಮಾಡಕೋತಾನೆ. ಸೇವೆಮಾಡತಕ್ಕ ಆಸಕ್ತಿಯುಳ್ಳ ದೇವತೆಗಳು ಮತ್ತು ಬ್ರಾಹ್ಮಣರಲ್ಲಿ ನಿರಂತರವೂ ತದಾಕಾರದಿಂದ ಆವಾಸವಾಗಿದ್ದು, ಪೂಜಾದಿ ಗಳು ಮಾಡಿಸಿಕೊಳ್ಳತಕ್ಕ ಪ್ರತಿಮೆಗಳಲ್ಲಿ ಅಂತರ್ಗತನಾಗಿಯೂ, ಪೂಜಾ ಮಾಡುವವನಲ್ಲಿ ತದಾಕಾರನಾಗಿಯೂ ಪೂಜೋಪಯೋಗ್ಯವಾದ ದ್ರವ್ಯಾಂತ ರ್ಗತನಾಗಿಯೂ, ಈ ಪ್ರಕಾರ ತ್ರಿವಿಧಾಧಿಷ್ಠಾನದಲ್ಲಿ ಆವಾಸನಾಗಿದ್ದು ಪೂಜಾದಿಗಳನ್ನು ತೆಗೆದುಕೋತಾನೆ. ದಾವದರನ್ನ ಎಂದರೆ, ತನ್ನ ಸ್ವಾಖ್ಯ ರೂಪದಿಂದ ಸ್ವಾಖ್ಯವಾದ ಪೂಜಾದ್ರವ್ಯಾಂತರ್ಗತಭಗವದ್ರೂಪವನ್ನು ಎಂದರ್ಥ. ಇಂತಹ ಅಂತಃಕರಣವೃತ್ತಿಗತನಾದ ನಾರಾಯಣನ ಕಾರ್ಯ ವಿದು. ಆದಕಡಿಯಿಂದ, ಇಂಥಾ ಹೃದಯಾಂತರ್ಗತವಾಸನಾಮಯಪ್ರತೀಕ ವನ್ನು ನಿಲ್ಲಿಸಿ, ಪೂಜಾದಿಗಳು ಮಾಡಿದರೆ. ಭಗವದಪರೋಕ್ಷವಾಗಿ ಯೋಗ್ಯ ತಾನುಸಾರ ಫಲ ಹೊಂದತಾನೆ ಎಂತ ತಾತ್ಪರ್ಯ.

ಪೂರ್ವೋಕ್ತ ನಾಲ್ಕು ಸ್ಥೂಲಶರೀರಗಳಲ್ಲಿ (ಅಥವಾ ಸ್ವರೂಪ, ಲಿಂಗ,

ಅನಿರುದ್ಧ ಮತ್ತು ಸ್ಥೂಲಗಳೆಂಬ ನಾಲ್ಕು ಪ್ರಕಾರವಾದ ಶರೀರಗಳಲ್ಲಿ) ಅನಿರುದ್ಧಾದಿರೂಪಚತುಷ್ಟಯದಿಂದ ಶ್ರೀಪರಮಾತ್ಮ ಇದ್ದು, ವಿದ್ಯಾದಿ ತತ್ವಾಭಿಮಾನಿದೇವತೆಗಳಲ್ಲಿಯೂ ಪೂಜಾಸಾಧನದ್ರವ್ಯಗಳಲ್ಲಿಯೂ, ಪೂಜಾ ಮಾಡೋವರಲ್ಲಿಯೂ, ತಾನೇ ನಿಂತು, ಜೀವರಂತೆ ತನ್ನ ಸೇವಾ ತಾನೇ ಮಾಡಿಕೋತಾನೆ ಎಂತ ತಾತ್ಪರ್ಯ.

**ವಿಶೇಷಾರ್ಥ :—**

**ಉಕ್ತಂಚ ಸತ್ತತ್ವರತ್ನಮಾಲಾಯಾಂ ನಾರಾಯಣಪ್ರಕರಣೇ :- "ಸ್ವಯಂ ಸರ್ವತ್ರಸಂಸ್ಥಃ ಸನ್ ಸ್ವಪೂಜಾಂ ವಿದಧಾತಿ ಚ । ಸರ್ವ ಕರ್ಮಾಣಿ ಕುರುತೇ ಸರ್ವತ್ರಾಸಕ್ತವಸನ್ನಿತಿ ॥"**

ಸುಷುಮ್ನಾನಾಡಿ ಪಂಚವಿಧ :— (೧) ಆರ್ಯಕಾ. (೨) ವಜ್ರಿಕಾ (೩) ಪ್ರಕಾಶಿಕಾ, (೪) ವೈದ್ಯುತಿ ಮತ್ತು (೫) ಸುಷುಮ್ನಾ, ಈ ಸುಷುಮ್ನಾಕ್ಕೆ ನಾಲ್ಕು ದಿಕ್ಕಿನಲ್ಲಿ ನಾಲ್ಕು ನಾಡಿ, ಮಧ್ಯದಲ್ಲಿ ಸುಷುಮ್ನಾ, ಈ ಐದು ನಾಡಿಗಳಲ್ಲಿ ಪೂರ್ವೋಕ್ತ ಮನ ಆದಿ ಪಂಚವೃತ್ತಿಗಳು ಅನಿರುದ್ಧಾದಿ ಐದು ಭಗವದ್ರೂಪಗಳಿವೆ. ಅದರಲ್ಲಿ ಮಧ್ಯನಾಡಿಯಲ್ಲಿ ಅಂತಃಕರಣ ವೃತ್ತಿಯಲ್ಲಿ ನಾರಾಯಣದೇವರು ಇದ್ದಾರೆ. ಈ ಐದು ನಾಡಿಗಳಲ್ಲಿ, ಪ್ರತಿ ನಾಡಿಯಲ್ಲಿ ಹೃದಯಪ್ರದೇಶದಲ್ಲಿ ಅಷ್ಟಕಮಲಗಳಿವೆ. ಅದರಲ್ಲಿ ಪಂಚ ಭಗವದ್ರೂಪಗಳ ಚಿಂತನೆ ॥೭॥

**(೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :—**

ಶ್ರೀ ಪರಮಾತ್ಮನು ನಾರಾಯಣರೂಪದಿಂದ ಮಾಡುವ ಕೃತ್ಯವೇ ನೆಂದರೆ:— ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವರೆಂಬ ನಾಲ್ಕು ರೂಪಗಳುಳ್ಳ ತನ್ನ ಶರೀರಗಳ ಹೃದಯಕಮಲಗಳೆಂಬ ಸಿಂಹಾಸನದಲ್ಲಿ ಕುಳಿತು, ಅವುಗಳ ಮಧ್ಯದಲ್ಲಿ ಶೋಭಿಸುತ್ತಿರುವನು. ಅಂದರೆ, ಅನಿರುದ್ಧ ನಾಮಕ ಪರಮಾತ್ಮನ ದೇಹದ ಹೃದಯಕಮಲದಲ್ಲಿ ನಾರಾಯಣನು ಅನಿರು

ದ್ಧಾದಿ ನಾಲ್ಕು ರೂಪಗಳಿಂದ ಸೇವೆಯನ್ನು ಸ್ವೀಕರಿಸುತ್ತಾ ಶೋಭಿಸುತ್ತಿರುವನು. ಇದರಂತೆ ಪ್ರದ್ಯುಮ್ನ, ಸಂಕರ್ಷಣ, ವಾಸುದೇವರೂಪಗಳ ಮಧ್ಯೆ ಒಂದೊಂದುರೂಪದ ಹೃದಯಕಮಲವೆಂಬ ಸಿಂಹಾಸನದಲ್ಲಿಯೂ ನಾರಾಯಣರೂಪದಿಂದಿದ್ದು, ಅನಿರುದ್ಧಾದಿ ನಾಲ್ಕುರೂಪಗಳಿಂದಲೂ ಸೇವ್ಯನಾಗಿ ಶೋಭಿಸುತ್ತಿರುವನೆಂಬ ಭಾವವು. ಹೀಗೆ ಅನಿರುದ್ಧಾದಿರೂಪಗಳಿಂದ ಸೇವೆಮಾಡುತ್ತಾ, ನಾರಾಯಣರೂಪದಿಂದ ಸೇವೆಯನ್ನ ಕೈಗೊಳ್ಳುತ್ತಾ, ತಾನೇ ಸೇವ್ಯಸೇವಕನೆಂದು ಪ್ರಖ್ಯಾತನಾಗಿರುವನು. ಇದಲ್ಲದೆ, ತನ್ನನ್ನು ಸರ್ವದಾ ಸೇವಿಸುತ್ತಿಸುವ ರಮಾಬ್ರಹ್ಮಾದಿ ದೇವತೆಗಳ ಹೃದಯಕಮಲ ಸಿಂಹಾಸನದಲ್ಲಿಯೂ ಅನಿರುದ್ಧಾದಿರೂಪ ಚತುಷ್ಟಯಗಳಿಂದ ಶೋಭಿಸುತ್ತಾ ವಾಸವಾಗಿದ್ದು, ರಮಾಬ್ರಹ್ಮಾದಿಗಳಿಂದ ಸಂಸೇವ್ಯಮಾನವಾಗಿ, ಅಂತರ್ಯಾಮಿರೂಪದಿಂದ ಸೇವೆಯನ್ನು ಪಡೆಯುವನು.

**ವಿಶೇಷಾರ್ಥ :—**

"ತನುಚತುಷ್ಟಯಗಳೊಳು" –ಎಂಬ ಪದಕ್ಕೆ "ಅನಿರುದ್ಧಾದಿ ನಾಲ್ಕು ದೇಹಗಳಲ್ಲಿ" ಎಂದು ಮೇಲೆ ಹೇಳಿದ ಅರ್ಥವಲ್ಲದೆ, ಮತ್ತೊಂದು ಪ್ರಕಾರವೂ ಅರ್ಥಮಾಡಬಹುದು. ಒಬ್ಬೊಬ್ಬ ಜೀವಗೂ ದೇಹಾವರಣಗಳುಂಟು. ಅವಾವುವೆಂದರೆ :— (೧) ಜೀವನ ಸ್ವರೂಪದೇಹ. (೨) ಸ್ವರೂಪ ದೇಹದಮೇಲೆ ಆವರಕವಾಗಿರುವ ಲಿಂಗಶರೀರ. (೩) ಅದರಮೇಲಿನ ಆವರಣ ಅನಿರುದ್ಧದೇಹವು. ಮತ್ತು (೪) ಅದರಮೇಲಿನ ಸ್ಥೂಲದೇಹವು. ಶ್ರೀಮನ್ನಾರಾಯಣನು ಈ ನಾಲ್ಕು ದೇಹಗಳಲ್ಲಿಯೂ ಹೃದಯಕಮಲ ಸಿಂಹಾಸನದ ಮೇಲೆ ಅನಿರುದ್ಧಾದಿ ನಾಲ್ಕುರೂಪಗಳಿಂದ ಶೋಭಿಸುತ್ತಾ, ವಾಸರೂಪನಾಗಿ, ಜೀವನಲ್ಲಿದ್ದು ಸೇವೆಮಾಡಿ, ಶ್ರೀ ನಾರಾಯಣರೂಪದಿಂದ ಸೇವೆಯನ್ನು ಸ್ವೀಕರಿಸುವನು. ಮಿಕ್ಕ ಪದಗಳಿಗೆ ಅರ್ಥವು ಮೇಲೆ ಹೇಳಿದಂತೆಯೇ ತಿಳಿಯದಬೇಕು.

**(೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :—**

ಈಗ ಸ್ವರೂಪ ಲಿಂಗಾನಿರುದ್ಧಸ್ಥೂಲ ಈ ನಾಲ್ಕುದೇಹಗಳಲ್ಲಿ ಅನಿ

ರುದ್ಧಾದಿರೂಪ ಚತುಷ್ಟಯದಿಂದ ಇದ್ದು. ವಾಯ್ವಾದಿ ತತ್ವೇಶರಲ್ಲಿ ತಾನೇ ನಿಂತು ತನ್ನ ಸೇವೆ ತಾನೇ ಮಾಡಿಕೊಳ್ಳುತ್ತಾನೆಂದು ಹೇಳುತ್ತಾರೆ– "ತನು ಚತುಷ್ಟಯು" ಎಂಬ ಪದ್ಯದಿಂದ.

ಹೃತ್ಕಮಲಾಖ್ಯ ಸಿಂಹಾಸನದೊಳು = ಹೃದಯದಲ್ಲಿರುವ ಕಮಲವೆಂಬ ಸಿಂಹಾಸನದಲ್ಲಿ. ಅನಿರುದ್ಧಾದಿ ರೂಪಗಳಿಂದ = ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಎಂಬ ನಾಲ್ಕು ರೂಪಗಳಿಂದ. ಸೇವ್ಯ ಸೇವಕ = ಸೇವೆ ಮಾಡುವವನೂ, ಮಾಡಿಸಿಕೊಳ್ಳುವವನೂ. **ಉಕ್ತಂ ಚ ಸತ್ತತ್ವ ರತ್ನಮಾಲಾಯಾಂ ನಾರಾಯಣ ಪ್ರಕರಣೇ:—**

**"ಸ್ವಯಂ ಸರ್ವತ್ರ ಸಂಸ್ಥಃ ಸನ್ ಸ್ವಪೂಜಾಂ ವಿದಧಾತಿಚ ॥ ಸರ್ವಕರ್ಮಾಣಿ ಕುರುತೇ ಸರ್ವತ್ರಾಸಕ್ತವಿವಸನ್ನಿತಿ ॥"** ಅವರಂತೆ = ಜೀವರಂತೆ ॥೭॥

**(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ—**
**(ಸಂಸ್ಕೃತಮೂಲ) :—**

ಮಹಿಮಾಂತರ ಮಾಹ ॥ ತನ್ವಿತಿ ॥ ನಾರಾಯಣೇತಿ । ಸೇವ ಕತ್ವಂ ಚ ತಾತ್ವಿಕಸ್ಥತಯಾ । ತದೇತದಾಹ ॥ ಸೇವೇತಿ । ಯದ್ವಾ ಜಯಾಕೃತೀಶೌ ಸಂಸೇವ್ಯೌ ರಮಾಶಾಂತಿಪತೀ ತಥಾ ॥ ಸೇವಕೌ ತತ್ಕ್ರಮಂ ವಚ್ಮಿ ಮಹಿದಾಸಭಟೋದಿತಂ ॥ ಕ್ಷೀರಾಬ್ಧಿಶಾಯಿನೋ ವಿಷ್ಣೋಃ ರೂಪಂ ಯತ್ಪುರುಷಾಭಿಧಂ ॥ ಸಂಕರ್ಷಣಶ್ಚ ಪ್ರದ್ಯುಮ್ನಃ ತದಾಕಾರೋ ನೃಷು ಸ್ಥಿತೌ । ನಾರಾಯಣಾನಿರುದ್ಧೌ ತು ಪಶ್ವಾಕಾರೋ ಪಶುಸ್ಥಿತೌ ॥ ವೃಷ ಭಾಶ್ವಾದಿ ರೂಪೇಣ ತೃಪ್ತಿದಾವಖಿಲಸ್ಯ ಚ ವಾಹೋಪವಾಹನಾದೀನಾ ಮಾದ್ಧಾರೋ ನರಾದಯಃ । ಯತಃ ಸಂಕರ್ಷಣಶ್ಚೈವ ಪ್ರದ್ಯುಮ್ನಸ್ತೇಷು ಸಂಸ್ಥಿತೌ ॥ ಅತಃ ತಯೋರ್ಹಿ ಸಂಚಾರಃ ಉಪರೀವ ಭವಿಷ್ಯತೀ ಚ ॥ ಏತೈಶ್ಚತುರ್ಭಿರ್ಭಗವಾನ್ ರೂಪೈಶ್ಚ ಚತುರಾತ್ಮನಃ ॥ ಭೋಗ್ಯ ಭೋಕ್ತೃ ಸ್ವರೂಪೇಣ ತಿಷ್ಠತಿ ಕ್ರೀಡಯಾ ಸ್ವಯಂ ॥ ಇತಿ ತೈತ್ತಿರೀಯ ಭಾಷ್ಯೇ ॥೭॥

**ಕನ್ನಡಾನುವಾದ :—**

ಶ್ರೀಹರಿಯ ಮಹಿಮಾತಿಶಯವನ್ನು ವಿವರಿಸುತ್ತಾರೆ. "ತನು"— ಎಂಬ ಪದ್ಯದಿಂದ. ನಾರಾಯಣನು ತತ್ವೇಶರಲ್ಲಿ ಅಂತರ್ಯಾಮಿರೂಪತ್ವೇನ ಸೇವಕನೆನಿಸಿಕೊಳ್ಳುವನು. ಈ ವಿಷಯವು "ಸೇವಾಸಕ್ತಸುರರೊಳಗೆನವರತ ನೆಲೆಸಿದ್ದು" ಎಂಬ ಪದದಿಂದ ಪ್ರತಿಪಾದಿತವಾಗಿದೆ. ಸಂಕರ್ಷಣ, ಪ್ರದ್ಯುಮ್ನರೂಪಗಳು ಸೇವ್ಯರೂಪಗಳು, ನಾರಾಯಣ ಅನಿರುದ್ಧರೂಪಗಳು ಸೇವಕರೂಪಗಳು. ಕ್ಷೀರಸಾಗರಶಾಯಿಯಾದ ಪರಮಾತ್ಮನು ಪುರುಷರೂಪಿಯು. ಮಾನವವರ್ಗದವರಲ್ಲಿ ಪುರುಷಾಕಾರದಿಂದ ಸಂಕರ್ಷಣ ಪ್ರದ್ಯುಮ್ನರಿರುತ್ತಾರೆ. ಪಶ್ವಾದಿವರ್ಗಗಳಲ್ಲಿ ನಾರಾಯಣ ಮತ್ತು ಅನಿರುದ್ಧರೂಪಗಳ ಚಿಂತನೆ. ವಾಹನಾದಿಗಳಲ್ಲಿ ಸಂಚರಿಸುವವರಲ್ಲಿ ಸಂಕರ್ಷಣ, ಪ್ರದ್ಯುಮ್ನರು ಅಂತರ್ಗತರೂಪದಿಂದ ಆನಂದಪ್ರದರು. ಏವಂಚ ಈ ಪ್ರಕಾರ ನಾಲ್ಕು ರೂಪಗಳಿಂದ ಸೇವ್ಯ-ಸೇವಕ ಮತ್ತು ಭೋಕ್ತೃ—ಭೋಜ್ಯರೂಪಗಳಿಂದ ಸ್ವತಃ ಶ್ರೀ ಪರಮಾತ್ಮನೇ ವಿಹಾರಮಾಡುತ್ತಾನೆ. ಈ ವಿವರಗಳನ್ನು ಶ್ರೀಮದಾಚಾರ್ಯರು **ತೈತ್ತಿರೀಯ ಭಾಷ್ಯದಲ್ಲಿ** ಸಮಗ್ರವಾಗಿ ನಿರೂಪಿಸಿರುತ್ತಾರೆ ॥೭॥

**ಖ) "ಗುರುಹೃದಯ ಪ್ರಕಾಶಿಕೆ"— ವ್ಯಾಖ್ಯಾನ :—**

ಜೀವಸ್ವರೂಪ, ಲಿಂಗಶರೀರ, ಅನಿರುದ್ಧಶರೀರ ಮತ್ತು ಸ್ಥೂಲ ಶರೀರಗಳೆಂಬ ನಾಲ್ಕು ದೇಹಗಳಲ್ಲಿ ನಾರಾಯಣನು ಹೃತ್ಕಮಲವೆಂಬ ಸಿಂಹಾಸನದಲ್ಲಿ ಅನಿರುದ್ಧಾದಿ ಸ್ವಮೂರ್ತಿಗಣಮಧ್ಯದಲ್ಲಿ ಒಪ್ಪುತ್ತಾ, ತನ್ನ ಸೇವಾಸಕ್ತರಾದ ಬ್ರಹ್ಮರುದ್ರೇಂದ್ರಾದಿ ದೇವತೆಗಳಿಂದ ಸೇವೆತೆಗೆದುಕೊಳ್ಳುತ್ತಾ, ಆ ದೇವತೆಗಳಲ್ಲಿ ತಾನೇ ವ್ಯಾಪ್ತನಾದ್ದರಿಂದ, ಅವರು ಸೇವೆ ಮಾಡಿದಹಾಗೆ ಮಾಡಿಸಿ, ಮುಖ್ಯವಾಗಿ ತನಗೆ ತಾನೇ ಸ್ವತಂತ್ರ ಸೇವ್ಯ ಸೇವಕನೆನಿಸಿರುವನು, ತನ್ನ ಪೂರ್ಣಾನಂದಕ್ಕೆ, ಪರಾಪೇಕ್ಷೆ ಇಲ್ಲದ್ದರಿಂದ, ಸ್ವತಂತ್ರವ್ಯಾಪ್ತನೆಂಬುವುದು ತಾತ್ಪರ್ಯ ಇದರಿಂದ—

"ಸಹಿಪೂಜ್ಯೋಹಿಪೂಜ್ಯಕಃ । ಸ್ವಮೂರ್ತಿಗಣಮಧ್ಯಗಃ ।
ಬ್ರಹ್ಮವಾಯುಶಿವಾಹೀಂದ್ರ ವಿಪೈಶ್ಯಕ್ರಾದಿಕೈರಪಿ ಸೇವ್ಯಮಾನಃ ॥"
ಇತ್ಯಾದಿ ಪ್ರಮಾಣಗಳ ಅರ್ಥ ವಿವರಿಸಲ್ಪಟ್ಟಿತು ॥೭॥

**ಸರ್ವವ್ಯಾಖ್ಯಾನಸಾರಸಂಗ್ರಹ: —**

ಪೂರ್ವೋಕ್ತ ಪದ್ಯಗಳಲ್ಲಿ ಶ್ರೀಪರಮಾತ್ಮನು ಅನಿರುದ್ಧ, ಪ್ರದ್ಯುಮ್ನ ಸಂಕರ್ಷಣ ಮತ್ತು ವಾಸುದೇವ ಎಂಬ ತನ್ನಿಂದ ಅಭಿನ್ನವಾದ ರೂಪ ಚತುಷ್ಟಯಗಳಿಂದ ವ್ಯಾಪ್ತನಾಗಿದ್ದುಕೊಂಡು, ಮಾಡಿ ಮಾಡಿಸುತ್ತಿರುವ ವ್ಯಾಪಾರವಿಶೇಷಗಳನ್ನು ವಿವರಿಸಿದರು. ಪ್ರಕೃತಪದ್ಯದಲ್ಲಿ ಮೂಲ ರೂಪೀ ನಾರಾಯಣನ ಮಹಿಮಾವಿಶೇಷವನ್ನು ತಿಳಿಸುತ್ತಾರೆ. ಜೀವಕೋಟಿ ಪ್ರವಿಷ್ಟರಾದ ಚೇತನವರ್ಗಕ್ಕೆ ನಾಲ್ಕು ಪ್ರಕಾರವಾದ ದೇಹಗಳುಂಟು. (೧) ನಿತ್ಯವಾದ ಅಪ್ರಾಕೃತ ಸ್ವರೂಪಶರೀರ. (೨) ಅದರ ಮೇಲೆ ಆವರ್ಕವಾಗಿರುವ ಲಿಂಗಶರೀರ, ಇದು ತ್ರಿಗುಣಾತ್ಮಕವಾದದ್ದು. (ಪ್ರಾಕೃತ ಸತ್ತ್ವ ರಜಸ್ತಮೋಗುಣಗಳಿಂದ ನಿರ್ಮಾಣವಾಗಿದೆ), ಹದಿನಾರು ಕಳಾಯುಕ್ತವಾದದ್ದು. ಷೋಡಶಕಳಾತ್ಮಕವಾದ ಲಿಂಗಶರೀರವು ಸ್ವರೂಪ ಶರೀರಕ್ಕೆ ಆವಣರೂಪದಲ್ಲಿ ಅನಾದಿಕಾಲದಿಂದಲೂ ಇದೆ, ಇದಕ್ಕೆದೇಹನಾಶ ಉಂಟು. ಇದಕ್ಕೆ "ಲಿಂಗಭಂಗ" ಎನ್ನುವರು. (೩) ಅದರಮೇಲೆ ಆವರಣರೂಪದಲ್ಲಿರುವ ಅನಿರುದ್ಧ ಶರೀರವು, ಇದರಲ್ಲಿ ಹದಿನೆಂಟು ಕಳೆಗಳಿದ್ದು, ಶ್ರೀಹರಿಯು ಹಂಸಾದಿ ಹದಿನೆಂಟುರೂಪಗಳಿಂದ ವಿರಾಜಮಾನವಾಗಿ ತತ್ತ್ವ ದೇವತೆಗಳದ್ವಾರಾ ಜೀವದಿಗೆ ಅವರ ಕರ್ಮಾನುಸಾರವಾಗಿ ಒದಗತಕ್ಕ ಜನ್ಮಾಂತರಗಳನ್ನು ಹೊಂದಿಸಿ ವ್ಯಾಪಾರಮಾಡುವನು. ಮತ್ತು (೪) ಕೊನೆ ಯಲ್ಲಿ ನಮಗೆ ಪ್ರತ್ಯಕ್ಷವಾಗಿ ಗೋಚರವಾಗುತ್ತಿರುವ ಸ್ಥೂಲಶರೀರವು. ಇದು "ಇಪ್ಪತ್ತನಾಲ್ಕು ತತ್ತ್ವಗಳಿಂದ ನಿರ್ಮಿತವಾಗಿದ್ದು. ಸಾಧನಶರೀರ ವೆಂದೆನಿಸಿದೆ, ಜೀವರ ಸಾಧನ ಕರ್ಮಗಳೆಲ್ಲವೂ ಈ ಸ್ಥೂಲದೇಹದ ಮಾಧ್ಯಮ ದಿಂದಲೇ ಇಂದ್ರಿಯಾಭಿಮಾನಿ ದೇವತೆಗಳದ್ವಾರಾ, ತತ್ತ್ವೇಶರಿಗೆ ನಿಯಾಮಕ ರಾದ ಶ್ರೀ ವಾಯುದೇವರ ಆಣತಿಯಂತೆ, ಬಿಂಬರೂಪೀ ಶ್ರೀಹರಿಯು

ಪ್ರೇರಣಾನುಸಾರ ನಡೆಯುವುವು. ಹೀಗೆ ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲಗಳೆಂಬ ನಾಲ್ಕುಪ್ರಕಾರವಾದ ದೇಹಗಳಲ್ಲಿ (ತನುಚತುಷ್ಟಯಗಳೊಳು) ಮೂಲರೂಪೀ ಶ್ರೀಮನ್ನಾನಾರಾಯಣನು ಪರಿಶೋಭಿಸುತ್ತಾ ವಿದ್ಯಮಾನನಾಗಿದ್ದಾನೆ, ಈ ನಾಲ್ಕು ದೇಹಗಳಲ್ಲಿರತಕ್ಕ ಹೃದಯ ಕಮಲವೇ ಶ್ರೀಮನ್ನನಾರಾಯಣನಿಗೆ ಸಿಂಹಾಸನ. ಇಂತಹ ಹೃತ್ಕಮಲಾಖ್ಯ ಸಿಂಹಾಸನದಲ್ಲಿ ಉಪಸ್ಥಿತನಾಗಿದ್ದುಕೊಂಡು ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ಪ್ರದ್ಯುಮ್ನ ಎಂಬ ಸ್ವಾಭಿನ್ನಗಳಾದ ನಾಲ್ಕು ರೂಪಗಳಿಂದ ವಿರಾಜಮಾನವಾಗಿದ್ದಾನೆ. ಸರ್ವತಂತ್ರ ಸ್ವತಂತ್ರನಾದ ಶ್ರೀಮನ್ನಾರಾಯಣನು ಸ್ವರಮಣನು. ಆಪ್ತಕಾಮನು. ಪರಾಪೇಕ್ಷೆಇಲ್ಲದೆ ತನಗೆ ತಾನೇ ಕಾರ್ಯ ನಿರ್ವಾಹಕನಾಗಿರುವನು. ಹೀಗೆ ಅನಿರುದ್ಧಾದಿರೂಪಚತುಷ್ಟಯಗಳಿಂದ ತನು ಚತುಷ್ಟಯಗಳ ಹೃತ್ಕಮಲಾಖ್ಯ ಸಿಂಹಾಸನದಲ್ಲಿ ಪರಿಶೋಭಿಸುತ್ತಿರುವ ಮೂಲರೂಪೀ ಶ್ರೀಮನ್ನಾರಾಯಣನು, ತನ್ನ ಸೇವೆಯಲ್ಲಿ ಸದಾ ಆಸಕ್ತರಾಗಿರುವ ಬ್ರಹ್ಮ ರುದ್ರೇಂದ್ರಾದಿ ದೇವತೆಗಳಲ್ಲಿ ಆವಾಸನಾಗಿದ್ದು "ಸೇವ್ಯ ಸೇವಕ"ನೆಂದೆನಿಸಿ, ಅವರಿಂದ ಸೇವೆಗಳನ್ನು ಸ್ವೀಕರಿಸುತ್ತಾನೆ. ತನ್ನ ಸೇವೆಯನ್ನು ಮಾಡುತ್ತಿರುವ ಬ್ರಹ್ಮರುದ್ರೇಂದ್ರಾದಿ ತತ್ವದೇವತೆಗಳಲ್ಲಿ ಅಂತರ್ಯಾಮಿರೂಪದಿಂದ ಇದ್ದು, ಅವರ ಮೂಲಕ ಬಿಂಬಕ್ರಿಯಾದ್ವಾರಾ ಸೇವೆಯನ್ನು ಮಾಡುತ್ತಾ "ಸೇವಕ"ನೆಂದೆನಿಸುವನು. ಶ್ರೀಮನ್ನಾರಾಯಣನು ಸ್ವಾಭಿನ್ನಗಳಾದ ಅನಿರುದ್ಧಾದಿ ರೂಪಚತುಷ್ಟಯಗಳಿಂದ ಸ್ವಯಂ (ತನಗೆ ತಾನೇ ಸೇವೆಯನ್ನು ಸ್ವೀಕರಿಸುತ್ತಾ, "ಸೇವ್ಯ"ನೆನಿಸಿಕೊಳ್ಳುವನು. ಹೀಗೆ ಸೇವಾಸಕ್ತಸುರರ ಒಳಗೆ ಯಾವಾಗಲೂ ನೆಲೆಸಿದ್ದು, "ಸೇವ್ಯ ಸೇವಕ" ಎಂಬ ಬಿಂಬಕ್ರಿಯಾಭಾವದಿಂದ ತನ್ನಾಮಕನಾಗಿ, ತದಾಕಾರನಾಗಿ, ತತ್ತ್ಶಬ್ದ ವಾಚ್ಯನಾಗಿ (ಅವರಂತೆ) ಸೇವೆಯನ್ನು ನಿರಂತರವೂ ಸ್ವೀಕರಿಸುತ್ತಿರುವನು. ಇಂತಹ ಶ್ರೀಮನ್ನಾರಾಯಣನ ವ್ಯಾಪ್ತಿಮಹಿಮೆ ಎಂತಹವುದು ?

ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನದ ಪ್ರಕಾರ. "ತನುಚತುಷ್ಟಯ" ಗಳಿಗೆ ಈ ವಿವರಣೆ ಕೊಟ್ಟಿರುತ್ತಾರೆ:— (೧) ಬ್ರಹ್ಮದೇವರು ಮೊದಲು ಶತಸ್ಥರವರೆಗೆ ದೇವಗಣ. (೨) ಬಲ್ಯಾದಿ ಪುಷ್ಕರಾಂತ ಕರ್ಮಜ ದೇವತೆ

ಗಳ ಗಣ (೩) ಅಜಾನಜರು ಮೊದಲು ಗಂಧರ್ವರವರೆಗೆ ವರ್ಗ ಮತ್ತು (೪) ಮನುಷ್ಯ ಗಂಧರ್ವಾರಭ್ಯ ತೃಣಾಂತಜೀವಗಣ. ಪೂರ್ವೋಕ್ತ ನಾಲ್ಕು ಪ್ರಕಾರವಾದ ದೇಹಗಳಲ್ಲಿ ಶ್ರೀಮನ್ನಾರಾಯಣನ ವ್ಯಾಪ್ತಿ ವ್ಯಾಪಾರ ಗಳನ್ನು ವಿವರಿಸುತ್ತಾರೆ. ಸ್ಥೂಲದೇಹಗತ ಸುಷುಮ್ನಾನಾಡಿಯ ಮಧ್ಯದಲ್ಲಿ ಅಷ್ಟದಳಕಮಲವಿದೆ. ಇದು ರಮಾಭಿಮನ್ಯವಾದದ್ದು. (ಅಂದರೆ ಶ್ರೀ ಲಕ್ಷ್ಮೀದೇವಿಯು ಇದಕ್ಕೆ ಅಭಿಮಾನಿಗಳು) ಈ ಅಷ್ಟದಳಯುಕ್ತ ಹೃತ್ಕಮಲವೇ ಶ್ರೀಮನ್ನಾರಾಯಣನಿಗೆ ಸಿಂಹಾಸನವೆನಿಸುವುದು. ಪೂಜಾಸಾಮಗ್ರಿಗಳಲ್ಲಿ ಅಂತರ್ಗತನಾಗಿ ಆಯಾಯಾ ರೂಪಗಳಿಂತಲೂ, ಪ್ರತಿಮಾಂತರ್ಗತವಾಗಿ ಪ್ರತಿಮಾರೂಪದಿಂದಲೂ, ತನ್ನನ್ನು ಸೇವಿಸುತ್ತಿರುವ ಬ್ರಹ್ಮ ರುದ್ರೇಂದ್ರಾದಿ ದೇವತಾವರ್ಗದಲ್ಲಿ ಅಂತರ್ಯಾಮಿರೂಪತ್ವೇನಾ "ಸೇವಕರೂಪ"ದಿಂದಲೂ ಇದ್ದು ಸೇವಾಸ್ವೀಕಾರ ಮಾಡುತ್ತಾನೆ. ಇದರಿಂದ ಜೀವಕೋಟಿಪ್ರವಿಷ್ಟರಲ್ಲಿ ನಾಲ್ಕು ವರ್ಗಗಳನ್ನು ಹೇಳಿ, ಈ ಗಣಚತುಷ್ಟಯಗಳಲ್ಲಿ ಶ್ರೀಮನ್ನಾರಾಯಣನ ವ್ಯಾಪಾರವಿಶೇಷಗಳನ್ನು ಪ್ರತ್ಯೇಕವಾಗಿ ಹೇಳಿದಂತಾಯಿತು. ಏಕತ್ರ ಇರುವ ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲಶರೀರಗಳಿಂದ ಅಧಿಷ್ಠಾನ ಚತುಷ್ಟಯಗಳಲ್ಲಿ ಮೂಲರೂಪೀ ಶ್ರೀಮನ್ನಾರಾಯಣನು ಸ್ವಾಭಿನ್ನ ಅನಿರುದ್ಧಾದಿರೂಪಗಳಿಂದ ಮಾಡಿ ಮಾಡಿಸುತ್ತಿರುವ ಕ್ರಿಯಾವಿಶೇಷಗಳು ಅಸದೃಶ ಮತ್ತು ವಿಚಿತ್ರ. ಸಾಧಕನಿಗೆ ಈ ಧ್ಯಾನೋಪಾಸನೆ ಪರಮ ತಾರಕ ವಾದದ್ದು. ಇನ್ನು ಮೇಲ್ಮಟ್ಟದ ಜ್ಞಾನವಿಶೇಷದಿಂದ ಪೂರ್ವೋಕ್ತ ವರ್ಗ ತನುಷ್ಟಯಗಳಲ್ಲಿ ಶ್ರೀಹರಿಯು ವ್ಯಾಪ್ತಿಚಿಂತನೆ ಮಾಡಬೇಕು. ॥೭॥

# ಪದ್ಯ (೮)

**ಮೂಲ :—**

**ಜಾಗರ ಸ್ವಪ್ನಂಗಳೊಳು ವರ ।**
**ಭೋಗಿಶಯನ ಬಹುಪ್ರಕಾರ ವಿ ।**
**ಭಾಗಗೈಸಿ ನಿರಂಶಜೀವರ ಚಿಚ್ಛರೀರವನು ॥**
**ಭೋಗೆನಿತ್ತು ಸುಷುಪ್ತಿಕಾಲದಿ ।**
**ಸಾಗರವ ನದಿ ಕೂಡುವಂತೆ ವಿ ।**
**ಯೋಗರಹಿತನು ಅಂಶಗಳನೇಕತ್ರವೈದಿಸುವ ॥ ೮ ॥**

**ಅವತರಣಿಕೆ :—**

ಜೀವರಿಗೆ ಜಾಗ್ರತೆ, ಸ್ವಪ್ನ ಮತ್ತು ಸುಷುಪ್ತಿ ಎಂಬ ಮೂರು ಪ್ರಕಾರವಾದ ಆವಸ್ಥಾ ವಿಶೇಷಗಳುಂಟು. ಈ ಅವಸ್ಥಾತ್ರಯಗಳಲ್ಲಿ ಸ್ವಪ್ನ ಮತ್ತು ನಿದ್ರಾವಸ್ಥೆ ವಿಚಾರವನ್ನು ಹೇಳುತ್ತಾರೆ. “ಜಾಗರ” —ಎಂಬ ಈ ಪದ್ಯದಿಂದ. ॥೮॥

**ಪ್ರತಿಪದಾರ್ಥ :—**

**ಜಾಗರ** = ಜೀವರ ಜಾಗ್ರದಾವಸ್ಥೆಯಲ್ಲಿ. (ಎಚ್ಚರವಾಗಿರುವ ಕಾಲ ದಲ್ಲಿ) **ಸ್ವಪ್ನಂಗಳೊಳು** = ಸ್ವಪ್ನಾವಸ್ಥೆಯಲ್ಲಿಯೂ (ಕನಸುಗಳನ್ನು ಕಾಣು ತ್ತಿರುವ ಕಾಲ) ಇಂತಹ ಸ್ವಪ್ನಾವಸ್ಥೆಯಲ್ಲಿರುವ ಕಾಲಕ್ಕೆ ಆಯಾ ಜೀವರು ಸ್ವಪ್ನಗಳಲ್ಲಿ ನೋಡತಕ್ಕ ಗಜ ತುರಗ ಮಾನುಷಾದಿ ಸ್ಥೂಲದೇಹಸಹಿತವಾದ ವಸ್ತು ವಿಶೇಷಗಳನ್ನು **ವರ** = ಸರ್ಪಶ್ರೇಷ್ಠರಾದ **ಭೋಗಿ** = ಶೇಷದೇವ ರನ್ನೇ **ಶಯನ** = ತನ್ನ ಹಾಸಿಗೆಯನ್ನಾಗಿ ಮಾಡಿಕೊಂಡಿರುವ ಶ್ರೀ ಪರಮಾ

ಮಾತ್ಮನು (ಸ್ವಪ್ನಾವಸ್ಥಾಪ್ರಕಾರನಾದ ಶ್ರೀ ತೈಜಸರೂಪೀ ಪರಮಾತ್ಮನು] **ನಿರಂಶಜೀವರ** = ಅಂಶರಹಿತರಾದ ಮನುಷ್ಯಾದಿ ಜೀವರ **ಚಿಚ್ಛರೀರವನು** = ಜ್ಞಾನಸ್ವರೂಪವಾದ ದೇಹವನ್ನು **ಬಹುಪ್ರಕಾರ** = ನಾನಾ ರೀತಿಗಳಲ್ಲಿ **ವಿಭಾಗಗೈಸಿ** = ಅಂಶ ವಿಶೇಷದಿಂದ ವಿಭಾಗಮಾಡಿ **ಭೋಗವಿತ್ತು** = ಹಾಗೆ ವಿಭಾಗಮಾಡಿದ ಆಯಾಯಾ ಭಿನ್ನ ಭಿನ್ನರಾದ ಗಜತುರಗಾದಿ ಜೀವರ ಅಂಶ ಗಳಿಂದ ಸ್ವಾಪ್ನವಸ್ತುಗಳನ್ನು ತಕ್ಷಣವೇ ನಿರ್ಮಿಸಿ, ಅವುಗಳ ಸಂದರ್ಶನ ಸಂಭಾಷಣೆ, ಸಂಪರ್ಕಾದಿಗಳ ದ್ವಾರಾ ಜೀವರಿಗೆ ಆನಂದರೂಪವಾದ ಭೋಗ ವನ್ನು ಕೊಟ್ಟು, (ದಿಕ್ಪ್ರದರ್ಶನ ಮಾಡಿಸಿ) **ಸುಷುಪ್ತಿಕಾಲದಿ** = ಸ್ವಪ್ನಾ ವಸ್ಥೆಯ ನಂತರ ಉಂಟಾಗುವ ಗಾಢನಿದ್ರಾವಸ್ಥೆಯಲ್ಲಿ **ನದಿ** = ಅಸಂಖ್ಯಾತ ವಾದ ನದಿಗಳು **ಸಾಗರವ** = ಸಮುದ್ರವನ್ನು **ಕೂಡುವಂತೆ** = ಸೇರು ವಂತೆ (ನದಿಗಳೆಲ್ಲವೂ ಸಮುದ್ರದಲ್ಲಿ ಏಕತ್ರಸೇರುವಂತೆ) **ವಿಯೋಗರಹಿತನು** = ಜೀವರವಿಯೋಗದಿಂದ ರಹಿತನಾದ ಶ್ರೀ ಪರಮಾತ್ಮನು (ಅನಾದ್ಯನಂತ ಕಾಲಕ್ಕೂ ಜೀವರಿಗೆ ಶ್ರೀಪರಮಾತ್ಮನು ಬಿಂಬನಾಗಿರುವುದರಿಂದ, ಅವರಿಂದ ಅವಿಯೋಗಿಯು) **ಅಂಶಗಳ** = ಜೀವರ ಅಂಶಗಳನ್ನು (ವಿಭಾಗಮಾಡಿದ) **ಏಕತ್ರ** = ಒಂದೇಸ್ಥಳದಲ್ಲಿ **ಐದಿಸುವ** = ಸೇರಿಸುವನು. (ಕೂಡಿಸುತ್ತಾನೆ) ||೮||

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಸಮಸ್ತಜೀವರ ಜಾಗ್ರದಾವಸ್ಥಾತೀತವಾದದ್ದು ಸ್ವಪ್ನಾವಸ್ಥಾ. ಇಂತಹ ಸ್ವಪ್ನಾವಸ್ಥಾದಿಂದ ಸಹಿತವಾಗಿರುವ ಆಯಾಜೀವರು ಸ್ವಪ್ನಗಳಲ್ಲಿ ಕಾಣತಕ್ಕ ಗಜತುರಜ ಮಾನುಷಾದಿ ಸ್ಥೂಲದೇಹ ಸಹಿತರಾದ ಜೀವರು ನಿದ್ರಾವಸ್ಥೆಯಲ್ಲಿ ಕಾಣುವ ಸ್ವಪ್ನಗಳಲ್ಲಿ ಶೇಷಶಾಯಿಯಾದ, ಸ್ವಪ್ನಾವಸ್ಥಾ ಪ್ರೇರಕನಾದ ತೈಜಸರೂಪೀ ಪರಮಾತ್ಮನು ನಾನಾಪ್ರಕಾರವಾಗಿ ಸ್ಥೂಲದೇಹ ದಿಂದ ಯುಕ್ತರಾದ ನಿರಂಶಜೀವರ (ಅಂಶವಿಲ್ಲದ ಮಾನುಷ್ಯಾದಿ ಜೀವವರ್ಗ)

ಕಾಂತಿರೂಪವಾದ ಭಾಗವನ್ನು (ಚಿತ್) ಮತ್ತು ಅವರವರು ಧರಿಸಿದ ಸ್ಥೂಲ ಶರೀರವನ್ನು ಇವೆರಡನ್ನು ಅಂಶವಿಶೇಷದಿಂದ ವಿಭಾಗಮಾಡುವನು. ಹಾಗೆ ವಿಭಾಗಮಾಡಿದ ಆಯಾ ಭಿನ್ನಭಿನ್ನವಾದ ಗಜತುರಗಾದಿ ಜೀವರ ಅಂಶಗಳ, ಪರಸ್ಪರ ಅವರ ಸ್ವಪ್ನಕಾಲದಲ್ಲಿ ಅವರವರಿಗೆ ಪ್ರದರ್ಶನಮಾಡಿ, ಅವರವರಿಗೆ ಪರಸ್ಪರ ಸಂಭಾಷಣಾದಿಗಳಿಂದ, ಭೋಗವಿತ್ತು ಮತ್ತು ಜಾಗ್ರತ್ಕಾಲದಲ್ಲಿ ನೋಡಿದ ಗಜತುರಗ ಮನುಷರು ಇವರೇ ಎಂತಲೂ, ಜಾಗ್ರತ್ಕಾಲದಲ್ಲಿ ಸಂಚಾರ ಮಾಡತಾ ಇದ್ದ ಪ್ರದೇಶದಲ್ಲಿ ಸಂಚಾರ ಮಾಡುತ್ತಾಇದ್ದಾನೆಂತಲೂ, ಈ ಪ್ರಕಾರ ಸ್ವಪ್ನ ಐದತಾ ಇರತಕ್ಕಾ ಜೀವರಿಗೆ ಇಂಥಾ ಅನುಭವ ಪ್ರತಿ ಜೀವಗೆ ಸ್ವಪ್ನಕಾಲದಲ್ಲಿ ಭೋಗವೀಯುವನು ನಂತರ, ಸ್ವಪ್ನಾತೀತವಾದ ನಿದ್ರಾಪ್ರಾಪ್ತವಾಗೋಕಾಲದಲ್ಲಿ, ಸಮುದ್ರವನ್ನು ನದಿಗಳು ಸೇರುವೋಪಾದಿ ಯಲ್ಲಿ, ಅಂದರೆ, ಸಮುದ್ರ ಅಂಶಿ ಮತ್ತು ನದಿಗಳು ಅಂಶ. ಮೇಘ ಈ ಸಮುದ್ರೋದಕವನ್ನು ವಿಭಾಗಮಾಡಿ ಕ್ವಚಿತ್‌ಪಾನಮಾಡಿ ಮಳೆ ಸುರಿಸುತ್ತದೆ. ಆ ಉದಕ ನದೀರೂಪದಿಂದ ಸಮುದ್ರವನ್ನ ಹ್ಯಾಂಗೆ ಸೇರತದೋ. ತದ್ವತ್ ಎಂದರ್ಥ. ಜೀವರ ವಿಯೋಗದಿಂದ ರಹಿತನಾದ ಶ್ರೀಪರಮಾತ್ಮನು, ನಿರಂಶರಾದ ಜೀವರ ತನ್ನ ಅಂಚಿತ್ಯಶಕ್ತಿಯಿಂದ ಜೀವರಿಗೆ ತಿಳಿಯದೇನೇ ಅಂಶಗಳ ವಿಭಾಗಮಾಡಿ. ಅನ್ಯರ ಸ್ವಪ್ನದಲ್ಲಿ ಪ್ರದರ್ಶನಮಾಡಿಸಿ ಮತ್ತು ಹಾಗೆ ವಿಭಾಗಮಾಡಿದ ಆಯಾ ಅಂಶಗಳ ಅಂಶಿಯಾದ ನಿರಂಶಜೀವರಲ್ಲಿ, ಏಕತ್ರ ಸೇರಿಸುವನಾಗತಾನೆ. ಅಂದರೆ, ಅಂಶಗಳನ್ನು ಅಂಶಿಯಲ್ಲಿ ಸೇರಿ ಸುತ್ತಾನೆ.

"ಸರ್ವೇಂದ್ರಿಯಾಣಾಮುಪರಮುಏವ ಸುಷುಪ್ತಿಃ"-ಎಂಬಪ್ರಮಾಣ ರೀತ್ಯಾ ಜಾಗರಸ್ವಪ್ನಂಗಳಲ್ಲಿ ಅಂಶ ಇಲ್ಲದ ಜೀವರ ಕಾಂತಿರೂಪವನ್ನು, ಸ್ಥೂಲ ಶರೀರವನ್ನು ಸರ್ವಕಾಲದಲ್ಲೂ ವಿಭಾಗಮಾಡಿ ಸಕಲಭೋಗಗಳನ್ನು ಮಾಡಿಸಿ, ಅನಂತರ ಸುಷುಪ್ತಿಯಲ್ಲಿ, ಮೇಘಗಳು ಸಮುದ್ರೋದಕವನ್ನು ಪಾನಮಾಡಿ ಮಳೆ ಗರೆದು, ನದೀದ್ವಾರಾ ಪಾನಮಾಡಿದ ಉದಕವನ್ನೇ ಸಮುದ್ರಸೇರುವಂತೆ ಏಕತ್ರಕೂಡಿಸತಾನೆ ಎಂತ ತಾತ್ಪರ್ಯ.

**ವಿಶೇಷಾರ್ಥ :—**

"ಏಕತ್ರವೈದಿಸುವ" ಅಂದರೆ, ಅಂಶಗಳನ್ನು ಅಂಶಿಯಲ್ಲಿ ಸೇರಿಸತಾನೆ. ಇನ್ನು ನಿರಂಶರಿಗೆ ಸಾಂಶತ್ವ ಎಂಬುದು ಹ್ಯಾಂಗೆಂದರೆ, **ಪ್ರಮಾಣ:—**

**"ನಿರಂಶಾನಾಂ ಚ ಜೀವಾನಾಂ ಕ್ವಚಿತ್ಸಾಂಶತ್ವಮಿಷ್ಯತೇ । ಲೋಕಾಂತರೇತು ಸಾಂಶತ್ವಂ ಸುಖಾದೇವ ಭವಿಷ್ಯತಿ ॥ ತಸ್ಮಾಜ್ಜೀವಸ್ಯ ಸಾಂಶತ್ವಂ ಅಂಗೀಕಾರ್ಯಂ ಮನೀಷಿಭಿರಿತಿ ॥" ॥ ವಾಮನಪುರಾಣೇ ॥**

ಸ್ವಪ್ನಕಾಲದಲ್ಲಿ ವಿಭಾಗಕ್ಕೆ **ಪ್ರಮಾಣ:—**

**"ಅನಂಶಸ್ಯಾತು ಜೀವಸ್ಯ ವಿಭಾಗಂ ಬಹುದಾ ಹರಿಃ । ಕೃತ್ವಾ ಭೋಗಾನ್ ಪ್ರದಾಯ್ಯೈವ ಚೈಕ್ಯಮಾಪಾದಯೇತ್ಪುನರಿತಿ ॥"— ಉಕ್ತಂಚ ಅನುವ್ಯಾಖ್ಯಾನೇ.**

ನಿರಂಶರೆಂದು ಪ್ರಸಿದ್ಧಿ ಬರೋದಕ್ಕೆ ಕಾರಣವೇನೆಂದರೆ, ದೇವತೆಗಳೋಪಾದಿಯಲ್ಲಿ ಸ್ವಸಾಮರ್ಥ್ಯದಿಂದ ಅಂಶವಿಭಾಗವಿಲ್ಲದ್ದರಿಂದ. ಹಲ್ಲಿ ಬಾಲವನ್ನು ವಿಭಾಗಮಾಡಿದರೆ, ಎರಡು ಭಾಗವೂ ಚಲಿಸುತ್ತಾ ಇರುತ್ತದೆ.

**"ಗೋಧಾದ್ವಿತ್ರಿಭಾಗವತ್"** —ಎಂತ ಗ್ರಂಥಾಂತರದಲ್ಲಿ ದೃಷ್ಟಾಂತವಿದೆ ॥೮॥

**(೨) "ಭಾವಪ್ರಕಾಶಿಕೆ"— ವ್ಯಾಖ್ಯಾನ :—**

ಶೇಷಶಯನನಾದ ಶ್ರೀಪರಮಾತ್ಮನು ಮನುಷ್ಯರಿಗೆ ಜಾಗ್ರದಾವಸ್ಥೆಯಲ್ಲಿ, ಅಂದರೆ, ನಾವು ಎಚ್ಚತ್ತು ವ್ಯವಹಾರಾದಿಗಳನ್ನು ನಡೆಯಿಸುತ್ತಿರುವ ಕಾಲದಲ್ಲಿ, ನಿರಂಶರೆಂದರೆ, ಮನುಷ್ಯಾದಿತೃಣಾಂತಜೀವರೆಂದರ್ಥ. ಇಂತಹ ಜೀವರ ಜ್ಞಾನಸ್ವರೂಪವಾದ ಸ್ವರೂಪ ದೇಹನ್ನು, ಮನುಷ್ಯ, ಆನೆ, ಕುದುರೆ, ಗೋವು, ಎಮ್ಮೆ ಮೊದಲಾದವುಗಳನ್ನಾಗಿ ವಿಭಾಗಿಸಿ,

ಜೀವರ ಯೋಗ್ಯತಾನುಸಾರವಾಗಿ ಅವರವರಿಗೆ ಹೆಂಡತಿ, ಮಕ್ಕಳು, ಧನ ಧಾನ್ಯ ಮೊದಲಾದವುಗಳನ್ನು ಕೊಟ್ಟು ಭೋಗಪಡಿಸುವನು. ಅದೇ ಪರಮಾತ್ಮನು ಸ್ವಪ್ನಾವಸ್ಥೆಯಲ್ಲಿ ಎಚ್ಚರಕಾಲದಲ್ಲಿ ನಾವು ಕಂಡಿರುವ ಸ್ಥಳಗಳನ್ನೂ, ಜನರು, ಆನೆ, ಕುದುರೆ, ಮೊದಲಾದ ನಿರಂಶಜೀವರ ಸ್ವರೂಪದೇಹಗಳನ್ನು ಸ್ಥೂಲದೇಹಗಳನ್ನು ಅಂಶಿಗಳಾಗಿ ವಿಭಾಗಮಾಡುವನು. ಅಂದರೆ, ನಾವು ಸ್ವಪ್ನದಲ್ಲಿ ಯಾವ ಬಂಧುವರ್ಗವನ್ನು, ಆನೆ, ಕುದುರೆ ಗಳನ್ನು ಕಾಣುವೆವೋ ಅವುಗಳೇ ಅಲ್ಲ. ಆ ಸ್ವಪ್ನಕಾಲದಲ್ಲಿ ಮಾತ್ರ ನಿಜವಾಗಿ ಬಂಧುಗಳನ್ನೇ ಕಂಡಂತಿರುವುದು. ಆದರ ಕಾರಣವೇನೆಂದರೆ, ಶ್ರೀಪರಮಾತ್ಮನು ನಾವು ಸ್ವಪ್ನಕಾಲದಲ್ಲಿ ಕಾಣುವ ಜನರ ಅಥವಾ ಆನೆ, ಕುದುರೆ ಮೊದಲಾದ ಜೀವರುಗಳ ಅಂಶವನ್ನು ಬೇರ್ಪಡಿಸಿ, ಅವರ ಸ್ಥೂಲ ದೇಹಗಳಂತೆ ಬೇರೆ ದೇಹಗಳನ್ನೇ ಸೃಷ್ಟಿಸಿ, ಸ್ವಪ್ನಗಳಲ್ಲಿ ತೋರಿಸಿ, ಭೋಗವನ್ನುಂಟುಮಾಡಿಸುವನು. ತಿರುಗಿ ಗಾಢನಿದ್ರೆ ಬಂದೊಡನೆ ಬೇರ್ಪಡಿ ಸಿದ ಜೀವರ ಅಂಶಗಳನ್ನು ಎಲ್ಲಿಂದ ಆ ಅಂಶವು ವಿಭಾಗ ಮಾಡಲ್ಪಟ್ಟಿತ್ತೋ ಅಲ್ಲಿಗೇನೇ ಸೇರಿಸಿಬಿಡುವನು. ಅದು ಹೇಗೆಂದರೆ, ಸಮುದ್ರೋದಕವು ಸೂರ್ಯಕಿರಣಗಳಿಂದ ಆವಿಯಾಗಿ, ಪರಿಣಮಿಸಿ, ಮೇಘದಲ್ಲಿ ಸೇರಿ, ಮಳೆಯಾಗಿ ಕರೆದು, ಅದೇ ಉದಕವೇ ನದಿಯಾಗಿ ಪ್ರವಹಿಸಿ. ಪುನಃ ಸಮುದ್ರವನ್ನೇ ಸೇರುವಂತೆ, ಪರಮಾತ್ಮನಿಂದ ಸೃಷ್ಟವಾದ ಅಂಶವು ಮತ್ತು ಪೂರ್ವಾಂಶ ಜೀವರಲ್ಲಿಯೇ ಲಯವಾಗುವುದೆಂದು ತಾತ್ಪರ್ಯ.

**ವಿಶೇಷಾರ್ಥ :—**

ಜೀವರಲ್ಲಿ ಸಾಂಶಜೀವರೆಂತಲೂ, ನಿರಂಶಜೀವರೆಂತಲೂ ಎರಡು ಪ್ರಾಕಾರ ಉಂಟು. ಅದರಲ್ಲಿ ಒಂದಂಶದಿಂದ ತಮ್ಮ ಲೋಕಗಳಲ್ಲಿ ಸ್ಥೂಲ ದೇಹದಿಂದ ವಾಸಮಾಡುವುದಲ್ಲದೆ, ತತ್ವಾಭಿಮಾನಿಗಳಾಗಿ ಸೂಕ್ಷ್ಮರೂಪ ದಿಂದ ಎಲ್ಲರ ದೇಹಗಳಲ್ಲಿಯೂ ಪ್ರತ್ಯೇಕ ಪ್ರತ್ಯೇಕವಾಗಿ ವಾಸಮಾಡುವುದು, ಅಥವಾ ಒಂದು ರೂಪದಿಂದ ತಮ್ಮ ಲೋಕಗಳಲ್ಲಿದ್ದುಕೊಂಡು, ಭೂಮಿ ಯಲ್ಲಿ ಒಂದಂಶದಿಂದ ಜನಿಸುವುದು. ಈ ಗುಣಗಳಿಂದ ಕೂಡಿದವರೇ

**ಸಾಂಶ**ರೆಂದು ತಿಳಿಯಬೇಕು. ಉದಾಹರಣೆಗೆ, ಶ್ರೀ ವಾಯುದೇವರು ಮೂಲರೂಪದಿಂದ ತಮ್ಮ ಲೋಕದಲ್ಲಿದ್ದರೂ ಅಂಶದಿಂದ ಹನುಮಭೀ ಮಾದ್ಯವತಾರಗಳನ್ನು ಮಾಡಿ, ಭೂಮಿಯಲ್ಲಿಯೂ ಇದ್ದರು. ಅದೇ ಕಾಲ ದಲ್ಲಿ ಎಲ್ಲರ ಚಿತ್ತದಲ್ಲಿಯೂ ಚಿತ್ತಾಭಿಮಾನಿಗಳಾಗಿ ವಾಸವಾಗಿದ್ದರು. ಹೀಗೆ ಇಂದ್ರದೇವರು ಸ್ವರ್ಗವನ್ನು ಪರಿಪಾಲಿಸುತ್ತಾ ಅಲ್ಲಿದ್ದರೂ. ಅಂಶದಿಂದ ಅರ್ಜುನನಾಗಿಯೂ, ವಾಲಿಯಾಗಿಯೂ ಜನಿಸಿದ್ದರು. ಇದಲ್ಲದೆ ಎಲ್ಲರ ಕರಗಳಿಗೆ ಅಭಿಮಾನಿಯಾಗಿ, ಸಕಲರ ಕರಗಳಲ್ಲಿಯೂ ಸೂಕ್ಷ್ಮ ರೂಪದಿಂದಿದ್ದು, ಕೈಗಳಿಂದ ಮಾಡುವ ಕೆಲಸಗಳನ್ನು ಮಾಡಿಸುತ್ತಿರುವರು. ಇವರೆಲ್ಲರೂ ಸಾಂಶರೇ. ಹಾಗೆಯೇ ಕಲಿ ಮೊದಲಾದ ದೈತ್ಯರು ಸ್ಥೂಲದೇಹ ದಿಂದ ತಮ್ಮ ಲೋಕಗಳಲ್ಲಿಯೂ, ಇಂದ್ರಿಯಾಭಿಮಾನಿಗಳಾಗಿ, ಎಲ್ಲರ ಇಂದ್ರಿಯಗಳಲ್ಲಿ ಸೂಕ್ಷ್ಮರೂಪದಿಂದಲೂ, ದುರ್ಯೋಧನಾದಿಗಳಾಗಿ ಭೂಮಿಯಲ್ಲಿ ಜನಿಸಿಯೂ ಇರುವರು. ಆದುದರಿಂದ. ಅಂತಹ ದೈತ್ಯರೂ ಕೂಡ ಸಾಂಶರೇ. ಮನುಷ್ಯಾದಿ ತೃಣಾಂತರಾದ ಜೀವರು ಮಾತ್ರ ಹೀಗೆ ಸಾಂಶರಲ್ಲ. ಅಲ್ಲಿದ್ದರೆ ಇಲ್ಲಿಲ್ಲ. ಇಲ್ಲಿದ್ದರೆ ಅಲ್ಲಿಲ್ಲ. ಆದ್ದರಿಂದ ಅವ ರೆಲ್ಲರನ್ನೂ **ನಿರಂಶಜೀವ**ರೆಂದರಿಯಬೇಕು. ಆದರೆ ಇವರಿಗೂ ಕೂಡ ಕೆಲವು ಕಾಲದಲ್ಲಿ ಮಾತ್ರ ಸಾಂಶತ್ವವು ಬರುವುದು.

**ವಾಮನಪುರಾಣದಲ್ಲಿ** ಇದಕ್ಕೆ ಆಧಾರವಚನವಿದೆ:— (ಪ್ರಮಾಣ ವಾಕ್ಯವನ್ನು ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಕೊಟ್ಟಿದೆ. ನೋಡು ವುದು) ನಿರಂಶಜೀವರು ಪುಣ್ಯಸಾಧನವನ್ನು ಮಾಡಿಕೊಂಡು ಸ್ವರ್ಗಾದಿ ಲೋಕದಲ್ಲಿ ವಾಸ ಮಾಡುತ್ತಾ, ತಮ್ಮ ಪುಣ್ಯಫಲವನ್ನು ಭೋಗಿಸುತ್ತಿರು ವಾಗ ಸಾಂಶರಾಗುವರು. ಭೂಲೋಕದಲ್ಲಿ ಎಂದಿಗೂ ಸಾಂಶರಾಗುವುದಿಲ್ಲ ವೆಂದು ಹೇಳಲ್ಪಟ್ಟಿರುವುದು. ಆದರೂ ಶ್ರೀಪರಮಾತ್ಮನು ಜೀವರಿಗೆ ಸ್ವಪ್ನಾದಿಗಳಲ್ಲಿ ಸುಖದುಃಖಗಳನ್ನು ಭೋಗಮಾಡಿಸಲಿಚ್ಛಿಸುವಾಗ ನಿರಂಶ ಜೀವರನ್ನು ಕೂಡ ತನ್ನ ಇಚ್ಛೆಯಿಂದ ಸಾಂಶರನ್ನಾಗಿ ಮಾಡುವನು. ನಿರಂಶ

ರಾದ ಜೀವರಿಗೆ ಸ್ವಪ್ನಕಾಲದಲ್ಲಿ ಮಲಗಿರುವ ಜೀವರ ಅಂಶವನ್ನು ವಿಭಾಗಿಸಿ, ಸ್ಥೂಲದೇಹಾಂತರವನ್ನು ಕೊಡಿಸಿ, ಸ್ಥಳಾಂತರಕ್ಕೆ ಕರೆದುಕೊಂಡು ಹೋಗಿ ಅಲ್ಲಿರುವ ಗಜತುರಗಾದಿಗಳ ಅಂಶವನ್ನು ವಿಭಾಗ ಮಾಡಿ, ಅವುಗಳ ರೂಪ ಗಳನ್ನು ಕೊಡಿಸಿ, ಪರಸ್ಪರ ಸಂಬಂಧದಿಂದ ಸುಖದುಃಖಾದಿಗಳನ್ನು ಭೋಗಿ ಸುವಂತೆ ಮಾಡಿ, ಪುನಃ ಆಯಾಯಾ ಜೀವರ ಅಂಶಗಳನ್ನು ಅಲ್ಲಿಯೇ ಸೇರಿಸಿಬಿಡುವನು. ಎಂದು ಮೇಲಿನ ಪ್ರಮಾಣಗಳ ತಾತ್ಪರ್ಯ. ಬಿಂಬ ಕ್ರಿಯಾರೂಪವಾಗಿ ಸರ್ವದಾ ಜೀವನೊಂದಿಗೆ ಇರುವವನಾದುದರಿಂದ, "ವಿಯೋಗರಹಿತ"ನೆಂದು ಹೇಳಿರುವರು. ||೮||

(೩) "ಭಾವದರ್ಪಣಟೀಕಾ" — ವ್ಯಾಖ್ಯಾನ :—

**"ಸರ್ವೇಂದ್ರಿಯಾಣಾಮುಪರಮ ಏವ ಸುಷುಪ್ತಿ":** —ಎಂತ ಇದ್ದ ಪ್ರಯುಕ್ತ, ಜಾಗರಸ್ವಪ್ನಗಳಲ್ಲಿ ನಿರಂತರ ಕಾಂತಿರೂಪಚಿಚ್ಛರೀರವನ್ನು ಅನ ವರತ ವಿಭಾಗ ಮಾಡಿ, ಸಕಲಭೋಗಗಳು ಮಾಡಿಸಿ, ಅನಂತರ ಸುಷುಪ್ತಿ ಯಲ್ಲಿ ಏಕತ್ರ ಕೂಡಿಸುತ್ತಾನೆಂದು ಹೇಳುತ್ತಾರೆ– "ಜಾಗರ" ಎಂಬ ಪದ್ಯ ದಿಂದ.

ವರ ಭೋಗಿ = ದೊಡ್ಡ ಸರ್ಪ (ಶೇಷ) ವಿಭಾಗಗೈಸಿ = ಪಾಲುಮಾಡಿ, ಚಿಚ್ಛರೀರ = ಚಿದಾನಂದಾತ್ಮಕ ದೇಹ. ಸುಷುಪ್ತಿ = ನಿದ್ರಾವಸ್ಥೆ. ಏಕತ್ರ ಐದಿಸುವ = ಒಂದೇಕಡೆಗೆ ಕೂಡಿಸುವನು. ಅದರ ವಿವರ ಹೀಗಿದೆ :—

**"ವಿಶ್ವಸ್ಸಂಗೃಹ್ಯ ಜೀವಸ್ಯ ಸ್ವಪ್ರಕಾಶವಿಶೇಷಕಮ್॥ ಕಂಠದೇಶಂ ಸಮಾಗತ್ಯ ಸಂಶ್ಲಿಷ್ಟಸ್ತೈಜಸೇನ ಯತ್ ॥ ತದಾತು ತೈಜಸ ಸಾಕ್ಷಾತ್ಪ ದಾರ್ಥಾನ್ ವಾಸನಾಮಯಾತ್ ॥ ಪ್ರದರ್ಶಯತಿ ಜೀವಾಯ ಸ್ವಪ್ನಾ ವಸ್ಥಾ ತದುಚ್ಯತೇ ॥ ತೈಜಸಃ ಕಂಠದೇಶಸ್ಥಃ ವಿಶ್ವೇನಸಹ ಲೀಲಯಾ ॥ ತದಾತ್ಮಕೋಶಮಾದಾಯ ಪ್ರಾಜ್ಞೇನಾಲಿಂಗ್ಯತೇ ಹೃದಿ ॥ ತದಾತು ತದ್ಗತ ಪ್ರಾಜ್ಞೋಂಗಿಲಿತ್ವಾ ಜೀವಮಿಂದಾರಾಮ್ ॥**

ವಿಶೇತ್ತ ಮುದರೀಕೃತ್ಯ ಪ್ರಾಜ್ಞಮಾಲಿಂಗತೇ ರಮಾ ॥ ಆವಿಷ್ಕ ರೋತಿ ಜೀವಸ್ಯಹೃನ್ನಿತ್ಯಂ ಸೃಜತೇ ಸುಖಮಿತಿ" ॥ ಮಾನಸಸ್ಮೃತಿ ವಚನಾತ್.

ಮತ್ತೊಂದು ಪ್ರಮಾಣ :—

ಉಕ್ತಂಚ ಅನುವ್ಯಾಖ್ಯಾನೇ— "ಅನಂಶಸ್ಯಾಪಿ ಜೀವಸ್ಯ ವಿಭಾಗಂ ಬಹುದಾ ಹರಿಃ ॥ ಕೃತ್ವಾ ಭೋಗಂ ಪ್ರದಾಯ್ಯೈವ ಚೈಕ್ಯಮಾಪಾದ್ಯತೇ ಪುನರಿತಿ ॥ " ॥೮॥

(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ—
(ಸಂಸ್ಕೃತಮೂಲ) :—

ತಾತ್ವಿಕೈಃ ಸ್ವಸೇವನಂ, ಫಲದಾನಂ ತದನುಗುಣಂ ಸುಪ್ತೌ ತದು ಪರಮುಪ್ರಕಾರ ಚವ್ಯನಕ್ತಿ ॥ ಜಾಗರೇತಿ ॥ ಸಂಧ್ಯೇಪಿ ಜಾಗ್ರದ್ಭಾವಾತ್ ತದ್ಗ್ರಹಣಂ ನಿರಂತರಾಃ ಸ್ವಭಿನ್ನಾಂಶಶೂನ್ಯಾಃ ಸರ್ವೇ ಪ್ರಕಾಶಾಂಶ । ಮಾತ್ರಾವಾ ॥ ವಿಭಾಗೇತಿ ॥ ಅನಂಶಸ್ಯಾಪೀತಿ ವಚನಾತ್ । ಸ್ವ ದೇಹೋ ಪಾದಾನತತ್ವಾತ್ಮ ದೇಹಸ್ಯ ಪರಿಮಿತತ್ವೇನ ಅನಂತತಯಾ ವಿಭಾ ಗಾಯೋಗ್ಯತ್ವೇಪಿ ಅಚಿಂತ್ಯೇಶ್ವರಶಕ್ತ್ಯಾ ವಿಭಾಗಃ ॥ ಈಶ್ವರಾಚಿಂತ್ಯ ಶಕ್ತ್ಯೈವ ವಿಭಕ್ತಾಂಶೈರನಂತಕೈಃ ॥ ಪ್ರೇರಕಾಃ ಸರ್ವಜೀವಾನಾಂ ಸ್ವೋತ್ತ ಮೈಃ ಪ್ರೇರಿತಃ ಸದೇತಿ ರತ್ನಮಾಲಾ ಸ್ಪಷ್ಟಮೇತತ್ ॥ ಅತ್ಯಂತಂ ಅಘ ಟಿತಂ ಘಟಯತೇ ॥ ಜಗನ್ನಾಥಸ್ಯೇತ್ಯಾದಿಚ ಸುಧಾಯಾಂ । ಹೃದಯೇ ಸಂಸ್ಥಿತೋ ಜೀವೋ ವಿಶೇಷೇಣ ಹರಿಸ್ತಥಾ ॥ ಚಕ್ಷುರಾದಿಷು ರೂಪಾಣಿ ಜಾಗ್ರತ್ಕಾಲೇ ತಯೋಃ ಸದಾ॥ ಬಹೂನಿ ಸಂತತಾನ್ಯೇವ ಯದ್ಯೈಕೀಭಾವಮಾ ಪ್ನುಯುಃ ॥ ಹೃದಯಸ್ಥೇನ ರೂಪೇಣ ತದಾ ಜೀವೋ ನ ಕಿಂಚನ ಜಾನಾತೀತಿ ಬೃಹಂ- । ಪ್ರಕಾಶಸ್ಯ ಸರ್ವೇಂದ್ರಿಯಗಸ್ಯ ಏಕತ್ರಕರಣಂ ಅಲ್ಪಜೀವೇ ॥ ಕುತಯೇ ತತ್ ? ದೇವಾವಿಯೋಗಿತ್ವಾದಿತ್ಯಾಹ ॥ ವಿಯೋಗೇತಿ ॥೮॥

ಕನ್ನಡಾನುವಾದ :—

ತತ್ವಾಭಿಮಾನಿ ದೇವತೆಗಳು ಭಗವತ್ಸೇವಾನಿರತರಾಗಿರುವರು. ಅವರ ಸೇವೆಗೆ ಅನುಗುಣವಾಗಿ ಫಲವನ್ನು ಶ್ರೀಹರಿಯು ಕೊಡುವನು ಮತ್ತು ಅವರ

ಸೇವೆಯ ಉಪರಮೆಯ ಕ್ರಮವನ್ನೂ ಸ್ಪಷ್ಟಪಡಿಸುತ್ತಾರೆ. "ಜಾಗರ" — ಎಂಬ ಪದ್ಯದಿಂದ.

ಸ್ವಪ್ನಾವಸ್ಥೆಯಲ್ಲಿ ಬಾಹ್ಯೇಂದ್ರಿಗಳು ವಿರಾಮವಾಗಿರುವುವು. ಆದರೆ ಮಾನಸ್ಸು ಮಾತ್ರ ಜಾಗ್ರತವಾಗಿರುವುದು. "ನಿರಂಶರು" —ಎಂದರೆ "ಸ್ವಾಭಿನ್ನಾಂಶಗಳಿಂದ ರಹಿತರಾದವರು" "ಕೇವಲ ಪ್ರಕಾಶಾಂಶದಿಂದ ಯುಕ್ತರು" ಎಂದರ್ಥ- **ಅಸಂತ್ಯಸ್ಯಾಪಿ** ಎಂದು **ಅನುವ್ಯಾಖ್ಯಾನದಲ್ಲಿ** ಶ್ರೀಮದಾಚಾರ್ಯರ ವಚನದಂತೆ, ತತ್ವಗಳಿಂದ ಯುಕ್ತವಾದ ದೇಹವು ಜೀವರ ಸ್ಥೂಲದೇಹಕ್ಕೆ ಉಪಾದಾನಕಾರಣವು. ಅದಕ್ಕೆ ಪರಿಮಿತಿ ಉಂಟು. ಆದರೆ ಜೀವರ ಸ್ವರೂಪದೇಹವು ನಾಶರಹಿತವಾದದ್ದು. ಅದಕಾರಣ ವಿಭಾಗ ಮಾಡಲು ಬರುವಂತಿಲ್ಲ. ಆದರೂ ಶ್ರೀಪರಮಾತ್ಮನು ತನ್ನ ಅಚಿಂತ್ಯಾದ್ಭುತಶಕ್ತಿಯಿಂದ ಅದನ್ನು ವಿಭಾಗಿಸುವನು. ಹೀಗೆ ಅವನ ಅಚಿಂತ್ಯಶಕ್ತಿಯಿಂದಲೇ ವಿಭಾಗಮಾಡಲ್ಪಟ್ಟ ಅನಂತವಾದ ಅಂಶಸಹಿತವಾದ ಸ್ವೋತ್ತಮರಿಂದ ಪ್ರೇರಿತರಾಗಿ ಯಾವಾಗಲೂ ಜೀವರಿಗೆ ಪ್ರೇರಕರಾಗುತ್ತಾರೆ-ಹೀಗೆಂದು ಸತ್ತತ್ವರತ್ನಮಾಲಾವಚನವಿದೆ. ಶ್ರೀಹರಿಯು ಅತ್ಯಂತ ಅಘಟಿತವಾದದ್ದನ್ನೂ ಸಂಘಟಿಸುತ್ತಾನೆ, ಅಂದರೆ, "ಅಘಟನಾಘಟನಶಕ್ತನು" — ಎಂದು **ಶ್ರೀಮನ್ನ್ಯಾಯಸುಧಾ ಪ್ರಮಾಣವಿದೆ.** ಹೃದಯದಲ್ಲಿಯೇ ಜೀವನೂ ಮತ್ತು ಶ್ರೀಹರಿಯೂ ಏಕತ್ರ ಇರುತ್ತಾರೆ. ಭಗವದ್ರೂಪಗಳೇ ಕಣ್ಣುಮುಂತಾದ ಇಂದ್ರಿಯಗಳಲ್ಲಿ ಹಾಗೂ ತದಭಿಮಾನಿಗಳಲ್ಲಿ ಅಂತರ್ಗತವಾಗಿದ್ದು, ವ್ಯಾಪ್ತವಾಗಿವೆ. ಅವೆಲ್ಲಾ ರೂಪಗಳೂ ಹೃದಯಸ್ಥ ಹರಿಯ ರೂಪದಿಂದ ಐಕ್ಯವನ್ನು ಹೊಂದಿದರೆ. ಸುಷುಪ್ತಿ ಅವಸ್ಥೆವುಂಟಾಗುವುದು. ಆ ಸ್ಥಿತಿಯಲ್ಲಿ ಜೀವನು ಯಾವುದನ್ನೂ ತಿಳಿಯಲಾರನು—ಎಂದು **ಬೃಹದಾರಣ್ಯ ಭಾಷ್ಯವಚನವಿದೆ.** ಜೀವರ ಸರ್ವೇಂದ್ರಿಯಗಳಲ್ಲಿ ಹಂಚಿರುವ ಪ್ರಕಾಶಗಳನ್ನು ಅಲ್ಪನಾದ ಜೀವನಲ್ಲಿ ಹೃದಯಸ್ಥಾನದಲ್ಲಿ ಏಕೀಕರಿಸುತ್ತಾನೆ. ಇದಕ್ಕೆ ಕಾರಣವಾದರೂ ಏನು ? ಅಂದರೆ, ಹೃದಯಸ್ಥಜೀವನಿಂದ ಶ್ರೀಹರಿಗೆ ವಿಯೋಗವಿಲ್ಲದ್ದರಿಂದ, ಈ ಅಭಿಪ್ರಾಯವನ್ನೇ ದಾಸರಾಯರು "ವಿಯೋಗ ರಹಿತನು" ಎಂದು ಹೇಳಿರುವರು ॥೮॥

**(೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ:**

ಜಾಗ್ರತ, ಸ್ವಪ್ನವೆಂಬ– ಎರಡು ಅವಸ್ಥಾಕಾಲಗಳಲ್ಲಿ ನಿರಂಶ ಜೀವರ ಜ್ಞಾನಸ್ವರೂಪವನ್ನು ಬಹುಪ್ರಕಾರ ವಿಭಾಗಗೈಸಿ, ಎಂದರೆ, ಸ್ಥೂಲಶರೀರದಲ್ಲಿ ಸರ್ವತ್ರ ಸ್ವರೂಪ ಪ್ರಕಾಶಾಂಶ ನಿಲ್ಲುವ ಹಾಗೆ ವ್ಯಾಪ್ತಿ ಕೊಟ್ಟು, ಸುಖದುಃಖಾನುಭವ ತಂದುಕೊಟ್ಟು, ಸುಷುಪ್ತಿ ಎಂಬ ಗಾಢ ನಿದ್ರಾವಸ್ಥೆಯಲ್ಲಿ, ಸಮುದ್ರದಲ್ಲಿ ನದಿಗಳು ಒಂದಾಗುವಂತೆ, ಪ್ರಕಾಶಾಂಶ ಒಂದುಗೂಡಿಸುವನು. ಇದರಿಂದ ವ್ಯಾಪ್ತನಾಗಿ ಏನು ಮಾಡುವನೆಂಬ ಪ್ರಶ್ನೆಗೆ ಉತ್ತರವೂ ಮತ್ತು ಸ್ವತಂತ್ರವ್ಯಾಪ್ತಿಯೂ ಸಹ ತಿಳಿಸಲ್ಪಟ್ಟಿತು. "ವಿಯೋಗರಹಿತನು" ಮತ್ತು "ಭೋಗಿಶಯನನು" ಎಂಬ ಎರಡು ವಿಶೇಷಣಗಳನ್ನು ದೇವರಿಗೆ ಕೊಟ್ಟದ್ದರಿಂದ, ಸ್ಥೂಲದೇಹಾದಿಗಳು ಜೀವರಿಗೆ ಬಿಡುಗಡೆ ಆಗುವಹಾಗೆ, ದೇವರನ್ನು ಜೀವನು ಬಿಟ್ಟಿರುವುದಿಲ್ಲವೆಂಬರ್ಥವು, ಶೇಷದೇವರು ಸ್ಥಾವರಜೀವರಿಗೆ ಬಿಂಬರೂಪರು ಎಂಬರ್ಥ ಸಹ ಸೂಚಿಸಿತು.

**"ಶೇಷಸ್ಯ ಪ್ರತಿಬಿಂಬಾಸ್ತು ಸರ್ವೇಃಜೀವಾಃ" —ಎಂಬ ಭಾಗವತತಾತ್ಪರ್ಯಪ್ರಮಾಣ "ಜೀವಾಭಿಮಾನಿ ಗಿರೀಶ"—** ಎಂಬರ್ಥ ಸಹ ವಿವರಿಸಿತು ॥೮॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಜೀವರಿಗೆ ಮೂರುಪ್ರಕಾರವಾದ ಅವಸ್ಥಾವಿಶೇಷಗಳುಂಟು. ಇವುಗಳಿಗೆ "ಅವಸ್ಥಾತ್ರಯಗಳು" ಎಂದು ಹೆಸರು. ಇವು ಕ್ರಮವಾಗಿ (೧) ಜಾಗ್ರತಾವಸ್ಥೆ (೨) ಸ್ವಪ್ನಾವಸ್ಥೆ ಮತ್ತು (೩) ಸುಷುಪ್ತಿ ಎಂದು ತ್ರಿವಿಧ. (೧) ಜಾಗ್ರತಾವಸ್ಥೆಯಲ್ಲಿ ನಾವು ಎಚ್ಚರವಾಗಿರುತ್ತೇವೆ. ನಮ್ಮ ಸ್ಥೂಲದೇಹಗತ ಪಂಚಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳ ವ್ಯಾಪಾರ ನಡೆಯುತ್ತಿರುವುದು. ಮನಸ್ಸು ಈ ದಶೇಂದ್ರಿಯಗಳನ್ನು ನಿಯಂತ್ರಣಗೊಳಿಸುತ್ತಾ ಜಾಗ್ರತವಾಗಿರುವುದು. ಈ ಅವಸ್ಥೆಗೆ

ಪ್ರೇರಕರೂಪ "ವಿಶ್ವ" ನಾಮಕಪರಮಾತ್ಮನು. ಜಾಗ್ರತಾವಸ್ಥೆಗೆ ಪ್ರೇರಕನಾದ ವಿಶ್ವನಾಮಕನು ಜೀವರ ಬಲಗಣ್ಣಿನ ತುದಿಯಲ್ಲಿದ್ದು, ಇಂದ್ರಿಯಗಳು ಮತ್ತು ತದಭಿಮಾನಿಗಳ ದ್ವಾರಾ ಆಯಾಯಾ ಇಂದ್ರಿಯ ವ್ಯಾಪಾರಗಳನ್ನು ಬಿಂಬಕ್ರಿಯಾದ್ವಾರಾ ಮಾಡಿ ಮಾಡಿಸುತ್ತಿರುವನು. ಅಂತೆಯೇ ಮಾನಸಿಕವಾಗಿ ಮತ್ತು ಭೌದ್ಧಿಕವಾಗಿ ಕ್ರಿಯಾವಿಶೇಷಗಳು ಅವನಿಂದಲೇ ಪ್ರೇರಿತವಾಗಿ ನಡೆಯುತ್ತಿರುವುವು. (೨) ಅದೇ ವಿಶ್ವ ನಾಮಕಪರಮಾತ್ಮನು ಕಂಠಪ್ರದೇಶವನ್ನು ಸೇರಿದಾಗ, ಜೀವರಿಗೆ ಸ್ವಪ್ನಾವಸ್ಥೆಯುಂಟಾಗುವುದು. ಇದಕ್ಕೆ ಪ್ರೇರಕರೂಪ "ತೈಜಸ"ನು. ಸ್ವಪ್ನಾವಸ್ಥಾಪ್ರೇರಕನಾದ ತೈಜಸನು ವಿಶ್ವನಿಂದ ಸಹಿತನಾಗಿ ಕಂಠಕ್ಕೆ ಬಂದಾಗ, ಸ್ವಪ್ನದರ್ಶನವಾಗುವುದು. (೩) ಅದೇ ತೈಜಸರೂಪೀ ಪರಮಾತ್ಮನು ಹೃದಯಸ್ಥಾನಕ್ಕೆ ಬಂದಾಗ, "ಪ್ರಾಜ್ಞ"ನೆಂದೆನಿಸುವನು ಆಗ ಗಾಢನಿದ್ರೆಬರುವುದು. ಇದಕ್ಕೆ "ಸುಷುಪ್ತಿ" ಎಂದು ಹೆಸರು. ಆಗ ಪ್ರಾಜ್ಞನಾಮಕಪರಮಾತ್ಮನ ಗಾಢಾಲಿಂಗನದಿಂದಾಗಿ ಜೀವನಿಗೆ ಬಾಹ್ಯಸಂಬಂಧವಾದ ಎಚ್ಚರವೇ ಇರುವುದಿಲ್ಲ. ಹೀಗೆ ಅವಸ್ಥಾತ್ರಯಗಳಿಗೆ ಪ್ರೇರಕನಾಗಿ ಶ್ರೀ ಪರಮಾತ್ಮನು ವಿಶ್ವ ತೈಜಸ ಮತ್ತು ಪ್ರಾಜ್ಞ ಎಂಬ ರೂಪತ್ರಯಗಳಿಂದ ಜೀವರ ದೇಹದಲ್ಲಿ ನಡೆಯಿಸುವ ವ್ಯಾಪಾರ ವಿಶೇಷಗಳು ಆತ್ಯಾಶ್ಚರ್ಯಕರ.

ಜೀವಕೋಟಿಯಲ್ಲಿ ಎರಡುವಿಧ :- (೧) ಸಾಂಶರು ಮತ್ತು (೨) ನಿರಂಶರು ದೇವತಾವರ್ಗ ಹಾಗೂ ದೈತ್ಯವರ್ಗದವರು. "ಸಾಂಶ"ರು. ವಾಯ್ವಾದಿ ದೇವತೆಗಳು, ತಮ್ಮಲೋಕಗಳಲ್ಲಿ ಮೂಲರೂಪದಿಂದಿರುವರು. ಭೂಮಿಯಲ್ಲಿ ಅವತಾರ ಮಾಡಿದಾಗಲೂ ಸಾಂಶರಾಗಿಯೇ ಇರುವರು. ಅಂತೆಯೇ ತತ್ವಾಭಿಮಾನಿದೇವತೆಗಳು ಸ್ವಲೋಕಗಳಲ್ಲಿ ಮೂಲರೂಪ ದಿಂದಲೂ, ಇರುತ್ತಾ ಸರ್ವರ ದೇಹಗಳಲ್ಲಿ ಸೂಕ್ಷ್ಮರೂಪದಿಂದ ತತ್ವ ಕಾರ್ಯಗಳನ್ನು ಮಾಡುತ್ತಲೂ ಇರುವರು. ಅದೇರೀತಿಯಲ್ಲಿ ಕಲ್ಯಾದಿ ದೈತ್ಯರೂ ಸಹ ಮೂಲರೂಪಗಳಿಂದ ತಮ್ಮ ತಮ್ಮ ನಿವಾಸಸ್ಥಾನಗಳ ಲ್ಲಿದ್ದು. ಸರ್ವರ ಇಂದ್ರಿಯಾಭಿಮಾನಿಗಳಾಗಿ ಸೂಕ್ಷ್ಮರೂಪದಿಂದಿರುತ್ತಾ

ದುಷ್ಕಾರ್ಯಗಳಿಗೆ ಪ್ರೇರಕರಾಗಿರುವರು. (೨) ಏಕದೇಶ ಮತ್ತು ಏಕ ಕಾಲಗಳಲ್ಲಿ ಮಾತ್ರ ಇರುವ, ಅದೇಕಾಲದಲ್ಲಿ ಅನ್ಯತ್ರ ಇರಲು ಸಾಧ್ಯವಿಲ್ಲದಿರುವ ಜೀವವರ್ಗವನ್ನು "ನಿರಂಶಜೀವ" ರೆಂದು ಕರೆಯುವರು. ಮಧ್ಯಮವರ್ಗಕ್ಕೆ ಸೇರಿದ ಮಾನುಷಾದಿತೃಣಾಂತಜೀವರೆಲ್ಲರೂ ನಿರಂಶರು. ಮನೆಯಲ್ಲಿದ್ದರೆ ಹೊರಗಿಲ್ಲ; ಹೊರಗೆ ಹೋಗಿರುವಾಗ. ಮನೆಯಲ್ಲಿ ಅವರು ಗೈರುಹಾಜರು. ಏಕದೇಶದಲ್ಲಿ ಒಂದು ಕಡೆಮಾತ್ರ ಇರುವರು. ಮತ್ತು ಅನ್ಯತ್ರ ಇರಲಾರರು, ಇಂತಹ ನಿರಂಶಜೀವರ ಜ್ಞಾನರೂಪವಾದ ಸ್ವರೂಪದೇಹವನ್ನು (ಚಿಚ್ಛರೀರವನು) ಶ್ರೀಪರಮಾತ್ಮನು ಸ್ವಪ್ನಾವಸ್ಥೆಯಲ್ಲಿ ಬಹುವಿಭಾಗ ಮಾಡುವನು. ಜೀವರ ಸ್ವರೂಪದೇಹವು ಅನಾದಿನಿತ್ಯವಾದುದು. ಅದು ಅಚ್ಛೇದ್ಯ ಮತ್ತು ಅಬೇಧ್ಯ. ಹಾಗಿದ್ದರೂ, ತನ್ನ ಅಚಿಂತ್ಯಾದ್ಭುತ ಶಕ್ತಿವಿಶೇಷದಿಂದ ಕಾಂತಿ ರೂಪವಾದ ಅಂಶವನ್ನು ಪ್ರತ್ಯೇಕಿಸಿ, ಸ್ಥಳಾಂತರಗಳಿಗೆ ಕರೆದೊಯ್ದು, ಅಲ್ಲಿ ಆನೆ, ಕುದುರೆ, ಪಶ್ವಾದಿಗಳ ಅಂಶಗಳನ್ನೂ ವಿಭಾಗಮಾಡಿ, ಅವುಗಳ ರೂಪಗಳನ್ನು ಕೊಡಿಸಿ, ತತ್ಕಾಲದಲ್ಲಿ ಸ್ವಾಪ್ನಪದಾರ್ಥಗಳನ್ನೆ ನಿರ್ಮಾಣ ಮಾಡುವನು. ಹೀಗೆ ನಿರ್ಮಿತವಾದ ಸ್ವಾಪ್ನಪದಾರ್ಥಗಳೆಲ್ಲವೂ (ಅಂಶ ವಿಭಾಗರೂಪಯುಕ್ತವಾದದ್ದು) ಅಪ್ರಾಕೃತಗಳೇ. ಇದರಿಂದಲೇ ಸ್ವಾಪ್ನ ಪದಾರ್ಥಗಳೆಲ್ಲವೂ ಸತ್ಯವಾದುದೆಂದು ಶ್ರೀಮದಾಚಾರ್ಯರ ವಚನ. ಮಾಯಾವಾದಿಗಳು ಹೇಳುವಂತೆ ಈ ಜಗತ್ತಿನ ವ್ಯಾಪಾರಗಳೆಲ್ಲವೂ ಸ್ವಪ್ನದಂತೆ ಸುಳ್ಳಲ್ಲ. ಸ್ವಪ್ನಗಳು ಮಿಥ್ಯ; ಆದ್ದರಿಂದ ಜಗತ್ತೂ ಮಿಥ್ಯ ಎಂದು ಮಿಥ್ಯಾವಾದಿಗಳ ಮತ. ಇಂತಹ ಸತ್ಯಭೂತವಾದ ಸ್ವಾಪ್ನಪದಾರ್ಥಗಳ ನಿರ್ಮಾಣ ಶ್ರೀಪರಮಾತ್ಮನ (ತೈಜಸನ) ಅಚಿಂತ್ಯಾದ್ಭುತಮಹಿಮೆ. ವಾಸನಾರೂಪವಾದ ಸಂಸ್ಕಾರವಿಶೇಷಗಳು ಅವ್ಯಕ್ತವಾಗಿದ್ದು. ಸ್ವಪ್ನಕಾಲದಲ್ಲಿ ನಾನಾರೂಪವಿಶೇಷಗಳಿಂದ ಅಭಿವ್ಯಕ್ತವಾಗುವುವು. ಶೇಷಶಯನನಾದ ಶ್ರೀ ಪರಮಾತ್ಮನು ಪುಣ್ಯಕರ್ಮಫಲರೂಪವಾದ ಸುಖಾದಿಗಳನ್ನೂ ಮತ್ತು ಪಾಪಕರ್ಮಫಲರೂಪವಾದ ದುಃಖಾದಿಗಳನ್ನೂ ಜೀವರ ಅನುಭವಕ್ಕೆ ಸ್ವಪ್ನಕಾಲದಲ್ಲಿ ತಂದುಕೊಡುವನು. ಶೇಷದೇವರು ಸ್ಥಾವರಜೀವರಿಗೆ ಬಿಂಬ

ರೂಪರಾದ್ದರಿಂದ "ವರಭೋಗಿಶಯನ" ಎಂದು ಪದಪ್ರಯೋಗ ಮಾಡಿದ್ದಾರೆ ದಾಸರಾಯರು. ಅಲ್ಲದೆ ಶ್ರೀ ಶೇಷದೇವರು ಜೀವಾಭಿಮಾನಿಗಳೂ ಹೌದು. ಇಂತಹ ಸ್ವಪ್ನಕಾಲದಲ್ಲಿ ಮನಸ್ಸುಮಾತ್ರ ಎಚ್ಚರವಾಗಿದ್ದು, ಉಳಿದ ದಶೇಂದ್ರಿಯಗಳು ಉಪರತವಾಗಿರುವುವು. ಅದೇ ತೈಜಸಸ್ವರೂಪೀ ಪರಮಾತ್ಮನು ಹೃದಯಸ್ಥಾನಕ್ಕೆ ಬಂದಾಗ, "ಪ್ರಾಜ್ಞ"ನೆನಿಸುವನು. ಪ್ರಾಜ್ಞನಾಮಕನ ವ್ಯಾಪಾರ ಗಾಢನಿದ್ರೆ ಅಥವಾ ಸುಷುಪ್ತಿ, ಈ ಸ್ಥಿತಿಯಲ್ಲಿ ಮನಸ್ಸೂ ಸಹ ಉಪರತವಾಗಿ, ಜೀವನಿಗೆ ಬಾಹ್ಯೇಂದ್ರಿಯಗಳ ಅರಿವೇ ಇರುವುದಿಲ್ಲ. ಸ್ವಪ್ನಾವಸ್ಥೆಯಿಂದ ಸುಷುಪ್ತಿ ಅವಸ್ಥೆಗೆ ಬಂದಾಗ, ವಿಭಾಗ ಮಾಡಿದ ಅಂಶಗಳನ್ನು ಒಂದೇಕಡೆ ಪ್ರಾಜ್ಞನಾಮಕ ಪರಮಾತ್ಮನು ಸೇರಿಸುವನು. ಹೀಗೆ ಅಂಶಗಳನ್ನು ಏಕತ್ರ ಐದಿಸುವ ವ್ಯಾಪಾರವನ್ನು ದಾಸರಾಯರು ಸುಂದರವಾದ ಒಂದು ಉಪಮಾನದಿಂದ ವಿವರಿಸುತ್ತಾರೆ. ಸಮುದ್ರದ ನೀರು ಸೂರ್ಯನ ತಾಪದಿಂದ ಕಾದು, ಆವಿಯಾಗಿ, ಮೇಘಗಳು ಉಂಟಾಗುವುವು. ಈ ಮೇಘಗಳೇ ಮಳೆಯನ್ನು ಸುರಿಸುವುವು. ಭೂಮಿಗೆ ಬಿದ್ದ ಮಳೆಯ ನೀರು ಒಟ್ಟುಗೂಡಿ ನದಿಯಾಗಿ ಪ್ರವಹಿಸುವುದು, ಈ ನದಿಗಳೆಲ್ಲವೂ ಪುನಃ ತಮ್ಮ ಮೂಲಸ್ಥಾನವಾದ (ಆಕರ) ಸಮುದ್ರವನ್ನೇ ಸೇರುವುವು. ಈ ಉಪಮಾನದಲ್ಲಿ ಸಮುದ್ರ ಅಂಶಿ (ಅಂಶವುಳ್ಳದ್ದು) ಮತ್ತು ಪ್ರವಹಿಸುವ ನದಿಗಳು ಅಂಶಗಳು. ನದಿಗಳು ಸಮುದ್ರವನ್ನು ಹೇಗೆ ಸೇರುತ್ತವೆಯೋ. ಅಂತೆಯೇ, ವಿಭಾಗ ಮಾಡಿದ ಅಂಶಗಳನ್ನು ಅಂಶಿಯಲ್ಲಿಯೇ ಸೇರಿಸಿಬಿಡುವನು. ಬಿಂಬನಾದ ಶ್ರೀ ಪರಮಾತ್ಮನು ನಿತ್ಯ. ಅತಏವ ಪ್ರತಿಬಿಂಬರಾದ ಜೀವರುಗಳು ನಿತ್ಯರೇ. ಇದರಿಂದ ಜೀವೇಶರಿಗೆ ವಿಯೋಗವು ಎಂದಿಗೂ ಇಲ್ಲ. ಇದರಿಂದಲೇ ಪರಮಾತ್ಮನು ವಿಯೋಗರಹಿತನು. ಜೀವೇಶರಲ್ಲಿ ವಿಯೋಗವಿಲ್ಲ. ಆದರೆ ಭಿನ್ನತೆ (ವೈಲಕ್ಷಣ್ಯ) –ಇದೆ ॥೮॥

# ಪದ್ಯ (೯)

**ಮೂಲ :—**

**ಭಾರ್ಯರಿಂದೊಡಗೂಡಿ ಕಾರಣ ।**
**ಕಾರ್ಯವಸ್ತುಗಳಲ್ಲಿ ಪ್ರೇರಕ ।**
**ಪ್ರೇರ್ಯರೂಪಗಳಿಂದ ತಂತುಪಟಗಳವೋಲಿದ್ದು ॥**
**ಸೂರ್ಯಕಿರಣಗಳಂತೆ ತನ್ಮಯ ।**
**ವೀರ್ಯದಿಂದಲೆ ಕೊಡುತ ಕೊಳುತಿಹ ।**
**ನಾರ್ಯರಿಗೆ ಈತನ ವಿಹಾರವು ಗೋಚರಿಪುದೇನೋ॥ ॥೯॥**

**ಅವತರಣಿಕೆ :—**

ಶ್ರೀ ಪರಮಾತ್ಮನು ಲಕ್ಷ್ಮೀದೇವಿಯರಸಹಿತನಾಗಿ. ಕಾರಣ ಮತ್ತು ಕಾರ್ಯವಸ್ತುಗಳಲ್ಲಿ ಅಂತಃಸ್ಥನಾಗಿದ್ದು, ಸರ್ವತಂತ್ರಸ್ವತಂತ್ರನಾಗಿ ಈ ಜಗತ್ತಿನಲ್ಲಿ ಓತಪ್ರೋತನಾಗಿ ವ್ಯಾಪ್ತನಾಗಿದ್ದು, ಸ್ವಯಂ ಮಾಡುತ್ತಿರುವ ಜಗದ್ವ್ಯಾಪಾರಗಳನ್ನೂ ಮತ್ತು ಅವನ ಲೀಲಾವಿಲಾಸಗಳನ್ನೂ ವಿವರಿಸುತ್ತಾರೆ. "ಭಾರ್ಯರಿಂದೊಡಗೂಡಿ" -ಎಂಬ ಮೇಲಿನ ಪದ್ಯದಿಂದ ॥೯॥

**ಪ್ರತಿಪದಾರ್ಥ:—**

**ಕಾರಣ** = ಕಾರಣವಸ್ತುಗಳು ಐದು ಪ್ರಕಾರ ಇವೆ. (೧) ಜಗತ್ತಿಗೆ ಉಪಾದಾನಕಾರಣವಾದ ಮೂಲ ಜಡಪ್ರಕೃತಿ. (೨) ಜೀವಸೃಷ್ಟಿಸುವುದಕ್ಕೆ ಉಪಾದಾನಕಾರಣವಾದ ಲಿಂಗದೇಹಾಖ್ಯ ಪ್ರಕೃತಿ. (೩) ಜೀವರ ಜನ್ಮಕ್ಕೆ ಉಪಾದಾನ ಕಾರಣವಾದ ಲಿಂಗದೇಹಗತ ಅನಾದಿಕರ್ಮ. (೪) ಲಿಂಗಾಂತರ್ಗತ ಜೀವ ಮತ್ತು (೫) ಅನಿರುದ್ಧಶರೀರಗತ ತತ್ವದೇವತೆಗಳು. **ಕಾರ್ಯವಸ್ತುಗಳಲ್ಲಿ** = ಕಾರ್ಯವಸ್ತುಗಳಾವುವೆಂದರೆ, ನವಾವರಣಸಹಿತ

ಬ್ರಹ್ಮಾಂಡ, ಲೋಕವಿಶೇಷಗಳು, ಲಿಂಗಶರೀರಾರಭ್ಯ ಅನಿರುದ್ಧ ಶರೀರದ ವರೆಗೂ ಸಂಚಿತ್ತಾಮಿ ಕರ್ಮಗಳು, ಲಿಂಗಗತ ಅನಾದಿಪ್ರಾರಬ್ಧ ಕರ್ಮ- ಇವೇ ಮೊದಲಾದ ಸ್ಥಾವರಜಂಗಮಾತ್ಮಕ ವಸ್ತುಗಳಿಗೆ "ಕಾರ್ಯವಸ್ತು" ಗಳೆನ್ನುವರು. **ಪ್ರೇರಕ** = ಸಮಗ್ರ ಚೇತನಪ್ರಪಂಚಕ್ಕೆ ಪ್ರೇರಣೆ ಮಾಡುವ "ಪ್ರೇರಕ" ರೂಪದಿಂದಲೂ **ಪ್ರೇರ್ಯ** = ಶ್ರೀಪರಮಾತ್ಮನಿಂದ ಪ್ರೇರಿತ ರಾದ ಪ್ರಾಣಿವರ್ಗಗಳಲ್ಲಿ ಅಂತರ್ಯಾಮಿರೂಪತ್ವೇನ "ಪ್ರೇರ್ಯ" ರೂಪ ದಿಂದಲೂ **ಭಾರ್ಯರಿಂದೊಡಗೂಡಿ** = ಶ್ರೀ, ಭೂ, ದುರ್ಗಾನಾಮಕರಾದ ತನ್ನ ಪತ್ನಿ ಶ್ರೀ ಲಕ್ಷ್ಮೀದೇವಿಯರಸಹಿತನಾಗಿ (ಇವು ತ್ರಿಗುಣಗಳಿಗೆ ಅಭಿ ಮಾನಿರೂಪಗಳು) **ಪಟ** = ವಸ್ತ್ರ (ಬಟ್ಟೆ) **ತಂತುಗಳವೋಲ್** = ವಸ್ತ್ರದ ದಾರಗಳಂತೆ **ಇದ್ದು** = ಅನಂತಾನಂತರೂಪಗಳಿಂದ ಸನ್ನಿಹಿತನಾಗಿದ್ದು **ಸೂರ್ಯಕಿರಣಗಳಂತೆ** = ಪರ್ಜನ್ಯನಾಮಕ ಸೂರ್ಯನು ಮೇಘಾಂತರ್ಗತ ನಾಗಿ ತನ್ನ ಕಿರಣಗಳ ದ್ವಾರಾ ಸಮುದ್ರೋದಕ ಪಾನಮಾಡಿ, ಪುನಃ ಅದೇ ಉದಕವನ್ನು ತನ್ನ ಕಿರಣಗಳಿಂದ ಮೇಘಗಳದ್ವಾರಾ ಮಳೆ ಸುರಿಸಿ ದಂತೆ **ತನ್ನಯ** = ತನ್ನದೇ ಆದ (ಪರಾಪೇಕ್ಷಾರಹಿತನಾಗಿ ಸರ್ವತಂತ್ರ ಸ್ವಾತಂತ್ರ್ಯದಿಂದ) **ವೀರ್ಯದಿಂದಲಿ** = ತನಗೆ ಅಭಿನ್ನವಾದ ಸಾಮರ್ಥ್ಯ ವಿಶೇಷದಿಂದ **ಕೊಡುತ** = ಜೀವರಿಗೆ ಅವರವರ ಯೋಗ್ಯತಾನುಸಾರ ಪುಣ್ಯ ಪಾಪ ಕರ್ಮರೂಪವಾದ ಫಲಗಳನ್ನು ಕೊಡುತ್ತಾ (ಫಲಪ್ರದನೆಂದರ್ಥ) **ಕೊಳುತಿಹನು** = ಅಂತಹ ಜೀವರಿಗೆ ತಾನೇ ಪ್ರೇರಿಸಿದವನಾಗಿ (ಪ್ರೇರಕ ರೂಪ), ತಾನೇ ಅವರ ದ್ವಾರಾ ಸೇವಾದಿಗಳನ್ನು ಸ್ವೀಕರಿಸುತ್ತಾನೆ. (ಪ್ರೇರ್ಯ-ಪ್ರೇರಕ ರೂಪಗಳ ವ್ಯಾಪಾರ) **ಅನಾರ್ಯರಿಗೆ** = ನೀಚರಾದ ಜನರಿಗೆ(ಅಯೋಗ್ಯರಿಗೆ) **ಈತನ ವಿಹಾರವು** = ಪರಮಾತ್ಮನ ಲೀಲಾವಿನೋದ ಗಳುಕ್ರೀಡಾವಿಲಾಸರೂಪವಾದ ಜಗತ್ಕಾರ್ಯಗಳು) **ಗೋಚರಿಪುದೇನೋ** = ತಿಳಿಯುತ್ತದೆಯೆ ? ಅಂದರೆ ಎಂದೆಂದಿಗೂ ತಿಳಿಯುವುದೇ ಇಲ್ಲವೆಂದು ತಾತ್ಪರ್ಯ. (ಅಥವಾ **ಆರ್ಯರಿಗೆ** ಎಂದು ಅರ್ಥಮಾಡಿದರೆ, ಜ್ಞಾನಿ ಗಳಾದ ಬ್ರಹ್ಮಾದಿ ದೇವತೆಗಳಿಗೂ ಅವನ ಮಹಿಮಾವಿಶೇಷಗಳು ಸಾಕಲ್ಯೇನ ತಿಳಿಯಲು ಅಸಾಧ್ಯ ಎಂದು ತಾತ್ಪರ್ಯ) ||೮||

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಶ್ರೀ ಪರಮಾತ್ಮ ತನ್ನ ಸ್ತ್ರೀಯರಾದ ಶ್ರೀ, ಭೂ, ದುರ್ಗಾದೇವಿಯರಿಂದ ಯುಕ್ತನಾಗಿ, ಸಮಸ್ತಜೀವರಿಗೆ ಸಕಲ ಪದಾರ್ಥಗಳ ಕೊಟ್ಟು, ಪುನಃ ಅವರಿಗೆ ಪ್ರೇರಿಸಿ, ಅವರಿಂದ ಅರ್ಪಿಸಿಕೊಂಡು, ಅವರವರ ಯೋಗ್ಯತಾನುಸಾರ ಫಲಗಳನ್ನು ಕೊಡತಾನೆ. ಇಂಥಾ ಪರಮಾತ್ಮನ ಅಚಿಂತ್ಯಾದ್ಭುತಶಕ್ತಿ ಯಾರಿಂದಲೂ ತಿಳಿಯುವುದು ಅಸಾಧ್ಯ ಎಂತ ತಾತ್ಪರ್ಯ.

**ವಿಶೇಷಾರ್ಥ :—**

ಸೂರ್ಯನ ವ್ಯಾಪಾರಕ್ಕೆ ಪ್ರಮಾಣ ;—

**"ಅಷ್ಟೌಮಾಸಾನ್ನಿಪೀತಂ ಯದ್ಭೂಮ್ಯಾಶ್ಚೋದಮಯಂ ವಸು । ಸ್ವಗೋಭಿರ್ಮೋಕ್ತುಮಾರೇಭೇ ಪರ್ಜನ್ಯಃ ಕಾಲ ಆಗತೇ ॥ (ಭಾ-೧೦-೨೦-೫)**- ಈ ರೀತಿ **ಭಾಗವತ ದಶಮಸ್ಕಂಧ**ದಲ್ಲಿ ಉಕ್ತವಾಗಿದೆ. ॥೯॥

## (೨) "ಭಾವಪ್ರಕಾಶಿಕೆ" –ವ್ಯಾಖ್ಯಾನ :—

ಶ್ರೀ ಪರಮಾತ್ಮನು ಶ್ರೀ ಭೂ ದುರ್ಗಾಖ್ಯ ಭಾರ್ಯರಿಂದ ಸಮೇತನಾಗಿ ಕಾರಣ ಕಾರ್ಯವಸ್ತುಗಳಲ್ಲಿ, ಅಂದರೆ, ಒಟ್ಟು ಪ್ರಪಂಚದ ಸೃಷ್ಟಿಗೆ ಕಾರಣವು ಜಡಪ್ರಕೃತಿ, ಕಾರ್ಯವು ಜಗತ್ತು. ಮನುಷ್ಯಾದಿ ಉತ್ಪತ್ತಿಗೆ ಶುಕ್ಲಶೋಣಿತಗಳು ಕಾರಣ; ಮನುಷ್ಯಾದಿಗಳು ಕಾರ್ಯ. ವೃಕ್ಷಾದಿಗಳ

ಉತ್ಪತ್ತಿಗೆ ಬೀಜ, ನೀರು, ಮಣ್ಣು ಮುಂತಾದವು ಕಾರಣ-ಕಾರ್ಯ ವೃಕ್ಷಾದಿಗಳು. ಹೀಗೆ ಒಂದೊಂದು ವಸ್ತುವಿನಲ್ಲಿಯೂ ಕಾರಣ ಕಾರ್ಯಗಳು ಬೇರೆಬೇರೆಯಾಗಿ ಏರ್ಪಡುವುವು. ಕಾರಣ ವಸ್ತುಗಳಲ್ಲಿ ಪ್ರೇರಕರೂಪ ದಿಂದಲೂ, ದಾರವನ್ನು ಅಡ್ಡ-ಉದ್ದವಾಗಿ (ಹಾಸುಹೊಕ್ಕಾಗಿ) ನೇಯುವು ದರಿಂದ ದಾಠಗಳೇ ವಸ್ತ್ರರೂಪವಾಗಿ ಹೇಗೆ ಕಾಣುವುವೋ ಹಾಗೆ ಪರಮಾತ್ಮನು ಕಾರ್ಯಕಾರಣವಸ್ತುಗಳಲ್ಲಿ ವ್ಯಾಪ್ತನಾಗಿ ಪ್ರಪಂಚದಿಂದ ಭಿನ್ನನಾಗಿ ಕಾಣು ವನು. ಸೂರ್ಯನು ತನ್ನ ರಶ್ಮಿಗಳಿಂದ ಸಮುದ್ರಾದಿಗಳಲ್ಲಿರುವ ಉದಕವನ್ನು ಗ್ರಹಣ ಮಾಡಿ, ಮೇಘಗಳಲ್ಲಿರಿಸಿ, ಅವುಗಳ ದ್ವಾರಾ ಮಳೆಗರೆದು, ಸಮುದ್ರಾದಿಗಳನ್ನು ತುಂಬುವಂತೆ, ಪರಮಾತ್ಮನು ತನ್ನ ಸಾಮರ್ಥ್ಯದಿಂದ ಭಕ್ತರ ಸೇವೆಯನ್ನು ಕೈಗೊಂಡು. ಅವರಿಗೆ ಅದರ ಫಲಗಳ್ನು ಕೊಡುತ್ತಿರು ವನು. ಸಾಮಾನ್ಯರಾದ ಜನರಿಗೆ ಇವನ ಮಹಿಮೆಯು ಗೋಚರವಾಗು ವುದೇ ಇಲ್ಲ. ಬ್ರಹ್ಮಾದಿ ದೇವತೆಗಳಿಗಾದರೂ ಇವನ ಮಹಿಮೆಯು ಸಾಕ ಲ್ಯೇನ ಗೋಚರವಾಗುವುದೇ ? ಇಲ್ಲ; ಯಥೋಚಿತವಾಗಿಯೇ ಕಾಣು ವುದು. ॥೯॥

## (೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :—

ಶ್ರೀವರನು ತನ್ನ ಸ್ತ್ರೀಯರ ಸಮೇತನಾಗಿ ಜೀವಸಮೂಹಕ್ಕೆ ಸಕಲ ಪದಾರ್ಥಗಳು ಕೊಟ್ಟು, ಪುನಃ ಅವರಿಂದ ಪೂಜಾ ತೆಗೆದುಕೊಳ್ಳುತ್ತಾನೆಂದು ಶ್ರೀಶನ ಔದಾರ್ಯಗುಣ ವಿವರಿಸುತ್ತಾರೆ– "ಭಾರ್ಯರಿಂದ"- ಎಂಬ ಪದ್ಯ ದಿಂದ.

ಕಾರಣಕಾರ್ಯ = ಘಟರೂಪಕಾರ್ಯಕ್ಕೆ ಮೃತ್ತಿಕಾ ಕಾರಣವೆಂದನಿಸಿ ಕೊಳ್ಳುತ್ತದೆ. ಈ ಪ್ರಕಾರ ಕಾರಣ ಕಾರ್ಯವಸ್ತುಗಳಲ್ಲಿ ಎಂತ ಅರ್ಥ. ಪ್ರೇರಕಪ್ರೇರ್ಯ = ಪ್ರೇರಕರು ಬ್ರಹ್ಮಾದಿ ದೇವತೆಗಳು. ಪ್ರೇರ್ಯರು– ಜೀವರು. ಅನಾರ್ಯರು = ಅಜ್ಞಾನಿಗಳು. ಭಾರ್ಯರಿಂದೊಡಗೂಡಿ = ಶ್ರೀ ಭೂ ದುರ್ಗಾ ಸಮೇತ ಎಂದರ್ಥ. "ಸೂರ್ಯ" ಎಂಬ ಪದದಿಂದ– ಕೊಡೋದು ಕೊಂಬೋದು ಎಂಬ ವಿಷಯದಲ್ಲಿ ಪ್ರಮಾಣ :— "ಅಷ್ಟಾ

ವಾಸಾನ್ನಿಹಿತಂ..............................ಆಗತೇ" ॥ (ಈ ಪ್ರಮಾಣದ ಪೂರ್ಣವಾಕ್ಯರೂಪವು ಹಿಂದಿನ ವ್ಯಾಖ್ಯಾನಗಳಲ್ಲಿ ಬಂದಿದೆ) ಪ್ರೇರಕ = ಒಂದು ಅಧಿಷ್ಠಾನದಲ್ಲಿದ್ದು ಪ್ರೇರಿಸೋಣ. ಪ್ರೇರ್ಯ = ಇನ್ನೊಂದು ಅಧಿಷ್ಠಾನದಲ್ಲಿದ್ದು ಆ ಮಾತು ಕೇಳೋಣ. ಏತಾದೃಶರೂಪಗಳಿಂದ -ಎಂದರ್ಥ. ಪಟ = ವಸ್ತ್ರ. ತಂತು = ಎಳೆಗಳು. ಪೋಲ್ = ಅದರೋಪಾದಿಯಲ್ಲಿ. ಇಂಥಾ ಪರಮಾತ್ಮನವಿಹಾರ (ಕ್ರೀಡಾ) ಆರ್ಯರಿಗೆ = ಜ್ಞಾನಿಗಳಿಗೆ ಗೋಚರಿಪುದೇ = ವಿಷಯವಾದೀತೇ ? ಅಂದರೆ, ಎಂದಿಗೂ ಆಗದೆಂದರ್ಥ ॥೯॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ— (ಸಂಸ್ಕೃತಮೂಲ)

ಶ್ರೀನಾರಾಯಣಸ್ಯ ಭಾರ್ಯೇತಿ॥ ಕಾರಣಂ– ಪ್ರಕೃತ್ಯಾದಿ, ಕಾರ್ಯಂ-ಮಹದಾದಿಃ । ಪಟಃ ತಸ್ಮಿನ್ ತಂತವಃ ಇವ । ಸೂರ್ಯಾತ್ ಪ್ರಭವಂತಿ ಗಾವಃ ತಸ್ಯ ಅಂತಾಃ ಪುನಃ ಪ್ರವಿಶಂತಿ ಸಾಯಂ ತಂ ಸೂರ್ಯಮ್ ॥ ಕೊಡುತ ॥ ಪ್ರೇರ್ಯಾಂತತಃ । ಭೋಗ್ಯಂ ಕೊಳುತ । ಗೃಹ್ಣಾತೀ ಪ್ರೇರ್ಯಾಣಾಂ ಪ್ರೇರಕೇ । ಕಾರ್ಯಾಣಾಂ ಕಾರಣೇ ಲಯಃ ॥ ಅನಾರ್ಯ:-ಗುರೂಪಸತ್ತ್ಯಾದಿಷಿಕಲಃ ॥ ಅನಾರ್ಯಕಾಯೇತಿ ವೈದಿಕಪದ ಪ್ರಯೋಗೇಣ ವೈದಿಕತ್ವಂ ಆತ್ಮಕೃತೇಃ ಅಭಿಪ್ರೈತಿ ॥೯॥

**ಕನ್ನಡಾನುವಾದ :—**

"ಕಾರಣ ವಸ್ತುಗಳು" ಎಂದರೆ ಮೂಲ ಪ್ರಕೃತಿ. "ಕಾರ್ಯವಸ್ತುಗಳು" ಎಂದರೆ ಅದರಿಂದ ಉತ್ಪನ್ನವಾದ ಮಹತ್ತತ್ವ ಮುಂತಾದವು. ವಸ್ತ್ರಗಳಲ್ಲಿ ಎಳೆಗಳು ಓತಪ್ರೋತವಾಗಿರುವುವು. ಅಂತೆಯೇ ಹರಿಯ ವ್ಯಾಪ್ತಿಯೂ ಓತಪ್ರೋತವಾಗಿದೆ ಎಂದು "ಪಟ"ದ ದೃಷ್ಟಾಂತದಿಂದ ವಿವರಿಸುತ್ತಾರೆ. ಬೆಳಗಿನಹೊತ್ತು ಕಿರಣಗಳು ಸೂರ್ಯನಿಂದ ಹೊರಗೆ ಪ್ರಸಾರವಾಗುವುವು. ಪುನಃ ಸಂಜೆಯಕಾದಲ್ಲಿ ಸೂರ್ಯನಲ್ಲಿಯೇ ಸೇರುವುವು. ಹಗಲುಹೊತ್ತಿನಲ್ಲಿ ಸೂರ್ಯನು ತನ್ನ ಕಿರಣಗಳದ್ವಾರಾ ಬೆಳಕನ್ನು ಪ್ರಸಾರಮಾಡಿ, ಸಂಜೆಯಾಗು

ತ್ತಲೂ ಅದೇ ಕಿರಣಗಳ ಮೂಲಕ ಬೆಳಕನ್ನು ಹಿಂದೆಗೆದುಕೊಳ್ಳುವನು. ಅಂತೆಯೇ ಭಗವಂತನು ತನ್ನಿಂದ ಪ್ರೇರಿತರಾದ "ಪ್ರೇರ್ಯ"ದಲ್ಲಿದ್ದುಕೊಂಡು ಭೋಗ್ಯವಸ್ತುಪ್ರದನಾಗವನು. ಪ್ರೇರಕರಲ್ಲಿ ಅಂತಸ್ಥನಾಗಿದ್ದು (ತಾನೇ ಪ್ರೇರಕನಾದ್ದರಿಂದ) ಅವುಗಳನ್ನು ಸ್ವಯಂ ಸ್ವೀಕರಿಸುವನು. ಕಾರಣಗಳು ಕಾರ್ಯಕ್ಕೆ ಮೂಲವಾದ್ದರಿಂದ, ಕಾರಣಗಳಲ್ಲಿ ಕಾರ್ಯಗಳು ಲಯ ಹೊಂದುವುವು, ಅಂತೆಯೇ ಕಾರಣಗತ ಹರಿಯ ಭಗವದ್ರೂಪಗಳಲ್ಲಿ ಕಾರ್ಯಗತ ಭಗವದ್ರೂಪಗಳು ಏಕೀಭಾವವನ್ನು ಹೊಂದುವುವು. ಇದರ ವಿವರಣೆಯೇ "ಕಾರಣ ಕಾರ್ಯಗಳಲ್ಲಿ" ಎಂಬುದರಲ್ಲಿರುವುದು ಅನಾರ್ಯರು-ಗುರೂಪಸತ್ತಿ (ಗುರುಸೇವೆ) ಮುಂತಾದ ಸದ್ಗುಣರಹಿತರು. "ಅನಾರ್ಯ" ಎಂಬುದು ವೈದಿಕಪದ (ವೇದಗಳಂತೆ) ಎಂಬ ಅಭಿಪ್ರಾಯದ ಸೂಚನೆ ॥೯॥

## (ಆ) "ಗುರುಹೃದಯಪ್ರಕಾಶಿಕೆ" — ವ್ಯಾಖ್ಯಾನ :—

ಶ್ರೀ ಭೂ ದುರ್ಗಾ ಎಂಬ ತನ್ನ ಪತ್ನಿಯರಿಂದ ಸಹ, ಕಾರಣ ಕಾರ್ಯ ವಸ್ತುಗಳಲ್ಲಿ ಎಂದರೆ, ಗಡಿಗೆಗೆ ಮಣ್ಣು ಪರಿಣಾಮಕಾರಣವಾದಂತೆ, ತ್ರಿಗುಣಜಾತ ಮಹದಾದಿತತ್ತ್ವಗಳೆಂಬ ಕಾರಣದಲ್ಲಿಯೂ, ತತ್ಕಾರ್ಯವಾದ ದೇಹಾದಿಗಳಲ್ಲಿಯೂ, ಪುತ್ರದೇಹಕ್ಕೆ ಪಿತೃಜೀವನಂತೆ ನಿಮಿತ್ತವಾಗಿ, ಪೃಥಕ್ಕಾರಣರಾದ ಜೀವರಲ್ಲಿ ಪ್ರೇರಕ ಪ್ರೇರ್ಯರೂಪಗಳಿಂದ ಎಂದರೆ ಜಡಗತ ಪರಿಣಾಮಶಕ್ತಿ, ಜೀವಗತ ಬೋಧಕ ಬೋಧ್ಯಶಕ್ತಿ ವ್ಯಕ್ತಿ ಮಾಡುವ ಅಂತರ್ಯಾಮಿರೂಪಗಳಿಂದ ಪಟತಂತುಗಳವೋಲು, ಎಂದರೆ ನೂಲುಗಳು ಬಟ್ಟೆಯಾಗಿ ಏಕಾಕಾರವಿರುವಂತೆ ಅಭಿನ್ನನಾಗಿದ್ದು, ಸೂರ್ಯ ಕಿರಣಗಳು ಮಳೆಗಾಲದಲ್ಲಿ ಮೇಘದ್ವಾರಾ ಮಳೆ ಕೊಟ್ಟು, ಬೇಸಿಗೆಯಲ್ಲಿ ಭೂಮಿಗೆ ಕೊಟ್ಟಿದ್ದ ಉದಕಗಳನ್ನು ಆ ಕಿರಣಗಳೇ ಹೀರುವಂತೆ ಶಾಸ್ತ್ರಾನಭಿಜ್ಞ ಅನಾರ್ಯರೆಂಬ ಮೂಢರಿಗೆ ತಿಳಿಯದಹಾಗೆ, ತಾನೇ ಕೊಡುವ ಕೊಳುವ ಮೊದಲಾದ ಕ್ರಿಯೆಗಳನ್ನು ನಡೆಸುವನು. ಆದ್ದರಿಂದ ವ್ಯಾಪ್ತನು. ॥೯॥

**ಸರ್ವವ್ಯಾಖ್ಯಾನಸಾರಸಂಗ್ರಹ: —**

ಜಗದ್ವ್ಯಾಪ್ತವಾದ ವಸ್ತುಗಳು ಎರಡು ಪ್ರಕಾರ :— (೧) ಕಾರಣ ವಸ್ತುಗಳು ಮತ್ತು (೨) ಕಾರ್ಯವಸ್ತುಗಳು, ಈ ಜಗತ್ತಿನಲ್ಲಿ ನಡೆಯುತ್ತಿರುವ ಸಮಸ್ತ ವ್ಯಾಪಾರ ವಿಶೇಷಗಳನ್ನೂ ಮೂರು ಹಂತಗಳಲ್ಲಿ ವಿಶ್ಲೇಷಿಸಬಹುದು. ಕಾರಣ-ಕಾರ್ಯ–ಫಲ ಎಂದು. ಒಂದು "ಕಾರ್ಯ" (ಕ್ರಿಯೆ) ನಡೆಯಬೇಕಾದರೆ ಅದಕ್ಕೆ ಹಿನ್ನೆಲೆಯಾದ "ಕಾರಣ"ವಿದ್ದೇ ಇರುವುದು. ಉದಾಹರಣೆಗಾಗಿ, ಒಂದು ಘಟದ ನಿರ್ಮಾಣವಾಗಬೇಕಾದರೆ, ಮೂಲ ದ್ರವ್ಯ ಮಣ್ಣು. ಈ ಮಣ್ಣಿಗೆ "ಕಾರಣ" ವಸ್ತು ಎಂದು ಹೆಸರು. ಘಟವು ಮಣ್ಣು ಪರಿಣಾಮ ಹೊಂದಿದ "ಕಾರ್ಯ" ವಸ್ತುವು. ಅಂತೆಯೇ ಜಗತ್ತಿನ ಸೃಷ್ಟಿಗೆ ಕಾರಣವು ಜಡಪ್ರಕೃತಿ. ಕಾರ್ಯವು ಜಗತ್ತು. ಕುಂಬಾರನು ಗಡಿಗೆಯನ್ನು ನಿರ್ಮಾಣ ಮಾಡುವಾಗ, ಮಣ್ಣು ಉಪಾದಾನಕಾರಣವೆನಿಸುವುದು. ಕುಲಾಲಚಕ್ರ, ಕೋಲು ಮುಂತಾದವು ಸಹಕಾರಿ ಸಾಮಗ್ರಿಗಳು. ಕುಂಬಾರನು ನಿಮಿತ್ತಕಾರಣನು. ಹಾಗೆಯೇ ಜಗತ್ಸೃಷ್ಟ್ಯಾದಿ ವ್ಯಾಪಾರಗಳಿಗೆ ಮುಖ್ಯ ಕಾರಣನು ಸೃಷ್ಟಿಕರ್ತನಾದ ಶ್ರೀ ಪರಮಾತ್ಮನೇ, ಕಾರ್ಯವಸ್ತುವಾದ ಜಗತ್ತಿನ ನಿರ್ಮಾಣಕ್ಕೆ ಜಡಪ್ರಕೃತಿಯೇ ಮೂಲಕಾರಣವು. ಈ ಪ್ರಕೃತಿಗೆ ಶ್ರೀ ಲಕ್ಷ್ಮೀದೇವಿಯರೇ ಅಭಿಮಾನಿಗಳು. ಮೂಲಪ್ರಕೃತಿಯು ರಮಾಭಿಮನ್ಯವಾಗಿದ್ದು. ತ್ರಿಗುಣಾತ್ಮಕವಾಗಿದೆ (ಪ್ರಾಕೃತಗುಣಗಳು) ಸತ್ವ, ರಜಸ್ತಮೋಗುಣಗಳೆಂಬ ಈ ಗುಣತ್ರಯಗಳಿಗೆ ಶ್ರೀ ಲಕ್ಷ್ಮೀದೇವಿಯು ಕ್ರಮವಾಗಿ ಶ್ರೀ, ಭೂ ಮತ್ತು ದುರ್ಗಾ ಎಂಬ ರೂಪತ್ರಯಗಳಿಂದ ಅಭಿಮಾನಿಗಳಾಗಿದ್ದಾರೆ, ಜಗತ್ಸೃಷ್ಟಿಗೆ ಮುಖ್ಯ (ನಿಮಿತ್ತ) ಕಾರಣವಾದ ಶ್ರೀ ಪರಮಾತ್ಮನು ಶ್ರೀ ಭೂ ದುರ್ಗಾನಾಮಕಳಾದ ನಿತ್ಯಾವಿಯೋಗಿನಿಯಾದ ಇಂದಿರೆಯೊಡಗೂಡಿ, ಜಗದ್ವ್ಯಾಪಾರಗಳನ್ನು ನಡೆಸುವನು. ಪತ್ನೀಸಮೇತನಾಗಿ (ಭಾರ್ಯರಿಂದೊಡಗೂಡಿ) ಕಾರಣವಸ್ತುವಾದ ಜಡಪ್ರಕೃತ್ಯಾದಿ ವಸ್ತುಗಳಲ್ಲಿ ಅಂತರ್ಯಾಮಿರೂಪದಿಂದ ಇದ್ದು, ತ್ರಿಗುಣಗಳಿಗೆ ಪ್ರೇರಕರೂಪದಿಂದ ನಿಯಾಮಕನಾಗಿದ್ದಾನೆ. ತನ್ನಿಂದ ನಿರ್ಮಿತವಾದ

ಜಗತ್ತಿನಲ್ಲಿ ಎಲ್ಲೆಲ್ಲಿಯೂ ವ್ಯಾಪ್ತವಾಗಿದ್ದು, ಕಾರ್ಯವಸ್ತುವಾದ ಜಗತ್ತಿಗ ಪ್ರೇರ್ಯರೂಪಗಳಿಂದ ನಿಯಾಮಕನಾಗಿದ್ದಾನೆ. ಒಂದು ಅಧಿಷ್ಠಾನದಲ್ಲಿ ನಿಂತು ಪ್ರೇರಿಸುವುದಕ್ಕೆ "ಪ್ರೇರಕರೂಪ"ವೆಂತಲೂ, ಮತ್ತೊಂದು ಅಧಿಷ್ಠಾನ ದಲ್ಲಿ ನಿಂತು ಸೇವಾದಿಗಳನ್ನು ಸ್ವೀಕರಿಸುವುದಕ್ಕೆ "ಪ್ರೇರ್ಯ"ರೂಪವೆಂತಲೂ ಹೆಸರು. ಇವೆರಡೂ ಅವನ ಅಭಿನ್ನರೂಪಗಳೇ. ಆದರೆ ಅಧಿಷ್ಠಾನಗಳು ಮಾತ್ರ ಬೇರೆ ಬೇರೆ. ಅಂದರೆ, ಕಾರಣ ವಸ್ತುಗಳಲ್ಲಿ ಪ್ರೇರಕರೂಪದಿಂದಲೂ ಮತ್ತು ಕಾರ್ಯವಸ್ತುಗಳಲ್ಲಿ ಪ್ರೇರ್ಯರೂಪದಿಂದಲೂ ಇದ್ದು, ಆಯಾಯಾ ಅಧಿಷ್ಠಾನಗತ ಸ್ವಭಾವಗಳನ್ನು ಅಭಿವ್ಯಕ್ತಗೊಳಿಸುವನು. ಹೀಗೆ ಗುಣ ವೈಷಮ್ಯದಿಂದ ಸೃಷ್ಟಿ ಮತ್ತು ಗುಣಸಾಮ್ಯದಿಂದ ಲಯ ಇವುಗಳ ನಿಯ ಮನ ಶ್ರೀ ಪರಮಾತ್ಮನ ವ್ಯಾಪಾರವಿಶೇಷವು. ಇದನ್ನು ಎರಡು ಸುಂದರ ವಾದ ಉಪಮಾನಗಳಿಂದ ದಾಸರಾಯರು ಮನಮುಟ್ಟುವಂತೆ ವಿವರಿಸು ತ್ತಾರೆ. ಪ್ರಥಮ ದೃಷ್ಟಾಂತ ಬಟ್ಟೆ ಮತ್ತು ನೂಲುಗಳು (ತಂತುಪಟ), ನೂಲುಗಳನ್ನು ಅಡ್ಡ ಉದ್ದವಾಗಿ ನೇಯಿದಾಗ ಬಟ್ಟೆ ಉಂಟಾಗುವುದು. ನೂಲು ಕಾರಣವಸ್ತು. ಬಟ್ಟೆ ಕಾರ್ಯವಸ್ತು, ಬಟ್ಟೆಯಲ್ಲಿ ನೂಲುಗಳು ಓತಪ್ರೋತವಾಗಿ ಸೇರಿರುವಂತೆ, ಕಾರ್ಯವಸ್ತುವಾದ ಈ ಜಗತ್ತಿನಲ್ಲಿ ಶ್ರೀ ಪರಮಾತ್ಮನು ಓತಪ್ರೋತನಾಗಿ ಸರ್ವತ್ರವ್ಯಾಪ್ತನಾಗಿರುವನು. ಇಂತಹ ವ್ಯಾಪ್ತರೂಪದಿಂದಲೇ ಜಗದಭಿವ್ಯಕ್ತಿ ಮತ್ತೆ ಅದರ ಕ್ರಿಯಾವಿಶೇಷಗಳು ನಡೆಯುವುವು. ನೂಲಿನಿಂದ ಬಟ್ಟೆಯಾದಂತೆ, ಜಡಪ್ರಕೃತಿಯು ಪರಿಣಾ ಹೊಂದಿ (ತ್ರಿಗುಣಗಳ ಮಿಲನದಿಂದ) ಜಗತ್ತು ಸೃಷ್ಟಿಯಾಗುವುದು. ಆದರೆ ಪರಿಣಾಮವಾದಿಗಳು ಹೇಳುವಂತೆ ಭಗವಂತನೇ ಜಗತ್ತಾಗಿ ಪರಿಣಮಿಸುವು ದಿಲ್ಲ. ಜಡಪ್ರಕೃತಿಯಿಂದಲೂ ಮತ್ತು ಜಗತ್ತಿನಿಂದಲೂ ಪರಮವಿಲಕ್ಷಣ ನಾಗಿದ್ದಾನೆ. ಇನ್ನೊಂದು ಹೃದಯಂಗಮವಾದ ದೃಷ್ಟಾಂತವೆಂದರೆ, ಸೂರ್ಯನದು. ಸೂರ್ಯನು ತನ್ನ ತಪ್ತಕಿರಣಗಳದ್ವಾರಾ ಸಮುದ್ರದ ಉದಕವನ್ನು ಪಾನಮಾಡಿ (ಆವಿಯಾಗುವಂತೆ ಮಾಡಿ), ಪುನಃ ಅದೇ ಉದಕ ವನ್ನು ಮೇಘಗಳದ್ವಾರ ಭೂಮಿಗೇ ಸುರಿಸುವನು. ಸೂರ್ಯನ ಕ್ರಾಂತಿ ಪ್ರಸಾರ ದೃಷ್ಟಿಯಿಂದ ವಿವರಿಸುವುದಾದರೆ, ಸೂರ್ಯನು ಹಗಲಿನಲ್ಲಿ ತನ್ನ

ಕಿರಣಗಳ ದ್ವಾರಾ ತನ್ನ ಕಾಂತಿರೂಪವಾದ ಪ್ರಕಾಶವನ್ನು ಪ್ರಸಾರ ಮಾಡುವನು. ಸಂಜೆಯುವೇಳೆಗೆ ಆ ಪ್ರಕಾಶವನ್ನು ಅದೇ ಕಿರಣಗಳ ದ್ವಾರಾ ಹಿಂದೆ ತೆಗೆದುಕೊಳ್ಳುವನು. ಅಂತೆಯೇ, ಪರಾಪೇಕ್ಷಾರಹಿತನಾದ ಜಗತ್ಪ್ರಭುವು ಸರ್ವತಂತ್ರಸ್ವತಂತ್ರನು. ಸ್ವಯಂ ಜಗತ್ತಿನ ಸರ್ವವ್ಯಾಪಾರಗಳಿಗೂ ನಿರ್ವಾಹಕನಾಗಿರುವನು. ಸ್ವಸಾಮರ್ಥ್ಯದಿಂದಲೇ ಪ್ರೇರಕರೂಪದಿಂದಿದ್ದು ಕೊಳುವ ಕಾರ್ಯ ಅಂದರೆ ಸ್ವೀಕರಿಸುವುದು. ಈ ಸಮಸ್ತಕ್ರಿಯಾವಿಶೇಷಗಳನ್ನು ಸ್ವಯಂ ಮಾಡುತ್ತಿರುವನು. ಅಜ್ಞಾನಿಗಳಾದ ಮೂಢಜನರು (ಅನಾರ್ಯರಿಗೆ) ಈತನ ಮಹಿಮಾ ವಿಶೇಷವನ್ನು ಎಂದೆಂದಿಗೂ ಅರಿಯಲು ಸಾಧ್ಯವಿಲ್ಲ. ಜ್ಞಾನಿಗಳಾದ (ಆರ್ಯ) ಬ್ರಹ್ಮಾದಿಗಳಿಗೂ ಸಹ ಸಾಕಲ್ಯೇನ ಅರಿಯಲಸಾಧ್ಯ. ||೯||

## ಪದ್ಯ (೧೦)

**ಮೂಲ :—**

**ಜನಕ ತನ್ನಾತ್ಮಜಗೆ ವರ ಭೂ |**
**ಷಣದುಕೂಲವ ತೊಡಿಸಿ ತಾ ವಂ |**
**ದನೆಯು ಕೈಗೊಳುತವನ ಹರಸುತ ಹರುಷಬಡುವಂತೆ ||**
**ವನರುಹೇಕ್ಷಣ ಪೂಜ್ಯ ಪೂಜಕ |**
**ನೆನಿಸಿ ಪೂಜಾಸಾಧನ ಪದಾ |**
**ರ್ಥನು ತನಗೆ ತಾನಾಗಿ ಫಲಗಳನೀವ ಭಜಕರಿಗೆ|| ||೧೦||**

**ಅವತರಣಿಕೆ :—**

ಜಗತ್ತಿನಲ್ಲಿ ತಂದೆಯಾದವನು ತನ್ನ ಮಗನಿಗೆ ಶ್ರೇಷ್ಠವಾದ ಉಡಿಗೆ ತೊಡುಗೆಗಳಿಂದ ಅಲಂಕರಿಸುವನು. ಆ ಮಗನು ತಂದೆಗೆ ನಮ

ಸ್ಕಾರ ಮಾಡಿದಾಗ, ಅವನ ನಮನಾದಿಗಳನ್ನು ಸಂತೋಷದಿಂದ ಸ್ವೀಕರಿಸಿ, ಅವನನ್ನು ಆಶೀರ್ವದಿಸಿ, ಸಂತೋಷಪಡುವನು. ಅಂತೆಯೇ ಜಗತ್ಪಿತೃವಾದ ಶ್ರೀಪರಮಾತ್ಮನು ಪೂಜೆಗೊಳ್ಳುವವರಲ್ಲಿ ಪೂಜ್ಯನಾಮಕನಾಗಿ, ಪೂಜಿಸುವವರಲ್ಲಿ ಪೂಜಕರೂಪದಿಂದಿದ್ದು ಪೂಜಾಸಾಧನ ದ್ರವ್ಯಗಳಲ್ಲಿ ಅಂತರ್ಗತನಾಗಿದ್ದು, ಸೇವಾದಿಗಳನ್ನು ಸ್ವೀಕರಿಸಿ ನಿಜಭಕ್ತವೃಂದಕ್ಕೆ ಅವರವರಯೋಗ್ಯತಾನುಸಾರ ಫಲಗಳನ್ನು ಕೊಡುತ್ತಾನೆ. ಎಂದು ಹೇಳುತ್ತಾರೆ— "ಜನಕ"- ಎಂಬ ಈ ಪದ್ಯದಿಂದ ॥೧೦॥

**ಪ್ರತಿಪದಾರ್ಥ :—**

**ಜನಕ** = ತಂದೆಯು **ತನ್ನಾತ್ಮಜಗೆ** = ತನ್ನ ಮಗನಿಗೆ **ವರ** = ಉತ್ತಮವಾದ (ಶ್ರೇಷ್ಠವಾದ) **ಭೂಷಣ** = ದಿವ್ಯಾಭರಣಗಳನ್ನು (ಒಡವೆ) **ದುಕೂಲವ** = ದಿವ್ಯ ವಸ್ತ್ರಗಳನ್ನು **ತೊಡಿಸಿ** = ಅವುಗಳಿಂದ ಅಲಂಕಾರ ಮಾಡಿದವನಾಗಿ **ತಾ** = ತಾನು (ಆ ತಂದೆಯು) **ವಂದನೆಯ** = ನಮಸ್ಕಾರವನ್ನು **ಕೈಗೊಳುತ** = ಸ್ವೀಕರಿಸುತ್ತ **ಅವನ** = ಅವನನ್ನು (ಮಗನನ್ನು) **ಹರಸುತ** = ಆಶೀರ್ವಾದಮಾಡುತ್ತಾ **ಹರುಷ ಬಡುವಂತೆ** = ಸಂತೋಷಪಡುವ ರೀತಿಯಲ್ಲಿ **ವನರುಹೇಕ್ಷಣ** = ಕಮಲಾಯತನೇತ್ರನಾದ ಶ್ರೀ ಪರಮಾತ್ಮನು **ಪೂಜ್ಯ** = ಜಡ ಪ್ರತಿಮಾಂತರ್ಗತನಾಗಿ ಪೂಜಿಸಲ್ಪಡುವವನು ಎಂತಲೂ (ಪೂಜೆಗೊಂಬವರಲ್ಲಿ ಅಂತರ್ಯಾಮಿ ರೂಪತ್ವೇನ ಪೂಜ್ಯನೆಂತಲೂ) **ಪೂಜಕ** = ಪೂಜಾಮಾಡುವವರಲ್ಲಿ ನಿಯಾಮಕನಾಗಿದ್ದು ಪೂಜಕನೆಂತಲೂ **ಎನಿಸಿ** = ಹೀಗೆ ಪೂಜ್ಯ ಪೂಜಕನೆಂಬ ತನ್ನಾಮವಾಚಕನಾಗಿದ್ದು **ಪೂಜಾಸಾಧನ ಪದಾರ್ಥನು** = ಪೂಜಾಕಾರ್ಯಕ್ಕೆ ಸಾಧನವಾದ (ಅಂಗಭೂತವಾದ) ಗಂಧ, ಪುಷ್ಪಾದಿ ಸಾಧನದ್ರವ್ಯಗಳಲ್ಲಿ **ತನಗೆ ತಾನಾಗಿ** = ಸ್ವಯಂ ಇದ್ದು ತದಾಕಾರನಾಗಿ **ಭಜಕರಿಗೆ** = ತನ್ನ ಮಹಿಮೆ ತಿಳಿದ ಭಗವದ್ಭಕ್ತವರ್ಗಕ್ಕೆ **ಫಲಗಳನೀವ** = ಅವರವರ ಯೋಗ್ಯತಾನುಸಾರ ಕರ್ಮಸಂಬಂಧವಾದ ಫಲಗಳನ್ನು ಕೊಡುವನು. ॥೧೦॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಲೋಕದಲ್ಲಿ ತಂದೆಯಾದವ, ತನ್ನ ಪುತ್ರನಲ್ಲಿರುವ ಅಂತಃಕರಣ ದಿಂದ ತಾನು ಸಂಪಾದಿಸಿದ ವಸ್ತ್ರಾಭರಣಗಳನ್ನು ಪುತ್ರಗೆ ಅಲಂಕರಮಾಡಿ, ಸಂತೋಷದಿಂದ— "ಅಪ್ಪಾ ! ನಮಸ್ಕಾರಮಾಡು. ಆಶೀರ್ವಾದ ಮಾಡುತ್ತೇನೆ" —ಎಂದು ತನ್ನ ಪುತ್ರನಿಂದ ನಮಸ್ಕೃತನಾಗಿ ಹೇಗೆ ಆಶೀರ್ವಾದ ಮಾಡುವನೋ, ಅದೇ ಪ್ರಕಾರ ಸರ್ವಾಂತರ್ಯಾಮಿಯಾಗಿರುವ ಪರಮಾತ್ಮನು ತನ್ನಿಂದ ಸೃಷ್ಟಿಮಾಡಲ್ಪಟ್ಟ ಸರ್ವ ವಸ್ತುಗಳಲ್ಲಿ ತಾನು ಇದ್ದು ಪೂಜ್ಯನೆಂತಲೂ, ಪೂಜಾ ಮಾಡೋವವರಲ್ಲಿ ಪೂಜಕ ಎಂತಲೂ ಕರೆಯಿಸಿ ಕೊಂಡು, ಪೂಜಾಸಾಧನ ಪದಾರ್ಥಗಳಲ್ಲಿ ತಾನು ಅಂತರ್ಗತನಾಗಿ ಇದ್ದರೂ ಪದಾರ್ಥಗಳಿಂದ ತಾನು ಪೂಜಾ ಮಾಡಿಸಿಕೊಂಡು, ತನ್ನ ಭಕ್ತರಾದ ಜ್ಞಾನಿ ಗಳಿಗೆ ಆವರವರ ಯೋಗ್ಯತಾನುಸಾರ ಸುಖಗಳನ್ನು ಕೊಡುವನು. ಇದರ ಒಟ್ಟು ತಾತ್ಪರ್ಯವೇನೆಂದರೆ, ತಂದೆ ಸದೃಶ ಶ್ರೀಹರಿಯು ಪುತ್ರಸದೃಶ ರಾದ ಭಕ್ತರನ್ನು ಉದ್ಧಾರ ಮಾಡಬೇಕೆಂಬುದಾಗಿ ಭಕ್ತರಿಗೆ ಪೂಜೋಪ ಯೋಗ್ಯ ಪದಾರ್ಥಗಳನ್ನು ಕೊಟ್ಟು ಅವರಿಂದ ಪೂಜಿತನಾಗಿ ನಮಸ್ಕರಿಸಿ ಕೊಂಡು, ಅವರನ್ನು ಸುಖವಂತರನ್ನಾಗಿ ಮಾಡುತ್ತಾನೆ. ಆದಕಡಿಯಿಂದ ಶ್ರೀ ಪರಮಾತ್ಮ ಭಕ್ತರ ಉದ್ಧಾರಾರ್ಥವಾಗಿ ಈ ಪ್ರಕಾರ ವರ್ತಿಸುತ್ತಾನೆ ಎಂತ ತಾತ್ಪರ್ಯ.

**ವಿಶೇಷಾರ್ಥ :—**

**"ಸ್ವನಂದನಂ ಯಥಾ ಪಿತ್ರಾ ಕಾರಿತಂ ಶಿಶುಕರ್ತೃಕಂ । ಏವಂ ಪೂಜಾ ವಿಷ್ಣ್ವಧೀನಾ ಭವೇಜ್ಜೀವಕೃತೇತ್ಯಪಿ॥"** —ಎಂಬ ಗೀತಾ

ಭಾಷ್ಯೋಕ್ತಿಯನ್ನೇ ದಾಸರಾಯರು ಮೇಲಿನ ನುಡಿಯಲ್ಲಿ ಪ್ರಯೋಗ ಮಾಡಿರುವರು. "ಪೂಜ್ಯ" ಎಂಬುದಕ್ಕೆ ಪ್ರಮಾಣ :

**"ನಿಷುಸೀದ ಗಣಪತೇ ಗಣೇಷು ತ್ವಾಮಾಹುರ್ವಿಪ್ರತಮಂ ಕವೀನಾಂ । ನ ಋತೇ ತ್ವತ್ಕ್ರಿಯತೇ ಕಿಂಚನಾರೇ ಮಹಾಮರ್ಕಂ ಮಘವನ್ ಚಿತ್ರಮರ್ಚ ।"—**

ಇದರ ಅರ್ಥವೇನೆಂದರೆ :- "ನಮ್ಮ ಇಂದ್ರಿಯಸಮೂಹದಲ್ಲಿ ನಿನ್ನನ್ನು ಪ್ರಕೃಷ್ಟತಮನೆಂದು ಹೇಳತಾರೆ. ನಿನ್ನ ಹೊರತು ಒಬ್ಬರಿಂದಲೂ, ಸಮೀಪ ದಲ್ಲಾಗಲೀ, ದೂರದಲ್ಲಾಗಲೀ ಒಂದು ಕಾರ್ಯವೂ ಮಾಡಲ್ಪಡೋದಿಲ್ಲ, ಅದಕ್ಕೆ ಮಹ = ಮಹತ್ವಾದಂಥಾ ಅರ್ಕ = ಪರಮಾನಂದರೂಪನಾದಂಥಾ, ಯಜ್ಞಾಧಿಪನಾದಂಥಾ, ಆಶ್ಚರ್ಯರೂಪನಾದಂಥಾ ಸ್ವಾಮಿಯೇ, ನಿನ್ನನ್ನು ನೀನೇ ಪೂಜಿಸು. ನನಗೇನೂ ಶಕ್ತಿ ಇಲ್ಲ. ಈ ಪ್ರಕಾರ ಲಕ್ಷ್ಮೀಸ್ವರೂಪ ಳಾದಂಥಾ ದುರ್ಗಾದೇವೇರು ಶ್ರುತಿಗೀತಾದಲ್ಲಿ ಶ್ರೀ ಪುರುಷೋತ್ತಮನನ್ನು ಪ್ರಾರ್ಥಿಸಿದ್ದಾರೆ.

**"ಪೂಜ್ಯ—ಪೂಜಕ"** — ಈ ವಿಷಯದಲ್ಲಿ ಭೃಗುಋಷಿಗಳ ಅಂಶರಾದ ಶ್ರೀ ಜಗನ್ನಾಥದಾಸರ ಪರಮ ಗುರುಗಳಾದ ಶ್ರೀ ವಿಜಯದಾಸರು ತಮ್ಮಿಂದ ವಿರಚಿತ **"ಪರಿಪೂರ್ಣಸುಳಾದಿ"**ಯ ಐದನೆಯ ನುಡಿಯಲ್ಲಿ ಹೀಗೆ ಹೇಳಿ ದ್ದಾರೆ:—

**"ಸಕಲ ಸಂಪೂಜೆ ಈ ಪರಿ ಇರಲು ಮತ್ತೆ ಲಕುಮಿಪೂಜಿಸುವಳು। ಲಕುಮಿಗೆ ನೀನೇ ಪ್ರೇರಕನಾಗಿ ಒಳಗೆ ನಿಂದು ನಿನಗೆ ಅರ್ಚಕನಾಗಿ ಅನುಗಾಲಾ "॥** ಎಂದು ಹೇಳಿ ಜೊತೆಯಲ್ಲಿ

**"ನಿನಗೆ ನೀನೇ ಪೂಜೆ ಮಾಡಿಕೊಂಬುವೆ ದೇವಾ ।<br>ಎನಗಾವ ಸಥಿಯಲ್ಲಿ ವಿಜಯವಿಠ್ಠಲ ಒಲಿಯೋ "॥**

ಎಂತ ಮುಕ್ತ್ಯಾಯ ಮಾಡಿದ್ದಾರೆ. ಪೂಜಾವಿಧಾನ ಎಂಥಾದ್ದು ಎಂದರೆ, ಸರ್ವರು ಜಡದ್ರವ್ಯಗಳಿಂದ ಜಡಪ್ರತಿಮಾಕ್ಕೆ ಪೂಜಾಮಾಡತಾರೆ. ಇದು ಪೂಜಾವಲ್ಲ. ಮತ್ತೆ ಹ್ಯಾಂಗೆಂದರೇ- ಪರಿದೃಶ್ಯಮಾನ ಜಡಪ್ರತಿಮಾ ದಲ್ಲಿ ಶ್ರೀ ಪರಮಾತ್ಮನ ಚಿದಾನಂದಶರೀರವನ್ನು ತಿಳಿದು, ಪೂಜಾಮಾಡುವ ದ್ರವ್ಯಗಳಲ್ಲಿ ಆ ಪರಮಾತ್ಮನ ಸ್ವಾಖ್ಯರೂಪಗಳ ಅನುಸಂಧಾನಮಾಡಿ, ಪ್ರತಿ ಮಾಂತರ್ಗತರೂಪಕ್ಕೂ, ದ್ರವ್ಯಾಂತರ್ಗತರೂಪಕ್ಕೂ ಐಕ್ಯಚಿಂತನೆ ಮಾಡ ಬೇಕು. ಇದು ಸ್ವಾಖ್ಯರೂಪದಿಂದ ಸ್ವಾಖ್ಯರೂಪ ಪೂಜಾ ಎಂತ ಅನಿಸಿ ಕೊಳ್ಳಲ್ಪಡುತ್ತದೆ. ಇದೇ ನಿಜವಾದ ಪೂಜಾ. ಆವರೆ ಅಧಿಕಾರಿಗೆ ಜಡ ಪ್ರತಿಮಾ ಜಡದ್ರವ್ಯಗಳ ಹೊರತು ಬೇರೆ ಇಲ್ಲ. ಜಡಪ್ರತಿಮಾವನ್ನು ಜಡ ಪದಾರ್ಥಗಳಿಂದ ಪೂಜಾಮಾಡೋದರಲ್ಲಿ ಅಂತರ್ಗತ ಪರಮಾತ್ಮ ತದಾಕಾರ, ತದ್ಭಿನ್ನ ಎಂತ ಲಕ್ಷ್ಯವಿಟ್ಟು, ಎಲ್ಲಾನೂ ಈಶ್ವರಾಖ್ಯಗಳು ಎಂತ ತಿಳಿದು ಪೂಜಾ ಮಾಡಬೇಕು. ಇದರ ವಿವರ ಮುಂವೆ ಐದನೆಯ **ವಿಭೂತಿ ಸಂಧಿ** ಯಲ್ಲಿ ಹೇಳತಾರೆ ॥೧೦॥

## (೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :—

ತಂದೆಯು ತನ್ನ ಮಕ್ಕಳಿಗೆ ಉತ್ತಮವಾದ ಒಡವೆ ವಸ್ತ್ರಗಳನ್ನು ತೊಡಿಸಿ, ಆ ಮಕ್ಕಳಿಂದ ನಮಸ್ಕಾರವನ್ನು ಕೈಕೊಂಡು, ಅವರಿಗೆ ಆಶೀ ರ್ವಾದವನ್ನು ಮಾಡಿ, ಸಂತೋಷಪಡುವಂತೆ, ಶ್ರೀ ಪರಮಾತ್ಮನು ಗುರು ಜನರುಗಳಲ್ಲಿದ್ದು ಪೂಜೆಯನ್ನು ಮಾಡಿಸಿಕೊಳ್ಳುವನು, ಶಿಷ್ಯವರ್ಗಾದಿಗಳ ಲ್ಲಿದ್ದು ಪೂಜಾಮಾಡುವನು. ತನ್ನಿಂದ ಸೃಷ್ಟರಾದ ಮಕ್ಕಳಂತಿರುವ ತನ್ನ ಭಕ್ತರಲ್ಲಿದ್ದು ಪೂಜಾಮಾಡಿ, ಅವರಿಗಿಂತ ಉತ್ತಮ ಜನರಲ್ಲಿಯೂ, ರಾಮ ಕೃಷ್ಣಾದಿ ಪ್ರತಿಮಾರೂಪದಿಂದಲೂ ಪೂಜೆಯನ್ನು ಕೈಗೊಂಡು ಅವರುಗಳಿಗೆ ಅದರ ಫಲರೂಪವಾಗಿ ಅನ್ನ ವಸ್ತ್ರ ಆಭರಣಾದಿಗಳಿಂದ ಸೌಖ್ಯಗಳನ್ನುಂಟು ಮಾಡಿ, ತಂದೆಯು ಮಕ್ಕಳಿಂದ ನಮಸ್ಕಾರ ಮಾಡಿಸಿಕೊಂಡು, ಅವರಿಗೆ ಆಶೀರ್ವಾದ ಮಾಡುವಂತೆ, ಭಕ್ತರಿಗೆ ವರವನ್ನು ಕೊಟ್ಟು, ತಾನು ಅವರನ್ನು ನೋಡಿ ಸಂತೋಷಪಡುವನು. ಪೂಜಾಕ್ಕೆ ಬೇಕಾದ ಉಪಕರಣಗಳು, ಫಲ,

ಪುಷ್ಪ, ಗಂಧಾಕ್ಷತೆ ತಾಂಬೂಲಾದಿಗಳಲ್ಲಿಯೂ ತದ್ರೂಪಿಯಾಗಿ ತಾನು ಇದ್ದು ತನ್ನ ಪೂಜಾಕ್ಕೆ ತಾನೇ ಸಾಧನೆಯಾಗುವನು. ಪೂಜಾಮಾಡಿದ ಫಲ ವನ್ನು ಮಾತ್ರ ಜೀವರಿಗೆ ಕೊಡಿಸುವನು.

**ವಿಶೇಷಾರ್ಥ :—**

ಈ ಮೇಲಿನ ಎರಡು ಪದ್ಯಗಳಿಂದ ಶ್ರೀ ಪರಮಾತ್ಮನೇ ಪ್ರೇರಕ ಪ್ರೇರ್ಯನಾಯೂ, ಪೂಜ್ಯಪೂಜಕನಾಗಿಯೂ ಪೂಜಾಸಾಧನದ್ರವ್ಯರೂಪ ನಾಗಿಯೂ ಇದ್ದು, ಪೂಜಾಮಾಡಿ ಮಾಡಿಸಿಕೊಂಡು ಫಲವನ್ನು ಜೀವರಿಗೆ ಕೊಡುವನು —ಎಂದು ಹೇಳಿದ ವಾಕ್ಯಗಳಿಂದ ಜೀವನಕರ್ತೃತ್ವವು ಲೇಶ ಮಾತ್ರವೂ ಇಲ್ಲವೆಂದೇ ದಾಸರಾಯರ ಅಭಿಪ್ರಾಯವೆಂದು ಕಾಣವುದು. ಆದರೂ ಅವರ ಅಭಿಪ್ರಾಯವು ಎಂದಿಗೂ ಹಾಗಲ್ಲ. ಏಕೆಂದರೆ, ಅದು ಶ್ರೀಮದಾನಂದತೀರ್ಥರ ಸಿದ್ಧಾಂತಕ್ಕೆ ವಿರುದ್ಧವಾಗುವುದು.

**ಭಗವದ್ಗೀತೆಯ ೧೮ನೆಯ ಅಧ್ಯಾಯದಲ್ಲಿ :—**

**"ಅಧಿಷ್ಠಾನಂ ತಥಾ ಕರ್ತಾ ಕಾರಣಂ ಚ ಪೃಥಗ್ವಿಧಂ । ವಿವಿ ಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಂ । ಶರೀರ ವಾಙ್ಮನೋಭಿರ್ಯತ್ಕರ್ಮ ಪ್ರಾರಭತೇ ನರಃ ॥ ನ್ಯಾಯ್ಯಂ ವಾ ವಿಪರೀತಂ ವಾ ಪಂಚೈತೇ ತಸ್ಯ ಹೇತವಃ ॥"**

—ಎಂದು ಸಾಂಖ್ಯಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವನು ಪುಣ್ಯ ಪಾಪಾದಿ ಸರ್ವ ಕರ್ಮಗಳನ್ನೂ ಮಾಡುವುದಕ್ಕೆ ಐದು ಕಾರಣಗಳುಂಟು. ಅವು ಯಾವುವೆಂದರೆ :— (೧) ಅಧಿಷ್ಠಾನ ಅಂದರೆ, ದೇಹ, ಭೂಮಿ ಮೊದಲಾದವು. (೨) ಕರ್ತಾ—ವಿಷ್ಣು. (೩) ಬೇರೆ ಬೇರೆಯಾದ ಕಾರಣ ಗಳು, ಅಂದರೆ ಇಂದ್ರಿಯಗಳು. ಸ್ರಕ್ಸ್ರುವಾದಿಗಳು. (೪) ನಾನಾ ಪ್ರಕಾರವಾದ ಚೇಷ್ಟಾ, ಅಂದರೆ, ಕೈ ಮೊದಲಾದ ಇಂದ್ರಿಯಗಳಿಂದ ಮಾಡು ವುದು, ನಡೆಯುವುದು ಇತ್ಯಾದಿ, ಧ್ಯಾನಾದಿ ಮಾನಸಿಕಕ್ರಿಯೆ ಮತ್ತು

(೫) ದೈವ ಅಂದರೆ, ಅದೃಷ್ಟ ಅಥವಾ ಕರ್ತಾ-ಜೀವ. ದೈವ ಅಂದರೆ ವಿಷ್ಣು ಎಂದರ್ಥ.

ಮನುಷ್ಯನು ಮನೋವಾಕ್ಕಾಯಗಳಿಂದ ಮಾಡುವ ಪುಣ್ಯಕಾರ್ಯಕ್ಕಾಗಲೀ, ಪಾಪಕಾರ್ಯಕ್ಕಾಗಲೀ ಈ ಐದೂ ಕಾರಣವಾಗಿರುವುವು.

**"ತತ್ರೈವಂ ಸತಿ ಕರ್ತಾರಮಾತ್ಮಾನಂ ಕೇವಲಂ ತು ಯಃ । ಪಶ್ಯತ್ಯ ಕೃತ ಬುದ್ಧಿತ್ವಾನ್ನಸ ಪಶ್ಯತಿ ದುರ್ಮತಿಃ ॥"** ಇದು ಇಂತಿರಲು ಯಾವ ಪುರುಷನು ತಾನೇ ಕೇವಲ ಕರ್ತನೆಂದು ತಿಳಿದುಕೊಳ್ಳುವನೋ, ಅವನು ಬುದ್ಧಿ ಇಲ್ಲದವನಾದುದರಿಂದ ಆ ದರ್ಮತಿಯನ್ನು ಏನೂ ಅರಿಯದವನೆಂದು ಭಾವಿಸಬೇಕು.

**"ಯಸ್ಯನಾಹಂ ಕೃತೋಭಾವೋ ಬುದ್ಧಿರ್ಯಸ್ಯನಲಿಪ್ಯತೇ । ಹತ್ವಾಪಿ ಸ ಇಮಾನ್ಲೋಕಾನ್ ನ ಹಂತಿ ನ ನಿಬಧ್ಯತೇ ॥"** ಅಂದರೆ ಯಾವನಿಗೆ ನಾನು ಎಂಬ ಅಹಂಕಾರವು ಇರುವುದಿಲ್ಲವೋ, ಯಾತನ ಬುದ್ಧಿಯು ಫಲರಾಗಾದಿಗಳಿಂದ ನಿರ್ಲಿಪ್ತವಾಗಿರುವುದೋ, ಅವನು ಈ ಲೋಕವನ್ನೇ ಸಂಹರಿಸಿದಿರೂ ಸಂಹರಿಸಿದ ಪಾಪಭಾಗಿಯಾಗನು. ಆ ಪಾಪದಿಂದ ಅವನು ಬದ್ಧನಾಗನು. ಹೀಗೆ ಪ್ರಪಂಚವನ್ನೇ ಸಂಹರಿಸಲು ಹುಟ್ಟಿದವರು ರುದ್ರದೇವರು. ಯಮದೇವರು—ಇವರಿಗೆ ಸ್ವಕರ್ತೃತ್ವಾಭಿಮಾನವಿಲ್ಲದಿರುವುದರಿಂದ ಸಂಹರಿಸಿದ ಪಾಪಲೇಪವು ಅವರಿಗಿಲ್ಲ, ಇಂದ್ರನು ವೃತ್ರಾಸುರನನ್ನು ಕೊಂದು ಪಾಪಲಿಪ್ತನಾದುದಾಗಿ ಭಾರತಾದಿಗಳಲ್ಲಿ ಹೇಳಿರುವುದು. ಅದರ ಮೂಲಕಾರಣವು ಅವರ ಸ್ವಲ್ಪವಾದ, ತಾತ್ಕಾಲಿಕ ಅಹಂಕಾರವೇ ಎಂದರಿಯಬೇಕು. ಹೀಗೆ ೧೪ನೆಯ ಶ್ಲೋಕದ ಮೊದಲು ೧೭ನೆಯ ಶ್ಲೋಕದವರೆಗೂ ಭಗವತ್ಕರ್ತೃತ್ವವನ್ನು ತಿಳಿದು ತನ್ನ ಕರ್ತೃತ್ವ ಬುದ್ಧಿಯನ್ನು ಬಿಡಬೇಕೆಂದು ಹೇಳಿದರು. ೧೮ನೆಯ ಶ್ಲೋಕದ ಅವತಾರಿಕೆ —ಶ್ರೀ ರಾಘವೇಂದ್ರಸ್ವಾಮಿಗಳ "ಗೀತಾವಿವೃತಿ" ವಚನ :—

**"ನನು ಜೀವಸ್ಯಸ್ವತಃ ಕರ್ತೃತ್ವಾಭಾವೇ ಯಜೇತೇತ್ಯಾದಿ ವಿಧೀನಾಂ ವೈಯರ್ಥ್ಯಂ ಸ್ಯಾತ್ ॥ ಜಡೇಶ್ವರ ಮುಕ್ತಾನಾಂ ತದವಿಷಯತ್ವಾದಿತ್ಯತ ಆಹ ॥ ಜ್ಞಾನಮಿತಿ"** – ಮೇಲಿನ ವಾಕ್ಯಗಳ ಆಧಾರದಿಂದ ಜೀವನಿಗೆ ಕತೃತ್ವವೇ ಇಲ್ಲದಿದ್ದರೆ. **ಸ್ವರ್ಗ ಕಾಮೋಯುಜೇತ, ಅಹರಹಸ್ಸಂಧ್ಯಾಮುಪಾಸೀತ"** ಸ್ವರ್ಗಾಪೇಕ್ಷೆಯುಳ್ಳವನು ಜ್ಯೋತಿಷ್ಟೋಮವೆಂಬ ಯಾಗವನ್ನು ಮಾಡಬೇಕು. ಪ್ರಾತಸ್ಸಾಂಕಾಲದಲ್ಲಿ ಸಂಧ್ಯಾವಂದನೆಯನ್ನು ಮಾಡಬೇಕು -ಎಂಬ ವಿಧಿವಾಕ್ಯಗಳು ವ್ಯರ್ಥವಾಗುವುವು. ಜಡಪದಾರ್ಥಗಳಿಗೂ, ಮುಕ್ತರಿಗೂ ಈ ಯಾಗ ಮಾಡಬೇಕೆಂಬ ವಿಧಿವಾಕ್ಯಗಳು ಪ್ರಯೋಜನಕಾರಿಯಲ್ಲ. ಜೀವರಿಗಾಗಿಯೇ ಈ ವಿಧಿ ವಾಕ್ಯಗಳು ಹೊರಟಿರಬೇಕು. ಅವನಿಗೂ ಸ್ವತಃ ಕತೃತ್ವವಿಲ್ಲದ ಮೇಲೆ ಈ ವಾಕ್ಯಗಳು ಹೊರಡುತ್ತಲೇ ಇರಲಿಲ್ಲ.

**"ಜ್ಞಾನಂ ಜ್ಞೇಯಂ ಪರಿಜ್ಞಾತಾ ತ್ರಿವಿಧಾ ಕರ್ಮಚೋದನಾ । ಕರಣಂ ಕರ್ತ ಕರ್ಮೇತಿ ತ್ರಿವಿಧಃ ಕರ್ಮಸಂಗ್ರಹಃ ॥"** ಯಾಗಾದಿಗಳನ್ನು ಮಾಡಬೇಕೆಂಬ ಕರ್ಮಚೋದನಾ, ಅಂದರೆ. ಕರ್ಮಗಳ ಪ್ರೇರಣೆಯು ಜ್ಞಾನವೆಂತಲೂ, ಜ್ಞೇಯವೆಂತಲೂ, ಪರಿಜ್ಞಾತಾ ಎಂತಲೂ ಮೂರು ವಿಧವಾಗಿ ಇರುವುದು. ಜ್ಞಾನವೆಂದರೆ, ವಿಧಿವಾಕ್ಯಕ್ಕೆ ವಿಷಯೀಭೂತವಾದುದು. ಅಂದರೆ "ಯಜೇತ" —ಯಜನ ಮಾಡಬೇಕು. "ಉಪಾಸೀತ" —ಉಪಾಸನ ಮಾಡಬೇಕು—ಎಂದು ಹೇಳಿದರೆ, ಯಜನಕ್ಕೂ ಉಪಾಸನಕ್ಕೂ ವಿಷಯೀಭೂತವಾದ ವಸ್ತುವಾವುದು. ಯಜ್ಞಪುರುಷ, ಸವಿತಾ ಮೊದಲಾದ ಭಗವದ್ರೂಪಗಳು. ಅಥವಾ ಯಾಗಾದಿಗಳೂ ಕೂಡ ಜ್ಞಾನ ವಾಚಕವಾಗಬಹುದು. "ಜ್ಞೇಯಂ" ಅಂದರೆ (ಚೇಷ್ಟಾ) ವ್ಯಾಪಾರಗಳು. ಅವು ಯಾವುವೆಂದರೆ, ಪ್ರಯತ್ನ ಮಾಡುವುದು. ದೇಹಾದ್ಯಧಿಷ್ಠಾನಗಳು ಪುರುಷಾರ್ಥಲಕ್ಷಣ. ಇವೆಲ್ಲವೂ ಜ್ಞೇಯವಾಚಕವು. ಪರಿಜ್ಞಾತನು ಯಾರೆಂದರೆ ಸರ್ವಜ್ಞನು. ಸರ್ವಪ್ರೇರಕನು ಆದ ಶ್ರೀ ಪರಮಾತ್ಮನಿಂದ ಸನ್ನಿಹಿತವಾದ ಜೀವರಾಶಿಯು, ಈ ಮೂರು ನಿಮಿತ್ತಗಳಿಂದಲೇ ಕರ್ಮ ಪ್ರೇರಣೆಯಾಗುವುದು.

**"ದಧಿತ್ರಪು ಸಂಪ್ರತ್ಯ ಕ್ಷೋೀಜ್ವರ ಇತ್ಯಾದಾವಿವನಿಮಿತ್ತ ನಿಮಿತ್ತಿನೋರಭೇದೋಪಚಾರೇಣ ನಿಮಿತ್ತ ತ್ರೈವಿಧ್ಯೇನ ನೈಮಿತ್ತಿಕ ಚೋದನಾಪಿ ತ್ರಿವಿಧೇತ್ಯುಪಚರ್ಯತೇ || ಯಜತೇತ್ಯಾದಿ ಶ್ರೌತಸ್ಮಾರ್ತವಿಧೌಸತಿ ಸ್ವಾಪ್ರವೃತ್ತಿವಿಷಯ ಪ್ರೇರಣಾಜ್ಞಾನಂ ಭವತಿ || ತತಶ್ಚೇಚ್ಛಾಪ್ರಯತ್ನರೂಪ ಪ್ರವೃತ್ತಿರಾತ್ಮ ಸನ್ನಿಹಿತೇಶ್ವರ ಪ್ರೇರಣಯಾಪುರುಷಾರ್ಥಮುದ್ದಿಶ್ಯ ಕರ್ಮಣಿ ಜೀವಸ್ಯ ಭವತಿ ಇತಿ ವಿಧಿಜ್ಞಾನಾದೇಃ ಕರ್ಮಚೋದನಯಾಶ್ಚ ನಿಮಿತ್ತ ನಿಮಿತ್ತಿ ಭಾವೋಧ್ಯೇಯಃ ||"**

ಅಂದರೆ, ಲೋಕದಲ್ಲಿ ಜ್ವರದಿಂದ ಪೀಡಿತನಾದ ಒಬ್ಬನ ಜ್ವರದ ಕಾರಣವನ್ನು ತಿಳಿದುಕೊಳ್ಳುವಾಗ, ಅಧಿಕವಾಗಿ ಮೊಸರನ್ನು ಸೇವಿಸಿದ್ದರಿಂದ ಜ್ವರ ಬಂದಿತು ಎಂದು ತಿಳಿಯುತ್ತಾನೆ. ಇದರಲ್ಲಿ ಜ್ಞಾನವಾವುದು ? ಮೊಸರು. ಅದಕ್ಕೆ ಜ್ಞೇಯವೆಂದರೆ, ಆಧಾರಭೂತವಾದುದು ಯಾವುದು ? ಸೀಸದ ಪಾತ್ರೆ, ಮೊಸರು ನಿರಾಧಾರವಾಗಿ ನಿಲ್ಲಲು ಸಾಧ್ಯವಿಲ್ಲದ ಕಾರಣ, ಅದಕ್ಕೆ ಆಧಾರವಾದ ಸೀಸವೂ ಒಂದು ನಿಮಿತ್ತವಾಯಿತು. ಹೀಗೆ ಜ್ವರಕ್ಕೆ ನಿಮಿತ್ತವಾದುದು ಮೊಸರಾದರೂ ಅದರ ನಿಮಿತ್ತಭೂತವಾದ ಸೀಸದ ಪಾತ್ರೆಯೂ ನಿಮಿತ್ತವಾಗುವುದು. ಹಾಗೆಯೇ ವಿಧಿವಾಕ್ಯದ ಪ್ರೇರಣೆಯು ಜ್ಞಾನವಾದರೂ ಜ್ಞೇಯವಾದ ದೇಹಾದ್ಯಧಿಷ್ಠಾನವಿಲ್ಲದೆ ಅದರ ಪರಿಜ್ಞಾನ ಹುಟ್ಟದು. ಇದರಿಂದ ನಿಮಿತ್ತಸಂಬಂಧವಾದಪ್ರೇರಣೆಯೂ ಕೂಡ ಮೂರು ಪ್ರಕಾರವೆಂದು ಹೇಳಿದಂತಾಯಿತು. "ಯಜೇತ"—ಯಜನಮಾಡಬೇಕು ಮುಂತಾದ ಶ್ರುತಿ ಸ್ಮೃತಿ ವಿಹಿತವಾದ ವಿಧಿಗಳು ಇದ್ದರೇನೇ ಅದನ್ನು ಮಾಡಬೇಕೆಂಬ ಪ್ರೇರಣಾಜ್ಞಾನವು ಹುಟ್ಟುವುದು. ಅದರಮೇಲೆ ಇಚ್ಛಾಪ್ರಯತ್ನಾರೂಪವಾದ ಪ್ರವೃತ್ತಿಯು, ಆತ್ಮಸನ್ನಿಹಿತನಾದ ಈಶ್ವರನ ಪ್ರೇರಣೆಯಿಂದ ಪುರುಷಾರ್ಥ ಸಿದ್ಧಿಗಾಗಿ ಕರ್ಮದಲ್ಲಿ ಪ್ರವೃತ್ತಿಯು ಜೀವನಿಗೆ ಹುಟ್ಟುವುದು. ಇದರ ಒಟ್ಟು ತಾತ್ಪರ್ಯ ಹೀಗಿದೆ :—

ಯಾಗಾದಿಗಳನ್ನು ಮಾಡಬೇಕೆಂಬ ವಿಧಿಯು ಇರುವುದರಿಂದ ಜೀವನಿಗೆ ಪರಮಾತ್ಮನು ದೃಷ್ಟಿಕಾಲದಲ್ಲಿ ಕೊಟ್ಟಿದ್ದ ಈಶದತ್ತಸ್ವಾತಂತ್ರ್ಯ ಮಾಡಬೇಕೆಂಬ ಇಚ್ಛಾಮಾತ್ರ ಹುಟ್ಟುವುದು. ಆದರ ಮೇಲೆ ಜೀವಸನ್ನಿಹಿತ

ನಾದ ಶ್ರೀ ಪರಮಾತ್ಮನು ಜೀವರ ಸಂಸ್ಕಾರಕ್ಕೆ ಅನುಸಾರವಾಗಿ ಹುಟ್ಟಿದ ಇಚ್ಛಾನುಸಾರವಾಗಿ ಇವನ ಕರ್ಮಾನುಸಾರವಾದ ಪುರುಷಾರ್ಥಕ್ಕೆ ಸಾಧನವಾದ ಕರ್ಮವನ್ನು ಮಾಡಲು ಪ್ರೇರಿಸುವನು. ಅಂದರೆ, ಜೀವನ ಅನಾದಿ ಕರ್ಮವನ್ನೂ ಜೀವನಸಂಸ್ಕಾರವನ್ನೂ ಅನುಸರಿಸಿ ಪ್ರೇರಿಸಲ್ಪಡುವನು. ಆಗ ಜೀವನು ಪರಮಾತ್ಮನ ಪ್ರೇರಣೆಯಿಂದ ಮಾಡಲುದ್ಯುಕ್ತನಾದರೆ, ಒಳಗಿನ ತತ್ವಾಭಿಮಾನಿದೇವತೆಗಳಿಗೆ ಪರಮಾತ್ಮನು ಪ್ರೇರಿಸಿ, ಅವರಳೊಳಗಿದ್ದು ತಾನು ಮಾಡಿ, ಜೀವನಿಂದ ಮಾಡಿಸುವನು. ಹೀಗೆಯೇ ಜ್ಞಾಪ್ನವೆಂದರೆ, ವಿಧಿವಾಕ್ಯ. ಜ್ಞೇಯವೆಂದರೆ, ದೇಹಾದಿಗಳು ಮತ್ತು ಭಗವತ್ಪ್ರೇರಣಾ. ಪರಿಜ್ಞಾತಾಜೀವನು. ಹೀಗೆ ಸ್ವತಂತ್ರ ಕರ್ತ ಪರಮಾತ್ಮನು. ಜೀವನಿಗೆ ವಿಧಿವಾಕ್ಯವೂ, ಭಗವತ್ಪ್ರೇರಣೆಯೂ ಸಹ ಕರ್ಮಚೋದನಕ್ಕೆ ನಿಮಿತ್ತ ನಿಮಿತ್ತೀ ಭಾವವೆಂದರಿಯಬೇಕು.

**"ನಚಸ್ವತಃ ಕತೃತ್ವಾ ಭಾವಾತ್ಪರಾಧೀನಕರ್ತೃ ಜೀವಸ್ಯ ವಿಧಿ ಜ್ಞಾನದ್ವಾರಾಕಥಂ ಪ್ರವೃತ್ತ್ಯಾದ್ಯರ್ಥಂ ವಿಧಿನಿಷ ಯತ್ವಮಿತಿ ಶಕ್ಯಮ್ ॥ ಅಪರಾಧೀನ ಕತೃತ್ವಸ್ಯ ವಿಧಿವಿಷಯಿತಾಯಾಂ ಪ್ರಯೋಜಕತ್ವೇನಕ್ವಾಪ್ಯನುಪಲಂ ಭೇನಾನ್ವಯ ವ್ಯತಿರೇಕಾಭ್ಯಾಂ ಪರಾಧೀನಕತೃಶಕ್ತಿ ಕಸ್ಯೈವ ವಿಧಿವಿಷಯತ್ವಾವಶ್ಯಂ ಭಾವಾತ್ ॥"**

ಅಂದರೆ, ಜೀವನು ಯಾವುದನ್ನೂ ಸ್ವತಂತ್ರದಿಂದ ಮಾಡಲು ಶಕ್ತನಲ್ಲ. ಪರಾಧೀನವಾಗಿದ್ದು ಪರಮಾತ್ಮನು ಮಾಡಿಸಿದಹಾಗೆಲ್ಲಾ ಮಾಡುವ ಜೀವನಿಗೆ ವಿಧಿವಾಕ್ಯದಿಂದ ಪ್ರಯೋಜನವೇನೆಂದು ಶಂಕಿಸಬಾರದು. ಏಕೆಂದರೆ, ಲೋಕದಲ್ಲಿ ಸ್ವತಂತ್ರಕರ್ತೃಗಳಾದ ರಾಜರುಗಳಿಗೆ ವಿಧಿವಾಕ್ಯಗಳು ಎಂದಿಗೂ ಬಂಧಕವಲ್ಲ. ಪರಾಧೀನದಲ್ಲಿ ಅಂದರೆ, ತಮ್ಮ ವಶದಲ್ಲಿರುವವರಿಗೇನೇ-ಹೀಗೆ ಮಾಡಿ, ಹಾಗೆ ಮಾಡಿ—ಎಂದು ಹೇಳುವುದಕ್ಕಾಗಿಯೇ ವಿಧಿವಚನಗಳು ಎಂದು ಜಗತ್ಪ್ರಸಿದ್ಧಿಯಾಗಿರುವುವು. ಆದರಂತೆಯೇ ಜಡರು, ಈಶ್ವರ, ಮುಕ್ತರು ಇವರು ಮೂವರೂ ವಿಧಿಗೆ ವಿಷಯರಲ್ಲವೆಂದು ಸಿದ್ಧವಾದುದರಿಂದ, ಜೀವರೇ ವಿಧಿವಿಷಯರೆಂದು ಸಿದ್ಧಾಂತವಾಗುವುದು. ಆದುದರಿಂದ

ಜೀವನು ಪರಾಧೀನಕರ್ತೃವಾದನು. ಆದ್ದರಿಂದಲೇ ವಿಧಿಗಳು ಅವನಿಗಾಗಿಯೇ ಹೇಳಲ್ಪಟ್ಟಿರುವುದೆಂದು ಸ್ಪಷ್ಟವಾಯಿತು. ಹೀಗೆಯೇ ಗೀತಾವ್ಯಾಖ್ಯಾನಕರ್ತ ರಾದ ಶ್ರೀ ರಾಘವೇಂದ್ರಸ್ವಾಮಿಗಳವರ ವಚನವನ್ನೇ ಇಲ್ಲಿ ಬರೆದಿರುತ್ತೇ. ಆದುದರಿಂದ ದಾಸರಾಯರ ಅಭಿಪ್ರಾಯವೂ ಜೀವನಿಗೆ ಸ್ವತಂತ್ರಕರ್ತೃತ್ವ ಮಾತ್ರವಿಲ್ಲವೆಂದೇ ಹೊರತು, ಅಕರ್ತನೆಂದು ಅರ್ಥವಲ್ಲವೆಂದು ತಿಳಿಯಬೇಕು. ॥೧೦॥

(೨) **"ಭಾವಪ್ರಕಾಶಿಕೆ"— ವ್ಯಾಖ್ಯಾನ :—**

**"ಸ್ವವಂದನಂ ಯಥಾಪಿತ್ರಾಕಾರಿತಂ ಶಿಶುಕರ್ತೃಕಮ್ ॥ ಏವಂ ಪೂಜಾವಿಷ್ಣ್ವಧೀನಂ ಭವೇಜ್ಜೀವಕೃತೇಽಪಿ ॥"** —ಎಂಬ ಗೀತಾ **ಭಾಷ್ಯೋಕ್ತ** ಕ್ರಮದಿಂದ ಶ್ರೀಹರಿ ತನ್ನ ಪೂಜಾ ತಾನೇ ಮಾಡಿಕೊಳ್ಳು ತ್ತಾನೆಂದು ಹೇಳುತ್ತಾರೆ- "ಜನಕ" —ಎಂಬ ಪದ್ಯದಿಂದ.

ದುಕೂಲವ = ವಸ್ತ್ರಗಳು. ಕೈಕೊಳುತ = ತೆಗೆದುಕೊಳ್ಳುತ್ತ, ವನ = ನೀರು. ವನರುಹ = ಕಮಲ. ಈಕ್ಷಣ = ಕಣ್ಣು. ವನರುಹೇಕ್ಷಣ = ಕಮಲಗಳಂತೆ ಕಣ್ಣುಗಳುಳ್ಳವನು. ಪೂಜ್ಯ ॥ **"ನಿಷುಸೀದ ಗಣಪತೇ.... ..................ಚಿತ್ರಮರ್ಚ್ಯ ॥"** (ಈ ಪ್ರಮಾಣದ ಪೂರ್ಣವಾಕ್ಯ ರೂಪವನ್ನು ಹಿಂದಿನ ವ್ಯಾಖ್ಯಾನಗಳಲ್ಲಿ ಕೊಟ್ಟಿದೆ) —ಎಂದು **ಶ್ರುತಿವಚನ.** ಇದರ ಅರ್ಥವೇನೆಂದರೆ:— ಗಣಪತೇ = ನಮ್ಮ ಇಂದ್ರಿಯಾಧಿಪತೇ, ಗಣೇಷು = ಇಂದ್ರಿಯಸಮೂಹದಲ್ಲಿ. ತ್ವಾಂ = ನಿನ್ನನ್ನು ವಿಪ್ರತಮಂ ವಿಶೇಷದಿಂದ ಪ್ರತ್ಯಕ್ಷತಮನೆಂದು ಆಹುಃ = ಹೇಳುತ್ತಾರೆ, ನ ಋತೇ ತ್ವ ಕ್ಕ್ರಿಯತೇ ಕಿಂಚನಾರೇ = ನಿನ್ನ ಹೊರತು ಒಬ್ಬನಿಂದಲೂ ಸಮೀಪದೂರ ದಲ್ಲ್ಯೂನೂ ಒಂದು ಕಾರ್ಯವೂ ಮಾಡಲ್ಪಡೋಲ್ಲ, ಅದಕ್ಕೆ ಮಹ = ಮಹತ್ತಾದಂಥ ಅರ್ಕ = ಪರಮಾನಂದರೂಪನಾದಂಥ ಮಘುವನ್ = ಯಜ್ಞಾ ಧಿಪನಾದಂಥ ಚಿತ್ರಂ = ಆಶ್ಚರ್ಯರೂಪನಾದಂಥ ಸ್ವಾಮಿಯೇ, ತ್ವಾಂ = ನಿನ್ನನ್ನು ತ್ವಂ = ನೀನೇ ಅರ್ಚ್ಯ = ಪೂಜಿಸು. ನನಗೇನೂ ಶಕ್ತಿ ಇಲ್ಲವೆಂದು

ಲಕ್ಷ್ಮೀರೂಪಳಾದಂಥ ದುರ್ಗಾದೇವರು **ಶ್ರುತಿಗೀತಾ**ದಲ್ಲಿ ಶ್ರೀಪುರುಷೋತ್ತಮನನ್ನು ಪ್ರಾರ್ಥಿಸಿದ್ದಾರೆ, ಆದಪ್ರಯುಕ್ತ "ಪೂಜ್ಯಪೂಜಕ" —ವಿವರ ಏನೆಂದರೆ, ಸಕಲಪೂಜಾಸಾಧನ ಪದಾರ್ಥಗಳಲ್ಲಿಯೂ ಪೂಜಾ ಮಾಡತಕ್ಕಂಥ ಜೀವಾಧಿಷ್ಠಾನದಲ್ಲಿಯೂ ಶ್ರೀಹರಿ ತಾನೇ ನಿಂತು, "ಪೂಜಕ"ನೆಂದೆನಿಸಿಕೊಳ್ಳುತ್ತಾನೆ. ಪ್ರತಿಮಾಧಿಷ್ಠಾನದಲ್ಲಿದ್ದು "ಪೂಜ್ಯ"**ನೆಂದೆನಿಸಿಕೊಳ್ಳುತ್ತಾನೆಂದು** ಭಾವ, ಇದಕ್ಕೆ ಆಧಾರವಾದ **ಶ್ರೀ ವಿಜಯದಾಸರ ಸುಳಾದಿ**ಯನ್ನು ಹಿಂದಿನ ವ್ಯಾಖ್ಯಾನದಲ್ಲಿ ಕೊಟ್ಟಿದೆ ॥೧೦॥

## (೪) ಶ್ರೀ ಜಮಖಂಡಿವಾದಿರಾಜಾಚಾರ್ಯರ ವ್ಯಾಖ್ಯಾನ :—

### (ಸಂಸ್ಕೃತಮೂಲ) :—

ಸ್ವವಂದನಂ ಯಥಾಪಿತ್ರಾಕಾರಿತಂ ಶಿಶುಕರ್ತೃಕಂ ॥ ಏವಂ ಪೂಜಾ ವಿಷ್ಣ್ವಧೀನಾ ಭವೇಜ್ಜೀವ ಕೃತೇತ್ಯಪಿ ॥ ಬ್ರಹ್ಮಣ್ಯಾಧಾಯ ಕರ್ಮಾಣಿ ಇತ್ಯತ್ರ ಭಾಷ್ಯಂ ॥ ತತ್ಪೂಜಾತ್ಮಕಾನಿ ಕೃತಾನಿ ಮಮ ಶುಭಾರ್ಥಮಿತಿ ಬ್ರಹ್ಮಣ್ಯಾಧಾನಂ । ಪೂಜ್ಯೇತಿ । ಮಹಿಯತೇ ಮಹತಿ ಚ ಸಸ್ವಯಂ ಭಗವಾನ್ ಹರಿಃ ॥ ಪೂಜ್ಯ ಪೂಜಕ ಭೇದೋತ್ರ ನೈವ ಕಶ್ಚಿದಪೀಷ್ಯತೇ ಇತ್ಯುಕ್ತೇಃ ॥ ವನರುಹ = ಪದ್ಮ ॥೧೦॥

ತಂದೆಯು ತನ್ನ ಮಗನಿಂದ ನಮಸ್ಕಾರವನ್ನು ಮಾಡಿಸಿಕೊಳ್ಳುವನು. ಅಂತೆಯೇ ಶ್ರೀಪರಮಾತ್ಮನು ಜೀವವರ್ಗದಿಂದ ತನ್ನ ಪೂಜೆಯನ್ನು ಮಾಡಿಸಿಕೊಳ್ಳುತ್ತಾನೆ. ಜೀವರೆಲ್ಲರೂ ಅವನ ಅಧೀನರು. **"ಬ್ರಹ್ಮಣ್ಯಾಧಾಯ ಕರ್ಮಾಣಿ"** —ಎಂಬ ಗೀತಾಶ್ಲೋಕದ ಶ್ರೀಮದ್ಭಾಷ್ಯದಲ್ಲಿ— "ಜೀವನಾದವನಿಗೆ ಮಂಗಳವನ್ನುಂಟುಮಾಡಲು ಶ್ರೀಹರಿಯೇ ಭಗವತ್ಪೂಜಾರೂಪವಾದ ಕರ್ಮಗಳನ್ನು. ಜೀವಾಧಿಷ್ಠಿತನಾಗಿ ಅವರಿಂದಲೇ ಮಾಡಿಸುತ್ತಾನೆ" —ಎಂದು ತಾತ್ಪರ್ಯ. ಈ ವಿವರಣೆಯನ್ನು ಶ್ರೀಮದಾಚಾರ್ಯರು ತಿಳಿಸಿರುತ್ತಾರೆ. ಈ ಕ್ರಮದಲ್ಲಿ ಜೀವನಿಂದ ಕರ್ಮಾಚರಣೆಗಳು ನಡೆಯುತ್ತಿರುವಾಗ **ಶ್ರೀ** ಪರಮಾತ್ಮನು ಜೀವನಲ್ಲಿಟ್ಟು ಮಾಡಿಸುವ **ಶಕ್ತಿ**ವಿಶೇಷವನ್ನು **ಚಿಂತಿಸ**

ಬೇಕು. ಈ ಅಭಿಪ್ರಾಯದಿಂದ "ಪೂಜ್ಯಪೂಜಕ" ಎಂಬ ವಿಶೇಷಣಗಳನ್ನು ದೃಷ್ಟಾಂತಗಳೊಡನೆ ಪ್ರತಿಪಾದಿಸುತ್ತಾರೆ. "ತನ್ನನ್ನು ತಾನೇ ಪೂಜಿಸುತ್ತಾನೆ. ತಾನೇ ತನ್ನಿಂದ ಪೂಜಿಸಿಕೊಳ್ಳುತ್ತಾನೆ. ಹರಿಯು ಪೂಜ್ಯನೂ ಪೂಜಕನೂ ಎರಡೂ ತಾನೇ ಆಗಿರುತ್ತಾನೆ. ಅವನ ಆ ಪೂಜ್ಯ ಪೂಜಕರೂಪಗಳಿಗೆ ಭೇದವಿಲ್ಲ". ಎಂಬುದೇ ಮುಖ್ಯ ತಾತ್ಪರ್ಯ. ವನರುಹ = ಪದ್ಮ (ಕಮಲ) ॥೧೦॥

## ಙ) "ಗುರುಹೃದಯ ಪ್ರಕಾಶಿಕೆ"— ವ್ಯಾಖ್ಯಾನ :—

ಸೇವ್ಯ ಸೇವಕತ್ವ ಶ್ರೀಹರಿಗೆ ಹೇಗೆಂಬ ಪ್ರಶ್ನೆಗೆ ಉತ್ತರ. ಸದೃಷ್ಟಾಂತ ತಿಳಿಸುತ್ತಾರೆ- "ಜನಕ" —ಎಂದು. ತಂದೆಯು ತನ್ನ ಮಗನಿಗೆ ಉತ್ತಮವಾದ ವಸ್ತ್ರಭೂಷಣಾದಿಗಳನ್ನು ತಾನೇ ತಂದು, ತೊಡಿಸಿ, ಉಡಿಸಿ, ತಾನೇ ತನ್ನ ಕಾಲಮೇಲೆ ಕೆಡವಿಕೊಂಡು, ನಮಸ್ಕಾರ ಮಾಡಿದನೆನ್ನಿಸಿ, ಆಶೀರ್ವದಿಸಿ, ಹರ್ಷಿಸುವಂತೆ, ಕಮಲದಳನೇತ್ರ ಶ್ರೀಹರಿಯು ಪೂಜ್ಯ ಪೂಜಕಾಧಿಷ್ಠಾನದಲ್ಲಿ ಶಕ್ತಿವ್ಯಕ್ತಿಗೈದು, ತಾನೇ ಇದ್ದು. ಪೂಜಾಸಾಧನ ಪದಾರ್ಥನು ತನಗೆ ತಾನೇ ಆಗಿ, ಭಜಕನಿಗೆ ಫಲಗಳನ್ನು ಕೊಡುವನು. ಬಹಿರ್ವ್ಯಾಪ್ತನಾದ್ದರಿಂದ. ಪೂಜಾಸಾಧನವು ಪೂಜೆಗೆ ಉಪಯುಕ್ತಪದಾರ್ಥ ಎಂದರೆ, ತಾನೇ ಆದಹಾಗೆ, ಜೀವರಿಗೆ ಜ್ಞಾನೇಚ್ಛಾಕ್ರಿಯ ಸ್ವಭಾವವಾದ್ದರಿಂದ, ಜೀವರು ಭಜಕರೆಂದು ಆಶಯ. ಹೀಗೆ ಅನಿಮಿತ್ತಬಂಧುತ್ವ ವ್ಯಾಪ್ತಿ ಸಹ ಫಲಿತಾರ್ಥ.

**ಸ್ವವಂದನಂ.......................ಭವೇಜ್ಜೀವಸ್ಯತೇತ್ತೈಪಿ"....** (ಈ ಪ್ರಮಾಣದ ಪೂರ್ಣರೂಪವನ್ನು ಹಿಂದಿನ ವ್ಯಾಖ್ಯಾನಗಳಲ್ಲಿ ಕೊಟ್ಟಿದೆ) —ಎಂಬ **ಗೀತಾ ತಾತ್ಪರ್ಯ**ದ ಅರ್ಥ.

## ಸರ್ವವ್ಯಾಖ್ಯಾನಸಾರಸಂಗ್ರಹ :—

ಜಗತ್ತಿನಲ್ಲಿ ಈಶ,ಜೀವರ ಭಾಂಧವ್ಯವನ್ನು ಜನಕ ಮತ್ತು ಆತ್ಮಜರ ದೃಷ್ಟಾಂತದಿಂದ ಹೃದಯಂಗಮವಾಗಿ ನಿರೂಪಿಸುತ್ತಾರೆ "ಜನಕ" —ಎಂಬ

ಈ ಪದ್ಯದಿಂದ. ಜಗತ್ತಿನಲ್ಲಿ ತಂದೆಯು ತನ್ನ ಮಗನಿಗೆ ಉತ್ತಮವಾದ ವಸ್ತ್ರ ಮತ್ತು ಆಭರಣಾದಿಗಳಿಂದ ತಾನೇ ಅಲಂಕಾರಮಾಡಿ, ಹಾಗೆ ಸರ್ವಾಲಂಕೃತನಾದ ಮಗನಿಂದ ನಮಸ್ಕಾರವನ್ನು ಮಾಡಿಸಿಕೊಳ್ಳುವನು, ಪುತ್ರನ ಶ್ರೇಯಸ್ಸೇ ತಂದೆಯ ಆಕಾಂಕ್ಷೆ, ನಮಸ್ಕರಿಸಿದ ತನ್ನ ಮಗನನ್ನು ಆಶೀರ್ವದಿಸಿ, ಅವನಿಗೆ ಶ್ರೇಯಸ್ಸನ್ನು ಕೋರಿ, ತಂದೆಯಾದವನು ಸಂತೋಷಪಡುವನು. ಅಂತೆಯೇ ಜಗತ್ಸೃಷ್ಟಿಕರ್ತನಾದ ಶ್ರೀ ಪರಮಾತ್ಮನು ಜನಕಸದೃಶ. ಅವನಿಂದ ಸೃಷ್ಟರಾದ ಸಮಸ್ತ ಜೀವವರ್ಗ ಅವನ ಪುತ್ರಸದೃಶ. ಭಗವಂತನು ಸ್ವಭಕ್ತರಿಗೆ ಸಾಧನಕ್ಕೆ ಉಪಯುಕ್ತವಾದ ದೇಹವನ್ನೂ, ಪ್ರಾಪಂಚಿಕ ಭೋಗಕ್ಕೆ ಬೇಕಾದ ಸಾಧನಸಾಮಗ್ರಿಗಳನ್ನು ಒದಗಿಸಿ, ಅವೆಲ್ಲವೂ ಶ್ರೀಹರಿಗೆ ಸಮರ್ಪಿತವೆಂಬ ಉತ್ತಮಾನುಸಂಧಾನವನ್ನಿತ್ತು, ಅವರಿಂದ ಸೇವಾದಿಗಳನ್ನು ಸ್ವೀಕರಿಸಿ, ಅನುಗ್ರಹಿಸುವನು. ಕಮಲದಳಾಯತಾಕ್ಷನಾದ ಜಗತ್ಪ್ರಭುವು ಪ್ರತಿಮಾಂತರ್ಗತನಾಗಿದ್ದುಕೊಂಡು, ಸ್ವಭಕ್ತರಿಂದ ಪೂಜಿಸಲ್ಪಡುತ್ತಾ "ಪೂಜ್ಯ"ನೆನಿಸುವನು. ಅಂತೆಯೇ ಸ್ವೋತ್ತಮರಾದ ಗುರುಹಿರಿಯರಲ್ಲಿ ಮತ್ತು ದೇವತಾವರ್ಗದವರಲ್ಲಿ ಅಂತರ್ಯಾಮಿರೂಪತ್ವೇನ ಆಯಾಯಾ ಅಧಿಷ್ಠಾನಗತನಾಗಿದ್ದು, ಪೂಜಾದಿಗಳನ್ನು ಸ್ವೀಕರಿಸುವುದರಿಂದ, "ಪೂಜ್ಯ" ನಾಗಿದ್ದಾನೆ. ತನ್ನ ಭಕ್ತರಲ್ಲಿ ಅಧಿಷ್ಠಿತನಾಗಿದ್ದು, ಪೂಜೆಯನ್ನು ತಾನೇ ಮಾಡಿ, ಬಿಂಬಕ್ರಿಯಾದ್ವಾರಾ, ಅವರಿಂದ ಮಾಡಿಸಿ, "ಪೂಜಕ"ನೆನಿಸಿದ್ದಾನೆ. ಇದರಿಂದ ಪೂಜ್ಯನೂ ಅವನೇ ಮತ್ತು ಪೂಜಕನೂ ಅವನೇ, ಶ್ರೀ ಪರಮಾತ್ಮನ ಈ ಪೂಜ್ಯ ಪೂಜಕ ಭಗವದ್ರೂಪಗಳಿಗೆ ಭೇದವಿಲ್ಲ. ಗಂಧ, ಪುಷ್ಪ, ತುಳಸೀ ಮುಂತಾದ ಪೂಜಾದ್ರವ್ಯಗಳಲ್ಲಿ ಅಂತರ್ಗತವಾಗಿದ್ದು. ತದ್ವಾರಾ ಪೂಜೆಗೊಳ್ಳುತ್ತಾ ಸ್ವಭಕ್ತರನ್ನು ಅನುಗ್ರಹಿಸಿ, ಸಂತೋಷಪಡಿಸುವನು. ನಿತ್ಯಾನಂದ ಉದ್ರಿಕ್ತ ವಸ್ತುವಾದ ಶ್ರೀಪರಮಾತ್ಮನ ದೆಸೆಯಿಂದ, ಪ್ರತಿಬಿಂಬರಾದ ಜೀವರಿಗೂ ಸಹ ಆನಂದಪ್ರದನು. ಹೀಗೆ ಸ್ವಗತಅಭಿನ್ನ ರೂಪವಿಶೇಷಗಳಿಂದ ತನಗೆ ತಾನೇ ಪೂಜ್ಯ ಪೂಜಕನೆನಿಸಿದ್ದಾನೆ. ಪ್ರತಿಮಾಂತರ್ಗತ ಭಗವದ್ರೂಪಕ್ಕೂ. ಸೇವಕರಾದ ಭಕ್ತರ ಅಂತರ್ಯಾಮಿ ಭಗವದ್ರೂಪಕ್ಕೂ. ಗಂಧ ಪುಷ್ಪಾದಿ ಪೂಜಾ ದ್ರವ್ಯಾಂತರ್ಗತ ಭಗವದ್ರೂಪಗಳಿಗೂ ಐಕ್ಯ ಚಿಂತನೆ ಮಾಡುವುದೇ "ಭಗವತ್ಪೂಜೆ" ಎನಿಸುವುದು. ಹೀಗೆ

ಶ್ರೀಪರಮಾತ್ಮನು ಒಂದು ರೂಪದಿಂದ ಪೂಜಾಸ್ವೀಕಾರ ಮಾಡಿ ಪೂಜ್ಯನೆಂತಲೂ ಮತ್ತೊಂದು ರೂಪದಿಂದ ಪೂಜಿಸುವುದರಲ್ಲಿದ್ದು ಪೂಜಕನೆಂತಲೂ ಕರೆಯಿಸಿಕೊಂಡು, ಸ್ವರಮಣನಾಗಿದ್ದಾನೆ. ಮಗನ ಉಡಿಗೆ ತೊಡಿಗೆಗಳೆಲ್ಲವೂ ತನ್ನ ತಂದೆಯ ಭಾಗ್ಯ. ಅಂತೆಯೇ ಭಕ್ತನ ಸಕಲ ಸಾಧನ ಸಾಮಗ್ರಿಗಳೆಲ್ಲವೂ ಈಶ್ವರಾಧೀನವಾದದ್ದು. ತಂದೆಗೆ ನಮಸ್ಕರಿಸುವುದು ಮಗನ ಶ್ರೇಯಸ್ಸಿಗೆ ಕಾರಣವು. ಅಂತೆಯೇ ಜಗದ್ವಂದ್ಯನಾದ ಶ್ರೀಹರಿಗೆ ಅವನಿಂದಲೇ ದತ್ತವಾದ ತನುಮನಧನಗಳನ್ನು ಅರ್ಪಿಸಲು ಶ್ರೀಹರಿಯು ಸುಪ್ರಸನ್ನನಾಗಿ, ಅವನ ಭಕ್ತಿಭಾವಕ್ಕೆ ಒಲಿದು ಫಲಪ್ರದನಾಗುವನು. ॥೧೦॥

## ಪದ್ಯ (೧೧)

**ಮೂಲ :—**

**ತಂದೆ ಬಹು ಸಂಭ್ರಮದಿ ತನ್ನಯ ।**
**ಬಂಧುಬಳಗವ ನೆರಹಿ ಮದುವೆಯ ।**
**ನಂದನನಗೆ ತಾ ಮಾಡಿ ಮನೆಯೊಳಗಿಡುವ ತೆರನಂತೆ ॥**
**ಇಂದಿರಾಧವ ತನ್ನ ಇಚ್ಛೆಗೆ ।**
**ಲಿಂದೆ ಗುಣಗಳ ಚೇತನಕೆ ಸಂ ।**
**ಬಂಧಗೈಸಿ ಸುಖಾಸುಖಾತ್ಮಕ ಸಂಸ್ಕೃತಿಯೊಳಿಡುವ ॥ ॥೧೧॥**

**ಅವತರಣಿಕೆ:—**

ಮಾಯಾರಮಣನಾದ ಶ್ರೀಹರಿಯು ತನ್ನ ಸಂಕಲ್ಪಮಾತ್ರದಿಂದಲೇ ಜಗತ್ತಿನ ಸೃಷ್ಟ್ಯಾದಿಕಾರ್ಯಗಳನ್ನು ನಿರ್ವಹಿಸುತ್ತಾ, ಅನಾದಿನಿತ್ಯವಾದ ಅಪ್ರಾಕೃತಸ್ವರೂಪದೇಹಕ್ಕೆ ತ್ರಿಗುಣಗಳ ಸಂಬಂಧವನ್ನು ಹಚ್ಚಿಸಿ, ಅವರ ಸಂಸಾರಬಂಧನಕ್ಕೆ ತಾನೇ ಕಾರಣನಾಗಿ ಭವವೆಂಬ ಮಂದಿರದಲ್ಲಿ ಜೀವನನ್ನು

ಇಡುವ ಕ್ರಿಯಾವಿಶೇಷವನ್ನು ಸುಂದರವಾದ ಉಪಮಾನದಿಂದ ವಿವರಿಸುತ್ತಾರೆ. "ತಂದೆ" —ಎಂಬ ಈ ಪದ್ಯದಿಂದ.

**ಪ್ರತಿಪದಾರ್ಥ :—**

**ತಂದೆ** = ತಂದೆಯು (ಪಿತನಾದವನು) **ಬಹು ಸಂಭ್ರಮದಿ** = ಅತ್ಯಂತ ಸಡಗರದಿಂದ (ವೈಭವದಿಂದ) **ತನ್ನಯ** = ತನಗೆ ಸಂಭಂಧಪಟ್ಟ **ಬಂಧು ಬಳಗವ** = ನೆಂಟರಿಷ್ಟರ ಸಮೂಹವನ್ನು **ನೆರಹಿ** = ಒಟ್ಟು ಸೇರಿಸಿದವನಾಗಿ **ನಂದನಗೆ** = ತನ್ನ ಮಗನಿಗೆ **ಮದುವೆಯ** = ವಿವಾಹಮಹೋತ್ಸವವನ್ನು **ತಾ ಮಾಡಿ** = ತಾನೇ ನಿಂತು ನೆರವೇರಿಸಿ **ಮನೆಯೊಳಗಿಡುವ ತೆರನಂತೆ** = ಸಂಸಾರಿಯನ್ನಾಗಿಮಾಡಿ ತನ್ನ ಮನೆಯಲ್ಲಿರಿಸುವೋಪಾದಿಯಲ್ಲಿ **ಇಂದಿರಾಧವ** = ಲಕ್ಷ್ಮೀಪತಿಯಾದ ಶ್ರೀಪರಮಾತ್ಮನು **ತನ್ನ ಇಚ್ಛೆಗಳಿಂದೆ** = ತನ್ನ ಸಂಕಲ್ಪಮಾತ್ರದಿಂದಲೇ **ಗುಣಗಳ** = ಸತ್ವ, ರಜ, ತಮಸ್ಸೆಂಬ ತ್ರಿಗುಣಗಳಿಂದ (ಅಸಂಬಂಧವಾಗಿದ್ದ ಅನಾದಿಲಿಂಗದೇಹಾಖ್ಯ ತ್ರಿಗುಣಗಳನ್ನು) **ಚೇತನಕೆ** = ಸ್ವರೂಪದೇಹಕ್ಕೆ (ಅಸ್ಪೃಶ್ಯರಾಶಿಗತ ಸ್ಥಾವರಜಂಗಮಾತ್ಮಕ ಪ್ರಾಣಿಗಳಿಗೆ) **ಸಂಬಂಧಗೈಸಿ** = ಸಂಬಂಧವನ್ನುಂಟುಮಾಡಿ **ಸುಖ** = ಆನಂದ **ಅಸುಖ** = ದುಃಖ **ಆತ್ಮಕ** = ಉಳ್ಳ (ಹೊಂದಿರುವ) **ಸಂಸ್ಕೃತಿಯೊಳು** = ಸಂಸಾರವೆಂಬ ಅವಸ್ಥೆಯಲ್ಲಿ **ಇಡುವ** = ಇಡತಕ್ಕವನಾಗುವನು. ॥೧೧॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಪಿತನಾದವನು ತನ್ನ ಮಗನಿಗೆ ಅತ್ಯಂತ ಸಂತೋಷದಿಂದ, ಸ್ವಕೀಯ ನೆಂಟರನ್ನೂ ತನ್ನ ಪತ್ನಿಗೆ ಸಂಬಂಧಿಸಿದ ನೆಂಟರನ್ನೂ (ಬಳಗ) ಏಕತ್ರ ಗುಂಪುಕೂಡಿಸಿದವನಾಗಿ, ವಿವಾಹವನ್ನು ತಾನು ಮಾಡಿವನಾಗಿ ಅವನನ್ನು ಮನೆ ವಳಗೆ ಇಡತಾನೆ. ಈ ತಂದೆ ಮಗನೋಪಾದಿಯಲ್ಲಿ. ಅನಾದಿ

ಯಿಂದ ಪುತ್ರರಾದ ಜೀವರಿಗೆ ತಂದೆಯಾದ ಶ್ರೀ ಲಕ್ಷ್ಮೀಪತಿ ನಾರಾಯಣ ದೇವರು ತನ್ನ ಇಚ್ಛೆಗಳಿಂದಲೇ ಒಣಗಿದ ಗಜ್ಜುಗಕ್ಕೆ ಬೀಜ ಹ್ಯಾಂಗೆ ಅಸಂಬಂಧವೋ, ತದ್ವತ್ ಅಸಂಬಂಧವಾಗಿದ್ದ ಅನಾದಿಲಿಂಗದೇಹಾಖ್ಯತ್ರಿಗುಣಗಳನ್ನು ಅಸೃಜ್ಯರಾಶಿಗತ ಸ್ಥಾವರ ಜಂಗಮಾತ್ಮಕ ಪ್ರಾಣಿಗಳಿಗೆ ಸಂಬಂಧ ಮಾಡುತಾನೆ. "ಇಚ್ಛೆಗಳಿಂದಲೇ" ಎಂದು ಬಹುವಚನ ಪ್ರಯೋಗವಿದೆ. ಏಕೆಂದರೆ, ತ್ರಿವಿಧಜೀವರಿಗೆ ತ್ರಿವಿಧಪ್ರಕಾರ ಇಚ್ಛಾದಿಗಳು ಮಾಡಿ, ಆ ಇಚ್ಛಾದಿಂದಲೇ ತನ್ನ ಬಳಗ ಪುರುಷದೇವತೆಗಳು, ತನ್ನ ಪತ್ನೀಬಳಗ ಸ್ತ್ರೀ ದೇವತೆಗಳು, ಇವರನ್ನ ಗುಂಪುಕೂಡಿಸಿ ಎಂದರೆ, ಹಿಂದೆ ಸೃಜ್ಯರಾದ ಸಾಧನಸಂಪತ್ತುಅವಶಿಷ್ಟರಾದ ದೇವತೆಗಳ ಗುಂಪು ಸೇರಿಸಿದವನಾಗಿ ವ್ಯಾಪಾರಾದಿಗಳನ್ನು ಮಾಡತಾನೆ. ಇದರಿಂದ ಬಹುವಚನ ಪ್ರಯೋಗದ ಸಾರ್ಥಕ್ಯ. ಸೃಷ್ಟಿಪ್ರಾರಂಭದಲ್ಲಿ, ಲಿಂಗದಲ್ಲಿ ತನ್ನ ಇಚ್ಛಾದಿಂದ ಬೆವರೋದಕ ಉತ್ಪತ್ತಿ ಮಾಡಿ, ತದ್ವಾರಾ ತೊಯ್ದ ವಸನ ದೇಹಕ್ಕೆ ಸಂಬಂಧವಾದರೆ ಹ್ಯಾಂಗೋ ಹಾಂಗೆ ಸಂಬಂಧಗೈಸಿ ಮತ್ತು ಮೂಲ ಜಡಪ್ರಕೃತಿ ಗುಣತ್ರಯಂಗಳಿಂದ ಗುಣತ್ರಯಾತ್ಮಕ ಸ್ಥೂಲದೇಹವನ್ನ, ಪೂರ್ವೋಕ್ತಪ್ರಕಾರ ತತ್ವೇಶರೆಂಬ ಉಭಯವಿಧ ಬಳಗಗಳ ಸೇರಿಸಿ, ಸಂಬಂಧಗೈಸಿ, ಏತಾದೃಶವಾದ ದೇಹಾಖ್ಯ ಕನ್ಯಾಸಂಬಂಧಾಖ್ಯ ಮದುವೆಯ ಮಾಡಿಸಿ (ಲೋಕದೃಷ್ಟಾಂತದಲ್ಲಿ ಪುತ್ರನು ಕೆಲವು ಕಾಲಾನಂತರ ದಾರಾನ ಬಿಟ್ಟು ಮೃತಿ ಐದಿ ಪರಲೋಕದಲ್ಲಿ ತನ್ನ ಯೋಗ್ಯಸ್ಥಾನ ಸೇರಿದೋಪಾದಿಯಲ್ಲಿ) ಶ್ರೀ ಪರಮಾತ್ಮನಿಂದೆ ಪೂರ್ವೋಕ್ತಪ್ರಕಾರ ಸಂಬಂಧಮಾಡಿಸಿಕೊಂಡಂಥಾ ತ್ರಿವಿಧ ಜೀವರು ಪ್ರಳಯಕಾಲದಲ್ಲಿ. ಸ್ಥೂಲದೇಹ ಮತ್ತುಲಿಂಗದೇಹ ಬಿಡುವವರಾಗತ್ತಾರೆ. ಆನಂತರ ಪರಮಾತ್ಮ ಲಿಂಗಭಂಗಾನಂತರ ತ್ರಿವಿಧ ಜೀವರಿಗೆ, ಭಗವದ್ಭಕ್ತರಿಗೆ ಸುಖವಾದ ವೈಕುಂಠದಲ್ಲಿ ನಿತ್ಯವಾದ ಸ್ವರೂಪಸುಖ— ಭಗವದ್ವೇಷಿಗಳಿಗೆ ದುಃಖವಾದ ಅಂಧಂತಮಲೋಕದಲ್ಲಿ ನಿತ್ಯವಾದಸ್ವರೂಪದುಃಖ— ಈ ಉಭಯಮಿಶ್ರವಾದ ನಿತ್ಯಸಂಸಾರಿಗಳಿಗೆ ಸಾಂತಾನಿಕ ಲೋಕಗಳಲ್ಲಿ ಸುಖದುಃಖಗಳ ಮಿಶ್ರಫಲ ಕೊಡೋವನಾಗತಾನೆ.

ಪಾವಳ ಹೆಗ್ಗೆಳ ಇಡ್. ಎಚ್ಚರ.

**ವಿಶೇಷಾರ್ಥ :—**

ಆಯಾ ಲೋಕಗಳಲ್ಲಿ ಪ್ರಳಯಕಾಲದವರೆಗೂ ಅನುಭವಿಸುತಾ, ಪ್ರಳಯದಲ್ಲಿ ಮುಕ್ತಾಮುಕ್ತ ತ್ರಿವಿಧಜೀವರು ಶ್ರೀನಾರಾಯಣದೇವರ ಉದರಪ್ರವಿಷ್ಟರಾಗತಾರೆ. ಸೃಷ್ಟಿಕಾಲಕ್ಕೆ ಪುನಶ್ಚ ಹೊರಗೆ ಹೊರಟು ಅವ ರವರ ಸ್ಥಾನಗಳ ಸೇರಿ, ಅವರವರ ಸ್ವರೂಪಭೂತವಾದ ಸುಖದುಃಖಗಳ ಅನುಭವಿಸತಾ ಇರತಾರೆ. ಆಯಾ ಸ್ಥಾನಗಳ ಬಿಟ್ಟು ಉದರಪ್ರವೇಶ ಮಾಡೋ ಣದರಿಂದ ಸ್ವರೂಪಕ್ಕೆ ಹತ್ತಿರ ಸುಖದುಃಖಮಿಶ್ರಲೇಪವಾಗದೇ ಯಥಾ ಪ್ರಕಾರ ಇರತವೆ.

ನಿತ್ಯಸಂಸಾರಿಗಳಿಗೆ ಲಿಂಗಭಂಗವುಂಟು. ಎಂಬದಕ್ಕೆ ಪ್ರಮಾಣ—
**ಪ್ರಕಾಶ ಸಂಹಿತಾಯಾಂ—**

**ನಿತ್ಯ ಸಂಸಾರಿಣಃ ಪೃಥ್ವ್ಯಾಂ ತ್ಯಕ್ತ್ವಾ ಸ್ಥೂಲಂ ತು ಸೂಕ್ಷ್ಮತಃ |**
**ಧರ್ಮೇ ಪ್ರವಿಶ್ಯ ಸಂತ್ಯಕ್ತ್ವಾಽನಾದ್ಯವಿದ್ಯಾ ಭವಂತಿ ಹಿ ||**

**ಕೇಚಿದತ್ರೈವ ಮುಚ್ಯಂತೇ ಕೇಚಿದ್ವೈ ಮೇರುಮೂರ್ಧನಿ |**
**ವೈಶ್ವಾನರೇ ದ್ಯುನದ್ಯಾಂ ಸೂರ್ಯೇವಾ ವಾಯೂವೇವ ವಾ ||**

**ತ್ಯಕ್ತ್ವಾಽವಿದ್ಯಾ ಮಿಶ್ರಪಾಕಾಲ್ಲಿಯೇ ನಾಭೌ ಹರೇಃ ಗತಾಃ |**
**ಸ್ವರ್ಗಭೂಮ್ಯಾದಿಷು ಸ್ಥಿತ್ವಾ ಭ್ರಮಂತಿ ಶ್ರೀಹರೀಚ್ಛಯಾ ||**

**—ಇತಿ ಪ್ರಥಮಪರಿಚ್ಛೇದೇ ತ್ರಯೋದಶೋಽಧ್ಯಾಯಃ ||**

**ನಿರಂಶಮರ್ತ್ಯಗಂಧರ್ವಪೂರ್ವಾಃ ಸರ್ವೇ ತೃಣಾಂತಕಾಃ |**
**ಯೋಗ್ಯಾ ನಿತ್ಯಸ್ಮೃತಿಸ್ಯಾಶ್ಚ ತಮೋಯೋಗ್ಯಾಶ್ಚ ಕೃತ್ಸ್ನಶಃ ||**

**ಸರ್ವೇಽಪ್ಯೇವಂ ಲಿಂಗಬದ್ಧಾಃ ಏವಂ ಜೀವಂ ನ ಚಾನ್ಯಥಾ |**
**ತೇಷು ಪೂರ್ವಾನಂತಕಲ್ಪೇಷ್ವಪಿ ಸ್ವೋಚಿತಸಾಧನೈಃ ||**

ಮುಕ್ತಾ ಮಧ್ಯಸ್ತಮಾಃ ಪ್ರಾಪ್ತಾಃ ಸಂತಿ ಶ್ರೀಹರಿಗರ್ಭಗಾಃ ।
ಸಂತಿ ಸೃಜ್ಯಾ ಹ್ಯನಂತೋರುರಾಶಯಸ್ಸಂತಿ ಲಿಂಗಗಾಃ ॥

—ಇತಿ ಪ್ರಥಮಪರಿಚ್ಛೇದೇ ಪಂಚಮೋಽಧ್ಯಾಯಃ ॥

ಸಂಸಾರಿಣಾಂ ತು ಯಲ್ಲಿಂಗಂ ಹೂಂಕಾರೇಣ ವಿನಶ್ಯತಿ ।
ನಿತ್ಯಸಂಸಾರಿಣಸ್ತತ್ರ ಹೂಂಕಾರೇಣೈವ ಸರ್ವಶಃ ॥
ಲಿಂಗಭಂಗಂ ಪ್ರಾಪಯಿತ್ವಾ ದೇಶೇ ಪ್ರಾಗ್ಭೈರಿಣಸ್ತಥಾ ।
ಯಥಾಕಾಮಂ ಮಿಶ್ರಫಲಂ ಭೋಕ್ತಾರಃ ಸ್ವರ್ಗಮಾಸ್ಥಿತಾಃ ॥

ಪುನಃ ಭೂಮಿಂ ಗತಾಸ್ತೇ ತು ನರಕೇ ಚ ಪತ್ಯಂತ್ಯಹೋ।
ನೈಕತ್ರ ಸಂಸ್ಥಿತಾಃ ಸರ್ವೇ ಪುನರ್ಜನ್ಮ ವಿವರ್ಜಿತಾಃ ॥
ಲಯಹೀನಾ ಭವತ್ಯದ್ಧಾ ಮಿಶ್ರಾಮೇವ ಫಲಂ ತದಾ ।
ಏಕಸ್ಮಿನ್ನೇವ ಕಾಲೇ ತು ಭುಂಜಂತೇ ಕಾಮಚಾರಿಣಃ ॥

—ಇತಿ ಗಾರುಡೇ ॥

ವಾಸುದೇವೋಽಭವದ್ದೇವಃ ಮಾಯಯಾ ಪ್ರಿಯಯಾ ಯುತಃ ।
ಸರ್ವಮುರ್ವಾರುಕಮಿವ ಮೋಚಯೇದ್ಯೋನಿಸಂಭವಾತ್ ॥

—ಇತಿ ಸಂಗ್ರಹರಾಮಾಯಣೇ ಬಾಲಕಾಂಡೇ ಪ್ರಥಮಸರ್ಗಃ ॥

(೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :—

ತಂದೆಯು ತನ್ನ ಮಗನಿಗೆ ಮದುವೆಯನ್ನು ಮಾಡಬೇಕೆಂಬ ಇಚ್ಛೆಯು ತನಗೆ ಬಂದಾಗ, ಬಂಧುಬಳಗಗಳನ್ನು ಕರೆಕಳುಹಿಸಿ ಬಹು ಸಂಭ್ರಮದಿಂದ ಮದುವೆಯನ್ನು ಮಾಡಿ, ಆ ದಂಪತಿಗಳನ್ನು ಮನೆಯಲ್ಲಿರಿಸಿ, ಸಂಸಾರಿಯನ್ನಾಗಿ ಹೇಗೆ ಮಾಡುವನೋ, ಹಾಗೆಯೇ ಶ್ರೀ ಲಕ್ಷ್ಮೀಪತಿಯು ತನ್ನ ಇಚ್ಛಾನುಸಾರವಾಗಿ ತನ್ನ ಮಕ್ಕಳಂತಿರುವ ಸಾತ್ವಿಕ, ರಾಜಸ, ತಾಮಸರೆಂಬ ಮೂರುವಿಧ ಜೀವರಾಶಿಗಳಿಗೂ ಬುದ್ಧಿ ಎಂಬ ಹೆಂಡರನ್ನು ಮದುವೆ ಮಾಡಿ

ಸುವನು. ಬಂಧು ಒಳಗಗಳು ತತ್ವಾಭಿಮಾನಿ ದೇವತೆಗಳು. ಸ್ಥೂಲಶರೀರವೇ ಮನೆಯು, ಇದರಲ್ಲಿ ಸಾತ್ವಿಕರಿಗೆ ದೇವತಾದಿ ಶರೀರಗಳನ್ನೂ, ರಾಜಸರಿಗೆ ಮನುಷ್ಯಶರೀರವನ್ನೂ, ತಾಮಸರಿಗೆ ದೈತ್ಯಾದಿಶರೀರಗಳನ್ನೂ ಕೊಡಿಸಿ, ಅವರವರ ಸಾಧನಗಳನ್ನು ಪೂರ್ತಿಮಾಡಿಸುವುದಕ್ಕಾಗಿ ಸುಖದುಃಖ ಮಿಶ್ರವಾದ ಸಂಸಾರದಲ್ಲಿಡುವನು.

**ವಿಶೇಷಾರ್ಥ :—**

ಈ ಪದ್ಯದಲ್ಲಿ ದಾಸರಾಯರು— "ಗುಣಗಳ ಚೇತನಕೆ ಸಂಬಂಧಗೈಸಿ, ಸುಖಾಸುಖಾತ್ಮಕ ಸಂಸೃತಿಯೊಳಿದುವ" ಎಂದು ಹೇಳಿರುವರು. ಇದಕ್ಕೆ ಅರ್ಥವನ್ನು ಸತ್ವ ರಜಸ್ತಮೋಗುಣಗಳನ್ನು ಚೇತನರಿಗೆ ಸಂಬಂಧಪಡಿಸಿ ಉಂಟುಮಾಡಿದರೆ, ಜೀವರು ಅನಾದಿಕಾಲದಿಂದಲೂ ಸತ್ವಾದಿಗುಣಸಂಬಂಧವಾದ ಸ್ವರೂಪದೇಹದಿಂದ ಕೂಡಿಯೇ ಇರುವರು. ಗುಣಗಳನ್ನು ಬಿಟ್ಟು ಚೇತನರೇ ಇಲ್ಲವೇದು ಶ್ರೀಮದಾಚಾರ್ಯರ ವಾಕ್ಯವಿರುವುದು.

✓ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ— "ದೃಷ್ಟ್ವಾ ಸಚೇತನ ಗಣಾನ್ ಜಠರೇಶಯನಾನಂದ ಮಾತ್ರವಪುಷಃ ಸೃತಿ ವಿಪ್ರಮುಕ್ತಾನ್ । ಧ್ಯಾಸಂ ಗತಾನ್ ಶ್ರುತಿಗತಾಂಶ್ಚ ಸುಷುಪ್ತಿಸಂಸ್ಥಾನ್ ಬ್ರಹ್ಮಾದಿಕಾನ್ ಕಲಿ ಪರಾನ್ ಮನುಜಾಂಸ್ತ್ರಥೈಕ್ಷತ್"—

—ಎಂದರೆ ಶ್ರೀಪರಮಾತ್ಮನು ತನ್ನ ಜಠರದಲ್ಲಿ ಶಯನ ಮಾಡಿರುವ ಬ್ರಹ್ಮದೇವರು ಮೊದಲಾದ ದೇವತೆಗಳು, ಕಲಿಪರ್ಯಂತರಾದ ದೈತ್ಯರುಗಳು, ಮನುಷ್ಯರು ಈ ಮೂರುವಿಧ ಜೀವರಾಶಿಗಳನ್ನೂ ಕೇವಲ ಆನಂದಮಾತ್ರಸ್ವರೂಪಿಗಳಾದ ಮುಕ್ತರನ್ನೂ ಸಹ ನೋಡಿ, ಸೃಷ್ಟಿಮಾಡಲು ಇಚ್ಛಿಸಿದನು. ಆದಕಾರಣ ಅನಾದಿಕಾಲದಿಂದಲೂ ಜೀವರು ತ್ರಿವಿಧರೆಂದು ಸಿದ್ಧವಾಗುವುದು.

✓ ವಿಷ್ಣುರಹಸ್ಯದಲ್ಲಿ :— "ಸೃಷ್ಟ್ಯಾದಿಕುರುತೇ ಸರ್ವಮನ್ಯಥಾ

ತದ್ದಯಾಳುತಾ || ವ್ಯಾಹನ್ಯೇತ ತಥಾಪ್ಯನ್ಯಾನ್ಸ್ವೀವಾನ್ಮಧ್ಯಮತಾನು ಸಾನ್ || ಸೃಜತ್ಯವಹತಿ ಹಂತ್ಯೇವ ಭಕ್ತಾನಾಂ ಭಕ್ತಿವೃದ್ಧಯೇ || ಏವಂ ಸಾತ್ವಿಕ ಮಧ್ಯಸ್ಥ ತಾಮಸಾಂಸ್ತ್ರಿವಿಧಾನಪಿ || ಸೃಜತ್ಯವತಿ ಹಂತೀಶೋ ಲೀಲಯಾ ಭಕ್ತವತ್ಸಲಃ || ಅನಾದಿಕಾಲ ತತ್ಸೇವ ಸಂಕಲ್ಪೋ ಜಗಧೀಶಿತುಃ ||"

—ಅಂದರೆ ದಯಾಳುವಾದ ಶ್ರೀಪರಮಾತ್ಮನು ಸರ್ವಜಗತ್ತನೂ ಸೃಷ್ಟಿಮಾಡುವನು. ಇಲ್ಲವಾದರೆ ಪರಮಾತ್ಮನ ದಯಾಳುತ್ವಕ್ಕೆ ಹಾನಿ ಬಂದೀತು. ಆದುದರಿಂದ ಬ್ರಹ್ಮಾದಿ ಸಾತ್ವಿಕರನ್ನು ಮಾತ್ರ ಸೃಷ್ಟಿಸದ ಇತರ ರಾದ ಮಧ್ಯಮ ತಾಮಸರನ್ನು ಸಹ, ಸೃಷ್ಟಿಮಾಡಿ, ಸಂರಕ್ಷಿಸಿ. ಕೊನೆಗೆ ಸಂಹರಿಸುವನು.

ಹೀಗೆಯೇ ಅನಾದಿಕಾಲದಿಂದಲೂ ಅವನ ಸಂಕಲ್ಪವು ಎಂದು ಹೇಳಿರು ವರು, ಈ ಪ್ರಮಾಣಗಳಿಂದ ಜೀವರ ಅನಾದಿಯಿಂದಲೂ ತ್ರಿವಿಧರೆಂದು ಏರ್ಪಡುವರು. ಹೀಗಿರಲು ದಾಸರಾಯರ ಮತವು ಸೃಷ್ಟಿಕಾಲದಲ್ಲಿ ಶ್ರೀ ಪರಮಾತ್ಮನು ಗುಣಗಳನ್ನು ಜೀವರಿಗೆ ಸಂಬಂಧಪಡಿಸುವನೆಂದರೆ, ಪರಮಾ ತ್ಮನು ಗುಣಗಳನ್ನು ಜೀವರಿಗೆ ಸಂಬಂಧಪಡಿಸುವನೆಂದರೆ, ಪರಮಾತ್ಮನೇ ಜೀವರಲ್ಲಿ ಕೆಲವರನ್ನು ಸಾತ್ವಿಕರನ್ನಾಗಿಯೂ ಕೆಲವರನ್ನು ರಾಜಸರನ್ನಾ ಗಿಯೂ, ಮತ್ತೆ ಕೆಲವರನ್ನು ತಾಮಸರನ್ನಾಗಿಯೂ ತನ್ನಿಚ್ಛಾನುಸಾರವಾಗಿ ಮಾಡುವನೆಂದರ್ಥಮಾಡಿದರೆ, ಶ್ರೀಮದಾಚಾರ್ಯರ ಸಿದ್ಧಾಂತಕ್ಕೆ ವಿರೋಧ ವಾಗುವುದು. ಆದುದರಿಂದ ಗುಣಗಳ ಅಂದರೆ, ತತ್ಸಂಬಂಧವಾದ ಸ್ಥೂಲ ಶರೀರಗಳೆಂದು ಅರ್ಥಮಾಡು ಕಾರಣವಾಯಿತು. ಸಾತ್ವಿಕಜೀವರಿಗೆ ಸತ್ವಗುಣ ಸಂಬಂಧವಾದ ದೇವಾದಿಶರೀರಗಳನ್ನೂ, ರಾಜಸರಿಗೆ ರಜೋಗುಣ ಸಂಬಂಧವಾದ ಮಾನವದೇಹಗಳನ್ನೂ ಮತ್ತು ತಾಮಸರಿಗೆ ತಮೋಗುಣ ಸಂಬಂಧವಾದ ದೈತ್ಯಾದಿಶರೀರಗಳನ್ನೂ ಕೂಡಿಸುವನೆಂದು ಅರ್ಥಮಾಡಿ ದರೆ, ನಿರ್ಣಯವಾಕ್ಯಕ್ಕೂ ವಿಷ್ಣುರಹಸ್ಯದ ವಾಕ್ಯಗಳಿಗೂ ಅರ್ಥವು ಸರಿ ಹೋಗುವುದು. ತತ್ವದೇವತೆಗಳೆಂಬ ಬಂಧುಗಳಿಂದ ಕೂಡಿದ ಶರೀರಗಳೆಂಬ

ಮನೆಗಳಲ್ಲಿಟ್ಟು, ಜೀವರಿಗೆ ಶಬ್ದ ಸ್ಪರ್ಶಾದಿ ಗುಣಗಳನ್ನು ಸಂಬಂಧಿಸಿ, ಸುಖದುಃಖಮಿಶ್ರವಾದ ಸಂಸಾರದಲ್ಲಿಟ್ಟು, ಸಾಧನ ಪೂರ್ತಿಯಾದಮೇಲೆ ಸಾತ್ವಿಕರಿಗೆ ಸುಖಾತ್ಮಕವಾದ ಮುಕ್ತಿಯನ್ನೂ, ತಾಮಸರಿಗೆ ದುಃಖಾತ್ಮಕ ವಾದ ತಮಸ್ಸನ್ನೂ ಮತ್ತು ಮಧ್ಯಮರಿಗೆ ಮಿಶ್ರವಾದ ನಿತ್ಯಸಂಸಾರವನ್ನೂ ಕೊಡಿಸುವನೆಂದರ್ಥವು. ॥೧೧॥

## (೩) "ಭಾವದರ್ಪಣಟೀಕಾ"— ವ್ಯಾಖ್ಯಾನ :

**"ಸ್ವಭಾವಾಖ್ಯಾ ಯೋಗ್ಯತಾಯಾ ಹಠಾಖ್ಯಾ ಯಾನಾದಿಸಿದ್ಧಾ ಸರ್ವಜೀವೇಷು ನಿತ್ಯಾ"** —ಎಂಬಂಥ ಹಠವಾದಾನುಸಾರ ದಾವದಾವ ಚೇತನಕ್ಕೆ ದಾವ ದಾವ ಸಂಬಂಧಿಸಬೇಕೋ ಆ ರೀತಿ ಶ್ರೀಹರಿಮಾಡತಾನೆಂದು ಹೇಳತಾರೆ— "ತಂದೆ" —ಎಂಬ ಪದ್ಯದಿಂದ.

ಚೇತನಕೆ = ಜೀವರಿಗೆ. ನೆರಹಿ = ಕಲೆಹಾಕಿ (ಕೂಡಿಸಿ) ಸಂಸ್ಮೃತಿ = ಸುಖದುಃಖಮಿಶ್ರವಾದ ಸಂಸಾರ ಎಂದರ್ಥ, ॥೧೧॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ— (ಸಂಸ್ಕೃತಮೂಲ) :—

ಈ ವೇತ್ಯುಕ್ತ ಭಕ್ತ ಸತ್ಕರಣಂ ತಸ್ಯೈವೇತಿ ಬ್ರೂತೇ ॥ ತಂದೀತಿ ॥ ಗುಣಾಃ ತದಾತ್ಮದೇಹಾಃ ॥೧೧॥

**ಕನ್ನಡಾನುವಾದ :—**

ಫಲಪ್ರದನಾದ ಶ್ರೀಹರಿಯು "ಭಕ್ತಸತ್ಕರಣ" ಅಂದರೆ ಸ್ವಭಕ್ತಜನ ರನ್ನು ಸತ್ಕರಿಸುವುದು, ಎಂಬ ಈ ಗುಣವಿಶೇಷಾನ್ವಿತನೆಂದು ಹೇಳುತಾರೆ, "ತಂದೆ" ಎಂಬ ಈ ಪದ್ಯದಿಂದ.

"ಇಂದಿರಾಧವ ತನ್ನ ಇಚ್ಛೆಯಿಂದಲಿ ಗುಣಗಳ ಚೇತನಕೆ ಸಂಬಂಧ ಗೈಸಿ" ಎಂಬ ವಚನದಲ್ಲಿರುವ ಗುಣಗಳು ಯಾವುವೆಂದರೆ, ಸತ್ವಾದಿ

ಗುಣಾತ್ಮಕವಾದ ಮಾನವಾದಿ ದೇಹಗಳು ಎಂದರ್ಥ. ಇಂಥ ಶರೀರಗಳ ಸಂಬಂಧವನ್ನು ಹೊಂದಿಸಿ, ಅಂದರೆ, ದೇಹಸಂಯೋಗರೂಪವಾದ ಜನ್ಮಾದಿ ಗಳನ್ನು ಕೊಟ್ಟು ಸುಖದುಃಖರೂಪವಾದ ಸಂಸಾರದಲ್ಲಿ ಇಡುತ್ತಾನೆ –ಎಂದು ಈ ಪದ್ಯದ ಭಾವಾರ್ಥ ॥೧೧॥

## (ಆ) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ:

ದೇವರು ಜೀವರನ್ನು ಬಂಧಿಸುವ ಪ್ರಕಾರವನ್ನು ಸದೃಷ್ಟಾಂತ ತಿಳಿಸುತ್ತಾರೆ– "ತಂದೆ" ಎಂದು ತಂದೆಯು ಹರ್ಷದಿಂದ ಬಂಧುಬಳಗ ವೆಂಬ ನೆಂಟರಿಷ್ಟರನ್ನು ಕರೆಸಿ, ಮೇಳನಮಾಡಿ, ಮಗನಿಗೆ ವಿವಾಹ ಮಾಡಿಸಿ, ಪತಿ ಎಂಬ ಅಭಿಮಾನ ಅವನಿಗೆ ಹುಟ್ಟಿಸಿ, ಮನೆಯಲ್ಲೂ ಅಭಿಮಾನ ಹುಟ್ಟಿಸುವಂತೆ. ಲಕ್ಷ್ಮೀಪತಿಯು ತನ್ನ ಸ್ವತಂತ್ರೇಚ್ಛೆಯಿಂದ ತತ್ವಾಭಿಮಾನಿಗಳೆಂಬ ಬಂಧುಬಳಗ ನೆರವಿಟ್ಟು, ತ್ರಿಗುಣಗಳನ್ನು ಜೀವನಿಗೆ ಸಂಬಂಧಗೈಸಿ, ಎಂದರೆ, ಸತ್ವಗುಣದಿಂದ ನಾನೇ ಸ್ವಾಮಿ ಎಂಬ ಅಭಿಮಾನ, ರಜೋಗುಣದಿಂದ ಜ್ಞಾನೇಂದ್ರಿಯಗಳಿಂದ ನಾನು ತಿಳಿವೆ, ಕರ್ಮೇಂದ್ರಿಯಗಳಿಂದ ನಾನು ಆಚರಿಸುವೆನೆಂಬ ಕರ್ತೃತ್ವಾಭಿಮಾನ. ತಮೋಗುಣದಿಂದ ದೇಹ ನಾನು ನನ್ನದೆಂಬ ಮಿಥ್ಯಾಭಿಮಾನ ಸಹ ಜೀವರಿಗೆ ತಗುಲಿಸಿ, ಸುಖದುಃಖಾತ್ಮಕ ಅಲೆದಾಟದಲ್ಲಿಡುವನು. ಹೀಗೆ ಬಂಧಕನಾ ಗಿಯೂ ವ್ಯಾಪ್ತನೆಂದು ಹೃದಯ.

"ಕಾರ್ಯಕಾರಣ ಕರ್ತೃತ್ವೇ ದ್ರವ್ಯಜ್ಞಾನಕ್ರಿಯಾಶ್ರಿಯೋಃ ।
ಬಧ್ನಂತಿ ನಿತ್ಯದಾ ಮುಕ್ತಂ ಮಾಯಿನಂ ಪುರುಷಂ ಗುಣಾಃ ॥"

—ಎಂಬ ಭಾಗವತೋಕ್ತಿ ಇದರಿಂದ ವಿವೃತವಾಯಿತು ॥೧೧॥

### ಸರ್ವವ್ಯಾಖ್ಯಾನಸಾರಸಂಗ್ರಹ :—

ಜೀವವರ್ಗಕ್ಕೆ ಬಂಧಕನೂ ಮತ್ತು ಮೋಚಕನೂ ಆದ ಶ್ರೀಪರಮಾತ್ಮನ ಮಹಿಮಾವಿಶೇಷಗಳನ್ನು ಸೂಕ್ಷ್ಮವಾದ ದೃಷ್ಟಾಂತರದಿಂದ ವಿವರಿಸುತ್ತಾರೆ.

ಜಗತ್ತಿನಲ್ಲಿ ತಂದೆ ಮತ್ತು ಮಗನಿಗಿರುವ ಪರಸ್ಪರ ಸಂಬಂಧ. ತಂದೆಯಾದವನು ತನ್ನ ಮಗನು ಪ್ರಾಪ್ತವಯಸ್ಕನಾದಮೇಲೆ, ಅವನಿಗೆ ಉತ್ತಮಕುಲದಿಂದ ಕನ್ಯಾಮಣಿಯನ್ನು ತಂದು, ಅತ್ಯಂತ ವೈಭವದಿಂದ ತನ್ನ ಬಂಧುಬಳಗ ಸಮಸ್ತಪರಿವಾರವನ್ನು ಆಮಂತ್ರಿಸಿ, ಅವರಿಂದೊಡಗೂಡಿ, ವಿವಾಹಮಹೋತ್ಸವವನ್ನು ನೆರವೇರಿಸುವನು. ನಂತರ ಅವನನ್ನು ಗೃಹಸ್ಥನನ್ನಾಗಿಮಾಡಿ, ತನ್ನ ಮನೆಯಲ್ಲಿಡುವನು, ಅಂತೆಯೇ ಜಗತ್ಸೃಷ್ಟಿಕರ್ತನಾದ ಶ್ರೀ ಪರಮಾತ್ಮನು ಜನಕಸದೃಶ. ಅವನಿಂದ ಸೃಷ್ಟರಾದ ನಿಖಿಳ ಜೀವವರ್ಗ ಪುತ್ರಸದೃಶರು, ತಂದೆಗೆ ಮಗನಲ್ಲಿ ಅಭಿಮಾನ ಸ್ವಾಭಾವಿಕ, ಅಂತೆಯೇ ಅನಿಮಿತ್ತಬಂಧುವಾದ ಶ್ರೀಹರಿಗೆ ತನ್ನ ಭಕ್ತರಮೇಲೆ ಅಪಾರ ಕಾರುಣ್ಯ, ಜೀವರ ಉದ್ಧಾರಾರ್ಥವಾಗಿ ಅಂದರೆ, ಅವರವರ ಗತಿಗಳ ನೀಡಲೋಸುಗ, ಜಗತ್ತಿನ ಸೃಷ್ಟ್ಯಾದಿವ್ಯಾಪಾರವಿಶೇಷಗಳು. ಇದೇ ಆ ಕರುಣಾಮಯನ ಲೀಲಾವಿಲಾಸ ಮತ್ತು ಕ್ರೀಡಾ ವೈಭವ ಅನಾದಿಕಾಲದಿಂದ ಲಿಂಗದೇಹಬದ್ಧರಾದ ಜೀವರನ್ನು ಅಸೃಜ್ಯರಾಶಿಯಿಂದ ತೆಗೆದು ಸೃಷ್ಟಿಗೆ ತರುತ್ತಾನೆ. ಜೀವನ ಸ್ವರೂಪದೇಹವಾದರೋ ಅಪ್ರಾಕೃತ ಚಿದಾನಂದಾತ್ಮಕವಾದದ್ದು ಆದರೆ ಆ ಸ್ವರೂಪದೇಹಕ್ಕೆ ಆವರ್ಕವಾಗಿ ಲಿಂಗಶರೀರವಿದೆ. ಇದು ಮೂಲಜಡಪ್ರಕೃತಿಯಿಂದ ಅಭಿಮನ್ಯಮಾನವಾದದ್ದು. ಅಂದರೆ ಸತ್ವರಜಸ್ತಮೋಗುಣಗಳೆಂಬ ತ್ರಿಗುಣಗಳಿಂದ ಯುಕ್ತವಾಗಿದೆ. ಚೇತನಕ್ಕೆ ಈ ತ್ರಿಗುಣಗಳ ಸಂಬಂಧವನ್ನು ಉಂಟುಮಾಡುವುದೇ ಆ ಭಗವಂತನ ಅಚಿಂತ್ಯಾದ್ಭುತಶಕ್ತಿಗೆ ಒಂದು ನಿದರ್ಶನ. ಭಗವದಿಚ್ಛೆಯಿಂದ ತ್ರಿಗುಣಗಳ ಸಂಬಂಧದಿಂದ ಜೀವನಲ್ಲಿ ಅಹಂ ಮಮತಾದಿಗಳು ಅಭಿವ್ಯಕ್ತವಾಗುವುವು. ಇಂತಹ ತ್ರಿಗುಣಗಳ ಭವಣೆಯೇ ಅಕ್ಷಯವಾದ ಹಾಗೂ ದುಸ್ತರವಾದ ಸಂಸಾರಸಾಗರ, ಇಂತಹ ಅಗಾಧವಾದ ಭವಸಾಗರದ ಸುಳಿಯಲ್ಲಿ ಸಿಕ್ಕು ಜೀವರು ಗತಿಕಾಣದೆ ಪರಿತಪಿಸುತ್ತಿರುವರು ಇಂತಹ ಭವಸಾಗರದಿಂದ ದಾಟಲು ಇರುವ ಏಕೈಕ ಉಪಾಯವೆಂದರೆ ಶ್ರೀ ಪರಮಾತ್ಮನ ಅನುಗ್ರಹ ವಿಶೇಷವು. ಭವಬಂಧಕನೂ ಅವನೇ ಆಗಿರುವುದರಿಂದ ಭವವಿಮೋಚನೆಯೂ ಸಹ ಆತನ ಕರುಣಾತಿಶಯದಿಂದಲೇ

ಆಗಬೇಕು. ಅನ್ಯಥಾಮಾರ್ಗವೇ ಇಲ್ಲ. ಇದಕ್ಕಾಗಿ ಪರಮಕರುಣಾಮಯನಾದ ಆ ಜಗತ್ಸ್ವಾಮಿಯು ಜೀವರಿಗೆ ಸಾಧನ ಶರೀರಗಳನ್ನು ಕೊಟ್ಟು, ಇಂದ್ರಿಯ ಗಳದ್ವಾರಾ ಸಕಲ ವ್ಯಾಪಾರಗಳನ್ನೂ ತಾನೇ ಬಿಂಬರೂಪದಿಂದ ಮಾಡಿ, ಜೀವರದ್ವಾರಾ ಮಾಡಿಸುವನು. ತಂದೆಯು ಮಗನಿಗೆ ವೈಭವದಿಂದ ಲಗ್ನ ವನ್ನು ನೆರವೇರಿಸಿ, ಸಂಪತ್ತುಗಳನ್ನು ಕೊಡುವಂತೆ, ಜಗಜ್ಜನ್ಮಾದಿಕಾರಣ ನಾದ ಜಗತ್ಪ್ರಭುವು ತನ್ನ ಜೀವರಿಗೆ ಸಕಲಸಾಧನಸಂಪತ್ತುಗಳನ್ನೂ ಒದ ಗಿಸಿರುವನು. ತತ್ವಾಭಿಮಾನಿಗಳಿಂದ ಈ ದೇಹಗತ ಇಂದ್ರಿಯಗಳ ವ್ಯಾಪಾರ ಗಳು, ಅವರೇ ಜೀವನಿಗೆ ಆಪ್ತಬಂಧುಗಳು. (ಬಂಧುಬಳಗದ ಕೂಟ) ಪರಮಾಪ್ತ ಬಂಧುವಾದ ಬಿಂಬರೂಪೀ ಶ್ರೀಹರಿಯು ಸರ್ವಚೇತನವರ್ಗಕ್ಕೆ ಪಿತೃಸ್ಥಾನಾಪನ್ನನಾಗಿದ್ದುಕೊಂಡು, ತನ್ನ ಸಂಕಲ್ಪಮಾತ್ರದಿಂದಲೇ ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡುತ್ತ. ಜೀವರ ಉದ್ಧಾರಕ್ಕೆ ಮುಖ್ಯ ಕಾರಣನಾಗಿ ದ್ದಾನೆ. ತಂದೆಯು ಮಗನಿಗೆ ವಿವಾಹ ಮಾಡಿಸಿದ ಕೂಡಲೇ ಅವನನ್ನು ನಿಜಮಂದಿರದಲ್ಲಿಟ್ಟು, ಆಶ್ರಯ ಕೊಡುವಂತೆ, ಜಗದಾಶ್ರಯನಾದ ಸ್ವಾಮಿಯು, ತ್ರಿಗುಣಗಳ ಸಂಬಂಧವನ್ನು ಚೇತನರಿಗೆ ಉಂಟುಮಾಡಿ, ಅವರನ್ನು ಸುಖದುಃಖಾತ್ಮಕವಾದ ಈ ಸಂಸಾರವಸ್ಥೆ ಎಂಬ ಮಂದಿರ ದಲ್ಲಿಟ್ಟು, ಅವರವರ ಯೋಗ್ಯತಾನುಸಾರ ಸಾಧನ ಮಾಡಿಸಿ, ಭಗವದ್ಭಕ್ತ ರಾದ ಸಾತ್ವಿಕಜೀವರಿಗೆ ದೇವತಾಯೋಗ್ಯವಾದ ಶರೀರಗಳನ್ನೂ, ಮಿಶ್ರಜೀವ ರಾದ ರಾಜಸರಿಗೆ ಮಾನವ ದೇಹಾದಿಗಳನ್ನು ಮತ್ತು ತಮೋಯೋಗ್ಯರಿಗೆ ದೈತ್ಯಾದಿ ಶರೀರಗಳನ್ನೂ ಕೊಟ್ಟು, ಸಾಧನೆ ಪೂರ್ತಿಯಾದ ನಂತರ ಆನಂದ ರೂಪವಾದ ಮುಕ್ತ ಸ್ಥಾನ, ಸುಖದುಃಖ ಮಿಶ್ರವಾದ ಸಾಂತಾನಿಕಲೋಕ ಗಳು ಮತ್ತು ನಿತ್ಯ ದುಃಖರೂಪವಾದ ಅಂಧಂತತಮಸ್ಸನ್ನೂ ಕೊಟ್ಟು, ಆಯಾಯಾ ಸ್ಥಾನಗಳಲ್ಲಿ ತ್ರಿವಿಧಜೀವವರ್ಗವನ್ನು ಇರಿಸುವನು ||೧೧||

# ಪದ್ಯ (೧೨)

**ಮೂಲ :—**

**ತೃಣಕೃತಾಲಯದೊಳಗೆ ಪೊಗೆ ಸಂ ।**
**ದಣಿಸಿ ಪ್ರತಿಛಿದ್ರದಲಿ ಪೊರಮ ।**
**ಟ್ಟನಲನಿರವನು ತೋರಿ ತೋರದಲಿಪ್ಪ ತೆರನಂತೆ ॥**
**ವನಜಜಾಂಡದೊಳಖಿಳ ಜೀವರ ।**
**ತನುವಿನೊಳಹೊರಗಿದ್ದು ಕಾಣಿಸ ।**
**ದನಿಮಿಷೇಶನು ಸಕಲಕರ್ಮವ ಮಾಳ್ಪನವರಂತೆ ॥** ॥೧೨॥

**ಅವತರಣಿಕೆ :—**

ಹುಲ್ಲಿನಿಂದ ನಿರ್ಮಿತವಾದ ಗುಡಿಸಿಲಿನಲ್ಲಿ ಹೊಗೆಯು ದಟ್ಟವಾಗಿ ಮೇಳವಿಸಿ, ಛಾವಣಿಯಲ್ಲಿರುವ ರಂಧ್ರಗಳ ಮೂಲಕ ಹೊರಗೆ ಬರುವುದು. ಹೊಗೆಯ ಉತ್ಪತ್ತಿಗೆ ಕಾರಣವಾದ ಅಗ್ನಿಯು ಗೋಚರವಾಗುವುದಿಲ್ಲ. ಗುಡಿಸಿಲಿನ ಒಳಗಿದ್ದು ಪ್ರತ್ಯಕ್ಷವಾಗಿ ನೋಡುವವರಿಗೆ ಮಾತ್ರ ಗೋಚರ. ವಾಗುವುದು. ಹೊರಗಿದ್ದವರಿಗೆ ಹೊಗೆ ಮಾತ್ರ ಗೋಚರ; ಅಗ್ನಿ ಅಗೋಚರ. ತದ್ವತ್ ಸಮಸ್ತಬ್ರಹ್ಮಾಂಡದಲ್ಲಿರತಕ್ಕ ಜೀವಸಮೂಹದ ದೇಹಗಳಲ್ಲಿ ತಾನಿದ್ದು, ಇತರರಿಗೆ ಅಗೋಚರವಾಗಿ, ದೇವೋತ್ತಮನಾದ ಶ್ರೀಪರಮಾತ್ಮನು ಜೀವಕೃತಕರ್ಮಗಳನ್ನು ಆಚರಿಸುವ ಮಹಿಮಾತಿಶಯುವನ್ನು ಹೇಳುತ್ತಾರೆ– "ತೃಣಕೃತಾಲಯದೊಳಗೆ" —ಎಂಬ ಈ ಪದ್ಯದಿಂದ.

**ಪ್ರತಿಪದಾರ್ಥ:—**

**ತೃಣಕೃತಾಲಯದೊಳಗೆ**=ಹುಲ್ಲಿನಿಂದ ಮಾಡಲ್ಪಟ್ಟ ಮನೆಯಲ್ಲಿ (ಹುಲ್ಲಿನ ಜೋಪಡಿಯಲ್ಲಿ) **ಪೊಗೆ**=ಹೊಗೆಯು **ಸಂದಣಿಸಿ**=ನಿಬಿಡ

ವಾಗಿ (ವ್ಯಾಪ್ತವಾಗಿ ದಟ್ಟೈಸಿ) **ಪ್ರತಿಭಿದ್ರದಲಿ** = ಹೊದ್ದಿಸಿರುವ ಹುಲ್ಲಿನ ಪ್ರತಿಪ್ರತಿ ಸಂದುಗಳಲ್ಲಿಯೂ **ಪೊರಮಟ್ಟು** = ಹೊರಗೆ ಹೊರಟು (ಅಗ್ನಿ ದ್ವಾರಾ) **ಅನಲನ** = ಮನೆಯೊಳಗಿರುವ ಅಗ್ನಿಯ **ಇರವನು** = ಇರುವಿಕೆಯನ್ನು **ತೋರಿ** = ಅನುಮಾನದಿಂದ ಗೋಚರವಾಗುತ್ತಲೂ (ಅಗ್ನಿ ಇದ್ದಕಡೆ ಹೊಗೆ ಇರಲೇಬೇಕೆಂಬ ಯುಕ್ತಿ) **ತೋರದಲೆ** = ಪ್ರತ್ಯಕ್ಷವಾಗಿ ಗೋಚರಿಸದಂತೆ **ಇಪ್ಪತೆರನಂತೆ** = ಈ ಪ್ರಕಾರ ಇರುವ ಅಗ್ನಿಯೋಪಾದಿಯಲ್ಲಿ **ವನಜಜಾಂಡದೊಳು** = ಬ್ರಹ್ಮಾಡದಲ್ಲಿ **ಅಖಿಳಜೀವರ** = ಸಮಸ್ತರಾದ ತ್ರಿವಿಧ ಜೀವರ **ತನುವಿನ** = ಶರೀರದ **ಒಳಹೊರಗಿದ್ದು** = ಜೀವನಸ್ವರೂಪದ ಒಳಗೆ, ಲಿಂಗದೇಹ ಆರಂಭಮಾಡಿ ಸ್ಥೂಲದೇಹದ ವರೆಗೂ ಹೊರಗೆ (ಅಥವಾ ದೇಹಾಂತರ್ಗತನಾಗಿ ಮತ್ತು ಶರೀರದ ಹೊರಗಡೆ ಬಾಹ್ಯಾದೇಶಸ್ಥಿತನಾಗಿ) ಇದ್ದು **ಕಾಣಿಸದೆ** = ಜೀವರಿಗೆ ಗೋಚರವಾಗದೇ **ಅನಿಮಿಷೇಶನು** = ದೇವತಾಶ್ರೇಷ್ಠನಾದ ಶ್ರೀ ಪರಮಾತ್ಮನು **ಸಕಲ ಕರ್ಮವನ** = ಸಮಸ್ತವಾದ ಪಾಪಪುಣ್ಯರೂಪವಾದ ದ್ವಂದ್ವಕರ್ಮಗಳನ್ನು **ಅವರಂತೆ** = ಆಯಾಯಾ ಜೀವರ ಸ್ವಭಾವ ಮತ್ತು ಲಿಂಗಗತಅನಾದಿ ಕರ್ಮಾನುಸಾರವಾಗಿ **ಮಾಳ್ಪ** = ಬಿಂಬಕ್ರಿಯಾದ್ವಾರಾ ತಾನೇ ಮಾಡಿ ಮಾಡಿಸುತ್ತಿರುವನು. ॥೧೨॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಹುಲ್ಲುಮನೆಯಲ್ಲಿ ಇದ್ದಂಥಾ ಅಗ್ನಿಸಂಬಂಧ ಧೂಮವು ಒಳಗೆ ವಿಶೇಷ ವ್ಯಾಪಿಸಿ ಹೊರಗೆ ತೋರಿ ತೋರದಹಾಂಗೆ, ಹ್ಯಾಂಗೆ ಇರತದೋ, ತದ್ವತ್ ಬಿಂಬರೂಪೀಪರಮಾತ್ಮ ಅಧಿಕಾರಿಗಳ ಕಣ್ಣಿಗೆ, ಅಪಕ್ವದಶಾದಲ್ಲಿ ಕಾಣಿಸದೇನೇ ಜೀವನಲ್ಲಿ ತಾನಿದ್ದು, ಸಕಲ ಕರ್ಮವೂ ತಾನೇ ಮಾಡತಾನೆಂದು ತಾತ್ಪರ್ಯ.

**ವಿಶೇಷಾರ್ಥ :—**

ದೃಷ್ಟಾಂತ ಸಮನ್ವಯ ಹೇಳತಾರೆ— ದೇಹ ಎಂಬುದೇ ಆಲಯ ಸದೃಶ. ಆ ಆಲಯಗತ ಅಗ್ನಿಸದೃಶ ಶ್ರೀಪರಮಾತ್ಮ. ಮೈಮೇಲಿನ ಹೊದ್ದಿಕೆ ಸದೃಶ ಸಪ್ತಧಾತುಗಳು. ಛಿದ್ರಸದೃಶ ನವದ್ವಾರಗಳಿಂದ ಯುಕ್ತವಾದ ಇಂದ್ರಿಯಗಳು. ಹೊಗೆ ಸದೃಶ ಇಂದ್ರಿಯಜನ್ಯ ನಾನಾ ಕರ್ಮಗಳು. ಜೀವ ಅಸ್ವಂತ್ರ. ದೇಹಜಡ. ಸ್ವತಃ ಪ್ರವೃತ್ತಿ ಇಲ್ಲ. ಜೀವ ಅಸ್ವಂತ್ರ ಎಂಬುದು (೧) ಇಚ್ಛಾಭಂಗ. (೨) ಲೋಕದಲ್ಲಿ ಸ್ಥಾವರಜಂಗಮಾದಿಗಳನ್ನು ಆಶ್ರಯಿಸಿ ಜೀವನಾದಿಗಳು ಮಾಡಬೇಕಾಗಿರುವುದು—ಇವುಗಳಿಂದ ಸಿದ್ಧವಾಗುತ್ತದೆ. ಪರಸ್ಪರ ವಿಚಾರಮಾಡಿದಾಗ, ಅಪರಾಧೀನಸ್ವತಂತ್ರ ಪರಮಾತ್ಮನೆಂದು ಪ್ರಮಾಣಗಳಿಂದ ಸಿದ್ಧವು. ಜೀವನು ಮನಾದಿಕರಣ (ಇಂದ್ರಿಯ)ಗಳಿಂದ ಕರ್ಮಮಾಡೋದು ಕಂಡಿದೆ. ಆದರೆ ಸ್ವತಃ ಪ್ರವೃತ್ತಿ ಜೀವಗೆ ನಿಷೇಧವಾದಮೇಲೆ ಅನ್ಯಪ್ರವರ್ತಕ ಒಬ್ಬ ದೇಹದಲ್ಲಿ ಇದ್ದಾನೆಂತಲೇ ಸಿದ್ಧವಾಗತದೆ. ಅವ ಕಣ್ಣಿಗೆ ಕಾಣೋದಿಲ್ಲ. ಧೂಮಕೇತುವಿನಿಂದ ಅಗ್ನಿ ಒಳಗೆ ಇದೆ ಎಂಬುದು ಹ್ಯಾಂಗೆ ಸಿದ್ಧವೋ, ಹಾಂಗೆ ಕರ್ಮಹೇತುವಿನಿಂದ ದೇಹದಲ್ಲಿ ಸರ್ವೋತ್ತಮನಾದ ಪುರುಷ ಇದ್ದಾನೆಂದು ನಿರ್ಧಾರವು. ಆದ್ದರಿಂದ ಕಣ್ಣಿಗೆ ಕಾಣಲಿಲ್ಲ ಎಂತ ಪ್ರತ್ಯಕ್ಷಪ್ರಮಾಣವಾದಿಯಾದ ಚಾರ್ವಾಕಮತಾವಲಂಬನೆ ಮಾಡದೇ, ವೇದೋಕ್ತಾನುಸಾರ ದೇವರಲ್ಲಿ ಭಕ್ತಿ ಮಾಡಿ ಧ್ಯಾನೋಪಾಸನೆ ಮಾಡಿದರೆ ಶ್ರೀಪರಮಾತ್ಮ ಪ್ರತ್ಯಕ್ಷನಾಗತಾನೆ ಎಂತ ತಾತ್ಪರ್ಯ ॥೧೨॥

**(೨) "ಭಾವಪ್ರಕಾಶಿಕೆ" –ವ್ಯಾಖ್ಯಾನ :—**

ಹುಲ್ಲು ಹೊದಿಸಿದ ಮನೆಯೊಳಗೆ ಬೆಂಕಿಯನ್ನು ಹೊತ್ತಿಸಿರಲು, ಅದರ ಹೊಗೆಯು ಆ ಹುಲ್ಲಿನ ಸಂದುಗೊಂದುಗಳಲ್ಲಿ ಹೊರಟು, ಮನೆಯ ಒಳಗೂ ಹೊರಗೂ ವ್ಯಾಪಿಸುವುದರಿಂದ ಹೊರಗಿನವರು ಹೊಗೆಯನ್ನು ನೋಡಿ, ಈ ಮನೆಯಲ್ಲಿ ಬೆಂಕಿಯು ಇರುವುದೆಂದು ಊಹಿಸುವರು. ಆದರೂ

ಬೆಂಕಿಯನ್ನು ಮಾತ್ರ ಕಾಣರು. ಹಾಗೆಯೇ ಶ್ರೀಪರಮಾತ್ಮನು ಬ್ರಹ್ಮಾಂಡ ದೊಳಗಿನ ಜೀವರ ಸ್ವರೂಪದೇಹದಲ್ಲಿಯೂ ಸ್ಥೂಲದೇಹದಲ್ಲಿಯೂ ಇತರ ಸಕಲ ಸ್ಥಳಗಳಲ್ಲಿಯೂ, ಒಳಗೂ ಹೊರಗೂ ವ್ಯಾಪ್ತನಾಗಿದ್ದು ಜೀವರಿಗೆ ಗೋಚರವಾಗದೆ ಸಾಮಾನ್ಯಜನರಂತೆಯೇ ತಾನು ಕರ್ಮಗಳನ್ನು ಮಾಡು ವನು. ಹೊಗೆಯ ಉಪಮಾನವು ವ್ಯಾಪ್ತನಾಗಿದ್ದರೂ ನಿರ್ಲಿಪ್ತನಾಗಿರುವುವ ನೆಂಬುದನ್ನು ತೋರಿಸುವುದು. ॥೧೨॥

## (೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :—

ಹುಲ್ಲು ಮನೆಯಲ್ಲಿದ್ದಂಥ ಅಗ್ನಿಸಂಬಂಧ ಧೂಮವು ಒಳಗೇ ವಿಶೇಷ ವ್ಯಾಪಿಸಿ ಹೊರಗೆ ತೋರಿದರೂ ತೋರದಂತೆಯೇ ಹ್ಯಾಗೆ ಇರುತ್ತದೋ ತದ್ವತ್ ಜೀವರಲ್ಲಿ ತಾನಿದ್ದು ಸಕಲಕರ್ಮ ತಾನೇ ಮಾಡುತ್ತಾ ಕೆಲವು ತನ್ನಿಂದಲೂ ಕಾರ್ಯ ನಡಧಾಂಗ ತೋರಿಸತಾನೆಂದು ಹೇಳುತ್ತಾರೆ— "ತೃಣ"– ಎಂಬ ಪದ್ಯದಿಂದ.

ತೃಣಕೃತ = ಹುಲ್ಲಿನಿಂದ ಮಾಡಿದಂಥ ಆಲಯ = ಮನಿ ಸಂದಣಿಸಿ = ವ್ಯಾಪಿಸಿ (ತುಂಬಿ ಕೊಂಡು) ಅನಲ = ಅಗ್ನಿ ತೆರನಂತೆ = ಅದರಂತೆ ತೋರಿ ತೋರದಲಿಪ್ಪತೆರನಂತೆ = ಕಾಣಿಸಿದರೂ ಕಾಣಿಸದವನಂತೆ ವನಜಜಾಂಡ = ಬ್ರಹ್ಮಾಂಡ ತನು = ಶರೀರ ಅನಿಮಿಷೇಶ = ದೇವತೆಗಳ ಅರಸು. ಪೊರ ಮಟ್ಟು = ಹೊರಗೆ. ಹೊರಟು ಇರುವನು = ಸ್ಥಿತಿಯನ್ನು ॥೧೨॥

## (೪) ಶ್ರೀ ಜಮಖಂಡಿವಾದಿರಾಜಾಚಾರ್ಯರ ವ್ಯಾಖ್ಯಾನ :— (ಸಂಸ್ಕೃತಮೂಲ) :—

ಅಧಿಕಾರ್ಯನಧಿಕಾರಿಭ್ಯಾಂ ಕರಿವರದಸ್ಯ ವೇದ್ಯತ್ವಾವೇದ್ಯತ್ವಯೋರ್ನಿ ದರ್ಶನಮಾಹ ತೃಣೇತಿ॥ ಅಜ್ಞಾನಾಂ ತುಷಾರ ಭ್ರಮ ಏವ ನಾನಲಜ್ಞಾನಂ॥ ಬ್ರಹ್ಮೈವೇತಿಶ್ರುತಿರತ್ರಮಾನಮ್ ॥೧೨॥

**ಕನ್ನಡಾನುವಾದ :—**

ಗಜರಾಜವರದನಾದ ಹರಿಯನ್ನು ಅಧಿಕಾರಿಗಳುಮಾತ್ರ ತಿಳಿಯುತ್ತಾರೆ. ಅನಧಿಕಾರಿಗಳು ಅಸಮರ್ಥರು. ಈ ವಿಷಯದಲ್ಲಿ ದೃಷ್ಟಾಂತನಿರೂಪಣೆ– "ತೃಣ" ಎಂಬ ಈ ಪದ್ಯದಲ್ಲಿದೆ. ಹುಲ್ಲಿನ ಮನೆಯಲ್ಲಿ ಹೊಗೆಯು ದಟ್ಟವಾಗಿ ವ್ಯಾಪಿಸಿರುವುದು. ಅದರ ಮೂಲವಾದ ಅಗ್ನಿಯು ಧೂಮದಿಂದ ಆವೃತವಾಗಿರುವುದರಿಂದ ದೂರದಲ್ಲಿರುವವರಿಗೆ ಅಗ್ನಿಯು ಗೋಚರಿಸುವುದಿಲ್ಲ. ಸಮೀಪದಲ್ಲಿರುವವರಿಗೆ ವ್ಯಕ್ತವಾಗುವುದು. ಅಂತೆಯೇ ಜ್ಞಾನಿಗಳು ಜೀವನ ಅಂತರ್ಬಹಿಶ್ಚವ್ಯಾಪ್ತನಾದ ಶ್ರೀಹರಿಯನ್ನು ತಿಳಿಯುತ್ತಾರೆ. ಆದರೆ ಅಜ್ಞಾನಿಗಳಿಗೆ ಅವ್ಯಕ್ತನಾಗಿರುತ್ತಾನೆ. **"ಬ್ರಹ್ಮೈವ ಅಧಸ್ತಾತ್"**— ಎಂಬ ಶ್ರುತಿವಚನದಂತೆ ಶ್ರೀಪರಮಾತ್ಮನು ಕೆಳಗೆ, ಮೇಲೆ ಒಳಹೊರಗೆ ಸರ್ವತ್ರದಲ್ಲಿಯೂ ವ್ಯಾಪ್ತನು ಎಂದು ತಾತ್ಪರ್ಯ ॥೧೨॥

**(ಇ) "ಗುರುಹೃದಯಪ್ರಕಾಶಿಕೆ" — ವ್ಯಾಖ್ಯಾನ :—**

ದೇವರು ಸರ್ವಕರ್ತನಾಗಿದ್ದಾಗ್ಯೂ, ಜೀವನೇ ಕರ್ತೃವೆಂದು ತೋರುವುದಕ್ಕೆ ದೃಷ್ಟಾಂತಸಹ ತಿಳಿಸುತ್ತಾರೆ, "ತೃಣ"ವೆಂಬ ಈ ಪದ್ಯದಿಂದ,

ಹುಲ್ಲುಮನೆಯಲ್ಲಿ ಹೊಗೆತುಂಬಿ ಪ್ರತಿಛಿದ್ರದಲ್ಲಿ ಹೊರಡುತ್ತಾಇದ್ದಾಗ್ಯೂ ಹುಲ್ಲುಮನೆಯಲ್ಲಿ ಪ್ರಾತಃಕಾಲ ಹೊಗೆ ಹೊರಡುವುದು ಅದರ ಸ್ವಭಾವವೆಂದು ತಿಳಿಯದ ಸೂಕ್ಷ್ಮಜ್ಞರಲ್ಲದವರು, ಅಗ್ನಿ ಮನೆಯಲ್ಲದೆ ಎಂಬುದನ್ನರಿಯದೆ ಇರುವಂತೆ, ದೇವೇಶ ಶ್ರೀಹರಿ ಬ್ರಹ್ಮಾಂಡದಲ್ಲಿರುವ ಅಖಿಳಜೀವರ ಒಳಹೊರಗೆ ಸಹ ಇದ್ದಾಗ್ಯೂ ಅಜ್ಞಾನಿಗಳಿಗೆ ಕಾಣಿಸಿಕೊಳ್ಳದೆ, ಆಯಾಯಾ ದೇಹಗತ ಜೀವರ ಸಕಲವ್ಯಾಪಾರದಂತೆ, ಜೀವರ ಅಲ್ಪಕ್ರಿಯೆಯನ್ನೇ ವ್ಯಕ್ತಮಾಡುವವನಾದ್ದರಿಂದ, ವ್ಯಾಪ್ತನಾದರೂ ತಿಳಿಯುವುದಿಲ್ಲ ॥೧೨॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ನಮ್ಮ ದಿನಚರಿಯ ಜೀವನದಲ್ಲಿ ನಮ್ಮ ದೇಹಗತ ಇಂದ್ರಿಯಗಳ ದ್ವಾರಾ ನಡೆಯುತ್ತಿರುವ ದರ್ಶನ, ಶ್ರವಣ, ಘ್ರಾಣ, ಸ್ಪರ್ಶಾನುಭವ, ರುಚಿಯ ಅನುಭವ ಇತ್ಯಾದಿ ಜ್ಞಾನರೂಪವಾದ ವ್ಯಾಪಾರವಿಶೇಷಗಳೂ ಗಮನಾಗಮನ, ದಾನ ಮತ್ತು ಸ್ವೀಕಾರ, ಮಾತನಾಡುವುದು, ಮಲ ಮೂತ್ರಾದಿ ವಿಸರ್ಜನೆ ಇತ್ಯಾದಿ ಕರ್ಮರೂಪವಾದ ಕ್ರಿಯಾವಿಶೇಷಗಳು ನಮ್ಮಿಂದಲೇ ನಡೆಯುತ್ತಿರುವುವು ಎಂಬ ಭಾವನೆ ಸ್ವಾಭಾವಿಕವಾಗಿ ಉಂಟಾಗುವುದು, ಅಂತೆಯೇ ಚಿಂತನ ಮುಂತಾದ ಮಾನಸಿಕ ವ್ಯಾಪಾರಗಳು, ಸಂಕಲ್ಪಶಕ್ತಿ, ಬುದ್ಧಿಶಕ್ತಿ ಇತ್ಯಾದಿ ಪ್ರವೃತ್ತಿವಿಶೇಷಗಳು ಇವೆಲ್ಲವನ್ನು ನಾವೇ ನೇರವಾಗಿ ಮಾಡುತ್ತಿರುವೆವು ಎಂದು ಗೋಚರವಾಗುವುದೂ ಏಕೆಂದರೆ ಈ ಕ್ರಿಯಾ ಕಲಾಪಗಳೆಲ್ಲವೂ ಅನುಭವಸಿದ್ಧವಾದ ವಿಷಯ. ಈ ವಸ್ತುವನ್ನು ನಾನು ನೋಡಿದೆ, ಈ ಮಾತುಗಳನ್ನು ನಾನು ಕೇಳುತ್ತಿದ್ದೇನೆ ಇತ್ಯಾದಿ ವಿಷಯಗಳು ನೇರವಾಗಿ ನಮ್ಮಿಂದಲೇ ನಡೆಯುತ್ತವೆ ಎಂಬ ಸಹಜವಾದ ಅರಿವು ಉಂಟಾಗುವುದು. ಆದರೆ ಈ ಇಂದ್ರಿಯಗತ ವ್ಯಾಪಾರಗಳಿಗೆಲ್ಲ ಮೂಲಕಾರಣವಾದ ಒಂದು ಪ್ರೇರಕ ಶಕ್ತಿ ಇದೆ ಎಂಬ ವಿಶೇಷಜ್ಞಾನವು ಉಂಟಾಗುವುದಿಲ್ಲ. (ಅಲ್ಪಮತಿಗಳಿಗೆ) ಈ ವಿಷಯವನ್ನು ದಾಸರಾಯರು ಮನಮುಟ್ಟುವಂತೆ ಒಂದು ದೃಷ್ಟಾಂತ ಕೊಟ್ಟು ವಿವರಿಸುತ್ತಾರೆ.

ಒಂದು ಹುಲ್ಲಿನ ಜೋಪಡಿಯ ಒಳಗೆ ಒಲೆಯಲ್ಲಿ ಅಗ್ನಿ ಇದೆ, ಆ ಅಗ್ನಿಯಿಂದ ಹೊಗೆ ಉತ್ಪತ್ತಿಯಾಗಿ, ದಟ್ಟವಾಗಿ ಒಳಗೆಲ್ಲಾ ವ್ಯಾಪಿಸಿಕೊಂಡು, ಹುಲ್ಲಿನ ಮೇಲ್ಛಾವಣಿಯ ಸಂದುಗೊಂದುಗಳಿಂದ (ಛಿದ್ರಗಳ ದ್ವಾರಾ) ಹೊರಗೆ ಬರುವುದು. ದೂರದಲ್ಲಿದ್ದು ನೋಡುವವರಿಗೆ ಹೊಗೆ ಮಾತ್ರ ಗೋಚರವಾಗುವುದು. ಆದರೆ ಅದಕ್ಕೆ ಕಾರಣಭೂತವಾದ ಅಗ್ನಿಯು ಒಳಗಿರುವುದರಿಂದ ಗೋಚರವಾಗುವುದಿಲ್ಲ. ಎಲ್ಲಿ ಹೊಗೆ ಇದೆಯೋ, ಅಲ್ಲಿ ಅಗ್ನಿ ಇರಲೇಬೇಕೆಂಬ ಯುಕ್ತಿಯಪ್ರಕಾರ, ತೃಣಕೃತಾಲಯಗತ ಅಗ್ನಿಯು ತೋರಿ ತೋರದಂತಿರುವುದು ಹೊಗೆಯಿಂದ ಅಗ್ನಿಯ ಜ್ಞಾನ ಆದರೆ ಪ್ರತ್ಯಕ್ಷ ಗೋಚರವಿಲ್ಲ. ಇದರಿಂದ ತೋರಿ (ಕಾಣಿಸಿದರೂ)

ತೋರದೆಲೆ (ಕಾಣಿಸದಂತೆ) ಅಗ್ನಿ ಇರುವುದು. ಅದರಂತೆಯೇ ಸರ್ವ ಚೇಷ್ಟಾಪ್ರವರ್ತಕವಾದ ಬಿಂಬರೂಪೀ ಶ್ರೀಪರಮಾತ್ಮನು, ಜೀವಾಂತರ್ಯಾಮಿಯಾಗಿದ್ದಾನೆ. ದೇಹಗತಸಕಲೇಂದ್ರಿಯಗಳಲ್ಲಿ ಪ್ರೇರಕರೂಪದಿಂದಿದ್ದಾನೆ. ಮನಸ್ಸು, ಬುದ್ಧಿ, ಚಿತ್ತದಲ್ಲಿ ಸ್ಥಿತನಾಗಿದ್ದು, ಆಯಾಯಾ ಜೀವರ ಅನಾದಿಕರ್ಮಪ್ರವಾಹಕ್ಕನುಸಾರವಾಗಿ ಪ್ರೇರಕ ಪ್ರೇರ್ಯ ರೂಪಗಳಿಂದಿದ್ದು, ಸಕಲವಿಧವಾದ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು, ಆದರೆ ಜೀವಕೃತಕರ್ಮಗಳನ್ನು ಬಿಂಬಕ್ರಿಯಾ ದ್ವಾರಾ ತಾನೇ ಪ್ರೇರಿಸಿ, ಮಾಡಿಸುತ್ತಿದ್ದಾಗ್ಯೂ. ಜೀವರು ಸ್ವಕರ್ತೃತ್ವಾಭಿಮಾನಿಗಳಾಗಿದ್ದಾರೆ, ಮಂದಾಧಿಕಾರಿಗಳಾದ ಜೀವರಿಗೆ ತನ್ನ ಇರವನ್ನು ತೋರಗೊಡದಲೇ ಅವರೇ ಕರ್ತೃಗಳೆಂಬ ಜ್ಞಾನವನ್ನು ಹುಟ್ಟಿಸಿ ತಾನು ಅಭಿವ್ಯಕ್ತನಾಗದೇ ಇರುವುದೇ ಆ ಸರ್ವಶಕ್ತನಾದ ಶ್ರೀಪರಮಾತ್ಮನ ಮಾಯೆ.

ಈ ದೃಷ್ಟಾಂತದಲ್ಲಿ (೧) ಸಾಧನ ಶರೀರವಾದ ಸ್ಥೂಲದೇಹವೇ ಆಲಯ (ಹುಲ್ಲು ಜೋಪಡಿ) ಸದೃಶ. (೨) ಹುಲ್ಲಿನಂತೆ ಶರೀರ ಅನಿತ್ಯ ಕ್ಷಣಭಂಗುರವಾದದ್ದು (೩) ಆ ಆಲಯದಲ್ಲಿರುವ ಅಗ್ನಿಸದೃಶ ಶ್ರೀ ಪರಮಾತ್ಮ (ತೇಜೋರೂಪಿ, ಸರ್ವ ಪ್ರೇರಕ) (೪) ಜೋಪಡಿಗೆ ಹೊದ್ದಿಸಿರುವ ಮೇಲ್ಹಾವಣಿಯೇ ಸಪ್ತ ಧಾತುಗಳು. ಈ ಸಪ್ತ ಧಾತುಗಳಿಂದಲೇ ಈ ದೇಹ ನಿರ್ಮಿತವಾಗಿದೆ. (೫) ಹುಲ್ಲಿನಲ್ಲಿರುವ ಛಿದ್ರಗಳೇ ನವದ್ವಾರಗಳಿಂದ ಯುಕ್ತವಾದ ಇಂದ್ರಿಯಗಳು (೬) ಹೊಗೆಸದೃಶ ಇಂದ್ರಿಯಜನ್ಯ ನಾನಾ ಕರ್ಮವಿಶೇಷಗಳು (೭) ಇಷ್ಟೆಲ್ಲಾ ಅನುಭವ ಜ್ಞಾನವನ್ನು ಹೊಂದುವವ ಅಸ್ವತಂತ್ರನಾದ ಜೀವ. ಈ ರೀತಿಯಲ್ಲಿ ಜ್ಞಾನಿಶ್ರೇಷ್ಠರಾದ ಶ್ರೀ ದಾಸರಾಯರು ಸುಂದರವಾದ ದೃಷ್ಟಾಂತದಿಂದ ಜೀವರ ಅಸ್ವಾತಂತ್ರ್ಯವನ್ನೂ, ಪರಾಧೀನ ಕರ್ತೃತ್ವವನ್ನೂ ವಿವರಿಸುತ್ತಾ, ಸರ್ವತಂತ್ರಸ್ವತಂತ್ರನಾದ, ಸಮಸ್ತ ಚೇಷ್ಟಾಪ್ರವರ್ತಕನಾದ ಬಿಂಬರೂಪೀ ಶ್ರೀ ಪರಮಾತ್ಮನು, ಜೀವರ ದ್ವಾರಾ ತತ್ವಾಭಿಮಾನಿಗಳ ದ್ವಾರಾ ದೇಹಗತ ಇಂದ್ರಿಯಗಳ ದ್ವಾರಾ ತಾನೇ ಪ್ರತಿಬಿಂಬರಾದ ಜೀವರು ಮಾಳ್ಪಂತೆ

ಕರ್ಮಗಳನ್ನು ಮಾಡಿ, ಮಾಡಿಸುತ್ತಿರುವ ವ್ಯಾಪ್ತರೂಪವಿಶಿಷ್ಟವಾದ ಕ್ರಿಯಾವಿಶೇಷಗಳನ್ನು ನಿರೂಪಿಸಿರುತ್ತಾರೆ ॥೧೨॥

## ಪದ್ಯ (೧೩)

**ಮೂಲ :—**

**ಪಾದಪಗಳಡಿಗೆರೆಯೆ ಸಲಿಲವು ।**
**ತೋದು ಕೊಂಬೆಗಳುಬ್ಬಿ ಪುಷ್ಪ ।**
**ಸ್ವಾದು ಫಲವೀವಂದದಲಿ ಸರ್ವೇಶ್ವರನು ಜನರಾ ॥**
**ರಾಧನೆಯ ಕೈಕೊಂಡು ಬ್ರಹ್ಮ ಭ ।**
**ವಾದಿಗಳ ನಾಮದಲಿ ಫಲವಿ ।**
**ತ್ತಾದರಿಸುವನು ತನ್ನ ಮಹಿಮೆಯ ತೋರಗೊಡ ಜಗಕೆ ॥೧೩॥**

**ಅವತರಣಿಕೆ :—**

ಗಿಡಗಳ ಬೇರುಗಳಿಗೆ ನೀರುಹಾಕಿದಾಗ, ಗಿಡಗಳು ಆ ನೀರನ್ನು ತಮ್ಮ ಬೇರುಗಳ ದ್ವಾರಾ ಸ್ವೀಕರಿಸಿ, ಕೊಂಬೆ, ಉಪಕೊಂಬೆಗಳಿಗೆ ವ್ಯಾಪಿಸಿ, ಪುಷ್ಪ ಅರಳಿ, ತದ್ವಾರಾ ರುಚಿಕರವಾದ ಹಣ್ಣುಗಳನ್ನು ಕೊಡುವುವು. ಅಂತೆಯೇ ಜಗದಾಖ್ಯವೃಕ್ಷರೂಪಿಯಾದ ಶ್ರೀ ಪರಮಾತ್ಮನು ಸರ್ವಜೀವರಿಂದ ತನಗರ್ಪಿತವಾದ ಕರ್ಮಗಳನ್ನು ತಾನೇ ಸ್ವೀಕರಿಸಿ, ಭಗವತ್ಕಾರ್ಯಸಾಧಕರಾದ ಬ್ರಹ್ಮರುದ್ರೇಂದ್ರಾದಿ ದೇವತೆಗಳ ದ್ವಾರಾ ತನ್ನಾಮಕನಾಗಿದ್ದು ತನ್ನ ಮಹಿಮೆಯನ್ನು ಅಭಿವ್ಯಕ್ತಮಾಡದೆ, ಫಲಪ್ರದನಾಗಿದ್ದಾನೆ ಎಂದು ಹೇಳುತ್ತಾರೆ– “ಪಾದಪ”– ಎಂಬ ಈ ಪದ್ಯದಿಂದ ॥೧೩॥

**ಪ್ರತಿಪದಾರ್ಥ :—**

**ಪಾದಪಗಳ** = ವೃಕ್ಷಗಳ (ಬೇರಿನಿಂದ ಜಲಪಾನಮಾಡುವುದರಿಂದ "ಪಾದಪ"-ಎಂದು ಹೆಸರು) **ಅಡಿಗೆ** = ಬೇರುಗಳಿಗೆ **ಸಲಿಲವ** = ನೀರನ್ನು **ಎರೆಯೆ** = ಹಾಕಲು **ತೋಡು** = ಹಾಕಿದ ಉದಕದಿಂದ ಬೇರು ಚೆನ್ನಾಗಿ ನೆನೆದು **ಕೊಂಬೆಗಳುಬ್ಬಿ** = ವೃಕ್ಷದ ಶಾಖೋಪಶಾಖೆಗಳು ಪುಷ್ಟವಾಗಿ **ಸ್ವಾದುಫಲವ** = ರುಚಿಕರವಾದ (ಸುಮಧುರವಾದ) ಹಣ್ಣುಗಳನ್ನು **ಈವಂದದಲಿ** = ಕೊಡುವೋಪಾದಿಯಲ್ಲಿ **ಸರ್ವೇಶ್ವರನು** = ಜಗತ್ಪ್ರಭುವಾದ ಶ್ರೀ ಪರಮಾತ್ಮನು **ಜನರಾ** = ಭಕ್ತಜನರುಗಳ **ಆರಾಧನೆಯ** = ಪೂಜಾದಿ ಸೇವೆಗಳನ್ನು **ಕೈಕೊಂಡು** = ಸ್ವೀಕರಿಸಿ **ಬ್ರಹ್ಮ** = ಚತುರ್ಮುಖಬ್ರಹ್ಮ ದೇವರು **ಭವಾದಿಗಳ** = ರುದ್ರಾದಿ ದೇವತೆಗಳ **ನಾಮದಲಿ** = ಹೆಸರುಗಳಿಂದ (ತನ್ನಾಮಕನಾಗಿ) **ಫಲವಿತ್ತು** = ಜ್ಞಾನ, ಭಕ್ತಿ, ವೈರಾಗ್ಯರೂಪವಾದ ಫಲಗಳನ್ನು ಕೊಟ್ಟು **ಆದರಿಸುವನು** = ಸತ್ಕರಿಸುತ್ತಾನೆ, (ಮೋಕ್ಷಪ್ರದನಾಗಿ ಸಂತೋಷಪಡಿಸುತ್ತಾನೆ) **ಜಗಕೆ** = ಆದರೆ ಜಗತ್ತಿನ ಜನರಿಗೆ **ತನ್ನ ಮಹಿಮೆಯ** = ತನ್ನ ಮಹಿಮಾವಿಶೇಷಗಳನ್ನು **ತೋರಗೊಡ** = ಸಾಕಲ್ಯೇನ ತೋರಿಸುವುದಿಲ್ಲ. ॥೧೩॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಬೇರಿನಿಂದ ಸಕಲ ಫಲವಾದದ್ದು, ಆದರೂ ಜನರಿಗೆ ಶಾಖೆಗಳುಫಲ ಕೊಟ್ಟಂತ್ಯೆಂಬ ಲಕ್ಷ್ಯ ಹ್ಯಾಂಗಿರುತ್ತದೋ ತದ್ವತ್ ಶಾಖಾರೂಪವಾದ ಬ್ರಹ್ಮಾದಿ ದೇವತೆಗಳೇನು, ತದನ್ಯರಾದ ಉಪಶಾಖರಾದ ಪ್ರಾಣಿಗಳೇನು, ಫಲಕೊಟ್ಟರೆಂದು ಲಕ್ಷ್ಯವಿರತದೆ. ಅದನ್ನು ಮರೆತು, ಸರ್ವವೂ ಪರಮಾತ್ಮನಲ್ಲಿ ಅನ್ವಯಿಸಬೇಕು, ಬೇರಿಗೆ ಶುದ್ಧಾಶುದ್ಧೋದಕಗಳಲ್ಲಿ

ದಾವದಾದರೂ ಸರಿಯೇ ಹಾಕಿದ ಮಾತ್ರದಿಂದ, ಸುರಸೋತಫಲ ಹ್ಯಾಂಗೆ ಕೊಡುತ್ತದೋ, ತದ್ವತ್ ಭಕ್ತಿಯಿಂದ ಬೇರು ಸಾಮ್ಯವುಳ್ಳ ಪರಮಾತ್ಮಗೆ ಉದಕಸದೃಶವಾದ ಶುಭಾಶುಭಕರ್ಮಗಳು ಅರ್ಪಿಸೋಣದ ರಿಂದ, ಅರ್ಪಿಸಿದವನಿಗೆ ಸುಫಲಕೊಡತಾನೆ, ದೈತ್ಯರು ಇಂಥ ಈಶ್ವ ರಾಖ್ಯವೃಕ್ಷದ ಬೇರಿನಲ್ಲಿ ದ್ವೇಷ ಉಳ್ಳವರಾಗಿ, ಭಕ್ತಿರೂಪವಾದ ಉದಕ ಸೇಚನೆ ಮಾಡೋದಿಲ್ಲವಾದ್ದರಿಂದ ಸುಫಲಭಿನ್ನವಾದ ದುಷ್ಟಫಲ ಹೊಂದ ತಾರೆ ಎಂತ ತಾತ್ಪರ್ಯ. ॥೧೩॥

(೨) "ಭಾವಪ್ರಕಾಶಿಕೆ"— ವ್ಯಾಖ್ಯಾನ :—

**"ಯಥಾ ತರೋರ್ಮೂಲ ನಿಷೇಚನೇನ ತೃಪ್ಯಂತಿ ತತ್‌ಸ್ಕಂಧ ಭುಜೋಪಶಾಖಾಃ ॥ ಪ್ರಾಣೋಪಹಾರಾಚ್ಚ ಯಥೇಂದ್ರಿಯಾಣಾಂ ತಥೈವ ಸರ್ವಾರ್ಪಣಮಚ್ಯುತೇಜ್ಯಾ ॥"** - ಎಂಬ ಭಾಗವತ ಚತು **ರ್ಥಸ್ಕಂಧದ** ವಚನಾನುಸಾರ, ವೃಕ್ಷದ ಬೇರಿಗೆ ನೀರೆರೆಯಲು ಹೇಗೆ ಅದರ ಟೊಂಗೆಗಳೂ, ಸಣ್ಣಟೊಂಗೆಗಳೂ ಸಹ ತೃಪ್ತಿಹೊಂದಿ ವೃದ್ಧಿಯಾಗು ಗುವುವೋ ಮತ್ತು ಜೀವಾಧಾರಕ್ಕಾಗಿ ಭೋಜನ ಮಾಡಲು, ಹೇಗೆ ಕೈ ಕಾಲು ಮೊದಲಾದ ಇಂದ್ರಿಯಗಳೆಲ್ಲವೂ ಪುಷ್ಟಿಯಾಗುವವೋ. ಹಾಗೆಯೇ ನಮಗೆ ಮೂಲಭೂತವಾದ, ಬೇರಿನಂತಿರುವ ಬಿಂಬರೂಪಿಯಾದ ಶ್ರೀ ಪರಮಾತ್ಮನನ್ನು ಪೂಜಿಸಲು ಅದರಿಂದ ಜಗತ್ತಿಗೆ ಸುಖವಾಗುವುದು– ಎಂದು ತಾತ್ಪರ್ಯ. "ಜನರಾರಾಧನೆಯ ಕೈಗೊಂಡು ಬ್ರಹ್ಮ ಭವಾದಿಗಳ ನಾಮದಲ್ಲಿ ಫಲವಿತ್ತಾದರಿಸುವನು." ಅಂದರೆ, ಜನರಲ್ಲಿ ಸಾತ್ವಿಕರು, ರಾಜಸರು, ತಾಮಸರು, ಎಂದು ಮೂರು ಪಂಗಡವಿರುವುದು, ಅವರಲ್ಲಿ ಸಾತ್ವಿಕರಾದ ಧ್ರುವ, ಪ್ರಹ್ಲಾದ ಮೊದಲಾದವರು ನಿಷ್ಕಾಮರು ವಿಷ್ಣುವನ್ನೇ ಭಜಿಸುವರು. ರಾಜಸರು ಸಕಾಮರು, ಅಂದರೆ ಫಲಾಪೇಕ್ಷೆ ಯಿಂದ ಭಜಿಸುವರು. ತಾಮಸರು ಇತರರನ್ನು ಹಿಂಸಿಸಬೇಕೆಂಬ ಇಚ್ಛೆ ಯಿಂದ ಭಜಿಸುವರೆಂದರ್ಥ. **"ಮದರ್ಪಣಂ ನಿಷ್ಫಲಂ ವಾ ಸಾತ್ವಿಕಂ ನಿಜಕರ್ಮತತ್ ॥ ರಾಜಸಂ ಫಲಸಂಕಲ್ಪಂ ಹಿಂಸಾಪ್ರಾಯಾದಿ**

**ತಾಮಸವಮ್" ||** ಎಂಬ **ಭಾಗವತ ಏಕಾದಶಸ್ಕಂಧ**ದ ಪ್ರಮಾಣದಂತೆ, ಸಿದ್ಧವಾಗುವುದು. ಫಲಾಪೇಕ್ಷೆಯುಳ್ಳವರಾಗಲೀ, ಹಿಂಸಾದಿಗಳನ್ನು ಅಪೇಕ್ಷಿಸುವವರಾಗಲೀ ಪ್ರಾಯಶಃ ವಿಷ್ಣುವನ್ನು ಭಜಿಸುವುದಿಲ್ಲ. ಬ್ರಹ್ಮದೇವರನ್ನಾಗಲಿ, ಈಶ್ವರನನ್ನಾಗಲೀ ಭಜಿಸುವರು.

**ಭಾಗವತ ದಶಮಸ್ಕಂಧದಲ್ಲಿ–"ಶಾಪಪ್ರಸಾದಯೋರೀಶಾಃ ಬ್ರಹ್ಮ ವಿಷ್ಣು ಶಿವಾದಯಃ || ಸದ್ಯಃ ಶಾಪಪ್ರಸಾದೋಂ ಶಿವಬ್ರಹ್ಮಾಚ ನಾಚ್ಯುತಃ ||"** ಎಂದರೆ ಶಾಪವನ್ನು ಕೊಡಬೇಕಾದರೂ, ವರವನ್ನು ಕೊಡಬೇಕಾದರೂ ಬ್ರಹ್ಮ, ವಿಷ್ಣು, ಶಿವ, ಆದಿಶಬ್ದದಿಂದ ಪಾರ್ವತಿ ಮೊದಲಾದವರನ್ನೂ ತೆಗೆದುಕೊಳ್ಳಬೇಕು, ಇವರೆಲ್ಲರೂ ಅಧಿಪತಿಗಳೇ. ಆದರೆ ಶೀಘ್ರದಲ್ಲಿ ಪ್ರಸನ್ನರಾಗಿ ವರಗಳನ್ನು ಕೊಡಬೇಕಾದರೂ, ಸ್ವಲ್ಪಾಪರಾಧಕ್ಕೆ ಸಿಟ್ಟಿನಿಂದ ಶಾಪಾದಿಗಳನ್ನು ಕೊಟ್ಟು ಒಬ್ಬರನ್ನು ಕೆಡಿಸಬೇಕಾದರೂ ಬ್ರಹ್ಮರುದ್ರಾದಿಗಳೇ ಹೊರತು ವಿಷ್ಣುವಲ್ಲ. (ಕಷ್ಟದಿಂದ ಬಹುಕಾಲ ಆರಾಧನೆಮಾಡಿದರೆ, ಶಾಶ್ವತವಾದ ಫಲವನ್ನು ಕೊಡುವವನು ವಿಷ್ಣುವು. ಹೀಗಿರುವುದರಿಂದ ಹಿಂಸಾದಿ ಫಲಾಕ್ಷಾಂಕ್ಷಿಗಳೂ ಶೀಘ್ರಫಲವನ್ನು ಅಪೇಕ್ಷಿಸಿ ಬ್ರಹ್ಮರುದ್ರಾದಿಗಳನ್ನು ಭಜಿಸುವರು. ಎಷ್ಟು ಬೇಗನೆ ಫಲವನ್ನು ಹೊಂದುವರೋ, ಅಷ್ಟು ಬೇಗನೆ ನಾಶವನ್ನು ಹೊಂದುವರು. ಶೀಘ್ರದಲ್ಲಿ ಲಭಿಸುವ ಫಲವೂ ಅಲ್ಪವೇ ಆಗಿರುವುದು.)

ಈಗ ಲೋಕದಲ್ಲಿ ಸಾಧಾರಣವಾಗಿ ಅಲ್ಪಉದ್ಯೋಗಿಗಳ ಸಮಾಗಮವಾಗುವುದಕ್ಕೂ, ಅವರಿಂದ ಫಲವನ್ನು ಪಡೆಯುವುದಕ್ಕೂ, ಶ್ರೀಮಂತರೂ, ಮಹಾರಾಜರೂ ಇಂತಹವರಿಂದ ಫಲವನ್ನು ಪಡೆಯಬೇಕಾದರೂ ಹೇಗೆ ದರ್ಶನವಾಗುವುದರಲ್ಲಿಯೂ ಫಲಹೊಂದುವುದರಲ್ಲಿಯೂ ಭೇದವಿರುವುದೋ ಹಾಗೆಯೇ ಇತರ ದೇವತೆಗಳನ್ನು ಕಂಡು ವರವನ್ನು ಪಡೆಯುವುದಕ್ಕೆ ಭೇದವಿದ್ದೇ ಇರುವುದು. ವೃಕಾಸುರನು (ಭಸ್ಮಾಸುರನು) ನಾರದರನ್ನು ಕುರಿತು ಪ್ರಶ್ನೆಮಾಡುವಾಗ **ಭಾಗವತ ದಶಮಸ್ಕಂದಲ್ಲಿ- "ವೃಕೋನಾಮಾಸುರಃ ಪುತ್ರಃ ಶಕುನೇಃ ಪಥಿ ನಾರದಂ ದೃಷ್ಟ್ವಾ**

**ತುತೋಽಷಂ ಪ್ರಪಚ್ಛ ಹೇವೇಷು ತ್ರಿಷು ದುರ್ಮತಿಃ ॥ ಸ ಆದಿದೇಶ ಗಿರಿತಮುಪಧಾವ ಸ್ವಸಿದ್ಧಯೇ ॥ ಸೋಽಲ್ಪಾಭ್ಯಾಂ ಗುಣದೋಷಾಭ್ಯಾಮಾಶುತುಷ್ಯತಿ ಕುಪ್ಯತಿ ॥"**—ಎಂದರೆ ಶಕುನಿಮಗನಾದ ವೃಕಾಸುರನೆಂಬುವನು ಮಾರ್ಗದಲ್ಲಿ ನಾರದರನ್ನು ಕಂಡು,— "ಸ್ವಾಮಿ, ನಾರದರೇ, ಬ್ರಹ್ಮ ವಿಷ್ಣು ಮಹೇಶ್ವರರಲ್ಲಿ ಶೀಘ್ರವಾಗಿ ಪ್ರಸನ್ನರಾಗಿ ವರವನ್ನು ಕೊಡುವವರಾರು?" — ಎಂದು ಪ್ರಶ್ನೆಮಾಡಿದನು. ಆಗ ನಾರದನು,— "ಎಲೈ ಅಸುರನೇ ರುದ್ರದೇವರನ್ನು ಆರಾಧಿಸು. ಆತನೇ ಶೀಘ್ರ ಫಲಪ್ರದನು, ಅಲ್ಪವಾದ ಅಪರಾಧಕ್ಕೆ ಸಿಟ್ಟುಗೊಳ್ಳುವನು. ಬಾಣಾಸುರ ಮೊದಲಾದವರು ಮಾಡಿದ ತಪಸ್ಸಿಗೆ ಮೆಚ್ಚಿ, ಅವನ ಮನೆಯ ಬಾಗಿಲನ್ನು ಕಾಯುತ್ತಿರುವನು—" ಎಂದು ಹೇಳಿರುವರು. ಈ ಕಾರಣಗಳಿಂದಲೇ ಪ್ರಾಯಶಃ ರಾಜಸರು, ತಾಮಸರು ಬ್ರಹ್ಮರುದ್ರಾದಿಗಳನ್ನು ಭಜಿಸುವರು.

**"ಅಕಾಶಾತ್ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ। ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ"**—ಎಂಬ ಪ್ರಮಾಣದಿಂದ ಆಕಾಶದಿಂದ ಬಿದ್ದ ನೀರೆಲ್ಲವೂ ಕಡೆಗೆ ಹೇಗೆ ಸಮುದ್ರವನ್ನು ಸೇರುವುವೋ, ಹಾಗೆ ಯಾವ ದೇವತಾ ಉದ್ದೇಶವಾಗಿ ನಮಸ್ಕಾರಮಾಡಿದರೂ ಶ್ರೀ ಪರಮಾತ್ಮನಲ್ಲಿಯೇ ಸೇರುವುದು. ಅಂದರೆ ಶ್ರೀ ಪರಮಾತ್ಮನೇ, ಆ ದೇವತಾರೂಪದಿಂದ ದೇವತೆಗಳಲ್ಲಿದ್ದು, ಪೂಜೆಯನ್ನು ಸ್ವೀಕರಿಸಿ, ಅವರಿಗೆ ತಕ್ಕ ನಶ್ವರಫಲವನ್ನು ಕೊಡುವನು. ಇದೇ ಅಭಿಪ್ರಾಯದಿಂದಲೇ ದಾಸರಾಯರು "ಬ್ರಹ್ಮಭವಾದಿಗಳ ನಾಮದಲ್ಲಿ ಫಲವಿತ್ತು" ಎಂದು ಹೇಳಿರುವರು. ರಾವಣ, ಹಿರಣ್ಯಕಶಿಪು ಮೊದಲಾದವರು ಬ್ರಹ್ಮದೇವರನ್ನು ಕುರಿತು ತಪಸ್ಸುಮಾಡಲು, ಶ್ರೀ ಪರಮಾತ್ಮನು ಪ್ರಸನ್ನನಾಗಿ ಅವರಿಗೆ ವರವನ್ನಿತ್ತನು. ವೃಕಾಸುರ ಮೊದಲಾದವರು ರುದ್ರದೇವರನ್ನು ಕುರಿತು ತಪಸ್ಸುಮಾಡಲು, ಅವನಂತರ್ಯಾಮಿಯಾಗಿದ್ದು ಆ ಅಸುರರಿಗೆ ವರವನಿತ್ತನೆಂದು ತಾತ್ಪರ್ಯವು. ಯೋಗ್ಯರಾಗಲೀ ಅಯೋಗ್ಯರಾಗಲೀ ಅವರ ತಪಸ್ಸಿಗೆ ತಕ್ಕ ವರವನ್ನು ಕೊಟ್ಟು ಆದರಿಸುವನು. ಆದರೆ

ಬ್ರಹ್ಮಾದಿಗಳಲ್ಲಿದ್ದು ವರವನ್ನಿತ್ತವನು ತಾನೆಂದು ಯಾರಿಗೂ ತಿಳಿಸಿಕೊಳ್ಳನು. ಈ ರಹಸ್ಯವನ್ನು ಜ್ಞಾನಿಗಳು ಮಾತ್ರ ಬಲ್ಲರು ॥೧೩॥

**(೩) "ಭಾವದರ್ಪಣಟೀಕಾ"—ವ್ಯಾಖ್ಯಾನ :—**

**"ಯಥಾ ತರೋರ್ಮೂಲನಿಷೇಚನೇನ............................ ....ಸರ್ವಾರ್ಪಣಮಚ್ಯುತೇಜ್ಯ"** ॥ (ಈ ಪ್ರಮಾಣದ ಪೂರ್ಣವಾಕ್ಯವನ್ನು ಹಿಂದಿನ ವ್ಯಾಖ್ಯಾನಗಳಲ್ಲಿ ಕೊಟ್ಟಿದೆ) -ಎಂಬಂಥ **ಚತುರ್ಥಭಾಗವತಾ**ನುಸಾರ ದಾವದಾವ ದೇವತಾ ಉಪಾಸನಾ ಮಾಡತಾರೋ ಆಯಾಯಾ ದೇವತಾರೂಪದಿಂದಲೇ ಫಲಕೊಟ್ಟು, ಜೀವರಿಗೆ ತನ್ನಿಂದ ಫಲವಾಯಿತು ಅಂತ ಅನಿಸೋದಿಲ್ಲವೆಂದು ಹೇಳುತ್ತಾರೆ— "ಪಾದಪ"- ಎಂಬ ಪದ್ಯದಿಂದ.

ಪಾದಪ = ವೃಕ್ಷ, ಅಡಿ = ಮೂಲವಾದ ಬೇರು ಸಲಿಲ = ನೀರು ಎರೆಯೆ = ಹಾಕಲು. ಕೊಂಬೆ = ಟೊಂಗೆ, ಉಬ್ಬಿ = ಚಿಗಿತು. ಈವಂದದಲಿ = ಕೊಡುವಂತೆ, ನಾಮದಲಿ = ಹೆಸರಿನಿಂದ. ಜಗಕೆ = ಜನರಿಗೆ ಯಂತರ್ಥ ॥೧೩॥

**(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ—**
**(ಸಂಸ್ಕೃತಮೂಲ) :—**

ಸಪರಿವಾರಹರಿಸಮಾರಾಧನೇ ಸರ್ವಾರ್ಚನಮಿತ್ಯತ್ರ ನಿದರ್ಶನಮಾಹ॥ ಪಾದಪೇತಿ॥ ಅಡಿ-ಬುಡ। ಎರೆಯೆ = ಹಾಕಲು, ತೋದು-ತೊಯ್ದು ಕೊಂಬೆ-ಶಾಖೆ, ಜನರಾ, ಆಕಾರಃ ಪ್ರಶ್ಲಿಷ್ಯತೇ ॥ **"ಯಥಾತರೋರ್ಮೂಲನಿಷೇಚನೇತೇತಿ"-ಭಾಗವತೇ** ॥೧೩॥

**ಕನ್ನಡಾರ್ಥ :—**

ಶ್ರೀ ಹರಿಯು ತನ್ನ ಪರಿವಾರದೇವತೆಗಳಿಗೆ ನಿಯಾಮಕನು. ಇಂತಹ ಸಪರಿವಾರನಾದ ಶ್ರೀಪರಮಾತ್ಮನ ಅರ್ಚನೆಯೇ ಸರ್ವ

ಇಸಕೆ ಸೃಷ್ಟಿತ.



ದೇವತೆಗಳ ಅರ್ಚನೆಯು, ಈ ತತ್ತ್ವಾರ್ಥವನ್ನು ಸದೃಷ್ಟಾಂತವಾಗಿ ಹೇಳುತ್ತಾರೆ-- "ಪಾದಪ"– ಎಂಬ ಪದ್ಯದಿಂದ. ವೃಕ್ಷದ ಬೇರುಗಳಿಗೆ (ಮೂಲ) ನೀರನ್ನು ಹಾಕಿದಾಗ, ಆ ನೀರು ಬೇರುಗಳ ದ್ವಾರಾ ಕೊಂಬೆ, ಎಲೆಗಳನ್ನುಸೇರಿ, ಅವುಗಳನ್ನು ಪುಷ್ಟಿಗೊಳಿಸಿ, ಸುಗಂಧಕುಸುಮಗಳನ್ನು ಪಲ್ಲೈಸಿ, ಸುಮಧುರವಾದ ಫಲಗಳನ್ನು ಕೊಡುತ್ತದೆ. ತದ್ವತ್ ಶ್ರೀ ಪರಮಾತ್ಮನ ಭಕ್ತಿಪುರಸ್ಸರವಾದ ಪೂಜೆಯು (ಆರಾಧನೆಯು), ಅವನನ್ನು ಮೆಚ್ಚಿಸಿ, ಸಮಸ್ತದೇವತಾವರ್ಗದ ಪ್ರಸನ್ನತೆಯನ್ನುಂಟುಮಾಡಿಸುತ್ತದೆ. (1) ಶ್ರೀಹರಿಯಿಂದ ಪ್ರೇರಿತರಾದ ಬ್ರಹ್ಮಾದಿ ದೇವತೆಗಳು ಸುಪ್ರಸನ್ನರಾಗಿ, ಆರಾಧಕರಿಗೆ ಅಪೇಕ್ಷಿತ ಪುರುಷಾರ್ಥಗಳನ್ನು ಕೊಡುತ್ತಾರೆ. "ಬೇರುಗಳಿಗೆ ಎರೆದ ನೀರು ಕೊಂಬೆ, ಎಲೆ ಚಿಗುರುಗಳನ್ನು ತಣಿಸುತ್ತದೆ. ಪ್ರಾಣೇಂದ್ರಿಯಕ್ಕೆ ಆಹಾರವೀಯುವುದರಿಂದ (ಪ್ರಾಣಾಗ್ನಿಹೋತ್ರದಿಂದ) ಸಕಲೇಂದ್ರಿಯಗಳೂ ತೃಪ್ತಿ ಹೊಂದುವುವು. ಹೀಗೆ ತರ್ಪಕನಾದ ಶ್ರೀಹರಿಯನ್ನು ಸಪರಿವಾರದೇವತಾವರ್ಗದವನೆಂದು ಪೂಜಿಸಿದರೆ, ಆ ಪೂಜಾರೂಪವಾದ ಯಜ್ಞಕ್ಕೆ ಶ್ರೀಪರಮಾತ್ಮನು ಒಲಿಯುವನು. ಆಗ ಅದು ಎಲ್ಲಾ ದೇವತೆಗಳಿಗೂ ಪೂಜೆ ಎನಿಸಿಕೊಳ್ಳುತ್ತದೆ" —ಎಂಬುದೇ **ಭಾಗವತಾರ್ಥವು** ||೧೩||

## (ಆ) "ಗುರುಹೃದಯ ಪ್ರಕಾಶಿಕೆ"—ವ್ಯಾಖ್ಯಾನ :—

ತತ್ತ್ವೇಶರು ಮೊದಲಾದವರಲ್ಲಿ ಫಲದಾತೃತ್ವ ಪ್ರತ್ಯಕ್ಷ ಕಂಡಾಗ್ಯೂ, ಆ ಕರ್ತೃತ್ವ ದೇವರಧೀನವೆಂಬುದಕ್ಕೆ ದೃಷ್ಟಾಂತ ಸಹ ತಿಳಿಸುತ್ತಾರೆ. "ಪಾದಪ"ಎಂಬ ಪದ್ಯದಿಂದ. ವೃಕ್ಷಗಳ ಬುಡಕ್ಕೆ ನೀರು ಹಾಕಲು ತೊಯಿದು. ಕೊಂಬೆಗಳು ಬೆಳೆದು, ಪುಷ್ಪಗಳನ್ನೂ ಮತ್ತು ರುಚಿಯಾದ ಫಲಗಳನ್ನೂ ಕೊಡುವಂತೆ, ಸರ್ವಸ್ವಾಮಿಯಾದ ದೇವರು ಆಯಾಯಾ ದೇವತೆಗಳಲ್ಲಿದ್ದು, ಅವರನ್ನಾರಾಧಿಸುವವರ ಸೇವೆಯನ್ನೂ ಬ್ರಹ್ಮರುದ್ರಾದಿನಾಮಗಳಿಂದ ತಾನೇ ತೆಗೆದುಕೊಂಡು, ಸೇವಕರಿಗೆ ಫಲಕೊಟ್ಟು ರಕ್ಷಿಸುವನು. ತನ್ನ ಸ್ವಾತಂತ್ರ್ಯ ಮಹಿಮೆಯನ್ನು ಅಜ್ಞರಿಗೆ ತೋರಲೀಸನು. ಅನಿಮಿತ್ತಫಲದಾತೃಗಳಲ್ಲೂ

ವ್ಯಾಪ್ತನೆಂದು ಆಶಯ. ಇದರಿಂದ **"ಲಭತೇ ಚ ತತಃ ಕಾಮಾನ್ ಮಯ್ಯೈವವಿಹಿಂತಾನ್ ಹಿತಾನ್"** —ಎಂಬ ಗೀತಾರ್ಥ ವಿವರಿಸಿತು. ॥೧೩॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಜಗತ್ತಿನಲ್ಲಿ ಜನರು ತಮಗೆ ಪ್ರಿಯರಾದ ಬೇರೆಬೇರೆ ದೇವತೆಗಳನ್ನು ಆರಾಧಿಸುವರು. ಇಂತಹ ಸಮಸ್ತದೇವತಾವರ್ಗದವರಲ್ಲಿ ಶ್ರೀ ಪರಮಾತ್ಮನು ತಾನೇ ಸನ್ನಿಹಿತನಾಗಿದ್ದು, ಅವರವರ ಹೆಸರಿನಲ್ಲಿ ತಾನೇ ಜನರ ಆರಾಧನೆಗಳನ್ನು ಸ್ವೀಕರಿಸಿ, ಅವರವರ ಉಪಾಸನೆಗನುಗುಣವಾದ ಫಲಗಳನ್ನು ಕೊಡುತ್ತಾನೆ. ಈ ತತ್ವಾರ್ಥವನ್ನು ದಾಸರಾಯರು ಸುಂದರವಾದ ದೃಷ್ಟಾಂತದಿಂದ ವಿವರಿಸುತ್ತಾರೆ.

ವೃಕ್ಷಗಳಿಗೆ ಬೇರುಗಳೇ ಆಧಾರ. ವೃಕ್ಷಗಳ ಪಾದಗಳಂತಿರುವ ಬೇರುಗಳಿಂದ ನೀರನ್ನು ಪಾನ ಮಾಡುವುದರಿಂದ ವೃಕ್ಷಗಳಿಗೆ "ಪಾದಪ"ಗಳೆಂದು ಹೆಸರು. ಗಿಡಗಳು ಸೊಂಪಾಗಿ ಬೆಳೆಯಬೇಕಾದರೆ, ಅವುಗಳ ಎಲೆ ಮತ್ತು ಕೊಂಬೆಗಳಿಗೆ ನೀರನ್ನು ಯಾರೂ ಎರೆಯುವುದಿಲ್ಲ. ಆದರೆ ಬೇರಿಗೆ ನೀರನ್ನು ಹಾಕುವರು. ಹೀಗೆ ಹಾಕಿದ ನೀರಿನಿಂದ ಬೇರುಗಳು ಚೆನ್ನಾಗಿ ತೊಯಿದು, ತಮ್ಮಲ್ಲಿರುವ ಸೂಕ್ಷ್ಮನಾಳಗಳ ದ್ವಾರಾ, ನೀರನ್ನು ಹೀರಿಕೊಳ್ಳುವುವು. ಹೀಗೆ ಹೀರಲ್ಪಟ್ಟ ನೀರು ಕ್ರಮವಾಗಿ ಕಾಂಡ ಶಾಖೆ ಉಪಶಾಖೆಗಳ ಮೂಲಕ ವ್ಯಾಪಿಸಿ, ಎಲೆಗಳು ಚಿಗಿತು, ಮೊಗ್ಗುಗಳು ಪುಷ್ಪಗಳಾಗಿ ವಿಕಾಸಹೊಂದಿ, ಸುಮಧುರವಾದ ಹಣ್ಣುಗಳನ್ನು ಕೊಡುವುವು. ಹೀಗೆ ವೃಕ್ಷಗಳ ಉಪಚಯ ದ್ವಾರ ಫಲೋತ್ಪತ್ತಿ. ಇದಕ್ಕೆ ಮೂಲ ಕಾರಣ ಬೇರುಗಳ ಪ್ರಮುಖಪಾತ್ರ. ಅಂತೆಯೇ ಈ ಜಗತ್ತು ಒಂದು ಮಹಾವೃಕ್ಷ, ಈ ಜಗದಾಖ್ಯವೃಕ್ಷದ ಬೇರುಗಳೇ ಜಗತ್ತಿಗೆ ಆಶ್ರಯ ಸ್ಥಾನಾಪನ್ನನಾದ ಶ್ರೀಪರಮಾತ್ಮನು. ಆತನೇ ಜಗತ್ತಿನ ಸಮಸ್ತವ್ಯಾಪಾರವಿಶೇಷಗಳಿಗೆ ಮೂಲಕಾರಣನು. ಪುರಾಣ ಹಾಗೂ ಇತಿಹಾಸಪ್ರಸ್ಥಾನಗಳಲ್ಲಿ ಹಿರಣ್ಯಕಶಿಪು, ರಾವಣ ಮುಂತಾದ ದೈತ್ಯರು ತಾವು ಅವಧ್ಯರಾಗಬೇಕೆಂದು ಬ್ರಹ್ಮ, ರುದ್ರಾದಿ ದೇವತೆಗಳನ್ನು ಕುರಿತು

ಘೋರ ತಪಸ್ಸುಗಳನ್ನು ಆಚರಿಸಿದರೆಂಬ ಪ್ರಸಂಗಗಳಿವೆ. ಆಗ ಬ್ರಹ್ಮ ರುದ್ರಾದಿಗಳು ಅವರ ತಪಸ್ಸಿಗೆ ಮೆಚ್ಚಿ, ವರಪ್ರದಾನ ಮಾಡಿದರು. ಆದರೆ ಆ ದೇವತೆಗಳಲ್ಲಿ ಸನ್ನಿಹಿತನಾಗಿದ್ದು, ಸ್ವಯಂ ಶ್ರೀ ಪರಮಾತ್ಮನೇ ಬ್ರಹ್ಮ ರುದ್ರಾದಿಗಳ ಹೆಸರಿನಿಂದ ವರಗಳನ್ನು ಕೊಟ್ಟನೆಂದು ತಾತ್ಪರ್ಯ. ಈ ದೃಷ್ಟಾಂತದಲ್ಲಿ ಜಗತ್ತು ವೃಕ್ಷಸದೃಶ. ಶ್ರೀ ಪರಮಾತ್ಮನು ಬೇರುಗಳ ಸದೃಶ. ಕೊಂಬೆ, ಎಲೆ, ಇತ್ಯಾದಿಗಳು ಜಗತ್ತಿನಲ್ಲಿ ವಿವಿಧ ಜನರ ಆರಾಧನಾವಿಷಯರಾದ ದೇವತಾವರ್ಗ. ಫಲಗಳು ವರಪ್ರದಾನರೂಪವಾದ ಕ್ರಿಯಾವಿಶೇಷ. ಜಗತ್ತಿನಲ್ಲಿ ಯಾರನ್ನು ಆರಾಧಿಸಿದರೂ, ಅದು ಅಂತ್ಯದಲ್ಲಿ ಮುಟ್ಟುವುದು ಅವರಲ್ಲಿ ಸನ್ನಿಹಿತನಾಗಿರುವ ಆ ಪರಮಾತ್ಮನನ್ನೇ ಎಂಬ ಭಾವಾರ್ಥವು. ಈ ಸೂಕ್ತವಾದ ದೃಷ್ಟಾಂತದಿಂದ ಹೃದಯಂಗಮವಾಗಿ ಚಿತ್ರಿಸಿದ್ದಾರೆ ಶ್ರೀ ದಾಸರಾಯರು, ಇಷ್ಟು ವ್ಯಾಪಾರವಿಶೇಷಗಳನ್ನು ತಾನೇ ಮಾಡಿದರೂ, ತನ್ನ ಮಹಿಮಾತಿಶಯಗಳನ್ನು ಮಾತ್ರ ಯಾರಿಗೂ ತೋರಗೊಡುವುದಿಲ್ಲ, ಆತನ ಮಹಾತ್ಮ್ಯೆಯನ್ನು ಸಾಕಲ್ಯೇನ ಯಾರೂ ಅರಿಯರು. ಇದಲ್ಲವೇ ಆ ಭಗವಂತನ ಅಚಿಂತ್ಯಾದ್ಭುತಲೀಲಾ ವೈಖರಿ ! ||೧೩||

## ಪದ್ಯ (೧೪)

**ಮೂಲ :—**

**ಶ್ರುತಿತತಿಗಳಿಗೆ ಗೋಚರಿಸದ ।**
**ಪ್ರತಿಮ ಜ್ಞಾನಂದಾತ್ಮನಚ್ಯುತ ।**
**ವಿತತ ವಿಶ್ವಾಧಾರ ವಿದ್ಯಾಧೀಶ ವಿಧಿಜನಕ ॥**
**ಪ್ರತಿದಿವಸ ಚೇತನರೊಳಗೆ ಪ್ರಾ ।**
**ಕೃತಪುರುಷನಂದದಲಿ ಸಂಚರಿ ।**
**ಸುತ ನಿಯಮ್ಯ ನಿಯಾಮಕನು ತಾನಾಗಿ ಸಂತೈಪ॥ ||೧೪||**

**ಅವತರಣಿಕೆ:—**

ಅನಂತಕಲ್ಯಾಣಗುಣಗಣರತ್ನಾಕರನಾದ ಶ್ರೀಹರಿಯು ವೇದಪ್ರತಿಪಾದ್ಯನು. ಸದಾಗಮ್ಯೈಕವೇದ್ಯನು, ಆದರೆ ಅಂತಹ ಅಪೌರುಷೇಯವಾಡ ಶಬ್ದಪ್ರಪಂಚವೂ ಸಹ ಅವನ ಗುಣಾತಿಶಯಗಳನ್ನು ಸಾಕಲ್ಯೇನ ವರ್ಣಿಸಲಾರದು. ಇಂತಹ ವೇದಾತೀತನಾದ ಶ್ರೀಪರಮಾತ್ಮನು ಜ್ಞಾನಾನಂದಸ್ವರೂಪನು. ಅಚ್ಯುತರೂಪಿಯಾದ ಭಗವಂತನು ಸರ್ವತ್ರವ್ಯಾಪ್ತನು. ವಿತತನಾದ ಪರಬ್ರಹ್ಮನು ವಿಶ್ವಕ್ಕೆ ಆಧಾರರೂಪಿಯು. ಅಂತಹ ಬ್ರಹ್ಮಜನಕನಾದ ಶ್ರೀ ಪರಮಾತ್ಮನು ಪ್ರಾಕೃತಪುರುಷನಂತೆ ಸರ್ವತ್ರ ವ್ಯಾಪಾರ ಮಾಡುತ್ತಾ, ಜಗದ್ವ್ಯಾಪಾರಗಳನ್ನು ನಿಯಮ್ಯ ನಿಯಾಮಕರೂಪಗಳಿಂದ ನಿರ್ವಾಹಮಾಡುತ್ತಾ ಸಲಹುವನು ಎಂದು ಹೇಳುತ್ತಾರೆ—"ಶ್ರುತಿತತಿಗಳಿಗೆ" —ಎಂಬ ಈ ಪದ್ಯದಿಂದ ॥೧೪॥

**ಪ್ರತಿಪದಾರ್ಥ :—**

**ಶ್ರುತಿತತಿಗಳಿಗೆ** = ವೇದಸಮೂಹಗಳಿಗೆ **ಗೋಚರಿಸದ** = ಪೂರ್ತಿಯಾಗಿ ಗೋಚರವಾಗದಿರುವ. (ಅಂದರೆ ವೇದಾಭಿಮಾನಿಗಳಾದ ಶ್ರೀ ರಮಾದೇವಿಯರಿಗೆ ಸಾಕಲ್ಯೇನ ಗೋಚರವಾಗದ ಗುಣಗಳುಳ್ಳ) **ಅಪ್ರತಿಮ** = ಅಸದೃಶನಾದ **ಅಜ** = ಉತ್ಪತ್ತಿಶೂನ್ಯನಾದ **ಆನಂದ** = ಆನಂದವೇ **ಆತ್ಮನು** = ಸ್ವರೂಪವಾಗಿ ಉಳ್ಳ **ಅಚ್ಯುತ** = ನಾಶರಹಿತನಾದ **ವಿತತ** = ಸರ್ವತ್ರ ವ್ಯಾಪ್ತನಾದ **ವಿಶ್ವಾಧಾರ** = ಬ್ರಹಾಂಡಕ್ಕೆ ಆಧಾರಭೂತನಾದ **ವಿದ್ಯಾಧೀಶ** = ವಿದ್ಯೆಗೆ ಮುಖ್ಯಾಧಿಪತಿಯಾದ (ವೇದವ್ಯಾಸಾದಿರೂಪಗಳಿಂದ ಜ್ಞಾನಪ್ರದನಾದವ) **ವಿಧಿಜನಕ** = ಬ್ರಹ್ಮದೇವರ ತಂದೆಯಾದ ಶ್ರೀ ಪರಮಾತ್ಮನು **ಪ್ರತಿದಿವಸ** = ಪ್ರತಿದಿನದಲ್ಲಿಯೂ (ನಿರಂತರದಲ್ಲಿ ಕಾಲಾಭಾದಿತನಾಗಿ) **ಚೇತನರೊಳಗೆ** = ಜೀವರಲ್ಲಿ (ಪ್ರಕೃತಿಸಂಬಂಧವಾದ ಸ್ಥೂಲದೇಹದಿಂದ ಕೂಡಿ ಲಿಂಗದೇಹಸಹಿತರಾದವರು) **ಪ್ರಾಕೃತಪುರುಷನಂದದಲಿ** = ಸಾಮಾನ್ಯವಾದ ಪಾಂಚಭೌತಿಕ ಶರೀರಯುಕ್ತರಾದ ಪುರುಷರಂತೆ **ಸಂಚರಿಸುತ** =

ಗಮನಾಗಮನ ವ್ಯಾಪಾರಾದಿ ವಿಶೇಷಗಳನ್ನು ಮಾಡುತ್ತಾ **ನಿಯಮ್ಯ**=ಭೃತ್ಯರಂತೆ ಪ್ರಭುವಿನ ನಿಯಮನಕ್ಕೆ ಒಳಪಟ್ಟವರಲ್ಲಿದ್ದು, (ದೇಹಾಂತರ್ಗತನಾಗಿ ಬಿಂಬರೂಪದಿಂದಿದ್ದು. ತನ್ನಿಂದ ನಿಯಮ್ಯರಾದ ತತ್ತ್ವಾಭಿಮಾನಿ ದೇವತೆಗಳಲ್ಲಿದ್ದು) **ನಿಯಾಮಕನು**=ಪ್ರಭುವರ್ಗದವರಲ್ಲಿದ್ದು ನಿಯಾಮಕನಾಗಿ (ದೇಹೇಂದ್ರಿಯಗಳಿಂದ ಆಯಾಯಾ ಕಾರ್ಯಗಳು ಆಗುವಂತೆ ಆಜ್ಞಾಪ್ರವರ್ತಕನಾಗಿದ್ದು) **ತಾನಾಗಿ**=ನಿಯಮ್ಯ—ನಿಯಾಮಕ ಇವೆರಡು ರೂಪಗಳಿಂದ ಸ್ವಯಂ ಇದ್ದು **ಸಂತೈಪ**=ತನ್ನ ಭಕ್ತರನ್ನು ಸಂರಕ್ಷಿಸುತ್ತಾನೆ ॥೧೪॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ವೇದಪ್ರತಿಪಾದ್ಯನು, ಆದಿಮಧ್ಯಾಂತರಹಿತನು, ಸಮಸ್ತಜಗಜೀವಾಧಾರಕನೂ, ಸಂಹಾರಕನೂ, ಅಂತರ್ಯಾಮಿಯೂ, ಜ್ಞಾನ–ವಿಜ್ಞಾನ-ಪ್ರಜ್ಞಾನಮಯನೂ, ಅಪ್ರಾಕೃತನೂ ಆದ ಶ್ರೀ ಪರಮಾತ್ಮನು, ಪ್ರತಿದಿವಸದಲ್ಲೂ, ಪ್ರತಿಕಲ್ಪದಲ್ಲೂ, ಪ್ರಕೃತಿಸಂಬಂಧವಾದ ಸ್ಥೂಲದೇಹದಿಂದ ಸಹಿತರಾದ ಚೇತನರೊಳಗೆ ಕೂಡಿಕೊಂಡು, ತಾನೂನೂ ಸಾಧಾರಣ ಮನುಷ್ಯರಂತೆ ಬಾಹ್ಯದಲ್ಲಿ ಸಂಚಾರಮಾಡತಾ ದುಷ್ಟನಿಗ್ರಹ, ಶಿಷ್ಟಪರಿಪಾಲನೆ ಮಾಡುತ್ತಾ, ಆಯಾಯ ತತ್ತ್ವಾಭಿಮಾನಿ ದೇವತೆಗಳಿಗೆ ತತ್ತ್ವದಿಂದ್ರಿಯ ವ್ಯಾಪಾರಗಳನ್ನ ಸದ್ವ್ಯಾಪಾರದಲ್ಲೇ ಮಾಡುವಂತೆ ಆಜ್ಞಾಮಾಡತಾ, ದುಷ್ಟರಾದ ದೈತ್ಯರ ಬಾಧಾ ಇಲ್ಲದಂತೆ ಅವರನ್ನ ನಿಗ್ರಹ ಮಾಡಿ, ತನ್ನ ಭಕ್ತರಾದವರನ್ನ ಸಂರಕ್ಷಣೆ ಮಾಡುವನು ಎಂತ ತಾತ್ಪರ್ಯ. ॥೧೪॥

### (೨) "ಭಾವಪ್ರಕಾಶಿಕೆ" –ವ್ಯಾಖ್ಯಾನ :—

ಶ್ರುತಿಸ್ವರೂಪಳಾದ ದುರ್ಗಾರೂಪಳಾದ ಲಕ್ಷ್ಮೀದೇವಿಯೂ ಸಹ

ಯಾವನ ಗುಣರೂಪಕ್ರಿಯೆಗಳನ್ನು ಸಾಕಲ್ಯೇನ ಅರಿಯಳೋ, ಯಾವನು ಸದೃಶರಹಿತನೋ, ಉತ್ಪತ್ತಿಶೂನ್ಯನೋ, ಆನಂದಸ್ವರೂಪನೋ, ನಾಶ ರಹಿತನೋ, ಸರ್ವತ್ರ ವ್ಯಾಪ್ತನೋ, ವಿಶ್ವಕ್ಕೆ ಆಧಾರಭೂತನೋ, ಸಕಲ ವಿದ್ಯಕ್ಕೂ ಅಧೀಶನೋ, ಬ್ರಹ್ಮದೇವರ ತಂದೆ ಎನಿಸುವನೋ. ಅಂತಹ ಶ್ರೀ ಪರಮಾತ್ಮನು ಪ್ರಕೃತಿಸಂಬಂಧರಾದ ತ್ರಿಗುಣಬದ್ಧರಾದ ಜೀವರ ಪ್ರಾಕೃತದೇಹದೊಳಗೆ ತಾನೂ ಪ್ರಾಕೃತ ಪುರುಷನಂತೆ ಚರಿಸುತ್ತಾ, ಒಬ್ಬನ ಲ್ಲಿದ್ದು ಆಜ್ಞಾ ಮಾಡುವನು. ಮತ್ತೊಬ್ಬನಲ್ಲಿದ್ದು ಆಜ್ಞೆಗೆ ಒಳಪಟ್ಟು ನಡೆಯುವನು. ಹೀಗೆ ರಾಜರುಗಳಿದ್ದು ಆಜ್ಞೆಯನ್ನು ಮಾಡಿ, ಆ ಜೀವರಿಗೆ ತನ್ನ ಆಜ್ಞೆಯನ್ನು ಜನರೆಲ್ಲರೂ ಪಾಲಿಸುವರೆಂದು ಭಾವಿಸುವಂತೆ ಬುದ್ಧಿಯ ನ್ನಿತ್ತು, ಸಂತೋಷವನ್ನುಂಟುಮಾಡುವನು. ಭೃತ್ಯಾದಿಗಳಲ್ಲಿದ್ದು ಆಜ್ಞೆ ಯನ್ನು ನೆರವೇರಿಸಿ, ರಾಜರುಗಳಿಗೆ ಸನ್ಮಾನವನ್ನು ಕೊಡಿಸಿ, ಸಂತೋಷ ಪಡಿಸುವನು. ॥೧೪॥

## (೩) "ಭಾವದರ್ಪಣ ಟೀಕಾ" —ವ್ಯಾಖ್ಯಾನ :—

ಶ್ರೀಪರಮಾತ್ಮನು ಸರ್ವಜೀವರಲ್ಲಿ ತಾನೇ ನಿಂತು ಮನುಷ್ಯನ ಹಾಂಗೆ ಆಚರಣೆ ಮಾಡುತ್ತಾ, ಆಜ್ಞಾ ಮಾಡುವವನೂ ಕೇಳುವವನೂ ಎಂತ ಅನಿಸಿ ಕೊಂಡು ಸಂರಕ್ಷಿಸುವನೆಂದು ಹೇಳುತ್ತಾರೆ- "ಶ್ರುತಿ" —ಎಂಬ ಪದ್ಯದಿಂದ.

ವಿಧಿಜನಕ–ಬ್ರಹ್ಮನ ಪಿತ, ಪ್ರಾಕೃತಪುರುಷ ॥ ನಶ್ವರದೇಹವುಳ್ಳ ಮನುಷ್ಯನಹಾಗೆ ಎಂದರ್ಥ **ಉಕ್ತಂಚ ಕಮಠಶ್ರುತೌ- "ಯೋ ಜೀವ ವಧ್ಯೋನಿಷು ಭಾತ್ಯನಂತೋ ಮೃಡೈರಿತಿ"॥** ಆಜ್ಞಾಧಾರಕನಲ್ಲಿದ್ದು ನಿಯಮ್ಯ ಎನಿಸುವ. ಆಜ್ಞಾಮಾಡುವರಲ್ಲಿದ್ದು ನಿಯಾಮಕನೆನಿಸುವ ಎಂದರ್ಥ ಸಂತೃಪ–ಸಂರಕ್ಷಿಸುವ ॥೧೪॥

## (೪) ಶ್ರೀ ಜಮುಖಂಡಿವಾದಿರಾಜಾಚಾರ್ಯರ ವ್ಯಾಖ್ಯಾನ :—

**ಅಜ = ನಿಯಮ್ಯಃ ತದ್ಗತಃ ॥**

"ಅಪ್ರತಿಮಜ" ಎಂಬ ಪದಸಮುಚ್ಚಯದಲ್ಲಿ "ಅಪ್ರತಿಮ" ಮತ್ತು "ಅಜ" ಎಂಬುದಾಗಿ ಪದಗಳನ್ನು ವಿಭಕ್ತಮಾಡಿಕೊಳ್ಳಬೇಕು. ಚೇತನರಲ್ಲಿದ್ದು "ನಿಯಮ್ಯ" -ನೆಂತಲೂ, ಆಜ್ಞಾಮಾಡುವರಲ್ಲಿ ಸನ್ನಿಹಿತನಾಗಿದ್ದ "ನಿಯಾಮಕ"ನೆಂತಲೂ ಕರೆಯಲ್ಪಡುತ್ತಾನೆ ॥೧೪॥

**(೩) "ಗುರುಹೃದಯಪ್ರಕಾಶಿಕೆ" — ವ್ಯಾಖ್ಯಾನ :—**

ಅನಂತವೇದಸಮೂಹಕ್ಕೆ, ತದಭಿಮಾನಿಗಳಿಗೆ ಗೊತ್ತಾಗದವನು. ಅಸದೃಶ ಆನಂದರೂಪನು. ಚ್ಯುತಿಇಲ್ಲದವನು. ಜಗದಾಧಾರನು. ಸರ್ವವಿದ್ಯಾಧಿಪತಿ. ಬ್ರಹ್ಮಜನಕನು. ಇತ್ಯಾದ್ಯನಂತಮಹಿಮನಾದಾಗ್ಯೂ ಜೀವರುಗಳಲ್ಲಿ ಸರ್ವದಾ ಪ್ರಾಕೃತಪುರುಷನಂದದಲಿ, ಎಂದರೆ ಪ್ರಕೃತಿಬದ್ಧಜೀವನಂತೆ, ಸಂಚರಿಸುತ ಎಂದರೆ, ಜೀವಕ್ರಿಯಾವ್ಯಕ್ತ್ಯರ್ಥವಾಗಿ ಕಾರ್ಯಗಳನ್ನಾಚರಿಸುತ್ತ. ನಿಯಮ್ಯ ನಿಯಾಮಕನು ತಾನಾಗಿ ಎಂದರೆ, ಸ್ವಾಮಿಭೃತ್ಯಜೀವರಲ್ಲಿದ್ದು, ಸ್ವಾಮಿಭೃತ್ಯರೆಂಬ ನಾಮಗಳಿಗೆ ಮುಖ್ಯವಾಚ್ಯನಾಗಿ. ಸಂತೈಸುವ, ಎಂದರೆ, ಒಬ್ಬರಿಂದ ಒಬ್ಬರನ್ನು ಸಂತೋಷಪಡಿಸುವನು. ಈ ನಿಮಿತ್ತ ವ್ಯಾಪ್ತನೆಂದು ಹೃದಯ. ಇದರಿಂದ

**"ಸರ್ವಶಬ್ದಾಭಿಧೇಯಶ್ಚ ಸರ್ವವೇದೋದಿ ತಶ್ಚಸಃ ॥" —ಎಂಬ ಭಾಷ್ಯಾರ್ಥ** ವಿವರಿಸಿತು ॥೧೪॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಅಪೌರುಷೇಯವಾದ ವೇದಗಳು ಅನಂತಸಂಖ್ಯಾಕವಾಗಿವೆ. ಇಂತಹ ಅನಂತ ವೇದಸಮೂಹಗಳು ಶ್ರೀಪರಮಾತ್ಮನ ಅನಂತಕಲ್ಯಾಣಗುಣಸ್ತೋಮವನ್ನೂ, ಆತನ ರೂಪಕ್ರಿಯಾವಿಶೇಷಗಳನ್ನು ನಿರಂತರವೂ ಕೊಂಡಾಡುತ್ತಲೇ ಇವೆ. ಅತಏವ ಶ್ರೀಮನ್ನಾರಾಯಣನು ವೇದಪ್ರತಿಪಾದ್ಯನು. ಸದಾಗಮೈಕವೇದ್ಯನು. ಆದರೆ ಇಂತಹ ವೇದವಾಙ್ಮಯವೂ ಸಹ ಸಾಕಲ್ಯೇನ ಆತನ ಮಹಿಮಾವಿಶೇಷಗಳೆನ್ನು ವರ್ಣಿಸಲಾರದು. ಅಂದರೆ, ವೇದಾಭಿ

ಮಾನಿಗಳಾದ ಶ್ರೀ ರಮಾದೇವಿಯರೂ ಸಹ ಆ ಭಗವನಂತನನ್ನು ಸಾಕಲ್ಯೇನ ಅರಿಯರು. ಅವರಪಾಲಿಗೇ ಕ್ಷಣಕ್ಷಣದಲ್ಲಿಯೂ ನಿತ್ಯನೂತನವಾಗಿ ಗೋಚರಿಸುತ್ತಿರುವ ಪರಮಾಶ್ಚರ್ಯವಸ್ತು ಶ್ರೀಪರಮಾತ್ಮನು. ಅಸದೃಶ ಮಹಿಮಾ ಸಂಪನ್ನನು. ಅವನಿಗೆ ಸಮರೇ ಇಲ್ಲವೆಂದಮೇಲೆ, ಅಧಿಕರಿನ್ಯಾರಿರುವರು ? ಸಮಾಭ್ಯಧಿಕಶೂನ್ಯನಾದ್ದರಿಂದಲೇ ಸರ್ವೋತ್ತಮದೇವತಾ. ಉತ್ಪತ್ತಿಶೂನ್ಯನಾದ್ದರಿಂದ "ಅಜ"ನಾಮಕನು. ಅಪ್ರಾಕೃತವಾದ ಆನಂದಸ್ವರೂಪಿಯು. ಪರಮಾನಂದಉದ್ರಿಕ್ತವಸ್ತು. ನಾಶರಹಿತನಾದರಿಂದ ಅಚ್ಯುತನು. ಅತ ಏವ ಆಧಿಮಧ್ಯಾಂತರಹಿತನು. ಸರ್ವತ್ರವ್ಯಾಪ್ತನಾದ್ದರಿಂದ ವಿತತನು. ಇಂತಹ ವಿತತನಾಮಕನಾದ ಶ್ರೀಹರಿಯು ಅಣುರೇಣು ತೃಣಕಾಷ್ಠಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತರೂಪಗಳಿಂದ ವಿರಾಜಮಾನನಾಗಿದ್ದಾನೆ. ಸಮಸ್ತ ಬ್ರಹ್ಮಾಂಡಕ್ಕೇ ಆತನೇ ಮೂಲಾಧಾರನು. ಅಲ್ಲದೆ. "ವಿಶ್ವ"ನಾಮಕನಾಗಿ ಸರ್ವಜೀವರ ಬಲಗಣ್ಣಿನ ತುದಿಯಲ್ಲಿದ್ದು ಜಾಗ್ರದಾವಸ್ಥೆಗೆ ಸಕಲವಿಧವಾದ ವಿದ್ಯೆಗಳಿಗೂ ಅಧಿಪತಿಯು. ಹೀಗೆ ವಿದ್ಯಾಧೀಶನಾದ ಶ್ರೀಪರಮಾತ್ಮನು ವೇದವ್ಯಾಸಾದಿ ಅವತಾರವಿಶೇಷಗಳಿಂದ ಜಗತ್ತಿಗೆ ವಿದ್ಯಾಸ್ಥಾನಾಪನ್ನನಾಗಿ ಆದಿಗುರುವೆನಿಸಿದ್ದಾನೆ. ತನ್ನ ನಾಭೀಕಮಲದಿಂದ ಉತ್ಪನ್ನರಾದ ಚತುರ್ಮುಖದೇವರ ಜನಕನು. ಹೀಗೆ ಜಗತ್ತಿನ ಸೃಷ್ಟಿಗೆ ಮೂಲಕಾರಣನಾದ ಶ್ರೀ ಪರಮಾತ್ಮನು ಸರ್ವಚೇತನರೊಳಗೆ ಬಿಂಬರೂಪದಿಂದಿದ್ದು, ಅನಿಮಿತ್ತ ಬಂಧುವಾಗಿದ್ದಾನೆ. ಕ್ಷಣವಾದರೂ ಜೀವರನ್ನು ಬಿಟ್ಟಗಲನು. ಪ್ರತಿದಿವಸದಲ್ಲಿಯೂ, ಪ್ರತಿಕಲ್ಪಗಳಲ್ಲಿ ಅಂದರೆ ಸಾರ್ವಕಾಲಿಕವಾಗಿ. ಜಗತ್ಪ್ರಭುವು ಜೀವರ ಅಂತರ್ಯಾಮಿಯಾಗಿದ್ದುಕೊಂಡು, ಪ್ರಾಕೃತಪುರುಷರಾದ ಮಾನವರಂತೆಯೇ ಗೋಚರಿಸುತ್ತಾ, ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು. ಜೀವರು ಪ್ರಕೃತಿಬದ್ಧರು. ಅಂದರೆ ತ್ರಿಗುಣಾತ್ಮಕವಾದ ಲಿಂಗದೇಹದಿಂದ ಬದ್ಧರು. ಜೀವರಿಂದ ಪರಮವಿಲಕ್ಷಣನಾದ ಬಿಂಬರೂಪೀ ಶ್ರೀ ಪರಮಾತ್ಮನು ಪ್ರಕೃತಿಬದ್ಧ ಜೀವರಂತೆಯೇ ಜೀವಕ್ರಿಯಾವ್ಯಕ್ತ್ಯರ್ಥವಾಗಿ ಕಾರ್ಯಗಳನ್ನು ಆಚರಿಸುತ್ತಿರುವನು. ಇದರಿಂದಲೇ ತನ್ನ ಮಹಿಮೆಗಳನ್ನು ಸಾಮಾನ್ಯ ಮಾನವರಿಗೆ ತೋರಗೊಡನು. ಆಜ್ಞಾಮಾಡತಕ್ಕ ರಾಜರು, ಪ್ರಭುಗಳಲ್ಲಿ ಇದ್ದು, ಆಜ್ಞಾಮಾಡುತ್ತಾ "ನಿಯಾಮಕ"ನೆಂಬ ರೂಪದಿಂದ

ವಾಚ್ಯನಾಗಿದ್ದಾನೆ. ಆಜ್ಞಾಧಾರಕರಾದ ಸೇವಕರಲ್ಲಿದ್ದು, "ನಿಯಮ್ಯ" ನೆಂದೆನಿಸಿಕೊಳ್ಳುವನು. ಈ ನಿಯಾಮಕ-ನಿಯಮ್ಯರೂಪಗಳು "ಸ್ವಾಮಿ ಭೃತ್ಯ" ನ್ಯಾಯದಂತೆ ವ್ಯಾಪ್ತವಾಗಿವೆ. ಪರಾಪೇಕ್ಷಾರಹಿತನಾದ, ಸ್ವಾಮಿಯು ಸರ್ವತಂತ್ರಸ್ವತಂತ್ರನು. ಭಕ್ತಜನರಲ್ಲಿ ಸ್ವಯಂರೂಪದಿಂದಿದ್ದು, ಅವರಲ್ಲಿ ಸಕಲ ವ್ಯಾಪಾರಗಳನ್ನೂ ತಾನೇ ಮಾಡಿ ಮಾಡಿಸಿ, ಅವರನ್ನು ಸದಾ ಸಂರಕ್ಷಿಸುತ್ತಿರುವ ಕರುಣಾಮಯನು. ॥೧೪॥

## ಪದ್ಯ (೧೫)

**ಮೂಲ :—**

**ಮನ ವಿಷಯದೊಳಗಿರಿಸಿ ವಿಷಯವ ।**
**ಮನದೊಳಗೆ ನೆಲೆಗೊಳಿಸಿ ಬಲು ನೂ ।**
**ತನವು ಸುಸವಿಾಚೀನವಿದುಪಾದೇಯವೆಂದರುಪಿ ॥**
**ಕನಸಿಲಾದರು ತನ್ನ ಪಾದದ ।**
**ನೆನೆವನೀಯದೆ ಸರ್ವರೊಳಗಿ ।**
**ದ್ದನುಭವಿಸುವನು ಸ್ಥೂಲವಿಷಯವ ವಿಶ್ವನೆಂದೆನಿಸಿ॥ ॥೧೫॥**

**ಅವತರಣಿಕೆ :—**

ಮನಸ್ಸಿಗೆ ವಿಷಯಗಳ ಸನ್ನಿಕರ್ಷ, ವಿಷಯಗಳಿಗೆ ಮನಸ್ಸಿನ ಸಂಬಂಧ ಇವುಗಳನ್ನು ಪರಸ್ಪರ ಉಂಟುಮಾಡಿ. ವಿಷಯೋಪಭೋಗಗಳೆಲ್ಲವೂ ಹೊಸದು ಮತ್ತು ಬಹು ಹಿತಕರವೆಂದೆನಿಸಿ, ಮನೋವ್ಯಾಪಾರಗಳನ್ನು ಶ್ರೀ ಪರಮಾತ್ಮನು ಮನೋಭಿಮಾನಿದೇವತೆಗಳ ದ್ವಾರಾ ನಡೆಯಿಸುವ ವೈಖರಿಯನ್ನು ವಿವರಿಸುತ್ತಾರೆ- "ಮನ" —ಎಂಬ ಈ ಪದ್ಯದಿಂದ ॥೧೫॥

**ಪ್ರತಿಪದಾರ್ಥ :—**

**ಮನ** = ಮನಸ್ಸನ್ನು **ವಿಷಯದೊಳಗೆ** = ದಶೇಂದ್ರಿಯಗಳಿಗೆ ವಿಷಯಗಳಾದ ಗಂಧ, ರಸ, ರೂಪ, ಸ್ಪರ್ಶ, ಶಬ್ದಾದಿಗಳಲ್ಲಿ **ಇರಿಸಿ** = ಇಡಿಸಿ ಅನುಗೊಳಿಸಿ **ವಿಷಯವ** = ಮನೋದ್ವಾರಾ ಇಂದ್ರಿಯಗಳಿಂದ ಸ್ವೀಕರಿಸಿದ ವಿಷಯಸುಖಗಳನ್ನು **ಮನದೊಳಗೆ** = ಪುನಃ ಮನಸ್ಸಿನಲ್ಲಿ **ನೆಲೆಗೊಳಿಸಿ** = ಸ್ಥಿರೀಕರಿಸಿ **ಬಲುನೂತನವು** = ಇದುವರೆಗೆ ಅನೇಕಾವರ್ತಿ ಭೋಗಿಸಿದ್ದರೂ, ಆಗ ಅತ್ಯಂತ ಹೊಸದಾಗಿದೆ ಎಂತಲೂ **ಸುಸಮೀಚೀನವಿದು** = ಭೋಗಕ್ಕೆ ಯೋಗ್ಯವಾದ ಅತ್ಯುತ್ಕೃಷ್ಟವಾದುದು ಎಂಬುದಾಗಿ **ಉಪಾದೇಯವೆಂದು** = ತತ್ಕಾಲಕ್ಕೆ ಅತ್ಯಂತ ಸುಖವನ್ನು ಕೊಡುವುದು ಎಂಬ ರೀತಿಯಲ್ಲಿ (ಉಪ = ಸಮೀಪ ಅಂದರೆ ತತ್ಕಾಲಕ್ಕೆ. ಆ = ಸಮ್ಯಕ್, ಚೆನ್ನಾಗಿ. ದೇಯಾ = ಸುಖಪ್ರದವೆಂತಲೂ) **ಅರುಪಿ** = ಮನಸ್ಸಿನದ್ವಾರಾ ಜೀವರಿಗೆ ತಿಳಿಸಿ **ಕನಸಿಲಾದರು** = ಸ್ವಪ್ನಕಾಲದಲ್ಲಿಯೂ ಸಹ **ತನ್ನ ಪಾದದ** = ತನ್ನ ಪಾದಕಮಲಗಳ **ನೆನೆವನೀಯದೆ** = ಸ್ಮರಣೆಯನ್ನೂ ಸಹ ಕೊಡದೆ **ಸರ್ವರೊಳಗಿದ್ದು** = ಸಮಸ್ತ ಚೇತನವರ್ಗದವರಲ್ಲಿ ತಾನು ಅಂತರ್ಯಾಮಿರೂಪತ್ವೇನ ಇದ್ದು **ಸ್ಥೂಲವಿಷಯವ** = ಸ್ಥೂಲವಾದ ವಿಷಯಭೋಗಗಳನ್ನು (ದಶೇಂದ್ರಿಯಗಳು ಸ್ಥೂಲೇಂದ್ರಿಯಗಳು; ಮನಸ್ಸು, ಬುದ್ಧಿ, ಚಿತ್ತ ಮುಂತಾದವು ಸೂಕ್ಷ್ಮೇಂದ್ರಿಯಗಳು) **ವಿಶ್ವನೆಂದೆನಿಸಿ** = ಜಾಗರಾವಸ್ಥೆಗೆ ಪ್ರೇರಕನಾದ "ವಿಶ್ವ"ಎಂಬ ನಾಮಧೇಯದಿಂದ **ಅನುಭವಿಸುವನು** = ವಿಷಯಾಂತರ್ಗತ ಸ್ವಾಖ್ಯರೂಪಗಳನ್ನು (ಅಂದರೆ ಆ ವಿಷಯಾದಿಗಳ ಭೋಗಕ್ಕೆ ಯೋಗ್ಯವಾದ ತಾನಿಟ್ಟಿರುವ ಸ್ವಾಭಿನ್ನ ಭಗವದ್ರೂಪಗಳನ್ನು) ಅನುಭವಿಸುತ್ತಾನೆ. ಅಂದರೆ "ಸ್ಥೂಲಭುಕ್" ಎಂದೆನಿಸಿ, ವಿಶ್ವನಾಮಕನಾಗಿ ಬಿಂಬಕ್ರಿಯಾದ್ವಾರ ತನ್ನ ರೂಪಗಳಲ್ಲಿಯೇ ರಮಿಸುವನು, (ಸ್ವರಮಣನಾದ್ದರಿಂದ)

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಮನಸ್ಸೆಂಬುದು ಒಂದು ಗೋಳಕವು. ಇದರಲ್ಲಿ ವಿದ್ಯಮಾನವಾದ,

ಲಿಂಗದೇಹಸ್ಥ ಸುಪ್ತಪರಿಚ್ಛೇದವಾದ, ಪ್ರಥಮಪರಿಚ್ಛೇದಗತ ಅನಾದಿ ಜಡಮನಸ್ಸು ಪರಂಪರಾದಿಂದ ಒಂದು; ಸ್ಥೂಲದೇಹಗತ ಗೋಳಕಸಾಂಕೇತವಾದ ಮನದಲ್ಲಿ ವ್ಯಾಪಿಸಿ ಅದೆ. ಅದರಲ್ಲಿ ದೇಹದಲ್ಲಿ ವ್ಯಾಪ್ತನಾದ ಜೀದನ ಚಿನ್ಮನಸ್ಸನ್ನು ದಶೇಂದ್ರಿಯಗಳಿಗೆ ವಿಷಯಗಳಾದ ರೂಪರಸಾದಿಗಳು, ಗಮನಾಗಮನಗಳು ಇತ್ಯಾದಿ ಇಂದ್ರಿಯವಿಷಯಗಳಲ್ಲಿ, ವಿಶ್ವರೂಪ ಪರಮಾತ್ಮ ಪ್ರವೇಶಮೊಡಿ, ತದ್ವಾರಾ ಬಾಹ್ಯವಾದ ಭೋಗಯೋಗ್ಯ ಪ್ರಾಕೃತ ವಿಷಯಗಳಲ್ಲಿ ಮನಸ್ಸನ್ನು ಪ್ರವೇಶಮಾಡಿಸಿ, ಮನೋದ್ವಾರಾ ಇಂದ್ರಿಯಗಳಿಂದ ಸ್ವೀಕರಿಸಿದ ವಿಷಯವನ್ನು ಪೂರ್ವೋಕ್ತಪ್ರಕಾರ ಇರತಕ್ಕ ಸ್ಥೂಲಗತ ಮನದೊಳಗೆ, ಇಂದ್ರಿಯದ್ವಾರಾ ಪ್ರವೇಶಮೊಡಿಸಿ, ಇಟ್ಟು, ಎಂದರೆ. ಪೂರ್ವೋಕ್ತ ಕ್ರಮದಿಂದ ಬಿಂಬಕ್ರಿಯದ್ವಾರಾ ಇಟ್ಟವನಾಗಿ, ಇದುವರೆಗೆ ಅನೇಕಾವರ್ತಿ ಜೀವನನಾದವ ಭೋಗಮಾಡಿದ ವಿಷಯಗಳಾದ ಕಾಲಕ್ಕೂ ಆತ್ಯಂತ ನೂತನವು ಎಂತಲೂ, ಭೋಗಕ್ಕೆ ಯೋಗ್ಯವಾಧ ಸುಸಮೀಚೀನವಾದ ವಿಷಯ ಇದು ಎಂತಲೂ ಮನಸ್ಸಿಗೆ ತಿಳಿಸುತ್ತಾನೆ. ಜಾಗ್ರತ್ಕಾಲದ ವಾಸನೇನೇ ಸ್ವಪ್ನ, ಜಾಗ್ರತ್ಕಾಲದಲ್ಲಿ ಪೂರ್ವೋಕ್ತಪ್ರಕಾರ ಅನುಸಂಧಾನ, ಜ್ಞಾನ, ಜ್ಞಾಪಕದಲ್ಲಿ ಕೊಡದೇ ಇರೋಣದರಿಂದ ಸ್ವಪ್ನದಲ್ಲಾದರೂ ಜ್ಞಾಪಕ ಕೊಡೋದಕ್ಕೆ ಅವಕಾಶವಿಲ್ಲದಾಯಿತು. ಆದ್ದರಿಂದ ಜಾಗ್ರತ್, ಸ್ವಪ್ನ ಈ ಉಭಯಕಾಲಗಳಲ್ಲಿ (ಜಾಗ್ರತ್ಕಾಲದಲ್ಲಿ ವಿಶ್ವ, ಸ್ವಪ್ನಕಾಲದಲ್ಲಿ ತೈಜಸ) ಈ ಉಭಯ ರೂಪಾತ್ಮಕನಾದ ಶ್ರೀಪರಮಾತ್ಮನು ತಮ್ಮ ತಮ್ಮ ಪಾದದ ಜ್ಞಾಪಕವೂ, ಱಂದರೆ. ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾ ಎಂಬ ಜ್ಞಾಪಕವು ತಮ್ಮ ಪಾದದಲ್ಲಿ ಕೊಡದೇ ಎಂದರೆ. ಅಂಥಾ ಸಾಧನಿ ಪರಿಪಕ್ವ ಕಾಲ ಬಾರದೇ ಇರೋಣದರಿಂದ ಕೊಡದವನಾಗಿ, ಸರ್ವ ಚರಾಚರ ಪ್ರಾಣಿಗಳಲ್ಲಿ, ಸರ್ವ ಜಡಗಳಲ್ಲಿ ತದಾಕಾರ ತಚ್ಛಬ್ದವಾಚ್ಯನಾಗಿ ಅನುಭವಿಸುತ್ತಾನೆ. (ದಾವುದನ್ನ ? ದಾರು ? ಎಂದರೆ) ಜೀವರು ಸ್ಥೂಲದೇಹದಿಂದ ಅನುಭವಿಪ ಸ್ಥೂಲ ವಿಷಯಗಳಲ್ಲಿ ಸ್ಥೂಲಪದವಾಚ್ಯನಾಗಿ, ದ್ರವ್ಯನಾಮದಿಂದಲೂ ವಾಚ್ಯನಾಗಿದ್ದು, ಇಂಥಾ ಸ್ಥೂಲಸಾಂಕೇತವಾದ ಸ್ವಾಖ್ಯ

ವಿಷಯುಗಳ ಸ್ಥೂಲದೇಹಾಂತರ್ಗತನಾಗಿ, ಸ್ಥೂಲದೇಹಪದವಾಚ್ಯನಾಗಿದ್ದು, ಸ್ವಾಖ್ಯ ಸ್ಥೂಲದೇಹರೂಪದಿಂದ, ವಿಷಯಾಂತರ್ಗತಸ್ವಾಖ್ಯವಿಷಯುಗಳ ಅನುಭವಿಸುತಾನೆ. "ವಿಶ್ವ" ಎಂಬ ನಾಮದಿಂದ ಕರೆಸಿ, ಜಾಗ್ರತ್ಕಾಲದಲ್ಲಿ ಅಂಥಾ ಭೋಗಗಳ ಮಾಡತಾನೆ. ತದ್ವತ್ ತೈಜಸ ಪ್ರಾಕೃತ ವಿಷಯ ಜೀವನ ದ್ವಾರಾ ಜಡದೇಹಕ್ಕೆ ಸಂಬಂಧಮಾಡಿ, ದೇಹಾಭಿಮಾನವಿಶಿಷ್ಟನಾದ ಜೀವ ನೊಡಗೂಡಿ ಸಂತೋಷಪಡೋ ಭಾಗ್ಯವನ್ನು ಕೊಡೋವನಾಗತಾನೆ. ಜೀವ ರಿಗೆ ಉಪಚಯಭಾಗದಾವದೂ ಇಲ್ಲ. ದೇಹಗತತತ್ವದೇವತೆಗಳಿಗೆ ವಿಶ್ವ ತೈಜಸದೋಪಾದಿಯಲ್ಲಿ ಭೋಗವು ॥೧೫॥

## (೨) "ಭಾವಪ್ರಕಾಶಿಕೆ" –ವ್ಯಾಖ್ಯಾನ :—

ಶ್ರೀ ಪರಮಾತ್ಮನು ಸಾತ್ವಿಕಜನರ ಮನಸ್ಸನ್ನು ಮಾತ್ರ ತನ್ನ ಪಾದಾರ ವಿಂದದ ಸ್ಮರಣೆಯಲ್ಲಿರಿಸಿ, ವಿಷಯಸುಖವನ್ನು ಬಲು ನಶ್ವರವೆಂತಲೂ, ತುಚ್ಛವೆಂತಲೂ ಜ್ಞಾನವನ್ನು ಕೊಡಿಸುವನು. ರಾಜಸ ಮತ್ತು ತಾಮಸ ಜನ ರನ್ನು ಹಾಗೆ ಮಾಡುವುದಿಲ್ಲ. ಅವರಿಗೆ ಹೇಗೆ ಪ್ರೇರಿಸುವನೆಂಬ ವಿಷಯುವನ್ನು ಇಲ್ಲಿ ಹೇಳುತ್ತಾರೆ.

ಮನಸ್ಸನ್ನು ವಿಷಯಸುಖದಲ್ಲಿ, ಅಂದರೆ, ಮೃಷ್ಟಾನ್ನವನ್ನು ಭುಂಜಿಸ ಬೇಕು. ಸ್ತ್ರೀಯಾದಿ ಭೋಗಗಳನ್ನನುಭವಿಸಬೇಕು–ಎಂಬಿವೇ ಮೊದಲಾದ ವಿಷಯಭೋಗಗಳಲ್ಲಿ ಇಟ್ಟು, ಅವರ ಮನದಲ್ಲಿ ಈ ಸುಖವು ಹಿಂದೆ ಯಾವಾ ಗಲೂ ಕಾಣದ್ದು. ಬಹು ಹೊಸದು. ಉತ್ಕೃಷ್ಟವಾದುದು. ಇದನ್ನೇ ನಾವು ಉಪಭೋಗಿಸಬೇಕೆಂಬ ಬುದ್ಧಿಯನ್ನು ಹುಟ್ಟಿಸಿ, ಮನಸ್ಸಿನಲ್ಲಿ ಅವುಗಳನ್ನೇ ಸ್ಥಿರಪಡಿಸಿ, ಜಾಗ್ರದಾವಸ್ಥೆಯಲ್ಲಿ, ಅಂದರೆ, ಎಚ್ಚೆತ್ತಿರುವಾಗ, ಭಗವ ತ್ಸ್ಮರಣೆಯನ್ನು ಮಾಡದಿರುವಂತಿರಲಿ, ಸ್ವಪ್ನದಲ್ಲಿಯೂ ಕೂಡ ತನ್ನ ಪಾದ ಸ್ಮರಣೆಯ ನೆನಪನ್ನೇ ಅವರಿಗೆ ಬರದಂತೆ ಮಾಡಿ, ವಿಶ್ವನಾಮಕನಾಗಿ ಎಲ್ಲ ರಲ್ಲಿಯೂ ಇದ್ದು, ಸ್ಥೂಲವಾದ ವಿಷಯಸುಖಗಳನ್ನು ತಾನು ಅನುಭವಿಸು ವನು. ॥೧೫॥

## (೩) "ಭಾವದರ್ಪಣಟೀಕಾ"— ವ್ಯಾಖ್ಯಾನ :

ಕರ್ಮ ಅಪಕ್ವಕಾಲದಲ್ಲಿ ಶ್ರೀಪರಮಾತ್ಮ ನಡಸತಕ್ಕ ಕ್ರಿಯಾ ಹೇಳುತ್ತಾರೆ. "ಮನ ವಿಷಯು" —ಎಂಬ ಪದ್ಯದಿಂದ.

**ಉಕ್ತಂಚ ಸತ್ತತ್ವರತ್ನ ಮಾಲಾಯಾಂ- "ಸರ್ವೈರ್ಯದ್ಭುಜತೇ ಚಾನ್ನಂ ತತ್ರ ತತ್ರ ಸ್ಥಿತೋ ವಿಭುಃ ॥ ತತ್ತದ್ಭುಂಜ್ಯತೇ ಸ್ಥೂಲಮಪಿ ಸ್ವಕೀಯೈರೀಂದ್ರಿಯೈಸ್ಸದೇತಿ ॥"** ನೆನೆವ = ಸ್ಮರಣೆ. ॥೧೫॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ— (ಸಂಸ್ಕೃತಮೂಲ) :—

ಮನ ಇತಿ ॥ ವಿಷಯೇಂದ್ರಿಯ ಸಂಯೋಗಾದಿತ್ಯುಕ್ತೇಃ ॥ ಸಂಸ್ಕಾರಃ ವಿಷಯಾ ವಿಷಯವೃತ್ತಯಃ ॥ ತದಾತ್ಮನಾ ವಿಷಯಾನ್ ಮನಸಿ, ಉಪಾದೇಯ = ಅಸ್ವೀಕರ್ತುಮಶಕ್ಯ । ಈಯದೆ = ಕೊಡದೆ ॥ ಸ್ಥೂಲೇತಿ ಸ್ಥೂಲಾನ್ ಭೋಗಾನಿಂದ್ರಿಯೈಃ ಸಃ ಶುಭಾನ್ ಭುಂಕ್ತೇ ನ ಚಾಶುಭಾನ್ ವಿಶ್ವಂ ಸ್ಥೂಲಂ ಸಮುದ್ದಿಷ್ಟಮಿತಿ ॥ ತತ್ತದ್ಭುಂಕ್ತೇ ಸ್ಥೂಲಮಪೀತಿ ॥ ದಕ್ಷಿಣಾಕ್ಷಿಸ್ಥಿತಃ ಇತಿ ಚ ॥ ಚರ್ವಣಾದಿನಾ ಪದಾರ್ಥ ನಾಶೇನ ಭೋಗಃ ಏವೇತಿ ಚ ॥ ಏತಚ್ಚ ಸವಿಸ್ತರಂ— "ಆರುರಸಗಳನರ್ಪಿಸ್ವಿತಿ ಪದ ವರ್ಣಕೇ ವದಿಷ್ಯಾಮಃ ॥೧೫॥

## ಕನ್ನಡಾನುವಾದ :—

ವಿಷಯಗಳಿಗೂ ಇಂದ್ರಿಯಗಳಿಗೂ ಪರಸ್ಪರ ಸಂಬಂಧ. ನಂತರ ಇಂದ್ರಿಯಗಳಿಗೆ ಮನಸ್ಸಿನ ದ್ವಾರಾ ಸಂಬಂಧ. ಇದು ವಿಷಯ–ಇಂದ್ರಿಯ ಮತ್ತು ಮನಸ್ಸುಗಳಿಗಿರುವ ಪರಸ್ಪರ ಸಂಬಂಧ ಕ್ರಮ, ಅಂದರೆ ವಿಷಯ ಸನ್ನಿಕರ್ಷವು. ಆಗ ವಿಷಯಗಳು ಇಂದ್ರಿಯ ದ್ವಾರಾ ಮನಸ್ಸಿನಲ್ಲಿ ಸ್ಥಿರೀಕೃತವಾಗುವುವು. ಅಂತೆಯೇ ವಿಷಯಗಳಲ್ಲಿ ಮನಸ್ಸು ಲೀನವಾಗುವುದು.

ಆದರ ಪರಿಣಾಮವೇ ಸಂಸ್ಕಾರ ವಿಶೇಷವು. ಇದೇ ಮನೋವೃತ್ತಿಯು. ಅನುಭವಜನ್ಯವಾದ ವಿಷಯಗಳು ಮನಸ್ಸಿನಲ್ಲಿ ಬೇರೂರಿ ಸಂಸ್ಕಾರರೂಪದಿಂದ ಇರುವುವು. ಹೀಗೆ ಇಂದ್ರಿಯಗಳ ದ್ವಾರಾ ವಿಷಯಗಳಲ್ಲಿ ಮನಸ್ಸಿನ ಪ್ರವೇಶ, ತದನಂತರ ಮನಸ್ಸಿನಲ್ಲಿ ಸಂಸ್ಕಾರರೂಪದಿಂದ ವಿಷಯಗಳ ಅಸ್ತಿತ್ವ ಇವುಗಳ ವ್ಯಾಪಾರವೇ ಜಾಗ್ರದವಸ್ಥಾ ಪ್ರೇರಕನಾದ ವಿಶ್ವನಾಮಕ ಭಗವಂತನ ಕ್ರಿಯಾವಿಶೇಷವು. "ಉಪಾದೇಯ" –ವೆಂದರೆ "ಬಿಡಲಿಕ್ಕೆ ಅಶಕ್ಯ"– ಎಂದರ್ಥ. ಆದ್ದರಿಂದ ಅವುಗಳನ್ನು ಸ್ವೀಕರಿಸಲೇಬೇಕೆಂಬ ಅಭಿಲಾಷೆ ಜೀವನಿಗೆ ಉತ್ಪನ್ನವಾಗುವುದು. ಇಂದ್ರಿಯದ್ವಾರಾ ಶುಭವಾದ ಸಾರ ವಿಷಯಗಳು (ಸ್ಥೂಲ ಭೋಗಗಳು) ಶ್ರೀಹರಿಯು ಭುಂಜಿಸುತ್ತಾನೆ (ಸ್ವೀಕರಿಸುವನು) ಅಶುಭಗಳನ್ನು ಸ್ವೀಕರಿಸುವುದಿಲ್ಲ. ವಿಶ್ವನು ಜೀವರ ಬಲಗಣ್ಣಿನಲ್ಲಿ ಇರುತ್ತಾನೆ. ದಕ್ಷಿಣಾಕ್ಷಿಗತನಾಗಿದ್ದು ಸ್ಥೂಲಭುಕ್ ಎಂದು ಕರೆಸುವನು. ॥೧೫॥

## (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ:

ಸರ್ವಕರ್ತೃತ್ವ, ಸರ್ವಸಾರಭೋಕ್ತೃತ್ವ ಶ್ರೀಹರಿಗೆ ಇದ್ದಾಗ್ಯೂ, ಇದು ಜೀವರಿಗೆ ತಿಳಿಯದಿರುವುದಕ್ಕೆ ಕಾರಣವನ್ನು ನಿರೂಪಿಸುತ್ತಾರೆ— "ಮನ"ವೆಂಬ ಪದ್ಯದಿಂದ.

ಮನಸ್ಸನ್ನು ಶಬ್ದ ಸ್ಪರ್ಶಾದಿ ಬಾಹ್ಯಭೋಗದ್ರವ್ಯಗಳಲ್ಲಿ ಆಸಕ್ತವಾಗುವ ಹಾಗೆ ಇಟ್ಟು, ಮನಸ್ಸಿನ ಒಳಗೂ ಭೋಗದ್ರವ್ಯಗಳ ಸ್ಮರಣೆಯನ್ನು ಇಟ್ಟು —ಇದು ಬಲು ಹೊಸದು, ಇದು ಒಳ್ಳೆಯದು, ಇದು ಗ್ರಹಿಸತಕ್ಕದ್ದೆಂದು, ಧನವಸ್ತ್ರಾದಿ ವಸ್ತುಗಳಲ್ಲಿ ಅಪೇಕ್ಷೆಯನ್ನು ಜೀವರಿಗೆ ಪ್ರೇರಿಸಿ, ಆಯಾಯಾ ವಸ್ತುಗಳಲ್ಲಿ ದೇವರು ವ್ಯಾಪ್ತನೆಂಬ ಜ್ಞಾನವನ್ನು ಕನಸಿನಲ್ಲಿಯೂ ಸಹ ಕೊಡದೆ, ಸರ್ವಸಾರಭೋಕ್ತನಾದ ವಿಶ್ವಮೂರ್ತಿ ವ್ಯಾಪಿಸಿರುವನೆಂದು ತಾತ್ಪರ್ಯ.

"ಉತ್ಕ್ರಾಮಂತಂ ಸ್ಥಿತಂವಾಪಿ ಭುಂಜಾನಾಂ ವಾ ಗುಣಾನ್ವಿತಂ। ವಿಮೂಢಾ ನಾನುಪಶ್ಯಂತಿ" "ಷಾಡ್ವರ್ಗಿಕಂ ಚಿಪ್ರುತಿ ಷಡ್ಗುಣೇಶಃ"॥

—ಎಂಬ ಗೀತಾವಚನ ಮತ್ತು ಭಾಗವತಾರ್ಥ ಸಹ ಇದರಿಂದ ವಿವರಿಸಿತು ॥೧೫॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದಗಳು ತನ್ಮಾತ್ರಾ ವಿಶೇಷಗಳು. ಭೂತಪಂಚಕಗಳ ಗುಣವಾದ ಈ ತನ್ಮಾತ್ರಗಳು ಜೀವನಿಗೆ ಭೋಗಯೋಗ್ಯವಸ್ತುಗಳು. ಇವುಗಳಿಗೆ "ವಿಷಯ"ಗಳೆಂದು ಹೆಸರು. ಇಂತಹ ವಿಷಯುಗಳಿಗೂ ಮತ್ತು ಆಯಾಯಾ ಇಂದ್ರಿಯಗಳಿಗೂ ಪರಸ್ಪರ ಸಂಬಂಧವುಂಟಾದಾಗ, ಅಂದರೆ, ವಿಷಯುಸನ್ನಿಕರ್ಷದ ಪರಿಣಾಮವಾಗಿ, ಆ ವಿಷಯುಗಳು ಇಂದ್ರಿಯಗಳ ದ್ವಾರಾ ಮನಸ್ಸನ್ನು ಮುಟ್ಟುವುವು. ದಶೇಂದ್ರಿಯಗಳನ್ನು ನಿಯಂತ್ರಿಸುತ್ತಿರುವ ಮನಸ್ಸು ಅತಿ ಸೂಕ್ಷ್ಮತತ್ತ್ವ. ಮನಸ್ಸು ವಿಷಯುಗಳನ್ನು ಗ್ರಹಿಸಿದ ತಕ್ಷಣ, ಆ ವಿಷಯುಗಳು ಮನಸ್ಸಿನಲ್ಲಿ ನೆಲೆಗೊಂಡು ಸ್ಥಿರೀಕರಿಸುವುವು. ಇದೆಲ್ಲವೂ ಭಗವದ್ವ್ಯಾಪಾರಗಳೇ, ಸರ್ವತ್ರವ್ಯಾಪ್ತಿಯಾದ ಶ್ರೀ ಪರಮಾತ್ಮನು ಭೂತಪಂಚಕಾಧಿಷ್ಠಾನಗಳಲ್ಲಿದ್ದು, ಅವುಗಳ ಗಂಧ ರಸರೂಪಾದಿ ಗುಣಗಳಿಗೆ ಪ್ರೇರಕನಾಗಿ (ಅಂದರೆ ತದಭಿಮಾನಿಗಳಲ್ಲಿ ಅಂತರ್ಯಾಮಿರೂಪತ್ವೇನ ತಾನಿದ್ದು, ಪ್ರೇರಿಸಿ). ಇಂದ್ರಿಯಗೋಳಕಗಳಲ್ಲಿ ವ್ಯಾಪ್ತನಾಗಿದ್ದು ಇಂದ್ರಿಯಾಭಿಮಾನಿದೇವತೆಗಳ ದ್ವಾರಾ ಮನೋಭಿಮಾನಿ ದೇವತೆಗಳಿಗೆ ಸಂಬಂಧ ಕಲ್ಪಿಸಿ, ವಿಷಯುಗಳನ್ನು ಮನಸ್ಸಿನಲ್ಲಿಯೂ, ಮನಸ್ಸನ್ನು ವಿಷಯುಗಳಲ್ಲಿಯೂ ನೆಲೆಗೊಳಿಸುವನು. ಆಗ ಅಲ್ಪನಾದ ಜೀವನಿಗೆ (ಮಂದಾಧಿಕಾರಿ), ತತ್ಸಂಬಂಧವಾದ ಭಗವದ್ವ್ಯಾಪಾರದ ಅರಿವು ಉಂಟಾಗದೆ. —ಈ ವಿಷಯುಸುಖಗಳು ಶಾಶ್ವತ; ಪರಮ ಆನಂದದಾಯಕ, ಇದುವರೆವಿಗೂ ನಾನು ಭೋಗಿಸದೆ ಇರುವ ಹೊಸ ಅನುಭವ; ಅತ್ಯವಶ್ಯವಾಗಿ ಸ್ವೀಕರಿಸಲೇತಕ್ಕದ್ದು (ಉಪಾದೇಯ)" —ಎಂಬ ಭ್ರಾಂತಿಗ್ರಸ್ತನಾಗಿ, ವಿಷಯುಸುಖಗಳಕಡೆಗೆ (ಭೋಗಲಾಲಸೆಗಳು) ಮನಸ್ಸು ವಾಲಿ, ಆ ವಿಷಯುಗಳಲ್ಲಿ ಆಸಕ್ತನಾಗುವನು. ಇದು ಜಾಗ್ರದಾವಸ್ಥೆಯಲ್ಲಿ ನಡೆಯುತ್ತಿರುವ ಕ್ರಿಯಾವಿಶೇಷಗಳು. ಎಚ್ಚರಸ್ಥಿತಿಯಲ್ಲಿದ್ದರೂ ಜೀವನು

ಅಹಂಕರ್ತೃತ್ವಗ್ರಸ್ತನಾಗಿ, ದೇವರನ್ನು ಮರೆಯುವನು. ಜಾಗ್ರದಾವಸ್ಥೆಯ ಸ್ಥಿತಿಯೇ ಹೀಗಿರುವಾಗ, ಸ್ವಪ್ನಾವಸ್ಥೆಯ ಸ್ಥಿತಿ ಹೇಳುವುದಿನ್ನೇನಿದೆ? ಜಾಗ್ರತ್ಕಾಲದ ವಾಸನಾವಿಶಿಷ್ಟರೂಪವಾದ ಸಂಸ್ಕಾರವೇ ಸ್ವಪ್ನ. ಇದರಿಂದ ಜೀವನ ಸ್ವಪ್ನಾವಸ್ಥೆಯಲ್ಲಿಯೂ ಸಹ ತನ್ನ ಪಾದಾರವಿಂದಗಳ ಸ್ಮರಣೆಯನ್ನು ಕೊಡುವುದಿಲ್ಲ. ವಿಷಯಸನ್ನಿಕರ್ಷದಿಂದ ಇಂದ್ರಿಯಗಳ ದ್ವಾರಾ ಮನಸ್ಸಿನ ಮೇಲೆ ಪರಿಣಾಮ. ನಂತರ ಮನಸ್ಸಿನಲ್ಲಿ ವಿಷಯಗಳ ಪ್ರವೇಶ-ಇದರ ಪರಿಣಾಮ ರೂಪಸಂಬಂಧವೇ ಸಂಸ್ಕಾರ ವಿಶೇಷವು. ಅನುಭವಜನ್ಯವಾದ ವಿಷಯಗಳು ಮನಸ್ಸಿನಲ್ಲಿ ನೆಲೆಗೊಂಡು, ಸಂಸ್ಕಾರರೂಪದಿಂದ ಇರುವುವು. ಸರ್ವಜೀವರ ಬಲಕಣ್ಣಿನ ತುದಿಯಲ್ಲಿ ಇರುವ ಭಗವದ್ರೂಪವೇ "ವಿಶ್ವ"ನು. ಈ ವಿಶ್ವ ನಾಮಕ ಪರಮಾತ್ಮನು ಸರ್ವರ ದಕ್ಷಿಣಾಕ್ಷಿಗತನಾಗಿ, ಜಾಗ್ರದಾವಸ್ಥೆಗೆ ಪ್ರೇರಕ ನಾಗಿದ್ದಾನೆ. ಈ ವಿಶ್ವನಿಗೆ ೧೯ ಮುಖಗಳು. ಬಲಗಡೆ ೯ ಮುಖಗಳು ಪುರುಷಪ್ರೇರಕರೂಪಗಳು. ಎಡಗಡೆಯ ೯ ಮುಖಗಳು ಸ್ತ್ರೀಪ್ರೇರಕರೂಪ ಗಳು. ಮಧ್ಯದಲ್ಲಿರುವ ಮುಖವು ಆನೆಯ ಸೊಂಡಲಿನಂತಿದೆ. ಈ ಕಾರಣ ದಿಂದಲೇ ವಿಶ್ವಂಭರೋಪಾಸಕನಾದ ಗಣಪತಿಯು ಈ ವಿಶ್ವನಾಮಕ ಶ್ರೀ ಪರಮಾತ್ಮನ ಪ್ರತಿಬಿಂಬನಾಗಿರುವುದರಿಂದ ಆತನಿಗೂ ಸಹ ಗಜಮುಖವಿದೆ. ಜಾಗ್ರದಾವಸ್ಥೆಯಲ್ಲಿ ಬಾಹ್ಯ ಭೋಗ ದ್ರವ್ಯವಸ್ತುಗಳಲ್ಲಿ (ವಿಷಯಾದಿಗಳಲ್ಲಿ) ಈ ವಿಶ್ವನು ತಾನು ಅಂತರ್ಯಾಮಿಯಾಗಿದ್ದು, ಆ ಸ್ಥೂಲವಿಷಯಗಳಲ್ಲಿ ತಾನಿಟ್ಟಿರುವ ಭಗವದ್ರೂಪಗಳಲ್ಲಿ ಕ್ರೀಡೆಯಾಡುವನು. ಹೀಗೆ ಸ್ವಕ್ರೀಡಾ ರೂಪವಾದ ಸ್ವರಮಣತ್ವದಿಂದ, ಸ್ವಾಖ್ಯರಸವನ್ನು ತಾನು ಸ್ವೀಕರಿಸಿ, ಸ್ಥೂಲವಿಷಯಗಳನ್ನು ಭುಂಜಿಸುವನು. ಇದರಿಂದ ವಿಶ್ವನಿಗೆ "ಸ್ಥೂಲ ಭುಕ್" ಎಂದು ಹೆಸರು. ಹೀಗೆ ಭಗವದ್ರೂಪಗಳ ಪರಸ್ಪರ ಐಕ್ಯಚಿಂತನಾ ರೂಪವಾದ ಬಿಂಬಕ್ರಿಯಾದ್ವಾರಾ ಪ್ರತಿಬಿಂಬರಾದ ಜೀವರಿಗೆ ಸ್ಥೂಲ ಭೋಗಗಳ ಅನುಭವ. ಅದೇ ವಿಶ್ವನಾಮಕ ಶ್ರೀಪರಮಾತ್ಮನು ಜೀವರ ಕಂಠಪ್ರದೇಶಕ್ಕೆ ಬಂದಾಗ, "ತೈಜಸ"ನೆಂಬ ಹೆಸರಿನಿಂದ ಸ್ವಪ್ನಾವಸ್ಥೆಗೆ ಪ್ರೇರಕನಾಗುವನು. ಜಾಗ್ರದಾವಸ್ಥೆಯಲ್ಲಿ ತನ್ನ ಸ್ಮರಣೆಯನ್ನು ಕೊಡದ ತೈಜಸರೂಪೀ ಶ್ರೀಹರಿಯು ಜೀವರಿಗೆ ಕನಸಿನಲ್ಲಿಯೂ ಸಹ ತನ್ನ ಪಾದಪದ್ಮ ಗಳ ನೆನೆವನ್ನು ಕೊಡುವುದಿಲ್ಲ ಎಂದು ತಾತ್ಪರ್ಯ. ಆದರೆ ಪ್ರಾಜ್ಞರಾದ

ವರು ಜಾಗ್ರತ್ಕಾಲದಲ್ಲಿ ನಡೆಯುತ್ತಿರುವ ಸ್ಥೂಲವಿಷಯಭೋಗರೂಪವಾದ ಕ್ರಿಯಾಕಲಾಪಗಳೆಲ್ಲವೂ ಭಗವದ್ವ್ಯಾಪಾರಗಳೇ ಎಂದು ತಿಳಿದಿರುವುದರಿಂದ. ಅವರಿಗೆ ಭಗವಂತನ ಸ್ಮರಣೆ ಇದ್ದೇ ಇರುವುದು. ॥೧೫॥

## ಪದ್ಯ (೧೬)

**ಮೂಲ :—**

**ತೋದಕನು ತಾನಾಗಿ ಮನ ಮೊದ ।**
**ಲಾದ ಕರಣದೊಳಿದ್ದು ವಿಷಯವ ।**
**ನೈದುವನು ನಿಜಪೂರ್ಣಸುಖಮಯ ಗ್ರಾಹ್ಯ ಗ್ರಾಹಕನು ॥**
**ವೇದವೇದ್ಯನು ತಿಳಿಯದವನೋ ।**
**ಪಾದಿ ಭುಂಜಿಸುತೆಲ್ಲರೊಳಗಾ ।**
**ಹ್ಲಾದ ಪಡುವನು ಭಕ್ತವತ್ಸಲ ಭಾಗ್ಯಸಂಪನ್ನ ॥ ॥೧೬॥**

**ಅವತರಣಿಕೆ :—**

ಸರ್ವಸಾರಭೋಕ್ತನಾದ ಸ್ವರಮಣಾಖ್ಯ ಶ್ರೀಪರಮಾತ್ಮನು ಸರ್ವೇಂದ್ರಿಯಗಳಲ್ಲಿ ನಿಯಾಮಕನಾಗಿದ್ದು, ಮನಸ್ಸಿಗೆ ಪ್ರೇರಕವಾಗಿ, ಪೂರ್ಣಾನಂದಚಿತ್ಸ್ವರೂಪಿಯಾಗಿ ತನ್ನ ಮಹಿಮಾತಿಶಯಗಳನ್ನು ಜೀವರಿಗೆ ತೋರಗೊಡದೆ, ಭಕ್ತವತ್ಸಲನೆಂದೆನಿಸಿ, ಜೀವರನ್ನು ಸಂರಕ್ಷಿಸುವ ಕ್ರಮವನ್ನು ವಿವರಿಸುತ್ತಾರೆ. "ತೋದಕನು" —ಎಂಬ ಈ ಪದ್ಯದಿಂದ.

**ಪ್ರತಿಪದಾರ್ಥ:—**

**ಮನ ಮೊದಲಾದ** = ಮನಸ್ಸೇ ಮೊದಲಾದ **ಕರಣದೊಳಿದ್ದು** = ಇಂದ್ರಿಯಗಳಲ್ಲಿ ಸನ್ನಿಹಿತನಾಗಿದ್ದು **ತೋದಕನು** = ಆಯಾಯಾ ಇಂದ್ರಿಯ

ಗಳಿಗೆ ಪ್ರೇರಕನು **ತಾನಾಗಿ** = ತಾನೇ ಆವುಗಳಿಗೆ ನಿಯಾಮಕನಾಗಿದ್ದು **ವಿಷಯುವ** = ತದ್ಗತ ವಿಷಯುಸುಖವನ್ನು (ಸ್ವಾಖ್ಯರಸವನ್ನು) **ಐದುವನು** = ಹೊಂದುವವನಾಗುತ್ತಾನೆ. **ನಿಜ** = ಸ್ವಕೀಯವಾದ (ತನ್ನಿಂದ ಅಭಿನ್ನ ವಾದ) **ಪೂರ್ಣಸುಖಮಯ** = ಪೂರ್ಣಾನಂದಸ್ವರೂಪನು **ಗ್ರಾಹ್ಯ** = ಗಂಧ ರಸ ಮುಂತಾದ ಭೋಗ್ಯವಸ್ತುಗಳಲ್ಲಿದ್ದು, ಆಯಾಯಾ ಭಗವದ್ರೂಪ ಗಳಿಂದ "ಗ್ರಾಹ್ಯ"ನೆಂತಲೂ **ಗ್ರಾಹಕನು** = ಮೂಗು, ನಾಲಿಗೆ ಮುಂತಾದ ಇಂದ್ರಿಯಗಳಿದ್ದು ಸ್ವಾಖ್ಯರಸವಿಶೇಷಗಳನ್ನು ಸ್ವೀಕರಿಸುತ್ತಾ "ಗ್ರಾಹಕ" ನೆಂತಲೂ ಕರೆಯಿಸಿಕೊಳ್ಳುತ್ತಾ **ವೇದವೇದ್ಯನು** = ವೇದಪ್ರತಿಪಾದ್ಯನಾದ ಶ್ರೀಪರಮಾತ್ಮನು (ಅಥವಾ ವೇದ-ಅನುಷ್ಠಾನ ಮಾಡುವವರಿಗೆ ವೇದ್ಯನು = ಅಪರೋಕ್ಷದಿಂದ ಪ್ರತ್ಯಕ್ಷನಾಗತಕ್ಕವನು) **ತಿಳಿಯುದವನೋಪಾದಿ** = ದೇಹ, ಇಂದ್ರಿಯಾಂತರ್ಗತನಾಗಿದ್ದಾಗ್ಯೂ ಸಹ ಏನೂ ತಿಳಿಯದವನಂತೆ (ತನ್ನ ಮಹಿಮೆಯನ್ನು ತೋರಗೊಡದಂತೆ) **ಎಲ್ಲರೊಳಗೆ** = ಸಮಸ್ತಜೀವ ವರ್ಗದಲ್ಲೂ ಇದ್ದು **ಭುಂಜಿಸುತ** = ತನ್ನ ಸ್ವಾಖ್ಯಗಳನ್ನು ತಾನೇ ಭೋಗಿ ಸುತ್ತ **ಭಕ್ತವತ್ಸಲ** = ಸ್ವಭಕ್ತಜನರಲ್ಲಿ ದಯಾಮಯನಾದ **ಭಾಗ್ಯಸಂಪನ್ನ** = ಷಡ್ಗುಣೈಶ್ವರ್ಯಪೂರ್ಣನಾದ ಭಗವಂತನು **ಆಹ್ಲಾದಪಡುವನು** = ತಾನು ನಿರಂತರ ಸಂತೋಷಪಡುತ್ತಾನೆ. (ಸ್ವಾನಂದಸಂಪನ್ನನು) ॥೧೬॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಪ್ರಾಣಿಗಳ ಸ್ಥೂಲದೇಹಗತ, ಇಂದ್ರಿಯಗೋಳಕಗಳು, ತದ್ಗತ ಲಿಂಗದೇಹದ ಇಂದ್ರಿಯಾಂಶಗಳು, ತದ್ಗತ ವ್ಯಾಪ್ತವಾದ ಇಂದ್ರಿಯಗಳು, ಏತಾದೃಶ ಮನ ಇಂದ್ರಿಯ ಮೊದಲಾದ ಏಕಾದಶೇಂದ್ರಿಯಗಳಲ್ಲಿ ತನ್ನಾಮ, ತದಾಕಾರ, ತದ್ವಾಚ್ಯನಾಗಿ, ಅವಯವವಿಶಿಷ್ಟನಾಗಿ, ಅಲ್ಲಲ್ಲಿದ್ದು,

ಆಯಾಯಾ ಇಂದ್ರಿಯಗಳಿಗೆ ಪ್ರೇರಕನೂ, ನಿಯಾಮಕನೂ ತಾನೇ ಆಗಿ (ಪ್ರಥಮತಃ ತಾನೇ ನಿಯಾಮಕನಾಗಿ ನಂತರ ಪರಂಪರಾದಿಂದ ಜೀವರಿಗೆ ಪ್ರಾಕೃತ ಭೋಗ ಮಾಡಿಸುತಾನೆ. ಪರಮಾತ್ಮನಾದ ತನ್ನ ಭೋಗ ಹ್ಯಾಂಗೆಂದರೆ, ಜೀವರ ದೇಹಗತ, ಪೂರ್ವೋಕ್ತ ಪ್ರಕಾರ ಮನ ಮೊದಲಾದ ಇಂದ್ರಿಯಗಳಲ್ಲಿ ಇದ್ದು, ತಾನಾಗಿ. ತನ್ನ ಸ್ವಾಖ್ಯ ಇಂದ್ರಿಯಗಳಿಗೆ ತನಗೆ ತಾನಾಗಿ, ಪ್ರೇರಕನಾಗಿ) ತನ್ನ ಸ್ವಾಖ್ಯಗಳಾದ ದೋಷವರ್ಜಿತವಾಗಿ ಪೂರ್ಣಗಳಾದ ಸುಖಸ್ವರೂಪಗಳಾದ (ನಿಜಪೂರ್ಣಸುಖಮಯ) ಅಧಿಷ್ಠಾನಗತ ಏತಾದೃಶನಾದ ತನಗೆ, ಅಭಿನ್ನವಾದ ವಿಷಯುವನ್ನು ಐದೋವನಾಗತಾನೆ. ಹಂಸದೋಪಾದಿಯಲ್ಲಿ ತನ್ನ ಭೋಗಕ್ಕೆ ಯೋಗ್ಯವಾದದ್ದನ್ನು ಗ್ರಹಿಸತಕ್ಕವನು. ತದನ್ಯ ಗ್ರಹಿಸುವುದಿಲ್ಲ. ಭುಂಜಿಸೋದೂ ಇಲ್ಲ. ಈ ಪ್ರಕಾರ ಅನುಸಂಧಾನಮಾರ್ಗ ತಿಳಿದು, ಅನುಷ್ಠಾನ ಮಾಡತಕ್ಕವರಿಗೆ (ವೇದ), ಅಪರೋಕ್ಷದಿಂದ ಪ್ರತ್ಯಕ್ಷನಾಗತಾನೆ (ವೇದ್ಯನು) ದೇಹಾಂತರ್ಗತ, ಇಂದ್ರಿಯಾಂತರ್ಗತನಾಗಿದ್ದು, ತಿಳಿಸಿಕೊಳ್ಳದೇ ಬಿಂಬರೂಪೀ ಪರಮಾತ್ಮ, ಜೀವನು ಪ್ರಾಕೃತವಿಷಯಗಳ ಪ್ರಾಕೃತ ಸ್ಥೂಲದೇಹದಿಂದ ಹ್ಯಾಂಗೆ ಭುಂಜಿಸುತ್ತಾನೋ. ಅವನೋಪಾದಿಯಲ್ಲಿ, ದೇಹಾಂತರ್ಗತನಾದ, ದೇಹಾಕಾರನಾದ, ಶ್ರೀಪರಮಾತ್ಮನು ಸರ್ವ ಪ್ರಾಣಿಗಳ ಒಳಗೆ ಇದ್ದು, ತನ್ನ ಸ್ವಾಖ್ಯಗಳ ತಾನು ಭುಂಜಿಸುತ್ತಾ ಎಂದರೇ, ಜೀವನ ಭೋಜನ, ಪರಮಾತ್ಮನ ಭೋಜನ, ಏಕಕಾಲಾವಚ್ಛೇದೇನ, ಪುರುಷ ಭೋಜನ ಮಾಡತಕ್ಕ ಕಾಲಕ್ಕೂ ತತ್ಕ್ರಿಯಾದ್ವಾರಾ ಛಾಯಾ ಭೋಜನಮಾಡೋ ಕಾಲಕ್ಕೂ ಐಕ್ಯ ಹ್ಯಾಂಗೋ ತದ್ವತ್ ಜೀವಪರಮಾತ್ಮರ ಭೋಜನವೂ, ಛಾಯಾ ಭೋಜನ ಮಾಡತಕ್ಕದ್ದು, ತನ್ನೋಪಾದಿಯಲ್ಲಿ ಪ್ರತಿಫಲಿಸಿದ ಫಲಗಳ ಛಾಯಾವನ್ನು ಭುಂಜಿಸುವ ಪುರುಷನಾದವ ಪ್ರತ್ಯಕ್ಷವಾದ ಫಲಗಳ ಭೋಜನ ಮಾಡತಾನೆ. ಅತಏವ ಬಿಂಬಭುಕ್ತ ಪ್ರತಿಬಿಂಬಗಿಲ್ಲ. ಪ್ರತಿಬಿಂಬಭುಕ್ತ ಬಿಂಬಗಿಲ್ಲ. ಎರಡೂ ಬೇರೆ ಬೇರೇನೇ. ಉಭಯರ ಭೋಜನ ಏಕಕಾಲಾವಚ್ಛೇದವೆಂದು ತಿಳಿಯಬೇಕು. ಈ ಪ್ರಕಾರ ಭುಂಜಿಸುತ್ತ ಶ್ರೀಪರಮಾತ್ಮನು ತಾನು ಸಂತೋಷವಾಗಿರತಾನೆ (ಆಹ್ಲಾದಪಡುವನು). ಈ ಪ್ರಕಾರ ತಿಳಿದ ಜ್ಞಾನಿಗಳಿಗೆ ದಿವ್ಯಸಂತೋಷ ಕೊಟ್ಟು ಸಂರಕ್ಷಣೆ ಮಾಡತಾನೆ. ಇಂಥಾ ಭಕ್ತ

ರಲ್ಲಿ ಬಹು ಅಂತಃಕರಣ ಮಾಡೋವನಾಗಿ (ಭಕ್ತವತ್ಸಲ) ಅವರಿಗೆ ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಕೊಟ್ಟು (ಭಾಗ್ಯಸಂಪನ್ನ) ಸಂರಕ್ಷಣೆ ಮಾಡುವನಾಗತಾನೆ ಎಂತ ತಾತ್ಪರ್ಯ.॥೧೬॥

## (೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :—

ಶ್ರೀಪರಮಾತ್ಮನು ಮನ ಮೊದಲಾದ ಇಂದ್ರಿಯಗಳೊಳಗಿದ್ದು, ಜೀವನಿಗೆ ವಿಷಯಾದಿಗಳಲ್ಲಿ ಪ್ರೀತಿಯನ್ನು ಹುಟ್ಟಿಸುವವನಾಗಿದ್ದು ಮಾಡುವ ಕೆಲಸವೇನು ? ಅಂದರೆ ಹೇಳುತ್ತಾರೆ :—

ಶ್ರೀಪರಮಾತ್ಮನು ಮನಸ್ಸು ಮೊದಲಾದ ಇಂದ್ರಿಯಗಳೊಳಗಿದ್ದು, ಅಂದರೆ ಕಣ್ಣಿನಲ್ಲಿದ್ದು ರೂಪವನ್ನು ಗ್ರಹಿಸುವನು. ಕಿವಿಯಲ್ಲಿದ್ದು ಶಬ್ದವನ್ನು ಗ್ರಹಿಸುವನು. ಮೂಗಿನಲ್ಲಿದ್ದು ವಾಸನೆಯನ್ನು ಸ್ವೀಕರಿಸುವನು. ನಾಲಿಗೆಯಲ್ಲಿದ್ದು ರುಚಿಯನ್ನು ಸ್ವೀಕರಿಸುವನು. ತ್ವಗಿಂದ್ರಿಯದಲ್ಲಿದ್ದು ಶೀತೋಷ್ಣಾದಿಗಳನ್ನು ಅರಿಯುವನು ಮತ್ತು ಕಣ್ಣು, ಕಿವಿ ಮೊದಲಾದ ಇಂದ್ರಿಯಾಭಿಮಾನಿ ದೇವತೆಗಳಲ್ಲಿದ್ದು, ನೋಡುವಂತೆಯೂ ಕೇಳುವಂತೆಯೂ, ಆಘ್ರಾಣಿಸುವಂತೆಯೂ, ಭುಂಜಿಸುವಂತೆಯೂ, ಶೀತೋಷ್ಣಗಳನ್ನು ತಿಳಿದುಕೊಳ್ಳುವಂತೆಯೂ ಪ್ರೇರಿಸುವನು. ಅವರಲ್ಲಿದ್ದು ಮಾಡುವನು. ಇದರ ತಾತ್ಪರ್ಯವೇನೆಂದರೆ—ಕಣ್ಣು ಮೊದಲಾದ ಇಂದ್ರಿಯಾಭಿಮಾನಿ ದೇವತೆಗಳಲ್ಲಿದ್ದು ನೋಡುವಂತೆಯೂ, ಕೇಳುವಂತೆಯೂ ಪ್ರೇರಿಸುವನು. ಕಣ್ಣು ಮೊದಲಾದ ಇಂದ್ರಿಯದೊಳಗಿದ್ದು ರೂಪ ಶಬ್ದಾದಿಗಳನ್ನು ಗ್ರಹಿಸುವನೆಂಬ ಭಾವ. ಗ್ರಾಹ್ಯ ಗ್ರಾಹಕನೆಂದರೆ—ಕಣ್ಣಿನಿಂದ ಗ್ರಹಿಸಲು ಯೋಗ್ಯವಾದುದು ಸುಂದರಾಕಾರವುಳ್ಳರೂಪವು. ಇದಕ್ಕೆ ಗ್ರಾಹ್ಯವೆಂದು ಹೆಸರು. ಗ್ರಾಹಕವೆಂದರೆ, ರೂಪಾದಿಗಳನ್ನು ಗ್ರಹಿಸುವ ಕಣ್ಣು ಮೊದಲಾದ ಇಂದ್ರಿಯಗಳು. ಶ್ರೀಪರಮಾತ್ಮನು ತಾನೇ ಗ್ರಾಹ್ಯರೂಪಿಯಾಗಿಯೂ ಇರುವನೆಂಬ ಭಾವ. ಹೀಗೆ ತತ್ವಾಭಿಮಾನಿದೇವತೆಗಳೊಳಗಿದ್ದು ಗ್ರಾಹ್ಯ ವಸ್ತುಗಳನ್ನು ಗ್ರಹಿಸುವಂತೆ ಪ್ರೇರಿಸಿ, ಇಂದ್ರಿಯಗಳೊಳಗಿದ್ದು ಗ್ರಹಿಸಿ ವಿಷಯಸುಖವನ್ನು ಹೊಂದುವನು. ತಾನಾದರೋ ಯಾವಾಗಲೂ ಸಂತತ

ವಾದ ಪೂರ್ಣಾನಂದಸ್ವರೂಪನು. ಒಬ್ಬರಲ್ಲಿದ್ದು ಆನಂದವನ್ನು ಅನುಭವಿಸುವ ಸಂಭವವಿಲ್ಲ. ವೇದವೇದ್ಯನು. ಷಡ್ಗುಣೈಶ್ವರ್ಯಪೂರ್ಣನು. ಆದರೂ ಜೀವರೊಳಗಿದ್ದು, ಒಂದನ್ನೂ ಅರಿಯದವನಂತೆ ತತ್ತ್ವದೇಹಗತ ಸುಖಗಳನ್ನನುಭವಿಸುತ್ತಾ ಆಹ್ಲಾದಪಡುವನು. ತನಗೆ ಸುಖಾನುಭವದ ಅಪೇಕ್ಷೆಯೇ ಇಲ್ಲದಿದ್ದರೆ ಶ್ರೀಪರಮಾತ್ಮನು ಜೀವರೊಳಗಿದ್ದು ಆ ಸುಖವನ್ನೇಕೆ ಅನುಭವಿಸಬೇಕು ? ಅಂದರೆ, ಭಕ್ತವತ್ಸಲನಾದುದರಿಂದ ಜೀವರನ್ನು ಉದ್ಧರಿಸುವುದಕ್ಕೋಸ್ಕರ ಅದನ್ನು ಸ್ವೀಕರಿಸುವನು.

ಭಾಗವತ ಸಪ್ತಮಸ್ಕಂಧದಲ್ಲಿ— **"ನೈವಾತ್ಮನಃ ಪ್ರಭುರಯಂ ನಿಜಲಾಭಪೂರ್ಣೋಮಾನಂದಾದಿ ವಿದುಷಃ ಕರುಣೋ ವೃಣೀತೇ ಯದ್ಯಜ್ಜನೋ ಭಗವತೇ ವಿದಧೀತಮಾನಂ ತಚ್ಚಾತ್ಮನೇ ಪ್ರತಿಮುಖಸ್ಯ ಯಥಾಮುಖಶ್ರೀಃ ॥"** ಎಂದು ಹೇಳಿರುವರು. ಅಂದರೆ ಶ್ರೀಪರಮಾತ್ಮನಿಗೆ ತನ್ನ ಇಚ್ಛೆಯಿಂದಲೇ ತನಗೆ ಪೂರ್ಣವಾದ ಸುಖವಿರುವುದೇ ಹೊರತು ರಮಾದೇವಿಯರಿಂದಲೂ ತನಗೆ ಆಗಬೇಕಾದ್ದಿಲ್ಲ. ಹಾಗಿದ್ದರೂ ಅಜ್ಞರೊಳಗಿದ್ದು, ಪೂಜಾಮಾಡಿಸಿಕೊಂಡು, ಜೀವರೊಳಗಿದ್ದು ಸ್ವೀಕರಿಸುವನು. ಅದೇಕೆಂದರೆ, ಕರುಣಾಸಮುದ್ರನಾದುದರಿಂದ ಭಕ್ತರ ಪೂಜೆಯನ್ನು ಸ್ವೀಕರಿಸದಿದ್ದರೆ. ಭಕ್ತರಿಗೆ ತೃಪ್ತಿಯಾಗುವಂತಿಲ್ಲ. ಅವರ ಕ್ಷೇಮಕ್ಕಾಗಿಯೇ ತಾನು ಸ್ವೀಕರಿಸುವನು. ನಮ್ಮ ಮುಖದ ಅಲಂಕಾರವನ್ನು ನೋಡಿ, ಸಂತೋಷಪಡಬೇಕಾದರೆ, ಕನ್ನಡಿಯಲ್ಲಿ ನೋಡಿ ಸಂತೋಷಪಡಬೇಕೇ ಹೊರತು ನಮ್ಮ ಮುಖವು ನಮಗೆ ಕಾಣುವಂತಿಲ್ಲ. ಆದರೆ, ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬಕ್ಕೆ ಅಲಂಕಾರ ಮಾಡಲು ಸಾಧ್ಯವಿಲ್ಲ. ಆದ್ದರಿಂದ ನಮ್ಮ ಮುಖಕ್ಕೆ ಬೇಕಾದ ಅಲಂಕಾರ ಮಾಡಿಕೊಂಡು, ಕನ್ನಡಿಯಲ್ಲಿ ಪ್ರತಿಬಿಂಬವನ್ನು ನೋಡಿ, ಸಂತೋಷಪಡುವಂತೆ, ಬಿಂಬನಾದ ಪರಮಾತ್ಮನು ಪೂಜೆಯನ್ನು (ಸುಖವನ್ನು) ಸ್ವೀಕರಿಸಿದರೆ, ನಮಗೆ ಸುಖವಾಗುವುದೆಂದು ಶ್ಲೋಕದ ತಾತ್ಪರ್ಯಾರ್ಥವು. ವೃಕ್ಷಗಳ ಬೇರಿಗೆ ನೀರೆರೆಯಲು, ಕೊಂಬೆಗಳುಬ್ಬುವಂತೆ, ದೇಹಗತನಾಗಿ ಪರಮಾತ್ಮನು ಸುಖವನ್ನು ಅನುಭವಿಸಿದರೆ, ಜೀವನಿಗೆ ತೃಪ್ತಿ

ಯಾಗುವುದು. ಇಲ್ಲವಾದರೆ ಜೀವನು ಸುಖಪಡುವಂತಿಲ್ಲ. ಆದ್ದರಿಂದಲೇ ಶ್ರೀಪರಮಾತ್ಮನು ದೇಹಗತನಾಗಿ ವಿಷಯಸುಖವನ್ನು ಅನುಭವಿಸಿ, ಜೀವ ವನ್ನು ತೃಪ್ತಿಪಡಿಸುವನೆಂಬ ಭಾವ ॥೧೬॥

## (೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :—

ಉಕ್ತಾರ್ಥವನ್ನೇ ದೃಢೀಕರಣಾರ್ಥ ಪುನಃ ಹೇಳುತ್ತಾರೆ–"ತೋದಕ" ಎಂಬ ಪದ್ಯದಿಂದ.

ಪ್ರೇರಕ ಎಂತರ್ಥ. (ತೋದಕ), ಕರಣ = ಇಂದ್ರಿಯ, ನಿಜಪೂರ್ಣ ಸುಖಮಯ = ಶ್ರೀಹರಿ ಗ್ರಾಹ್ಯಗ್ರಾಹಕ = ತಿಳಿಸಿಕೊಡತಕ್ಕಂಥ, ತಿಳಿಕೊಳ್ಳ ತಕ್ಕಂಥ, ಭುಂಜಿಸುತ = ಇಲ್ಲೂ ವಿಶ್ವರೂಪದಿಂದಲೇ ಸ್ಥೂಲವಿಷಯವ ಶ್ರೀಹರಿ ಸ್ವೀಕಾರ ಮಾಡುವನೆಂದು ತಾತ್ಪರ್ಯ. ಭಕ್ತವತ್ಸಲ = ಭಕ್ತರಲ್ಲಿ ಸ್ನೇಹವುಳ್ಳವ ॥೧೬॥

## (೪) ಜಮುಖಂಡಿ ಶ್ರೀವಾದಿರಾಜಾಚಾರ್ಯ ವ್ಯಾಖ್ಯಾನ (ಸಂಸ್ಕೃತಮೂಲ) :—

ತೋದಕೇತಿ ॥ ಮನಃ ಪ್ರಗ್ರಹಮೇವ ಚ । ಮನಃ ಸಂಗ್ರಹೀತೇತಿ ಚ ಸಾರಥಿಃ ॥ ಪೂರ್ಣ = ಸುಖೇನ ಪೂರ್ಣಃ । ಗ್ರಾಹ್ಯಃ —ವಿಷಯಗಃ ॥ ಗ್ರಾಹಕಃ– ಮನೋಗಃ ॥೧೬॥

**ಕನ್ನಡಾರ್ಥ:—**

ನಮ್ಮ ಶರೀರವೇ ರಥವು (ದೇಹಾಖ್ಯರಥ). ದೇಹದಲ್ಲಿ ಪ್ರಕಾಶಿತೋ ವ್ಯಾಪ್ತನಾದ ಜೀವನೇ ರಥಿಕನು. ಮಾನವ ಬುದ್ಧಿಯೇ ಸಾರಥಿ. ದಶೇಂದ್ರಿ ಯಗಳೇ ಕುದುರೆಗಳು. ಮನಸ್ಸು ಇಂದ್ರಿಯಗಳನ್ನು ನಿಯಂತ್ರಿಸುತ್ತಿರುವ ಹಗ್ಗ. ಹೀಗೆ ಅನುಸಂಧಾನಕ್ರಮ. ಮನಸ್ಸು ಮತ್ತು ಮನಸ್ಸಿನ ವಿಶಿಷ್ಟ ಪರಿಣಾಮರೂಪವಾದ ಬುದ್ಧಿ ಇವೆರಡೂ ಇಂದ್ರಿಯಗಳನ್ನ ನಿಯಂತ್ರಿಸು

ತ್ತವೆ. ಇದರಿಂದ ಶ್ರೀಪರಮಾತ್ಮನು ಮನಸ್ಸು ಬುದ್ಧಿ ಮತ್ತು ಇಂದ್ರಿಯಗಳಲ್ಲಿ ಆಯಾಯಾ ನಾಮರೂಪಗಳಿಂದ ಇದ್ದು, ಮುಖ್ಯತ್ವೇನ "ಗ್ರಾಹಕ"ನು ಎಂದೆನಿಸಿಕೊಳ್ಳುತ್ತಾನೆ. ವಿಷಯಗತನಾಗಿದ್ದು "ಗ್ರಾಹ್ಯ"ನೆನಿಸಿಕೊಳ್ಳುತ್ತಾನೆ. ಪೂರ್ಣಸುಖಮಯನೆಂದರೆ ಅಪರಿಚ್ಛಿನ್ನವಾದ ಆನಂದದಿಂದ ಪರಿಪೂರ್ಣನು ಎಂದರ್ಥ ॥೧೬॥

## (೩) "ಗುರುಹೃದಯಪ್ರಕಾಶಿಕೆ" —ವ್ಯಾಖ್ಯಾನ :—

ಸ್ವಸೌಖ್ಯಪೂರ್ಣನಾದಾಗ್ಯೂ, ವೇದವೇದ್ಯನಾದ ದೇವರು "ಗ್ರಾಹಕ" ಎಂದು ತೆಗೆದುಕೊಳ್ಳುವನೆಂಬ ನಾಮದಿಂದ ಮನಸ್ಸು ಮೊದಲಾದ ಇಂದ್ರಿಯಗಳಲ್ಲಿ ತೋದಕನೆಂದರೆ ಪ್ರೇರಕನಾಗಿದ್ದು, ಶಬ್ದ ಸ್ಪರ್ಶ ಮೊದಲಾದ ಭೋಗ್ಯ ಪದಾರ್ಥಗಳಲ್ಲಿ "ಗ್ರಾಹ್ಯ" —ಎಂದರೆ, ತೆಗೆದುಕೊಳ್ಳುವನೆಂಬ ನಾಮದಿಂದ, ಅಜ್ಞ ಜನರಿಗೆ ತಿಳಿಯದವನೋಪಾದಿ ಎಂದರೆ, ಜೀವನನೋಪಾದಿ ಆಕಾರವುಳ್ಳವನಾಗಿ ಎಲ್ಲರಲ್ಲೂ ತನ್ನ ಸ್ವರೂಪವೆಂಬ ಸ್ವರಸವನ್ನೇ ಭುಂಜಿಸುತ್ತ, ಎಂದರೆ, ಸೇವಿಸುತ್ತಾ, ನಿತ್ಯಾನಂದನಾಗಿ ವ್ಯಾಪ್ತನು. ಇದರಿಂದ ಹಿಂದಿನ ಪದ್ಯವನ್ನೇ ಮತ್ತಷ್ಟು ವಿವರಿಸಿದಂತಾಯಿತು. ॥೧೬॥

## ಸರ್ವವ್ಯಾಖ್ಯಾನಸಾರಸಂಗ್ರಹ :—

ಸರ್ವಕ್ಕೂ ಮುಖ್ಯತ್ವೇನ ಪ್ರೇರಕನು ಶ್ರೀ ಪರಮಾತ್ಮನೇ. ಆತನ ಇಚ್ಛಾರೂಪವಾದ ಪ್ರೇರಣೆಯಿಲ್ಲದೆ ಯಾವ ವ್ಯಾಪಾರವೂ ನಡೆಯಲಾರದು. ಮನಸ್ಸು ವಿಷಯಸನ್ನಿಕರ್ಷದಿಂದ ಇಂದ್ರಿಯಗಳ ದ್ವಾರಾ, ವಿಷಯಗಳನ್ನು ಗ್ರಹಿಸುವುದು. ನಮ್ಮ ಶರೀರವೇ ರಥವು (ದೇಹಾಖ್ಯರಥ). ದೇಹಗತನಾದ ಜೀವನೇ ರಥಿಕನು. ವಿಷಯುವನ್ನು ನಿಶ್ಚಯಿಸುವ ಬುದ್ಧಿಯೇ ಸಾರಥಿ. ಇಂತಹ ಬುದ್ಧಿಯು ಮನಸ್ಸಿನ ವಿಶಿಷ್ಟ ಪರಿಣಾಮವು. ದಶೇಂದ್ರಿಯಗಳು ರಥವನ್ನು ಎಳೆಯುವ ಕುದುರೆಗಳು. ಈ ಇಂದ್ರಿಯಗಳನ್ನು ನಿಯಂತ್ರಿಸುತ್ತಿರುವ ಮನಸ್ಸೆಂಬುದೇ ಹಗ್ಗವು. ಇಂದ್ರಿಯಗಳಲ್ಲಿ ನಿಯಾಮಕನಾಗಿದ್ದು, ಇಂದ್ರಿಯಾಭಿಮಾನಿ ದೇವತೆಗಳಿಗೆ ಪ್ರೇರಕನಾಗಿ, ಗಂಧ ರಸರೂಪಾದಿ

ಭೋಗ್ಯ ವಸ್ತುಗಳನ್ನು (ವಿಷಯಗಳನ್ನು) ಮನಸ್ಸಿಗೆ ಮುಟ್ಟಿಸಿ, ಮನೋ ವ್ಯಾಪಾರಗಳನ್ನು ತಾನೇ ನಿರ್ವಾಹಕನಾಗಿ ನಡೆಯಿಸುತ್ತಿರುವನು. ಮನಸ್ತತ್ವದಲ್ಲಿ ಅಧಿಷ್ಠಿತನಾಗಿದ್ದು ಮನೋಭಿಮಾನಿಗಳಿಗೆ ಪ್ರೇರಕನಾಗಿ. ಜೀವರಿಗೆ ವಿಷಯಗಳ ಭೋಗವನ್ನು ಅನುಭವಕ್ಕೆ ತಂದೀಯುವನು. ಅಂದರೆ, ಮನಸ್ಸೇ ಮೊದಲಾದ ಇಂದ್ರಿಯಗಳಲ್ಲಿದ್ದು ಬಿಂಬಕ್ರಿಯಾದ್ವಾರಾ ವ್ಯಾಪಾರಗಳನ್ನು ನಡೆಯಿಸುವನು. ಮನಃಪ್ರೇರಕನಾದ ಶ್ರೀ ಪರಮಾತ್ಮನು (ತೋದಕನು ತಾನಾಗಿ) ವಿಷಯಗಳನ್ನು ಮನಸ್ಸಿನಲ್ಲಿ ನೆಲೆಗೊಳಿಸಿ, ಆ ವಿಷಯಾಂತರ್ಗತ ಸ್ವರೂಪಾಭಿನ್ನ ಸ್ವಾಖ್ಯರಸವನ್ನು ಸ್ವೀಕರಿಸುವನು. ಆಗ ಪ್ರತಿಬಿಂಬರೂಪನಾದ ಜೀವನಿಗೆ ವಿಷಯಭೋಗಗಳ ಅನುಭವವುಂಟಾಗಿ, ತೃಪ್ತಿಪಡುವನು. ಶ್ರೀಹರಿಯು ಸ್ವರಮಣನು ಮತ್ತು ಪರದಿಂದ ಪ್ರತಿಫಲಾಪೇಕ್ಷಾರಹಿತನು ಇಂತಹ ಸರ್ವಪ್ರೇರಕನಾದ ಶ್ರೀಪರಮಾತ್ಮನು ಪೂರ್ಣಾನಂದಜ್ಞಾನಮಯನು. ಅವನ ಆನಂದಕ್ಕಾಗಲೀ, ಜ್ಞಾನಕ್ಕಾಗಲೀ ಎಂದಿಗೂ ಚ್ಯುತಿ ಇಲ್ಲ. ಪೂರ್ಣಜ್ಞಾನಾನಂದಸ್ವರೂಪಿಯಾದ ಶ್ರೀಪರಮಾತ್ಮನು ಅಪರಿಚ್ಛಿನ್ನವಾದ ಆನಂತಕಲ್ಯಾಣಗುಣರತ್ನಾಕರನು. ಶ್ರೀಹರಿಯು ಸದಾಗಮೈಕವೇದ್ಯನು. ಅಥವಾ ತನ್ನ ಗುಣಗಳನ್ನು ಮಹತ್ವಜ್ಞಾನಪೂರ್ವಕವಾಗಿ ಉಪಾಸನೆ ಮಾಡತಕ್ಕ ಸ್ವಭಕ್ತರಿಗೆ (ವೇದ) ತನ್ನ ಅಪರೋಕ್ಷವೆಂಬ ಭಾಗ್ಯವನ್ನು ಕರುಣಿಸುವನು (ವೇದ್ಯನು) ಗಂಧ, ರಸ, ರೂಪ. ಸ್ಪರ್ಶ ಮತ್ತು ಶಬ್ದಾದಿ ವಿಷಯಗಳು "ಗ್ರಾಹ್ಯ" ಎಂದೆನಿಸುವುವು. ಈ ವಿಷಯಗಳಲ್ಲಿ ತಾನೇ ನಿಯಾಮಕರೂದಿಂದ ಇದ್ದು. "ಗ್ರಾಹ್ಯ" ಎಂದು ಕರೆಯಿಸಿಕೊಳ್ಳುತ್ತಾನೆ. ಈ ವಿಷಯಗಳನ್ನು ಗ್ರಹಿಸುವ ಸ್ಥಾನಗಳು ಮೂಗು, ನಾಲಿಗೆ, ಕಣ್ಣು, ಚರ್ಮ ಮತ್ತು ಕಿವಿ ಎಂಬ ಪಂಚಜ್ಞಾನೇಂದ್ರಿಯಗಳಾಗಿವೆ. ಇಂತಹ ಇಂದ್ರಿಯಗಳಲ್ಲಿದ್ದು ಆಯಾಯಾ ಇಂದ್ರಿಯಾಭಿಮಾನಿದೇವತೆಗಳಿಗೆ ಪ್ರೇರಕನಾಗಿ ವಿಷಯಗಳನ್ನು ತಾನೇ ಗ್ರಹಿಸಿ, ಆಯಾಯಾ ವಿಷಯಗಳಲ್ಲಿ ತಾನಿಟ್ಟಿರುವ ಸ್ವಾಭಿನ್ನಭಗವದ್ರೂಪಗಳಲ್ಲಿ ಕ್ರೀಡೆಯಾಡುತ್ತಾ. ಸ್ವರಸರೂಪವಾದ ವಿಷಯಗಳನ್ನು ಭುಂಜಿಸಿ "ಗ್ರಾಹಕ" ನೆಂದೆನಿಸುವನು. ಹೀಗೆ ಪೂರ್ಣಾನಂದಜ್ಞಾನಘನನಾದ ಶ್ರೀಪರಮಾತ್ಮನು ಗ್ರಾಹ್ಯ ಗ್ರಾಹಕರೂಪಗಳಿಂದ

ಸ್ವರೂಪಗಳಲ್ಲಿ ಕ್ರೀಡೆಯಾಡುತ್ತಾ, ಸ್ವಭಕ್ತಜನರನ್ನು ತೃಪ್ತಿಪಡಿಸುತ್ತಾ ಅವರಿಗೆ ಆನಂದಪ್ರದನಾಗಿದ್ದಾನೆ, ಬಿಂಬರೂಪೀ ಶ್ರೀಹರಿಯು ನಿತ್ಯ ತೃಪ್ತನು. ಆದರೂ, ಜೀವರ ಉದ್ಧಾರಾರ್ಥವಾಗಿ ಬಿಂಬಕ್ರಿಯಾದ್ವಾರಾ, ತಾನು ಮನಸ್ಸು ಮೊದಲಾದ ಇಂದ್ರಿಯಗಳಲ್ಲಿ ಪ್ರೇರಕರೂಪದಿಂದ ಇದ್ದು ಗ್ರಾಹ್ಯ-ಗ್ರಾಹಕ ಭಾವದಿಂದ, ಸ್ವಾಖ್ಯರಸಗಳನ್ನುಂಡು, ತನ್ಮೂಲಕ ಜೀವರನ್ನು ತೃಪ್ತಿಪಡಿಸುವನು. ಇದಕ್ಕೆ ಕಾರಣ ಶ್ರೀಹರಿಯು ಕರುಣಾ ಮಯನಾದದ್ದರಿಂದಲೇ, ಸ್ವಭಕ್ತರಲ್ಲಿ ಅಂತಃಕರಣವುಳ್ಳ ಕರುಣಾಮಯನು ಭಕ್ತವತ್ಸಲನು. ಇಂತಹ ವ್ಯಾಪಾರವಿಶೇಷಗಳಿಂದ ತನ್ನ ಆನಂದಾದಿ ಗುಣ ಗಳಿಗೆ ನ್ಯೂನವೇನೂ ಇಲ್ಲ. ಷಡ್ಗುಣೈಶ್ವರ್ಯಸಂಪನ್ನನಾಗಿ (ಭಾಗ್ಯಸಂಪನ್ನ) ನಿತ್ಯಾನಂದಉದ್ರಿಕ್ತನಾಗಿಯೇ ಇರುತ್ತಾನೆ ಎಂದು ತಾತ್ಪರ್ಯ. ನಾವು ನಮ್ಮ ದೇಹಕ್ಕೆ ಅಲಂಕಾರಮಾಡಿ ಕನ್ನಡಿಯಲ್ಲಿ ನೋಡಿಕೊಂಡಾಗ ನಮ್ಮ ಪ್ರತಿಬಿಂಬ ದರ್ಶನದಿಂದ, ಮನಸ್ಸಿಗೆ ತೃಪ್ತಿ ಮತ್ತು ಆನಂದಗಳುಂಟಾಗುವುವು. ಅಂತೆಯೇ ಬಿಂಬನು ಶ್ರೀ ಪರಮಾತ್ಮ. ಆವನ ಪ್ರತಿಬಿಂಬರೂಪರೇ ಜೀವರು. ಬಿಂಬನಿಗೆ ಅಲಂಕಾರ ಮಾಡಿದರೆ, ಪ್ರತಿಬಿಂಬದರ್ಶನದ್ವಾರಾ ಹೇಗೆ ತೃಪ್ತಿ ಉಂಟಾಗುವುದೋ ತದ್ವತ್, ಬಿಂಬರೂಪಿಯಾದ ಶ್ರೀಪರಮಾತ್ಮನೇ ಸ್ವರಸಗಳನ್ನು ಭುಂಜಿಸಿ, ಪ್ರತಿಬಿಂಬರಾದ ಜೀವರಿಗೆ ಉಂಡು ಉಣಿಸು ವನು. ಈ ರಸಾನುಭವದಿಂದಲೇ ಜೀವರಿಗೆ ತೃಪ್ತಿ. ||೧೬||

## ಪದ್ಯ (೧೭)

**ಮೂಲ :—**

**ನಿತ್ಯನಿಗಮಾತೀತ ನಿರ್ಗುಣ ।**
**ಭಕ್ತವತ್ಸಲ ಭಯವಿನಾಶನ ।**
**ಸತ್ಯಕಾಮ ಶರಣ್ಯ ಶಾಮಲ ಕೋಮಲಾಂಗ ಸುಖೀ ॥**
**ಮತ್ತನಂದದಿ ಮರ್ತ್ಯರೊಳಹೊರ ।**
**ಗೆತ್ತನೋಡಲು ಸುತ್ತಲಿಪ್ಪನು ।**
**ಅತ್ಯಧಿಕ ಸಂತೃಪ್ತ ತ್ರಿಜಗದ್ವ್ಯಾಪ್ತ ಪರಮಾಪ್ತ ॥ ||೧೭||**

**ಅವತರಣಿಕೆ :—**

ಅನಾದಿನಿತ್ಯವಾದ ವೇದಸಮೂಹಗಳೂ ಯಾವಾತನನ್ನು ಸಾಕಲ್ಯೇನ ವರ್ಣಿಸಲಸದಳವೋ, ಪ್ರಾಕೃತಗುಣರಹಿತನೂ, ಭಕ್ತರ ಪರಮಾಪ್ತ ಬಂಧುವೂ ಆದ ದಿವ್ಯಮಂಗಳವಿಗ್ರಹರೂಪೀ ಶ್ರೀಹರಿಯು ತ್ರಿಜಗದ್ವ್ಯಾಪ್ತ ನಾಗಿ, ಸರ್ವತ್ರ ಸಂಚರಿಸುತ್ತಾ, ಸ್ವಭಕ್ತವೃಂದಕ್ಕೆ ಪರಮಾಪ್ತನೆಂದೆನಿಸಿ ದ್ದಾನೆ ಎಂದು ಹೇಳುತ್ತಾರೆ- "ನಿತ್ಯನಿಗಮಾತೀತ" —ಎಂಬ ಈ ಪದ್ಯದಿಂದ ||೧೭||

**ಪ್ರತಿಪದಾರ್ಥ :—**

**ನಿತ್ಯ** = ಅನಾದಿಯಾಗಿ, ನಿತ್ಯವಾಗಿ, ಈಶ್ವರನಿಂದ ರಚಿತವಲ್ಲದ, ಆದರ ಈಶ್ವರಾಧೀನವಾದ **ನಿಗಮ** = ಋಗಾದಿ ನಾಮಗಳಿಂದ ಯುಕ್ತವಾದ ಅನಂತವೇದಸಮೂಹಗಳಿಗೆ **ಅತೀತ** = ಅತೀತನಾದ (ಶ್ರೀ ಪರಮಾತ್ಮನ ಗುಣರೂಪ ಕ್ರಿಯಾದಿಗಳನ್ನು ಸಾಕಲ್ಯೇನ ವರ್ಣಿಸಲು ಸಾಧ್ಯವಿಲ್ಲವೋ) **ನಿರ್ಗುಣ** = ಸತ್ವ, ರಜಸ್ತಮೋಪ್ರಾಕೃತಗುಣರಹಿತನಾದ (ಆದರೆ ಸ್ವಾಖ್ಯ ರೂಪವಾದ ಅಪ್ರಾಕೃತವಾದ ಅನಂತಕಲ್ಯಾಣಗುಣಗಣಪರಿಪೂರ್ಣನು) **ಭಕ್ತವತ್ಸಲ** = ಸ್ವಭಕ್ತರಲ್ಲಿ ಅತ್ಯಂತ ಪ್ರೀತಿಯುಳ್ಳವನು **ಭಯವಿನಾಶನ** = ಸ್ವಭಕ್ತರ ಭಯವನ್ನು ಪರಿಹಾರಮಾಡತಕ್ಕವನು **ಸತ್ಯಕಾಮ** = ಸತ್ಯ ಸಂಕಲ್ಪನು **ಶರಣ್ಯ** = ಭಕ್ತಜನರಿಂದ ವಂದ್ಯನು (ಶರಣುಹೋಗಲು ಅರ್ಹನು) **ಶ್ಯಾಮಲ** = ನೀಲಮೇಘದಂತೆ ಶ್ಯಾಮಲವರ್ಣದಿಂದ ಕೂಡಿದ **ಕೋಮಲಾಂಗ** = ದಿವ್ಯಮಂಗಳವಿಗ್ರಹನು (ಸುಂದರಾಂಗವಿಶಿಷ್ಟನು) **ಸುಖಿ** = ಆನಂದಸ್ವರೂಪಿಯು **ಮತ್ತನಂದದಿ** = ನಿರ್ಭೀತನಾಗಿ **ಮರ್ತ್ಯರ** = ಮನುಷ್ಯಾದಿ ಪ್ರಾಣಿಗಳ **ಒಳಹೊರಗೆ** = ಅಂತರ್ಬಹಿಶ್ಚ ವ್ಯಾಪ್ತನಾಗಿ **ಎತ್ತನೋಡಲು** = ಎಲ್ಲೆಲ್ಲಿ ನೋಡಿದರೂ, ಅಂದರೆ ಸರ್ವಕಾಲ ಮತ್ತು ಸರ್ವದೇಶಗಳಲ್ಲಿ **ಸುತ್ತಲಿಪ್ಪನು** = ಸುತ್ತಲೂ ವ್ಯಾಪ್ತನಾಗಿರುವನು **ಅತ್ಯಧಿಕ** = ನಿರತಿಶಯವಾದ **ಸಂತೃಪ್ತ** = ಸದಾತೃಪ್ತನಾಗಿಯೇ ಇರುವನು.

ಅಂದರೆ ಆಪ್ತಕಾಮನು **ತ್ರಿಜಗದ್ವ್ಯಾಪ್ತ** = ಮೂರು ಲೋಕಗಳಲ್ಲಿಯೂ (ಸ್ವರ್ಗ, ಮರ್ತ್ಯ ಮತ್ತು ಪಾತಾಳಲೋಕಗಳು) ವ್ಯಾಪ್ತನಾಗಿದ್ದಾನೆ. **ಪರಮಾಪ್ತ** = ಸ್ವಭಕ್ತವರ್ಗಕ್ಕೆ ಅತ್ಯಂತಆಪ್ತನು, ಅಂದರೆ ಆಪದ್ಬಾಂಧವು. ||೧೭||

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಶ್ರೀಪರಮಾತ್ಮನೋಪಾದಿಯಲ್ಲಿ, ಅನಾದಿಯಾಗಿ, ನಿತ್ಯವಾಗಿ, ಈಶ್ವರನಿಂದ ರಚಿತವಲ್ಲದ, ಈಶ್ವರಾಧೀನವಾದ, ಶ್ರೀಪರಮಾತ್ಮನ ದಿವ್ಯ ಮಹಾತ್ಮೆಗಳ ಹೇಳತಕ್ಕ, ಋಗಾದಿ ನಾಲ್ಕು ನಾಮಗಳಿಂದ ಯುಕ್ತವಾದ ಅನಂತಾನಂತ ವೇದಗಳಿಗೆ ಅತೀತನಾದವ. ಪ್ರಾಕೃತಗುಣಗಳು ಇಲ್ಲದವ. ತನ್ನ ಸ್ವಾಖ್ಯವಾದ ಅಪ್ರಾಕೃತಗುಣ, ಅಂದರೆ, ಅನಂತಕಲ್ಯಾಣಗುಣಗಣ ಪರಿಪೂರ್ಣನಾದವನು. ತನ್ನನ್ನು ಸರ್ವೋತ್ತಮನೆಂದು ತಿಳಿದಂಥಾ ಜ್ಞಾನಿಗಳಲ್ಲಿ ಅತ್ಯಂತ ಪ್ರೇಮಾಸ್ಪದವಾದವ (ಭಕ್ತವತ್ಸಲ). ಇಂಥಾ ಭಕ್ತರಿಗೆ ಬರತಕ್ಕ ಭಯಗಳನ್ನು ನಾಶಮಾಡುವವ. ಇನ್ನೂ ತಮೋಯೋಗ್ಯರಿಗೆ ಭಯವನ್ನು ವಿಶೇಷಾಕಾರವಾಗಿ ಕೊಡತಕ್ಕವ. ತಾರತಮ್ಯ, ಪಂಚಭೇದ, ಜಗತ್ತು ಸತ್ಯ ಎಂತ ತಿಳಿದು ತದನುಷ್ಠಾನಮಾಡತಕ್ಕ ಭಕ್ತರು ಬೇಡಿದಿಷ್ಟಾರ್ಥವನ್ನು ಕೊಡತಕ್ಕವ. ಭಕ್ತಜನರಿಂದ ವಂದ್ಯನಾದವ (ಶರಣ್ಯ). ಶ್ಯಾಮಲವರ್ಣದಿಂದ ವಿಶಿಷ್ಟನಾದವ. ಅತ್ಯಂತಸುಂದರತರವಾದ ತನ್ನ ಶರೀರವನ್ನು ಅಪರೋಕ್ಷದಿಂದ ಮುಕ್ತರಿಗೆ ಕೊಡತಕ್ಕವ. ಮಂತ್ರೌಷಧಗಳನ್ನು ತಿಳಿದ ಪುರುಷ ದಾವಭಯವೂ ಇಲ್ಲದೇ ಹ್ಯಾಂಗೆ ನಿರ್ಭಯನಾಗಿ ಮತ್ತನಾಗಿರುತ್ತಾನೋ, ತದ್ವತ್ ಸರ್ವೋತ್ತಮನಾದ ಶ್ರೀ ಪರಮಾತ್ಮನು ರಮಾಬ್ರಹ್ಮಾದಿ ಸರ್ವತ್ರಿವಿಧಜೀವರ ಲಕ್ಷ್ಯಮಾಡದೇ, ಮನುಷ್ಯರೊಳಗೆ,

ಹಾಂಗೆ, ರಮಾಬ್ರಹ್ಮಾದಿ ಸರ್ವಜೀವರೊಳಗೆ (ಬ್ರಹ್ಮಾಂಡದೊಳಗೆ) ಬಹಿ ರಾಕಾಶದಲ್ಲಿ ಬ್ರಹ್ಮಾಂಡದ ಹೊರಗೆ ನವಾವರಣಪರ್ಯಂತವಾಗಿ, ಅದಕ್ಕೆ ಆಚೇಲಿ ವಿಚಾರದಿಂದ, ಅಪ್ರಾಕೃತಾಕಾಶದಲ್ಲಿ, ಸ್ವಾಖ್ಯಪ್ರದೇಶದಲ್ಲಿ, ಅಪರಿಚ್ಛಿನ್ನನಾಗಿ, ಸುತ್ತಲೂ ಆಚ್ಛಿದ್ರನಾಗಿ, ವ್ಯಾಪ್ತನಾಗಿ ಇರೋವನಾಗಿ ದಾನೆ. "ಇದರಿಂದ **ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣ ಸ್ಥಿತಃ ||"** —**ಎಂಬ ಶ್ರುತ್ಯರ್ಥ** ಹೇಳಿದಂತಾಯಿತು. ಅಸ್ವತಂತ್ರ ಲಕ್ಷಣರಾದ ಕ್ಷರಾಕ್ಷರಜೀವರೊಳು ಅಕ್ಷರಳಾದ ರಮಾದೇವಿ ಅಧಿಕಳು. ಈಕೆ ಗಿಂತಲೂ ಅಪರಿಚ್ಛಿನ್ನನಾದ ಅತ್ಯಧಿಕಗುಣ ಉಳ್ಳವನು. ಯೋಗ್ಯರಾದ (ಸಂ) ಬ್ರಹ್ಮಾದಿ ಮುಕ್ತಿ ಯೋಗ್ಯರಿಗೆ ತನ್ನ ಸಂದರ್ಶನದಿಂದ ಆನಂದ ಭೋಜನ ಮಾಡಿಸಿ ತೃಪ್ತ (ತೃಪ್ತ)ರನ್ನಾಗಿ ಮಾಡತಕ್ಕವನು. ತದನ್ಯರಿಗೆ ರಾಮ ಕೃಷ್ಣಾದಿರೂಪಸಂದರ್ಶನದಿಂದ ಭೇದ ಐದಿಸಿ ಅತೃಪ್ತರನ್ನಾಗಿ ಮಾಡತಕ್ಕ ವನು (ತಮೋಯೋಗ್ಯ ಮತ್ತು ನಿತ್ಯಸಂಸಾರಿಗಳಿಗೆ). ಮೂರಾದಂಥಾ ಪೂರ್ವೋಕ್ತ ಪುರುಷರೂಪತ್ರಯಗಳಿಂದ ವ್ಯಾಪ್ತನಾದವನು. ತಾರತಮ್ಯಾನು ಸಾರ ಉತ್ತಮರಾದ ಭಕ್ತರಿಗೆ (ಪರಮ) ಅವರ [ಯೋಗ್ಯತಾನುಸಾರ, ಆಪ್ತನಾದವನು (ಆಪ್ತ). ನಿರ್ಲಿಪ್ತನಾದವನು ॥೧೭॥

## (೨) "ಭಾವಪ್ರಕಾಶಿಕೆ" –ವ್ಯಾಖ್ಯಾನ :—

ಶ್ರೀಪರಮಾತ್ಮನು ನಿತ್ಯವಾದ ವೇದಗಳಿಂದಲೂ, ತಿಳಿಸಲಶಕ್ಯವಾದ ಗುಣರೂಪವುಳ್ಳವನು. ಸತ್ವರಜಸ್ತಮಸ್ಸೆಂಬ ಪ್ರಾಕೃತಗುಣರಹಿತನು. ತನ್ನ ದಾಸರಲ್ಲಿ ಪರಮವಾತ್ಸಲ್ಯವುಳ್ಳವನು. ಭಕ್ತರಿಗೆ ಬರುವ ಭಯಗಳನ್ನು ಪರಿಹರಿಸುವನು. ಅವನ ಸಂಕಲ್ಪವು ಎಂದಿಗೂ ವ್ಯರ್ಥವಾಗುವುದಿಲ್ಲ. ಆತಏವ ಸತ್ಯಸಂಕಲ್ಪನು. ಶರಣುಹೊಂದಲು ಯೋಗ್ಯನಾದವನು. ಶ್ಯಾಮಲ ವರ್ಣನು. ಕೋಮಲವಾದ ಮನೋಹರವಾದ ಅಂಗಗಳುಳ್ಳವನು. ನಿತ್ಯಾ ನಂದಸ್ವರೂಪನು. ಯಾವಾಗಲೂ ತೃಪ್ತನಾಗಿಯೇ ಇರುವನು. ಮೂರು ಲೋಕದ ಒಳಗೂ ಹೊರಗೂ ವ್ಯಾಪ್ತನಾಗಿರುವನು. ಭಕ್ತರಿಗೆ ಪರಮ ಆಪ್ತನು. ಮದ್ಯವನ್ನು ಪಾನಮಾಡಿ ಮತ್ತರಾದವರು ಹೇಗೆ ಮೈಮೇಲೆ

ಸ್ಮೃತಿ ಇಲ್ಲದೆ ನಿರ್ಭೀತರಾಗಿ ಸಂಚರಿಸುತ್ತಿರುವರೋ ಹಾಗೆ ಪ್ರಾಣಿಗಳ ಒಳಗೂ ಹೊರಗೂ ಸುತ್ತಲೂ ಎಲ್ಲಿ ನೋಡಿದರಲ್ಲಿ ಇರುವನು. ಪರಮಾತ್ಮ ನಿಗೆ ಮತ್ತನ ಉಪಮಾನವನ್ನು ಕೊಟ್ಟದ್ದರಿಂದ ಅವನೂ ಸಹ ಮತ್ತನೋ ಎಂಬ ಶಂಕೆಯನ್ನು ಮಾಡಬಾರದು. ದೃಷ್ಟಾಂತದಲ್ಲಿ ಸರ್ವಸಾಮ್ಯ ಬೇಕಾಗಿಲ್ಲ. ಚಂದ್ರಮುಖಿ ಎಂಬ ಉಪಮಾನದಲ್ಲಿ ಚಂದ್ರಬಿಂಬ ಸಾದೃಶ ವನ್ನು ಮುಖಕ್ಕೆ ಹೇಗೆ ತೆಗೆದುಕೊಳ್ಳದೆ, ಆಹ್ಲಾದಗುಣವನ್ನು ಮಾತ್ರ ಗ್ರಹಿಸುವರೋ, ಹಾಗೆಯೇ ಇಲ್ಲಿಯೂ ಮತ್ತನಲ್ಲಿರುವ ನಿರ್ಭೀತ ಗುಣವನ್ನು ಮಾತ್ರ ಉಪಮಾನವನ್ನಾಗಿ ತೆಗೆದುಕೊಳ್ಳಬೇಕೆಂಬ ಭಾವ ॥೧೭॥

## (೩) "ಭಾವದರ್ಪಣ ಟೀಕಾ" —ವ್ಯಾಖ್ಯಾನ :—

ನಿಗಮಾತೀತ = ವೇದಗಳಿಗೆ ಸಿಗದೇ ಇರುವ, ನಿರ್ಗುಣ = ಸತ್ವರಜ ಸ್ತಮೋಗುಣಶೂನ್ಯ. ಸತ್ಯಕಾಮ = ಸತ್ಯವಾದ ಅಪೇಕ್ಷಾ ಉಳ್ಳವ. ಶರಣ್ಯ = ಮೊರೆಹೋಗಲಿಕ್ಕೆ ಯೋಗ್ಯ. ಶ್ಯಾಮಲ = ಶ್ಯಾಮಲವರ್ಣವಿಶಿಷ್ಟ. ಕೋಮಲಾಂಗ = ಮೃದುದೇಹವುಳ್ಳವ. ಸುಖೀ = ಸರ್ವದಾಸುಖವುಳ್ಳವ, ಉನ್ಮತ್ತ = ಇತರರ ಭಯ ಇಲ್ಲದವನೆಂದು ಭಾವ. ಸರ್ವತ್ರವ್ಯಾಪ್ತ = ಸರ್ವರಿಗೂ ಪರಮ ಆಪ್ತ ॥೧೭॥

## (೪) ಶ್ರೀ ಜಮುಖಂಡಿವಾದಿರಾಜಾಚಾರ್ಯರ ವ್ಯಾಖ್ಯಾನ - (ಸಂಸ್ಕೃತಮೂಲ):—

ನಿತ್ಯೇತಿ ॥ ಅತೀತಃ । ತದನುಕ್ತ ಗುಣಃ ॥ ನಿರ್ಗುಣಃ – ಸತ್ವಾದಿ ರಹಿತಃ । ಶ್ಯಾಮಲಃ – ಶಾಮಃ ॥ ಸರ್ವಾತ್ಮನಾ ಗುಣಹಾನ್ ಸಾಕ್ಷಾ ದ್ರಷ್ಟೃತ್ವಾರ್ಥಕ ಸಾಕ್ಷಿ ಶಬ್ದವಿರೋಧಃ ಶ್ರುತೌ ॥೧೭॥

**ಕನ್ನಡಾನುವಾದ :—**

ನಿತ್ಯನಿಗಮಾತೀತ = ನಾಶರಹಿತವಾದ ವೇದಸಮೂಹಗಳಿಗೂ ಸಿಗದವನು. ಆದರೆ ವೇದೋಕ್ತವಾದ ಗುಣಸಂಪನ್ನನು. "ನಿರ್ಗುಣ" ಎಂಬ ಶಬ್ದದಿಂದ

ವಿರೋಧವುಂಟಾಗುವುದು. "ಪ್ರತ್ಯಕ್ಷವಾಗಿ ಸಮಸ್ತ ವಸ್ತುಗಳನ್ನು ನೋಡು ವವ" ಎಂಬುದೇ "ಸಾಕ್ಷಿ" ಎಂಬುದರ ಶಬ್ದಾರ್ಥವು. ಹೀಗೆ "ಸಾಕ್ಷಿತ್ವ" ಮುಂತಾದ ವಿಶೇಷಗುಣಗಳು ಪರಮಾತ್ಮನಲ್ಲಿರುವುದರಿಂದ "ಯಾವ ಗುಣವೂ ಇಲ್ಲ"ವೆಂದು ಹೇಳುವುದು ಶ್ರುತಿಗೆ ವಿಸಂಗತವಾಗುತ್ತದೆ. ಈ ಕಾರಣದಿಂದ ಪ್ರಾಕೃತ ಸತ್ವಾದಿಗುಣಶೂನ್ಯನು" ಎಂದೇ ಅರ್ಥಮಾಡಬೇಕು. ಅದರಿಂದ ಶ್ರುತಿವಿರೋಧತ್ವವು ಪರಿಹಾರವಾಗುವುದು ॥೧೭॥

## (೫) "ಗುರುಹೃದಯಪ್ರಕಾಶಿಕೆ" — ವ್ಯಾಖ್ಯಾನ :—

ಜನನಾದಿ ದೋಷದೂರನು. ವೇದಕ್ಕೂ ನಿಲುಕದವನು ಎಂದರೆ, ಗೊತ್ತಾಗದವನು. ಪ್ರಾಕೃತಸತ್ವಾದಿಗುಣರಹಿತನು. ಅಪ್ರಾಕೃತನೀಲ ವರ್ಣನು. ಜ್ಞಾನಾನಂದವೆಂಬ ಕೋಮಲರೂಪನು. ಸತ್ಯಸಂಕಲ್ಪನು. ನಂಬಿದವರ ರಕ್ಷಕನು. ಸ್ವಜನರಲ್ಲಿ ಕೃಪೆಯುಳ್ಳವನು. ಭಯಪರಿಹಾರಕನು. ಆದಾಗ್ಯೂ ಮತ್ತನಂತೆ ಆನಂದೋದ್ರಿಕ್ತನಾಗಿ ಮೃತಿಧರ್ಮವುಳ್ಳ ಸರ್ವ ದೇಹಿಗಳಲ್ಲೂ, ಎಲ್ಲೆಲ್ಲೂ ವ್ಯಾಪ್ತನಾಗಿದ್ದರೂ, ಅಚಿಂತ್ಯಶಕ್ತಿಯಿಂದ ವಾಯುವು ಬಹಿರಂತರ್ವ್ಯಾಪ್ತವಾದರೂ ಚರಿಸುವಂತೆ ವ್ಯಾಪಾರಗೈವನು. ಅತ್ಯಂತ ತೃಪ್ತನೆಂದರೆ, ಪರಾಪೇಕ್ಷೆಯಿಲ್ಲದವನು. ಆದರಿಂದ ಪರಮಾಪ್ತ. ॥೧೭॥

## ಸರ್ವವ್ಯಾಖ್ಯಾನಸಾರಸಂಗ್ರಹ :—

ವೇದಗಳು ಅನಂತಸಂಖ್ಯಾಕವಾದುವು. ಅನಾದಿನಿತ್ಯವಾದ ವೇದಗಳು ಅಪೌರುಷೇಯವಾದುವು. ಇಂತಹ ವೈದಿಕ ಶಬ್ದಪ್ರಪಂಚವು ಪ್ರತಿ ಕಲ್ಪ ದಲ್ಲಿಯೂ ಶ್ರೀಪರಮಾತ್ಮನ ಬುದ್ಧ್ಯಸ್ಥವಾಗಿದ್ದು. ಜಗದ್ಗುರುಗಳಾದ ಚತುರ್ಮುಖ ಬ್ರಹ್ಮದೇವರಿಗೆ ಪ್ರಪ್ರಥಮವಾಗಿ ಉಪದೇಶಿಸಲ್ಪಟ್ಟು, ಪರಂಪರಾಗತವಾಗಿ ಪ್ರಸಿದ್ಧವಾಗಿರುವುದರಿಂದಲೇ ವೇದಗಳು "ಶ್ರುತಿ" ಎಂದು ವಿಖ್ಯಾತವಾಗಿವೆ. ಶ್ರೀಪರಮಾತ್ಮನ ಗುಣರೂಪಕ್ರಿಯಾವಿಶೇಷಗಳನ್ನು ಪರಿಚಯಮಾಡಿಕೊಡುವುದೇ ಶ್ರುತಿಯ ತಾತ್ಪರ್ಯವು. ಅಂದರೆ ಭಗ

ವಂತನು ವೇದಗಳಿಂದ ಪರಮಮುಖ್ಯತ್ವೇನ ಪ್ರತಿಪಾದ್ಯನು. ಆದರೆ ಅನಂತಾನಂತ ವೇದಗಳೂ ಸಹ ಸದಾಗಮೈಕವೇದ್ಯನಾದ ಶ್ರೀಪರಮಾತ್ಮನ ಗುಣಾತಿಶಯುಗಳನ್ನು ಸಾಕಲ್ಯೇನ ವರ್ಣಿಸಲಾರವು. ಆದ್ದರಿಂದಲೇ ಶ್ರೀಪರ ಮಾತ್ಮನು ನಿಗಮಕೆ ಸಿಲುಕದ ಅಗಣಿತ ಮಹಿಮನಾಗಿದ್ದಾನೆ. ಅಂದರೆ ನಿತ್ಯನಿಗಮಾತೀತನು. ಇಂತಹ ಪರಬ್ರಹ್ಮನು ಅತ್ಯಾಶ್ಚರ್ಯಕರವಾದ ವಸ್ತು. ಸತ್ವ, ರಜಸ್ತಮಾದಿ ಪ್ರಾಕೃತಗುಣಗಳಿಂದ ರಹಿತನು. ನಿರ್ಗುಣನೆಂದರ್ಥ. ಅಂದರೆ ಗುಣಗಳೇ ಇಲ್ಲವೆಂದರ್ಥವಲ್ಲ. ಪರತತ್ವ ಸಾರನಾದ ಶ್ರೀ ಪರಮಾತ್ಮನು ಅಪ್ರಾಕೃತವಾದ ಜ್ಞಾನನಂದ ಸ್ವರೂಪಿಯು. ಅನಂತಕಲ್ಯಾಣಗುಣಗಣಾಢ್ಯನು. ಇಂತಹ ನಿತ್ಯಾನಂದಮಯನಾದ ಶ್ರೀಹರಿಯು ಸ್ವಭಕ್ತರ ವಿಷಯದಲ್ಲಿ ಪರಮಕರುಣಾಳು. ಅವರಲ್ಲಿ ನಿರಂತರವೂ ಪ್ರೀತಿವಾತ್ಸಲ್ಯಗಳನ್ನಿಟ್ಟಿರುವ ಭಕ್ತವತ್ಸಲನು ಸ್ವಭಕ್ತರಿಗೆ ಒದಗುತ್ತಿರುವ ವಿಪತ್ತು ಮುಂತಾದ ಭಯಗಳನ್ನು ದೂರಮಾಡಿ ಸಂರಕ್ಷಿಸುತ್ತಿರುವನು. ಸ್ವಜನಭಯನಿವಾರಣನಾದ ಭಗವಂತನು ಸತ್ಯಸಂಕಲ್ಪನು. ಅವನ ಇಚ್ಛಾಮಾತ್ರದಿಂದಲೇ ಜಗತ್ಸೃಷ್ಟ್ಯಾದಿ ವ್ಯಾಪಾರಗಳೆಲ್ಲವೂ ಲೀಲಾ ರೂಪದಲ್ಲಿ ನಡೆಯುತ್ತಿರುವುವು. ಆತನೇ ಸಮಾಭ್ಯಧಿಕಶೂನ್ಯನಾದ್ದರಿಂದ ಸರ್ವೋತ್ತಮದೇವತೆಯು. ಅತಏವ ಎಲ್ಲರಿಂದಲೂ ಸಂಸೇವ್ಯಮಾನನಾಗಿ ಶರಣ್ಯನೆಂದೆನಿಸಿದ್ದಾನೆ. ಆತನೇ ಸಮಸ್ತಚೇತನಾಚೇತನ ಪ್ರಪಂಚಕ್ಕೂ ಆಶ್ರಯಾಪನ್ನನಾದವ. ಅವನನ್ನೇ ಸಮಸ್ತರೂ ಶರಣುಹೊಂದಬೇಕು. ಅಪ್ರಾಕೃತವಾದ ನೀಲವರ್ಣವಿಶಿಷ್ಟವಾದ ಸುಂದರಾವಯವಗಳುಳ್ಳವನು. ಆತನ ದೇಹವೇ ಅಪ್ರಾಕೃತ ಜ್ಞಾನಾನಂದಮಯವು. ನಿತ್ಯಾನಂದನು. (ಸುಖೀ) ನಿತ್ಯಾನಂದದಿಂದ ಉದ್ರಿಕ್ತನಾಗಿರುವುದರಿಂದಲೇ, ದಾಸರಾಯರು "ಮತ್ತನಂದದಿ" ಎಂದು ಶಬ್ದಪ್ರಯೋಗಮಾಡಿರುವರು. ಪರಾಪೇಕ್ಷಾರಹಿತನಾದರಿಂದ ನಿರ್ಭೀತನು. ಹೀಗೆ ನಿತ್ಯಾನಂದಉದ್ರಿಕ್ತವಸ್ತುವಾದ ಶ್ರೀ ಪರಮಾತ್ಮನು ನಿರ್ಭೀತನಾಗಿ, ಸರ್ವತಂತ್ರಸ್ವತಂತ್ರನಾಗಿ ಮನುಷ್ಯಾದಿ ಪ್ರಾಣಿಗಳ ಒಳಹೊರಗೆ, ಸುತ್ತಮುತ್ತ ಎಲ್ಲೆಲ್ಲಿ ನೋಡಿದರಲ್ಲಿ ವ್ಯಾಪ್ತನಾಗಿರುವನು, ಇಂತಹ ಸರ್ವತ್ರವ್ಯಾಪ್ತನಾದ ಜಗನ್ನಿಯಾಮಕನು ನಿತ್ಯ

ತೃಪ್ತನು. ಇತರರಿಂದ ಅವನಿಗೆ ಏನೂ ಆಗಬೇಕಾಗಿಲ್ಲ. ಹೀಗೆ ಅತ್ಯಧಿಕ ಸಂತೃಪ್ತನಾದ್ಧಸ್ವಾಮಿಯು ಅಣುರೇಣುತೃಣಕಾಷ್ಠಾದಿಗಳಲ್ಲಿ ಪರಿಪೂರ್ಣತ್ವೇನ ವ್ಯಾಪ್ತನು. ಸ್ವರ್ಗ, ಮರ್ತ್ಯ, ಪಾತಾಳಗಳಿಂದ ತ್ರಿಲೋಕಗಳಲ್ಲಿ ಅಂತ ರ್ಬಹಿಶ್ಚವ್ಯಾಪ್ತನಾಗಿದ್ದು, ತದ್ವಿಲಕ್ಷಣನಾಗಿದ್ದಾನೆ. ಸಜ್ಜನರ ಪಾಲಿಗೆ ಪರಮಾಪ್ತಬಂಧುವೆಂದರೆ, ಪ್ರತಿಬಿಂಬರಾದ ಜೀವರಲ್ಲಿ ನಿತ್ಯಸನ್ನಿಹಿತನಾ ಗಿರುವ ಬಿಂಬರೂಪೀ ಶ್ರೀಹರಿಯೊಬ್ಬನೇ. ಅನ್ಯರಾರೂ ಅಲ್ಲವೆಂದು ತಾತ್ಪರ್ಯ. ಆಪ್ತಕಾಮನಾದ ಸರ್ವೇಶ್ವರನು ಪರಮಾಪ್ತನೂ ಹೌದು ॥೧೭॥

## ಪದ್ಯ (೧೮)

**ಮೂಲ :—**

**ಪವಿ ಹರಿನ್ಮಣಿ ವಿದ್ರುಮದ ಸ**।
**ಚ್ಛವಿಗಳಂದದಿ ರಾಜಿಸುತ ಮಾ ।**
**ಧವ ನಿರಂತರ ದೇವಮಾನವದಾನವರೊಳಿದ್ದು ।**
**ತ್ರಿವಿಧ ಗುಣಕರ್ಮ ಸ್ವಭಾವ ।**
**ಪವನಮುಖ ದೇವಾಂತರಾತ್ಮಕ ।**
**ದಿವಸದಿವಸದಿ ವ್ಯಕ್ತಮಾಡುತಲವರೊಳಿದ್ದುಣಿಪ॥ ॥೧೮॥**

**ಅವತರಣಿಕೆ :—**

ವಜ್ರ, ನೀಲಮಣಿ ಮತ್ತು ಹವಳಸದೃಶರಾದ ತ್ರಿವಿಧಜೀವರಾಶಿ ಗಳಲ್ಲಿ ತ್ರಿವಿಧವಾದ ಗುಣಕರ್ಮಸ್ವಭಾವಕ್ಕನುಸಾರವಾಗಿ ಶ್ರೀ ವಾಯು ದೇವರ ದ್ವಾರಾ, ತತ್ವಪತಿ ದೇವತೆಗಳದ್ವಾರಾ ನಿರಂತರದಲ್ಲಿಯೂ ಇದ್ದು, ಶ್ರೀ ಪರಮಾತ್ಮನೇ ಮಾಡುವ ಕ್ರಿಯಾವಿಶೇಷಗಳನ್ನೂ ಮತ್ತು ಅವರವರ

ಯೋಗ್ಯತಾನುಸಾರ ಫಲದಾತೃತ್ವವಿಧಾನವನ್ನು ವಿವರಿಸುತ್ತಾರೆ—"ಪವಿ"- ಎಂಬ ಪದ್ಯದಿಂದ ॥೧೮॥

**ಪ್ರತಿಪದಾರ್ಥ :—**

**ಪವಿ** = ವಜ್ರ **ಹರಿನ್ಮಣಿ** = ನೀಲಮಣಿ- **ವಿದ್ರುಮ** = ಹವಳ **ಸಚ್ಛವಿಗಳಂದದಿ** = ಇವುಗಳ ಪ್ರಕಾಶಮಾನವಾದ ಕಾಂತಿಗಳೋಪಾದಿಯಲ್ಲಿ **ರಾಜಿಸುತ** = ಶೋಭಿಸುತ್ತ **ಮಾಧವ** = ಶ್ರೀ ರಮಾಪತಿಯು **ನಿರಂತರ** = ಸದಾ ಅವಿಯೋಗನಾಗಿ **ದೇವ** = ಬ್ರಹ್ಮಾದಿ ತೃಣಾಂತಮುಕ್ತಿಯೋಗ್ಯರು **ಮಾನವ** = ಪುರಂಜನ ಪ್ರಾರಂಭಮಾಡಿ ತೃಣಾಂತ ನಿತ್ಯಸಂಸಾರಿಗಳು **ದಾನವರೊಳಿದ್ದು** = ಕಲಿಪ್ರಾರಂಭಿಸಿ ತೃಣಾಂತ ತಮೋಯೋಗ್ಯ ದೈತ್ಯರು. ಈ ಪ್ರಕಾರ ತ್ರಿವಿಧ ಜೀವರಾಶಿಗಳಲ್ಲಿ ತಾನು ಅಂತಸ್ಥಿತನಾಗಿದ್ದು, **ತ್ರಿವಿಧ** = ಮೂರುಪ್ರಕಾರವಾದ **ಗುಣ** = ಸ್ವರೂಪಗುಣಗಳು **ಕರ್ಮ** = ಅವರವರ ಯೋಗ್ಯವಾದ ಸಾತ್ವಿಕ, ರಾಜಸ ಮತ್ತು ತಾಮಸ ಕರ್ಮಗಳನ್ನು **ಸ್ವಭಾವವ** = ಸ್ವರೂಪಭೂತವಾದ ಸ್ವಭಾವವನ್ನು **ಪವನಮುಖ** = ಶ್ರೀ ವಾಯುದೇವರೇ ಮೊದಲಾದ **ದೇವಾಂತರಾತ್ಮಕ** = ದೇವತೆಗಳಲ್ಲಿ ಅಂತರ್ಯಾಮಿರೂಪದಿಂದಿದ್ದು **ದಿವಸದಿವಸದಿ** = ಪ್ರತಿದಿನ ಮತ್ತು ಪ್ರತಿಕ್ಷಣದಲ್ಲಿಯೂ **ವ್ಯಕ್ತಮಾಡುತಲಿ** = ಅಭಿವ್ಯಕ್ತಿ ಮಾಡುತ್ತಾ (ಬೆಳಕಿಗೆ ತರುತ್ತಾ) **ಅವರೊಳಿದ್ದು** = ಅಂತಹ ತ್ರಿವಿಧಜೀವರಾಶಿಗಳಲ್ಲಿದ್ದು **ಉಣಿಪ** = ಅವರವರ ಕರ್ಮಫಲಗಳನ್ನು ಬಿಂಬಕ್ರಿಯಾದ್ವಾರಾ ಉಣಿಸುತ್ತಾನೆ. ॥೧೮॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ವಜ್ರ (ಪವಿ), ತದ್ಗತ ತೇಜಃ ಸದೃಶ ಜ್ಞಾನ, ಸಾತ್ವಿಕ ಜ್ಞಾನ. ಭಗವದ್ಭಕ್ತರಾದ ದೇವತೆಗಳು ಮೊದಲು ಮಾಡಿಕೊಂಡು ತೃಣಾಂತಜೀವರು.

ನೀಲಮಣಿಯಂತೆ (ಹರಿನ್ಮಣಿ) ಮಿಶ್ರವರ್ಣಯುಕ್ತವಾದ್ದರಿಂದ ರಜೋ ಗುಣಸ್ವಭಾವವುಳ್ಳ ಮಿಶ್ರಜ್ಞಾನಯುಕ್ತರಾದ ನಿತ್ಯಸಂಸಾರಿಗಳು, ತೃಣಾಂತ ಜೀವರು. ಹವಳ (ವಿದ್ರುಮ)ವಾದದ್ದು ಏಕವರ್ಣ ವಿಶಿಷ್ಟವಾಗಿ ಒಂದೆ ಪ್ರಕಾರ ತೇಜವುಳ್ಳದ್ದು, ವಜ್ರದ ಕಾಂತಿಗೂ. ನೀಲಕಾಂತಿಗೂ ವಿಲಕ್ಷಣ ಕಾಂತಿ ಉಳ್ಳದ್ದು. ತಮೋಯೋಗ್ಯರು-ತೃಣಾಂತ ಜೀವರು. ಈ ಪ್ರಕಾರ ಅದರದರ ಸ್ವಭಾವ ಅದರದ್ದಾಗಿರುವುದರಿಂದ, ಈ ದೃಷ್ಟಾಂತಾನುಸಾರ ಅದರದರ ಪ್ರಕಾಶ ಹ್ಯಾಂಗೋ ಅದರಂತೆ ಜ್ಞಾನಗಳಿಂದ ಪ್ರಕಾಶಮಾನ ರಾಗುತ್ತ (ರಾಜಿಸುತ), ರೂಪಯುಕ್ತರಾಗಿ, ಸ್ವರೂಪಸ್ವಭಾವದವರಾದ ದೇವ-ಬ್ರಹ್ಮಾದಿ ತೃಣಾಂತ ಮುಕ್ತಿಯೋಗ್ಯಜೀವರು, ಮಾನವ ಪುರಂಜನ ಆರಂಭಮಾಡಿ ತೃಣಾಂತ ನಿತ್ಯಸಂಸಾರಿಗಳು ಮತ್ತು ಕಲಿ ಆರಂಭಮಾಡಿ, ತೃಣಾಂತ ತಮೋಯೋಗ್ಯ ಜೀವರು (ದೇವಮಾನವದಾನವರೊಳಿದ್ದು) ಈ ತ್ರಿವಿಧರ ಸ್ವರೂಪದಲ್ಲಿ ಲಕ್ಷ್ಮೀಸಹಿತನಾಗಿ ಶ್ರೀಮನ್ನಾರಾಯಣ ದೇವರು, ಅಸೃಜ್ಯರಾಶಿದಶಾದಲ್ಲೂ, ಸ್ಥಿತಿಕಾಲದಲ್ಲೂ ಮತ್ತು ಲಿಂಗ ಭಂಗಾನಂತರ ಸ್ವಸ್ವರೂಪದಿಂದ ಇರೋ ಕಾಲದಲ್ಲೂ (ನಿರಂತರ). ಅಂದರೇ, ಸದಾ ಅವಿಯೋಗನಾಗಿ, ರಮಾ ಮಧುಸೂದನರು ಮಾತ್ರವೇ ಇವರು ಗಳ ಸ್ವರೂಪದಲ್ಲಿ ಆವಾಸವಾಗಿ ಇರತಾರೆ. ಈ ಪ್ರಕಾರ ಇದ್ದು, ತ್ರಿವಿಧ ಜೀವರ ಸ್ವರೂಪಗುಣಗಳ ಅನುಸರಿಸಿ, ಕರ್ಮಗಳ ಅವರವರ ಸ್ವರೂಪ ಗುಣಗಳ ಅನುಸರಿಸಿ, ಕರ್ಮಗಳ ಅವರವರ ಸ್ವರೂಪ ಸ್ವಭಾವದಂತೆ (ತ್ರಿವಿಧ ಗುಣ ಕರ್ಮಸ್ವಭಾವವ) **"ಆತ್ಮಾಂತರಾತ್ಮೇತಿ ಹರಿಃ ಏಕ ಏವ ದ್ವಿಧಾಸ್ಥಿತಃ"** —ಎಂಬ ವಚನಾನುಸಾರ, ಆತ್ಮಶಬ್ದವಾಚ್ಯಹರಿ ಸ್ಥೂಲ ದೇಹಸ್ಥನಾಗಿಯೂ, ಅಂತರಾತ್ಮನಾದ ಬಿಂಬರೂಪಿ ಪರಮಾತ್ಮನು, ವಾಯು ದೇವರೇ ಮೊದಲಾದ (ಪವನಮುಖ) ತತ್ವ ದೇವತೆಗಳ ನಾಮದಿಂದ ಸಾಕ್ಷಾ ತ್ತಾಗಿ ತಾನೇ, ಪ್ರತಿದಿವಸ, ಪ್ರತಿಕ್ಷಣದಲ್ಲಿಯೂ ಕಾರಣಾತ್ಮಕನು ಇರತಕ್ಕ ಸ್ವರೂಪಜ್ಞಾನವನ್ನು ಸ್ಥೂಲದೇಹದ್ವಾರಾ, ಸ್ಥೂಲಕರ್ಮದ್ವಾರಾ, ಆತ್ಮ ರೂಪದಿಂದ ಅಭಿವ್ಯಕ್ತಿಮಾಡುತ್ತಾ. ಆಯಾ ತ್ರಿವಿಧಪ್ರಾಣಿಗಳಿದ್ದು (ಅವ ರೊಳಿದ್ದು) ಬಿಂಬಕ್ರಿಯಾದ್ವಾರಾ ಉಣಿಸತಾನೆ (ಉಣಿಪ).

ಬ್ರಹ್ಮದೇವರ ನೂರು ವರ್ಷ ಒಂದು ಹಗಲು, ಹಾಗ ನೂರುವರ್ಷ ಒಂದು ರಾತ್ರಿ. ಈ ಪ್ರಕಾರ ಒಂದು ದಿನವೆಂದು ನಾರಾಯಣನಿಗೆ ಜೀವರ ಸೃಷ್ಟ್ಯಾದಿಗಳ ವಿವಕ್ಷಯಾ ಸಂಕೇತವು. ಇಂಥಾ ತನ್ನ ಪ್ರತಿದಿವಸಗಳಲ್ಲಿ ರಾಶಿಗತಜೀವರ ಸ್ಥೂಲಸೃಷ್ಟಿಗೆ ತಂದು. ಸಾಧನಪೂರ್ತಿ ಮಾಡಿಸಿ, ಅವರ ವರ ಸ್ವರೂಪಸುಖ ಅವರವರಿಗೆ ಬಿಂಬರೂಪ ಉಣಿಸತಾನೆ ಎಂತ ತಾತ್ಪರ್ಯ ॥೧೮॥

## (೨) "ಭಾವಪ್ರಕಾಶಿಕೆ"— ವ್ಯಾಖ್ಯಾನ :—

ಶ್ರೀಪರಮಾತ್ಮನು ಸಾತ್ವಿಕರಿಗೆ ವಜ್ರದಂತೆ ಶುಭ್ರವಾದ ಕಾಂತಿಯಿಂದಲೂ, ರಾಜಸರಿಗೆ ಬಿಳುಪು-ಕಪ್ಪು ಮಿಶ್ರವಾದ ನೀಲಮಣಿಯಂತೆಯೂ, ತಾಮಸಜನರಿಗೆ ಹವಳದಂತೆಯೂ, ಇಂತಹ ಉತ್ತಮ ಕಾಂತಿಯಿಂದ ಶೋಭಿಸುತ್ತಾ, ನಿತ್ಯದಲ್ಲಿಯೂ ಸಾತ್ವಿಕರಾದ ದೇವತೆಗಳಲ್ಲಿಯೂ, ರಾಜಸರಾದ ಮಾನವರಲ್ಲಿಯೂ. ತಾಮಸರಾದ ದಾನವರಲ್ಲಿಯೂ ಇದ್ದು, ಸಾತ್ವಿಕರಿಂದ ಸತ್ಕರ್ಮಗಳನ್ನೂ, ರಾಜಸರಿಂದ ಮಿಶ್ರಕರ್ಮಗಳನ್ನೂ ತಾಮಸರಿಂದ ಅಸತ್ಕರ್ಮಗಳನ್ನೂ, ಅವರವರ ಸ್ವಭಾವಾನುಸಾರವಾಗಿ ಮಾಡಿಸಿ, ವಾಯುದೇವರೇ ಮೊದಲಾದ ತತ್ವಾಭಿಮಾನಿ ದೇವತೆಗಳ ಒಳಗೆ ತದ್ರೂಪಿಯಾಗಿದ್ದು, ಪ್ರತಿದಿವಸದಲ್ಲಿಯೂ ಅವರವರ ಸ್ವಾಭಾವಿಕ ಕರ್ಮಗಳನ್ನು ವ್ಯಕ್ತಪಡಿಸುತ್ತಾ, ಸುಖವನ್ನು ಸಾತ್ವಿಕರಿಗೂ, ರಾಜಸರಿಗೆ ಸುಖ ದುಃಖ ಮಿಶ್ರವಾದುದನ್ನೂ ಮತ್ತು ತಾಮಸರಿಗೆ ದುಃಖವನ್ನೂ ಉಣಿಸುವನು (ಅನುಭವಕ್ಕೆ ತಂದುಕೊಡುವನು)

**ಸೂಚನೆ :—**

ಇದರಲ್ಲಿ ಪವಿ. ಹರಿನ್ಮಣಿ, ವಿದ್ರುಮ, ಎಂದರೆ, ವಜ್ರ, ನೀಲ ಮತ್ತು ಹವಳಗಳೆಂಬ ಮೂರು ಬಣ್ಣಗಳನ್ನು ಸಾತ್ವಿಕ, ರಾಜಸ ಮತ್ತು ತಾಮಸರಿಗೆ ಹೋಲಿಕೆಯಾಗಿ ತೆಗೆದುಕೊಂಡರೆ, ಭಾಗವತಾದಿ ವಾಕ್ಯಗಳಿಗೆ ವಿರೋಧವಾಗುವುದು. ಏಕೆಂದರೆ — **ಭಾಗವತ ದಶಮಸ್ಕಂಧದಲ್ಲಿ**—

**"ಸ್ವಂತ್ರಿ ಲೋಕಸ್ಥಿತಯೇ ಸ್ವಮಾಯಯಾಬಿಭರ್ವಿ ಶುಕ್ಲಂ ಖಲ್ವ ವರ್ಣಮಾತ್ಮನಃ ॥ ಸರ್ಗಾಯ ರಕ್ತಂ ರಜಸೋಪಬೃಂಹಿತಂ ಕೃಷ್ಣಂತು ವರ್ಣಂ ತಮುಸಾಜನಾಜತ್ಯಯೇ"** —ಎಂಬ ಶ್ಲೋಕದಲ್ಲಿ ಜಗತ್ತನ್ನು ರಕ್ಷಣೆ ಮಾಡುವುದಕ್ಕೋಸ್ಕರ ರಜೋಗುಣದಿಂದ ಉಪಬೃಂಹಿತವಾದ ರಕ್ತವರ್ಣವನ್ನು ಸ್ವೀಕರಿಸುವ. ಜನರನ್ನು ನಾಶಮಾಡುವ ಕಾಲದಲ್ಲಿ ತಮೋಗುಣಸೂಚಿತವಾದ ಕೃಷ್ಣವರ್ಣವನ್ನು ಸ್ವೀಕರಿಸುವ. — ಎಂದು ಹೇಳಿರುವರು. ಇದರಿಂದ ಸತ್ವಗುಣರೂಪವು ಶುಕ್ಲವರ್ಣವೆಂತಲೂ. ತಮೋಗುಣರೂಪವು ಕೃಷ್ಣವರ್ಣವೆಂದೂ ತಿಳಿಯಬೇಕು. ಇಲ್ಲಿ ದಾಸರವಾಕ್ಯದಿಂದ ಸಾತ್ವಿಕರೂಪವು ವಜ್ರಸದೃಶವೆಂತಲೂ, ರಾಜಸರೂಪವು ನೀಲವರ್ಣವೆಂತಲೂ, ತಾಮಸರೂಪವು ಹವಳವರ್ಣವೆಂತಲೂ ಕಾಣುವುದು, ಇಲ್ಲಿ ಹೇಳಿರುವ ನೀಲವರ್ಣವೆಂಬುದು ಕಪ್ಪುವರ್ಣಕ್ಕೂ ಬರುವುದು. ಹೀಗೆಂದರೆ, ಶ್ರೀಕೃಷ್ಣನನ್ನು ಕೆಲವುಕಡೆ ಕೃಷ್ಣವರ್ಣನೆಂತಲೂ, ಕೆಲವುಕಡೆ ನೀಲವರ್ಣನೆಂತಲೂ ವರ್ಣಿಸುವರು. ಕೆಲವುಕಡೆಯಲ್ಲಿ ಕೂದಲನ್ನು ವರ್ಣಿಸುವಾಗ, "ನೀಲಕುಂತಲಾ" -ಎಂದು ಹೇಳಿರುವುದರಿಂದ "ನೀಲ" ವೆಂದು "ಕೃಷ್ಣ" ವರ್ಣಕ್ಕೆ ಹೆಸರುಂಟೆಂದು ಸ್ಪಷ್ಟವಾಗುವುದು, ಅಂತು, ದಾಸರವಾಕ್ಯದಿಂದ ಬಿಳುಪು, ಕಪ್ಪು, ಕೆಂಪುವರ್ಣಗಳನ್ನು ಕ್ರಮವಾಗಿ ಹೇಳಿ, ದೇವ, ಮಾನವ, ದಾನವ–ಎಂದು ಹೇಳಿರುವುದರಿಂದ ಅರ್ಥದಲ್ಲಿ ಭಾಗವತಾದಿಗಳಿಗೆ ವಿರೋಧ ಕಾಣುವುದು. ಆದ್ದರಿಂದ ಇಲ್ಲಿ "ದೇವಮಾನವ ದಾನವ" –ಎಂಬ ಪದ್ಯದಲ್ಲಿ "ದೇವದಾನವಮಾನವ" -ಎಂದು ಪಾಠವಿರಬಹುದೆಂದು ಕಾಣುತ್ತದೆ. ಹಾಗಿದ್ದಲ್ಲಿ ಸಾತ್ವಿಕ, ತಾಮಸ, ರಾಜಸರೆಂಬ ಕ್ರಮವನ್ನು ಇಟ್ಟುಕೊಂಡರೆ ಸರಿಹೋಗುವುದು. ಈ ಪ್ರಕಾರ ಉತ್ತಮಾಧಮ ಮಧ್ಯಮರೆಂದು ನಿರ್ಣಯಾದಿಗಳಲ್ಲಿ ತೆಗೆದುಕೊಂಡಿರುವರು ॥೧೮॥

**(೩) "ಭಾವದರ್ಪಣಟೀಕಾ"—ವ್ಯಾಖ್ಯಾನ :—**

ಪವಿ = ವಜ್ರ. ಹರಿನ್ಮಣಿ = ಇಂದ್ರನೀಲಮಣಿ. ವಿದ್ರುಮ = ಹವಳ. ಸಚ್ಛವಿ = ಸಮೀಚೀನ ಕಾಂತಿಯೋಪಾದಿಯಲ್ಲಿ ಪ್ರಕಾಶಿಸುತ್ತ = ತ್ರಿವಿಧ

ರಲ್ಲಿಯೂ ಇದ್ದು ತ್ರಿವಿಧಗುಣಗಳು ವ್ಯಕ್ತಮಾಡುತ್ತ. ಉಣಿಪ = ಉಣಿಸುವ ನೆಂದರ್ಥ. ॥೧೮॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ—

### (ಸಂಸ್ಕೃತಮೂಲ) :—

ಪವಿಹರಿನ್ಮಣೀತಿ । ಸಚ್ಛವಿಃ ಸತ್ಕಾಂತಿಃ । ಸತ್ವಾದಿರೂಪಾಣಿ । ತದ್ರೂಪದೇಹಗಸ್ಯಾಪಿ । ತದ್ರೂಪ್ಯಂ । ಸ್ವಭಾವೋ ಯೋಗ್ಯತಾ ॥ **"ಅಜಾಮೇಕಾಂ ಲೋಹಿತ ಶುಕ್ಲ ಕೃಷ್ಣಾಮ್"—ಇತಿಶ್ರುತೇಃ ॥ ॥೧೮॥**

**ಕನ್ನಡಾರ್ಥ :—**

ಸಚ್ಛವಿಃ ಎಂದರೆ ಸ್ವಚ್ಛವಾದ (ದೋಷರಹಿತವಾದ) ಕಾಂತಿ. ಆಯಾಯಾ ದೇಹಗತನಾಗಿ ಶ್ರೀಪರಮಾತ್ಮನು ಇದ್ದು, ಸತ್ವಾದಿಗುಣ ತ್ರಯಗಳನ್ನೂ ಮತ್ತು ತತ್ಸಂಬಧವಾದ ಪ್ರಾಕೃತರೂಪಗಳನ್ನು ನಿಯಮಿಸು ತ್ತಾನೆ. ಜೀವರ ಸ್ವರೂಪಭೂತವಾದ ಯೋಗ್ಯತೆಯನ್ನು "ಸ್ವಭಾವ" ವೆಂದು ಕರೆಯುವರು.

**"ಆಜಾಮೇಕಾಂ ಲೋಹಿತ ಕೃಷ್ಣ ಶುಕ್ಲಾಮ್ —ಎಂಬಶ್ರುತಿ ವಚನಾನುಸಾರ,** ಭಗವಂತನು ಅನಾದಿಯಾದ ಸಾತ್ವಿಕ, ರಾಜಸ ಮತ್ತು ತಾಮಸರೆಂಬ ತ್ರೈವಿಧ್ಯಪ್ರಕೃತಿಯನ್ನೂ ಮತ್ತು ಅವುಗಳ ಸ್ವಭಾವ ವನ್ನೂ ನಿಯಮಿಸುತ್ತಾನೆ ಎಂದು ಆ ಶ್ರುತ್ಯರ್ಥ. ಇದರಿಂದ "ತ್ರಿವಿಧಗುಣ ಕರ್ಮಸ್ವಭಾವವ" ಎಂದು ಹೇಳಿರುವುದು ಅತ್ಯಂತ ಸಂಗತವು ॥೧೮॥

## (೫) "ಗುರುಹೃದಯ ಪ್ರಕಾಶಿಕೆ"—ವ್ಯಾಖ್ಯಾನ :—

ರಮಾಪತಿಯು ವಜ್ರದಂತೆ ಶುಭ್ರರೂಪದಿಂದ ದೇವತೆಗಳಲ್ಲೂ, ನೀಲದಂತೆ ಕಪ್ಪುವರ್ಣದಿಂದ ದಾನವರಲ್ಲೂ, ಹವಳದಂತೆ ಕೆಂಪುವರ್ಣದಿಂದ

ಮಾನವರಲ್ಲೂ ನಿರಂತರ ಇದ್ದು ಶೋಭಿಸುತ್ತ, ತ್ರಿಗುಣಸ್ವಭಾವಕ್ರಿಯೆಗಳನ್ನು ವ್ಯಕ್ತಿರೂಪ ಪ್ರೇರಣೆಮಾಡಿ, ಪ್ರಾಣಾದಿ ತತ್ವೇಶಾಂತರ್ಗತನು ಆ ತ್ರಿವಿಧ ರಲ್ಲಿ ಬಾಹ್ಯಸುಖದುಃಖ ವ್ಯಕ್ತಿಮಾಡಿಕೊಟ್ಟು, ತಾ ಉಣಿಪ ಎಂದರೆ, ಮನ ಸ್ಸಿಗೆ ಕೊಡುವನು. ಇದರಿಂದಲೂ ಪೂರ್ವೋಕ್ತವಿವರಣೆ ॥೧೮॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಚೇತನವರ್ಗದಲ್ಲಿ ಸಾತ್ವಿಕರು, ರಾಜಸರು ಮತ್ತು ತಾಮಸರು ಎಂದು ಮೂರುಪ್ರಕಾರ. ಸತ್ವಗುಣವಿಶಿಷ್ಟರಾಗಿ, ಹರಿಸರ್ವೋತ್ತಮತ್ವ, ಜಗತ್ತಿನ ಸತ್ಯತ್ವ, ಪಂಚಭೇದ ತಾರತಮ್ಯಾದಿ ಜ್ಞಾನವುಳ್ಳವರಾಗಿ ವಿಷ್ಣು ಮತ್ತು ವೈಷ್ಣವರಲ್ಲಿ ಭಕ್ತಿಯುಳ್ಳವರು ಮುಕ್ತಿಯೋಗ್ಯರು. ಇಂತಹ ಸಾತ್ವಿಕರು ಬ್ರಹ್ಮ ಪ್ರಾರಂಭಮಾಡಿಕೊಂಡು ತೃಣಾಂತಜೀವರ್ಗಕ್ಕೆ ಸೇರಿದವರು. ದೇವತಾ ಗಣ ಮುಖ್ಯವಾಗಿ ಈ ವರ್ಗಕ್ಕೆ ಸೇರಿದವರು. ಉಳಿದವರು ಮಧ್ಯಮ ಮತ್ತು ಅಧಮಾಧಿಕಾರಿಗಳಾದ ಸಾತ್ವಿಕ ಜೀವವರ್ಗ. ಇಂತಹ ಸಾತ್ವಿಕ ಚೇತನರಲ್ಲಿ ಬಿಂಬರೂಪೀ ಪರಮಾತ್ಮನು ಅತ್ಯಂತಶುಭ್ರವಾದ ವಜ್ರದ ಕಾಂತಿ ಯಂತೆ ವಿರಾಜಮಾನನಾಗಿದ್ದಾನೆ. ಶುಭ್ರವರ್ಣ(ಬಿಳಿಬಣ್ಣ)ವು ಸತ್ವಗುಣಕ್ಕೆ ಸಂಕೇತವು. ಸುಖದುಃಖ ಮಿಶ್ರಿತವಾದ ನಿತ್ಯಸಂಸಾರಿಗಳೆಲ್ಲರೂ ರಜೋಗುಣ ವಿಶಿಷ್ಟರಾದವರು. ಪುರಂಜನ ಪ್ರಾರಂಭಮಾಡಿ ತೃಣಾಂತಜೀವರು ರಾಜಸರು. ಇಂತಹ ಚೇತನರಲ್ಲಿ ಶ್ರೀಪರಮಾತ್ಮನು ಹವಳದಂತೆ ರಕ್ತವರ್ಣ ವಿಶಿಷ್ಟನಾಗಿ ವ್ಯಾಪಾರಮಾಡುತ್ತಾನೆ.

ಇನ್ನು ಮೂರನೆಯವರ್ಗ- ತಾಮಸರು. ಕಲಿ ಮೊದಲುಮಾಡಿಕೊಂಡು ತೃಣಾಂತಜೀವರು ಈ ವರ್ಗಕ್ಕೆ ಸೇರಿದ ತಮೋಯೋಗ್ಯರು. ವಿಷ್ಣು ಮತ್ತು ವಿಷ್ಣುಭಕ್ತರಲ್ಲಿ ದ್ವೇಷವುಳ್ಳವರಾಗಿ, ಜಗಜನ್ಮಾದಿಕಾರಣನಾದ ಶ್ರೀಹರಿ ಯನ್ನು ಸರ್ವೋತ್ತಮನೆಂದು ಆರಾಧಿಸದೆ, ಜಗತ್ತು ಮಿಥ್ಯೆ, ಜೀವರಲ್ಲಿ ತಾರ ತಮ್ಯಾದಿಗಳು ಏನೂ ಇಲ್ಲವೇ ಇಲ್ಲ, ಜೀವೇಶ್ವರರಿಗೆ ಅಭೇದವನ್ನು ಹೇಳುವ ಮಿಥ್ಯಾವಾದಿಗಳು ತಮೋಯೋಗ್ಯರು. ಇಂತಹ ತಾಮಸಜೀವರಲ್ಲಿ ಶ್ರೀಪರ ಮಾತ್ಮನು ನೀಲಮಣಿಯಂತೆ (ಹರಿನ್ಮಣಿ) ಕಪ್ಪುವರ್ಣವಿಶಿಷ್ಟನಾಗಿ ವಿರಾಜ

ಮಾನವಾಗಿ ಆಯಾ ಜೀವರ ಗುಣಕರ್ಮ ಮತ್ತು ಸ್ವಭಾವಗಳನ್ನು ಅಭಿವ್ಯಕ್ತಿಗೊಳಿಸುವನು. ಈ ಪದ್ಯದಲ್ಲಿ ಮೂರುವಿಧವಾದ ರತ್ನಗಳನ್ನು ದಾಸರಾಯರು ದೃಷ್ಟಾಂತವಾಗಿ ಕೊಟ್ಟಿರುವರು. (೧) ವಜ್ರ (೨) ಹವಳ (೩) ನೀಲಮಣಿ ಅದರಂತೆ ತ್ರಿವಿಧಜೀವರು. (೧) ಸಾತ್ವಿಕರು (೨) ರಾಜಸರು ಮತ್ತು (೩) ತಾಮಸರು. ಮೇಲಿನ ಹರಳುಗಳು ಮೂರು ಪ್ರಕಾರವಾದ ವರ್ಣವಿಶಿಷ್ಟವಾದ ಕಾಂತಿಯುಕ್ತವಾದುವು. (೧) ವಜ್ರವು ಶುಭ್ರವಾದ (ಶುಕ್ಲವರ್ಣ) ವರ್ಣಯುಕ್ತವಾದದ್ದು ಇದು ಸಾತ್ವಿಕರ ವರ್ಣಸಂಕೇತವು. (೨) ಹವಳವು ಕೆಂಪುವರ್ಣದ ಕಾಂತಿಯುಳ್ಳದ್ದು, ಅಂದರೆ ಮಿಶ್ರವರ್ಣಯುಕ್ತವಾದದ್ದು. ಇದು ಸುಖದುಃಖಮಿಶ್ರವಾದ ರಾಜಸರ (ಮಿಶ್ರಜೀವರ) ವರ್ಣಲಕ್ಷಣವು. (೩) ನೀಲಮಣಿಯು ಕಪ್ಪುಬಣ್ಣದಿಂದ ಯುಕ್ತವಾದದ್ದು. ಈ ವರ್ಣವಿಶೇಷವು ತಮೋಯೋಗ್ಯರ ಸ್ವರೂಪಲಕ್ಷಣವು, ಹೀಗೆ ಸರ್ವಾಂತರ್ಯಾಮಿಯಾದ ಪರಮಾತ್ಮನು ದೇವ (ಸಾತ್ವಿಕರು), ಮಾನವ (ಮಧ್ಯಮಜೀವರು–ರಾಜಸರು) ಮತ್ತು ದಾನವ (ತಾಮಸರು)ರಲ್ಲಿದ್ದು, ಆಯಾಯಾ ವರ್ಣವಿಶಿಷ್ಟರೂಪದಿಂದ ಇದ್ದವನಾಗಿ, ಆಯಾಯಾ ಜೀವರ ಗುಣ, ಕರ್ಮ ಮತ್ತು ಸ್ವರೂಪಯೋಗ್ಯತಾರೂಪವಾದ ಸ್ವಭಾವಗಳನ್ನು ಅಭಿವ್ಯಕ್ತಿಗೊಳಿಸುತ್ತಾ, ಅವರಲ್ಲಿ ನಿತ್ಯಾವಿಯೋಗಿ (ಅಸೃಜ್ಯ, ಸೃಜ್ಯ ಮತ್ತು ಮುಕ್ತಾವಸ್ಥೆಗಳಲ್ಲಿ) ಬಿಂಬರೂಪದಿಂದ ಪರಿಶೋಭಿಸುತ್ತಾ, ವ್ಯಾಪಾರಗಳನ್ನು ಮಾಡುತ್ತಾ, ತ್ರಿವಿಧಜೀವರಿಗೂ ನಿಯಾಮಕನಾಗಿರುವನು. ಶ್ರೀ ಪರಮಾತ್ಮನ ಪ್ರಥಮಾಂಗಭೂತರಾದ ಶ್ರೀ ವಾಯುದೇವರು ತ್ರಿವಿಧಜೀವರಲ್ಲಿಯೂ ಇದ್ದು, ಬಿಂಬರೂಪೀ ಶ್ರೀ ಅಂತರಾತ್ಮನ ಪ್ರೇರಣಾನುಸಾರ, ತತ್ವಾಭಿಮಾನಿದೇವತೆಗಳು ಮತ್ತು ದೈತ್ಯರ ದ್ವಾರಾ ಸುಕರ್ಮ ಮತ್ತು ದುಷ್ಕರ್ಮಗಳನ್ನು ಮಾಡಿಸುತ್ತಿರುವರು. ಶ್ರೀಹರಿಯಪ್ರೇರಣೆ ವಾಯುದೇವರಿಗೆ. ತತ್ವಾಭಿಮಾನಿಗಳ ದ್ವಾರಾ ಶ್ರೀ ವಾಯುದೇವರ ಪ್ರೇರಣೆ ತ್ರಿವಿಧ ಜೀವರಿಗೆ. ಏತಾದೃಶಮಹಿಮೋಪೇತನಾದ ಶ್ರೀಪರಮಾತ್ಮನು ವಾಯ್ವಂತರ್ಗತನಾಗಿ, ತತ್ವೇಶರಿಗೆ ನಿಯಾಮಕನಾಗಿ ಜೀವರ ಗುಣಕರ್ಮ

ಸ್ವಭಾವಗಳಿಗನುಸಾರವಾಗಿ ಬಿಂಬಕ್ರಿಯಾದ್ವಾರಾ ಕ್ರಿಯಾವಿಶೇಷಗಳನ್ನು ನಡೆಯಿಸಿ, ಸತ್ಕರ್ಮಫಲರೂಪವಾದ ಸುಖವನ್ನು ಸಾತ್ವಿಕರಿಗೂ, ಮಿಶ್ರ ಕರ್ಮಫಲರೂಪವಾದ ಸುಖದುಃಖಗಳನ್ನು ನಿತ್ಯಸಂಸಾರಿಗಳಿಗೂ, ದುಷ್ಕರ್ಮಜನ್ಯವಾದ ನಿತ್ಯದುಃಖವನ್ನು ತಮೋಯೋಗ್ಯರಿಗೂ ತಂದುಕೊಡುವನು. ಇದರಿಂದ "ಉಣಿಪ" ಎಂದು ಶ್ರೀ ದಾಸರಾಯರು ಶಬ್ದಪ್ರಯೋಗ ಮಾಡಿರುತ್ತಾರೆ. ಇದು ಮೋಕ್ಷಸ್ಥಿತಿಯಲ್ಲಿ ಬಿಂಬರೂಪೀ ಶ್ರೀಹರಿಯು ಆಯಾಯಾ ಜೀವರ ನೈಜಸ್ವರೂಪಭೂತವಾದ ಗುಣಗಳನ್ನು ಅಭಿವ್ಯಕ್ತ ಮಾಡುವ ವಿಷಯವಾಯಿತು. ಈ ಸ್ಥಿತಿಕಾಲದಲ್ಲಾದರೋ ಹಾಗಲ್ಲ. ಜೀವನು ಪ್ರಕೃತಿಬದ್ಧನಾಗಿರುವುದರಿಂದ ಮೂಲಪ್ರಕೃತಿಯ ಪ್ರಾಕೃತ ತ್ರಿಗುಣಗಳಿಂದ ಬಾಧಿತನಾಗಿದ್ದಾನೆ. ಈ ಜಗತ್ತಿನಲ್ಲಿ ಸಾತ್ವಿಕರು ದುಃಖಿಗಳಾಗಿಯೂ ದಾರಿದ್ರ್ಯಾದಿ ದೆಸೆಗಳಿಂದಾಗಿ ಪರಿತಾಪಪಡುತ್ತಿರುವುದು ಅನುಭವಸಿದ್ಧವಾದ ವಿಷಯ. ಅಂತೆಯೇ ಅಯೋಗ್ಯರೂ, ದುಷ್ಟರೂ ಆದ ತಾಮಸಜನರು ಸಂಪತ್ತು. ಅಧಿಕಾರ ವೈಭವಸುಖಗಳಲ್ಲಿ ಮೆರೆಯುತ್ತಿರುವುದೂ ಪ್ರತ್ಯಕ್ಷ ಪ್ರಮಾಣವಾಗಿಯೇ ಇದೆ. ಇದೆಲ್ಲವೂ ಸ್ವರೂಪದ ಫಲರೂಪಗಳಲ್ಲ. ತ್ರಿಗುಣಗಳ ಭವಣೆಗಳಿಂದಾಗಿ, ಇಂತಹ ಏರುಪೇರುಗಳನ್ನು ಸ್ಥಿತಿಕಾಲದಲ್ಲಿಯೂ ಸಹ ಶ್ರೀ ಪರಮಾತ್ಮನು ಜೀವರ ಅನಾದಿ ಕರ್ಮಪ್ರವಾಹಾನುಸಾರವಾಗಿ, ಪ್ರಾಕೃತ ತ್ರಿಗುಣಗಳ ಕರ್ಮಸ್ವಭಾವದಂತೆ, ಜೀವರಲ್ಲಿ ತತ್ವೇಶರಿಗೆ ನಿಯಾಮಕರಾದ ಶ್ರೀ ಭಾರತೀರಮಣರದ್ವಾರಾ ಪ್ರವರ್ತನ ಮಾಡುತ್ತಾ, ಗುಣಕರ್ಮಸ್ವಭಾವಗಳನ್ನು ಅಭಿವ್ಯಕ್ತಿಗೊಳಿಸುತ್ತಿರುವನೆಂದು ತಾತ್ಪರ್ಯ ॥೦೮॥

## ಪದ್ಯ (೧೯)

ಮೂಲ :—

ಅಣುವುಹತ್ತಿನೊಳಿಪ್ಪ ಘನಪರ ।
ಮಾಣುವಿನೊಳಗಡಗಿಸುವ ಸೂಕ್ಷ್ಮವ ।
ಮುಣುಗಿಸುವ ತೇಲಿಸುವ ಸ್ಥೂಲಗಳವನ ಮಾಯವಿದು ॥
ದನುಜರಕ್ಕಸರೆಲ್ಲರಿವರೊಳು ।
ಮುನಿದು ಮಾಡುವುದೇನುಲೂಖಲ ।
ಒನಕೆಗಳು ಧಾನ್ಯಗಳ ಹಣಿವಂದದಲಿ ಸಂಹರಿಪ ॥ ॥೧೯॥

**ಅವತರಣಿಕೆ :—**

ಅಣುರೂಪದಲ್ಲಿರುವ ಅತ್ಯಂತ ಸೂಕ್ಷ್ಮ ವಸ್ತುಗಳಲ್ಲಿ ಸೂಕ್ಷ್ಮತಮನಾಗಿ, ಮಹತ್ತಿನಲ್ಲಿ ಮಹದ್ರೂಪದಿಂದ ಇದ್ದು ಅಂಚಿತ್ಯಾದ್ಭುತಶಕ್ತನಾದ ಶ್ರೀ ಪರಮಾತ್ಮನು ಒರಳಿನಲ್ಲಿ ಹಾಕಿದ ಧಾನ್ಯರಾಶಿಯನ್ನು ಒನಕೆಗಳು ಹೇಗೆ ಕುಟ್ಟಿ ಹಣಿಯುತ್ತವೆಯೋ ಅಂತೆಯೇ ತನ್ನಿಂದ ಸೃಷ್ಟವಾದ ಜಗತ್ತನ್ನು ಲಯ ಗೊಳಿಸಿ, ತನ್ನ ಉದರದಲ್ಲಿಟ್ಟುಕೊಳ್ಳುವನು. ದಾನವಾದಿ ದುಷ್ಟರು ಈತನ ಅಗಾಧಶಕ್ತಿಗೆ ಮುನಿದು ಏನುತಾನೇ ಮಾಡಬಲ್ಲರು ? —ಎಂಬ ಶ್ರೀ ಪರಮಾತ್ಮನ ಅಘಟನಾಘಟನ ಸಾಮರ್ಥ್ಯಗುಣವನ್ನು ಹೇಳುತ್ತಾರೆ. "ಅಣು" ಎಂಬ ಈ ಪದ್ಯದಿಂದ. ॥೧೯॥

**ಪ್ರತಿಪದಾರ್ಥ:—**

**ಅಣು** = ಅತ್ಯಂತ ಸಣ್ಣದಾಗಿಯೂ (ಅಂತಯೇ ಬ್ರಹ್ಮಾದಿತೃಣಾಂತಜೀವರ ಸ್ವರೂಪ ಅಣುರೂಪವಾದದ್ದು. ಇಂತಹ ಸ್ವರೂಪದಲ್ಲಿ ಸೂಕ್ಷ್ಮತರರೂಪ

ದಿಂದ ಅಂತರ್ಯಾಮಿಯಾಗಿದ್ದು) **ಮಹತ್ತಿನೊಳು** = ಅತ್ಯಂತ ದೊಡ್ಡ ವಸ್ತುಗಳಮೇಲೆ ಆವರಣಭೂತನಾಗಿಯೂ, ಅತ್ಯಂತ ಮಹತ್ಪ್ರಮಾಣದ ವಸ್ತುಗಳಲ್ಲಿ ಅವುಗಳಿಗಿಂತ ದೊಡ್ಡದಾದ ಆಕಾರವಿಶೇಷದಿಂದಲೂ **ಇಪ್ಪ** = ಇರುವನು. ಸ್ವರೂಪದೇಹದಲ್ಲಿ ಸೂಕ್ಷ್ಮರೂಪದಿಂದಲೂ, ಸ್ಥೂಲದೇಹದಲ್ಲಿ ಮಹದ್ರೂಪದಿಂದಲೂ ಇದ್ದಾನೆ. ಅಂತೆಯೇ ನವಾವರಣಸಹಿತವಾದ ಬ್ರಹ್ಮಾಂಡ ಮಹದ್ವಸ್ತು. ಅದಕ್ಕಿಂತಲೂ ದೊಡ್ಡದು ಬ್ರಹ್ಮಾಂಡದ ಹೊರಗೆ ವ್ಯಾಪ್ತನಾಗಿರುವ ರಮಾಭಿಮನ್ಯವಾದ ಅವ್ಯಾಕೃತಾಕಾಶ. ಇವೆರಡರಲ್ಲಿಯೂ ತದಾಕಾರ ಮಹದ್ರೂಪದಿಂದ ವಿರಾಜಮಾನನಾಗಿದ್ದಾನೆ. **ಘನ** = ದೊಡ್ಡ ಪ್ರಮಾಣದ ವಸ್ತುಗಳನ್ನು **ಪರಮಾಣುವಿನೊಳಗೆ** = ಅತ್ಯಂತ ಸೂಕ್ಷ್ಮ ಪ್ರಮಾಣದ ವಸ್ತುಗಳಲ್ಲಿ **ಅಡಗಿಸುವ** = ಅಡಕಮಾಡುತ್ತಾನೆ. ಬ್ರಹ್ಮಾಂಡವು ಮಹದ್ವಸ್ತುವು. ಇಂತಹ ಅನಂತಾನಂತ ಬ್ರಹ್ಮಾಂಡಗಳನ್ನು ಶ್ರೀ ಪರಮಾತ್ಮನು. ರೋಮಕೂಪಗಳಲ್ಲಿ ಅಡಗಿಸಿಟ್ಟಿದ್ದಾನೆ. ಮೂಲಪ್ರಕೃತಿ ಸೂಕ್ಷ್ಮವಸ್ತು, ಗುಣವೈಷಮ್ಯದಿಂದ ಸ್ಥೂಲಜಗತ್ತಿನ ಸೃಷ್ಟಿ. ಪುನಃ ಪ್ರಳಯಕಾಲದಲ್ಲಿ ಬೃಹದಾಕಾರವಾದ ಸ್ಥೂಲಜಗತ್ತನ್ನು ಗುಣಸಾಮ್ಯದಿಂದ ಲಯಗೊಳಿಸಿ, ಸೂಕ್ಷ್ಮರೂಪದಲ್ಲಿಯೇ ಅಡಗಿಸುವ ಅಘಟಿತಘಟನಾ ಶಕ್ತಿಯು ಆ ಪರಮಾತ್ಮನದು. ಈ ಸಾಮರ್ಥ್ಯ ಅಂಚಿತ್ಯ ಹಾಗೂ ಅದ್ಭುತ **ಸೂಕ್ಷ್ಮವ** = ಅತ್ಯಂತ ಹಗುರವಾಗಿರುವ ಸಣ್ಣ ಪದಾರ್ಥಗಳನ್ನು **ಮುಣುಗಿಸುವ** = ಉದಕದಲ್ಲಿ ಮುಳುಗುವಂತೆ ಮಾಡುವನು. **ಸ್ಥೂಲಗಳ** = ಬೃಹತ್ಪ್ರಮಾಣದ ಭಾರವಾದ ವಸ್ತುಗಳನ್ನು **ತೇಲಿಸುವ** = ತೇಲುವಂತೆ ಮಾಡುವನು. (ಗುಂಡನ್ನು ತೇಲಿಸಬಲ್ಲ; ಬೆಂಡನ್ನು ಮುಳುಗಿಸಬಲ್ಲ) **ಇದು** = ಇಂತಹ ಅಘಟನಘಟನಾಶಕ್ತಿಯು **ಆವನ** = ಅಂಚಿತ್ಯಾದ್ಭುತಶಕ್ತ ಶ್ರೀ ಪರಮಾತ್ಮನ **ಮಾಯವು** = ಇಚ್ಛಾಶಕ್ತಿಯು (ಸಂಕಲ್ಪವು). **ದನುಜ** = ದೈತ್ಯರಸಮೂಹ **ರಕ್ಕಸರೆಲ್ಲ** = ಸಮಸ್ತ ರಾಕ್ಷಸವರ್ಗ **ಸೇರಿ** = ಇವರೆಲ್ಲರೂ ಒಟ್ಟುಗೂಡಿ **ಇವನೊಳು** = ಇಂತಹ ಪರಮಾಶ್ಚರ್ಯ ವಸ್ತುವಾದ ಶ್ರೀಪರಮಾತ್ಮನಲ್ಲಿ **ಮುನಿದು** = ದ್ವೇಷಭಾವದಿಂದ (ವಿಮುಖರಾಗಿ) **ಮಾಡುವುದೇನು** = ಏನುತಾನೆಮಾಡಿಯಾರು ? **ಉಲೂಖಲ** = ಒರಳಿನಲ್ಲಿ **ಒನಕೆಗಳು** = ಒನಕೆಗಳು **ಧಾನ್ಯಗಳ** = ಭತ್ತ ಮುಂತಾದ

ಧಾನ್ಯಗಳನ್ನು **ಹಣಿವಂದದಲಿ** = ಕುಟ್ಟಿ ಬಿಸಾಡುವಂತೆ (ಮರ್ದನಕಾರ್ಯ) **ಸಂಹರಿಪ** = ನಾಶಮಾಡುವನು. ಈತನ ಸಾಮರ್ಥ್ಯದ ಮುಂದೆ ಯಾರ ಶಕ್ತಿಪ್ರದರ್ಶನವೂ ಸುತರಾಂ ನಡೆಯಲಾರದೆಂದು ತಾತ್ಪರ್ಯ. ಅತಏವ ಶ್ರೀ ಪರಮಾತ್ಮನು ಸರ್ವಶಕ್ತನಾದ್ದರಿಂದ ಸರ್ವೋತ್ತಮದೇವತಾ ಎಂದು ಭಾವ ॥೧೯॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಅಘಟಿತಘಟನಾ ಶಕ್ತಿಯುಳ್ಳ ಪರಮಾತ್ಮನಲ್ಲಿ ದ್ವೇಷ ಮಾಡತಕ್ಕವರನ್ನು ಸಂಹಾರ ಮಾಡತಾನೆ ಎಂತ ಹೇಳತಾರೆ.

ಬ್ರಹ್ಮಾದಿ ತೃಣಾಂತಜೀವರ (ತ್ರಿವಿಧ) ಸ್ವರೂಪ ಅಣುವಾದದ್ದು. (ಇದರ ವಿವರ ೯ನೆಯ ಸಂಧಿಯಲ್ಲಿ ಹೇಳಿದೆ. ಉದಾತ್ತಾನುಸಂಧಿಯ ೨ನೆಯ ಶ್ಲೋಕದಲ್ಲಿ ಇದೆ), ಈ ಪ್ರಕಾರ ಜೀವನು ಅಣುಸ್ವರೂಪನು. ತದಪೇಕ್ಷಯಾ ಅಣುತ್ವ ರಮಾದೇವಿಯರಿಗೆ ಇರುವುದರಿಂದ ಜೀವಾಂತರ್ಗತವು ರಮಾದೇವೇರಿಗೆ ಕೂಡಿತು. ಬ್ರಹ್ಮಾದಿ ಜೀವರಿಗೆ ಹಾಗೆ ಇಲ್ಲ. ಇಂಥಾ ಅಣುಸ್ವರೂಪರಾದ ರಮಾದೇವೇರಲ್ಲಿ ತದಪೇಕ್ಷೆಯಾ ಅಣುವಾಗಿ ಶ್ರೀರೂಪದಿಂದ ಬಿಂಬನಾಗಿದ್ದಾನೆ. ಅತಏವ ಜೀವಾಂತರ್ಗತತ್ವ ರಮಾನಾರಾಯಣರಿಗೆ ಮಾತ್ರವೇ ಅಂತ ೧೮ನೆಯ ಶ್ಲೋಕಕ್ಕೆ ಅನ್ವಯವು. ಬ್ರಹ್ಮಾದಿ ಜೀವರಿಗೆ ಸ್ವರೂಪದೆಶೆಯಿಂದ ಅಣುಮಹತ್ವಗಳು ಇಲ್ಲ. ಇದಕ್ಕೆ ಪ್ರಮಾಣ :— **“ಮುಕ್ತಸ್ಯ ತು ಸ್ವರೂಪೇಣಹ್ಯಣುವೃದ್ಧಿರ್ನ ಯುಜ್ಯತೇ ॥ ನೋಹಾನಿಃ ಪುನರಾವೃತ್ತಿಃ ದುಃಖಾಜ್ಞಾನ ಭಯಾದಯಃ”॥ —ಇತಿ ಪ್ರಕಾಶಸಂಹಿತಾಯಾಂ.**

ಮಹತ್ತು ಎಂದರೆ, ಸ್ವರೂಪದೇಹಕ್ಕಿಂತಲೂ ದೊಡ್ಡದಾದ ಸ್ಥೂಲ ದೇಹದಲ್ಲಿ ಬ್ರಹ್ಮಾದಿ ತತ್ವೇಶರ ಸಹಿತನಾಗಿ ಇದ್ದಾನೆ. ನವಾವರಣಸಹಿತ ವಾದ ಬ್ರಹ್ಮಾಂಡವೇನು, ಅದರ ಆಚೇಲಿ ಸ್ಥೂಲತ್ವೇನ ವ್ಯಾಪ್ತ ರಮಾ, ಇವೆರಡರಲ್ಲಿ ತದಾಕಾರ ಮಹದ್ರೂಪದಿಂದ ಇದ್ದಾನೆ. ತದಪೇಕ್ಷೆಯಾ ಮಹತ್ತು. ಸ್ವಾಖ್ಯಪ್ರದೇಶ ಪರಮಾತ್ಮನ ಅಣುವು ಅಪರಿಚ್ಛಿನ್ನವೇ. ಈ ರೀತಿಯಲ್ಲಿ ಅಣುಮಹತ್ತಗಳಲ್ಲಿ ಇರುವವನಾಗಿದ್ದಾನೆ. ದೊಡ್ಡದಾದ ಬ್ರಹ್ಮಾಂಡವು (ಘನ) ಇಂಥಾ ಘನವಾದ ಅನಂತಾನಂತ ಬ್ರಹ್ಮಾಂಡಗಳನ್ನು ಜೀವಾಂತರ್ಗತನಾಗಿ ಪರಮಾಣುರೂಪದಿಂದ ಇರತಕ್ಕ ತನ್ನ ಪರಮಾಣು ರೂಪದೊಳಗೆ ಅಡಗಿಸುವೋವವನಾಗಿದ್ದಾನೆ. ಎಂದರೆ ಅಡಗಿಸಿದ್ದಾನೆ ಎಂತ ವರ್ತಮಾನಾರ್ಥವು. ಉದಕದಲ್ಲಿ ಸೂಕ್ಷ್ಮವಾದ ಅತ್ಯಲ್ಪವಾದ ಒಂದು ಮರಳಿನಕಣ ಮುಳುಗುತ್ತದೆ. ಮರಳಿಗಿಂತಲೂ ದೊಡ್ಡದಾದ, ಅಧಿಕವಾದ ಭಾರದಿಂದಿರುವ ಕಾಷ್ಠಾದಿಗಳನ್ನು ಉದಕದಲ್ಲಿ ತೇಲುವಂತೆ ಮಾಡುವನು. ಸೂಕ್ಷ್ಮದರ್ಶಿಗಳಾದ ತನ್ನ ಭಕ್ತರು ಮಾಡಿದ ಪಾಪಗಳ ಮುಳುಗಿಸತಕ್ಕವ, ಅಭಕ್ತರಾದ ದೈತ್ಯರ ಪಾಪಗಳ ಸ್ಥೂಲವಾಗಿ ತೇಲಿಸ ತಕ್ಕವ. ಇಂತಹ ಕಾರ್ಯಗಳು ಶ್ರೀಪರಮಾತ್ಮನ ಸಾಮರ್ಥ್ಯವೇ (ಅವನ ಮಾಯವಿದು) ಅವನ ಇಚ್ಛೆಯೇ ಅಂಥಾದ್ದು. ಆದಕಡೆಯಿಂದ ರಾಕ್ಷಸರ ಸಮೂಹವೇನು, ದೈತ್ಯರಸಮೂಹವೇನು ಇನ್ನೂ ಯಾವತ್ತೂ ಮಂದಿ ಭಗವದ್ವೇಷಿಗಳು ಇವನಲ್ಲಿ ವಿಮುಖರಾಗಿ ಮಾಡುವುದಾದರೂ ಏನಿದೆ ? ಮಾಡತಕ್ಕ ಕಾರ್ಯ ಒಂದೂ ಇಲ್ಲ ಎಂತ ತಾತ್ಪರ್ಯ. ಇವರ ಕೈಲಿ ಒಂದೂ ಆಗದೆ ನಷ್ಟ ಪೌರುಷವುಳ್ಳವರಾಗತಾರೆ. ಶ್ರೀಪರಮಾತ್ಮ ಇಂಥಾ ದೈತ್ಯರ ಅಂಧತಮಸ್ಸಿನಲ್ಲಿ, ಒರಳುಗಳಲ್ಲಿ ಧಾನ್ಯಗಳನ್ನು ಒನಕೆಗಳು ಮರ್ಧನ ಮಾಡಿ, ಅಂಕುರವಾಗದಂತೆ, ಸಂಹರಿಸುವೋಪಾದಿಯಲ್ಲಿ ಸ್ವಲ್ಪ ಕಾಲವಾ ದರೂ ಪೀಡಿಸತಾ ಇರತಾನೆ (ಬಿಡದೆ ಸಂಹರಿಪ). ದೇಹಗತ ದೈತ್ಯರು ಬಾಹ್ಯದಲ್ಲಿ ವಿದ್ಯಮಾನರಾದ ದೈತ್ಯರು ಈ ಪ್ರಕಾರ ಪೀಡಿಸತಾ ಇರತಾರೆ. ಸಾಧಾರಣ ನರಕಗಳಲ್ಲಿ ಒರಳು ಬ್ರಹ್ಮದೇವರಾಗಿಯೂ, ಒನಕೆಗಳು ತದನ್ಯ ದೇವತೆಗಳಾಗಿಯೂ, ಕುಟ್ಟೋವ, ಬಾಧಿಸೋವ ಶ್ರೀಪರಮಾತ್ಮನೆಂತ ತಾತ್ಪರ್ಯ.

ಅಣುಮಹತ್ತ್ವಗಳು ಎಂಬುದು ಜೀವಕೋಟಿಪ್ರವಿಷ್ಟರಲ್ಲಿ ಇಲ್ಲ. ಈಶಕೋಟಿಮಾತ್ರವೇ, ಅಂದರೆ ರಮಾನಾರಾಯಣರಿಗೆ ಮಾತ್ರವೇ ಎಂತ ತಾತ್ಪರ್ಯ.

**"ಅಣೋರಣೀಯಾನ್ ಮಹತೋ ಮಹೀಯಾನ್"** -ಎಂಬ **ಶ್ರುತ್ಯರ್ಥ** ದಿಂದ ವ್ಯಕ್ತವಾಗತದೆ.

**ವಿಶೇಷಾರ್ಥ :—**

**ತದುಕ್ತಂ ದಶಮತಾತ್ಪರ್ಯೇ:- "ಇದಮೇಕಮೇಕೋ ಅಸ್ಮಿ ನಿಷ್ಪಾಳಭಿ ದ್ವಾ ಕಿಮು ತ್ರಯಃ ಕರಂತಿ । ಖಲೇನ ಪರ್ಷಾನ್ ಪ್ರತಿಹನ್ಮಿ ಭೂರಿ ಕಿಂ ಮಾ ನಿಂದಂತಿ ತತ್ರವೋಽನಿಂದ್ರಾಃ ॥" (ಋಗ್ವೇದ ೮-೧-೫-೭)- ಇತಿ ಶ್ರುತಿಃ ॥**

ಈ ನುಡಿಯ ಉತ್ತರಾರ್ಧದ ಅಭಿಪ್ರಾಯವನ್ನು ಶ್ರೀ ಸರ್ವಜ್ಞರು **ಭಾಗವತ ತಾತ್ಪರ್ಯ**ದಲ್ಲಿ ಉದಾಹರಣ ಮಾಡಿದ್ದಾರೆ :—

**"ಇದಂ ಜಗತ್ಸರ್ವಮಥೇದೃಶಾನಿ ಭೂರೀಣಿ ವಾ ಮಾಮಭಿ ಯಾಂತಿ ಸಂಖ್ಯೇ॥ ಧಾನ್ಯಾನಿ ಯದ್ವತ್ಖಲಗಾನಿ ಮರ್ತ್ಯಃ ಸಂಚೂರ್ಣಯಿಷ್ಯಾಮ್ಯಹಮೇಕ ಏವ॥" -ಇತಿ ಬ್ರಹ್ಮಾಂಡೇ ॥**

**(೨) "ಭಾವಪ್ರಕಾಶಿಕೆ" -ವ್ಯಾಖ್ಯಾನ :—**

ಅಘಟನಘಟನಾಶಕ್ತಿಯು ಪರಮಾತ್ಮನದೆಂತಲೂ, ಜೀವರಿಗೂ ಪರಮಾತ್ಮನಿಗೂ ಯಾವಾಗಲೂ ಭೇದವಿರುವುದೆಂಬುದನ್ನು ಈ ಪದ್ಯದಲ್ಲಿ ದಾಸರಾಯರು ಹೇಳುತ್ತಾ, ಜೀವಪರಮಾತ್ಮರ ಭೇದಸೂಚಕವಾದ ಶ್ರುತ್ಯರ್ಥವನ್ನು ಹೇಳುತ್ತಾರೆ.

ಪರಮಾತ್ಮನು ಅಘಟನಘಟನಾಶಕ್ತಿಯುಳ್ಳವನು. ಹೇಗೆಂದರೆ, **"ಅಣೋರಣೀಯಾನ್ಮಹತೋ ಮಹೀಯಾನ್"** —ಎಂಬ **ಶ್ರುತಿ**ಯಲ್ಲಿ ಹೇಳಿದಂತೆ, ಅತಿ ಸೂಕ್ಷ್ಮ ವಸ್ತುವಿನಲ್ಲಿ ಅದಕ್ಕಿಂತ ಸೂಕ್ಷ್ಮವಾಗಿರುವನು. ಅತಿದೊಡ್ಡ ಪದಾರ್ಥದಲ್ಲಿ ಅದಕ್ಕಿಂತಲೂ ದೊಡ್ಡವನಾಗಿ ಅದನ್ನು ಆವರಿಸಿಕೊಂಡಿರುವನು. **ಭಾಗವತ ತೃತೀಯ ಸ್ಕಂಧದಲ್ಲಿ**— **"ಚರಮಸ್ಸು ವಿಶೇಷಾಣಾಮನೇಕಾಸ್ಸಂಯುತಸ್ಸುಯಃ । ಪರಮಾಣುಃ ಸವಿಜ್ಞೇಯೋ ನೃಣಾಮೈಕ್ಯ ಭ್ರಮೋಯತಃ ॥ ಸತ ಏವ ಪದಾರ್ಥಸ್ಯ ಸ್ವರೂಪಾವಸ್ಥಿತಸ್ಯಯುತ್ ॥ ಕೈವಲ್ಯಂ ಪರಮಮಹಾನವಿಶೇಷೋ ನಿರಂತರಃ ॥"** —ಎಂದು ಹೇಳಿರುವರು. ಇದರ ತಾತ್ಪರ್ಯವೇನೆಂದರೆ, ಒಂದು ವಸ್ತುವನ್ನು ಅಂದರೆ, ಒಂದು ಕೂದಲನ್ನು ಸಾಧ್ಯವಾದಷ್ಟುಮಟ್ಟಿಗೆ ಸೀಳಿ, ಅದನ್ನು ಆದಷ್ಟುಮಟ್ಟಿಗೆ ತುಂಡುಮಾಡಿ, ಅದಕ್ಕಿಂತಲೂ ಸಣ್ಣದುಮಾಡಲು ಬಾರದಷ್ಟು ತುಣುಕುಮಾಡಿದರೆ, ಅದರ ಒಂದು ತುಣುಕೇ ಚರಮವಸ್ತು. ಅದೇ ಪರಮಾಣು ಎಂದೆನಿಸಿಕೊಳ್ಳುವುದು. ಅಂತಹ ಪರಮಾಣು ವಸ್ತುವಿನಲ್ಲಿ ಅದಕ್ಕಿಂತಲೂ ಅಣುವಾಗಿ ಪರಮಾತ್ಮನಿರುವನು. ಅಷ್ಟು ಸೂಕ್ಷ್ಮರೂಪಿಯಾದರೂ ಶ್ರೀಪರಮಾತ್ಮನು ಶಂಖಚಕ್ರಗದಾಪದ್ಮಗಳಿಂದ ಕೂಡಿದ ಚತುರ್ಭುಜಗಳಿಂದ ಯುಕ್ತನಾಗಿಯೂ, ಪೀತಾಂಬರಧಾರಿಯಾಗಿಯೂ, ಕಿರೀಟಕುಂಡಲಗಳಿಂದ ಭೂಷಿತನಾಗಿಯೂ, ಶ್ರೀ ಲಕ್ಷ್ಮೀದೇವಿಯ ವಾಸಸ್ಥಾನವಾದ ಶ್ರೀವತ್ಸಲಾಂಛನದಿಂದಲೂ, ಕೌಸ್ತುಭಾಭರಣ, ವನಮಾಲಿಕೆಯಿಂದಲೂ ಶೋಭಿಸುತ್ತಿರುವನು. ಲಕ್ಷ್ಮೀದೇವಿಯು ಆ ಪರಮಾತ್ಮನ ವಕ್ಷಸ್ಥಳದಲ್ಲಿ ಶೋಭಿಸುತ್ತಿರುವಳು. ಹಾಗೆ ಲಕ್ಷ್ಮೀದೇವಿಯು ಪರಮಾಣುರೂಪಿಯಾದ ಪರಮಾತ್ಮನ ವಕ್ಷಸ್ಥಳದಲ್ಲಿ ಅತ್ಯಂತ ಸೂಕ್ಷ್ಮರೂಪದಿಂದ ಇದ್ದಮೇಲೆ ಪರಮಾತ್ಮನಿಗಿಂತಲೂ ಅಣುರೂಪವು ಲಕ್ಷ್ಮೀದೇವಿಗೆ ಹೇಳಬೇಕೇ ಹೊರತು ಪರಮಾತ್ಮನಿಗೆ ಹೇಗೆ ಬಂತೆಂದರೆ, ಪರಮಾತ್ಮನು ತನ್ನ ಇಚ್ಛೆಯಿಂದಲೇ ಲಕ್ಷ್ಮೀದೇವಿಯರಿಗೆ ಇಂತಹ ಸೂಕ್ಷ್ಮರೂಪವನ್ನು ಕೊಟ್ಟು, ತನ್ನ ವಕ್ಷದಲ್ಲಿಟ್ಟುಕೊಂಡಿರುವುದರಿಂದ ಅದು ಆ ಪರಮಾತ್ಮನ ಸಾಮರ್ಥ್ಯವಾದುದರಿಂದ ಅಸ್ವತಂತ್ರಳಾದ ಲಕ್ಷ್ಮೀದೇವಿಯನ್ನು ಅಣು

ರೂಪಗಳೆಂದು ಹೇಳಲಾಗುವುದಿಲ್ಲೆಂದು ತಿಳಿಯಬೇಕು. ಇದರಂತೆ ದೊಡ್ಡದಾದ ಎಲ್ಲ ವಸ್ತುಗಳನ್ನೊಳಗೊಂಡು, ಇದಕ್ಕಿಂತಲೂ ದೊಡ್ಡವಸ್ತು ಬೇರೆ ಇಲ್ಲವೆಂದು ಪ್ರಸಿದ್ಧಿಯಾದ ವಸ್ತುವನ್ನು ತನ್ನಲ್ಲಡಗಿಸಿಕೊಂಡು, ಎಲ್ಲವನ್ನೂ ತನ್ನೊಳಗಿಟ್ಟುಕೊಂಡು, ಕೇವಲ ತಾನೊಬ್ಬನೇ ಕಾಣುವುದರಿಂದ "ಕೈವಲ್ಯ" ಪರಮಾತ್ಮನಿಗೆ ಹೆಸರು. ಅವನಿಗಿಂತಲೂ ಮಹತ್ತಾದ ವಸ್ತುವು ಬೇರೆ ಇಲ್ಲವೆಂದರ್ಥ. ಇದೇ ಅರ್ಥವನ್ನೇ ದಾಸರಾಯರು ಇಲ್ಲಿ ವಿಶದಪಡಿಸುವರು. ದೊಡ್ಡ ವಸ್ತುವನ್ನು ಪರಮಾಣುವಿನೊಳಗೆ ಅಡಗಿಸುವನು. ಪ್ರಳಯಕಾಲದಲ್ಲಿ ವಟಪತ್ರದಲ್ಲಿ ಶಿಶುರೂಪನಾಗಿ ಮಲಗಿರುವಾಗ ಮಾರ್ಕಂಡೇಯರು ಶಿಶುವಿನ ಮೂಗಿನ ದ್ವಾರಾ ಹೊಟ್ಟೆಯೊಳಗೆ ಹೊಕ್ಕು ಬ್ರಹ್ಮಾಂಡದೊಳಗಿನ ಯಾವದ್ವಸ್ತುಗಳನ್ನು ಕಂಡಿರುವರು. ಕೃಷ್ಣಾವತಾರದಲ್ಲಿ ಕೃಷ್ಣನು ಆಕಳಿಸಿದಾಗಲೂ, ಮಣ್ಣುಂಡನೆಂಬ ಕಾರಣದಿಂದ ಪರೀಕ್ಷೆಗೋಸ್ಕರ ಬಾಯಿಯನ್ನು ತೆಗೆಸುವಾಗಲೂ, ಯಶೋದೆಯು ಶ್ರೀಕೃಷ್ಣನ ಉದರದಲ್ಲಿ ಸಮಸ್ತ ಪ್ರಪಂಚವನ್ನೂ ಕಂಡು, ಆಶ್ಚರ್ಯಚಕಿತಳಾದಳೆಂದು ಭಾಗವತದಲ್ಲಿ ಹೇಳಿರುವರು. ಶ್ರೀ ಪರಮಾತ್ಮನು ಪರಮಾಣು ವಸ್ತುಗಳಲ್ಲಿ ಪರಮಾಣುವಾಗಿದ್ದರೂ ಆ ಪರಮಾತ್ಮನ ಉದರದಲ್ಲಿ ೫೦ ಕೋಟಿ ಗಾವುದವುಳ್ಳ ಬ್ರಹ್ಮಾಂಡವು ಇದ್ದೇ ಇರುವುದು. ಆದ್ದರಿಂದಲೇ ದಾಸರಾಯರು— "ಘನಪರಮಾಣುವಿನೊಳಗಡಗಿಸುವ" —ಎಂದು ಹೇಳಿರುವರು. ಸೂಕ್ಷ್ಮವಸ್ತುವನ್ನಾದರೂ ಮುಳುಗಿಸುವನು. ಸ್ಥೂಲಪದಾರ್ಥಗಳನ್ನಾದರೂ ತೇಲಿಸುವನು. ಸೂಕ್ಷ್ಮಧಾನ್ಯಗಳಾದ ರಾಗಿ ಮೊದಲಾದವು ಮುಳುಗುವುವು. ಸ್ಥೂಲವಾದ ಸ್ತಂಭಾದಿಗಳು ತೇಲುವುವು. ಇವೆಲ್ಲವೂ ಅವನ ಮಾಯವೆಂದು ತಿಳಿಯಬೇಕು. ಒರಳೊಳಗೆ ಧಾನ್ಯನ್ನು ಹಾಕಿ, ಒನಕೆಯಿಂದ ಕುಟ್ಟಲು, ಹೇಗೆ ಧಾನ್ಯಗಳ ಹೊಟ್ಟೆಲ್ಲವೂ ನಾಶವಾಗಿ ಕಾಳುಗಳು ಮಾತ್ರ ಉಳಿಯುವುವೋ, ಅಂತೆಯೇ ಪರಮಾತ್ಮನು ತನ್ನನ್ನು ದ್ವೇಷಿಸುವ ಅಸುರ ರಾಕ್ಷಸರ ದೇಹಗಳನ್ನು ನಾಶಗೊಳಿಸಿ, ಜೀವರನ್ನು ಉಳಿಸುವನು. ಇದರಿಂದ ತ್ರಿವಿಧಜೀವರೂ ಅನಾದಿಕಾಲದಿಂದಲೂ ಪರಮಾತ್ಮನಿಂದ ಭಿನ್ನರಾಗಿರುವರೆಂದು ಸ್ಪಷ್ಟವಾಯಿತು. ಈ ವಿಷಯದಲ್ಲಿ ಭಾಗವತ

**ದಶಮಸ್ಕಂಧೆದ ಶ್ರುತಿಗೀತಾ ತಾತ್ಪರ್ಯ**ದಲ್ಲಿ ಶ್ರುತಿಯನ್ನು ಉದಾಹರಿಸಿರುವರು. ಅದೇನೆಂದರೆ :—

**"ಅಭೀದಮೇಕಮೇಕೋಽಸ್ಮಿ ನಿಃಷಾಧಭಿದ್ವಾ. ಕಿಮುತ್ರಯಃ ಕರಂತಿ । ಖಳೀನ ವರ್ಷಾನ್ ಪ್ರತಿಹನ್ಮಿ ಭೂರಿ ಕಿಂ ಮಾ ನಿಂದಂತಿ ಶತ್ರವೋಽನಿಂದ್ರಾ ॥"**

—ಇದು ಶ್ರೀ ಪರಮಾತ್ಮನ ವಾಕ್ಯವು. ಈ ಪ್ರಪಂಚವೆಲ್ಲವೂ ನನ್ನ ಕೂಡ ಯುದ್ಧಕ್ಕೆ ಬರಲು ನಾನೊಬ್ಬನೇ ಪ್ರತಿಯಾಗಿ ನಿಲ್ಲುವನು. ಇಂತಹ ಪ್ರಪಂಚಗಳು ಎರಡೂ ಕೂಡೇ ಯುದ್ಧಕ್ಕೆ ಬಂದರೂ ನಾನೇ ಜಯಿಸುವೆನು. ಇಂತಹ ಪ್ರಪಂಚಗಳು ಮೂರಾಗಲೀ ಅಥವಾ ಹೆಚ್ಚಾಗಲೀ ಬಂದರೂ ನನ್ನನ್ನು ಏನೂಮಾಡಲಾರವು. ನಾನು ಅವರೆಲ್ಲರನ್ನೂ ಒರಳಿನಲ್ಲಿ ಒನಕೆಯಿಂದ ಕುಟ್ಟಿ. ಹೊಟ್ಟುಗಳನ್ನು ನಾಶಮಾಡುವಂತೆ ಅವರ ದೇಹಗಳನ್ನು ಧ್ವಂಸಪಡಿಸುವೆನು. ಕಾಳುಗಳು ಉಳಿಯುವಂತೆ ಅವರ ಜೀವಗಳನ್ನು ಉಳಿಸುವನು. ಅವರು ನನ್ನನ್ನು ದೂಷಿಸುವರು. ನಿರ್ದುಷ್ಟನಾದ ನನ್ನನ್ನು ಏನೆಂದು ದೂಷಿಸುವರು ? ದೋಷವಿಲ್ಲದಿದ್ದರೂ ಬಲಾತ್ಕಾರದಿಂದ ಆರೋಪಿಸುವರು. ಆದ್ದರಿಂದ "ಅನಿಂದ್ರಾ" —ಅಶಕ್ತರು ಎಂದು ಶ್ರುತ್ಯರ್ಥವು. ಈ ಶ್ರುತಿಯನ್ನು **ಶ್ರುತಿಗೀತೆ**ಯಲ್ಲಿ ೧೬ನೆಯ ಶ್ಲೋಕದಲ್ಲಿ— **"ನಹಿಂಪರಮಸ್ಯ"** ಎಂಬ ಶ್ಲೋಕದಲ್ಲಿನ **"ಅಪರಿಮಿತಾ ಧ್ರುವಾಸ್ತನುಭೃತೋ ಯದಿ ಸರ್ವ ನಹಿ ನಶಾಸ್ಯತೇ । ತ್ರಿನಿಗಮೋ ಭ್ರುವತೇ ಚ ತಥಾ ॥"** –ಎಂಬ ಉತ್ತರಾರ್ಧಕ್ಕೆ **ಶ್ರೀಮದಾಚಾರ್ಯರು ತಾತ್ಪರ್ಯ**ದಲ್ಲಿ ಉದಾಹರಿಸಿರುವರು. ಈ ಶ್ಲೋಕವ ತಾತ್ಪರ್ಯವು ಜೀವರು ವಾಯುದೇವರ ಅಧೀನದಲ್ಲಿ ಅಪರಿಮಿತರಾಗಿ ಅನಾದಿಕಾಲದಿಂದಲೂ ಸ್ವರೂಪದೇಹಗಳಿಂದ ಕೂಡಿರುವರು. ಅವರೆಲ್ಲರೂ ನಿನ್ನ ಶಾಸನಕ್ಕೆ ಒಳಪಟ್ಟವರಲ್ಲವೆಂಬಂತಿಲ್ಲ. ಎಲ್ಲರೂ ನಿನ್ನ ಶಾಸನಕ್ಕೆ ಒಳಗಾದವರೆಂದು ವೇದವು ಹೇಳುವುದು. ಅವು ಯಾವುವೆಂದರೆ, ಈಗ ಮೇಲೆ ಹೇಳಿದ **"ಅಭೀದಂ"** ಎಂಬ ಶ್ರುತಿಯೇ. ಈ ವಾಕ್ಯದಿಂದಲೂ ಮತ್ತು ಶ್ರುತಿವಾಕ್ಯದಿಂದಲೂ

ಜೀವರು ಅನಾದಿಕಾಲದಿಂದಲೂ ಇದ್ದೇ ಇರುವರು. ಅವರ ದೇಹವನ್ನು ಮಾತ್ರ ನಾಶಗೊಳಿಸುವನೆಂದು ಹೇಳಿದುದರಿಂದ ಜೀವರು ಬೇರೆ ಮತ್ತು ಪರಮಾತ್ಮನು ಅವರಿಂದ ಭಿನ್ನನೆಂದೂ ತೋರಿಸಿರುವರು. ಇದೇ ಅರ್ಥವನ್ನೇ ದಾಸರಾಯರು ಇಲ್ಲಿ ಹೇಳಿರುತ್ತಾರೆ. ಈ ಶ್ರುತಿಗೆ ಅರ್ಥಬರೆಯುವಾಗ "ಖಳ" ಶಬ್ದಕ್ಕೆ "ಒರಳು" ಎಂದು ಅರ್ಥಮಾಡಿದೆ. ಆದರೆ ನ್ಯಾಯವಾಗಿ "ಖಳ" ಎಂದರೆ, ಧಾನ್ಯಗಳನ್ನು ಹೊಡೆಯುವ ಕಣಗಳಿಗೆ ಹೆಸರಾದರೂ ಧಾನ್ಯಗಳ ಹೊಟ್ಟುಗಳನ್ನು ನಾಶಮಾಡಿ ಬೇರೆಮಾಡುವ ಶಕ್ತಿಯು ಆ ಕಣಗಳಿಗಿಲ್ಲ. ಹುಲ್ಲು ರಾಗಿಗಳನ್ನು ಮಾತ್ರ ಬೇರೆ ಮಾಡುವುದೇ ಹೊರತು ಭತ್ತದ ಹೊಟ್ಟನ್ನು ತೆಗೆದು, ಅಕ್ಕಿಯನ್ನು ಮಾಡಲು ಆಗುವುದಿಲ್ಲವೆಂಬ ಭಾವನೆಯಿಂದ ದಾಸರಾಯರು "ಉಲೂಖಲ ಒನಿಕೆಗಳಿಂದ" —ಎಂದು ಹೇಳಿರುವರು. ಇದರಿಂದಲೂ ಇಲ್ಲಿನ "ಖಲ" ಶಬ್ದಕ್ಕೆ ಉಲೂಖಲ ಪರವಾಗಿ ಅರ್ಥಮಾಡಿರುವರೆಂದು ತಿಳಿಯಬೇಕು. "ಸಂಹರಿಪಾ" —ಎಂಬ ದಾಸರಾಯರ ವಾಕ್ಯಕ್ಕೆ ದೇಹನಾಶವೇ ಸಂಹಾರವಾಚ್ಯವಾದುದರಿಂದ ಮೇಲಿನ ಅರ್ಥವು ಸರಿಹೋಯಿತೆಂದು ಭಾವಿಸಬೇಕು ॥೧೯॥

## (೩) "ಭಾವದರ್ಪಣಟೀಕಾ"— ವ್ಯಾಖ್ಯಾನ :

ಶ್ರೀ ಕಮಲಾಕಾಂತನ ಅಘಟನಘಟನಶಕ್ತಿ ವರ್ಣಿಸುತ್ತಾರೆ. "ಅಣು" —ಎಂಬ ಪದ್ಯದಿಂದ.

ಘನ–ಅನೇಕ ಸ್ಥೂಲದೇಹಗಳು ಕೊಟ್ಟು ಬಳಲಿಸತಕ್ಕಂಥಾ ಅನಂತಾನಂತ ಕರ್ಮರಾಶಿಗಳನ್ನೇ ಅತ್ಯಂತಸೂಕ್ಷ್ಮವಾದ ಜೀವನಲ್ಲಿ ಅಡಗಿಸಿರೋಣ ಮತ್ತು ಸೂಕ್ಷ್ಮವ ಮುಣುಗಿಸುವ-ಎಂದರೆ, ಇಂಥಾ ಜೀವರನ್ನ ಸಂಸಾರಾಬ್ಧಿಯಲ್ಲಿ ಮುಣುಗಿಸಿರೋಣ. ಸ್ಥೂಲವ ತೇಲಿಸುವ ಎಂದರೆ, ಸ್ಥೂಲತರವಾದಂಥಾ ಪರ್ವತಗಳು ಸೇತುಬಂಧನ ಸಮಯದಲ್ಲಿ ಜಲದಮೇಲೆ ತೇಲಿಸಿರೋಣ. ಏವಮಾದಿ ಅಸಾಧ್ಯ ಸಾಮರ್ಥ್ಯೋಪೇತನಾದವ ಶ್ರೀಹರಿ ಎಂದು ಭಾವ.

**ತದುಕ್ತಂ ದಶಮ ತಾತ್ಪರ್ಯೇ— "ಇದಮೇಕಮೇಕೋऽಸ್ಮಿ ನಿಷಾತಭಿದ್ಧಾಕಿಮುತ್ರಯಃ ಕರೋತಿ ಖಲೇನ ಪಷೀನ್ ಪ್ರತಿಹನ್ಮಿ ಭೂರಿ ಕಿಮಾನಿಂರಂತಿ ಶತ್ರವೋऽನಿಂದ್ರಾ॥"- ಇತಿ ಶ್ರುತಿಃ ॥**

ಮತ್ತು **"ಇದಂ ಜಗತ್ಸರ್ವಮಥೇದೃಶಾನಿ ಭೂರಿಣಿವಾ ನಾಮಾಭಿಯಾಂತಿ ಸಂಖ್ಯೇ॥ ಧಾನ್ಯಾನಿ ಯದ್ವತ್ ಖಲಾನಿ ಮರ್ತ್ಯಃ ಸಂಚೂರ್ಣಯಿಷ್ಯಾಮ್ಯಹ ಮೇಕಏವೇತಿ"॥- ಇತಿ ಬ್ರಹ್ಮಾಂಡೇ ॥-** ಎಂದು ಶ್ರೀಸರ್ವಜ್ಞರು **ದಶಮ ಭಾಗವತ ತಾತ್ಪರ್ಯ**ದಲ್ಲಿ ಉದಾಹರಣಮಾಡಿದ್ದಾರಾದ ಪ್ರಯುಕ್ತ ಪದ್ಯೋಕ್ತಿ ಸಿದ್ಧವಾಯಿತು ॥೧೯॥

## (೪) ಜಮಖಂಡಿ ಶ್ರೀವಾದಿರಾಜಾಚಾರ್ಯ ವ್ಯಾಖ್ಯಾನ

### (ಸಂಸ್ಕೃತಮೂಲ) :—

ಅಣ್ವೀತೀ ಜೀವಾನಾಮಾತ್ಮನಿಧಾನಂ ಸ್ವಜೀವಂಯಾವಂತಂ ಜೀವಲೋಕಸ್ಥಃ ಇತಿವತ್ ಇತರಾಪೇಕ್ಷಯಾ ಪರಮಾಣುತಾ ॥ ಸೂಕ್ಷ್ಮಂ ಶಿಲಾ ಖಂಡಃ ॥ ಸ್ಥೂಲಾತರೀ । ವಿಷ್ಣುರಹಸ್ಯೇಚ— **"ಕಾಷ್ಠ ಭಾರೋ ಮಹಾನೇಷಃ ಸ್ವಯಂ ತರತಿ ತಾರಯೇತ್। ಮಜ್ಜತೇ ಚ ಶಿಲಾಖಂಡಃ ಸಾಮಾಯಾ ಪರಮಾ ಇತಿ ॥"** ರಕ್ಷಸ = ರಾಕ್ಷಸಾಃ **"ಇದಂ............ ............................ ಸಂಚೂರ್ಣಯಿಷ್ಯಾಮ್ಯಹಮೇಕ ಏವೇತಿ ॥" ಬ್ರಹ್ಮಾಂಡೇ** (ಈ ಪ್ರಮಾಣದ ಪೂರ್ಣವಾಕ್ಯವನ್ನು ಹಿಂದಿನ ವ್ಯಾಖ್ಯಾನಗಳಲ್ಲಿ ಕೊಟ್ಟಿದೆ) ಹರಿಪ = ಹರತಿ ॥೧೯॥

**ಕನ್ನಡಾರ್ಥ:—**

**"ಜೀವನಾತ್ಮನಿಧಾನಂ"**— ಎಂದು ಪ್ರಮಾಣೋಕ್ತಿಯು. ಸಾಪೇಕ್ಷ ದೃಷ್ಟಿಯಿಂದ ಪರಮಾಣುತ್ವವು ಶ್ರೀಪರಮಾತ್ಮನಲ್ಲಿ ಇದೆ. ನಾವೆಯು ಮರದಿಂದ ನಿರ್ಮಿತವಾಗಿದೆ. ಇಂತಹ ಒಂದೊಂದು ಮರವೂ ಭಾರವಾದದ್ದು. ಆದರೆ ನಾವೆಯು ನೀರಿನಮೇಲೆ ತೇಲುವುದು. ಆದರಲ್ಲಿ ಕುಳಿತವ

ರನ್ನೂ ತೇಲಿಸುತ್ತದೆ. ಆದರೆ ಗಾತ್ರದಲ್ಲಿ ಚಿಕ್ಕದಾಗಿರುವ ಕಲ್ಲು ನೀರಿನಲ್ಲಿ ಮುಳುಗುವುದು. ಇದು ಶ್ರೀಪರಮಾತ್ಮನ ಮಾಯಾಶಕ್ತಿಯಲ್ಲದೇ ಬೇರೆ ಏನ್ನೂ ಇಲ್ಲ. ಅವನ ಅಘಟನಾಘಟನ ಸಾಮರ್ಥ್ಯದಿಂದ ಭಾರವಾದ ವಸ್ತುಗಳು ತೇಲುವುದೂ, ಸೂಕ್ಷ್ಮವಸ್ತುಗಳು ಮುಳುಗುವುದೂ ಸಾಧ್ಯ. ಈ ತತ್ವವು **ವಿಷ್ಣುರಹಸ್ಯ**ದಲ್ಲಿ ನಿರೂಪಿತವಾಗಿದೆ. ಶ್ರೀಹರಿಯ ಅಚಿಂತ್ಯ ಶಕ್ತಿಗೇ "ಮಾಯು"ವೆನ್ನುವರು. ಸೂಕ್ಷ್ಮ=ಕಲ್ಲು. ಸ್ಥೂಲ=ನೌಕೆ (ನಾವೆ) ರಕ್ಕಸ=ರಾಕ್ಷಸರು. ಸಂಹರಿಪ=ನಾಶಮಾಡುತ್ತಾನೆ "ಪ್ರಳಯದಲ್ಲಿ ಸಮಸ್ತ ಜಗತ್ತೂ ಮತ್ತು ಬ್ರಹ್ಮಾಂಡಾಂತರ್ಗತ ಸಕಲ ಚರಾಚರ ವಸ್ತುಗಳೂ ನನ್ನಲ್ಲಿಯೇ (ಶ್ರೀ ಪರಮಾತ್ಮನಲ್ಲಿಯೇ) ಲಯಹೊಂದುವುವು. ಒರಳಿನಲ್ಲಿ ಧಾನ್ಯಗಳನ್ನು ಹಾಕಿ, ಒನಕೆಯಿಂದ ಕುಟ್ಟಿ, ಹೊಟ್ಟನ್ನೂ ಮತ್ತು ಕಾಳನ್ನೂ ಬೇರ್ಪಡಿಸುವಂತೆ. ಸಕಲ ವಸ್ತುಗಳನ್ನೂ ನಾನೇ ಲಯಗೊಳಿಸುತ್ತೇನೆ" —ಎಂದು **ಬ್ರಹ್ಮಾಂಡಪುರಾಣದ ವಚನ** ॥೧೯॥

**(ಆ) "ಗುರುಹೃದಯಪ್ರಕಾಶಿಕೆ" —ವ್ಯಾಖ್ಯಾನ :—**

ಅಣುವಿನಲ್ಲಿಯೂ ಮಹತ್ತಿನಲ್ಲಿಯೂ ಸಹ ಇರುವವನು. ದೊಡ್ಡ ವಸ್ತುವನ್ನು ಸಣ್ಣ ಕನ್ನಡಿ. ಮನಸ್ಸು, ಸ್ವಪ್ನ ಮೊದಲಾದ್ದರಲ್ಲಿ ಅಡಗಿಸಿ ತೋರಿಸುವನು. ಸೂಕ್ಷ್ಮವಾದ ಶಿಲಾಕಣವನ್ನು ನೀರಿನಲ್ಲಿ ಮುಣುಗಿಸುವನು. ಸ್ಥೂಲವಾದ ಮರಗಳನ್ನು ತೇಲಿಸುವನು. ಇದು ದೇವರ ಪ್ರತ್ಯಕ್ಷ ಮಹಿಮೆ ಎಂಬ ಮಾಯ. ಇವನ ವಿಷಯದಲ್ಲಿ ದನುಜ ರಾಕ್ಷಸಾದಿ ಸರ್ವರೂ ಕೋಪಿಸಿ ಏನು ಮಾಡಬಲ್ಲರು ? "ಉಲೂಖಲ"ವೆಂದರೆ ಒರಳು, ಒನಿಕೆ ಸಹ ಸೇರಿ ಧಾನ್ಯವನ್ನು ಮರ್ಧಿಸುವಂತೆ, ಶಿಕ್ಷಿಸುತ್ತಾ ವ್ಯಾಪ್ತನು ಇದರಿಂದ— **"ಖಲೇನ ಪುರುಷಾನ್ ಪ್ರತಿಹನ್ತಿ ಭೂರಿ ಕಿಂಮಾನಿಂದಂತಿ ಶತ್ರವೋಽನಿಂದ್ರಾಃ ॥"** —ಎಂಬ **ಶ್ರುತ್ಯರ್ಥ**ವೂ

**"ಕಾಷ್ಠಭಾರೋ ಮಹಾನೇಷಃ ಸ್ವಯಂ ತರತಿ ತಾರಯೇತ್ ।**
**ಮಜ್ಜಯೇಚ್ಚ ಶಿಲಾಖಂಡಸ್ತ್ವಮಾಯಾ ಪರಮಾ ಮಮ ॥"**

—ಎಂಬ **ವಿಷ್ಣುರಹಸ್ಯ**ದರ್ಥವೂ ವಿವರಿಸಲ್ಪಟ್ಟಿತು ॥೧೯॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

**"ಅಣೋರಣೀಯಾನ್ ಮಹತೋ ಮಹೀಯಾನ್"** —ಎಂದು ಶ್ರುತಿವಚನವಿದೆ. ಅತ್ಯಂತ ಸೂಕ್ಷ್ಮವಾದ ಅಣುರೂಪ ವಸ್ತುಗಳಲ್ಲಿ ಶ್ರೀ ಶ್ರೀಹರಿಯು ಪರಿಪೂರ್ಣರೂಪದಿಂದ ವ್ಯಾಪ್ತನಾಗಿದ್ದಾನೆ. ಅಂತೆಯೇ ಅತ್ಯಂತ ದೊಡ್ಡದಾದ ಮಹತ್ತಿನಲ್ಲಿ ಆವರಣರೂಪನಾಗಿ ವ್ಯಾಪಿಸಿದ್ದಾನೆ. ಇಂತಹ ಸೂಕ್ಷ್ಮಸ್ಥೂಲಾಂತರ್ಗತವ್ಯಾಪ್ತರೂಪಗಳು ಪರಿಪೂರ್ಣವೇ. ಯಾವವಸ್ತುವನ್ನು ಇನ್ನು ಮುಂದೆ ವಿಚ್ಛೇದಗೊಳಿಸಲು ಸಾಧ್ಯವಿಲ್ಲವೋ. ಆ ವಸ್ತುವಿನ ಅತ್ಯಂತ ಸೂಕ್ಷ್ಮಕಣಕ್ಕೆ "ಅಣು"ವೆಂದು ಹೆಸರು. ಇಂತಹ ಅಣುಸ್ವರೂಪ ವಸ್ತುವಿನಲ್ಲಿ ಅದಕ್ಕಿಂತಲೂ ಸೂಕ್ಷ್ಮತರನಾಗಿ ಪರಮಾಣು ರೂಪಿಯಾಗಿ ವ್ಯಾಪ್ತನಾಗಿದ್ದಾನೆ. ಇದಕ್ಕೆ ಸರ್ವರ ಜೀವಾಂತರ್ಗತರೂಪವೇ ದೃಷ್ಟಾಂತ. ಬ್ರಹ್ಮಾದಿ ತೃಣಾಂತಸಮಸ್ತ ಜೀವರ ಸ್ವರೂಪವೂ ಪರಮಾಣು ರೂಪವುಳ್ಳದ್ದು. ಅದರಲ್ಲಿ ಅಂತರ್ಯಾಮಿಯಾಗಿ, ನಿಯಾಮಕನಾಗಿದ್ದಾನೆಂದಮೇಲೆ, ಅವನ ಅಂಚಿತ್ಯಾದ್ಭುತಸಾಮರ್ಥ್ಯವೆಂತಹುದು ? ಹೀಗೆಯೇ ಗಗನಚುಂಬಿತವಾದ ಪರ್ವತಗಳು, ಅಪಾರವಾದ ಸಾಗರ, ಸಮಗ್ರ ಬ್ರಹ್ಮಾಂಡ, ನವಾವರಣ, ಬ್ರಹ್ಮಾಂಡದ ಮೇಲಿರುವ ಅವ್ಯಾಕೃತಾಕಾಶ ಇವೇ ಮುಂತಾದ ಅತ್ಯಂತ ಬೃಹತ್ ಪ್ರಮಾಣದ ವಸ್ತುಗಳಲ್ಲಿ ತದಾಕಾರನಾಗಿ, ಅವುಗಳಿಗೆ ಆವರಣರೂಪದಲ್ಲಿ ಶ್ರೀ ಪರಮಾತ್ಮನು ವ್ಯಾಪಿಸಿಕೊಂಡಿರುವನು. ಹೀಗೆ ಅಣುವಿಗಿಂತಲೂ ಅಣುವಾಗಿ, ಮಹತ್ತಿಗಿಂತಲೂ ಮಹತ್ತಾಗಿ ಸರ್ವಅಧಿಷ್ಠಾನಗಳಲ್ಲಿಯೂ ಪರಿಪೂರ್ಣನಾಗಿ ವ್ಯಾಪ್ತನಾಗಿರುವ ವಿಶೇಷಗುಣವು ಅವನ ಅಘಟನಾಘಟನ ಸಾಮರ್ಥ್ಯವನ್ನು ಮತ್ತು ಅಚಿಂತ್ಯಾದ್ಭುತಶಕ್ತಿಯನ್ನೂ ತೋರಿಸುತ್ತದೆ. ಮಹತ್ತಾದ ಪದಾರ್ಥಗಳನ್ನು ಅತ್ಯಂತ ಸೂಕ್ಷ್ಮವಾದ ಅಣುವಿನೊಳಗೆ ಅಡಗಿಸುವ ಅಚಿಂತ್ಯಾದ್ಭುತ ಮಹಿಮನು. ಇದನ್ನು ಶ್ರೀ ಪುರಂದರದಾಸರು ತಮ್ಮ ಒಂದು ಉಗಾಭೋಗದಲ್ಲಿ **"ಕರಿಯು ಕನ್ನಡಿಯೊಳಗಿಪ್ಪತೆರದಿ ನೀನು ಎನ್ನೊಳಗೆ ಅಡಗಿಪ್ಪೆ ಪುರಂದರವಿಠಲ"** ಎಂದು ಉದ್ಗಾರ ತೆಗೆದಿದ್ದಾರೆ. ಆನೆಯು ಬೃಹದಾ

ಕಾರವಾದ ಪ್ರಾಣಿ. ಆದರೆ ಒಂದು ಕನ್ನಡಿಯಲ್ಲಿ ಅದರ ಪ್ರತಿಬಿಂಬವನ್ನು ಕಾಣಬಹುದು. ವೃಕ್ಷವು ಸ್ಥೂಲರೂಪ. ಅದೇ ವೃಕ್ಷವು ಪೂರ್ಣರೂಪದಲ್ಲಿ ಬೀಜದಲ್ಲಿ ಸೂಕ್ಷ್ಮವಾಗಿ ಅಡಗಿರುವುದು. ಅದೇರೀತಿಯಲ್ಲಿ ಸ್ಥೂಲವಸ್ತುಗಳನ್ನು ಸೂಕ್ಷ್ಮವಸ್ತುವಿನಲ್ಲಿ ಅಡಗಿಸುವ ಸಾಮರ್ಥ್ಯವಿಶೇಷವು ಭಗವಂತನ ಅಂಚಿತ್ಯಾದ್ಭುತಶಕ್ತಿಯ ದ್ಯೋತಕವು. ಮರಳಿನಕಣ ಅತ್ಯಂತ ಸೂಕ್ಷ್ಮ, ಅದು ನೀರಿನಲ್ಲಿ ಮುಳುಗುವುದು. ಮರದ ದಿಮ್ಮಿಗಳು ಗಾತ್ರದಲ್ಲಿ ಅತ್ಯಂತ ದೊಡ್ಡವು. ಅವು ನೀರಿನಮೇಲೆ ತೇಲುವುವು. ಅಂತಹ ಅನೇಕ ಮರದ ದಿಮ್ಮಿಗಳಿಂದ ನಿರ್ಮಿತವಾದ ನಾವೆಯೂ ಸಹ ನೀರಿನಲ್ಲಿ ತೇಲುವುದಲ್ಲದೆ, ಅದರಲ್ಲಿ ಕುಳಿತಿರುವವರನ್ನು ಸಹ ತೇಲಿಸುವುದು. ಅಂತೆಯೇ ಅತ್ಯಂತ ಸೂಕ್ಷ್ಮರೂಪಿಗಳಾದ ಜೀವರುಗಳನ್ನು ಭವಸಾಗರವೆಂಬ ನೀರಿನಲ್ಲಿ ಮುಳುಗಿಸುವನು. ಸ್ಥೂಲದೇಹಗಳನ್ನು ಅವರಿಗೆ ಕೊಟ್ಟು ತದ್ವಾರಾ ಸಾಧನಮಾಡಿಸಿ, ಭವಸಾಗರದಲ್ಲಿ ತೇಲಿಸಿ, ಮೇಲಕ್ಕೆತ್ತಿ ಉದ್ಧರಿಸುವನು. ಇಂತಹ ಅಂಚಿತ್ಯಶಕ್ತಿಯನ್ನು ಶ್ರೀಪರಮಾತ್ಮನ "ಮಾಯೆ" ಎಂದು ಜ್ಞಾನಿಗಳು ತಿಳಿಯುತ್ತಾರೆ. ಮಾಯೆ ಎಂದರೆ ಭಗವದಿಚ್ಛಾ ಎಂದರ್ಥ. ಆತನ ಇಚ್ಛೆಯಿಂದಲೇ ಬಂಧಕರೂಪವಾದ ಸಂಸಾರಪ್ರಾಪ್ತಿ ಮತ್ತು ಮೋಚಕರೂಪವಾದ ಸಂಸಾರಬಂಧನದಿಂದ ನಿವೃತ್ತಿ. ಬಂಧಕನೂ ಮೋಚಕನೂ ಆದ ಅವನ ಅಗಾಧಮಹಿಮೆಗೆ ನಮೋನಮಃ ರಾಕ್ಷಸರು, ದೈತ್ಯರು ಭಗವದ್ವೇಷಿಗಳು, ಶ್ರೀ ಪರಮಾತ್ಮನ ಅಘಟನಾಘಟನಶಕ್ತಿಯನ್ನರಿಯದ ಅಂತಹ ತಮೋಯೋಗ್ಯರು ಲೋಕಕಂಟಕರು, ಅವರನ್ನು ಲೀಲಾಜಾಲವಾಗಿ ನಾಶಮಾಡುವ ಶ್ರೀ ಪರಮಾತ್ಮನ ಕ್ರೀಡಾವಿಲಾಸ ವೈಭವವನ್ನು ಒಂದು ಉತ್ತಮ ದೃಷ್ಟಾಂತದಿಂದ ದಾಸರಾಯರು ವಿವರಿಸುತ್ತಾರೆ. ಧಾನ್ಯಗಳನ್ನು ಒರಳಿನಲ್ಲಿ ಹಾಕಿ, ಒನಕೆಯಿಂದ ಕುಟ್ಟುತ್ತೇವೆ. ಆಗ ಧಾನ್ಯಕ್ಕೆ ಆವರ್ಕವಾಗಿರುವ ಹೊಟ್ಟು ಬೇರ್ಪಟ್ಟು, ಒಳಗಿನ ಶುದ್ಧ ಕಾಳು ಉಳಿಯುವುದು. ಅಂತೆಯೇ ಅನಾದಿ ನಿತ್ಯವಾದ ಜೀವನಿಗೆ ಆವರ್ಕವಾದ ಲಿಂಗದೇಹ, ಅಲ್ಲದೆ ಅನಿರುದ್ಧ ಶರೀರ, ಸ್ಥೂಲಶರೀರಗಳು ಇರುವುವು. ಜೀವರನ್ನು ತನ್ನ ಮಾಯೆಯಿಂದ ಪ್ರಕೃತಿ ಬಂಧಕರನ್ನಾಗಿ ಮಾಡಿ, ಭವಸಾಗರದಲ್ಲಿಡುವನು. ಮರಣಾದಿಗಳಿಂದ ಸ್ಥೂಲದೇಹವನ್ನು ನಾಶಪಡಿಸುವನು, ಜನ್ಮಜನ್ಮಾಂತರಗಳನ್ನು ಐದಿಸಿ.

೮೪ ಲಕ್ಷ ಯೋನಿಗಳಲ್ಲಿ ತಂದು, ಭವಚಕ್ರದಲ್ಲಿ ಸಿಲುಕಿಸಿ, ಅನಿರುದ್ಧ ಶರೀರವನ್ನು ಕಳೆದು, ಕೊನೆಯಲ್ಲಿ ಲಿಂಗಭಂಗದ್ವಾರಾ, ಕರ್ಮವಿಮೋಚನೆಯನ್ನು ಮಾಡಿಸುವನು. ಕೊನೆಯಲ್ಲಿ ಶಾಶ್ವತವಾಗಿ ಉಳಿಯುವ ಕಾಳುಗಳಿದ್ದಂತೆ ಅನಾದಿನಿತ್ಯವಾದ ಜೀವನಸ್ವರೂಪಶರೀರ. ಕಾಳುಗಳ ಹೊಟ್ಟನ್ನು ಬೇರ್ಪಡಿಸುವಂತೆ, ಸ್ವರೂಪಕ್ಕೆ ಆವರ್ಕರೂಪವಾದ ದೇಹಗಳ ನಾಶ. ಸಂಸಾರವೆಂಬುದೇ ಒರಳು. ಭಗವದಿಚ್ಛಾಎಂಬುದೇ ಧಾನ್ಯಗಳನ್ನು ಮರ್ಧಿಸುವ ಒನಕೆಯು. ಭವಕ್ಲೇಶಗಳಿಂದ ಝರ್ಝರಿತನಾದ ಜೀವನ ದೇಹಗಳ ನಾಶದ್ವಾರಾ, ಅಂತ್ಯದಲ್ಲಿ ಕರ್ಮಕೋಟಲೆಗಳಿಂದ ಅವನನ್ನು ವಿಮೋಚನಗೊಳಿಸಿ, ಆನಂದಭಾಗ್ಯವನ್ನು ಕರುಣಿಸುವ ಶ್ರೀ ಪರಮಾಪ್ತನ ಕಾರುಣ್ಯ ಮಹಿಮಾ ವಿಶೇಷ ಎಂತಹುದು ? ಪ್ರಬಲರಾದ ದೈತ್ಯರೂ ಸಹ ಇಂತಹ ಅಬ್ಬರದ ಹೆದ್ದೈವನಲ್ಲಿ ಮುನಿದು ಮಾಡುವುದಾದರೂ ಏನು ? ಅವರ ಆಟ ಭಗವಂತನ ಮುಂದೆ ಏನೂ ಸಾಗದು ಎಂದು ಭಾವ ॥೧೯॥

## ಪದ್ಯ (೨೦)

**ಮೂಲ :—**

**ದೇವ ಮಾನವ ದಾನವರು ಎಂ ।**
**ದೀ ವಿಧದಲಾವಗಲಿಪ್ಪರು ।**
**ಮೂವರೊಳಗಿಲ್ಲ ಸ್ನೇಹೋದಾಸೀನ ದ್ವೇಷ ॥**
**ಜೀವರಧಿಕಾರನುಸಾರದ ।**
**ಲೀವ ಸುಖ ಸಂಸಾರ ದುಃಖವ ।**
**ತಾ ಉಣದೊಲವರವರಿಗುಣಸುತ ನಿರ್ಗತಾಶನನು॥ ॥೨೦॥**

**ಅವತರಣಿಕೆ:—**

ದೇವ, ಮಾನವ ಮತ್ತು ದಾನವ ಎಂಬ ಅನಾದಿನಿತ್ಯರಾದ ತ್ರಿವಿಧ ಜೀವರಲ್ಲಿ ಶ್ರೀ ಪರಮಾತ್ಮನಿಗೆ ಸ್ನೇಹವಾಗಲೀ, ಉದಾಸೀನವಾಗಲೀ, ದ್ವೇಷವಾಪಲೀ ಯಾವುದೂ ಇಲ್ಲ. ಅವನು ವೈಷಮ್ಯ ನೈರ್ಘೃಣ್ಯ ಮುಂತಾದ ದೋಷಗಳಿಂದ ರಹಿತನು. ಆಯಾಯಾ ಜೀವರ ಯೋಗ್ಯತಾನು ಸಾರ ಸುಖ. ಮಿಶ್ರಫಲ ಮತ್ತು ದುಃಖಾದಿಗಳನ್ನು ಕೊಡುತ್ತಾನೆ ಎಂದು ವಿವರಿಸುತ್ತಾರೆ— "ದೇವ" —ಎಂಬ ಈ ಪದ್ಯದಿಂದ ॥೨೦॥

**ಪ್ರತಿಪದಾರ್ಥ :—**

**ದೇವ** = ಬ್ರಹ್ಮದೇವರಿಂದ ಆರಂಭಿಸಿ ತೃಣಾಂತ ಮುಕ್ತಿಯೋಗ್ಯ ಜೀವಗಣ. **ಮಾನವ** = ಪುರಂಜನ ಮೊದಲು ತೃಣಾಂತ ನಿತ್ಯಸಂಸಾರಿ ಜೀವಗಣ. **ದಾನವರು** = ಕಲಿ ಆರಂಭಮಾಡಿ ತೃಣಾಂತ ತಮೋಯೋಗ್ಯ ಜೀವವರ್ಗ **ಎಂದು** = ಎಂಬುದಾಗಿ **ಈ ವಿಧದಿ** = ಈ ಪ್ರಕಾರ ತ್ರಿವಿಧರಾಗಿ **ಆವಾಗಲೂ** = ನಿತ್ಯದಲ್ಲಿಯೂ. ಅಂದರೆ, ಅಸೃಜ್ಯರಾಶಿಯಲ್ಲಿ, ಸೃಷ್ಟಿ ಕಾಲದಲ್ಲಿ, ಪ್ರಳಯಕಾಲದಲ್ಲಿ, ಲಿಂಗಭಂಗಸಮಯದಲ್ಲಿ ಮತ್ತು ಅನಂತ ರವೂ, ಅಂದರೆ ಅನಾದ್ಯನಂತಕಾಲದಿಂದಲೂ **ಇಪ್ಪರು** = ಇದ್ದಾರೆ. ಅಂದರೆ ತ್ರಿವಿಧರು ಅನಾದಿಕಾಲದಿಂದಲೂ ನಿತ್ಯರಾಗಿದ್ದಾರೆ. ಈ ಪಂಗಡ ಕೇವಲ ಕೃತಕವಲ್ಲ. **ಈ ಮೂವರೊಳಗೆ** = ಇಂತಹ ತ್ರಿವಿಧಜೀವರಲ್ಲಿ **ಸ್ನೇಹ** = ಮುಕ್ತಿ ಯೋಗ್ಯರಲ್ಲ (ದೇವವರ್ಗ) ಅಂತಃಕರಣವೇನು **ಉದಾಸೀನ** = ನಿತ್ಯಸಂಸಾರಿಗಳಲ್ಲಿ ಉದಾಸೀನವೇನು (ಮಾನವವರ್ಗ) **ದ್ವೇಷ** = ತಮೋಯೋಗ್ಯರಲ್ಲಿ (ದಾನವವರ್ಗ) ದ್ವೇಶವೇನು **ಇಲ್ಲ** = ಆ ಪರ ಮಾತ್ಮನಿಗೆ ಇಲ್ಲವು. **ಜೀವರ** = ಆದರೂ ಆ ತ್ರಿವಿಧ ಜೀವರ **ಅಧಿಕಾರಾನುಸಾರದಲಿ** = ಸ್ವರೂಪಯೋಗ್ಯತೆಗೆ ಅನುಗುಣವಾಗಿ **ಸುಖ** = ದೇವತೆ ಗಳಿಗೆ ಸ್ವರೂಪಾನಂದವನ್ನೂ **ಸಂಸಾರ** = ಸುಖದುಃಖಮಿಶ್ರವಾದ ಭೋಗ ವನ್ನೂ **ದುಃಖವ** = ತಮೋಯೋಗ್ಯರಿಗೆ ಅಂಧಂತಮಸ್ಸಿನಲ್ಲಿ ನಿತ್ಯ ದುಃಖ

ವನ್ನೂ **ಈವ** = ಕೊಡುತ್ತಾನೆ. **ತಾ ಉಣದಲೆ** = ತ್ರಿವಿಧಜೀವರು ಭೋಗ ಮಾಡತಕ್ಕ ತ್ರಿವಿಧಪ್ರಕಾಶವಾದ ಭೋಗಗಳನ್ನು ತಾನು ಅನುಭವಿಸದೇ (ನಿರ್ಲಿಪ್ತನಾಗಿದ್ದುಕೊಂಡು) **ಅವರವರಿಗುಣಿಸುವ** = ಆಯಾಯಾ ತ್ರಿವಿಧ ಚೇತನರ, ಅನುಭವಕ್ಕೆ ತಂದುಕೊಂಡುತ್ತಾನೆ. **ನಿರ್ಗತಾಶನನು** = ಹೋಗಲಾಡಿಸಲ್ಪಟ್ಟ ಭೋಗರೂಪವಾದ ಅಶನ ಎಂದರೆ ಆಹಾರವುಳ್ಳವನು. ಅಂದರೆ ನಿತ್ಯತೃಪ್ತನೆಂದರ್ಥ. ॥೨೦॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

"ದೇವ" ಎಂಬ ಶಬ್ದರಿಂದ ಬ್ರಹ್ಮದೇವರಿಂದ ಆರಂಭಮಾಡಿ, ತೃಣಾಂತಜೀವರವರೆಗೂ, ಮುಕ್ತಿಯೋಗ್ಯಜೀವರು, "ಮಾನವ" ಶಬ್ದದಿಂದ ಪುರಂಜನ ಮೊದಲು, ತೃಣಾಂತ ನಿತ್ಯಸಂಸಾರಿಗಳು, "ದಾನವ" ಶಬ್ದದಿಂದ ಕಲಿ ಮೊದಲು ತೃಣಾಂತ ತಮೋಯೋಗ್ಯರು ಎಂದು ಈ ಪ್ರಕಾರ ಮೂರು ವಿಧ. ಇಂತಹ ತ್ರಿವಿಧಜೀವರು ಅಸೃಜ್ಯರಾಶಿಯಲ್ಲಿಯೂ, ಸೃಷ್ಟಿಕಾಲದಲ್ಲಿಯೂ, ಪ್ರಳಯ ಕಾಲದಲ್ಲಿಯೂ, ಲಿಂಗಭಂಗದಲ್ಲಿಯೂ ಯಾವಾಗಲೂ ಇರೋವರಾಗಿದ್ದಾರೆ. ಇವರು ಈಶ್ವರನಿಂದ ಸೃಷ್ಟರಾದವರಲ್ಲ. ಅವರವರ ಅನಾದಿಸ್ವರೂಪವು ಅಂಥಾದ್ದೇ. ಈ ತ್ರಿವಿಧರಾದ ಜೀವರಲ್ಲಿ, ಮುಕ್ತಿಯೋಗ್ಯರಲ್ಲಿ ಕೇವಲ ಅಂತಃಕರಣವೇನು. ನಿತ್ಯಸಂಸಾರಿಗಳಲ್ಲಿ ಉದಾಸೀನವೇನು, ತಮೋಯೋಗ್ಯರಲ್ಲಿ ದ್ವೇಷವೇನು–ಇವಾವುವೂ ಶ್ರೀಪರಮಾತ್ಮನಿಗಿಲ್ಲ. ಆದರೂ ತ್ರಿವಿಧಜೀವರ ಸ್ವರೂಪಯೋಗ್ಯತಾ ಎಂಥಾದ್ದೋ, ಅಂಥಾದ್ದೇ ಶ್ರೀಪರಮಾತ್ಮ ಅಧಿಕಾರಾನುಸಾರ ಅಭಿವ್ಯಕ್ತಿ ಮಾಡಿ, ಮುಕ್ತರಾದವರಿಗೆ ಲಿಂಗಭಂಗಾನಂತರ ವೈಕುಂಠಾದಿ ಲೋಕಗಳಲ್ಲಿ ನಿತ್ಯ ಸುಖವೇನು. ನಿತ್ಯಸಂಸಾರಿಗಳಿಗೆ ಸಾಂತಾನಿಕಲೋಕಗಳಲ್ಲಿ, ಲಿಂಗ ಭಂಗಾನಂತರ, ಕಾಲಾವಚ್ಛೇದೇನ ಭೋಗಿಸತಕ್ಕ, ಸುಖದುಃಖ ಮಿಶ್ರವಾದ

ಭೋಗಾದಿಗಳೇನು. ತಮೋಯೋಗ್ಯರಿಗೆ ಲಿಂಗಭಂಗಾನಂತರ, ಅಂಧ ತಮಸ್ಸಿನಲ್ಲಿ ನಿತ್ಯ ದುಃಖಗಳೇನು—ಇವುಗಳನ್ನು ಕೊಡತಾನೆ. ಪರಮಾತ್ಮನು ತ್ರಿವಿಧರಿಗೆ ಬಿಂಬನಾದ್ದರಿಂದ, ಇರುವ ಭೋಗಮಾಡತಕ್ಕ ತ್ರಿವಿಧ ಪ್ರಕಾರವಾದ ಭೋಗಗಳನ್ನು ತಾನು ಅನುಭವಿಸದೇ ಅವರವರ ಅನುಭವಕ್ಕೆ ತಂದುಕೊಡತಾನೆ–ನಿತ್ಯತೃಪ್ತನಾದ್ದರಿಂದ ಎಂದರ್ಥ (ನಿರ್ಗತಾಶನನು)

ಪೂರ್ವಶ್ಲೋಕಾಭಿಪ್ರಾಯಪ್ರಕಾರ, ತ್ರಿವಿಧಜೀವರಲ್ಲಿ ಶ್ರೀ ಪರಮಾತ್ಮ ಇದ್ದಾಗ್ಯೂ ಇವರಲ್ಲಿ ತಾನು ಪ್ರತ್ಯೇಕವಾಗಿ ಸ್ನೇಹೋದಾಸೀನಗಳು ತೋರಿಸದೆ, ಅವರವರ ಸ್ವಭಾವಯೋಗ್ಯತಾನುಸಾರ ಸುಖದುಃಖಗಳು ಕೊಟ್ಟು, ತಾನು ಏನೂ ಅನುಭವಿಸದೆ ನಿತ್ಯತೃಪ್ತನಾಗಿರತಾನೆ ಎಂತ ತಾತ್ಪರ್ಯ.

(೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :—

**ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ— "ತ್ರಿವಿಧಾಜೀವ ಸಂಘಾಸ್ತು. ದೇವ ಮಾನುಷ ದಾನವಾಃ ॥ ತತ್ರದೇವಾ ಮುಕ್ತಿ ಯೋಗ್ಯಾಃ ಮಾನುಷೇಷೂತ್ತಮಸ್ತಥಾಃ ॥ ಮಧ್ಯಮಾ ಮಾನುಷಾ ಯೇತು ಸೃತಿಯೋಗ್ಯಾಸ್ಸದೈವಹಿ ॥ ಅಧಮಾ ನಿರಯಾಯ್ಯೈವ ದಾನವಾಸ್ತು ತಮೋಽಲಯಾಃ । ಮುಕ್ತಿರ್ನಿತ್ಯಾ ತಮಶ್ಚೈವ ನಾ ವೃತ್ತಿಃ ಪುನರೇತಯೋಃ ॥ ದೇವಾನಾಂ ನಿರಯೋನಾಸ್ತಿ ತಮಶ್ಚಾಪಿ ಕಥಂ ಚನ ॥ ನಾಸುರಾಣಾಂ ತಥಾಮುಕ್ತಿಃ ಕದಾಚಿತ್ಕೇನ ಚಿತ್ಕ್ವಚಿತ್ ಮಾನುಷಾಣಾಂ ಮಧ್ಯಮಾನಾಂ ನೈತದ್ದ್ವಯಮವಾಪ್ಯತೇ ।"**

ಅಂದರೆ, ಜೀವರಾಶಿಗಳಲ್ಲಿ ದೇವತೆಗಳೆಂತಲೂ, ಮನುಷ್ಯರೆಂತಲೂ, ರಾಕ್ಷಸರೆಂತಲೂ ಮೂರುಪ್ರಕಾರರಾಶಿಗಳಿರುವುವು. ಅದರಲ್ಲಿ ದೇವತೆಗಳೆಲ್ಲರೂ ಮತ್ತು ಮನುಷ್ಯೋತ್ತಮರು ಮುಕ್ತಿಯೋಗ್ಯರು. ಮನುಷ್ಯರಲ್ಲಿ ಮಧ್ಯಮರು ಯಾವಾಗಲೂ ನಿತ್ಯಸಂಸಾರಿಗಳು. ಮನುಷ್ಯರಲ್ಲಿ ಅಧಮರು ನರಕಭಾಗಿಗಳು. ದಾನವರೆಲ್ಲರೂ ತಮೋಯೋಗ್ಯರೇ. ಇದರಲ್ಲಿ ಮುಕ್ತಿಗೆ

ಹೋದವರಿಗೂ, ತಮಸ್ಸನ್ನು ಹೊಂದಿದವರಿಗೂ ಪುನರಾವರ್ತಿ ಇಲ್ಲ. ದೇವತೆಗಳಿಗೆ ನರಕವಾಗಲೀ ತಮಸ್ಸಾಗಲೀ ಎಂದಿಗೂ ಆಗುವಂತಿಲ್ಲ. ಅಸುರರಿಗೆ ಮುಕ್ತಿಯು ಯಾವ ಸಾಧನದಿಂದಾಗಲಿ, ಯಾವ ಕಾಲದಲ್ಲಾಗಲೀ ಎಂದಿಗೂ ದೊರೆಯುವಂತಿಲ್ಲ. ಮನುಷ್ಯರಲ್ಲಿ ಮಧ್ಯಮರಿಗೆ ಮುಕ್ತಿಯಾಗಲೀ ತಮಸ್ಸಾಗಲೀ ಇವೆರಡೂ ಆಗುವಂತಿಲ್ಲ. ಈ ಅಭಿಪ್ರಾಯವನ್ನೇ ದಾಸರಾಯರು ಈ ಪದ್ಯದಲ್ಲಿ ಹೇಳಿರುವರು. ಹೀಗೆ ದೇವ, ಮನುಷ್ಯ, ದಾನವರೆಂಬ ತ್ರಿವಿಧ ಜೀವರಾಶಿಗಳಲ್ಲಿ ದೇವತೆಗಳಲ್ಲಿ ಪರಮಾತ್ಮನಿಗೆ ಸ್ನೇಹವಾಗಲೀ, ಮನುಷ್ಯರಲ್ಲಿ ಉದಾಸೀನವಾಗಲೀ, ದಾನವರಲ್ಲಿ ದ್ವೇಷವಾಗಲೀ ಇಲ್ಲ. ಎಲ್ಲರಲ್ಲೂ ಸಮನಾಗಿಯೇ ಇರುವನು. ಹಾಗಾದರೆ, **"ಇಂದ್ರಸ್ಯಾರ್ಥೇ ಕಥಂ ದೈತ್ಯಾನವಧೀದ್ವಿಷನೋ ಯಥಾ-" ಎಂಬ ಭಾಗವತ ಸಪ್ತಮಸ್ಕಂಧ**ದಲ್ಲಿ ಪರಮಾತ್ಮನು ಎಲ್ಲರಿಗೂ ಸಮನು ಮತು ಪ್ರಿಯನು. ಹೀಗಿರಲು ಇಂದ್ರನ ಪ್ರೀತಿಗೋಸ್ಕರ ದೈತ್ಯರನ್ನು ಹನನಮಾಡಲು ಕಾರಣವೇನು ? ಎಂದು ಪರಿಕ್ಷಿದ್ರಾಜನು ಪ್ರಶ್ನೆ ಮಾಡಲು ಶುಕಾಚಾರ್ಯರು ಈ ರೀತಿ ಹೇಳಿರುವರು :—

ಪರಮಾತ್ಮನು ಸಮನೇ, ಅಂದರೆ, **"ದೇಶಕಾಲಗುಣಾಂಶ್ಚೈವ ಭಕ್ತ್ಯಾಧೀನ ಪೇಕ್ಷ್ಯವೇಕ್ಷ್ಯತು । ಯೋಗ್ಯತಾಂ ಚ ತಥಾ ಕರ್ಮಸಮ ಇತ್ಯಭಿಧೀಯತೇ ॥"— ಎಂಬ ಭಾಗವತ ತಾತ್ಪರ್ಯ** ವಚನಪ್ರಕಾರ. ದೇಶ, ಕಾಲ. ಗುಣಗಳು ಅವರವರ ಕರ್ಮ, ಯೋಗ್ಯತೆ ಇವುಗಳನ್ನು ಅನುಸರಿಸಿ ಅವರವರು ಮಾಡುವ ಭಕ್ತಿ ದ್ವೇಷಾದಿಗಳಿಗೆ ತಕ್ಕಂತೆ ಫಲಕೊಡುವುದಕ್ಕೆ "ಸಮ"ನೆಂದು ಹೆಸರು. ಭಕ್ತಿ ಮಾಡುವವನಿಗೂ, ದ್ವೇಷ ಮಾಡುವವನಿಗೂ ಒಂದೇ ಫಲ ಕೊಡುವುದಕ್ಕೆ "ಸಮ" ಎಂದು ಹೇಳುವುದಿಲ್ಲ. ಆದ್ದರಿಂದ ಭಜಕರಿಗೆ ಅವರ ಭಕ್ತಿಗೆ ತಕ್ಕ ಫಲವನ್ನೂ, ದ್ವೇಷಿಗಳಿಗೆ ಅವರಿಗೆ ತಕ್ಕ ಫಲವನ್ನೂ ಕೊಡುವುದಕ್ಕೆ "ಸಮ"ನೆಂದು ಕರೆಯುವರು. ದೇವತೆಗಳು ಪರಮಾತ್ಮನನ್ನು ಆರಾಧನಮಾಡುವುದರಿಂದ, ಅವರಿಗೆ ಸುಖವನ್ನು ಕೊಡುವನು, ದೈತ್ಯರು ದ್ವೇಷಮಾಡುವುದರಿಂದ ದುಃಖಫಲವನ್ನು

ಕೊಡುವನೆಂದು ಭಾವವು. ಅದನ್ನೇ ಇನ್ನೂ ವಿಶದವಾಗಿ ವಿಸ್ತರಿಸುತ್ತಾರೆ :—

ತ್ರಿವಿಧಜೀವರ ಅಧಿಕಾರಾನುಸಾರವಾಗಿ ದೇವತೆಗಳಿಗೂ, ಮನುಷ್ಯೋತ್ತಮರಿಗೂ ನಿತ್ಯಸುಖಮಯವಾದ ಮುಕ್ತಿಯನ್ನೂ, ಮಾನವ ಮಧ್ಯಮರಿಗೆ ನಿತ್ಯಸಂಸಾರಾಖ್ಯ ಸಾಂತಾನಿಕ ಲೋಕಗಳನ್ನೂ, ದಾನವರಿಗೆ ನಿತ್ಯ ದುಃಖಮಯವಾದ ತಮಸ್ಸನ್ನೂ ಕೊಟ್ಟು, ಭುಂಜಿಸುವಂತೆ ಮಾಡುವನು. ಆಹಾರ ವರ್ಜಿತನಾದ ಪರಮಾತ್ಮನು, ತ್ರಿವಿಧಜೀವರೊಳಗಿದ್ದರೂ ನಿರ್ಲಿಪ್ತನಾಗಿ, ಸುಖದುಃಖಗಳ ಸಂಬಂಧವಿಲ್ಲದಿರುವನು. ಆದರೆ ಇದೇ ಸಂಧಿಯಲ್ಲಿ ಹಿಂದೆ- **"ತೋದಕನು ತಾನಾಗಿ"** —ಎಂಬ ಪದ್ಯದಲ್ಲಿ **"ಕರಣದೊಳಿದ್ದು ವಿಷಯವನ್ನೈದುವನು ತಿಳಿಯಬೋಸಾದಿ ಭುಂಜಿಸುತ"** —ಇತ್ಯಾದಿ ಪದಗಳಿಂದ ಪರಮಾತ್ಮನು ಜೀವರೊಳಗಿದ್ದು ಸುಖವನ್ನನುಭವಿಸುವನು ಎಂದು ಹೇಳಿರುವರು. ಈ ವಾಕ್ಯಗಳಿಂದ ಪರಸ್ಪರ ವಿರೋಧ ಬರುವುದಿಲ್ಲವೇ, ಎಂದರೆ ಅದಕ್ಕೆ ಪರಿಹಾರ :—

ಜೀವರು ಕರ್ಮಗಳನ್ನು ಮಾಡುತ್ತಾ, ಪುಣ್ಯಸಾಧನವನ್ನು ಮಾಡುತ್ತಿರುವಾಗ, ತಮ್ಮ ಸಂಚಿತಪುಣ್ಯವನ್ನನುಭವಿಸುವರು. ಆ ಜೀವರಿಗೋಸ್ಕರ ತಾನೂ ಆ ಸುಖವನ್ನು ಅನುಭವಿಸಿದನೆಂದು ಹಿಂದಿನ ಪದ್ಯದ ಅಭಿಪ್ರಾಯವು. ಈ ಪದ್ಯದಲ್ಲಿ ಮುಕ್ತರಾದಮೇಲೆ ಸುಖಮಯವಾದ ಸ್ವರೂಪವುಳ್ಳ ಜೀವರಿಗೆ ಸುಖವನ್ನು ಉಣಿಸುವವನಲ್ಲದೆ ತಾನು ಉಣುವುದಿಲ್ಲವೆಂದು ಭಾವ. ಇದರಿಂದ ಪೂರ್ವೋತ್ತರ ಬಾಧೆ ಇಲ್ಲವೆಂದು ತಿಳಿಯಬೇಕು ॥೨೦॥

## (೩) "ಭಾವದರ್ಪಣಟೀಕಾ"—ವ್ಯಾಖ್ಯಾನ :—

ಜೀವರಧಿಕಾನುಸಾರ॥ **ಉಕ್ತಂಚ ಸತ್ತತ್ವರತ್ನಮಾಲಾಯಾಂ** —

**"ಪುಣ್ಯಪಾಪದಿಂಕಚ್ಚೈವ ಚೇತನಾಚೇತನಂ ತಥಾ|| ಸರ್ವ ನಾರಾಯಣಾದೇವ ಸತ್ತಾದ್ಯಂ ಲಭತೇಜಸೇತಿ ||"**

ತಾನುಣದೆ= ತಾನು ಎಂದಿಗೂ ಉಣತಕ್ಕವನಲ್ಲ ಎಂದರ್ಥ.

**"ಅವಿಜರೋವಿಜಿಘಿತ್ಸುಃ ಅಪಿಪಾಪಸು"- ಇತಿಶ್ರುತೇಃ||** ನಿರ್ಗತಾಶನ= **"ಅನಶ್ನನ್ನನೋಽಭಿಚಾಕಶೀತೀತಿ"|| ಶ್ರುತೇಃ** ||೨೦||

## (೪) ಶ್ರೀ ಜಮುಖಂಡಿವಾದಿರಾಜಾಚಾರ್ಯರ ವ್ಯಾಖ್ಯಾನ - (ಸಂಸ್ಕೃತಮೂಲ):—

ದೇವೇತಿ। ಆವಾಗಲೇತಿ। **"ಧಾತಾ ಯಥಾಪೂರ್ವಮಿತಿ" ಶ್ರುತೇಃ||** ಇಲ್ಲಿ। ಅನುಪದಮೇವ ವಕ್ಷ್ಯತೇ || ಅಧಿಕಾರೋ ಯೋಗ್ಯತಾ। ದೇಶ ಕಾಲ ಗುಣಾಂಶ್ಚೈವ ಭಕ್ತ್ಯಾದೀನಪ್ಯಪೇಕ್ಷ್ಯತು || ಯೋಗ್ಯತಾಂಚ ತಥಾ ಕರ್ಮಸಮಃ ಇತ್ಯಭಿಧೀಯತೇ || ಇತಿ ಸಪ್ತಮ ತಾತ್ಪರ್ಯೇ। ಉಣದೇ-ನ ಭುಂಕ್ತೇಚೇದಪಿ ನ ದೌರ್ಬಲ್ಯಮ್। ಅನ್ಯೋನಿರನ್ಯೋಽಪಿ ಬಲೇನ ಭೂಯಾನ್-ಇತಿ ಭಾಗವತೇ ||೨೦||

**ಕನ್ನಡಾನುವಾದ :—**

ಈ ಪದ್ಯದಲ್ಲಿ ದಾಸರಾಯರು "ಆವಾಗಲಿ" ಎಂದು ಶಬ್ದ ಪ್ರಯೋಗ ಮಾಡಿರುವರು, **"ಧಾತಾ ಯಥಾ ಪೂರ್ವಮಕಲ್ಪಯತ್" —ಎಂಬ ಶ್ರುತಿವಚನವಿದೆ.** ಇದರಪ್ರಕಾರ, "ಪೂರ್ವಕಲ್ಪಗಳಲ್ಲಿ ಇದ್ದಂತೆ ಮುಂದಿನ ಕಲ್ಪಗಳಲ್ಲಿ ಸೃಷ್ಟಿಮಾಡುತ್ತಾನೆ"—ಎಂಬ ಶ್ರುತ್ಯರ್ಥವನ್ನು "ಆವಾಗಿಲಿ" ಎಂಬ ಪದವು ಪ್ರತಿಪಾದಿಸುವುದು. "ಮೂವರೊಳಗಿಲ್ಲ ಸ್ನೇಹ ಉದಾಸೀನ ದ್ವೇಷ"– ಅಂದರೆ ಶ್ರೀ ಪರಮಾತ್ಮನು ವೈಷಮ್ಯದೋಷರಹಿತನು. ಅಧಿಕಾರ ಎಂದರೆ, ಯೋಗ್ಯತೆ. ಸಪ್ತಮಸ್ಕಂಧದ ತಾತ್ಪರ್ಯದಲ್ಲಿ. "ದೇಶ, ಕಾಲ, ಭಕ್ತಿ ಎಂಬ ಉತ್ತಮಗುಣ, ಪ್ರಾರಬ್ಧಕರ್ಮ ಹಾಗೂ ಯೋಗ್ಯತೆಗಳನ್ನು ಅನುಸರಿಸಿ, ಪರಮಾತ್ಮನು ಫಲಪ್ರದನಾಗಿದ್ದಾನೆ. ಆ ಕಾರಣದಿಂದ

"ಸಮ" ಎಂದು ಅವನಿಗೆ ಹೆಸರು" —ಎಂದು ನಿರೂಪಿತವಾಗಿದೆ. "ಉಣದೆ" —ಎಂದರೆ ಶ್ರೀ ಪರಮಾತ್ಮನು ತಾನು ಉಪಭೋಗಿಸುವುದಿಲ್ಲ. ಆದರೂ ದುರ್ಬಲನಾಗಿರುವುದಿಲ್ಲ. ಭಾಗವತದಲ್ಲಿ— "ಶ್ರೀಹರಿಯು ಸರ್ವತಂತ್ರಸ್ವತಂತ್ರನು. ಜೀವರಿಂದ ಭಿನ್ನನು. ಅವನು ಅನ್ನ ಮುಂತಾದ ಭೋಗಸಾಮಗ್ರಿಗಳಿಲ್ಲದಿದ್ದರೂ, ಬಲಿಷ್ಠತಮನೂ ಮತ್ತು ಪೂರ್ಣ ತಮನೂ ಯಾವಾಗಲೂ ಆಗಿರುತ್ತಾನೆ" —ಎಂದು ನಿರೂಪಿತವಾಗಿದೆ. ॥೨೦॥

## (ಇ) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ:

ದೇವ, ಮಾನವ. ದಾನವರು ಎಂದು ತ್ರಿವಿಧಜೀವರು ಇರುವರು. ಇವರಲ್ಲಿ ಸ್ನೇಹ, ಉದಾಸೀನ ಮತ್ತು ದ್ವೇಷಗಳು ದೇವರಿಗಿಲ್ಲ, ಈ ತ್ರಿವಿಧ ಜೀವಸ್ವಭಾವದ ನಿತ್ಯಸುಖಿ, ನಿತ್ಯಸಂಸಾರ, ಮತ್ತು ನಿತ್ಯದುಃಖಿಗಳನ್ನೇ ಅವರವರ ಸ್ವರೂಪದಲ್ಲಿ ಅಭಿವ್ಯಕ್ತಿ ಮಾಡಿಕೊಟ್ಟು, ಅವರಿಗೆ ಉಣಿಸಿ, ತಾನು "ಅನಶ್ನನ್ನನ್ಯಃ" ಎಂಬ ಶ್ರುತಿವಚನದಂತೆ ಸ್ವಾನಂದದಿಂದ ಬಾಹ್ಯಾಪೇಕ್ಷೆಯಿಲ್ಲದೆ ವ್ಯಾಪ್ತನಾಗಿರುವನು. ಬಾಹ್ಯವಿಷಯಸುಖ ಆಘ್ರಾಣಿಸಿದರೂ ನಿರ್ಲೇಪನಾದ್ದರಿಂದ, ಭೋಜನರಹಿತನೆಂದರ್ಥ ॥೨೦॥

## ಸರ್ವವ್ಯಾಖ್ಯಾನಸಾರಸಂಗ್ರಹ :—

ಜೀವವರ್ಗದಲ್ಲಿ ಸಾತ್ವಿಕರು, ರಾಜಸರು ಮತ್ತು ತಾಮಸರು ಎಂದು ಮೂರುಪ್ರಕಾರ ಜೀವವರ್ಗಗಳಿವೆ. ಇವರುಗಳನ್ನು ಕ್ರಮವಾಗಿ ದೇವತೆಗಳು, ಮಾನವರು ಮತ್ತು ದೈತ್ಯರು ಎಂದೂ ಕರೆಯುವರು. ಈ ತ್ರಿವಿಧಜೀವರೇ ಮುಕ್ತಿಯೋಗ್ಯರು, ನಿತ್ಯಸಂಸಾರಿಗಳು ಮತ್ತು ತಮೋಯೋಗ್ಯರು. (೧) ಬ್ರಹ್ಮದೇವರು ಮೊದಲುಮಾಡಿಕೊಂಡು ತೃಣಾಂತ ಸಾತ್ವಿಕಜೀವರೆಲ್ಲರೂ ಮುಕ್ತಿಯೋಗ್ಯರು. ಈ ವರ್ಗಕ್ಕೆ "ದೇವ" ಎಂದೂ ಹೆಸರು. ಮಾನುಷೋತ್ತಮರೂ ಸಹ ಮುಕ್ತಿಭಾಜನರೇ. (೨) ಪುರಂಜನ ಪ್ರಾರಂಭಿಸಿ, ತೃಣಾಂತ ರಜೋಜೀವರು ನಿತ್ಯಸಂಸಾರಿಗಳು. ಈ

ವರ್ಗವು "ಮಾನವ" (ಮಧ್ಯಮರು) ಎಂದೆನಿಸಿಕೊಳ್ಳುವುದು. ಈ ಮಾನವ ವರ್ಗದಲ್ಲಿ ಮಧ್ಯಮರು ನಿತ್ಯಸಂಸಾರಿಗಳು. ಅಧಮರು ನರಕಭಾಗಿಗಳು, (೩) ಕಲಿಪ್ರಾರಂಭಿಸಿ, ತೃಣಾಂತ ತಾಮಸರು ತಮೋಯೋಗ್ಯರಾದ "ದಾನವ"ರು. ಈ ತ್ರಿವಿಧಜೀವರ ಸ್ವರೂಪವು ಅನಾದಿನಿತ್ಯವಾದದ್ದು. ಇವರು ಈಶ್ವರನಿಂದ ಸೃಷ್ಟರಾದವರಲ್ಲ. ಅವರ ಸ್ವರೂಪಲಕ್ಷಣ ನಿತ್ಯವಾಗಿರುವುದರಿಂದ. ಪ್ರತಿಕಲ್ಪಕಲ್ಪದಲ್ಲಿಯೂ, ಪೂರ್ವದಲ್ಲಿದ್ದಂತೆಯೇ ಪ್ರಪಂಚವನ್ನು ಸೃಷ್ಟಿಮಾಡುತ್ತೇನೆ- ಎಂಬ ಭಗವದ್ವಚನಾನುಸಾರ, ಈ ತ್ರಿವಿಧ ಸ್ವರೂಪಲಕ್ಷಣ ಏಕಪ್ರಕಾರವಾಗಿರುವುದು. ಅದರಂತೆ ಸ್ವಭಾವಗುಣ ಮತ್ತು ಕ್ರಿಯಾವಿಶೇಷಗಳು. ಅದಕ್ಕನುಗುಣವಾಗಿ ಫಲಪ್ರಾಪ್ತಿ, ನಿರ್ವಿಕಾರನಾದ ಮತ್ತು ನಿರ್ದೋಷವಸ್ತುವಾದ ಶ್ರೀಹರಿಗೆ ಮುಕ್ತಿಯೋಗ್ಯಜೀವರಲ್ಲಿ "ಸ್ನೇಹ" ರೂಪವಾದ ಅಂತಃಕರಣವಾಗಲೀ, ನಿತ್ಯಸಂಸಾರಿಗಳಲ್ಲಿ "ಉದಾಸೀನ" ರೂಪವಾದ ತಟಸ್ಥಭಾವವಾಗಲೀ ಮತ್ತು ತಮೋಯೋಗ್ಯರಲ್ಲಿ "ದ್ವೇಷ" ರೂಪವಾದ ತಿರಸ್ಕಾರವಾಗಲೀ ಇಲ್ಲವೇ ಇಲ್ಲ. ವೈಷಮ್ಯ. ನೈರ್ಘೃಣ್ಯ ಮುಂತಾದ ಯಾವ ದೋಷಗಳೂ ಶ್ರೀಪರಮಾತ್ಮನಲ್ಲಿ ಇಲ್ಲವೇ ಇಲ್ಲವು. ತ್ರಿವಿಧಜೀವರ ಸ್ವರೂಪಯೋಗ್ಯತಾನುಸಾರ ತ್ರಿವಿಧಫಲಗಳನ್ನು ಕೊಡುವುದರಿಂದ ಶ್ರೀ ಪರಮಾತ್ಮನಿಗೆ "ಸಮ" ಎಂದು ಹೆಸರು. ಮುಕ್ತಿಯೋಗ್ಯರಾದ ಸಾತ್ವಿಕಚೇತನರಿಗೆ ಹರಿಭಕ್ತಿ ಮತ್ತು ಹರಿಭಕ್ತರಲ್ಲಿ ಭಕ್ತಿ ಪರಮ ಸ್ವಾಭಾವಿಕ. ಆದ್ದರಿಂದ ಮುಕ್ತಿಯೋಗ್ಯರಿಗೆ ಲಿಂಗಭಂಗಾನಂತರ. ಸ್ವರೂಪಾನಂದದಾವಿರ್ಭಾವರೂಪವಾದ ನಿತ್ಯಸುಖವನ್ನು ಕೊಡುವನು. ನಿತ್ಯಸಂಸಾರಿಗಳಾದ ಮಿಶ್ರಜೀವರಿಗೆ ಛಿದ್ರಭಕ್ತಿ ಮತ್ತು ಮಿಶ್ರಜ್ಞಾನ. ಇದರಿಂದ ಅವರಿಗೆ ಸುಖದುಃಖಮಿಶ್ರಿತವಾದ ಮಿಶ್ರಫಲಪ್ರಾಪ್ತಿ. ತಾವು ಮಾಡಿದ ಪುಣ್ಯ ಕಾರ್ಯಗಳಿಗೆ ಸ್ವರ್ಗದಲ್ಲಿ ಸುಖವನ್ನೂ. ಪಾಪಕಾರ್ಯಗಳಿಗೆ ನರಕದಲ್ಲಿ ದುಃಖವನ್ನೂ ಮತ್ತು ಭೂಮಿಯಲ್ಲಿ ಮಿಶ್ರರೂಪವಾದ ಭೋಗಫಲಗಳನ್ನು ಹೊಂದುವರು. ತಮೋಯೋಗ್ಯರಾದ ದೈತ್ಯರು ಸದಾ ಭಗವದ್ವೇಷಿಗಳು ಮತ್ತು ಭಗವದ್ಭಕ್ತರ ದ್ವೇಷಿಗಳು. ಇದರಿಂದ ಅವರಿಗೆ ತಮೋಲೋಕಪ್ರಾಪ್ತಿ ಮತ್ತು ನಿತ್ಯ ದುಃಖಿಭಾಗಿಗಳಾಗುವರು. ಹೀಗೆ

ತ್ರಿವಿಧ ಜೀವರಿಗೆ ಉಂಟಾಗುವ ಫಲರೂಪವಾದ ಅನುಭವವು ಅವರವರ ಯೋಗ್ಯತೆ ಮತ್ತು ಅಧಿಕಾರಗಳನ್ನು ಅವಲಂಬಿಸಿದೆ. ಅದನ್ನು ಅಭಿವ್ಯಕ್ತಿಗೊಳಿಸಿ, ಜೀವರ ಅನುಭವಕ್ಕೆ ತಂದೀವುದೇ ಬಿಂಬರೂಪೀ ಶ್ರೀಹರಿಯ ವ್ಯಾಪಾರವಿಶೇಷ. ಶ್ರೀಪರಮಾತ್ಮನು ನಿತ್ಯತೃಪ್ತನು. ಪರಾಪೇಕ್ಷಾರಹಿತನು. ಇದರಿಂದ ಜೀವರ ಕರ್ಮಗಳು ಮತ್ತು ತತ್ಸಂಬಂಧವಾದ ಫಲಗಳಿಂದ ದೂರನಾಗಿದ್ದು ನಿರ್ಲೇಪನಾಗಿರುವನು. ಹೀಗೆ ಕಾಲ, ದೇಶ, ಸ್ವಭಾವಗಳಿಗನುಗುಣವಾಗಿ ಜೀವರ ಅನುಭವಕ್ಕೆ ಸಮಸ್ತವಿಷಯಗಳನ್ನು ತಂದುಕೊಡುವ (ತಾ ಉಣದೆ ಅವರಿಗುಣಿಸುತ) ಶ್ರೀಪರಮಾತ್ಮನು ನಿರ್ಗತಾಶನನು. ಅಂದರೆ ನಿತ್ಯತೃಪ್ತನು. ॥೨೦॥

## ಪದ್ಯ (೨೧)

**ಮೂಲ :—**

**ಎಲ್ಲಿ ಕೇಳಿದರೆಲ್ಲಿ ನೋಡಿದ ।**
**ರೆಲ್ಲಿ ಬೇಡಿದರೆಲ್ಲಿ ನೀಡಿದ ।**
**ರೆಲ್ಲಿ ಓಡಿದರೆಲ್ಲಿ ಆಡಿದರೆಲ್ಲಿ ಇರುತಿಹನು ॥**
**ಬಲ್ಲಿದರಿಗತಿಬಲ್ಲಿದನು ಸರಿ ।**
**ಇಲ್ಲ ಇವಗಾವಲ್ಲಿ ನೋಡಲು ।**
**ಖುಲ್ಲ ಮಾನವರೊಲ್ಲನಪ್ರತಿಮಲ್ಲ ಜಗಕೆಲ್ಲ॥** ॥೨೧॥

**ಅವತರಣಿಕೆ :—**

ಸರ್ವತ್ರ ವ್ಯಾಪ್ತನಾಗಿದ್ದು, ಸರ್ವಾಧಿಷ್ಠಾನಗತನಾಗಿ, ಶ್ರವಣ, ದರ್ಶನ, ದಾನ, ಸ್ವೀಕಾರ, ಗಮನಾಗಮನ. ನಿತ್ಯ ದಿನಚರಿಯ ವ್ಯಾಪಾರವಿಶೇಷ

ಗಳು ಇತ್ಯಾದಿ ಕ್ರಿಯಾಗಳನ್ನು ತಾನೇ ಅಂತರ್ಯಾಮಿರೂಪತ್ವೇನ ಬಿಂಬ ಕ್ರಿಯಾದ್ವಾರ ಮಾಡಿ, ಪ್ರತಿಬಿಂಬರಾದ ಚೇತನರ ದ್ವಾರಾಮಾಡಿಸಿ, ಸರ್ವ ತಂತ್ರಸ್ವತಂತ್ರನಾಗಿ ವಿಹರಿಸುತ್ತಿರುವ ಜಗತ್ತಿನಲ್ಲಿ ಅಸದೃಶಮಹಿಮೋಪೇತ ನಾದ ಶ್ರೀಹರಿಯ ಕ್ರಿಯಾವೈಭವವನ್ನು ವಿವರಿಸುತ್ತಾರೆ– "ಎಲ್ಲಿ" ಎಂಬ ಈ ಪದ್ಯದಿಂದ ॥೨೧॥

**ಪ್ರತಿಪದಾರ್ಥ:—**

**ಎಲ್ಲಿ ಕೇಳಿದರಲ್ಲಿ** = ಜೀವರು ಶಬ್ದಾದಿಗಳನ್ನು ಕೇಳಿದರೆ, ಆ ಶಬ್ದ ಸಮೂಹದಲ್ಲಿ, (ಯಾವ ಸ್ಥಳದಲ್ಲಿ ಕಥಾಶ್ರವಣ ಮಾಡುತ್ತಿದ್ದರೂ) **ಎಲ್ಲಿ ನೋಡಿದರಲ್ಲಿ** = ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ವಸ್ತುಗಳನ್ನು ನೋಡಿದಾಗ ಅಲ್ಲಲ್ಲಿ **ಎಲ್ಲಿ ಬೇಡಿದರಲ್ಲಿ** = ಎಲ್ಲೆಲ್ಲಿ ಯಾಚಿಸಿದರೂ, ಆಯಾಯಾ ಸ್ಥಳಗಳಲ್ಲಿ (ಯಾವ ಬ್ರಹ್ಮರುದ್ರಾದಿ ದೇವತೆಗಳ ಆರಾಧನೆ ಮಾಡಿ, ವರ ವನ್ನು ಬೇಡಿದರೂ) **ಎಲ್ಲಿ ನೀಡಿದರಲ್ಲಿ** = ಎಲ್ಲೆಲ್ಲಿ ದಾನಾದಿಗಳ ರೂಪದಲ್ಲಿ ಪದಾರ್ಥಗಳನ್ನು ಕೊಟ್ಟಲ್ಲೆಲ್ಲಾ **ಎಲ್ಲಿ ಓಡಿದರಲ್ಲಿ** = ಯಾವಾವ ಸ್ಥಳದಲ್ಲಿ ಸಂಚಾರತ್ವೇನ ಗಮನಾಗಮನ ಕ್ರಿಯಾ ನಡೆಸುತ್ತಿರುವಲ್ಲಿ **ಎಲ್ಲಿ ಆಡಿದರಲ್ಲಿ** = ಎಲ್ಲೆಲ್ಲಿ ಭಗವನ್ನಾಮಸಂಕೀರ್ತನೆ ಮಾಡುತ್ತಿದ್ದರೂ, ಆಯಾಯಾ ಸ್ಥಳ ಮತ್ತು ಕಾಲಗಳಲ್ಲಿ **ಇರುತಿಹನು** = ಪೂರ್ವೋಕ್ತ ಪ್ರದೇಶಗಳಲ್ಲಿ ಹಾಗೂ ಆಯಾಯಾ ಕಾಲಗಳಲ್ಲಿ ವ್ಯಾಪ್ತನಾಗಿರುತ್ತಾನೆ, **ಬಲ್ಲಿದರಿಗೆ** = ಈ ರೀತಿ ಅನುಸಂಧಾನಕ್ರಮದಿಂದ ತಿಳಿಯುವಂಥ ಜ್ಞಾನಿಗಳಿಗೆ **ಅತಿ ಬಲ್ಲಿದನು** = ಅತ್ಯಂತವಾಗಿ ತಿಳಿದವನು. ಅಂದರೆ, ಅವರ ಜ್ಞಾನಕ್ಕೆ ಮುಖ್ಯವಿಷಯನು **ಆವಲ್ಲಿ ನೋಡಲು** = ಯಾವ ಯಾವ ಪ್ರದೇಶಗಳಲ್ಲಿ ವಿಚಾರ ಮಾಡಿ ನೋಡಿದರೂ **ಇವಗೆ** = ಏತಾದೃಶಮಹಿಮೋಪೇತನಾದ ಶ್ರೀಪರಮಾತ್ಮ ನಿಗೆ **ಸರಿಯಿಲ್ಲ** = ಸರಿಸಮಾನರಾದವರು ಯಾರೂ ಇಲ್ಲ (ಇದರಿಂದ ಉತ್ತಮರಂತೂ ಇಲ್ಲವೇ ಇಲ್ಲ ಎಂಬುದು ಸಿದ್ಧವು) **ಖುಲ್ಲ ಮಾನವರೆ** = ಅಹಂ ಮಮತಾಯುಕ್ತರಾಗಿ, ಡಾಂಭಿಕರಾದ ಕ್ಷುದ್ರ ಮನಸ್ಸುಳ್ಳ ಮನುಷ್ಯರು ಮಾಡತಕ್ಕ ಪೂಜಾ, ಸೇವಾದಿಗಳನ್ನು **ಒಲ್ಲ** = ಎಂದೆಂದಿಗೂ ಸ್ವೀಕರಿಸು

ವುದಿಲ್ಲ **ಜಗಕೆಲ್ಲ** = ಚರಾಚರಾತ್ಮಕವಾದ ಈ ಸಮಸ್ತ ಜಗತ್ತಿನಲ್ಲಿ **ಅಪ್ರತಿಮಲ್ಲ** = ಅಸದೃಶ ಶೂರನಾಗಿದ್ದಾನೆ. (ಸ್ವಸಾಮರ್ಥ್ಯದಿಂದ ಪರಾಪೇಕ್ಷಾರಹಿತನಾಗಿ ಇರತಕ್ಕವನು ಎಂದು ತಾತ್ಪರ್ಯ) ॥೨೦॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಜೀವರು ಶಬ್ದಾದಿಗಳನ್ನು ಕೇಳಿದರೆ, ಆ ಶಬ್ದಾದಿಗಳಲ್ಲಿ, ಆ ಶಬ್ದಗಳನ್ನು ಕೇಳತಕ್ಕ ಕರ್ಣಗೋಳದಲ್ಲಿ, ತದ್ಗತ ಕರ್ಣೇಂದ್ರಿಯಗಳಲ್ಲಿ. ಕರ್ಣಾಭಿಮಾನಿದೇವತೆಯಾದ ದಾಸಪ್ರಾಣನಾದ ಮರುತ್ಪ್ರವಿಷ್ಟ ಪ್ರಾಣನಲ್ಲಿ, ದಾವ ದಾವ ಪದಾರ್ಥಗಳನ್ನು ನೋಡಿದರೆ, ಆಯಾಯಾ ಪದಾರ್ಥಗಳಲ್ಲಿ. ನೋಡತಕ್ಕ ನೇತ್ರಗೋಳಕದಲ್ಲಿ, ತದ್ಗತ ನೇತ್ರೇಂದ್ರಿಯದಲ್ಲಿ, ನೇತ್ರಾಭಿಮಾನಿ ಸೂರ್ಯನಲ್ಲಿ. ನೋಡಿದ ಪದಾರ್ಥಾಭಿಮಾನಿಯಲ್ಲಿ, ಮನಸ್ಸಿನಿಂದ ಬೇಡಿದರೆ, ಮನೋಗೋಳಕದಲ್ಲಿ, ತದ್ಗತ ಮನ ಇಂದ್ರಿಯದಲ್ಲಿ ತದ್ಗತ ಮನೋಭಿಮಾನಿಯಲ್ಲಿ ಒಂದು ಪದಾರ್ಥವನ್ನು ಕೈಯಿಂದ ನೀಡಿ ಕೊಟ್ಟರೆ, ಹಾಗೆ ಕೊಟ್ಟ ಪದಾರ್ಥದಲ್ಲಿ ಪದಾರ್ಥಾಭಿಮಾನಿಯಲ್ಲಿ, ಹಸ್ತಗೋಳಕದಲ್ಲಿ ತದ್ಗತ ಹಸ್ತೇಂದ್ರಿಯದಲ್ಲಿ, ತದಭಿಮಾನಿಯಾದ ದಕ್ಷನಲ್ಲಿ, ಇದೇಪ್ರಕಾರ ತಾನು ಹಸ್ತನೀಡಿ ತೋಗೋಂಬೋದರಲ್ಲಿ, ಗಮನಾಗಮನಾದಿಗಳು ಮಾಡಿದರೆ, ಹೆಜ್ಜೆ ಹೆಜ್ಜೆ ಇಡೋ ಭೂಮಿಯಲ್ಲಿ ತದಭಿಮಾನಿಯಲ್ಲಿ, ಪಾದಗೋಳಕದಲ್ಲಿ, ತದ್ಗತ ಪಾದೇಂದ್ರಿಯದಲ್ಲಿ, ಪಾದಾಭಿಮಾನಿ ಜಯಂತನಲ್ಲಿ, ಮಾತುಗಳು, ತಥಾ ಭಗವನ್ನಾಮಕೀರ್ತನೆಗಳಲ್ಲಿ, ಆಡತಕ್ಕ ಮುಖದಲ್ಲಿ, ತದ್ಗತ ಮುಖಗೋಳಕದಲ್ಲಿ, ತದಭಿಮಾನಿ ಅಗ್ನಿಯಲ್ಲಿ- ಈ ಪ್ರಕಾರ ಸರ್ವಕ್ರಿಯೆಗಳಲ್ಲಿ, ಸರ್ವೇಂದ್ರಿಯಗೋಳಕದಲ್ಲಿ ತದ್ಗತ ಇಂದ್ರಿಯಗಳಲ್ಲಿ, ತದಭಿಮಾನಿದೇವತೆಗಳಲ್ಲಿ ಅಂತರ್ಗತನಾಗಿ ಇದ್ದಾನೆ, ಈ ಪ್ರಕಾರ ಅನುಸಂಧಾನಯುಕ್ತರಾಗಿ ಸರ್ವೇಂದ್ರಿಯ ವ್ಯಾಪಾ.

ರಗಳು ಶ್ರೀಪರಮಾತ್ಮ ಮಾಡಿಸತಾ ಇದ್ದಾನೆ ಎಂತ ತಿಳಿದವರಿಗೇ ಅತ್ಯಂತವಾಗಿ ಅಂಥಾ ಅಧಿಕಾರಿಯು ತನ್ನವನೆಂದು ತಿಳಿದವನು ಮತ್ತು ಹೀಗೆ ತಿಳಿದ ರಮಾಬ್ರಹ್ಮಾದಿಗಳಿಗಿಂತಲೂ ವಿಶೇಷವಾಗಿ ಸರ್ವವೂ ಶ್ರೀ ಪರಮಾತ್ಮ ತಿಳಿದವನು, ಬ್ರಹ್ಮಾಂಡ ಪಿಂಡಾಂಡ ಇನ್ನೂ ಬಹಿರಾವ್ಯಾಕೃತಾಕಾಶ, ಸ್ವರಮಣಪ್ರದೇಶ (ಸ್ವಾಖ್ಯಪ್ರದೇಶ) ಇವುಗಳಲ್ಲಿ ವಿಚಾರಮಾಡಿದರೆ ಪರಮಾತ್ಮಗೆ ಸರಿಯಾರೂ ಇಲ್ಲ. ಸಮಾನವಾದವರು ದಾರೂನೂ ಇಲ್ಲ, ಶ್ರೀ ಪರಮಾತ್ಮನಾದರೋ, ಅಹಂ ಮಮತಾಯುಕ್ತರಾಗಿ ಬಾಹ್ಯಭಕ್ತಿ ಮಾಡಿ ಪ್ರತಿಷ್ಠಾಸಂಪಾದಿತರಾದ ಕ್ಷುದ್ರಮನಸ್ಸುಳ್ಳ ಮನುಷ್ಯರು ಮಾಡತಕ್ಕ ಭಕ್ತಿ, ವಿಶ್ವಾಸ, ಪೂಜಾದಿಗಳನ್ನು ಅಂಗೀಕರಿಸುವುದಿಲ್ಲ, ಸ್ವಸಾಮರ್ಥ್ಯದಿಂದ ಇರತಕ್ಕವ. ಭೂತಭವಿಷ್ಯದ್ವರ್ತಮಾನ ಕಾಲಕ್ಕೂ ಅನಂತಾನಂತ ಬ್ರಹ್ಮಾಂಡಗಳಿಗೂ ಈಶನಾದವ. ಇಂತಹ ಪರಮಾತ್ಮ ಒಬ್ಬನೇ ಹೊರತು ಬೇರೆ ಇನ್ನೊಬ್ಬರಿಲ್ಲ ಎಂತ ತಾತ್ಪರ್ಯ.

ಕರ್ಮೇಂದ್ರಿಯ, ಜ್ಞಾನೇಂದ್ರಿಯಗಳ ಸರ್ವವ್ಯಾಪಾರಗಳಲ್ಲಿ ಶ್ರೀ ಪರಮಾತ್ಮ ಆಯಾ ಇಂದ್ರಿಯಗೋಳಕಗಳಲ್ಲಿಯೂ, ಆಯಾ ಇಂದ್ರಿಯಗಳಲ್ಲಿಯೂ, ತದ್ಗತ ಅಭಿಮಾನಿದೇವತೆಗಳಲ್ಲಿಯೂ, ಇಂದ್ರಿಯ ವ್ಯಾಪಾರ ನಡೆಯುವ ಪದಾರ್ಥಗಳಲ್ಲಿಯೂ ಇರುತ್ತಾನೆ ಎಂತ ಅನುಸಂಧಾನ ಮಾಡುವಂಥಾವರ ತನ್ನವರೆಂದು ತಿಳಿಯುವನು. ಇಂತಹವರೇ ಅಂತರಂಗ ಭಕ್ತರು. ಪ್ರತಿಷ್ಠಾಸಂಪಾದಿಸೋ ನಿಮಿತ್ತ ಪರಮಾತ್ಮನಲ್ಲಿ ಭಕ್ತಿವಿಶ್ವಾಸಾದಿಗಳು ಮಾಡಿದ ಸರಿಸಮಾನಸ್ಥರು, ಶ್ರೇಷ್ಠರಾದವರು ಎಲ್ಲಿಯೂ ಇಲ್ಲ. ಈ ಪರಮಾತ್ಮ ಒಬ್ಬನೇ ಸರ್ವವ್ಯಾಪಕನಾಗಿ ಇರುತ್ತಾನೇ ಹೊರತು. ಬೇರೊಬ್ಬರಿಗೆ ಈ ಸಾಮರ್ಥ್ಯ ಇಲ್ಲ ಎಂತ ತಾತ್ಪರ್ಯ, ॥೨೦॥

## (೨) "ಭಾವಪ್ರಕಾಶಿಕೆ"— ವ್ಯಾಖ್ಯಾನ :—

ಶ್ರೀ ಪರಮಾತ್ಮನ ಮಹಿಮೆಯನ್ನು ಶ್ರವಣ ಮಾಡುವವರು ಯಾವ ಸ್ಥಳದಲ್ಲಿ ಕೂತು, ಶ್ರವಣ ಮಾಡಿದರೂ, ಅಲ್ಲಿ ಶ್ರೀ ಪರಮಾತ್ಮನು

ಶ್ರೋತೃಗಳಲ್ಲಿ ಸನ್ನಿಹಿತನಾಗಿದ್ದು, ಶ್ರವಣ ಮಾಡುತ್ತಿರುವನು. ದೃಢವಾದ ಭಕ್ತಿಯಿಂದ ಪರಮಾತ್ಮನನ್ನೇ ನಂಬಿ ಶ್ರವಣ ಮಾಡುತ್ತಿರುವವರಿಗೆ ಅಲ್ಲಿಯೇ ಪ್ರಸನ್ನನಾಗುವನು. ಜನಕರಾಜನು ಭಾಗವತ ಸಪ್ತಾಹ ಶ್ರವಣ ಮಾಡುವುದಕ್ಕಾಗಿ ದಿವ್ಯವಾದ ಚಪ್ಪರವನ್ನು ಗಂಗಾ ತೀರದಲ್ಲಿ ರಚಿಸಿ ತಾನು ಏಕಾಗ್ರಚಿತ್ತನಾಗಿ ನಿಂತು ಶ್ರವಣ ಮಾಡುತ್ತಿದ್ದನು. ಚಪ್ಪರದಲ್ಲಿ ಸಹಸ್ರಾರು ಮಂದಿ ಶೋತೃಗಳು ನೆರೆದಿದ್ದರು. ಸನತ್ಕುಮಾರರು ಪುರಾಣವನ್ನು ಹೇಳುತ್ತಿದ್ದರು. ಈ ಶ್ರೋತೃಗಳ ಧಾರ್ಢ್ಯವನ್ನು ಪರೀಕ್ಷಿಸುವುದ ಶ್ರೀಪರಮಾತ್ಮನು ಇದ್ದಕಿದ್ದಹಾಗೆಯೇ ಆ ಚಪ್ಪರಕ್ಕೆ ಅಗ್ನಿಸ್ಪರ್ಶಮಾಡಿಸಿ ಬಿಟ್ಟನು. ತಕ್ಷಣದಲ್ಲಿ ಶ್ರವಣ ಮಾಡುತ್ತಿದ್ದವರೆಲ್ಲರೂ ಎದ್ದು ಗಾಬರಿ ಪಡುತ್ತಾ ದಿಕ್ಕು ದಿಕ್ಕುಗಳಿಗೆ ಓಡಿದರು. ಸನಕಾದಿಗಳು ಶ್ರವಣ ಮಾಡುತ್ತಿದ್ದ ಜನಕರಾಜ ಇಬ್ಬರೇ ಉಳಿದರು. ಜನರು ರಾಜನನ್ನು ಕುರಿತು, "ರಾಜನೇ, ಅಗ್ನಿಯು ಚಪ್ಪರವನ್ನು ಸುಡುತ್ತಿರುವುದು. ಏಳು"–ಎಂದು ಬಹು ಪರಿ ಹೇಳಿದರು. ಸನತ್ಕುಮಾರರನ್ನು ಪುರಾಣ ಸಾಕುಮಾಡಿರೆಂದು ಕೇಳಿಕೊಂಡರು. ಇಬ್ಬರೂ ಈ ಮಾತನ್ನು ಲಕ್ಷ್ಯದಲ್ಲಿ ತಾರದೇ ಕೂತೇ ಇದ್ದರು. ಜನಕರಾಜನು ಕದಲದೇ ಕೇಳುತ್ತಲೇ ಇದ್ದನು. ದಂದಹ್ಯಮಾನನಾಗಿ ಮಂಟಪವೆಲ್ಲವೂ ಉರಿದು ಹೋಯಿತು. ಸನಕಾದಿಗಳೂ ರಾಜನೂ ಸಹ ದಗ್ಧರಾದರೆಂದು ಜನರು ಭಾವಿಸಿದ್ದರು. ಕೊಂಚ ಹೊತ್ತಿಗೆ ಅಗ್ನಿಯು ಶಾಂತವಾಯಿತು. ಆಗ ಎಲ್ಲರೂ ಬಂದು ನೋಡಲು ಎಥಾಪ್ರಕಾರ ಪುರಾಣ ನಡೆಯುತ್ತಲೇ ಇತ್ತು. ಜನಕರಾಜನು ಪೂರ್ವದಂತೆ ಶ್ರವಣ ಮಾಡುತ್ತಾ ನಿಂತಿದ್ದುದನ್ನು ನೋಡಿ ಜನರೆಲ್ಲರೂ ಪಶ್ಚಾತ್ತಪ್ತರಾಗಿ ನಾವು ಅನ್ಯಾಯವಾಗಿ ಪುರಾಣವನ್ನು ಬಿಟ್ಟು ಓಡಿದೆವು. ಎಲ್ಲಿ ಕಥಾಶ್ರವಣವೋ ಅಲ್ಲಿ ಪರಮಾತ್ಮನು ಇದ್ದೇ ಇರುವನು. ಆ ಪರಮಾತ್ಮನ ಸನ್ನಿಧಾನದಲ್ಲಿ ಅಗ್ನಿ ಏನು ಮಾಡುವುದು? ನಮಗೆ ಇಷ್ಟೂ ತೋರದೆ ಭ್ರಾಂತರಾದೆವು. ರಾಜನು ದೃಢಮನಸ್ಕನು. ಅವನನ್ನು ಅಗ್ನಿಯು ಏನೂ ಮಾಡಲಿಲ್ಲ. ಆದ್ದರಿಂದ ಮನೋದಾರ್ಢ್ಯವೇ ಕಾರಣವೆಂದು ನಿಶ್ಚಯಿಸಿದರೆಂದು ಉಪಪುರಾಣ

ಗಳಲ್ಲಿ ಒಂದಾದ ಬ್ರಹ್ಮವೈವರ್ತವೆಂಬ ಪುರಾಣದಲ್ಲಿ ಈ ಕಥೆಯನ್ನು ಹೇಳಿರುವರು. ಜನಕರಾಜನು ಅಲ್ಲಿಯೇ ಸಾಕ್ಷಾತ್ತಾಗಿ ಪರಮಾತ್ಮನನ್ನು ನೋಡಿರುವನು. ಮತ್ತು ಎಲ್ಲಿ ನೋಡಿದರಲ್ಲಿ ಇರುವನು. ಶುಕಾಚಾರ್ಯರು ಮೊದಲಾದ ಅವಧೂತರು ಯಾವ ಸ್ಥಳದಲ್ಲಿ ಯಾವ ವಸ್ತುಗಳನ್ನು ನೋಡಿದರೂ ಅವುಗಳೆಲ್ಲವೂ ಭಗವತ್ಸ್ವರೂಪವನ್ನಾಗಿ ಕಾಣುತ್ತಿದ್ದರು. ಆದ್ದರಿಂದ ಎಲ್ಲಿ ನೋಡಿದರೂ ಅಲ್ಲಿ ಇರುವನೆಂದು ಹೇಳಿರುವರು. ಎಲ್ಲಿ ಬೇಡಿದರಲ್ಲಿ ಇರುತಿಹನು. ಅಂದರೆ, ಬಾಣಾಸುರನು ಈಶ್ವರನನ್ನೂ. ರಾವಣನು ಬ್ರಹ್ಮದೇವರನ್ನೂ. ಮತ್ತೆ ಕೆಲವರು ಪಾರ್ವತಿ ಮೊದಲಾದವರನ್ನೂ ಆರಾಧಿಸಿ ವರಗಳನ್ನು ಬೇಡಲು ಶ್ರೀಪರಮಾತ್ಮನು ಬ್ರಹ್ಮಾದಿದೇವತೆಗಳಲ್ಲಿ ತದ್ರೂಪದಿಂದ ಪ್ರಸನ್ನನಾಗಿ ವರವನ್ನು ಕೊಟ್ಟಿರುವನು. ಬ್ರಹ್ಮಾದಿಗಳೇ ವರವನ್ನು ಕೊಟ್ಟುದುದಾಗಿ ಪುರಾಣಗಳಲ್ಲಿ ಹೇಳಲ್ಪಟ್ಟಿರಲು ಪರಮಾತ್ಮನೇ –ತದ್ರೂಪಿಯಾಗಿ ಬಂದನೆಂಬ ಕಲ್ಪನೆಗೆ ಆಧಾರವೇನು ?

ಆದೇನೆಂದರೆ— **"ತೇನವಿನಾ ತೃಣಮಪಿ ನ ಚಲತಿ"** —ಎಂಬ ಪ್ರಮಾಣದಲ್ಲಿ ಪರಮಾತ್ಮನ ಹೊರತು ಬ್ರಹ್ಮಾದಿಗಳಿಗೆ ತೃಣಚಲನಾದಿ ಶಕ್ತಿಯೂ ಕೂಡ ಇರುವುದಿಲ್ಲವೆಂದು ಹೇಳಲ್ಪಟ್ಟಿರುವುದು. ಇದೇ ಆಧಾರದ ಮೇಲೆ ಪರಮಾತ್ಮನೇ ಅವರೊಳಗಿದ್ದು ವರವನ್ನಿತ್ತನೆಂದು ಸಿದ್ಧವಾಯಿತು. ಭಕ್ತರಿಗೆ ಎಲ್ಲಿ ಬೇಡಿದರೆ ಅಲ್ಲಿಯೇ ಪ್ರಸನ್ನನಾಗುವನೆಂದು ಅರ್ಥವೂ ಉಂಟು. ಧ್ರುವನು ಅಡವಿಯಲ್ಲಿ ತಪಸ್ಸು ಮಾಡಿ ಬೇಡಲು ಅವನಿಗೆ ಅಲ್ಲಿಯೇ ಗೋಚರನಾದನು. ಕೂರ್ಮದಾಸನು ಕುಂಟನಾದುದರಿಂದ ಆಷಾಢ ಶುದ್ಧ ಏಕಾದಶೀ ದಿವಸ ಪಾಂಡುರಂಗನನ್ನು ನೋಡದೆ ಹೋದೆನಲ್ಲಾ ಎಂದು ವ್ಯಸನಪಡುವಾಗ ಪಾಂಡುರಂಗನು ಅವನಿಗಾಗಿ ಅವನಿದ್ದಲ್ಲಿಯೇ ಬಂದು ನಿಂತನು. ಇಂತಹುದೆಷ್ಟೋ ಉದಾಹರಣೆಗಳು ಇರುವುವು.

ಜನರು ಯಾವ ಸ್ಥಳದಲ್ಲಿಯಾದರೂ ಭಕ್ತಿಯಿಂದ ಪತ್ರವನಾಗಲೀ, ಪುಷ್ಪವನ್ನಾಗಲೀ. ಫಲವನ್ನಾಗಲೀ. ಉದಕವನ್ನಾಗಲೀ ಕೊಟ್ಟರೆ. ಅವುಗಳನ್ನು ಅಲ್ಲಿಯೇ ಸ್ವೀಕರಿಸುವನು. ಎಲ್ಲಿ ನೋಡಿದರಲ್ಲಿ ಇರುವನು.

ಅಂದರೆ. ಭಾಗವತ ದಶಮಸ್ಕಂಧದಲ್ಲಿ— **"ಮರ್ತ್ಯೋ್ಽ ಮೃತ್ಯುವ್ಯಾಳ ಭೀತಃ ಪಲಾಯನ್ ಲೋಕಾನ್ಸರ್ವಾನ್ನಿರ್ಭಯಂ ನಾಧ್ಯಗಚ್ಛನ್ । ತ್ವತ್ಪಾದಾಬ್ಜಂ ಪ್ರಾಪ್ಯ ಯದೃಚ್ಛಯಾದ್ಯ ಸ್ವಸ್ಥಃಸೇತೆ ಮೃತ್ಯುರಸ್ಮಾದಪೈತಿ ॥"**

ಅಂದರೆ. ಮನುಷ್ಯನೇ ಮೃತ್ಯುವೆಂಬ ಸರ್ಪಕ್ಕೆ ಹೆದರಿ, ಯದೃಚ್ಛೆಯಾ ನಿನ್ನ ಪಾದಾರವಿಂದವನ್ನು ಸೇರಿದರೆ, ಆಗ ಮೃತ್ಯುವು ಅವನನ್ನು ಬಿಡುವುದು. ಆಗ ಮನುಷ್ಯನು ನಿರ್ಭೀತಿಯಿಂದ ಸ್ವಸ್ಥವಾಗಿ ಮಲಗುವನು. ಹೀಗೆ ಮರಣಕ್ಕೆ ಭಯಪಟ್ಟು ಮನುಷ್ಯನು ಎಲ್ಲಿ ಓಡಿದರೂ ಮೃತ್ಯರೂಪಿಯಾಗಿ ಅಲ್ಲಲ್ಲಿ ಪರಮಾತ್ಮನು ಇದ್ದೇ ಇರುವನು. ಪರಮಾತ್ಮನನ್ನೇ ನಂಬಿದರೆ ಭಯವು ನಿವೃತ್ತಿಯಾಗುವುದು. "ಎಲ್ಲಿ ಆಡಿದರಲ್ಲಿ ಇರುತಿಹನು. "ಆಡಿದರೆ ಅಂದರೆ, "ನುಡಿದರೆ" ಎಂದು ಒಂದರ್ಥವು. "ಆಟವಾಡುವುದು" —ಎಂಬ ಮತ್ತೊಂದರ್ಥವೂ ಆಗುವುದು. ಇಲ್ಲಿ ಎರಡು ಅರ್ಥಗಳೂ ಕೂಡುವುವು. ಸಣ್ಣ ಸಣ್ಣ ಮಕ್ಕಳು ಮುದ್ದು ಮುದ್ದಾಗಿ ಮಾತನಾಡುತ್ತಾ ಆಟವನ್ನಾಡುತ್ತಿದ್ದರೆ, ಆ ಮಕ್ಕಳಲ್ಲಿ ಸನ್ನಿಹಿತನಾಗಿದ್ದು, ಆಟವಾಡುತ್ತಿರುವನು. ಸಖೂಬಾಯಿ ಎಂಬಾಕೆಯು ಸಣ್ಣ ವಯಸ್ಸಿನಲ್ಲಿ ಬೊಂಬೆ ಆಟವನ್ನಾಡುವಾಗ ಪಾಂಡುರಂಗನ ಪ್ರತಿಮೆಯನ್ನು ಇಟ್ಟುಕೊಂಡು ಅವನನ್ನು ಭಜಿಸುವುದೇ ಆಟವಾಗಿ ಮಾಡಿಕೊಂಡಿರಲು, ಆಕೆಯ ಇದಿರಿನಲ್ಲಿ ಪಾಂಡುರಂಗನೇ ನಿಂತಂತೆ ಗೋಚರನಾಗುತ್ತಿದ್ದನು. "ಆಡಿದರೆ" ಎಂಬ ಪದಕ್ಕೆ "ನುಡಿದರೆ" ಎಂಬರ್ಥದಲ್ಲಿ ಪ್ರಹ್ಲಾದನು ತನ್ನ ತಂದೆಯನ್ನು ಕುರಿತು ಈ ಸ್ತಂಭದಲ್ಲಿಯೂ ಪರಮಾತ್ಮನು ಇರುವನು ಎಂದು ನುಡಿಯಲು, **"ಸತ್ಯಂ ವಿಧಾತುಂ ನಿಜಭೃತ್ಯ ಭಾಷಿತಮ್"** —ನಿಜಭೃತ್ಯನಾದ ಪ್ರಹ್ಲಾದನಾಡಿದ ವಾಕ್ಯವನ್ನು ಸತ್ಯಮಾಡುವುದಕ್ಕಾಗಿ ಸ್ತಂಭದಿಂದಲೇ ಆವಿರ್ಭೂತನಾದನು. "ಬಲ್ಲಿದರಿಗತಿಬಲ್ಲಿದನು" –ವೇದಾಭಿಮಾನಿಯಾದ ರಮಾದೇವಿ, ಬ್ರಹ್ಮಾದಿ ದೇವತೆಗಳು ಬಲ್ಲವರೆಂದು ಹೆಸರು. ಆದರೂ ಭಗವದ್ವಿಷಯವನ್ನು ಸಾಕಲ್ಯೇನ ಯಾರೂ ಅರಿಯರು. ಪರಮಾತ್ಮನಾದರೋ ಇವರೆಲ್ಲರ ಸ್ವರೂಪ

ವನ್ನು ಚೆನ್ನಾಗಿ ಬಲ್ಲವನು. ಈ ಜಗತ್ತಿನಲ್ಲಿ ಎಲ್ಲಿ ನೋಡಿದರೂ ಅವನಿಗೆ ಸಮರು ಮತ್ತಾರೂ ಇಲ್ಲವು. ನಾನು ನನ್ನದು ಎಂಬ ಅಹಂಕಾರದಿಂದ ಡಂಭಾಚಾರನಾದವರು ಮಾಡುವ ಪೂಜಾದಿಗಳನ್ನು ಕೈಗೊಳ್ಳನು. ಜಗತ್ತಿನಲ್ಲಿ ಅಸದೃಶ ಜಟ್ಟಿ ಎಂದೆನಿಸಿಕೊಳ್ಳುವನು ॥೨೧॥

**(೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :—**

ದೇಶಕಾಲನಿಯಮನೋಡದೇ —**"ಓಂ ಯತ್ರೈಕಾಗ್ರತಾವಿಶೇಷಾನ್ ಓಂ ॥" —"ಎಂಬ ಬ್ರಹ್ಮಸೂತ್ರಾನುಸಾರ** ತನ್ನ ಮನಸ್ಸಿಗೆ ಎಲ್ಲಿ ಪ್ರಶಸ್ಥ ತೋರುತ್ತದೋ ಅಲ್ಲಿ ಉಪಾಸನಾ ಮಾಡಬಹುದೆಂದೂನೂ, ಚಿತ್ತಚಾಂಚಲ್ಯದಿಂದ ಮಾಡಿದಾಗ್ಗ್ಯೂ ನಿರರ್ಥಕವೆಂದೂನೂ ದಾಸಾರ್ಯರು ತಿಳಿಸುತ್ತಾರೆ— "ಎಲ್ಲಿ"— ಎಂಬ ಪದ್ಯದಿಂದ.

**ಉಕ್ತಂಚ ಸಪ್ತಮ ಭಾಗವತೇ— "ಆತ್ಮತ್ವಾತ್ಸರ್ವಭೂತಾನಾಮಿತಿ ॥"**

ಬಲ್ಲಿದರಿಗತಿಬಲ್ಲಿದನು = ಬಲ್ಲ ಬಲ್ಲಿಷ್ಠರಿಗೆ ಅತಿಬಲಿಷ್ಠನು.

**"ಸ ಕೇವಲಂ ಮೇ ಭವತಶ್ಚ ರಾಜನ್ ಸರ್ವೈ ಬಲಂ ಬಲೀನಾಂ ಚಾಪರೇಷಾಮಿತಿ ॥" —ಸಪ್ತಮ ಭಾಗವತೋಕ್ತೇಃ ॥ ॥೨೧॥**

**(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ—**
**(ಸಂಸ್ಕೃತಮೂಲ) :—**

ಎಲ್ಲಿ ಕೇಳಿದರೇತಿ ॥ ವಿಶೇಷೋ ರಸರಂಜನ್ಯಾಂ ಧ್ಯಾನರೀತ್ಯಾಂ ಪ್ರದರ್ಶಿತಃ ॥ ಬಲ್ಲಿದ = ಸನ್ನ್ಯಾಯ ಬಲಾಃ ॥ ಯಥೋಽಯುಕ್ತಂ, ಬಾಲ್ಯಂ, ಯುಕ್ತಿ ಸಹಾಯತೇತಿ ॥ ಬಲ್ಲಿದಾ = ಜ್ಞಾತಾ, ಖುಲ್ಲ = ದುಷ್ಟಃ ॥೨೧॥

**ಕನ್ನಡಾನುವಾದ :—**

"ಎಲ್ಲಿ ಕೇಳಿದರೆ" —ಎಂಬ ಶಬ್ದಾರ್ಥದ ವಿವರಣೆಯನ್ನು **ರಸರಂಜನಿ** ಯಲ್ಲಿ ಧ್ಯಾನಪದ್ಧತಿ ಪ್ರಕರಣದಲ್ಲ ತಿಳಿಸಿರುತ್ತಾರೆ. "ಬಲ್ಲಿದನು" = ಉತ್ತಮ ಯುಕ್ತಿಯ ಬಲವುಳ್ಳವರು. "ಯುಕ್ತಿ ಸಹಾಯವನ್ನು ಹೊಂದಿರುವ ಸ್ಥಿತಿಯು ಬಾಲ್ಯವು"—ಎಂದು ಪ್ರಮಾಣವಾಕ್ಯಗಳಿವೆ. ಬಲ್ಲಿದ = ಸರ್ವಜ್ಞ (ತಿಳಿದವನು) ಖುಲ್ಲ = ದುಷ್ಟಬುದ್ಧಿಯುಳ್ಳವರು ॥೨೧॥

**(ಆ) "ಗುರುಹೃದಯಪ್ರಕಾಶಿಕೆ" – ವ್ಯಾಖ್ಯಾನ :—**

"ಕ್ಷುಲ್ಲ" —ಎಂದರೆ ಕ್ಷುದ್ರ, ಅಧಮ, ಮಾನವರೊಲ್ಲ -ಎಂದರೆ, ಒಲಿಯದಿರುವ. ಅಸದೃಶಸಮರ್ಥನಾದ ಜಗತ್ತಿಗತಿಬಲಿಷ್ಟರಿಗೂ ಬಲಿಷ್ಠನಾದ ದೇವರು ನೋಡಿದಲ್ಲೂ, ಕೇಳಿದಲ್ಲೂ, ನೀಡಿದಲ್ಲೂ, ಎಂದರೆ ಕೊಟ್ಟಲ್ಲಿಯೂ, ಓಡಿದಲ್ಲೂ, ಆಡಿದಲ್ಲೂ ಸಹ ವ್ಯಾಪ್ತನು. ಇದರಿಂದ ಉಕ್ತವ್ಯಾಪ್ತಿ ವಿವರಿಸಿತು ॥೨೧॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಸರ್ವತಂತ್ರಸ್ವತಂತ್ರನಾದ ಶ್ರೀಹರಿಯು ಸರ್ವ ದೇಶ, ಕಾಲ, ಅಧಿಷ್ಠಾನಗಳಲ್ಲಿ ವ್ಯಾಪ್ತನಾಗಿ ಸರ್ವ ಕಾರ್ಯಕಲಾಪಗಳನ್ನೂ ತಾನೇ ನಿಯಾಮಕನಾಗಿ ನಡೆಯಿಸುತ್ತಿರುವನು ಎಂಬ ತತ್ತ್ವಾರ್ಥವನ್ನು ದಾಸರಾಯರು ಈ ಪದ್ಯದಲ್ಲಿ ಮನಮುಟ್ಟುವಂತೆ ವಿವರಿಸುತ್ತಾರೆ.

"ಕೇಳುವುದು" -ಎಂಬುದು ಶ್ರವಣೇಂದ್ರಿಯದ ಕಾರ್ಯ. ಆ ವ್ಯಾಪಾರಕ್ಕೆ "ಶಬ್ದ"ವೇ ಮಾಧ್ಯಮ. ಶಬ್ದವು ಆಕಾಶತತ್ತ್ವದ ತನ್ಮಾತ್ರಾ ಗುಣ ವಿಶೇಷವು. ಇಲ್ಲಿ ಶ್ರೀಹರಿಯ ವ್ಯಾಪ್ತಿಯನ್ನು ಅಧಿಷ್ಠಾನ, ಅದರ ಗುಣ, ತದಭಿಮಾನಿ ದೇವತಾ, ಇಂದ್ರಿಯ ಮತ್ತು ಗೋಳಕ, ಇಂದ್ರಿಯಾಭಿಮಾನಿ ದೇವತಾ, ಇವರುಗಳಿಗೆ ನಿಯಾಮಕರಾದ ಶ್ರೀ ವಾಯು

ದೇವರ ಅಂತರ್ಗತರೂಪ, ವಾಯುಗೋಳದ ದ್ವಾರಾ, ಆಯಾಯಾ ವಸ್ತು ಮತ್ತು ತದಭಿಮಾನಿ ದೇವಾಂತರ್ಗತ ಭಗವದ್ರೂಪ ಮತ್ತು ಯಾರ ಅಧಿಷ್ಠಾನದಲ್ಲಿ ಆ ಕ್ರಿಯೆ ನಡೆಯುತ್ತಿದೆಯೋ ಅಂತಹ ಜೀವನ ಅಂತರ್ಯಾಮಿ ಬಿಂಬರೂಪ ಈ ಕ್ರಮದಲ್ಲಿ ಚಿಂತಿಸಿ ಧ್ಯಾನಿಸಬೇಕು. ದೃಷ್ಟಾಂತವಾಗಿ ಎಲ್ಲೆಲ್ಲಿ ಭಗವತ್ಕಥಾಶ್ರವಣ ನಡೆಯುತ್ತದೆಯೋ, ಆ ದೇಶದಲ್ಲಿ, ಆ ಕಾಲದಲ್ಲಿ, ವಕ್ತೃವಿನಲ್ಲಿ. ಶ್ರೋತೃವರ್ಗದಲ್ಲಿ ಸನ್ನಿಹಿತನಾಗಿ ವ್ಯಾಪ್ತರೂಪದಿಂದ ಶ್ರೀಪರಮಾತ್ಮನೇ ಇದ್ದು. ವಕ್ತೃಗಳಿಂದ ಹೇಳಿಸಿ, ಶ್ರೋತೃಗಳಿಂದ ಕೇಳಿಸುತ್ತಾನೆ. ಆಕಾಶತತ್ವಕ್ಕೆ ಅಭಿಮಾನಿ ಗಣಪತಿಯು, ಆಕಾಶವೆಂಬ ತತ್ವಕ್ಕೆ ನಿಯಾಮಕನಾಗಿ, ಗಣಪತಿಯ ಅಧಿಷ್ಠಾನದಲ್ಲಿ ವಿಶ್ವಂಭರರೂಪದಿಂದ ಇದ್ದು. ಆಕಾಶದಿಂದ ಉತ್ಪತ್ತಿಯಾಗುವ "ಶಬ್ದ" ಎಂಬ ತನ್ಮಾತ್ರಾವಿಶೇಷದಲ್ಲಿ ಅಧಿಷ್ಟಿತನಾಗಿದ್ದು, ಶಬ್ದಾಭಿಮಾನಿ ಪಂಚಪ್ರಾಣನಲ್ಲಿ ಅಂತರ್ಯಾಮಿರೂಪತ್ವೇನ ವ್ಯಾಪಾರಮಾಡಿ, ಶ್ರೋತೃಗಳ ಕರ್ಣೇಂದ್ರಿಯ ಗೋಳದ ಮತ್ತು ತದ್ಗತ ಕರ್ಣೇಂದ್ರಿಯದಲ್ಲಿ ತಾನಿದ್ದು, ಕರ್ಣಾಭಿಮಾನಿ ದಿಗ್ದೇವತೆಗಳಲ್ಲಿ ತಾನು ನಿಯಾಮಕನಾಗಿ, ಶ್ರೀ ವಾಯುದೇವರದ್ವಾರಾ, ಶಬ್ದ, ಆದರಿಂದ ವಾಕ್ಯಸಮೂಹ, ಅರ್ಥಾನ್ವಯಗಳನ್ನು ಶ್ರೋತೃಗಳಿಗೆ ತಾನೇ ತಿಳಿಸುತ್ತಾ, ಅವರ ಬಿಂಬರೂಪೀ ಶ್ರೀಪರಮಾತ್ಮನು ಆ ಶಬ್ದಜನ್ಯವಾದ ಅನುಭವವನ್ನು ಶ್ರೋತೃವರ್ಗದವರಿಗೆ ತಂದುಕೊಡುವನು. ಇವಷ್ಟು ಅನ್ಯೋನ್ಯ ಸಂಬಂಧವಿರುವ ಕ್ರಿಯಾಸರಣಿ. ಇದೆಲ್ಲವೂ ಶ್ರೀಹರಿಯ ವ್ಯಾಪಾರವೇ ಹೊರತು ಅನ್ಯಥಾ ಅಲ್ಲ. ಅಂತೆಯೇ ಗ್ರಂಥದರ್ಶನ, ಗುರುಹಿರಿಯರ ದರ್ಶನ, ಭಗವನ್ಮೂರ್ತಿದರ್ಶನ ಇತ್ಯಾದಿ ವ್ಯಾಪಾರಗಳು "ನೋಡುವಿಕೆ" -ಎಂಬ ಕ್ರಿಯಾವಿಶೇಷವು, ನೋಡುವವರಲ್ಲಿ, ನೋಡಿಸಿಕೊಂಡವರಲ್ಲಿ ಆ ದರ್ಶನಾಖ್ಯವಾದ ಕಾಲ, ದೇಶ ಮತ್ತು ಸನ್ನಿವೇಶಗಳಲ್ಲಿ ಶ್ರೀಹರಿಯೇ ಪೂರ್ಣರೂಪದಿಂದ ವ್ಯಾಪ್ತನಾಗಿದ್ದು ಆ ಕ್ರಿಯಾವಿಶೇಷವನ್ನು ತಾನೇ ಮಾಡಿ ಜೀವರ ದ್ವಾರಾ ಮಾಡಿಸುವನು. ನೋಡುವುದು. ನೇತ್ರೇಂದ್ರಿಯ ವ್ಯಾಪಾರ, ತತ್ಸಂಬಂಧವಾದ ತತ್ವ ತೇಜಸ್ಸು ಅಥವಾ ಪ್ರಕಾಶ. ಇದರ ತನ್ಮಾತ್ರಾಗುಣ "ರೂಪ". ತೇಜಸ್ಸಿನ ಗುಣವಾದ ರೂಪವೆಂಬ ವಿಷಯವು ನೇತ್ರೇಂದ್ರಿಯಕ್ಕೆ

ಸನ್ನಿಕರ್ಷವಾದಕೂಡಲೇ, ದರ್ಶನದ್ವಾರಾ ನೋಡತಕ್ಕ ವಸ್ತುವಿನ ಜ್ಞಾನವು ನೇತ್ರೇಂದ್ರಿಯದ ದ್ವಾರಾ ಆಗುತ್ತದೆ. ಈ ಕ್ರಿಯೆಯು ನಡೆಯುತ್ತಿರುವಾಗ ಶ್ರೀಪರಮಾತ್ಮನು ತೇಜೋ ತತ್ವಾಭಿಮಾನಿಯಾದ ಅಗ್ನಿಯಲ್ಲಿ ಅಂತರ್ಯಾಮಿಯಾಗಿದ್ದು, ತತ್ಸಂಬಂಧವಾದ ರೂಪಕ್ಕೆ ಅಭಿಮಾನಿಯಾದ ಪಂಚಪ್ರಾಣದಲ್ಲಿದ್ದು, ನೇತ್ರಗೋಳದ (ಇಂದ್ರಿಯಸ್ಥಾನ) ಮತ್ತು ತದ್ಗತ ನೇತ್ರೇಂದ್ರಿಯಾಭಿಮಾನಿ ಸೂರ್ಯನಲ್ಲಿ ನಿಯಾಮಕನಾಗಿದ್ದು, ನೋಡತಕ್ಕ ಪದಾರ್ಥಗಳಲ್ಲಿ ವ್ಯಾಪ್ತನಾಗಿದ್ದು, ನೇತ್ರೇಂದ್ರಿಯದ್ವಾರಾ, ತದಭಿಮಾನಿ ದ್ವಾರಾ ಶ್ರೀ ವಾಯುದೇವರದ್ವಾರಾ ದರ್ಶಕನಾದ ಜೀವನ ಬಿಂಬರೂಪಿ ಶ್ರೀಹರಿಯು ಇಷ್ಟು ವ್ಯಾಪಾರಗಳನ್ನು ತಾನೇ ತನ್ನ ಭಗವದ್ರೂಪಗಳಿಂದ ಬಿಂಬಕ್ರಿಯಾದ್ವಾರಾ ಮಾಡಿ, ಜೀವನದ್ವಾರಾ ಮಾಡಿಸಿ, ದರ್ಶನಾಖ್ಯ ರೂಪವಾದ ಅನುಭವವನ್ನು ಆಯಾಯಾ ಜೀವರಿಗೆ ತಂದೀಯುವನು. ಹಾಗೆಯೇ ಒಂದು ಅಪೇಕ್ಷಿತ ವಸ್ತುವನ್ನು ಯಾಚಿಸುವುದಕ್ಕೆ "ಬೇಡುವುದು" ಎಂದು ಹೆಸರು. ಇದು ವಾಗ್ವ್ಯಾಪಾರವು. ನಾಲಿಗೆಯು ವಾಗಿಂದ್ರಿಯವು. ಕರ್ಮೇಂದ್ರಿಯವಾದ ನಾಲಿಗೆಯಲ್ಲಿ ಅಗ್ನಿ ಅಭಿಮಾನಿದೇವತಾ. ಅಗ್ನ್ಯಂತರ್ಗತ ಶ್ರೀ ಪರಶುರಾಮದೇವರು ಈ ವ್ಯಾಪಾರವನ್ನು ಮಾಡುವರು. ಯಾಚಕನ ವಾಗಿಂದ್ರಿಯದಲ್ಲಿ ವ್ಯಾಪ್ತನಾಗಿದ್ದು, ತದಭಿಮಾನಿ ಅಗ್ನಿಯಲ್ಲಿ ಅಂತರ್ಯಾಮಿ ರೂಪದಿಂದ, ವಾಕ್ಯರೂಪವಾದ ಕ್ರಿಯಾವಿಶೇಷವನ್ನು ತಾನೇ ನಡೆಯಿಸುತ್ತಾ, ಯಾಚಕನಲ್ಲಿದ್ದು ಬಿಂಬರೂಪೀ ಶ್ರೀಹರಿಯು ತಾನೇ ಬೇಡಿ, ಜೀವನದ್ವಾರಾ ಬೇಡಿಸುವನು. ಅಂತೆಯೇ "ನೀಡುವುದು" —ಅಂದರೆ ಕೊಡುವುದು ಹಸ್ತೇಂದ್ರಿಯದ ವ್ಯಾಪಾರ. ದಕ್ಷ ಪ್ರಜಾಪತಿ ಹಸ್ತಾಭಿಮಾನಿಯು. ಹಸ್ತಗೋಳಕ ತದ್ಗತ ಹಸ್ತೇಂದ್ರಿಯಗಳಲ್ಲಿ ತಾನು ವ್ಯಾಪ್ತರೂಪದಿಂದ ಇದ್ದು, ತದಭಿಮಾನಿದ್ವಾರಾ ದಾನ ಕೊಡುವ ಕ್ರಿಯಾಕಲಾಪಗಳನ್ನು ನಡೆಯಿಸುವನು. ಅವರಂತೆಯೇ "ಓಡುವುದು" —ಗಮನಾಗಮನರೂಪವಾದ ಸಂಚಾರಕ್ರಿಯಾ. ಪಾದಗಳು ಈ ಕ್ರಿಯೆಯನ್ನು ನಡೆಯಿಸುತ್ತವೆ. ಜಯಂತನು ಪಾದಾಭಿಮಾನಿ. ಇಲ್ಲಿಯೂ ಕ್ರಿಯಾಸರಣಿಯ ರೂಪದಲ್ಲಿ ಜಯಂತನ ಅಂತರ್ಯಾಮಿರೂಪದಿಂದ ಗಮನಾ

ಗಮನ ವ್ಯಾಪಾರಗಳನ್ನು ಮಾಡಿ ಮಾಡಿಸುವನು. ಏತಾದೃಶಮಹಿಮೋಪೇತನಾದ ಶ್ರೀ ಪರಮಾತ್ಮನು ಬಲಿಷ್ಠರಲ್ಲಿ ಬಲಾಢ್ಯನು. ಜಗತ್ತಿನಲ್ಲಿ ಎಲ್ಲೆಲ್ಲಿ ಅರಸಿದರೂ ಶ್ರೀಹರಿಗೆ ಸದೃಶರಾದವರು ಯಾರೂ ಇಲ್ಲವು. ಅಸದೃಶಮಹಿಮಾನು. ಅಪಾರ ಮಹಿಮಾಸಂಪನ್ನನು. ಇಂತಹ ಅಪ್ರತಿಮಲ್ಲನಾದ ಶ್ರೀ ಪರಮಾತ್ಮನು. ಅಹಂಕಾರ ಮಮಕಾರಗಳಿಂದ ಗ್ರಸ್ತರಾಗಿ ಅಹಂಕರ್ತೃತ್ವಭಾವನೆಯುಳ್ಳ ಕ್ಷುದ್ರ ಮನಸ್ಸಿನ ಮಾನವರು ಮಾಡುವ ಪೂಜೆ, ಸೇವಾದಿಗಳನ್ನು ಎಂದೆಂದಿಗೂ ಸ್ವೀಕರಿಸುವುದಿಲ್ಲ. ಅಹಂಕರ್ತೃತ್ವವನ್ನು ತೊರೆದು, ಕೇವಲ ದೀನರಾಗಿ. ಸಮಸ್ತ ಕಾರ್ಯಗಳಿಗೂ ಶ್ರೀಪರಮಾತ್ಮನೇ ಪರಮಮುಖ್ಯ ವೃತ್ತಿಯಿಂದ ನಿಯಾಮಕನು, ನಾನು ಅವನಿಂದ ನಿಯಮ್ಯನಾದವ– ಎಂಬ ಉತ್ತಮಾನುಸಂಧಾನವುಳ್ಳವರಿಗೆ ಮಾತ್ರ ಶ್ರೀಹರಿಯು ಲಭ್ಯನು ಎಂದು ತಾತ್ಪರ್ಯ ॥೨೧॥

## ಪದ್ಯ (೨೨)

**ಮೂಲ :—**

**ತಪ್ತಲೋಹವು ನೋಳ್ಪಜನರಿಗೆ ।**
**ಸಪ್ತಜಿಹ್ವನ ತೆರದಿ ತೋರ್ಪದು ।**
**ಲುಪ್ತಪಾವಕ ಲೋಹಕಾಂಬುದು ಪೂರ್ವದೋಪಾದಿ ॥**
**ಸಪ್ತವಾಹನ ನಿಖಿಳಜನರೊಳು ।**
**ವ್ಯಾಪ್ತನಾದುದರಿಂದ ಸರ್ವರು ।**
**ಆಪ್ತರಾಗಿಹರೆಲ್ಲ ಕಾಲದಿ ಹಿತವ ಕೈಕೊಂಡು॥ ॥೨೨॥**

**ಅವತರಣಿಕೆ :—**

ಒಂದು ಲೋಹದ ಗುಂಡನ್ನು ಕೆಂಪಗೆ ಕಾಯಿಸಿದಾಗ, ಅದು ಅಗ್ನಿಸಂಬಂಧದಿಂದ ನೋಡುವ ಜನರ ಕಣ್ಣಿಗೆ ಅಗ್ನಿಗೋಳದಂತೆಯೇ ಕಾಣಿಸು

ವುದು, ಅದೇ ಗೋಳವು ತಂಪಾದರೆ. ಅಗ್ನಿ ಸಂಬಂಧವಿಲ್ಲದಿರುವುದ ಪೂರ್ವಸ್ಥಿತಿಗೇ ಬರುವುದು. ಅಂತೆಯೇ ಸರ್ವತ್ರವ್ಯಾಪ್ತನಾದ ಶ್ರೀ ಪರಮಾತ್ಮನು ಸಕಲ ಚೇತನರುಗಳಲ್ಲಿ ವ್ಯಾಪ್ತನಾಗಿರುವುದರಿಂದಲೇ, ಎಲ್ಲರೂ ಅವನ ಸನ್ನಿಧಾನವಿಶೇಷದಿಂದ ಆಪ್ತರಾಗಿದ್ದು ಹಿತವನ್ನು ಬಯುಸುವರು ಎಂಬ ಶ್ರೀಹರಿಯ ಸನ್ನಿಧಾನ ವಿಶೇಷದ ಮಹಿಮೆಯನ್ನು ವಿವರಿಸುತ್ತಾರೆ– "ತಪ್ತಲೋಹವು"– ಎಂಬ ಪದ್ಯದಿಂದ ॥೨೨॥

**ಪ್ರತಿಪದಾರ್ಥ :—**

**ತಪ್ತಲೋಹವು** = ಅಗ್ನಿಯಲ್ಲಿ ಚೆನ್ನಾಗಿ ಕಾಯಿಸಲ್ಪಟ್ಟ ಕಬ್ಬಿಣವು **ನೋಳ್ಪಜನರಿಗೆ** = ನೋಡತಕ್ಕವರಿಗೆ **ಸಪ್ತಜಹ್ವನತೆರದಿ** = ಏಳು ನಾಲಿಗೆ ಯುಳ್ಳ ಅಗ್ನಿಯಂತೆ ತೋಜೋಮಯನಾಗಿ **ತೋರ್ಪುದು** = ಕಾಣಿಸುವುದು **ಲುಪ್ತಪಾವಕ** = ಲೋಹಗತ ಅಗ್ನಿಯು ಆರಿಹೋದರೆ (ಪಾವಕ = ಅಗ್ನಿ ಲುಪ್ತ = ಆರಿಹೋಗುವುದು ಅಂದರೆ ಇಲ್ಲದಿರುವುದು) **ಪೂರ್ವದೋಪಾದಿ** = ಲೋಹವನ್ನು ಕಾಯಿಸುವುದಕ್ಕಿಂತ ಮುಂಚೆ ಹೇಗಿತ್ತೋ ಅದರಂತೆ **ಲೋಹಕಾಂಬುದು** = ಪ್ರಕೃತ ಲೋಹವು ಕಾಣಿಸುವುದು. ಅದರಂತೆ **ಸಪ್ತ ವಾಹನ** = ಏಳು ಕುದುರೆಗಳುಳ್ಳ ಸೂರ್ಯಾಂತರ್ಯಾಮಿ ಸಾಕ್ಷಾತ್ ಶ್ರಿ ಪರಮಾತ್ಮನು **ನಿಖಿಳಜನರೊಳು** = ಸಮಸ್ತ ಚೇತನರ ಸ್ಥೂಲ ದೇಹದಲ್ಲಿ **ವ್ಯಾಪ್ತನಾದುದರಿಂದ** = ವ್ಯಾಪ್ತನಾಗಿ ಇರತಕ್ಕವನಾದ್ದರಿಂದ (ಲೋಹಗತ ಅಗ್ನಿಯಂತೆ) **ಎಲ್ಲಕಾಲದಿ** = ವ್ಯಾಪ್ತಿ ಇರುವ ಕಾಲಪರ್ಯಂತ **ಸರ್ವರು** = ಸಮಸ್ತ ಬಂಧುಮಿತ್ರ ಪರಿವಾರವರ್ಗದವರು (ಸ್ಥೂಲದೇಹಗತ ಸಮಸ್ತ ತತ್ವಾಭಿಮಾನಿ ದೇವತೆಗಳು) **ಹಿತವ ಕೈಕೊಂಡು** = ಜೀವನ ಹಿತವನ್ನು ಬಯಸುತ್ತಾ, ಹಿತಚಿಂತಕರಾಗಿದ್ದು **ಆಪ್ತರಾಗಿಹರು** = ಆಪ್ತರೆಂದು ಕರೆಸಿಕೊಳ್ಳುತ್ತಾರೆ. ॥೨೨॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಶ್ರೀ ಪರಮಾತ್ಮ ಲೋಹಗತ ಅಗ್ನಿಯೋಪಾದಿಯಲ್ಲಿ, ದೇಹದಲ್ಲಿ ವ್ಯಾಪ್ತನಾಗಿರೋ ಕಾಲದವರೆವಿಗೂ. ದೇಹಗತ ತತ್ವಾಭಿಮಾನಿ ದೇವತೆಗಳು ದೇಹದಿಂದ ಅಗತಕ್ಕ ಸುಖದುಃಖಗಳನ್ನು ಸ್ವೀಕರಿಸಿ ತಮ್ಮದು ತಾವು ತೆಗೆದುಕೊಂಡು, ಪರಮಾತ್ಮನದು ಅವಗೆ ಅರ್ಪಣ ಮಾಡತಾರೆ. ದೇಹ ಗತ ಜೀವ, ಪರಮಾತ್ಮ, ತತ್ವಾಭಿಮಾನಿ ದೇವತೆಗಳು ಹೊರಟುಹೋದರೆ, ಲೋಹಗತ ಅಗ್ನಿ ಆರಿಹೋದರೆ, ತೇಜೋಹೀನನಾಗಿ ಪೂರ್ವದಂತೆ ಹೇಗೆ ಕಾಣತದೋ ಆ ಪ್ರಕಾರ ದೇಹವೂ ತೇಜೋಹೀನವಾಗಿ ನಿಶ್ಚೇಷ್ಟವಾಗತದೆ. ಈ ಪ್ರಕಾರ ದೇಹ ನಿಶ್ಚೇಷ್ಟವಾದಾಗ್ಯೂ, ಶ್ರೀ ಪರಮಾತ್ಮ ಒಬ್ಬನೇ ಅಂತರ್ಯಾಮಿಯಾಗಿರತಾನೆ ಹೊರತು, ಮಿಗಿಲಾದ ತತ್ವಾಭಿಮಾನಿ ದೇವತೆಗಳೂ, ಜೀವ ಇವರೂ ಇರೋದಿಲ್ಲ ಎಂತ ತಾತ್ಪರ್ಯ.

ಈ ಅಗ್ನಿ ಯಾವ ಜಿಹ್ವೆಗಳಿಂದ ಒಂದೊಂದರಿಂದ ಮೂರು ಪ್ರಕಾರ ಸ್ವೀಕರಿಸತಾನೆ. ಉರುಕ್ರಮನಾಮಕ ಸೂರ್ಯನೇ ಪರಮಾತ್ಮ.

ಇದಕ್ಕೆ ಪ್ರಮಾಣ :- **"ನೈಷಾಂ ಮತಿಸ್ತಾವದುರುಕ್ರಮಾಂಘ್ರಿಂ ಸ್ಪೃಶತ್ಯನರ್ಥಾಗಾಪಗಮೋ ಯದುತ್ಥಃ ||" — ಇತಿ ಭಾಗವತೇ ಸಪ್ತಮ ಸ್ಕಂಧೇ.**

ಅಗ್ನಿಯ ಸಪ್ತಜಿಹ್ವೆಗಳ ವಿವರಗಳ ಪದಕವನ್ನು ಮುಂದಿನ ಪುಟದಲ್ಲಿ ಕೊಟ್ಟಿದೆ.

## ಅಗ್ನಿಯ ಸಪ್ತಜಿಹ್ವೆಗಳ ವಿವರ :-

| ಕ್ರಮ ಸಂಖ್ಯೆ | ಜಿಹ್ವೆಗಳ ಹೆಸರುಗಳು | ವರ್ಣ | ತ್ರಿವಿಧ ಸ್ವೀಕಾರವಿಧಿ | | |
|---|---|---|---|---|---|
| | | | (೧) | (೨) | (೩) |
| ೧ | ಕಾಲೀ | ಹಿರಣ್ಯ | ಔಪಾಸನ | ಅಗ್ನಿಹೋತ್ರ | ಅಗ್ನಿಷ್ಟೋಮ |
| ೨ | ಕಪಾಲೀ | ಕನಕ | ವೈಶ್ವದೇವ | ದರ್ಶಪೌರ್ಣಮಾಸ | ಅತ್ಯಗ್ನಿಷ್ಟೋಮ |
| ೩ | ಮನೋಜವಾ | ರಕ್ತ | ಸ್ಥಾಲೀಪಾಕ | ಪಿಂಡಪಿತೃಯಜ್ಞ | ಉದ್ಯ |
| ೪ | ಸುಲೋಹಿತಾ | ಕೃಷ್ಣ | ಅಷ್ಟಕ | ಪಶುಬಂಧ | ಷೋಡಶ |
| ೫ | ಸುಧೂಮ್ರವರ್ಣ | ಸುಪ್ರಭ | ಮಾಸಶ್ರಾದ್ಧ | ಅನ್ವಯಣ | ವಾಜಪೇಯ |
| ೬ | ಸ್ಫುಲಿಂಗಿನೀ | ಅತಿರಕ್ತ | ಈಶಾನಬಲ | ಚಾತುರ್ಮಾಸ್ಯ | ಅತಿರಾತ್ರ |
| ೭ | ವಿಶ್ವರುಚೀ | ಬಹುರೂಪ | ಸರ್ವಬಲ | ಸೌತ್ರಾಮಣಿ | ಆಪ್ತೋರ್ಯಾಮ |

**(೨) "ಭಾವಪ್ರಕಾಶಿಕೆ" –ವ್ಯಾಖ್ಯಾನ :—**

ಕಾದ ಕಬ್ಬಿಣವು ನೋಡಿದ ಜನರಿಗೆ ಕೆಂಡದಂತೆ ಕಾಣಿಸುವುದು. (ಸಪ್ತಜಿಹ್ವನತೆರದಿ–ಅಂದರೆ ಅಗ್ನಿ ಎಂದರ್ಥ.)

**"ಅಸ್ಯೈದ್ವಯಂ ಸುತಾ ! ಸಪ್ತಜಿಹ್ವಾ ಸಮನ್ವಿತಂ ದಕ್ಷಿಣಾಸ್ಯೇ ಚತುರ್ಜಿಹ್ವಾತಿಸ್ರೋನ್ಯೆ ವಾಮವಕ್ತ್ರಕೇ"** —ಎಂದು ಅಗ್ನಿರೂಪವನ್ನು ವರ್ಣಿಸುವ ಕೃತಿಯಲ್ಲಿ ಅಗ್ನಿದೇವರಿಗೆ ಎರಡು ಮುಖಗಳು, ಏಳು ನಾಲಿಗೆಗಳು. ಬಲದ ಮುಖದಲ್ಲಿ ನಾಲ್ಕು ನಾಲಿಗೆಗಳು, ಎಡದ ಮುಖದಲ್ಲಿ ಮೂರು ನಾಲಿಗೆಗಳು ಇರುವುವು ಅದು ಆರಿಹೋದರೆ ಬರೀ ಕಬ್ಬಿಣವಾಗಿಯೇ ಕಾಣವುದು. ಹೀಗೆಯೇ ಶ್ರೀ ಪರಮಾತ್ಮನು ಎಲ್ಲರ ದೇಹದಲ್ಲಿ ವ್ಯಾಪ್ತನಾಗಿರುವುದರಿಂದ ಜನರು ಪ್ರಾಣಿಗಳೆಂದೆನಿಸಿಕೊಂಡು ಎಲ್ಲರಿಗೂ ಬೇಕಾದವರಾಗಿ ಒಬ್ಬರಿಗೊಬ್ಬರು ಉಪಕಾರ ಮಾಡುತ್ತಾ, ಮಾಡಿಸಿಕೊಳ್ಳುತ್ತಾ ಶೋಭಿಸುತ್ತಿರುವರು. ಪರಮಾತ್ಮನು ಶರೀರದಲ್ಲಿಲ್ಲದಿದ್ದರೆ, ಬೆಂಕಿ ಆರಿದ ಕಬ್ಬಿಣವು ಹೇಗೆ ಕಾಣುವುದೋ, ಹಾಗೆಯೇ ಕುಣಪ (ಶ್ರವ)ವಾಗಿ ಶರೀರವು ಯಾರಿಗೂ ಬೇಡವಾಗುವುದು. ಹೆಂಡತಿಯೂ ಸಹ ಶರೀರವನ್ನು ನೋಡಲಂಜುವಳು. ಆದ್ದರಿಂದ ಮನುಷ್ಯಾದಿಗಳು ಪರಸ್ಪರ ಗೌರವಾದಿಗಳನ್ನು ಹೊಂದುವುದು ಪರಮಾತ್ಮನು ದೇಹಗತನಾಗಿರುವುದರಿಂದಲೇ ಎಂದು ಭಾವಿಸಬೇಕು.

ಜೀವರಲ್ಲಿ ಕೆಲವರಿಗೆ ಸುಖವನ್ನೂ, ಕೆಲವರಿಗೆ ಸುಖದುಃಖ ಮಿಶ್ರವಾದ ಸಂಸಾರವನ್ನೂ, ಕೆಲವರಿಗೆ ದುಃಖವನ್ನೂ ಕೊಡುವನೆಂದು ಮೇಲೆ ಕೆಲವು ಪದ್ಯಗಳಲ್ಲಿ ಹೇಳಿರುವರು, ಕರ್ಮವನ್ನು ಪರಮಾತ್ಮನೇ ಮಾಡಿಸಿ, ಫಲಗಳನ್ನು ಒಬ್ಬೊಬ್ಬರಿಗೆ ಒಂದು ವಿಧವಾಗಿ ಕೊಡುವುದರಿಂದ ಪರಮಾತ್ಮನಿಗೆ ವೈಷಮ್ಯದೋಷ ಬಂದೀತೆಂದು ಶಂಕೆಯನ್ನು ಮುಂದಿನ ಪದ್ಯದಿಂದ ಪರಿಹರಿಸುತ್ತಾರೆ ॥೨೨॥

**(೩) "ಭಾವದರ್ಪಣಟೀಕಾ"— ವ್ಯಾಖ್ಯಾನ :**

ವಿಭೂತಿರೂಪದಿಂದ ಒಬ್ಬ ಮನುಷ್ಯನಲ್ಲಿ ಶ್ರೀಹರಿ ಪ್ರವೇಶಮಾಡಲು

ಸರ್ವ ಜನರು ಆಪ್ತರಾಗಿರುತ್ತಾರೆ. ಆ ಸ್ಥಳ ಬಿಡಲು ಸರ್ವರೂ ಉದಾಸೀನ ಮಾಡುವರೆಂದು ಹೇಳುತ್ತಾರೆ— "ತಪ್ತಲೋಹ" —ಎಂಬ ಪದ್ಯದಿಂದ.

ಸತ್ತಾರಹಿತನೆಂದು ಭಾವ. ತಪ್ತಲೋಹ = ಕಾದಂಥ ಕಬ್ಬಿಣವು. ಸಪ್ತಜಹ್ವ = ಅಗ್ನಿ. ಸಪ್ತವಾಹನ = ಸಪ್ತನಾಮಕೋಶ್ವೋ ವಾಹನಂ ಯಸ್ಯಸಃ—. ಸಪ್ತವಾಹನ– "ಹರಿ" ಎಂದರ್ಥ.

**"ಏಕೋಶ್ವೋ ವಹತಿ ಸಪ್ತನಾಮೇತಿ"- ಇತಿ ಶೃತೇಃ ॥ ॥೨೨॥**

## (೪) ಜಮಖಂಡಿ ಶ್ರೀವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತಮೂಲ) :—

ಸಪ್ತೇತಿ॥ ಸಪ್ತಜಿಹ್ವೋ ಹುತಾಶನಃ ॥ ಸಪ್ತೈಧಾಃ ಸಪ್ತವಾಹನಾಃ॥ "ಓಂ ಇಂದ್ರಂ ವೃತ್ರಾಯ ಹಂತವೇ ಪುರುಹೂತಮುಪಬ್ರುವೇ ॥ ಭರೇಷು ವಾಜಸಾತಯೇ ವಾಜೇಷು ಸಾಸಹಿರ್ಭವ" ಓಂ ॥ ಸಪ್ತಾನಿ ಬಹೂನಿ ವಾಜಪದೋಕ್ತ ಯುದ್ಧಾದೀನಿ (ವಹ) ವಾಹಯತೇತಿ ಸತಥೋಕ್ತಃ ॥ ಅಪ್ಯಾರ್ಥಸ್ಯ ವಾಜಸಾತೆಯೇ ಉಪಬ್ರುವೇ ಇತ್ಯನೇನ ಸೂಚನಾತ್ ॥ "ವ್ಯಾಪ್ತ" ಯತ್ಸಂಪರ್ಕಾತ್ಪ್ರಿಯಾಃ ಆಸನ್ನಿತ್ಯುಕ್ತೇಃ ॥ ಕೈಕೊಂಡು = ಸ್ವೀಕೃತ್ಯ ॥೨೨॥

**ಕನ್ನಡಾರ್ಥ:—**

"ಸಪ್ತಜಿಹ್ವ" –ಎಂದರೆ ಅಗ್ನಿ. "ಸಪ್ತವಾಹನ" ಎಂದರೆ ಯುದ್ಧ ಮೊದಲಾದವನ್ನು ನಿರ್ವಹಿಸಿ, ಜಯವನ್ನು ತರುವವನು ಎಂದರ್ಥ. "ವಾಜಸಾತಯೇ ಉಪಬ್ರುವೇ –ಎಂಬ ಎರಡು ಪದಗಳಿಂದ ಈ ಅರ್ಥವು ಸೂಚಿತವಾಗುತ್ತದೆ. ವಿಷ್ಣುಸಹಸ್ರನಾಮದಲ್ಲಿ— "ಸಪ್ತಜಿಹ್ವ, ಸಪ್ತೈಧಾ, ಸಪ್ತವಾಹನ"ಗಳೆಂಬ ನಾಮಧೇಯಗಳು ಇವೆ. "ಸಪ್ತವಾಹನ" ಎಂಬ ನಾಮದ ವ್ಯಾಖ್ಯಾನರೂಪವಾದ ಬೃಹತೀ ಛಂದಸ್ಸಿನ ಋಕ್ಕನ್ನು

ವ್ಯಾಖ್ಯಾನಕಾರರು ಉದಹರಿಸಿರುವರು. ಪರಮಾತ್ಮನು ನಮ್ಮಲ್ಲಿ ವ್ಯಾಪ್ತನಾಗಿದ್ದಾನೆ. ವ್ಯಾಪ್ತನಾದ ಪರಮಾತ್ಮನ ಸಂಪರ್ಕವಿರುವುದರಿಂದಲೇ ಮಾತೃ, ಪಿತೃ, ಭ್ರಾತೃ ಕಳತ್ರ, ಪುತ್ರ, ಮಿತ್ರ ಮೊದಲಾದ ಸಮೀಪ ಬಂಧುವರ್ಗದವರೆಲ್ಲರೂ ನಮಗೆ ಪ್ರಿಯರಾಗಿರುತ್ತಾರೆ. ಆದುದರಿಂದ "ಆಪ್ತರಾಗಿಹರು" —ಎಂಬ ಶಬ್ದಪ್ರಯೋಗವು ಅತ್ಯಂತ ಯುಕ್ತವಾಗಿದೆ. ॥೨೨॥

## (ಆ) "ಗುರುಹೃದಯ ಪ್ರಕಾಶಿಕೆ"—ವ್ಯಾಖ್ಯಾನ :—

ಶ್ರೀಹರಿ ವ್ಯಾಪ್ತಿ ಇಲ್ಲದೆ, ಜೀವಜಡಕ್ರಿಯಾವ್ಯಕ್ತಿಯಿಲ್ಲವೆಂಬುದಕ್ಕೆ ದೃಷ್ಟಾಂತ ಹೇಳುತ್ತಾರೆ. ತಪ್ತ-ಎಂದರೆ, ಕಾಯಿಸಿದ ಕಬ್ಬಿಣವು ನೋಡಿದವರಿಗೆ ಸಪ್ತಜಿಹ್ವನ ತೆರದಿ ಎಂದರೆ, ಕಾಳಿ, ಕರಾಳಿ ಮೊದಲಾದ ಏಳು ನಾಲಿಗೆಯುಳ್ಳ ಅಗ್ನಿಯಂತೆ ಕಾಣುವುದು. ಎಂದರೆ, ಸ್ವತಂತ್ರಶಕ್ತಿಯುಳ್ಳದ್ದಾಗಿ ಕಾಣಿಸುವುದು. ಅಗ್ನಿ ಲುಪ್ತವಾದಾಗ, ಬರೆಹಾಕುವ ಶಕ್ತಿ ಶಕ್ತ್ಯಾತ್ಮನಾ ಇದ್ದು, ಲೋಹಮಾತ್ರಕಂಡು, ಕ್ರಿಯಾವ್ಯಕ್ತಿ ಇಲ್ಲದಿರುವುದು. ಮನೋಬುದ್ಧಿ, ಜ್ಞಾನೇಂದಿಯ ಐದು ಸಹ ವಹಿಸಿ ಕ್ರಿಯಾನಡೆಸುವದರಿಂದ ಸಪ್ತವಾಹನನೆಂಬ ಸ್ವಾಮಿ, ವ್ಯಾಪ್ತನಾಗಿರುವುದರಿಂದ, ಹಿತವನ್ನು ಮಾಡುತ್ತಾ ಎಲ್ಲರೂ ಸದಾ ಆಪ್ತರಾಗಿಹರು.

**"ದಾರಾಗಾರಸುತಾದಯಃ ಯತ್ಸಂಪರ್ಕಾತ್ಪ್ರಿಯಾ ಆಸನ್"**

—**ಎಂಬ ಭಾಗವತಾರ್ಥ** ಇದರಿಂದ ವಿವರಿಸಿತು ॥೨೨॥

## ಸರ್ವವ್ಯಾಖ್ಯಾನಸಾರಸಂಗ್ರಹ :—

ಚೇತನವರ್ಗದಲ್ಲಿ ಹಾಗೂ ಜಡವರ್ಗದಲ್ಲಿ ಕ್ರಿಯಾಶಕ್ತಿ ಅಭಿವ್ಯಕ್ತಿಯಾಗಬೇಕಾದರೆ. ಆಯಾಯಾ ಅಧಿಷ್ಠಾನಗಳಲ್ಲಿ ವ್ಯಾಪ್ತನಾಗಿರುವ ಶ್ರೀಹರಿಯ ಸಾನ್ನಿಧ್ಯವಿಶೇಷವೇ ಕಾರಣ ಎಂಬ ತತ್ವಾರ್ಥವನ್ನು— "ತಪ್ತಲೋಹವು"-ಎಂಬ ಈ ಪದ್ಯದಿಂದ ವಿವರಿಸುತಾರೆ.

ಒಂದು ಕಬ್ಬಿಣದ ಗುಂಡನ್ನು (ಲೋಹ) ಅಗ್ನಿಯಲ್ಲಿ ಕಾಯಿಸಿದಾಗ, ಅದು ಕೆಂಪಾಗಿ, ನೋಡುವ ಜನರ ಕಣ್ಣಿಗೆ ಅಗ್ನಿಯೇ ಇದ್ದಂತೆ ಕಾಣಿಸುವುದು. ಆಗ ಆ ಲೋಹವು ಸುಡುಎಕೆ ಮುಂತಾದ ಅಗ್ನಿಸಂಬಂಧವಾದ ಲಕ್ಷಣ ವಿಶೇಷಗಳನ್ನು ಹೊಂದುವುದು. ಇದಕ್ಕೆ ಅಗ್ನಿಯ ಸಂಪರ್ಕ ಅಥವಾ ಸನ್ನಿಧಾನವೇ ಕಾರಣವು. ಅದೇ ಲೋಹದ ಗುಂಡು ಆರಿ ತಣ್ಣಗಾಗಲು, ಅಗ್ನಿಯ ಸನ್ನಿಧಾನವಿಲ್ಲದಿರುವುದರಿಂದ, ತನ್ನ ತಾಪಶಕ್ತಿಯನ್ನು ಕಳೆದು ಕೊಂಡು, ಪೂರ್ವಾವಸ್ಥೆಗೇ ಬರುವುದು. ಅಗ್ನಿಗೆ "ಸಪ್ತಜಿಹ್ವಾ" –ಎಂದು ಹೆಸರು. ಅಗ್ನಿಪುರುಷದೇವರ ರೂಪವನ್ನು ವರ್ಣಿಸುವ ಶ್ರುತಿಯು- ಅಗ್ನಿ ದೇವರಿಗೆ ಎರಡು ಮುಖಗಳಿವೆ. ಬಲದ ಮುಖದಲ್ಲಿ ನಾಲ್ಕು ನಾಲಿಗೆಗಳು ಮತ್ತು ಎಡದ ಮುಖದಲ್ಲಿ ಮೂರು ನಾಲಿಗೆಗಳು– ಇವೆ ಎಂದು ಹೇಳುತ್ತದೆ. ಅಗ್ನಿಯ ಏಳು ನಾಲಿಗೆಗಳು ಯಾವುದೆಂದರೆ :- (೧) ಕಾಲೀ (೨) ಕಪಾಲೀ (೩) ಮನೋಜವಾ (೪) ಸುಲೋಹಿತಾ. (೫) ಸುಧೂಮ್ರವರ್ಣಾ (೬) ಸ್ಫುಲಿಂಗಿನೀ ಮತ್ತು (೭) ವಿಶ್ವರುಚೀ ಎಂಬುದಾಗಿ ವಿವರಣೆ ಇದೆ. ನಮ್ಮ ಸ್ಥೂಲದೇಹದಲ್ಲಿ ಶ್ರೀ ಪರಮಾತ್ಮನು ವ್ಯಾಪ್ತನಾಗಿರುವ ತನಕ ಶ್ರೀ ಮುಖ್ಯಪ್ರಾಣದೇವರು ಮತ್ತು ಸಕಲ ತತ್ವಾಭಿಮಾನಿ ದೇವತೆಗಳೂ ನೆಲೆಸಿದ್ದು, ಆತನ ಆಣತಿಯಿಂದ ಭಗವತ್ಕಾರ್ಯ ಸಾಧಕರಾಗಿ ದೇಹಗತ ವ್ಯಾಪಾರಗಳನ್ನು ನಡೆಸುತ್ತಾರೆ. **"ಪರಮ ಮುಖ್ಯಪ್ರಾಣ ತೊಗಲಾದೇಹವನು ಪೆಣನೆಂದು ಪೇಳ್ವರೋ ಸುಜನರು॥" —ಎಂದು ಶ್ರೀಪಾದರಾಜರ ವಚನ.** ಇದನ್ನೇ ಶ್ರೀ ಜಗನ್ನಾಥ ದಾಸರಾಯರು. **"ಪರಿಸರ ನೀನಿರೆ ಹರಿ ತಾನಿರುವನು। ಇರದಿರೆ ತಾನಿರನು"** —ಎಂದು ಶ್ರೀ ಪ್ರಾಣದೇವರ ಸ್ತೋತ್ರರೂಪವಾದ ಕೀರ್ತನೆಯೊಂದರಲ್ಲಿ ವಿವರಿಸಿರುವರು. ಶ್ರೀಹರಿಯು ಸಾಧನಶರೀರವಾದ ಈ ದೇಹದಲ್ಲಿ ವ್ಯಾಪ್ತನಾಗಿರುವುದರಿಂದಲೇ, ತಂದೆ, ತಾಯಿ, ಸಹೋದರರು, ಹೆಂಡತಿ, ಮಕ್ಕಳು, ಮಿತ್ರವರ್ಗ ಇವರೇ ಮುಂತಾದ ಸಕಲ ಪರಿವಾರವರ್ಗ ನಮಗೆ ಆಪ್ತರಾಗಿರುವರು, ವ್ಯಾಪ್ತನಾದ ಶ್ರೀಹರಿಯು ಈ ದೇಹವನ್ನು ಬಿಟ್ಟಾಗ, ಅದು ಚೇತನರಹಿತವಾಗಿ, ನಿಶ್ಚೇಷ್ಟಿತವಾಗು

ವುದು. ಇಲ್ಲಿ ತಪ್ತಲೋಹದ ದೃಷ್ಟಾಂತದಿಂದ, ಶ್ರೀಹರಿಯ ಸನ್ನಿಧಾನ ವಿಶೇಷ ಮತ್ತು ತನ್ಮೂಲಕ ಸರ್ವರ ಆಪ್ತತ್ವ, ನಮ್ಮ ಮಾನ್ಯತೆ, ವೈಭವ ವಿಶೇಷಗಳು ಮೊದಲಾದುವನ್ನು ನಿರೂಪಿಸುತ್ತಾರೆ. ಈ ದೃಷ್ಟಾಂತದಲ್ಲಿ ಶ್ರೀ ಪರಮಾತ್ಮನು ಅಗ್ನಿಸದೃಶನು ಮತ್ತು ದೇಹವು ಲೋಹಸದೃಶವು. ಅಗ್ನಿಯು ಲೋಹದಲ್ಲಿ ಸನ್ನಿಹಿತನಾಗಿರುವವರೆಗೂ, ಲೋಹದಲ್ಲಿ ಪ್ರಕಾಶ, ದಹನಶಕ್ತಿ, ತಾಪಸಾಮರ್ಥ್ಯ ಈ ಲಕ್ಷಣ ವಿಶೇಷಗಳು ಕಂಡುಬರುವುವು. ಅಂತೆಯೇ ಶ್ರೀಹರಿಯ ವ್ಯಾಪ್ತಿಯಿಂದ, ದೇಹಗತ ಸಮಸ್ತ ವ್ಯಾಪಾರ ವಿಶೇಷಗಳು ಅಭಿವ್ಯಕ್ತವಾಗುವುವು. ಲೋಹದ ಗುಂಡು ತಣ್ಣಗಾದಾಗ, ಅಗ್ನಿಯ ಸಾನ್ನಿಧ್ಯವಿಲ್ಲದಿರುವುದರಿಂದ, ಪೂರ್ವೋಕ್ತ ಕ್ರಿಯಾಸಾಮರ್ಥ್ಯ ಗಳನ್ನು ಕಳೆದುಕೊಳ್ಳುವುದು. ಅಂತೆಯೇ ಎಲ್ಲಿಯವರೆಗೆ ಶ್ರೀಹರಿಯು ನಮ್ಮ ದೇಹದಲ್ಲಿ ಸನ್ನಿಹಿತನಾಗಿರುವನೋ, ಅಲ್ಲಿಯ ಪರ್ಯಂತ ಎಲ್ಲರೂ ನಮ್ಮ ಹಿತಚಿಂತಕರಾಗಿ ಆಪ್ತರಾಗಿರುವರು ಎಂಬ ತತ್ವಾರ್ಥವನ್ನು ಈ ನಿದರ್ಶನದಿಂದ ನಿರೂಪಿಸಿರುತ್ತಾರೆ. ॥೨೨॥

## ಪದ್ಯ (೨೩)

**ಮೂಲ :—**

**ವಾರಿದನು ಮಳೆಗರೆಯೆ ಬೆಳೆದಿಹ ।**
**ಭೂರುಹಂಗಳ ಚಿತ್ರಫಲರಸ ।**
**ಬೇರೆ ಬೇರಿಪ್ಪಂತೆ ಬಹುವಿಧ ಜೀವರೊಳಿದ್ದು ॥**
**ಮಾರಮಣನವರವರ ಯೋಗ್ಯತೆ ।**
**ಮೀರದಲೆ ಗುಣಕರ್ಮಗಳನು ।**
**ಸಾರ ನಡೆಸುವ ದೇವನಿಗೆ ವೈಷಮ್ಯವೆಲ್ಲಿಹುದೋ ॥ ॥೨೩॥**

**ಅವತರಣಿಕೆ :—**

ತ್ರಿವಿಧಜೀವರಲ್ಲಿ ಅಂತರ್ಯಾಮಿರೂಪತ್ವೇಣ ನಿಂತು, ಅವರವರ

ಸ್ವರೂಪಯೋಗ್ಯತೆ ಮತ್ತು ಕರ್ಮಾನುಸಾರವಾಗಿ ಕ್ರಿಯಾವಿಶೇಷಗಳನ್ನು ತಾನೇ ಬಿಂಬಕ್ರಿಯಾದ್ವಾರಮಾಡಿ, ಪ್ರತಿಬಿಂಬರಾದ ಜೀವರ ದ್ವಾರಾ ಮಾಡಿಸುವ ದೋಷವಿದೂರನಾದ ಶ್ರೀಪರಮಾತ್ಮನಿಗೆ ವೈಷಮ್ಯ, ನೈರ್ಘೃಣ್ಯ ಮುಂತಾದ ಯಾವ ದೋಷಗಳೂ ಲವಲೇಶವೂ ಇಲ್ಲವೆಂದು ಸದೃಷ್ಟಾಂತ ಪೂರ್ವಕವಾಗಿ ನಿರೂಪಿಸುತ್ತಾರೆ– "ವಾರಿದನು" –ಎಂಬ ಈ ಪದ್ಯದಿಂದ ॥೨೩॥

**ಪ್ರತಿಪದಾರ್ಥ :—**

**ವಾರಿದನು** = ಮಳೆಯನ್ನು ಕೊಡತಕ್ಕ ಮೇಘವು (ಮೇಘಾಭಿಮಾನಿ ಪರ್ಜನ್ಯಾಖ್ಯ ಸೂರ್ಯನು) **ಮಳೆಗರೆಯೆ** = ಮಳೆಯನ್ನು ಸುರಿಸಲು **ಬೆಳೆದಿಹ** = ಅದರಿಂದ ಅಭಿವೃದ್ಧಿಯಾಗಿರತಕ್ಕ **ಭೂರುಹಂಗಳ** = ವೃಕ್ಷಗಳ (ಭೂಮಿಯನ್ನು ಭೇದಿಸಿಕೊಂಡು ಮೇಲಕ್ಕೆ ಬರುವ ವೃಕ್ಷಗಳು) **ಚಿತ್ರ** = ವಿಚಿತ್ರವಾದ (ನಾನಾಬಗೆಯ) **ಫಲರಸ** = ಹಣ್ಣಿನಲ್ಲಿರುವ ರಸವಿಶೇಷಗಳು **ಬೇರೆ ಬೇರಿಪ್ಪಂತೆ** = ಭಿನ್ನ ಭಿನ್ನವಾಗಿರುವಂತೆ (ಬೇರೆ ಬೇರೆ ರುಚಿಗಳನ್ನು ಹೊಂದಿರುವಂತೆ) **ಮಾರರಮಣನು** = ಲಕ್ಷ್ಮೀಪತಿಯಾದ ಶ್ರೀಪರಮಾತ್ಮನು **ಬಹುವಿಧ ಜೀವರೊಳಗಿದ್ದು** = ನಾನಾಪ್ರಕಾರವಾದ (ಭಿನ್ನ ಭಿನ್ನರಾದ) ಜೀವವರ್ಗಗಳಲ್ಲಿ ಅಂತರ್ಯಾಮಿರೂಪತ್ವೇನ ಇದ್ದು **ಅವರವರ ಯೋಗ್ಯತೆ ಮೀರದೆಲೆ** = ಆಯಾಯಾಜೀವರ ಸ್ವರೂಪಯೋಗ್ಯತೆಯನ್ನು ಮೀರಿ, ಅನ್ಯಥಾ ಮಾಡದಹಾಗೆ **ಗುಣಕರ್ಮಗಳನುಸಾರ** = ಸ್ವರೂಪ ಗತ ಗುಣ ಮತ್ತು ಸ್ವರೂಪದೇಹಕ್ಕೆ ಆವರ್ಕವಾಗಿರುವ ಲಿಂಗದೇಹಗತ ತ್ರಿಗುಣಜನ್ಯವಾದ ಕರ್ಮಗಳಿಗನುಸಾರವಾಗಿ **ನಡೆಸುವ** = ಸ್ಥೂಲದೇಹದ ದ್ವಾರಾ ಸಕಲ ಕ್ರಿಯಾವಿಶೇಷಗಳನ್ನು ನಡೆಯಿಸುವ **ದೇವನಿಗೆ** = ಸರ್ವೋತ್ತಮವಾದ ಶ್ರೀಪರಮಾತ್ಮನಿಗೆ (ಮೇಘಸದೃಶಪರಮಾತ್ಮ) **ವೈಷಮ್ಯ** = ಪಕ್ಷಪಾತಾದಿ ದೋಷಗಳು **ಎಲ್ಲಿಹುದೋ** = ಎಲ್ಲಿ ಇದೆ ? ಯಾವುವೂ ಇಲ್ಲ ಎಂತ ತಾತ್ಪರ್ಯ ॥೨೩॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಪರಮಾತ್ಮ ಅಂತಃಕರಣರೂಪವಾದ ನೀರುಸದೃಶ, ಜೀವರು ಬೀಜಗಳ ಸದೃಶ. ನೀರಿನ ಸ್ಪರ್ಶವಿಲ್ಲದೇನೇ ಬೀಜಗಳಿಗೆ ಬೆಳಸು ಇಲ್ಲ. ಆದಕಡಿಯಿಂದ ನೀರಿನಲ್ಲಿ ಅಂತಃಕರಣ ಇದೆ. ಈ ಅಂತಃಕರಣ ಸಮಸ್ತ ಬೀಜಗಳಲ್ಲಿ ಸರಿಸಮಾನವಾಗಿದೆ. ಹಾಂಗೆ ಪರಮಾತ್ಮನೂ ಅಂತಃಕರಣ ಜೀವರಲ್ಲಿ ಸರಿಸಮಾನವಾಗಿರುತ್ತದೆ. ಆದರೆ ಈ ನೀರು ಆಯಾ ಬೀಜಗಳ ಸಂಬಂಧಮಾಡಿದರೆ ಆಯಾ ಬೀಜಗಳನ್ನ ಹ್ಯಾಂಗೆ ವ್ಯಕ್ತಮಾಡತದೋ, ಅಂದರೆ, ನಾನಾವಿಧವಾದ ಬೀಜಗಳು ನೀರಿನ ಸಂಬಂಧವಾದ ಕೂಡಲೇ ಅದರದರ ಗುಣಗಳು ಆ ನೀರಿನಿಂದ ಹ್ಯಾಂಗೆ ವ್ಯಕ್ತವಾಗತದೋ, ಆ ಪ್ರಕಾರ ನಿಷ್ಪಕ್ಷಪಾತಿಯಾದ ಶ್ರೀ ಪರಮಾತ್ಮ ಜೀವರ ಸಂಬಂಧದಿಂದ, ಅಂದರೆ, ತ್ರಿವಿಧ ಜೀವರಲ್ಲಿ ಇದ್ದಾಗ್ಯೂ, ತನಗೆ ವೈಷಮ್ಯ ಇಲ್ಲದಲೆ, ಆಯಾ ಜೀವರ ಗುಣಕರ್ಮಾನುಸಾರ, ಆಯಾ ಜೀವರಿಗೆ ಭಿನ್ನಭಿನ್ನವಾದ ಫಲಗಳ ಕೊಡತಾನೆ. ಮೇಘ ತನ್ನ ಉದಕದಿಂದ ಅದರದರ ಸ್ವರೂಪಯೋಗ್ಯತಾನುಸಾರ ಬೀಜಗಳ ಸ್ವಭಾವವನ್ನು ಬಹಿರ್ವ್ಯಕ್ತಿ ಮಾಡುವಂತೆ ಪರಮಾತ್ಮ ಜೀವರ ಸ್ವಭಾವವನ್ನು ತಿಳಿಸತಾನೆ. ದೋಷ ಬೀಜಗಳಲ್ಲಿ ಅದೆ. ಇನ್ನೂ ಸುರಸೋಪೇತವಾದ ಪದಾರ್ಥಗಳು ಕಲುಷ ಜಿಹ್ವೆಗೆ ಕಹಿಯಾಗಿ ತೋರತದೆ. ದೋಷ ಜಿಹ್ವೆದೇ ಹೊರತು ಪದಾರ್ಥದ್ದು ಅಲ್ಲ. ಅದೇಪದಾರ್ಥವನ್ನು ಸಮೀಚೀನವಾದ ಜಿಹ್ವೆಗೆ ಭೋಜನ ಮಾಡಿಸಿದರೆ ಸುರಸವಾಗಿ ತೋರತದೆ ಎಂತ ತಾತ್ಪರ್ಯ.

**ವಿಶೇಷಾರ್ಥ :—**

ಜೀವರ ಯೋಗ್ಯತಾನುಸಾರ ಫಲಗಳನ್ನು ಕೊಡುವುದಕ್ಕೆ ಪ್ರಮಾಣ :—

"ಪುಣ್ಯಪಾಪಾದಿಕಂ ವಿಷ್ಣುಃ ಕಾರಯೇತ್ ಪೂರ್ವಕರ್ಮಣಾ । ಅನಾದಿತ್ವಾತ್ ಕರ್ಮಣಶ್ಚ ನ ವಿರೋಧಃ ಕಥಂಚನ ॥" ಇತಿ ಸೂತ್ರ ಭಾಷ್ಯೇ ಮತ್ತು "ಅನಾದಿಯೋಗ್ಯತಾ ಕರ್ಮಸಾಪೇಕ್ಷೋ ಹಿ ಕರೋತ್ಯಜಃ ॥" –ಇತಿ ಸತ್ತತ್ವರತ್ನಮಾಲಾಯಾಂ ಜ್ಞೇಯಂ॥ ॥೨೩॥

## (೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :—

ಮೇಘವು ಎಲ್ಲಾ ಸ್ಥಳಗಳಲ್ಲಿ ಮಳೆಯನ್ನು ವರ್ಷಿಸಲು, ಎಲ್ಲಾ ಸ್ಥಳಗಳಲ್ಲಿ ಬೀಳುವ ನೀರು ಒಂದೇ ರೀತಿಯಲ್ಲಿರುವುದು. ಆ ನೀರಿನಿಂದ ಬೆಳೆದ ವೃಕ್ಷಗಳ ಫಲಗಳು ಕೆಲವು ಸಿಹಿ, ಕೆಲವು ಕಹಿ, ಕೆಲವು ಹುಳಿ ಹೀಗೆ ಬೇರೆಬೇರೆಯಾಗಿಬಿಡುವುವು. ಇದಕ್ಕೆ ಆ ವೃಕ್ಷಗಳ ಸ್ವರೂಪವು ಕಾರಣವೇ ಹೊರತು, ನೀರು ಹೇಗೆ ಕಾರಣವಲ್ಲವೋ, ಹಾಗೆಯೇ ಶ್ರೀಪರಮಾತ್ಮನು ಸಾತ್ವಿಕಾದಿ ತ್ರಿವಿಧಜೀವರೊಳಗಿದ್ದು ಅವರ ಯೋಗ್ಯತೆಯನ್ನು ಮೀರದೆ, ಸಾತ್ವಿಕರಿಂದ ಸತ್ಕರ್ಮವನ್ನೂ, ರಾಜಸರಿಂದ ಮಿಶ್ರಕರ್ಮವನ್ನೂ, ತಾಮಸರಿಂದ ತನ್ನಲ್ಲಿ ದ್ವೇಷಾದಿಗಳನ್ನೂ ಮಾಡಿಸಿ, ಆಯಾ ಕರ್ಮಗಳಿಗೆ ತಕ್ಕಂತೆ ಫಲಗಳನ್ನು ಕೊಡುವನು. ಮುಖ್ಯವಾಗಿ ಅವರವರ ಸತ್ವಾದಿ ಗುಣಗಳು, ಪ್ರಾರಬ್ಧ ಕರ್ಮಗಳು, ಇವುಗಳನ್ನನುಸರಿಸಿ ಕರ್ಮಗಳನ್ನು ಮಾಡಿಸಿ, ಫಲಗಳನ್ನು ಕೊಡುವನೇ ಹೊರತು, ತನಗೆ ಇವರು ಬೇಕಾದವರು. ಇವರು ಬೇಡದವರು ಎಂಬ ಪಕ್ಷಪಾತದಿಂದ ಫಲಗಳನ್ನು ಕೊಡುವವನಲ್ಲ, ಆದ್ದರಿಂದ ಇಂತಹ ಪರಮಾತ್ಮನಿಗೆ ವೈಷಮ್ಯವೆಲ್ಲಿಹುದು ? ಎಂದಿದ್ದಾರೆ ॥೨೩॥

## (೩) "ಭಾವದರ್ಪಣ ಟೀಕಾ" —ವ್ಯಾಖ್ಯಾನ :—

ಈಗ ವೈಷಮ್ಯ ನೈರ್ಘೃಣ್ಯ ಶ್ರೀಹರಿಗಿಲ್ಲ. ಜೀವರ ಸ್ವಭಾವಾನುಸಾರ ಕರ್ಮ ಮಾಡಿಸುತ್ತಾನೆಂದು ಸದೃಷ್ಟಾಂತ ಹೇಳುತ್ತಾರೆ- "ವಾರಿದ" –ಎಂಬ ಪದ್ಯದಿಂದ.

ವಾರಿದ = ಮೇಘ ಇತ್ಯರ್ಥಃ ಯೋಗ್ಯತಾ ಮೀರದೇ-ಎಂದರೆ, ಪೂರ್ವ ಕರ್ಮಾನುಸರಿಸಿ ಮಾಡಿಸುವ, ಎಂದರ್ಥ.

**ಉಕ್ತಂಚ ಸೂತ್ರಭಾಷ್ಯೇ :–**

**"ಪುಣ್ಯಪಾಪಾದಿಕಂ ವಿಷ್ಣುಃ ಕಾರಯೇತ್ಪೂರ್ವಕರ್ಮಣಾ||" ಅನಾದಿತ್ವಾತ್ಕರ್ಮಣಶ್ಚ ನ ವಿರೋಧಃ ಕಥಂಚನೇತಿ"||**

ಮತ್ತು **"ಅನಾದಿ ಯೋಗ್ಯತಾ ಕರ್ಮಸಾಪೇಕ್ಷ್ಯೋಹಿ ಕರೋತ್ಯಜಃ||" —ಇತಿ ಸತ್ತತ್ವರತ್ನರಮಾಲಾವಚನಾಜ್ಞೇಯಂ ||**

**(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ—**

ವಾರಿದೇತಿ || ವಿಷ್ಣು ರಹಸ್ಯೇಚ || ವೃಕ್ಷಾದಿಪತ್ರಪುಷ್ಪಾದೌ ಚಿತ್ರಾಕಾರೋ ಹಿ ಜಾಯತೇ || ವಿಚಿತ್ರ ವರ್ಣಗಂಧಾದಿ ಸಾ ಮಾಯಾ ಪರಮಾಮಮೇತಿ || ವೈಷಮ್ಯಂ ವೇದಾಪ್ರಾಮಾಣ್ಯ ಕಾರಣಂ । ಕರ್ಮಾದ್ಯನಪೇಕ್ಷಫಲದಾನಾದಾಗತಂ ತದೇವಾನಂಗೀಕಾರ್ಯಂ ಇತಿಚೋಕ್ತಂ || ಅರ್ಥಾದಾಗತಂ ಚೋಪೇಯತೇ || **"ಉಪಪದ್ಯತೇ ಚ"** —ಇತ್ಯುಕ್ತೇಃ || ಕಿಂಚನ ವೈಷಮ್ಯಮಾತ್ರಾದ್ಧಾನಿಃ || ಕಿಂತು ಕೇನಾಪಿ ಬಾಧನದ್ವಾರಾ । ಸ್ವಾತ್ಮನೇತಿ ಸ್ವಾಧೀನೇತಿ । ಸಹಿಸ್ವಾಧೀ ನ ಮಿತಿ ಚ ಜಾಗರ್ತೀತಿ । ನ ಪರಂ ಬ್ರಹ್ಮ ಬಾಧ್ಯತೇ ಕೇನಾಪಿ || ಏಕೋನತ್ರಿಂಶಾದ್ಧ್ಯಾಯೇ ವಿಷ್ಣು ರಹಸ್ಯೇ ಚ || ನಹಿಸ್ವಶ್ವಾಸಮೋಕ್ಷೇಪಿ ಜೀವಃ ಸ್ವಾತಂತ್ರ್ಯಮೀಕ್ಷತೇ || ಸರ್ವಸ್ವಾಮೀ ಹರಿಸ್ತೇನ ಕಥಂ ವೈಷಮ್ಯಮರ್ಹತೀತಿ || ನ ವಿಷ್ಣೋರ್ವಿಷಮತ್ವಂ ತು ಯೋಗ್ಯತಾಪೇಕ್ಷಯಾಕ್ವಚಿತ್ || ಯೋಗ್ಯತಾಯಾಸ್ತನ್ನಿಯತ್ವಾತ್ವಿಷಮತ್ವಂ ಭವೇನ್ನವೇತಿ-ಸ್ಕಾಂದೇ || ವಿಷಮತ್ವಂ ತು ದೋಷಾಯ ಶುಭಾಶುಭ ವಿಪರ್ಯಯೇ || ಅತಸ್ತಾದೃಶವೈಷಮ್ಯಂ ಬ್ರಹ್ಮಸೂತ್ರೇ ನಿರಾಕೃತಂ || ಶುಭಾಶುಭ ನಿಯಂತೃತ್ವಂ ನ ದೋಷೋ ಗುಣಏವ ಸಃ || ಆತಸ್ತದಿಷ್ಟಂ ಕೃಷ್ಣಸ್ಯ ಬ್ರಹ್ಮಸೂತ್ರಕೃತೋ ವಿಭೋಃ :— ಇತಿ ತಂತ್ರ ನಿರ್ಣಯೇ || ||೨೩||

**ಕನ್ನಡಾರ್ಥ :—**

**ವಿಷ್ಣುರಹಸ್ಯ**ದಲ್ಲಿ— "ವೃಕ್ಷ, ಲತೆ, ಕೊಂಬೆ, ಎಲೆ, ಹೂವು, ಕಾಯಿ ಮತ್ತು ಫಲಗಳಲ್ಲಿ ಚಿತ್ರವಿಚಿತ್ರವಾದ ಆಕಾರ ಮತ್ತು ರೂಪವು ಉಂಟಾಗುತ್ತದೆ. ನಾನಾಪ್ರಕಾರವಾಗಿ ಗಂಧವಿಶೇಷವೂ ಉಂಟಾಗುವುದು. ಇದಕ್ಕೆಲ್ಲಾ ಶ್ರೀಪರಮಾತ್ಮನ ಅಂಚಿತ್ಯಾದ್ಭುತಶಕ್ತಿಯ ವಿಲಾಸವೇ ಕಾರಣವು" —ಎಂದು ಉಕ್ತವಾಗಿದೆ. ಪರಮಾತ್ಮನಲ್ಲಿ ವೈಷಮ್ಯಾದಿ ದೋಷಗಳಾವುವೂ ಇಲ್ಲ. ಇದೆ ಎಂದು ಹೇಳಿದರೆ ವೇದಕ್ಕೆ ಅಪ್ರಾಮಾಣ್ಯವನ್ನು ಹೇಳಬೇಕಾಗುತ್ತದೆ. ಈ ಕಾರಣದಿಂದ ಪರಮಾತ್ಮನಲ್ಲಿ ವೈಷಮ್ಯ ದೋಷ, ಕರ್ಮಾದಿಗಳಿಗನುಸಾರವಾಗಿ ಫಲವನ್ನೀಯದಿರುವುದು. ಇತ್ಯಾದಿ ಅಂಗೀಕರಿಸಕೂಡದು" —ಎಂದು ಹೇಳಲಾಗಿದೆ. ಆದರೆ ಕರ್ಮ ಮೊದಲಾದವುಗಳೂ ಪರಮಾತ್ಮನ ಅಧೀನದಲ್ಲಿಯೇ ಇವೆ. ಇದರಿಂದ ಅವನಿಗೆ ವೈಷಮ್ಯದೋಷವನ್ನು ಏಕೆ ಹೇಳಬಾರದು ? ಎಂಬ ಆಕ್ಷೇಪ ಬಂದರೆ, ಸೂತ್ರಕಾರರು ಹೇಳುತ್ತಾರೆ :- "ಸ್ವಾಧೀನವಾದ ಕರ್ಮಗಳನ್ನು ಅನುಸರಿಸಿ ಫಲವನಿತ್ತರೆ, ಅರ್ಥಾತ್ ಬರುವ ವೈಷಮ್ಯವು ಶ್ರುತಿಗಳಿಂದ ಒಪ್ಪಿತವಾಗಿರುವುದರಿಂದ ದೋಷವಾಗುವುದಿಲ್ಲ. ಅದು ಗುಣವೇ ಆಗಿದೆ" ಎಂದು **"ಉಪಲಭ್ಯತೇ ಚಾಪ್ಯುಪಪದ್ಯತೇ ಚ"** —ಎಂಬ ಸೂತ್ರದಲ್ಲಿ ಉಕ್ತವಾಗಿದೆ. ಕೇವಲ ವೈಷಮ್ಯದಿಂದ ಯಾವ ದೋಷವೂ ತಟ್ಟುವುದಿಲ್ಲ. ಯಾರಿಂದಲಾದರೂ ತನಗೆ ಬಾಧಕವಾಗುತ್ತಿದ್ದರೆ, ಆಗ ವೈಷಮ್ಯವು ಹಾನಿಕರವೆನಿಸಿಕೊಳ್ಳುವುದು. ಶ್ರೀ ಪರಮಾತ್ಮನು ಸರ್ವತಂತ್ರ ಸ್ವತಂತ್ರನು. ಆ ಕಾರಣದಿಂದಲೇ ಅವನಿಗೆ ಯಾರಿಂದಲೂ ಬಾಧೆ ಬರುವುದಿಲ್ಲ. **ವಿಷ್ಣುರಹಸ್ಯ**ದ ೧೯ನೆಯ ಅಧ್ಯಾಯದಲ್ಲಿ— "ಜೀವನಿಗೆ ತನ್ನ ಉಸಿರುಬಿಡುವುದರಲ್ಲಿಯೂ ಸ್ವತಂತ್ರನಲ್ಲ. ಹರಿಯು ಸರ್ವರಿಗೂ ಈಶನಿದ್ದಾನೆ. ಅವರವರ ಗುಣ ಕರ್ಮ ಮತ್ತು ಯೋಗ್ಯತೆಗಳನ್ನನುಸರಿಸಿ ಫಲಗಳನ್ನು ಕೊಡುತ್ತಾನೆ. ಇದರಿಂದ ಅವನಿಗೆ ವೈಷಮ್ಯವಿಲ್ಲ" —ಎಂದು ಹೇಳಲ್ಪಟ್ಟಿದೆ. **ಸ್ಕಾಂದ ಪುರಾಣದಲ್ಲಿ**—ಶ್ರೀಹರಿಯು ಜೀವರ ಸ್ವಭಾವ ಯೋಗ್ಯತೆಗಳಿಗನುಸಾರ

ಫಲವೀಯುವನು. ಇದರಿಂದ ಅವನಿಗೆ ವೈಷಮ್ಯವಿಲ್ಲ, ಯೋಗ್ಯತೆಯೂ ಹರಿಯ ಅಧೀನವಾದದ್ದು. ಆದರೂ ಅವನು ಅದನ್ನು ಸಹಜರೀತಿಯ ಲ್ಲಿಯೇ ಅಭಿವ್ಯಕ್ತಿಮಾಡುತ್ತಾನೆ. ಇದರಿಂದ ಅವನಿಗೆ ವಿಷಮತೆಯು ಎಂದೆಂದಿಗೂ ಇಲ್ಲ" —ಎಂದು ಉಕ್ತವಾಗಿದೆ. ಯೋಗ್ಯತೆಯನ್ನು ಮೀರಿ ಶುಭಾಶುಭಗಳಲ್ಲಿ ವ್ಯತ್ಯಾಸಮಾಡಿದರೆ (ಏರುಪೇರು) ಆಗ ವೈಷಮ್ಯವೆಂಬ ದೋಷವು ಬರುವುದು. ಶುಭಾಶುಭಗಳಲ್ಲಿ ವ್ಯತ್ಯಾಸಕಾರಕವಾದ ವೈಷಮ್ಯ ವನ್ನು **ಬ್ರಹ್ಮಸೂತ್ರ**ದಲ್ಲಿ ಸೂತ್ರಕಾರರು ನಿರಾಕರಿಸಿರುತ್ತಾರೆ. ಅದರಂತೆ ಶುಭಾಶುಭ ಫಲಗಳನ್ನೂ, ಅವುಗಳಿಗೆ ಕಾರಣಗಳಾದ ಕರ್ಮಸ್ವಭಾವ ಯೋಗ್ಯತೆಗಳನ್ನೂ ನಿಯಂತ್ರಿಸುವುದೂ ದೋಷವೆನಿಸುವುದಿಲ್ಲ. ಅದು ಶ್ರೀಹರಿಗೆ ಗುಣವೇ ಆಗಿದೆ. ಆದ್ದರಿಂದ ಶುಭಾಶುಭ ಫಲಪ್ರದತ್ವ-ಸ್ವಭಾವ ಯೋಗ್ಯತೆಗಳ ನಿಯಂತ್ರಣರೂಪವಾದ ವೈಷಮ್ಯಗುಣವು ಶ್ರೀ ವೇದವ್ಯಾಸ ರಿಗೆ ಇಷ್ಟವಾದುದರಿಂದ, **"ಉಪಪದ್ಯತೇ"** —ಎಂಬ ಸೂತ್ರದಲ್ಲಿ ಅಂಗೀ ಕೃತವಾಗಿದೆ—ಎಂದು **ತಂತ್ರನಿರ್ಣಯ** ಎಂಬ ಗ್ರಂಥದಲ್ಲಿ ನಿರೂಪಿತವಾಗಿದೆ. ॥೨೩॥

## (೫) "ಗುರುಹೃದಯಪ್ರಕಾಶಿಕೆ" —ವ್ಯಾಖ್ಯಾನ :—

ತ್ರಿವಿಧ ಜೀವರ ಕ್ರಿಯಾವ್ಯಕ್ತಿಗೆ ದೇವರೇ ಕಾರಣನಾದರೂ. ನಿತ್ಯಸುಖಿ ನಿತ್ಯ ದುಃಖಿ ಮತ್ತು ಮಿಶ್ರಗಳನ್ನು ಸ್ವಭಾವವ್ಯತ್ಯಾಸಮಾಡದಹಾಗೆ ಸ್ವಾಮಿ ಕೊಡುವುದು ನ್ಯಾಯ. ಹಾಗಲ್ಲದೆ ಏಕರೀತ್ಯಾ ಗತಿಕೊಟ್ಟರೆ, ವಸ್ತುವನ್ನೇ ಧ್ವಂಸಮಾಡಿದಂತಾಗುತ್ತದೆ. ಅದು ಹೇಗೆ ನ್ಯಾಯವಾದೀತೆಂದು ದೃಷ್ಟಾಂತ ಸಹಿತ ಬೋಧಿಸುತ್ತಾರೆ- "ವಾರಿದ" ಎಂದು. ವಾರಿದ ಎಂದರೆ ನೀರು ಕೊಡುವ ಮೇಘವು ಮಳೆಗರೆಯೆ—ಮಧುರಸದಿಂದ ಬೆಳೆದ ಬೇವು, ಕಬ್ಬು, ಹುಣಸೆ ಇವುಗಳ ರಸ ಪ್ರತ್ಯೇಕ ಸ್ವಭಾವನುಸಾರ ವ್ಯಕ್ತವಾಗುವಂತೆ, ರಮಾಪತಿಯು, ತ್ರಿವಿಧಜೀವರ ಯೋಗ್ಯತೆ ವ್ಯತ್ಯಾಸಮಾಡದೆ. ಗುಣ ಕರ್ಮಾನುಸಾರ ಫಲಕೊಡುವನು. ಇಂತಹ ದೇವರಿಗೆ ವೈಷಮ್ಯವಿಲ್ಲ ವೆಂಬುದು ನ್ಯಾಯ.

**"ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ।**
**ಸ್ವಭಾವಂ ಯಾಂತಿ ಭೂತಾನಿ ನಿಗ್ರಹಃ ಕಿಂ ಕರಿಷ್ಯತಿ ||"**

—**ಎಂಬ ಗೀತಾರ್ಥ** ವಿವರಿಸಿತು. ಇದರಿಂದ, ದೇವರು ತನ್ನ ಸಾಮರ್ಥ್ಯದಿಂದ ತ್ರಿವಿಧರಿಗೂ, ಸೌಖ್ಯಗತಿಯನ್ನೇ ಕೊಟ್ಟರೆ, ಎರಡು ಜೀವರ ಸ್ವಭಾವವೆಂಬ ವಸ್ತುಸ್ವರೂಪವನ್ನು ನಾಶಮಾಡಿದ ಅನ್ಯಾಯುವೇ ಬರುವುದೆಂಬರ್ಥವನ್ನು ಹೇಳಿದಂತಾಯಿತು. **"ನಿಗ್ರಹಃ ಕಿಂ ಕರಿಷ್ಯತಿ"** —ಎಂಬ ಗೀತಾರ್ಥ ॥೨೩॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಸರ್ವತಂತ್ರಸ್ವತಂತ್ರನಾದ ಶ್ರೀ ಪರಮಾತ್ಮನು ತ್ರಿವಿಧಜೀವರಾಶಿಗಳಲ್ಲಿ ಅಂತರ್ಯಾಮಿತ್ವೇನ ಇದ್ದು ಬಿಂಬಕ್ರಿಯಾ ದ್ವಾರಾ ಸಕಲ ವ್ಯಾಪಾರಗಳನ್ನೂ ಮಾಡಿ ಮಾಡಿಸುತ್ತಿರುವನು. ಜೀವರಾಶಿಯಲ್ಲಿ ಸಾತ್ವಿಕರು. ರಾಜಸರು ಮತ್ತು ತಾಮಸರು ಎಂದು ಮೂರು ಪ್ರಕಾರ. ಈ ತ್ರಿವಿಧ ಜೀವವರ್ಗ ಅನಾದಿನಿತ್ಯವಾದದ್ದು. ಅಂದರೆ, ಅವರವರ ಸ್ವರೂಪಯೋಗ್ಯತೆಯೂ ನಿತ್ಯವಾಗಿದ್ದು ಏಕಪ್ರಕಾರವಾಗಿದೆ. ಸರ್ವೇಶ್ವರನಾದ ಶ್ರೀ ಪರಮಾತ್ಮನು ಆಯಾಯಾ ಜೀವರ ಸ್ವರೂಪಯೋಗ್ಯತೆಗನುಗುಣವಾಗಿ ಕ್ರಿಯಾ ನಡೆಯಿಸುವನು. ಸಾತ್ವಿಕರು ಮುಕ್ತಿಯೋಗ್ಯಚೇತನರು. ಹರಿಭಕ್ತಿ, ಹರಿಭಕ್ತರಲ್ಲಿ ಅನುರಕ್ತಿ, ಸತ್ಕರ್ಮಾಚರಣೆ, ಇವೇ ಮುಂತಾದುವು ಅವರ ಮುಖ್ಯ ಲಕ್ಷಣಗಳು, ಅದರಂತೆಯೇ ಶ್ರೀಹರಿಯು ಸಾತ್ವಿಕರಲ್ಲಿ ಅವರ ಸಹಜವಾದ ಗುಣಕರ್ಮಗಳನ್ನು ನೈಜರೀತಿಯಲ್ಲಿ ಅಭಿವ್ಯಕ್ತಿಮಾಡುವನು. ಅಂತೆಯೇ ರಾಜಸರು ಮಿಶ್ರಜೀವರು. ಛಿದ್ರಭಕ್ತಿ, ಮಿಶ್ರಜ್ಞಾನ ಇವರ ಲಕ್ಷಣ, ಕಷ್ಟಬಂದಾಗ ದೇವರಸ್ಮರಣೆ, ಸುಖಾನುಭವಕಾಲದಲ್ಲಿ ಅಹಂಕಾರ ಮಮಕಾರಗ್ರಸ್ತರಾಗಿ ಭಗವಂತನನ್ನು ಮರೆಯೋಣ, ಇವು ಇವರ ಸ್ವರೂಪ ಲಕ್ಷಣಗಳು. ಅದರಂತೆಯೇ ಕಾರ್ಯವಿಶೇಷಗಳು. ತಾಮಸರು. ಹರಿದ್ವೇಷ, ಹರಿಭಕ್ತರಲ್ಲಿ ಪರಮದ್ವೇಷ, ಅಹಂಮಮತಾದಿಗಳಿಂದ ಪ್ರಮತ್ತರಾಗಿ, ಲೋಕಕಂಟಕರಾಗಿ ಸಜ್ಜನರಿಗೆ ನಿರಂತರವೂ ಹಿಂಸೆಯನ್ನುಂಟುಮಾಡುವುದು

ಇತ್ಯಾದಿ ಇವರ ಸ್ವಭಾವ. ಅದಕ್ಕನುಗುಣವಾದ ಕರ್ಮಾಚರಣೆ. ಸ್ವರೂಪ ದೇಹಕ್ಕೆ ಆವರ್ಕವಾಗಿ ಲಿಂಗದೇಹವಿದೆ. ಅನಾದಿಕರ್ಮದ ಬೀಜ ಲಿಂಗಗತ ವಾಗಿದೆ. ಲಿಂಗದೇಹಗತ ಪ್ರಾಕೃತ ತ್ರಿಗುಣಗಳ ವಿಕಾರದಿಂದ ಅನಾದಿ ಕರ್ಮಸಂಬಂಧವಾದ ಸಂಚಿತ ಆಗಾಮಿ ಕರ್ಮಗಳು ಫಲರೂಪವಾಗಿ ಜೀವನಲ್ಲಿ ಕ್ರಿಯಾಭಿವ್ಯಕ್ತಿಯಾಗುವುವು. ತ್ರಿಗುಣಗಳು-ಅನಾದಿಕರ್ಮ-ತತ್ಫಲರೂಪ ವಾದ ಕ್ರಿಯಾವಿಶೇಷಗಳನ್ನು ಶ್ರೀ ಪರಮಾತ್ಮನು ಆಯಾಯಾ ಜೀವರ ಸ್ವರೂಪಯೋಗ್ಯತೆಯನ್ನನುಸರಿಸಿ, ಅನಾದಿಕರ್ಮಾನುಸಾರವಾಗಿ, ವ್ಯಾಪಾರ ಗಳನ್ನು ತಾನೇ ಬಿಂಬಕ್ರಿಯಾದ್ವಾರಾ ನಡೆಯಿಸಿ, ಜೀವರ ಅನುಭವಕ್ಕೆ ತಂದು ಒದಗಿಸುವನು. ಆಗ "ಇಷ್ಟು ಕೆಲಸವನ್ನೂ ನಾನೇ ಮಾಡಿದೆ" —ಎಂಬ ಅಹಂ ಕರ್ತೃತ್ವಭಾವ ಜೀವನಲ್ಲಿ ಮೂಡುತ್ತದೆ. ಜ್ಞಾನಿಯಾದವನು ಅವೆಲ್ಲವೂ ಶ್ರೀ ಪರಮಾತ್ಮನ ಲೀಲಾವಿಲಾಸವೆಂದು ತಿಳಿಯುತ್ತಾನೆ. ಅಜ್ಞರು ಅಹಂ ಮಮಕಾರಗ್ರಸ್ತರಾಗುತ್ತಾರೆ. ಸ್ವರೂಪಯೋಗ್ಯತೆಯೂ ಮತ್ತು ಜೀವನ ಅನಾದಿಕರ್ಮರೂಪಪ್ರವಾಹವೂ ಭಗವಧೀನವಾದದ್ದೇ. ಆದರೂ ಸರ್ವಜ್ಞನಾದ ಶ್ರೀ ಪರಮಾತ್ಮನು ಸ್ವರೂಪಗುಣಗಳನ್ನು ಎಂದಿಗೂ ವ್ಯತ್ಯಾಸ ಮಾಡುವುದಿಲ್ಲ. ಜೀವರ ಸ್ವಭಾವನನ್ನು ಸಹಜರೀತಿಯಲ್ಲಿಯೇ ಅಭಿವ್ಯಕ್ತಿ ಗೊಳಿಸುವನು. ಇದರಿಂದ ಶ್ರೀಹರಿಗೆ ಪಕ್ಷಪಾತಾದಿ ದೋಷಗಳಾವುವೂ ಇಲ್ಲ. ಅವನು ವೈಷಮ್ಯವೆಂಬ ದೋಷದಿಂದ ರಹಿತನು. ಅವರವರ ಸ್ವರೂಪಯೋಗ್ಯತೆ ಮತ್ತು ಕರ್ಮಗಳಿಗನುಸಾರ ಕ್ರಿಯಾ ನಡೆಯಿಸಿ, ತತ್ಸಂಬಂಧವಾದ ಫಲಗಳನ್ನು ಕೊಡುತ್ತಿರುವುದರಿಂದ, ಶ್ರೀಪರಮಾತ್ಮನಿಗೆ "ಸಮ"ನೆಂದು ಹೆಸರು. ಈ ತತ್ವಾರ್ಥವನ್ನು ದಾಸರಾಯರು ಉತ್ತಮ ದೃಷ್ಟಾಂತದಿಂದ ವಿವರಿಸುತ್ತಾರೆ. ಮಳೆಯನ್ನು (ವಾರಿ) ಕೊಡುವುದರಿಂದ (ದ), ಮೇಘಗಳಿಗೆ "ವಾರಿದ" —ಎಂದು ಹೆಸರು. ಮಳೆಯನೀರು ಭೂಮಿಗೆ ಬೀಳುತ್ತದೆ. ಆ ನೀರಿನಿಂದ ಭೂಮಿಯು ತೊಯ್ದು, ವೃಕ್ಷಗಳು ಸೊಂಪಾಗಿ ಬೆಳೆಯುತ್ತವೆ. ಒಂದು ಬೀಜವನ್ನು ಭೂಮಿಯಲ್ಲಿ ಬಿತ್ತಿದಾಗ ತತ್ಸಂಬಂಧವಾದ ವೃಕ್ಷವು ಉತ್ಪತ್ತಿಯಾಗುವುದೇ ಹೊರತು, ಅನ್ಯಥಾ ಇಲ್ಲ. ಇದು ಅನುಭವಸಿದ್ಧವಾದ ವಿಷಯವು. ಬೀಜಕ್ಕೆ ತಕ್ಕಂತೆ ವೃಕ್ಷ. ಅದಕ್ಕನು

ಗುಣವಾಗಿ ಫಲೋತ್ಪತ್ತಿ. ಅದಕ್ಕನುಸಾರವಾಗಿ ಫಲಗತ ರಸವಿಶೇಷಗಳು, ಹಣ್ಣುಗಳಲ್ಲಿರುವ ರಸವಿಶೇಷಗಳು. ಈ ವಿಷಮತೆಗೆ ಬೀಜವು ಕಾರಣವೇ ಹೊರತು ಮಳೆಯನೀರು ಸಮಸ್ತ ವೃಕ್ಷರಾಶಿಗಳಿಗೂ ಏಕರೀತಿಯಾಗಿರುವುದು. ಆದರೆ ಫಲಗಳ ರುಚಿಗಳು ಬೇರೆ ಬೇರೆ. ಅಂತೆಯೇ ಸರ್ವಸಮಾನನೆನಿಸಿರುವ ಶ್ರೀ ಪರಮಾತ್ಮನ ಅಂತಃಕರಣವೆಂಬ ಗುಣವಿಶೇಷವು ವಾರಿಸದೃಶ (ಮಳೆಯ ನೀರಿನಂತೆ) ಜೀವರು ಬೀಜಗಳಿದ್ದಂತೆ. ಜೀವರ ಕರ್ಮಾನುಭವ ವಿವಿಧ ಫಲಗಳ ಭಿನ್ನ ಭಿನ್ನ ರಸವಿಶೇಷಗಳಿದ್ದಂತೆ. ಏತಾದೃಶಮಹಿಮೋಪೇತನಾದ ಶ್ರೀ ಹರಿಯು ಜೀವರ ವಿವಿಕ್ತಾ ನಿಷ್ಪಕ್ಷಪಾತಿಯಾಗಿದ್ದು, ಕ್ರಿಯಾನಡೆಯಿಸುತ್ತಾನೆಂದು ಈ ಪದ್ಯದ ತಾತ್ಪರ್ಯ ॥೨೩॥

## ಪದ್ಯ (೨೪)

**ಮೂಲ :—**

**ವಾರಿಜಾಪ್ತನ ಕಿರಣಮಣಿಗಳ ।**
**ಸೇರಿ ತತ್ತದ್ವರ್ಣಗಳನು ವಿ ।**
**ಕಾರಗೈಸದೆ ನೋಳ್ಪರಿಗೆ ಕಂಗೊಳಿಸುವಂದದಲಿ ॥**
**ನಾರಸುಣ ಲೋಕತ್ರಯದೊಳಿಹ ।**
**ಮೂರುವಿಧ ಜೀವರೊಳಗಿದ್ದು ವಿ ।**
**ಹಾರಮಾಡುವನವರ ಯೋಗ್ಯತೆ ಕರ್ಮವನುಸರಿಸಿ॥ ॥೨೪॥**

**ಅವತರಣಿಕೆ:—**

ಸೂರ್ಯನ ಕಿರಣಗಳು ನಾನಾಪ್ರಕಾರದ ಬಣ್ಣಗಳುಳ್ಳ ಮಣಿಗಳ ಮೂಲಕ ಪ್ರವಹಿಸುವಾಗ, ಆಯಾಯಾ ಮಣಿಗಳ ನೈಜವರ್ಣಗಳನ್ನು

ಸಹಜ ಸ್ಥಿತಿಯಲ್ಲಿಯೇ ಪ್ರಕಾಶಗೊಳಿಸುವುವು. ಅಂತೆಯೇ ಅನಂತಕೋಟಿ ಸೂರ್ಯಪ್ರಕಾಶನಾದ ಶ್ರೀ ಪರಮಾತ್ಮನು ಮೂರು ಲೋಕದಲ್ಲಿರುವ ಸಮಸ್ತ ತ್ರಿವಿಧ ಜೀವರಾಶಿಗಳಲ್ಲಿ ತಾನು ವ್ಯಾಪ್ತರೂಪದಿಂದ ಇದ್ದು, ಆಯಾಯಾ ಜೀವರ ಸ್ವರೂಪಯೋಗ್ಯತಾ ಮತ್ತು ಕರ್ಮಗಳಿಗುಣವಾಗಿ ಕ್ರಿಯಾಭಿವ್ಯಕ್ತಿ ಮಾಡಿಸುತ್ತಾ, ಲೀಲಾವೈಭವದಿಂದ ವಿಹರಿಸುತ್ತಿರುವನು ಎಂದು ಪೂರ್ವೋಕ್ತ ಪದ್ಯದಲ್ಲಿನ ತತ್ತ್ವಾರ್ಥವನ್ನು ಇನ್ನೊಂದು ದೃಷ್ಟಾಂತದಿಂದ ವಿವರಿಸುತ್ತಾರೆ "ವಾರಿಜಾಪ್ತನು" —ಎಂಬ ಈ ಪದ್ಯದಿಂದ ॥೨೪॥

**ಪ್ರತಿಪದಾರ್ಥ:—**

**ವಾರಿಜಾಪ್ತನ** = ಕಮಲಗಳಿಗೆ ಪ್ರಿಯಕರನಾದ ಸೂರ್ಯನ **ಕಿರಣ** = ಪ್ರಕಾಶಮಾನವಾದ ಕಿರಣಗಳ ಸಮೂಹವು **ಮಣಿಗಳ** = ವಜ್ರ, ನೀಲ, ಕೆಂಪು ಪಚ್ಚೆ ಮುಂತಾದ ರತ್ನಗಳ **ಸೇರಿ** = ಅವುಗಳಲ್ಲಿ ಪ್ರವಹಿಸಿ **ತತ್ತದ್ವರ್ಣಗಳನು** = ಆಯಾಯಾ ರತ್ನವಿಶೇಷಗಳ ನೈಜವಾದ ಬಣ್ಣಗಳನ್ನು **ನೋಳ್ಪರಿಗೆ** = ನೋಡತಕ್ಕ ಜನರಿಗೆ **ವಿಕಾರಗೊಳಿಸದೆ** = ಅವುಗಳ ಸಹಜವಾದ ಬಣ್ಣದಲ್ಲಿ ಯಾವ ವ್ಯತ್ಯಾಸವನ್ನೂ ಉಂಟುಮಾಡದೆ **ಕಂಗೊಳಿಸುವಂದದಲಿ** = ಪ್ರಕಾಶಮಾನವಾಗಿ ತೋರಿಸುವ ರೀತಿಯಲ್ಲಿ **ವಾರವಣ** = ಲಕ್ಷ್ಮೀಪತಿಯಾದ ಶ್ರೀಪರಮಾತ್ಮನು **ಲೋಕತ್ರಯದೊಳಿಹ** = ಭೂಲೋಕ, ಅಧೋಲೋಕ ಮತ್ತು ಊರ್ಧ್ವಲೋಕಗಳಿಂದ ಮೂರು ಲೋಕಗಳಲ್ಲಿರುವ **ಮೂರುವಿಧ ಜೀವರೊಳಗಿದ್ದು** = ಸಾತ್ವಿಕ (ದೇವ) ರಾಜಸ (ಮಾನವ) ಮತ್ತು ತಾಮಸರು (ದಾನವ) ಎಂಬ ತ್ರಿವಿಧ ಜೀವ ವರ್ಗದಲ್ಲಿ ವ್ಯಾಪ್ತರೂಪದಿಂದಿದ್ದು **ಆವರ** = ಆಯಾಯ ಜೀವರ **ಯೋಗ್ಯತೆ** = ಸ್ವರೂಪ ಯೋಗ್ಯತೆ **ಕರ್ಮವನುಸರಿಸಿ** = ಕರ್ಮವಿಶೇಷಗಳಿಗನುಸಾರವಾಗಿ **ವಿಹಾರಮಾಡುವನು** = ಭಗವದಿಚ್ಛೆಯಂತೆ ಲೀಲಾವೈಭವದಿಂದ ವಿಹರಿಸುತ್ತಿರುವನು (ಕ್ರೀಡಾವಿಶಿಷ್ಟನಾಗಿದ್ದಾನೆ). ॥೨೪॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಹಿಂದಿನ ಶ್ಲೋಕದ ಅಭಿಪ್ರಾಯವೇ ಇದಕ್ಕೂ ಅನ್ವಯ. ಒಂದೇ ಉದಕ ಆಯಾ ಬೀಜಗಳ ಸ್ವಭಾವಗುಣಗಳನ್ನು ವ್ಯಕ್ತಮಾಡುವ ರೀತಿಯಾಗಿ ಸೂರ್ಯನ ಕಿರಣಗಳು ಉದಕರೀತಿಯಾಗಿ ನಿರ್ದೋಷವಾಗಿದ್ದು, ಆದರೂ ವಿವಿಧ ವರ್ಣಯುಕ್ತವಾದ ಮಣಿಗಳಿಗೆ ಸಂಬಂಧವಾಗದಲೇ ಆಯಾ ಮಣಿಗಳ ಸ್ವರೂಪಯೋಗ್ಯತೆಯನ್ನು ವ್ಯಕ್ತಮಾಡುವಂತೆ, ಶ್ರೀಪರಮಾತ್ಮನು ನಿರ್ದೋಷನಾದ ಕಾರಣ, ಸತ್ವರಜಸ್ತಮೋಜೀವರಲ್ಲಿ ವ್ಯಾಪ್ತನಾಗಿ, ಅವರ ವರ ಸ್ವರೂಪಯೋಗ್ಯತೆಯನ್ನು ವ್ಯಕ್ತಮಾಡಿ, ಅವರವರ ಯೋಗ್ಯತಾನು ಸಾರ ಫಲಗಳ ಕೊಡೋವನಾಗಿದ್ದಾನೆ ಎಂತ ತಾತ್ಪರ್ಯ ॥೨೪॥

## (೨) "ಭಾವಪ್ರಕಾಶಿಕೆ" –ವ್ಯಾಖ್ಯಾನ :—

ಸೂರ್ಯನ ಕಿರಣವು ವಜ್ರ, ಕೆಂಪು, ನೀಲ ಮುಂತಾದ ಮಣಿಗಳ ಮೇಲೆ ಬಿದ್ದು, ಅವುಗಳ ಬಿಳುಪು, ಕೆಂಪು ಮೊದಲಾದ ವರ್ಣಗಳನ್ನು ವ್ಯತ್ಯಾಸ ಮಾಡದೆ, ಕೆಂಪು, ನೀಲ ಮೊದಲಾದ ವರ್ಣಗಳಿಂದಲೇ ಥಳಥಳಿ ಸುವಂತೆ ಶ್ರೀ ಪರಮಾತ್ಮನು ಸಾತ್ವಿಕಾದಿ ಜೀವರಾಶಿಗಳಲ್ಲಿದ್ದು, ಅವರವರ ಸ್ವಭಾವಗಳನ್ನು ವ್ಯತ್ಯಾಸ ಮಾಡದೆ, ಅವರವರ ಯೋಗ್ಯತೆಗಳನ್ನನುಸರಿಸಿ, ವಿಹಾರ ಮಾಡುತ್ತಿರುವನು. ॥೨೪॥

## (೩) "ಭಾವದರ್ಪಣಟೀಕಾ"—ವ್ಯಾಖ್ಯಾನ :—

"ನಿರ್ವಿಕಾರೋಕ್ಷರ ಶುದ್ಧಃ" —ಎಂಬ ಶ್ರುತ್ಯನುಸಾರ ವಿಕಾರಿಗತ ನಾದರೂ ತನ್ನ ಸೌಂದರ್ಯ ಲವಲೇಶವೂ ಕೆಡದಂತೆ ತಾನಿದ್ದು, ಅವರವರ ಯೋಗ್ಯತಾನುಗುಣವಾಗಿ ವಿಹಾರಮಾಡುವನೆಂದು ಉಕ್ತಾರ್ಥವನ್ನೇ

ದೃಢೀಕರಣಾರ್ಥ ಹೇಳುತ್ತಾರೆ— "ವ್ಯಾರಿಜಾಪ್ತ"—ಎಂಬ ಪದ್ಯದಿಂದ,

ಕಂಗೊಳಿಸುವಂದದಲಿ = ಕಣ್ಣಿಗೆ ರಮ್ಯವಾಗಿ ತೋರುವಂತೆ ಎಂದರ್ಥ ॥೨೪॥

## (೪) ಶ್ರೀ ಜಮಖಂಡಿವಾದಿರಾಜಾಚಾರ್ಯರ ವ್ಯಾಖ್ಯಾನ - (ಸಂಸ್ಕೃತಮೂಲ):—

ಉಕ್ತಾರ್ಥೇ ನಿದರ್ಶನಮಾಹ । ವಾರಿಜೇತಿ । ಕಂಗೊಳಿಸೋಣ = ತೋರೋಣ.

ಹಿಂದಿನ ಪದ್ಯದ ಅರ್ಥದಲ್ಲಿ ದೃಷ್ಟಾಂತವನ್ನು ಹೇಳುತ್ತಾರೆ– "ವಾರಿಜಾಪ್ತನ" ಎಂಬ ಪದ್ಯದಿಂದ. ಕಂಗೊಳಿಸು = ಪ್ರಕಾಶಮಾನವಾಗಿ ತೋರುವುದು ॥೨೪॥

## (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ:—

ಮಧುರರಸವುಳ್ಳ ಉದಕ ಒಂದರಿಂದಲೇ ವೃಕ್ಷರಸ ಬೇರೆಬೇರೆಯಾಗುವುದು ಜನರ ಕಣ್ಣಿಗೆ ಕಾಣಿಸುವುದಿಲ್ಲವಾದ್ದರಿಂದ, ಸ್ಥೂಲಬುದ್ಧಿಗಳಿಗೆ ಸೂರ್ಯಕಿರಣ ದೃಷ್ಟಾಂತದಿಂದ ತಿಳಿಸುತ್ತಾರೆ— "ವಾರಿಜಾಪ್ತನ" –ಎಂಬ ಪದ್ಯದಿಂದ. ವಾರಿಜಾಪ್ತ –ಎಂದರೆ ಸೂರ್ಯನ ಕಿರಣವು ಶುಭ್ರವಾದದ್ದು. ಅದು ವಜ್ರ, ನೀಲ, ಕೆಂಪು ಎಂಬ ತ್ರಿವಿಧ ಮಣಿಗಳನ್ನು ಸೇರಿ, ಆಯಾಯಾ ಮಣಿಗಳ ವರ್ಣಗಳನ್ನೇ ಎಂದರೆ ಬಿಳುಪು, ಕಪ್ಪು ಮತ್ತು ಕೆಂಪುಗಳನ್ನೇ ವ್ಯತ್ಯಾಸಮಾಡದೆ, ನೋಡುವ ಜನರಿಗೆ ಪ್ರಕಾಶಗೊಳಿಸುವಂತೆ, ಲಕ್ಷ್ಮೀಪತಿಯು ತ್ರಿವಿಧಜೀವರಲ್ಲಿದ್ದು, ಆಯಾಯಾ ಜೀವರ ಕರ್ಮಸ್ವಭಾವ ಅತಿಕ್ರಮಿಸದಂತೆ, ರಕ್ಷಿಸಿ, ಕ್ರೀಡೆಯಾಡುವನು. ನ್ಯಾಯಪ್ರಭು ಮತ್ತು ವ್ಯಾಪ್ತ ॥೨೪॥

## ಸರ್ವವ್ಯಾಖ್ಯಾನಸಾರಸಂಗ್ರಹ :—

ಅನಂತಕಲ್ಯಾಣ ಗುಣಗಣಾಕರನೂ, ಸರ್ವದೋಷವಿದೂರನೂ ಆದ

ಶ್ರೀ ಪರಮಾತ್ಮನಿಗೆ ಜೀವರಲ್ಲಿ ಯಾವ ಪ್ರಕಾರವಾದ ವೈಷಮ್ಯವಾಗಲೀ (ಪಕ್ಷವಾತ ಬುದ್ಧಿ), ನೈರ್ಘೃಣ್ಯವಾಗಲೀ (ನಿರ್ದಯೆ) ಇಲ್ಲವೇ ಇಲ್ಲ ಎಂಬ ಭಗವತ್ಸಂಬಂಧವಾದ ಪರಮತತ್ತ್ವಾರ್ಥವನ್ನು ದಾಸರಾಯರು ಹೃದಂಗಮವಾದ ದೃಷ್ಟಾಂತದಿಂದ "ವಾರಿಜಾಪ್ತನ" —ಎಂಬ ಈ ಪದ್ಯದಿಂದ ವಿವರಿಸುತ್ತಾರೆ.

ಸೂರ್ಯನು ಉದಯಿಸಿದಕೂಡಲೇ, ಕಮಲಗಳು ತಮ್ಮ ದಳಗಳನ್ನು ವಿಸ್ತರಿಸಿಕೊಂಡು ಅರಳುವುವು. ಈ ಕಾರಣದಿಂದ ಸೂರ್ಯನಿಗೆ "ಕಮಲ ಬಾಂಧವ" ಅಥವಾ "ವಾರಿಜಾಪ್ತ"ನೆಂದು ಹೆಸರು. ವಾರಿಜ– ಎಂದರೆ, ವಾರಿ = ನೀರಿನಲ್ಲಿ, ಜ = ಹುಟ್ಟಿದ್ದು-ಕಮಲ ಎಂದರ್ಥ. ಅಂತಹ ಕಮಲಗಳಿಗೆ ಬಹುಪ್ರಿಯನಾದ್ದರಿಂದ. ಸೂರ್ಯನಿಗೆ "ವಾರಿಜಾಪ್ತ"ನೆಂದು ಹೆಸರು ಸೂರ್ಯನ ಕಿರಣ ಅತ್ಯಂತ ಶುಭ್ರನಾಗಿದ್ದು, ಪ್ರಕಾಶಮಾನವಾಗಿರುತ್ತದೆ. ಕಮಲಗಳನ್ನು ಅರಳಿಸುವುದೇ ಸೂರ್ಯನ ಕಿರಣಗಳ ನೈಜಸ್ವಭಾವ. ಅಂತಹ ನಿರ್ದುಷ್ಟವಾದ ಸೂರ್ಯನ ಕಿರಣಗಳು ಕಾಂತಿಯುಕ್ತವಾದ ರತ್ನವಿಶೇಷಗಳ ಮೂಲಕ ಪ್ರವಹಿಸುತ್ತಿರುವಾಗ, ಆಯಾಯಾ ರತ್ನಗಳ ಸ್ವಾಭಾವಿಕವಾದ ಬಣ್ಣಗಳನ್ನು ಅಭಿವ್ಯಕ್ತಿ ಮಾಡುವುದು. ಉದಾಹರಣೆಗಾಗಿ. ವಜ್ರ, ಕೆಂಪು ಮತ್ತು ನೀಲಮಣಿಗಳನ್ನು ಸೂರ್ಯನ ಕಿರಣಗಳು ಪ್ರವೇಶಿಸಿದಾಗ, ಕ್ರಮವಾಗಿ ಆ ರತ್ನ ದಿಶೇಷಗಳ ಸಹಜ ವರ್ಣಗಳಾದ ಬಿಳುಪು, ಕೆಂಪು ಮತ್ತು ಕಪ್ಪು ಬಣ್ಣಗಳನ್ನು ಪ್ರಕಾಶಗೊಳಿಸುವುವು. ಈ ಕ್ರಿಯಾವಿಶೇಷದಲ್ಲಿ ಸೂರ್ಯನ ಕಿರಣಗಳು ಯಾವ ವಿಕಾರವನ್ನು ಹೊಂದುವುದಿಲ್ಲ. ಅಂತೆಯೇ ಆಯಾಯಾ ಮಣಿಗಳ ಸ್ವಾಭಾವಿಕ ವರ್ಣಗಳೂ ಸಹ ವಿಕೃತವಾಗುವುದಿಲ್ಲ. ಹೀಗೆ ಸೂರ್ಯನ ಕಿರಣಗಳು ತಾವೂ ವಿಕಾರಹೊಂದದೇ, ಮಣಿಗಳ ಸಹಜಸಿದ್ಧವಾದ ವರ್ಣಗಳನ್ನೂ ವಿಕಾರಗೈಸದೆ ಹೇಗೆ ನಿರ್ದುಷ್ಟವಾಗಿರುತ್ತವೆಯೋ, ಅಂತೆಯೇ, ಲಕ್ಷ್ಮೀಪಯಾದ ಶ್ರೀಪರಮಾತ್ಮನು ಬ್ರಹ್ಮಾಂಡಾಂತರ್ಗತ ತ್ರಿವಿಧಜೀವರಲ್ಲಿ ವ್ಯಾಪ್ತನಾಗಿದ್ದುಕೊಂಡೂ ಆಯಾಯಾ ಜೀವರ ಸಹಜವಾದ ಸ್ವರೂಪಯೋಗ್ಯತೆ ಮತ್ತು ಕರ್ಮಗಳನ್ನು ಅತಿಕ್ರಮಿಸದೆ, ವಿಹಾರಮಾಡುತ್ತಿರುವನು ಎಂದು ಸದ್ಭ

ಷ್ಟಾಂತಪೂರ್ವಕ ವಿವರಿಸುತ್ತಾರೆ. ಶ್ರೀ ಲಕ್ಷ್ಮೀದೇವಿಯು ತ್ರಿಗುಣಾಭಿಮಾನಿಗಳು. "ಶ್ರೀ" ರೂಪದಿಂದ ಪ್ರಾಕೃತ ಸಾತ್ವಿಕಗುಣಕ್ಕೆ ಅಭಿಮಾನಿಗಳಾಗಿಯೂ, "ಭೂ" ರೂಪದಿಂದ ರಜೋಗುಣಾಭಿಮಾನಿಗಳಾಗಿಯೂ ಮತ್ತು "ದುರ್ಗಾ" ರೂಪದಿಂದ ತಮೋಗುಣಾಭಿಮಾನಿಗಳಾಗಿಯೂ ವಿರಾಜಮಾನರಾಗಿದ್ದಾರೆ. ಮೂಲಪ್ರಕೃತಿಯ ಅಂಗಗಳಾದ ಈ ತ್ರಿಗುಣಗಳ ವೈಷಮ್ಯದಿಂದಲೇ ಜಗತ್ತಿನ ಸೃಷ್ಟಿ. ಈ ಕಾರಣದಿಂದಲೇ ದಾಸರಾಯರು "ಮಾರಮಣ" ಅಂದರೆ ಲಕ್ಷ್ಮೀಪತಿ ಎಂದು ಪದಪ್ರಯೋಗಮಾಡಿರುತ್ತಾರೆ. ಇದು ಎಷ್ಟು ಉಚಿತವಾಗಿದೆ ! ಅಂತಹ ಮಾರಮಣನಾದ ಲಕ್ಷ್ಮೀಪತಿಯು ಸೂರ್ಯಸದೃಶ. ಸೂರ್ಯ ತೇಜೋಮಯವಾದ ವಸ್ತು. ಅಂತೆಯೇ ಶ್ರೀಪರಮಾತ್ಮನು ಅನಂತಕೋಟಿ ಸೂರ್ಯಪ್ರಕಾಶವುಳ್ಳವನು. ಆತನ ತೇಜಸ್ಸು ಓಜಸ್ಸು ಅಪರಿಮಿತ. ಸೂರ್ಯನ ಕಿರಣಗಳು ಶುಭ್ರವಾಗಿ, ದೋಷರಹಿತವಾದದ್ದು. ಹಾಗೆಯೇ ಶ್ರೀ ಪರಮಾತ್ಮನು ನಿತ್ಯಾನಂದ ಉದ್ರಿಕ್ತವಸ್ತು. ಸರ್ವದೋಷರಹಿತನು. ತ್ರಿವಿಧ ಜೀವರಲ್ಲಿ ಸಾತ್ವಿಕರು ವಜ್ರಸದೃಶ, ರಜೋಜೀವರು ಕೆಂಪುಮಣಿ ಸದೃಶ ಮತ್ತು ತಮೋಯೋಗ್ಯರು ನೀಲವರ್ಣಸದೃಶರು. ಸೂರ್ಯನ ಕಿರಣಗಳು ಈ ಮಣಿಗಳಲ್ಲಿ ವ್ಯಾಪ್ತವಾದಾಗ (ಪ್ರವೇಶಕಾರ್ಯದ್ವಾರಾ). ಆಯಾಯಾ ಮಣಿಗಳ ವರ್ಣವಿಶೇಷಗಳನ್ನೇ ಸ್ವಲ್ಪವೂ ವ್ಯತ್ಯಾಸವಾಗದಂತೆ (ವಿಕಾರಗೈಸದೆ) ಕಂಗೊಳಿಸುವುವು. ಅಂತೆಯೇ ಸರ್ವದೋಷವಿದೂರನಾದ ಶ್ರೀಪರಮಾತ್ಮನು ಇಂತಹ ತ್ರಿವಿಧಜೀವರಲ್ಲಿ ಬಿಂಬರೂಪಿಯಾಗಿದ್ದು, ಅವರ ಸ್ವರೂಪದ ಸ್ವಭಾವವನ್ನು ಸ್ವಲ್ಪವೂ ವ್ಯತ್ಯಾಸಮಾಡದೆ, ಅವರವರ ಸ್ವರೂಪಯೋಗ್ಯತೆ ಮತ್ತು ತ್ರಿಗುಣಜನ್ಯವಾದ ಅನಾದಿ ಕರ್ಮವನ್ನು ಅನುಸರಿಸಿ, ಅವುಗಳನ್ನು ಎಂದೂ ಅತಿಕ್ರಮಿಸದೆ, ಕ್ರೀಡಾವಿಲಾಸಗಳನ್ನು ನಡೆಯಿಸುವನು (ವಿಹಾರಮಾಡುವನು), ಜೀವರ ಸ್ವರೂಪ ನಿತ್ಯ ಮತ್ತು ಅನಾದಿ. ಹೀಗೆ ಅನಾದಿ ನಿತ್ಯವಾದ ಸ್ವರೂಪದೇಹಕ್ಕೆ ಎಂದೂ ನಾಶವಿಲ್ಲ. ಅದು ಎಂದೆಂದಿಗೂ ಅವಿನಾಶಿ. ಸ್ವರೂಪವ್ಯತ್ಯಾಸ ಮಾಡುವುದೆಂದರೆ, ಸ್ವರೂಪನಾಶವೇ ಆಗುತ್ತದೆ. ಶ್ರೀಹರಿಯು ಸತ್ಯಸಂಕಲ್ಪನು. ಇವನ ಇಚ್ಛಾಶಕ್ತಿ ಸತ್ಯದ್ಯೋತಕವಾಗಿದೆ. ಆತನೂ ಸತ್ಯ

ಮತ್ತು ಅವನಿಂದ ಸೃಷ್ಟವಾದ ಚೇತನವರ್ಗ ಮತ್ತು ಜಗತ್ತೂ ಸಹ ಸತ್ಯಾತ್ಮಕವಾದದ್ದೇ. ಆಯಾಯಾ ವಸ್ತುಗಳ ಸ್ವರೂಪಭೂತವಾದ ಸಹಜಗುಣಗಳನ್ನು ಅಭಿವ್ಯಕ್ತಿ ಮಾಡುವುದೇ ಸೃಷ್ಟಿಯ ವ್ಯಾಪಾರ ಮತ್ತು ಅದರ ಅಂತಿಮ ಗುರಿ. (ಸ್ವರೂಪಗುಣಾನುಭವ) ಅದರಂತೆಯೇ ಜಗತ್ಕ್ರೀಡಾ ವಿಶಿಷ್ಟನಾದ ಶ್ರೀಹರಿಯ ಕರುಣಾವಿಲಾಸ ! ॥೨೪॥

## ಪದ್ಯ (೨೫)

ಮೂಲ :—

ಜಲವನಪಹರಿಸುವ ಘಳಿಗೆ ಬ ।
ಟ್ಟಲನುಳಿದು ಜೈಘಂಟೆ ಕೈಪಿಡಿ ।
ದೆಳೆದು ಹೊಡೆವಂದದಲಿ ಸಂತತ ಕರ್ತೃ ತಾನಾಗಿ ॥
ಹಲಧರಾನುಜ ಪುಣ್ಯಪಾಪದ ।
ಫಲಗಳನು ದೇವಾಸುರರ ಗಣ ।
ದೊಳು ವಿಭಾಗವಮಾಡಿ ಉಣಿಸುತ ಸಾಕ್ಷಿಯಾಗಿಪ್ಪ ॥ ॥೨೫॥

ಅವತರಣಿಕೆ :—

ಸರ್ವತಂತ್ರ ಸ್ವತಂತ್ರನಾದ ಶ್ರೀ ಪರಮಾತ್ಮನು ಜೀವರಲ್ಲಿ ತಾನೇ ಅಂತರ್ಯಾಮಿರೂಪದಿಂದ ಇದ್ದು, ದೇವ, ಮಾನವ, ದಾನವರೆಂಬ ತ್ರಿವಿಧ ಜೀವರ ಅಧಿಷ್ಠಾನಗತನಾಗಿ ತಾನೇ ಸಮಸ್ತ ಕ್ರಿಯಾವಿಶೇಷಗಳನ್ನೂ ಬಿಂಬ ಕ್ರಿಯಾದ್ವಾರ ಮಾಡಿ, ಪ್ರತಿಬಿಂಬಕ್ರಿಯಾದ್ವಾರಾ ಅವರಿಂದ ಮಾಡಿಸುತ್ತಾ, ತಾನೇ ಸರ್ವಕ್ಕೂ ಕರ್ತೃವಾಗಿ ಆಯಾಯಾ ಜೀವರ ಕರ್ಮಜನ್ಯವಾದ ಪುಣ್ಯ, ಮಿಶ್ರ ಮತ್ತು ಪಾಪರೂಪವಾದ ಫಲಗಳನ್ನು ವಿಭಾಗಮಾಡಿ, ಅವರವರ

ಅನುಭವಕ್ಕೆ ತಂದು. ಭೋಗಿಸುವಂತೆ ಮಾಡಿಸಿ, ತಾನು ಮಾತ್ರ ನಿರ್ಲಿಪ್ತನಾಗಿ, ಪರಮ ವಿಲಕ್ಷಣನಾಗಿದ್ದು "ಸಾಕ್ಷಿ" ಎಂದು ಕರೆಯಿಸಿಕೊಳ್ಳುತ್ತಾನೆ ಎಂದು ಹೇಳುತ್ತಾರೆ. "ಜಲವ" ಎಂಬ ಈ ಪದ್ಯದಿಂದ. ಇದನ್ನು ಘಳಿಗೆ ಬಟ್ಟಲಿನ ದೃಷ್ಟಾಂತದಿಂದ ಮನಮುಟ್ಟುವಂತೆ ನಿರೂಪಿಸಿರುತ್ತಾರೆ. ॥೨೫॥

**ಪ್ರತಿಪದಾರ್ಥ :—**

**ಜಲವನಪಹರಿಸುವ** = ನೀರನ್ನು ಆಕರ್ಷಣ ಮಾಡತಕ್ಕ (ಸ್ವೀಕರಿಸುವ) **ಘಳಿಗೆ ಬಟ್ಟಲನು** = ಘಳಿಗೆ (ಮುಹೂರ್ತಕಾಲ)ಯನ್ನು ಸೂಚಿಸುವ (ಅಳತೆಯ ದ್ವಾರಾ) ಬಟ್ಟಲನ್ನು **ಉಳಿದು** = ಅಲ್ಲಿಯೇ ಬಿಟ್ಟು **ಜೈಘಂಟೆಯ** = ಝಾಂಗಟೆಯನ್ನು **ಕೈಪಿಡಿದೆಳೆದು** = ಕೈಯಿಂದ ಹಿಡಿದು ತನ್ನ ಮುಂದಕ್ಕೆ ಎಳೆದುಕೊಂಡು **ಹೊಡೆವಂದದಲಿ** = ಹೊಡೆಯುವ ರೀತಿಯಲ್ಲಿ **ಸಂತತ** = ನಿರಂತರವೂ (ಅನಾದ್ಯನಂತಕಾಲದಿಂದಲೂ) **ಕರ್ತೃ** = ತ್ರಿವಿಧ ಜೀವರಿಗೂ ಬಿಂಬವಾಗಿ ಸರ್ವೇಂದ್ರಿಯ ವ್ಯಾಪಾರ ಮಾಡತಕ್ಕವ **ತಾನಾಗಿ** = ಸ್ವಯಂ (ಪರಾಪೇಕ್ಷಾರಹಿತನಾದ ಶ್ರೀ ಪರಮಾತ್ಮನು ತಾನೇ ತಾನಾಗಿ) **ಹಲಧರಾನುಜ** = ಬಲರಾಮದೇವರ ತಮ್ಮನಾದ ಶ್ರೀ ಕೃಷ್ಣಪರಮಾತ್ಮನು (ಹಲ = ನೇಗಿಲು ಎಂಬ ಆಯುಧವಿಶೇಷವನ್ನು ; ಧರ = ಧರಿಸಿರುವವನು–ಬಲರಾಮ) **ಪುಣ್ಯಪಾಪದ ಫಲಗಳನು** = ಕರ್ಮಜನ್ಯವಾದ ಪುಣ್ಯ ಮತ್ತು ಪಾಪಗಳೆಂಬ ಫಲಗಳನ್ನು (ಸುಕರ್ಮಜನ್ಯ ಪುಣ್ಯಫಲವು ಮತ್ತು ದುಷ್ಕರ್ಮಜನ್ಯ ಪಾಪಫಲವು) **ದೇವ** = ಸಕಲೇಂದ್ರಿಯ ವ್ಯಾಪಾರಗಳನ್ನೂ ಭಗವದಾಜ್ಞೆಯಂತೆ ನಡೆಯಿಸತಕ್ಕ ತತ್ತ್ವಾಭಿಮಾನಿ ದೇವತೆಗಳು **ಅಸುರರ** = ಅಂತೆಯೇ ದುಷ್ಕರ್ಮಪ್ರೇರಕರಾದ ತತ್ತ್ವದೈತ್ಯರುಗಳ **ಗಣದೊಳು** = ಸಮೂಹದಲ್ಲಿ **ವಿಭಾಗವನಮಾಡಿ** = ಪುಣ್ಯ ಪಾಪ ಫಲಗಳಿಂದ ವಿಭಾಗಿಸಿ, ಪುಣ್ಯಫಲವನ್ನು ದೇವತೆಗಳಿಗೂ. ಪಾಪಫಲವನ್ನು ದೈತ್ಯರಿಗೂ **ಉಣಿಸುತ** = ಭೋಗಯೋಗ್ಯವಾಗುವಂತೆ ಮಾಡಿ, ಅವರ ದ್ವಾರಾ ಜೀವರ ಅನುಭವಕ್ಕೆ ತತ್ಸಂಬಂಧ ಫಲಗಳನ್ನು ತಂದುಕೊಡುತ್ತಾ **ಸಾಕ್ಷಿಯಾಗಿಪ್ಪ** = ಜೀವರ ದ್ವಾರಾ ನಡೆಯುವ ಕರ್ಮಗಳಿಗೆ ಲೋಪವಾಗ

ದಂತೆ ವ್ಯಾವರ್ತನಾಗಿದ್ದು, ಸರ್ವ ಕರ್ಮಗಳಿಗೂ ಮತ್ತು ತತ್ಸಂಬಂಧವಾದ ಫಲಗಳಿಗೂ "ಸಾಕ್ಷಿ" ಎಂದೆನಿಸಿಕೊಳ್ಳುವನು. ॥೨೫॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಜಲವನ್ನು ಆಕರ್ಷಣ ಮಾಡುವ ಘಳಿಗೆ ಎಂಬ ಬಟ್ಟಲು ಸಂಕೇತ ಪಾತ್ರೆಯನ್ನು ಅಲ್ಲಿಯೇ ಉಳಿಸಿದವರಾಗಿ, ಸರ್ವರಿಗೂ ಕಾಲಸಂಕೇತ ತಿಳಿಯೋನಿಮಿತ್ತ, ಪುರುಷನಾದವನು ಝಾಂಗಟೆಯನ್ನು ಕೈಯ್ಯಿಂದ ಹಿಡಿದು ತನ್ನ ಮುಂಭಾಗಕ್ಕೆ ಎಳೆದುಕೊಂಡು, ಹೊಡೆಯುವೋಪಾದಿಯಲ್ಲಿ, ಶ್ರೀ ಪರಮಾತ್ಮನು ಭಕ್ತರನ್ನು ರಕ್ಷಿಸಿ, ದುಷ್ಟರನ್ನು ಶಿಕ್ಷಾ ಮಾಡತಾನೆ ಎಂದು ತಾತ್ಪರ್ಯ.

ಇಲ್ಲಿ ದೃಷ್ಟಾಂತದ ವಿವರಗಳು :—

(೧) ಉದಕಯುಕ್ತ ಪಾತ್ರೆಯೇ ಶ್ರೀ ಪರಮಾತ್ಮ.

(೨) ತದ್ಗತ ಉದಕವೇ ಶ್ರೀ ಪರಮಾತ್ಮನ ಗುಣಗಳು.

(೩) ತದ್ಗತ ಬಟ್ಟಲು ಜೀವನು.

(೪) ಬಟ್ಟಲಿಗೆ ವಿದ್ಯಮಾನವಾದ ಛಿದ್ರವೇ (ರಂಧ್ರ), ಜೀವನಾದವನು ಛಿದ್ರಯುಕ್ತನು, ಅಪೂರ್ಣನು ಎಂಬ ಜ್ಞಾನವು.

(೫) ಆ ಛಿದ್ರದಿಂದ ಉದಕ ಸ್ವೀಕಾರದಾವದದೆ, ಅದೇ ಶ್ರೀಪರಮಾತ್ಮನ ಅಸದೃಶವಾದ ಗುಣಗಳ ಉಪಾಸನಾರೂಪವಾದ ಪಾನವು.

(೬) ಬಟ್ಟಲು ಮುಳುಗೋಣ ಎಂಬುದು ಬಾಹ್ಯಜ್ಞಾನಶೂನ್ಯನಾಗಿ ಗುಣೋದಕದಲ್ಲಿ ಮುಳುಗೋಣ ಅಂದರೆ ಅಂತರ್ಲಕ್ಷಣವಾಗೋಣ.

(೭) ಕಾಲ ಅನ್ಯರಿಗೆ ತೋರಿಸಿಕೊಡೋಣ ಎಂಬುದೇ ಕಾಲನಾಮಕ ಪರಮಾತ್ಮನ ಗುಣಗಳ ಅನ್ಯರಾದ ಭಗವದ್ಭಕ್ತರಿಗೆ ತಿಳಿಸಿಕೊಡೋಣ.

ಜ್ಞಾನ. ಭಕ್ತಿ, ಇತ್ಯಾದಿಗಳು ಬಟ್ಟಲುಸದೃಶರಾದ ಭಕ್ತರಿಗೆ ಇರೋಣದರಿಂದ ಅವರನ್ನ ಶ್ರೀಹರಿ ಶಿಕ್ಷಿಸೋದಿಲ್ಲ. ಝಾಂಗಟೆ ಸದೃಶ ರಾದವರು ದೈತ್ಯರು. ಝಾಂಗಟೆಯು ಹೊಡೆಯುತಕ್ಕ ಪುರುಷಸದೃಶನಾದವ ಶ್ರೀ ಪರಮಾತ್ಮನು. ಬಟ್ಟಲಿಗೆ ಸದೃಶರಾದ ದೇವತೆಗಳಿಂದ ಸಮೇತನಾಗಿ ದೈತ್ಯರ ದೇಹಗಳಲ್ಲಿದ್ದು, ಉದಕಪಾನಸದೃಶ ತಮ್ಮ ಸಾಧನಮಾಡಿ, ಬಟ್ಟಲು ಮುಳುಗೋಪಾದಿಯಲ್ಲಿ ತಾವುಗಳು ವ್ಯಾವರ್ತರಾಗಿ, ಝಾಂಗಟೆ ಸದೃಶ ದೈತ್ಯರನ್ನ ವಾಯುದೇವರೆಂಬ ಕೋಲಿನಿಂದ ಶ್ರೀ ಪರಮಾತ್ಮ ಝಾಂಟೆಯನ್ನು ಹೊಡೆದೋಪಾದಿಯಲ್ಲಿ ಶಿಕ್ಷಾಮಾಡತಾನೆ, ಕಾಲವನ್ನು ಅನುಸರಿಸಿ ಎಂತ ಅರ್ಥ. ಭಗವದ್ಭಕ್ತರಲ್ಲದವರಿಗೆ ಆಗತಕ್ಕ ಶಿಕ್ಷಾ ಇಂಥಾದ್ದು ಎಂತ ತಿಳಿಸತಾನೆ. ಕಾಲವಾಗತಾ ಬಂತು–ಸಜ್ಜನರು ಬೇಗ ಬೇಗ ಸತ್ಸಾಧನೆ ಮಾಡಿರಿ -ಎಂತಲೂ ಕಾಲಗಳ ತಿಳಿಸಿಕೊಡತಾನೆ. ಈ ಪ್ರಕಾರ ಭಕ್ತಾಭಕ್ತರ ರಕ್ಷಣ ಶಿಕ್ಷಣ ಮಾಡತಕ್ಕ ಶ್ರೀ ಪರಮಾತ್ಮ, ನಿರಂತರದಲ್ಲಿಯೂ ತ್ರಿವಿಧ ಜೀವರಿಗೂ ಬಿಂಬನಾದ ಸರ್ವೇಂದ್ರಿಯ ವ್ಯಾಪಾರ ಮಾಡಿಸತಕ್ಕವನಾಗಿ, ಹಲಧರನಾದ ಬಲರಾಮದೇವರ ತಮ್ಮನಾದ ಶ್ರೀಕೃಷ್ಣರೂಪಾಭಿನ್ನ ಶ್ರೀ ಪರಮಾತ್ಮನು ಇಂದ್ರಿಯಜನಿತ ಪುಣ್ಯಪಾಪಕರ್ಮಗಳ ಭೋಗಯೋಗ್ಯ ಫಲಗಳನ್ನು ದೇಹಾಂತರ್ಗತಜೀವ, ತತ್ವದೇವತೆಗಳಿಗೆ, ದೈತ್ಯರಿಗೆ, ನಿತ್ಯಸಂಸಾರಗಳಿಗೆ ಇವರ ಅಂತರ್ಗತನಾಗಿದ್ದು (ಗಣದೊಳು), ಮೂರು ಪ್ರಕಾರ ವಿಭಾಗ ಮಾಡಿಕೊಟ್ಟು ಜೀವನಭಾಗ ಅವನಿಗೆ ಭಾಗಮಾಡಿಕೊಟ್ಟು, ಪೂರ್ವೋಕ್ತ ಬಟ್ಟಲು ಝಾಂಗಟೆಗೆ ಉಣಿಸಿ ದೋಪಾದಿಯಲ್ಲಿ (ಉಣಿಸುತ) ಸುಖವನ್ನೂ, ಝಾಂಗಟೆ ಪೆಟ್ಟು ತಿಂದುದೋಪಾದಿಯಲ್ಲಿ ದುಃಖವನ್ನೂ, ಈ ಪ್ರಕಾರ ದೇವದೈತ್ಯರಿಗೆ ಭೋಜನ ಮಾಡಿಸುತ್ತಾ, ತಾನು ಝಾಂಗಟೆ

ಬಡಿಯುವ ಪುರುಷನೋಪಾದಿಯಲ್ಲಿ ಜೀವರು ಮಾಡತಕ್ಕ ಕರ್ಮಗಳಿಗೆ ಲೋಪವಾಗದಂತೆ ವ್ಯಾವರ್ತನಾಗಿ ಸಾಕ್ಷಿಯಾಗಿರುತ್ತಾನೆ (ಸಾಕ್ಷಿಯಾಗಿಪ್ಪ) ಯಮಲೋಕದಲ್ಲಿ ಯಮನ ವಿಚಾರಕಾಲದಲ್ಲಿ ಪುಷ್ಕರಾಂತರ್ಗತನಾಗಿ ಸಾಕ್ಷಿ ಹೇಳೋವನಾಗತಾನೆ ಎಂತ ತಾತ್ಪರ್ಯ.

ಈ ರೀತಿಯಾಗಿ ಶ್ರೀ ಪರಮಾತ್ಮನು ಸಮಸ್ತರಲ್ಲಿ ಕರ್ಮಸಾಕ್ಷಿಯಾಗಿದ್ದು, ಕರ್ಮ ಫಲಗಳನ್ನು ಮೂರುಪ್ರಕಾರ ವಿಭಾಗಮಾಡಿ, ದೇಹಾಂತರ್ಗತ ಜೀವನಿಗೆ ತತ್ವಾಭಿಮಾನಿದೇವತೆಗಳಿಗೆ, ತಥಾ ದೈತ್ಯರಿಗೆ, ಅವರವರ ಯೋಗ್ಯತಾನುಸಾರ ಜೀವಂದು ಜೀವಗೆ ಕೊಟ್ಟು. ದೇವತೆಗಳಿಗೆ, ಬಟ್ಟಲು ಸದೃಶ ಸುಖವನ್ನೂ ಮತ್ತು ದೈತ್ಯರಿಗ ಝಾಂಗಟೆ ಸದೃಶ ದುಃಖವನ್ನೂ ಕೊಟ್ಟು, ಸರ್ವಸಾಕ್ಷಿಯಾಗಿದ್ದು ಸಂರಕ್ಷಣೆ ಮಾಡತಾನೆ ಎಂತ ತಾತ್ಪರ್ಯ ॥೨೫॥

## (೨) "ಭಾವಪ್ರಕಾಶಿಕೆ"— ವ್ಯಾಖ್ಯಾನ :—

ಕಾಲವನ್ನು ಅಳೆಯುವುದಕ್ಕಾಗಿ ನಾಲ್ಕು ಅಂಗುಲ ಉದ್ದ, ನಾಲ್ಕು ಅಂಗುಲ ಅಗಲ ಮತ್ತು ನಾಲ್ಕು ಅಂಗುಲ ಆಳವಾಗಿಯೂ ಇರುವ ಒಂದು ಬಟ್ಟಲನ್ನು ಮಾಡಿಸಿ, ಅದರ ತಳದ ಮಧ್ಯದಲ್ಲಿ ಒಂದು ಸಣ್ಣ ರಂದ್ರವನ್ನು ಮಾಡಿರುವರು. ಇದಕ್ಕೆ "ಘಳಿಗೆ ಬಟ್ಟಲು" —ಎಂದು ಹೆಸರು. ಇದನ್ನು ಮಾಡುವ ಕ್ರಮವನ್ನು ಭಾಗವತದಲ್ಲಿ ಹೇಳಿರುವರು.

"ದ್ವಾದಶಾರ್ಧಪಲೋನ್ಮಾನಂ ಚತುರ್ಭಿಶ್ಚತುರಂಗುಲೈಃ ||
ಸ್ವರ್ಣ ಮಾಷೈಃ ಕೃತಚ್ಛಿದ್ರಂ ಯಾವತ್ಪ್ರಸ್ಥಂ ಜಲಂ ಪಿಬೇತ್ ||"

ಆರುಪಲಕಾಳು ಎಂದರೆ ೧೮ ತೊಲ ಅಕ್ಕಿಕಾಳು ಹಿಡಿಯುವ ಒಂದು ಹಿತ್ತಾಳೆ ಅಥವಾ ತಾಮ್ರದ ಗುಂಡು ಬಟ್ಟಲನ್ನು ಸಿದ್ಧಪಡಿಸಬೇಕು. ಅದರ ಮಧ್ಯದಲ್ಲಿ ೨೦ ಗುಂಜಿ ತೂಕ ಭಂಗಾರವನ್ನು ನಾಲ್ಕು ಅಂಗುಲ ಪ್ರಮಾಣ ಉದ್ದವಾಗಿ ತಂತಿಯನ್ನಾಗಿ ಮಾಡಿ, ಅದು ಹಿಡಿಯುವಂತೆ ಒಂದು ರಂಧ್ರವನ್ನು ಮಾಡಬೇಕು, ದೊಡ್ಡದಾದ ಒಂದು ಗಂಗಾಳದಲ್ಲಿ ನೀರನ್ನು ತುಂಬಿ,

ಅದರಲ್ಲಿ ಆ ಬಟ್ಟಲನ್ನು ಬಿಟ್ಟರೆ, ಅದರ ಮಧ್ಯದ ದ್ವಾರದಿಂದ ನೀರು ತುಂಬುತ್ತಾ ಬಂದರೆ, ಸಂಪೂರ್ಣವಾಗಿ ಬಟ್ಟಲು ತುಂಬಿ, ಮುಳುಗಬೇಕಾದರೆ ಸರಿಯಾಗಿ "ಒಂದು ಘಳಿಗೆ" ಹೊತ್ತು ಬೇಕಾಗುವುದು. ಇದಕ್ಕೆ "ಘಳಿಗೆ ಬಟ್ಟಲು"– ಎಂದು ಹೇಳುವರು. ಇಂತಹ ಪಾತ್ರೆಯನ್ನು ನೀರೊಳಗೆ ಬಿಟ್ಟು, ಅದು ಮುಳುಗಿದ ತಕ್ಷಣ ಝಾಂಗಟೆಯನ್ನು ಕೈಯ್ಯಲ್ಲಿ ಹಿಡಿದು ಒಬ್ಬ ಗಂಟಾಸೂಚಕನು ಮೊದಲು ಒಂದು. ಆಮೇಲೆ ಎರಡು ಮತ್ತು ಮೂರು, ನಾಲ್ಕು...ಹೀಗೆ ಘಳಿಗೆಗಳು ಆದಂತೆಲ್ಲಾ ಘಂಟೆಗಳನ್ನು ಎಣಿಸಿ ಹೊಡೆಯುವನು. ಇದರಲ್ಲಿ ಘಂಟಾಸೂಚಕನು ಗಂಗಾಳದಲ್ಲಿ ನೀರನ್ನು ತುಂಬಿ, ಅದರಲ್ಲಿ ಘಟಿಕಾಪಾತ್ರೆಯನ್ನು ಬಿಡುವನು. ಆ ಪಾತ್ರೆಯು ಮಧ್ಯದಲ್ಲಿರುವ ರಂಧ್ರದ ದ್ವಾರಾ ನೀರನ್ನು ತೆಗೆದುಕೊಳ್ಳುವುದು. ಅದನ್ನು ಸೂಚಕನು ತಿಳಿಯುವವನೇ ಹೊರತು, ಬಟ್ಟಲಿಗೆ ಗೊತ್ತಿಲ್ಲ. ಅದು ಪೂರ್ಣವಾಗಿ ನೀರನ್ನು ತೆಗೆದುಕೊಂಡು ಮುಳುಗಿದ ಒಡನೆ ಒಂದುಸಲ ಮುಳುಗಿತೆಂದು ಘಂಟೆಹೊಡೆಯುವುದರ ಮೂಲಕ ಜನರಿಗೆ ಅದನ್ನು ಸೂಚಿಸುವನು, ಪುನಃ ಆ ಬಟ್ಟಲನ್ನು ನೀರಿನಲ್ಲಿ ಬಿಡುವನು. ಹಾಗೆ ಜೀವರ ವಿಷಯದಲ್ಲಿ ಶ್ರೀ ಪರಮಾತ್ಮನು ಘಂಟಾಸೂಚಕನಂತೆ ಇರುವನು. ಗಂಗಾಳದೊಳಗಿನ ನೀರು ಹೇಗೋ ಹಾಗೆ ಪುಣ್ಯ ಪಾಪಾದಿಗಳು ರಾಶೀಭೂತವಾಗಿರುವುವು. ಘಟಿಕಾಪಾತ್ರೆಯನ್ನು ಸೂಚಕನು ನಿರ್ಮಿಸುವಂತೆ, ಜೀವರ ಸ್ವಭಾವವನ್ನರಿತು, ಅವರ ಸ್ಥೂಲದೇಹವನ್ನು ಸೃಷ್ಟಿಸಿ, ಪಾತ್ರೆಯ ಮಧ್ಯದಲ್ಲಿ ರಂಧ್ರ ಮಾಡಿ, ಸ್ವತಃ ನೀರು ತೆಗದುಕೊಳ್ಳುವಂತೆ ಸೂಚಕನು ಹೇಗೆ ಮಾಡುವನೋ ಹಾಗೆಯೇ ಪರಮಾತ್ಮನು ಜೀವರ ಸ್ಥೂಲದೇಹಗಳಲ್ಲಿ ಅವರಿಗೆ ಕಿಂಚಿತ್ ಸ್ವಾತಂತ್ರ್ಯವೆಂಬ ತೂತನ್ನು ಹೊಡೆಯುವನು. ಅದರಿಂದ ಕಿಂಚಿತ್ ಇಚ್ಛಾಮಾತ್ರ ಹುಟ್ಟುವುದು.

ಬಟ್ಟಲು ತಾನಾಗಿ ನೀರು ತೆಗೆದುಕೊಂಡರೂ, ಸೂಚಕನು ಹತ್ತಿರದಲ್ಲಿ ಕೂತು, ಅದನ್ನು ತೇಲಿಸುವುದೂ, ಎಷ್ಟು ನೀರನ್ನು ತೆಗೆದುಕೊಂಡು ಇದೆ ಎಂಬುದನ್ನು ತಿಳಿಯುವುದೂ ಹೀಗೆ ಸೂಚಕನ ಕರ್ತೃತ್ವವೋ ಹಾಗೆ, ಜೀವನು ಅಸ್ವತಂತ್ರನಾಗಿ ಪರಮಾತ್ಮನಿಂದ ನಿರ್ಮಿತವಾದ ಶರೀರದಲ್ಲಿದ್ದು,

ಅವನು ಕೊಟ್ಟ ಅಲ್ಪಛಿದ್ರದಂತಿರುವ ದತ್ತಸ್ವಾತಂತ್ರ್ಯದಿಂದ ಪುಣ್ಯಪಾಪಗಳ ರಾಶಿಯಲ್ಲಿ ಬಿಡಲ್ಪಟ್ಟ ತನ್ನ ಯೋಗ್ಯತಾನುಸಾರ ಪುಣ್ಯಪಾಪಗಳನ್ನು ತೆಗೆದುಕೊಳ್ಳುವನು. ಸೂಚಕನು ಪಾತ್ರೆಯು ಮುಳುಗಿದುದನ್ನು ತಿಳಿದು, ಘಂಟೆಯನ್ನು ಹೊಡೆಯುವಂತೆ ಪರಮಾತ್ಮನು ಜೀವರ ಸಾಧನವು ಪೂರ್ತಿಯಾದುದನ್ನು ತಿಳಿದು, ಅವರ ಯೋಗ್ಯತಾನುಸಾರ ಫಲವನ್ನು ಜೀವರಿಗೆ ಉಣಿಸುವನು. ಘಂಟೆ ಹೊಡೆಯಲು ಇಷ್ಟು ಘಂಟೆ ಆಯಿತೆಂದು ಕೇಳಿ ಜನರ್ರು ಅನುಭವಕ್ಕೆ ತಂದುಕೊಳ್ಳುವಂತೆ ಜೀವರು ತಮ್ಮ ತಮ್ಮ ಪುಣ್ಯ ಪಾಪ ಕರ್ಮಫಲಗಳನ್ನು ಅನುಭವಿಸುವರು. ಘಂಟಾಸೂಚಕನು ಪಾತ್ರೆಯಲ್ಲಿ ಬಟ್ಟಲನ್ನು ಬಿಟ್ಟು, ಅದು ಮುಳುಗಿದೊಡನೆ ಘಂಟೆಯನ್ನು ಜನರಿಗೆ ತಿಳಿಸಿ, ತಾನು ಹೇಗೆ ಸಾಕ್ಷೀಭೂತನಾಗಿರುವನೋ, ಹಾಗೆಯೇ ಶ್ರೀ ಪರಮಾತ್ಮನು ಫಲವನ್ನು ದೇವದೈತ್ಯರಿಗೆ ವಿಭಾಗ ಮಾಡಿ, ತಾನು ಸಾಕ್ಷೀಭೂತನಾಗಿರುವನು ॥೨೫॥

(೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :—

**"ನತಾವತಾ ದೋಷವಾನೀ ಶತಾಪೀತಿ" —ಎಂಬ ಶ್ರುತ್ಯನುಸಾರ** ದೋಷಿ ಒಳಗೆ ಇದ್ದರೂನೂ ನಿರ್ದೋಷಿಯಾಗಿ ಜೀವರಿಗೆ ಪುಣ್ಯ ಪಾಪ ಭೋಜನ ಮಾಡಿಸುತ್ತಾ ಸಾಕ್ಷಿಯಾಗಿರುವನೆಂದು ಹೇಳುತ್ತಾರೆ— "ಜಲ" ಎಂಬ ಪದ್ಯದಿಂದ, ಹಲಧರಾನುಜ = ಬಲರಾಮನ ತಮ್ಮ ಶ್ರೀಕೃಷ್ಣ ಪರಮಾತ್ಮನು ॥೨೫॥

(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ—
(ಸಂಸ್ಕೃತಮೂಲ) :—

ಜೀವಭೋಗ್ಯಸುಖ ತದನ್ಯಾನಶನಂ ಭೃತ್ಯನಿಗಡಗ ರಾಜ ಮೌಳಿವದಿತಿ ಸಿದ್ಧೇಪಿ ದುಃಖಯೋಗ್ಯತ್ವಾತ್ತಸ್ಯಾಪೀತಿ ಶುದ್ಧಸಾಕ್ಷೀಘಟೀಪಾತ್ರಂ ನಿದರ್ಶಯತಿ ॥ ಜಲೇತಿ ॥ ಉಳಿದು = ಬಿಟ್ಟು । ಪುಣ್ಯಫಲಮೇವ ದೇವಾನಾಂ

ಪಾಪಪ್ರವರ್ತಕಾನಾಮಪಿ । ನಹ ದೇವಾನಾಂ ಪಾಪಂ ಗಚ್ಛತಿ ಇತಿಶ್ರುತೇಃ॥ ಹರ್ಯಾಜ್ಞಾಕರಣಾದೇವ ಪುಣ್ಯಮೇಭಿರವಾಪ್ಯತೇ ಇತಿ ವಚನಾಚ್ಚ । ಪ್ರೇರಕಾ ಅಪಿ ಪಾಪಾನಾಂ ನ ದೇವಾಃ ಪಾಪಮಾಪ್ನುಯುಃ ಇತಿ ಚ (ಅನುವ್ಯಾಖ್ಯಾನೇ) ॥೨೫॥

**ಕನ್ನಡಾರ್ಥ :—**

ಸುಖ ದುಃಖರೂಪವಾದ ಭೋಗಗಳನ್ನು (ಕರ್ಮಜನ್ಯರೂಪವಾದ ಫಲವಿಶೇಷಗಳು) ಜೀವರು ಉಪಭೋಗಿಸುವರು. ಆದರೆ ಈ ಫಲಭೋಗ ಶ್ರೀ ಪರಮಾತ್ಮನಿಗಿಲ್ಲ. ಇದನ್ನು ರಾಜ-ಭೃತ್ಯನ್ಯಾಯದಿಂದ ತಿಳಿಯಬಹುದು. ಸೇವಕವರ್ಗ ರಾಜಾಧಿರಾಜನ ವಶದಲ್ಲಿದೆ. ಸೇವಕರಿಗೆ ಸುಖ ದುಃಖ ಭೋಗವಿದೆ (ರಾಜಾಜ್ಞೆಯಂತೆ). ಆದರೆ ರಾಜನಿಗೂ ಸಹ ಸುಖ ದುಃಖ ಭೋಗಗಳಿವೆ. ಅವನು ಅದಕ್ಕೆ ಹೊರತೇನೂ ಅಲ್ಲ. ಈ ದೃಷ್ಟಾಂತ ಈಶ-ಜೀವರ ಸಂಬಂಧಕ್ಕೆ ಅಷ್ಟು ಸಮಂಜಸವಲ್ಲ, "ಕಾಲಸೂಚಕ ಜಲಯಂತ್ರ"ದ ದೃಷ್ಟಾಂತವು ಅತ್ಯಂತ ಸಮರ್ಪಕವಾಗಿದ್ದು, ಶುದ್ಧಸಾಕ್ಷಿಯಂತಿದೆ. ಈ ದೃಷ್ಟಾಂತದಿಂದ ವಿವರಿಸುತ್ತಾರೆ. "ಜಲವ" -ಎಂಬ ಪದ್ಯದಿಂದ. ಉಳಿದು-ಅಂದರೆ ಬಿಟ್ಟು, "ದೇವತೆಗಳಿಗೆ ಪಾಪಸಂಪರ್ಕವಿಲ್ಲ" —ಎಂದು ಹೇಳುವ ಶ್ರುತಿ ಇದೆ. **"ನಹಿ ದೇವಾನಾಂ ಪಾಪಂ ಗಚ್ಛತಿ" —ಇತಿ ಶ್ರುತೇಃ ॥** ಪಾಪಕಾರ್ಯದಲ್ಲಿ ಪ್ರೇರಿಸುತ್ತಿದ್ದರೂ-ದೇವತೆಗಳಿಗೆ ಪುಣ್ಯಫಲವೇ ಉಂಟಾಗುತ್ತದೆ. ಪಾಪಫಲವಿಲ್ಲ. ಶ್ರೀಹರಿಯ ಆಣತಿಯಂತೆ ಇವರು ಕಾರ್ಯನಿರತರಾಗಿರುವುದರಿಂದ ಪುಣ್ಯಪ್ರಾಪ್ತಿಯೇ ಹೊರತು ಪಾಪಲೇಪವಿಲ್ಲ. **ಅನುವ್ಯಾಖ್ಯಾನದಲ್ಲಿ**— "ಪಾಪಕ್ಕೆ ದೇವತೆಗಳು ಪ್ರೇರಕರಾದರೂ, ಅವರು ಪಾಪವನ್ನು ಹೊಂದುವುದಿಲ್ಲ" —ಎಂದು ಶ್ರೀಮದಾಚಾರ್ಯರ ವಚನವಿದೆ. **"ಹರ್ಯಾಜ್ಞಾಕರಣಾದೇವ ಪುಣ್ಯಮೇಭಿರವಾಪ್ಯತೇ" —ಇತಿ ಅನುವ್ಯಾಖ್ಯಾನೇ ॥** ॥೨೫॥

**(೫) "ಗುರುಹೃದಯಪ್ರಕಾಶಿಕೆ" —ವ್ಯಾಖ್ಯಾನ :—**

ದೇವರ ಸ್ವಾತಂತ್ರ್ಯಾತಿಶಯ ಕಂಡುಬರುವುದರಿಂದ ಸ್ವಾಮಿಯನ್ನು

ಅಶಕ್ತನೆಂದು ಹೇಳಲಾಗದೆಂಬ ಅಭಿಪ್ರಾಯವನ್ನು ದೃಷ್ಟಾಂತದಿಂದ ಬೋಧಿಸುತ್ತಾರೆ "ಜಲವ" —ಎಂಬ ಪದ್ಯದಿಂದ. ನೀರನ್ನು ಹೀರಿದ ಘಳಿಗೆ ಬಟ್ಟಲನ್ನು ಬಿಟ್ಟು, ಜಾಗಟೆಯನ್ನು ಕೈಹಿಡಿದೆಳೆದು ಹೊಡೆಯುವ ಪುರುಷನ ಹಾಗೆ, ನಿರಂತರ ಸ್ವತಂತ್ರಕರ್ತೃ ತಾನೊಬ್ಬನೇ ಆದಾಗ್ಯೂ, ಬಲರಾಮನ ತಮ್ಮನಾದ ಶ್ರೀಕೃಷ್ಣನು, ಪುಣ್ಯಪಾಪದ ಫಲಗಳನ್ನು ದೇವಾಸುರಗಣದೊಳು ವಿಭಾಗಮಾಡಿ ಉಣಿಸುವನು. ಎಂದರೆ, ಬಟ್ಟಲಿಗೆ ನೀರು ಕುಡಿಯುವ ಯೋಗ್ಯತೆ ಇದ್ದುದರಿಂದ, ನೀರು ಕುಡಿಸುವ ಪುರುಷನಂತೆ, ದೇವತೆಗಳಿಗೆ ಪುಣ್ಯಫಲ ಸುಖಾನುಭವ ಕೊಡುವನು. ಜಾಗಟೆಗೆ ಪೆಟ್ಟು ತಿನ್ನುವ ಯೋಗ್ಯತೆ ಇರುವುದರಿಂದ, ಅದನ್ನು ಹೊಡೆಯುವಂತೆ, ಅಸುರರಿಗೆ ಪಾಪಫಲ ದುಃಖಾನುಭವಕೊಡುವನು. ಇದರಿಂದ— "ದೈತ್ಯಭಾಗೆಗತಂ ಪುಣ್ಯಂ ಯಥಾಭಾಗಂ ದದಾತಿಚ।" ಇತ್ಯಾದಿ ವಿಷ್ಣುರಹಸ್ಯಾರ್ಥ ವಿವರಿಸಿತು. ಸಾಕ್ಷಿಯಾಗಿಪ್ಪ—ಎಂದರೆ, ಸ್ವತಂತ್ರ ಸ್ವಾನಂದ ದೇವರಿಗೆ, ಪುಣ್ಯ ಪಾಪ ಸುಖ ದುಃಖ ಲೇಪವಿಲ್ಲೆಂದರ್ಥ. ಬಲರಾಮನ ತಮ್ಮನೆಂಬ ವಿಶೇಷದಿಂದ ತುಂಬ ಅಪರಾಧಿ ರುಗ್ಮಿಯನ್ನು ಸಂಹರಿಸಿ, ದಂತವಕ್ತ್ರಾದಿಗಳಿಗೆ ಹಲ್ಲು ಮೊದಲಾದ್ದು ಮುರಿದ ಬಲರಾಮನಂತೆ, ಪುಣ್ಯ ಪಾಪ ಫಲ ನ್ಯಾಯವಾಗಿ ಕೊಡುವನೆಂಬರ್ಥ ಧ್ವನಿಕೊಡುತ್ತದೆ. ॥೨೫॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಕಾಲವನ್ನು ಅಳೆಯುವುದಕ್ಕೆ ಹಿಂದೆ ಒಂದು ಸಾಧನ ವಿಶೇಷವನ್ನು ಉಪಯೋಗಿಸುತ್ತಿದ್ದರು, ಅದಕ್ಕೆ "ಕಾಲಮಾಪಕ ಜಲಯಂತ್ರ" —ಎಂದು ಹೆಸರು. ಅದನ್ನೇ "ಘಟಿಕಾಪಾತ್ರೆ" ಅಥವಾ "ಘಳಿಗೆ ಬಟ್ಟಲು" ಎಂದೂ ಕರೆಯುತ್ತಿದ್ದರು. ನಾಲ್ಕು ಅಂಗುಲ ವ್ಯಾಸ ಮತ್ತು ನಾಲ್ಕು ಅಂಗುಲ ಆಳವಿರುವ ಒಂದು ತಾಮ್ರದ (ಅಥವಾ ಹಿತ್ತಾಳೆಯ) ಸಿಲಿಂಧರಾಕಾರದ ಬಟ್ಟಲಿನ ತಲಭಾಗಕ್ಕೆ ಮಧ್ಯದಲ್ಲಿ ಸಣ್ಣ ರಂಧ್ರವನ್ನು ಮಾಡಿರುವ ಬಟ್ಟಲಿಗೆ "ಘಳಿಗೆ ಬಟ್ಟಲು" —ಎಂದು ಹೆಸರು. ಈ ಪಾತ್ರೆಯು ಆರು ಪಲ ಅಂದರೆ

೧೮ ತೊಲ ಅಕ್ಕಿಕಾಳನ್ನು (ಒಂದು ಪಲ = ಮೂರು ತೊಲ) ಹಿಡಿಸುವುದು, ಇದು ಪಾತ್ರೆಯ ಒಳಗಾತ್ರ, ಒಂದು ದೊಡ್ಡ ಗಂಗಾಳದಲ್ಲಿ ನೀರನ್ನು ತುಂಬಿ ಈ ಬಟ್ಟಲನ್ನು ನೀರಿನ ಮೇಲೆ ತೇಲಿಬಿಡಬೇಕು. ಆಗ ನೀರು ಬಟ್ಟಲಿನ ತಳದಲ್ಲಿರುವ ರಂಧ್ರದ ಮೂಲಕ ಬಟ್ಟಲನ್ನು ಪ್ರವೇಶಿಸುವುದು. ಬಟ್ಟಲು ನೀರಿನಿಂದ ತುಂಬಿದಕೂಡಲೇ ಮುಳುಗುವುದು. ಬಟ್ಟಲು ನೀರಿನಿಂದ ಪೂರ್ಣವಾಗಿ ತುಂಬಲು ಹಿಡಿಯುವ ಕಾಲವು ಸರಿಯಾಗಿ ಒಂದು "ಘಳಿಗೆ" ಬೇಕು. ಇದರಿಂದಲೇ ಈ ಪಾತ್ರಾವಿಶೇಷಕ್ಕೆ "ಘಳಿಗೆಬಟ್ಟಲು" —ಎಂದು ಕರೆಯುವುದು ರೂಢಿ. ಆ ಬಟ್ಟಲು ಮುಳುಗುವುದನ್ನು ಸಾಕ್ಷಿಯಾಗಿ ನೋಡುತ್ತಿರುವ ಪುರುಷನೋರ್ವನು ಸಮೀಪದಲ್ಲಿರುವ (ಗಂಗಾಳಕ್ಕೆ ಸೇರಿದಂತಿರುವ) ಜಾಗಟೆಯನ್ನು ಹಿಡಿದು, ತನ್ನ ಕಡೆಗೆ ಎಳೆದುಕೊಂಡು, ಹೊಡೆಯುವನು. ಆ ಜಾಗಟೆಯ ಶಬ್ದವು ಒಂದು ಘಳಿಗೆಯನ್ನು ಸೂಚಿಸುವುದು. ಇದೇ ರೀತಿಯಲ್ಲಿ ಮುಂದುವರಿದು, ಎರಡು, ಮೂರು,........ ಘಳಿಗೆಗಳನ್ನು ಎಣಿಕೆ ಹಾಕಿ, ಕಾಲಮಾನವನ್ನು ಅಳೆಯುವರು.

ಅದರಂತೆಯೇ, ಕಾಲನಿಯಾಮಕನಾದ ಶ್ರೀ ಪರಮಾತ್ಮನು ತಾನೇ ಸಕಲ ಕಾರ್ಯಗಳಿಗೂ ಪ್ರೇರಕನೂ ಹಾಗೂ ನಿಯಾಮಕನೂ ಆಗಿದ್ದು ಜೀವಕೃತ ಕರ್ಮಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ ಮಾಡಿಸುತ್ತಿರುವನು. ಪೂರ್ವೋಕ್ತ ದೃಷ್ಟಾಂತವು ಶ್ರೀ ಪರಮಾತ್ಮನ ಸರ್ವತಂತ್ರಸ್ವಾತಂತ್ರ್ಯವನ್ನೂ ಮತ್ತು ಸರ್ವಕರ್ತೃತ್ವವನ್ನೂ ಪ್ರತಿಪಾದಿಸುವುದು. ಈ ದೃಷ್ಟಾಂತವು ಎಷ್ಟು ಸಮಂಜಸವಾಗಿದೆ ಎಂಬುದನ್ನು ಪರಿಶೀಲಿಸೋಣ:—

(೧) ಜಾಗಟೆಯನ್ನು ಹಿಡಿದು ಮುಂದಕ್ಕೆ ಎಳೆದು ಬಾರಿಸುವ ಪುರುಷನು ಕಾಲಗಣನೆ ಮಾಡುವ ಕರ್ತವ್ಯವನ್ನು ಮಾಡುತ್ತಾನೆ. ಅವನೇ ಘಳಿಗೆಯ ಬಟ್ಟಲನ್ನು ನೀರಿನಲ್ಲಿ ತೇಲಿಬಿಡುವನು. ಸಾಕ್ಷಿಯಾಗಿದ್ದುಕೊಂಡು ಕೆಲಸ ಮಾಡುವ ಪುರುಷಸದೃಶ ಶ್ರೀ ಪರಮಾತ್ಮನು. (೨) ಅವನ ಅಧೀನದಲ್ಲಿ ಬಟ್ಟಲು ಇದೆ. ಅಂತೆಯೇ ಅಸ್ವತಂತ್ರನಾದ ಜೀವನು ಆ ಬಟ್ಟಲಿನ ಸದೃಶ. (೩) ಅಂತಹ ಜೀವನಿಗೆ ಸ್ಥೂಲದೇಹಾದಿ ಸಾಧನ

ಶರೀರಗಳನ್ನು (ಪಾತ್ರೆಯ ಸದೃಶ) ಶ್ರೀ ಪರಮಾತ್ಮನು ಕೊಟ್ಟು, ದೇಹಾಂತರ್ಗತನಾಗಿ, ಇಂದ್ರಿಯ ನಿಯಾಮಕನಾಗಿ ದೇಹಗತ ವ್ಯಾಪಾರಗಳನ್ನು ನಡೆಯಿಸುವನು. ಈ ವ್ಯಾಪಾರವಿಶೇಷವೇ ಬಟ್ಟಲು ನೀರಿನಿಂದ ತುಂಬುವುದು ಎಂಬುದಕ್ಕೆ ದ್ಯೋತಕ. (೪) ಆ ಪಾತ್ರೆಯ ಒಳಭಾಗವೇ (ಹಿಡಿಸುವ ನೀರಿನ ಪ್ರಮಾಣ) ಜೀವರ ಯೋಗ್ಯತಾ ಸಾಮರ್ಥ್ಯವು. (೫) ಬಟ್ಟಲು ನೀರಿನಿಂದ ತುಂಬಿ ಮುಳುಗುವ ಕ್ರಿಯಾವಿಶೇಷವು ಆ ಜೀವನ ಸಾಧನ ಪೂರ್ತಿಯಾಗುವ ಸಂಕೇತವು. ಹೀಗೆ ಪ್ರತಿ ಜನ್ಮಗಳಲ್ಲಿಯೂ ಸಾಧನಗಳನ್ನು ತಾನೇ ಕರ್ತೃವಾಗಿ ನಿಂತು, ಬಿಂಬಕ್ರಿಯಾದ್ವಾರಾ ತಾನೇ ಮಾಡಿ. ಜೀವರ ದ್ವಾರಾ ಮಾಡಿಸುವ ವ್ಯಾಪಾರವಿಶೇಷವು ಕಾಲಾಂತರ್ಗತನೂ, ಕಾಲ ನಿಯಾಮಕನೂ, ಕಾಲಾತೀತನೂ ಆದ ಶ್ರೀ ಪರಮಾತ್ಮನ ಕ್ರೀಡಾವಿಲಾಸವು,

ಜೀವರ ದ್ವಾರಾ ನಡೆಯುತ್ತಿರುವ ಸಾಧನಗಳಲ್ಲಿ ಎರಡು ಪ್ರಕಾರ. (೧) ಪುಣ್ಯಫಲರೂಪವಾದ ಸತ್ಸಾಧನೆ ಮತ್ತು (೨) ಪಾಪಫಲರೂಪವಾದ ದುಸ್ಸಾಧನೆ. ಸರ್ವತಂತ್ರಸ್ವತಂತ್ರನಾದ ಶ್ರೀ ಪರಮಾತ್ಮನು ತತ್ವಾಭಿಮಾನಿ ದೇವತೆಗಳ ದ್ವಾರಾ ಸತ್ಕರ್ಮಗಳನ್ನು ಮತ್ತು ತತ್ವದೈತ್ಯರ ದ್ವಾರಾ ದುಷ್ಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು. ದೇವತೆಗಳಿಗೆ ಪುಣ್ಯ ಫಲರೂಪವಾದ ಸುಖಾನುಭವವನ್ನೂ, ದೈತ್ಯರಿಗೆ ಪಾಪಫಲರೂಪವಾದ ದುಃಖಾನುಭವವನ್ನೂ ಕೊಡುವನು. ಝಾಂಗಟೆಗೆ ಹಾಕಿದ ಪೆಟ್ಟಿನಂತೆ ಶಿಕ್ಷಾರೂಪವಾದ ದುಃಖಾನುಭವ ದೈತ್ಯರಿಗೆ, ಹೀಗೆ ದೇವ ದೈತ್ಯರ ದ್ವಾರಾ ಸತ್ಕರ್ಮ ಮತ್ತು ದುಷ್ಕರ್ಮಗಳ ಆಚರಣೆ, ತನ್ಮೂಲಕ ಸುಖ ದುಃಖಗಳ ಅನುಭವ ಜೀವನಿಗೆ ಉಂಟಾಗುವುದು. ಇವಿಷ್ಟು ಶ್ರೀ ಪರಮಾತ್ಮನ ವ್ಯಾಪಾರವಲ್ಲದೇ ಅನ್ಯರದು ಯಾರದೂ ಇಲ್ಲ. ಇದೇ ಅಭಿಪ್ರಾಯವನ್ನೇ ದಾಸರಾಯರು "ಸಂತತ ಕರ್ತೃ ತಾನಾಗಿ" —ಎಂದು ಹೇಳಿದ್ದಾರೆ. ಇಂತು, ಸಾಧನ ಶರೀರವಾದ ಈ ಸ್ಥೂಲದೇಹದಲ್ಲಿ ದೇಹಗತನಾಗಿ ತಾನಿದ್ದು, ಪುಣ್ಯ ಪಾಪಫಲಗಳನ್ನು ವಿಭಾಗ ಮಾಡಿ, ದೇವಾಸುರರಿಗೆ ಉಣಿಸುವನು. (ಅವರ

ಭೋಗಕ್ಕೆ ವಿಷಯುವನ್ನಾಗಿ ಮಾಡುವನು). ಅಂತಹ ಭಗವಂತನು ತಾನು ಮಾತ್ರ ನಿರ್ಭೀತನಾಗಿ, ನಿರ್ದೋಷಿಯಾಗಿರುವನು. ಅವನಿಗೆ ಆ ಪುಣ್ಯ ಪಾಪಗಳ ಲೇಪವಿಲ್ಲ. ಕರ್ಮಸಾಕ್ಷಿಯಾಗಿ ಸರ್ವಜೀವರ ಹೃದಯಗಹ್ವರದಲ್ಲಿ "ಸಾಕ್ಷಿ" ಎಂದೆನಿಸಿಕೊಂಡಿದ್ದಾನೆ. ಬಲರಾಮದೇವರು ಶ್ರೀಕೃಷ್ಣಪರಮಾತ್ಮನ ಅಣ್ಣ. ಆವನ ಆಯುಧವಿಶೇಷ "ನೇಗಿಲು" (ಹಲಾಯುಧ). ಬಲರಾಮನು ಶೇಷಾಂಶನು. ಶೇಷದೇವರು ಜೀವಾಭಿಮಾನಿಗಳು. ಈ ಕಾರಣದಿಂದಲೇ ಜೀವನ್ನಿಷ್ಠವಾದ ಸಕಲ ವ್ಯಾಪಾರಗಳನ್ನೂ ಶ್ರೀಕೃಷ್ಣರೂಪಿಯಾದ ಸರ್ವಶಕ್ತನಾದ ಭಗವಂತನೇ ನಿರ್ವಹಿಸುತ್ತಿರುವುದರಿಂದ "ಹಲಧರಾನುಜನು" ಎಂದು ದಾಸರಾಯರು ಪದಪ್ರಯೋಗ ಮಾಡಿರುವುದು ಅತ್ಯಂತ ಅರ್ಥಗರ್ಭಿತವಾಗಿದೆ. ॥೨೫॥

## ಪದ್ಯ (೨೬)

**ಮೂಲ :—**

**ಹೊಂದಿಕೊಂಡಿಹ ಸರ್ವರೊಳು ಸಂ।**
**ಬಂಧವಾಗದೆ ಸಕಲಕರ್ಮವ ।**
**ರಂದದಲಿ ತಾ ಮಾಡಿ ಮಾಡಿಸಿ ತತ್ಫಲಗಳುಣದೆ ॥**
**ಕುಂದದಣು ಮಹತ್ತೆನಿಪ ಘಟ ।**
**ಮಂದಿರದಿ ಸರ್ವತ್ರ ತುಂಬಿಹ ।**
**ಬಾಂದಳದ ತೆರನಂತೆ ಇರುತಿಪ್ಪನು ರಮಾರಮಣ ॥ ॥೨೬॥**

**ಅವತರಣಿಕೆ :—**

ತ್ರಿವಿಧ ಜೀವರಾಶಿಗಳಲ್ಲಿ ಇದ್ದಾಗ್ಯೂ ಶ್ರೀ ಪರಮಾತ್ಮನು ನಿರ್ಲೇಪನಾಗಿರುತ್ತಾನೆ. ಸಕಲೇಂದ್ರಿಯಗಳ ದ್ವಾರಾ ಕರ್ಮವಿಶೇಷವನ್ನು ತಾನು

ಮ್ಮಾಡಿ, ದೇವತೆಗಳ ದ್ವಾರಾ ತದನಂತರ ಜೀವರ ದ್ವಾರಾ ಮಾಡಿಸುತ್ತಾ, ತತ್ಕರ್ಮಜನ್ಯವಾದ ಫಲಗಳನ್ನು ತಾನು ಭೋಗಿಸದೆ, ನಿರ್ಲಿಪ್ತನಾಗಿದ್ದು, ವ್ಯಾಪ್ತರೂಪದಿಂದ ವಿಹಾರ ಮಾಡುವನು. ಅಣುಸ್ವರೂಪಿಯಾದ ಜೀವನಲ್ಲಿ ಅಂತರ್ಯಾಮಿರೂಪದಿಂದ ಶ್ರೀ ಪರಮಾತ್ಮನು ಮಾಡುವ ಕ್ರಿಯಾವಿಶೇಷ ಗಳು ಮಹತ್ವಪೂರ್ಣವಾದುವು. ರಮಾರಮಣನು ಆಕಾಶದಂತೆ ಸರ್ವತ್ರ ವ್ಯಾಪಿಸಿ, ಪರಿಪೂರ್ಣರೂಪದಿಂದ ಇದ್ದು, ಸರ್ವ ಕರ್ಮಗಳನ್ನೂ ಮಾಡಿಸುವನೆಂದು ಹೇಳತ್ತಾರೆ. "ಪೊಂದಿಕೊಂಡಿಹ" —ಎಂಬ ಈ ಪದ್ಯ ದಿಂದ. ॥೨೬॥

**ಪ್ರತಿಪದಾರ್ಥ :—**

**ರಮಾರಮಣ** = ಲಕ್ಷ್ಮೀಪತಿಯಾದ ಶ್ರೀ ಪರಮಾತ್ಮನು **ಸರ್ವ ರೊಳು** = ಸಕಲ ಪ್ರಾಣಿಗಳಲ್ಲಿಯೂ (ತ್ರಿವಿಧ ಜೀವರಾಶಿಗಳಲ್ಲಿ) **ಸಂಬಂಧ ವಾಗದೆ** = ವ್ಯಾಪ್ತನಾಗಿದ್ದಾಗ್ಯೂ, ಅವರಿಂದ ನಿರ್ಲಿಪ್ತನಾಗಿ. (ಅವರ ಕರ್ಮಜನ್ಯ ಫಲಗಳಿಗೆ ಸಂಬಧಿಸದಂತೆ) **ಹೊಂದಿಕೊಂಡಿಹ** = ಜೀವರಲ್ಲಿ ಸೇರಿಕೊಂಡು (ಅಂತರ್ಯಾಮಿ ರೂಪತ್ವೇನ ಬಿಂಬನಾಗಿದ್ದಾನೆ) **ಸಕಲ ಕರ್ಮವ** = ಸಕಲೇಂದ್ರಿಯಗಳದ್ವಾರಾ ಆಗತಕ್ಕ ಕರ್ಮವಿಶೇಷಗಳನ್ನು **ಅವರಂದದಲಿ** = ಆಯಾಯಾ ಜೀವರ ಸ್ವರೂಪಯೋಗ್ಯತಾನುಸಾರ (ಜೀವರೇ ಮಾಡುವ ತೆರನಂತೆ) **ತಾ ಮಾಡಿ** = ಪ್ರಥಮತಃ ಬಿಂಬಕ್ರಿಯಾದ್ವಾರಾ ಸ್ವಾಖ್ಯರೂಪವಾದ ಕರ್ಮಗಳನ್ನು ತಾನೇ ಮಾಡಿ **ಮಾಡಿಸಿ** = ದೇವತೆಗಳ ದ್ವಾರಾ, ಜೀವನ ದ್ವಾರಾ ಏಕಕಾಲಾವಚ್ಛೇದೇನ ಮಾಡಿಸಿ (ಶ್ರೀ ಪರ ಮಾತ್ಮನು ಮಾಡುತ್ತಿರುವ ಕಾಲದಲ್ಲಿಯೇ ಸಮಕಾಲಿಕವಾಗಿ ಜೀವನೇ ಮಾಡಿ ದಂತೆ ತೋರುತ್ತದೆ) **ತತ್ಫಲಗಳುಣದೆ** = ಕರ್ಮಜನ್ಯವಾದ ಸುಕೃತ, ಮಿಶ್ರ ಮತ್ತು ದುಷ್ಕೃತರೂಪವಾದ ಫಲಗಳನ್ನು ತಾನು ಭೋಗಿಸದೆ (ತನ್ನ ಸ್ವಾಖ್ಯಗಳನ್ನು ತಾನು ಭೋಗಿಸುತ್ತಾ) **ಕುಂದದ** = ನ್ಯೂನಾಧಿಕ್ಯಗಳಿಲ್ಲದ (ಏಕಪ್ರಕಾರ ಇರುವ) **ಅಣು** = ಅತ್ಯಂತ ಸೂಕ್ಷ್ಮಪರಿಮಾಣವುಳ್ಳ (ಅಣು ಸ್ವರೂಪಿಯಾದ ಜೀವನ ಸ್ವರೂಪದಲ್ಲಿ) **ಮಹತ್ತೆನಿಪ** = ಅತ್ಯಂತ ದೊಡ್ಡ

ದಾದ **ಘಟ ಮಂದಿರದಿ**=ಮಣ್ಣಿನ ಮಡಿಕೆ ಮುಂತಾದ ಪಾತ್ರೆಗಳ ಒಳ ಮತ್ತು ಹೊರ ಪ್ರದೇಶಗಳಲ್ಲಿ (ಘಟ ಸಾಂಕೇತವಾದ ಸ್ಥೂಲದೇಹವೆಂಬ ಮನೆಯಲ್ಲಿ–ಅವಕಾಶದಲ್ಲಿ) **ಸರ್ವತ್ರ**=ಎಲ್ಲಾ ಸ್ಥಳಗಳಲ್ಲಿಯೂ (ಸರ್ವ ಚರಾಚರ ಅಂತರ್ಬಹಿಯಲ್ಲಿ) **ತುಂಬಿಹ**=ಪರಿಪೂರ್ಣರೂಪದಿಂದ ವ್ಯಾಪ್ತ ನಾಗಿ **ಬಾಂದಳದ ತೆರನಂತೆ**=ಆಕಾಶದೋಪಾದಿಯಲ್ಲಿ (ಬಾನಿನ ತಳ =ಬಾಂದಳ; ಬಾನು=ಆಕಾಶ) **ಇರುತಿಪ್ಪನು**=ಇರುವವನಾಗಿದ್ದಾನೆ. ॥೨೬॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು ಸರ್ವಚೇತನರ ಬಿಂಬನು. ತ್ರಿವಿಧಜೀವರಾಶಿಗಳಲ್ಲಿ ವ್ಯಾಪ್ತನಾಗಿದ್ದಕಾಲಕ್ಕೂ, ಜೀವರು ಭೋಜನ ಮಾಡತಕ್ಕ ಫಲಗಳಿಗೆ ತಾನು ಸಂಬಂಧಪಡದೆ, ಆಯಾಯಾ ಜೀವರಲ್ಲಿ ಹೊಂದಿಕೊಂಡು ಬಿಂಬನಾಗಿದ್ದಾನೆ. ಘಟಕ್ಕೆ ಭೇದ ಭೇದಾದಿಗಳು ಕಂಡರೂ ತದ್ಗತ ಆಕಾಶಕ್ಕೆ ಭೇದ ಭೇದಗಳು ಹೇಗೆ ಇಲ್ಲವೋ ಅದರಂತೆ ಎಂದರ್ಥ. ಜೀವ ರಲ್ಲಿ ಇದ್ದು, ಸಕಲೇಂದ್ರಿಯಗಳ ದ್ವಾರಾ ಕರ್ಮಸಮೂಹಗಳನ್ನು ಆಯಾಯಾ ಪ್ರಾಣಿಗಳ ಸ್ವರೂಪಯೋಗ್ಯತಾನುಸಾರ ಇರತಕ್ಕ ಬಾಹ್ಯ ಕರ್ಮಾನುಸಾರ ದಲ್ಲಿ ಸ್ಥೂಲದೇಹಗಳಿಂದ ಪ್ರಥಮತಃ ಬಿಂಬಕ್ರಿಯಾಧ್ವಾರಾ ಸ್ವಾಖ್ಯಕರ್ಮ ತಾನು ಮಾಡಿ, ದೇವತೆಗಳ ದ್ವಾರಾ, ಜೀವನದ್ವಾರಾ ಏಕಕಾಲಾವಚ್ಛೇದೇನ ಮಾಡಿಸಿ, ಆಯಾಯಾ ಜೀವರು ಸ್ಥೂಲದೇಹದ್ವಾರಾ ಉಣತಕ್ಕ ಕರ್ಮ ಫಲಗಳ ತಾನು ಉಣದೇ, ತನ್ನ ಸ್ವಾಖ್ಯಗಳನ್ನು ತಾನು ಉಣತಾ, ನ್ಯೂನಾಧಿಕ್ಯಗಳಿಲ್ಲದ ಅಣುಸ್ವರೂಪಿಯಾದ ಜೀವನ ಸ್ವರೂಪದಲ್ಲಿ ತದಾಪೇ ಕ್ಷೆಯಾ ದೊಡ್ಡದು ಎಂತ ಎನಿಸತಕ್ಕವನಾಗಿ, ಘಟಸಾಂಕೇತವಾದ ಸ್ಥೂಲ ದೇಹಾಖ್ಯ ಮಂದಿರದಲ್ಲಿ, ಸರ್ವಚರಾಚರ ಅಂತರ್ಬಹಿಯಲ್ಲಿ ಆಕಾಶದೋ ಪಾದಿಯಲ್ಲಿ ಸರ್ವತ್ರ ವ್ಯಾಪ್ತನಾಗಿರೋವನಾಗಿದ್ದಾನೆ.

ಘಟಸದೃಶ ಜೀವರು ಮತ್ತು ದೇಹಗಳು. ತದ್ಗತ ಆಕಾಶಸದೃಶ ಪರಮಾತ್ಮ. ಪರಮಾತ್ಮ ಸದೃಶ ಆಕಾಶಕ್ಕೆ ಲೇಪ ಇಲ್ಲ ಎಂತಲೂ, ಈ ಪ್ರಕಾರ ಶ್ರೀ ಪರಮಾತ್ಮಗೆ ಭೇದ ಭೇದಾದಿಗಳು ಇಲ್ಲದೆಯೂ ತನ್ನ ಸ್ವಾಖ್ಯ ರಸಗಳ ತಾನು ಉಣತಾ ಸರ್ವತ್ರ ತುಂಬಿಕೊಂಡಿರುತಾನೆ ಎಂತ ತಾತ್ಪರ್ಯ ॥೨೬॥

## (೨) "ಭಾವಪ್ರಕಾಶಿಕೆ"—ವ್ಯಾಖ್ಯಾನ :—

ಶ್ರೀಪರಮಾತ್ಮನು ಸರ್ವಪ್ರಾಣಿಗಳಲ್ಲಿಯೂ ಅವರುಗಳ ದೇಹೇಂದ್ರಿಯಗಳ ಸಂಬಂಧವಿಲ್ಲದೆ ಜೀವರಲ್ಲಿಯೂ, ಇಂದ್ರಿಯಗಳಲ್ಲಿಯೂ, ಸ್ಥೂಲದೇಹದಲ್ಲಿಯೂ ವ್ಯಾಪ್ತನಾಗಿದ್ದು, ಅವರವರು ಮಾಡುವ ಕರ್ಮಗಳನ್ನು ಅವರಂತೆ ತಾನೇ ಮಾಡಿ, ಅವರಿಂದ ಮಾಡಿಸಿ, ಆ ಫಲಗಳನ್ನು ತಾನುಣದೇ ಅವರಿಗೆ ಮಾತ್ರ ಉಣಿಸುತ್ತಿರುವನು. ಸಣ್ಣ ಘಟಗಳಲ್ಲಿಯೂ, ದೊಡ್ಡ ಘಟಗಳಲ್ಲಿಯೂ, ಅವುಗಳ ಒಳಭಾಗದ ಅವಕಾಶ ಸ್ಥಳಗಳಲ್ಲಿಯೂ ಆಕಾಶವು ಹೇಗೆ ತುಂಬಿಕೊಂಡಿರುವುದೋ, ಹಾಗೆಯೇ ಪರಮಾತ್ಮನು ಸೂಕ್ಷ್ಮವಾದ ಜೀವರಲ್ಲಿಯೂ, ಸ್ಥೂಲ ಶರೀರಗಳಲ್ಲಿಯೂ ಸಹ ನಿರ್ಲಿಪ್ತನಾಗಿ ವ್ಯಾಪ್ತನಾಗಿರುವನು ॥೨೬॥

## (೩) "ಭಾವದರ್ಪಣ ಟೀಕಾ" —ವ್ಯಾಖ್ಯಾನ :—

ಘಟಗತಾಕಾಶವು ಹ್ಯಾಂಗೆ ನಿರ್ಲಿಪ್ತವೋ ಹಾಂಗೆ ತಾನು ನಿರ್ಲಿಪ್ತನಾಗಿ ಜೀವರ ಸಂರಕ್ಷಿಸುವನೆಂದು ಉಕ್ತಾರ್ಥವನ್ನೇ ದಾರ್ಢ್ಯರಾರ್ಥ ಹೇಳುತ್ತಾರೆ— "ಪೊಂದಿ" —ಎಂಬ ಪದ್ಯದಿಂದ.

ಬಾಂದಳ = ಆಕಾಶ. ॥೨೬॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ—

ಪೊಂದೀತಿ ॥ ವಸ್ತು ನಿರೂಪಿತಾ ಧೇಯತ್ವಂ ಸಂಬಂಧಃ ॥ ನ ಚಾ

ಹಂತೇಷ್ಟಿತ್ಯುಕ್ತೇಃ ॥ ಉಣದೇ । ತರ್ಹಿ ಕಾರ್ಶ್ಯಂ ನೇತ್ಯಾಹ ॥ ಕುಂದದೆ =ಸೊರಗದೇ । ಘಟೇತಿ ಷಷ್ಟೀ ॥೨೬॥

**ಕನ್ನಡಾರ್ಥ:—**

ಸಕಲ ವಸ್ತುಗಳಲ್ಲಿ ವ್ಯಾಪ್ತವಾಗಿರುವ ಗುಣಕ್ಕೆ ಹೊಂದಿಕೊಳ್ಳುವುದು ಎನ್ನುವರು. ಆ ವಸ್ತುಗಳನ್ನು ಅವಲಂಬಿರುವುದಲ್ಲಿ. "ನನ್ನಲ್ಲಿ ಸಕಲ ವಸ್ತುಗಳೂ ಆಶ್ರಯವನ್ನು ಹೊಂದಿವೆ. ಆದರೆ ನಾನು ಅವುಗಳ ಆಶ್ರಯ ದಲ್ಲಿಲ್ಲ" —ಎಂದು **ಗೀತಾಚಾರ್ಯನ ವಚನ.** "ಉಣದೆ" —ಎಂಬ ಶಬ್ದಪ್ರಯೋಗವು ಈ ಅಭಿಪ್ರಾಯವನ್ನು ಸೂಚಿಸುವುದು. ಭಗವಂತನಿಗೆ ಭೋಗವಿಲ್ಲವಾದ್ದರಿಂದ, ಅವನು ಸೊರಗುತಾನೆಯೆ ? ಎಂದರೆ, ಇಲ್ಲ ವೆಂದು ಹೇಳುತ್ತಾರೆ— "ಕುಂದದೆ" ಎಂಬ ಪದದಿಂದ. ಯಾವ ವಿಕಾರವೂ ಇಲ್ಲದೆ ಶಶ್ವದೇಕಪ್ರಕಾರವಾಗಿರುವನು. ಘಟ ಎಂದರೆ ಕೊಡದಲ್ಲಿಯೂ, ಮಂದಿರ ಎಂದರೆ ಮನೆಯಲ್ಲಿಯೂ ತುಂಬ ವ್ಯಾಪಿಸಿರುವ "ಮಹಾಕಾಶ" ಎಂದು ತಾತ್ಪರ್ಯ. ॥೨೬॥

**(ಆ) "ಗುರುಹೃದಯಪ್ರಕಾಶಿಕೆ" —ವ್ಯಾಖ್ಯಾನ :—**

ಸರ್ವತ್ರ ವ್ಯಾಪ್ತನಾದಾಗ್ಯೂ ಸಂಬಂಧವಾಗದೆ, ಎಂದರೆ, ಆಕಾಶ ಸರ್ವಗತವಾದರೂ ವಾಯು ಮೊದಲಾದನ್ನು ಸೋಕದೆ ಇರುವಂತೆ ನಿರ್ಲೇಪ ನಾಗಿ ಆಯಾಯಾ ಜೀವರಂತೆ ಕ್ರಿಯಾವ್ಯಕ್ತಿ ಮಾಡಿ, ಮಾಡಿಸಿ, ಆ ಪುಣ್ಯ ಪಾಪಗಳ ಫಲಗಳನ್ನು ತಾನನುಭವಿಸದೆ, ಅಣುಮಹತ್ತಿನಲ್ಲಿ ಸಹ ಕಡಿಮೆ ಯಿಲ್ಲದೆ, ನಿರ್ಲೇಪನಾಗಿರುವನು. ಇದರಿಂದ.

**"ಯಥಾಕಾಶಸ್ಥಿತೋ ನಿತ್ಯಂ ವಾಯುಸ್ಸರ್ವತ್ರಗೋ ಮಹಾನ್ ।**
**ತಥಾ ಸರ್ವಾಣಿ ಭೂತಾನಿ ಮತ್‌ಸ್ಥಾನೀತ್ಯುಪಧಾರಯ ॥"**

—ಎಂಬ ಗೀತಾರ್ಥವು ವಿವರಿಸಿತು ॥೨೬॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಮಾರರಮಣನಾದ ಶ್ರೀ ಪರಮಾತ್ಮನು ಸರ್ವಚೇತನರ ಅಂತರ್ಯಾಮಿಯಾಗಿದ್ದು ಅವರವರ ಬಿಂಬನೆನಿಸಿದ್ದಾನೆ. ತ್ರಿವಿಧಜೀವರಾಶಿಗಳಲ್ಲಿ ವ್ಯಾಪ್ತನಾಗಿದ್ದು, ಜೀವರ ಸ್ಥೂಲದೇಹಗತ ಸಕಲೇಂದ್ರಿಗಳ ದ್ವಾರಾ ಸಮಸ್ತ ವ್ಯಾಪಾರಗಳನ್ನೂ ತಾನೇ ಮಾಡಿಸುತ್ತಿದ್ದಾನೆ. ಸ್ಥೂಲದೇಹದಲ್ಲಿ ಅಖಂಡ ರೂಪದಿಂದ ವ್ಯಾಪ್ತನಾಗಿದ್ದು, ಇಂದ್ರಿಯಗಳು. ಅವುಗಳ ಗೋಳಕಗಳಲ್ಲಿ ತನ್ನ ರೂಪಗಳನಿಟ್ಟು, ಇಂದ್ರಿಯಾಭಿಮಾನಿ ದೇವತೆಗಳ ದ್ವಾರಾ ಸತ್ಕರ್ಮ ರೂಪವಾದ ಕ್ರಿಯೆಗಳನ್ನೂ ದೈತ್ಯರ ದ್ವಾರಾ ದುಷ್ಕರ್ಮರೂಪವಾದ ಕ್ರಿಯಾ ಕಲಾಪಗಳನ್ನೂ ಸ್ವಯಂ ಪ್ರೇರಕ ಶಕ್ತಿಯಿಂದಲೇ ಮಾಡಿ ಮಾಡಿಸುತ್ತಿರುವ ಸರ್ವತಂತ್ರಸ್ವತಂತ್ರ ಪ್ರಭುವು, ಹೀಗೆ ಓತಪ್ರೋತವಾಗಿ ವ್ಯಾಪ್ತನಾಗಿದ್ದಾಗ್ಯೂ ಕರ್ಮಜನ್ಯ ಫಲಗಳ ಸಂಬಂಧವು ಶ್ರೀ ಪರಮಾತ್ಮನಿಗಿಲ್ಲ. ಆತನು ವ್ಯಾಪ್ತರೂಪದಿಂದ ಇದ್ದಾಗ್ಯೂ ನಿರ್ಲೇಪನಾಗಿ ಯಾವ ವಿಕಾರವನ್ನೂ ಹೊಂದದೆ, ಏಕಪ್ರಕಾರದಿಂದಿರುವನು. ಈ ಅಭಿಪ್ರಾಯವನ್ನೇ ದಾಸರಾಯರು "ಕುಂದದೆ" ಎಂಬ ಶಬ್ದಪ್ರಯೋಗದಿಂದ ಸೂಚಿಸಿದ್ದಾರೆ. ಸತ್ಕರ್ಮ ಫಲರೂಪವಾದ ದುಃಖಾನುಭವವನ್ನು ತಂದುಕೊಡುವನು. ಶ್ರೀ ಪರಮಾತ್ಮನ ಈ ಮಹಿಮಾ ವಿಶೇಷವನ್ನು "ಆಕಾಶ" (ಬಾಂದಳ) ದೃಷ್ಟಾಂತದಿಂದ ಹೃದಯಂಗಮವಾಗಿ ವಿವರಿಸುತ್ತಾರೆ. ಆಕಾಶ ಅವಕಾಶಪ್ರದವು. ಅದು ಸರ್ವತ್ರವ್ಯಾಪ್ತ. ಎಲ್ಲಾ ಪದಾರ್ಥಗಳಿಗೂ ಆಶ್ರಯವನ್ನು ಕೊಡುವ ಗುಣವಿಶೇಷ ಆಕಾಶಕ್ಕಿದೆ. ಆದರೆ ಆಕಾಶದಲ್ಲಿ ವ್ಯಾಪ್ತವಾಗಿರುವ ಗಾಳಿಯ ಸಂಪರ್ಕ ಆಕಾಶಕ್ಕಿಲ್ಲ. ಅಂತೆಯೇ ಆಶ್ರಯಪ್ರದತತ್ವಗುಣ ಅದಕ್ಕಿದೆಯೇ ಹೊರತು, ಆಕಾಶವು ಇತರ ವಸ್ತುಗಳನ್ನು ಆಶ್ರಯಿಸಿಲ್ಲ. ಹಾಗೆಯೇ ಶ್ರೀ ಪರಮಾತ್ಮನು ಅತ್ಯಂತ ಅಣುರೂಪವಾದ ಸೂಕ್ಷ್ಮ ವಸ್ತುಗಳಲ್ಲಿಯೂ, ಮಹತ್ತಾದ ಬೃಹತ್ಪ್ರಮಾಣದ ವಸ್ತುಗಳಲ್ಲಿಯೂ ವ್ಯಾಪ್ತನಾಗಿದ್ದರೂ, ಆ ವಸ್ತುಗಳ ಗುಣ ಮತ್ತು ಕರ್ಮಗಳ ಸಂಬಂಧ ಅವನಿಗಿಲ್ಲ. ಜಗದ್ವಿಲಕ್ಷಣನಾಗಿದ್ದು, ಚೇತನಾಚೇತನ ವಸ್ತುಗಳಲ್ಲಿ ತದ್ರೂಪ, ತದಾಕಾರ, ತನ್ನಾ

ಮಕ ಮತ್ತು ತದ್ವಾಚ್ಯನಾಗಿದ್ದರೂ. ಅವುಗಳಿಂದ ಅತ್ಯಂತ ಭಿನ್ನನಿದ್ದಾನೆ. ಇಂತಹ ಪರಮ ವಿಲಕ್ಷಣ ಮಹಿಮಾತಿಶಯ ಇನ್ನ್ಯಾರಿಗೆ ಉಂಟು ? ಜಡ ವಸ್ತುಗಳ ವಿವಕ್ಷಯಾ ಸೂಕ್ಷ್ಮ ಮತ್ತು ಸ್ಥೂಲವಸ್ತುಗಳಲ್ಲಿ ವ್ಯಾಪ್ತನಾಗಿರುವಂತೆ, ಚೇತನರ ವಿವಕ್ಷಯಾ. ಜೀವನಸ್ವರೂಪ ಸೂಕ್ಷ್ಮವಾದ ಪರಮಾಣು ರೂಪ. ಅಲ್ಲಿಯೂ ಅಂತರ್ಯಾಮಿ ರೂಪದಿಂದ ಬಿಂಬನೆಂದೆನಿಸಿ, ಚೇತನರ ಜ್ಞಾನ ಇಚ್ಛಾ ಮತ್ತು ಕ್ರಿಯಾ ಶಕ್ತಿಗಳಿಗೆ ಪ್ರೇರಕನಾಗಿದ್ದಾನೆ. ಪರಾಧೀನ ಕರ್ತೃತ್ವ ಜೀವನದು. ಸ್ವಾತಂತ್ರಕರ್ತೃತ್ವ ಶ್ರೀ·ಪರಮಾತ್ಮನದು. ಜೀವರಿಗೆ ಪರಮಾತ್ಮನಲ್ಲಿ ಆಶ್ರಯ. ಹೀಗೆ ಸರ್ವರ ಆಶ್ರಯದಾತನಾದ ಶ್ರೀ ಪರಮಾತ್ಮನಿಗೆ ಯಾರ ಆಶ್ರಯವೂ ಬೇಕಿಲ್ಲ. ಅಂತೆಯೇ "ಘಟಮಂದಿರ" ಎಂದರೆ, ಕೊಡದ ಒಳಗೆ ಇರುವ ಅವಕಾಶ. ಇದರಂತೆ ಸ್ಥೂಲ ದೇಹಗಳಲ್ಲಿ (ಮಹತ್ತೆನಿಪ) ವಾಪ್ತನಾಗಿದ್ದು, ದೇಹಗತ ವ್ಯಾಪಾರಗಳನ್ನು ವ್ಯಕ್ತ ಮಾಡುವನು. ಆದರೆ ಜೀವಸ್ವರೂಪಗತ ಅಪ್ರಾಕೃತ ಗುಣಗಳಿಂದಲಾಗಲೀ, ಲಿಂಗ ದೇಹಗತ ತ್ರಿಗುಣಗಳಿಂದಲಾಗಲೀ, ಪ್ರಾರಬ್ಧ, ಸಂಚಿತ ಮತ್ತು ಆಗಾಮಿ ರೂಪವಾದ ಕರ್ಮ ಪ್ರವಾಹಗಳಿಂದ ಜನ್ಯವಾದ ಕರ್ಮಫಲ (ಸುಖ, ದುಃಖ ಮತ್ತು ಮಿಶ್ರಫಲ) ಇವುಗಳಿಂದಲಾಗಲೀ ತಾನು ಸಂಪೂರ್ಣವಾಗಿ ನಿರ್ಲಿಪ್ತನಾಗಿದ್ದು, ಅವುಗಳ ಗುಣ ರೂಪ ಕ್ರಿಯಾಗಳ ಸಂಬಂಧವಿಲ್ಲದೇ ಇರುವನು. ಆದರೆ ಅವೆಲ್ಲವೂ ಭಗವಧೀನವಾದದ್ದು. ಅವುಗಳನ್ನು ಪ್ರಚೋದಿಸಿ ಕ್ರಿಯಾತ್ಮಕವನ್ನಾಗಿ ಮಾಡಿದರೇ, ಜಗತ್ತಿನ ಸಕಲ ವ್ಯಾಪಾರಗಳೂ ವ್ಯಕ್ತವಾಗುವುವು. ಭಗವತ್ಸಂಬಂಧವಿಲ್ಲದೇ, ಅವು ಯಾವುವೂ ಏನೂ ಕೆಲಸ ಮಾಡಲಾರವು. ನಿಷ್ಕ್ರಿಯಾರೂಪದಲ್ಲಿರುವುವು. ಅವುಗಳಿಗೆ ಶ್ರೀಪರಮಾತ್ಮನು ಪ್ರೇರಕನೂ ನಿಯಾಮಕನೂ ಆಗಿದ್ದಾನೆಯೇ ಹೊರತು, ಪ್ರೇರ್ಯನೂ ಅಲ್ಲ ನಿಯಮ್ಯನೂ ಅಲ್ಲ, ಇದೇ ಬಿಂಬ–ಪ್ರತಿಬಿಂಬ ನ್ಯಾಯ. ಅಂದರೆ ಈಶ ದಾಸರ ಸಂಬಂಧ. ಅಂತೆಯೇ ಈಶ-ಜಡರ ಅನ್ಯೋನ್ಯ ಸಂಬಂಧ. ಜೀವ ಜಡಗಳಿಂದ ಅತ್ಯಂತ ಭಿನ್ನನಾಗಿರುವ ಜಗತ್ಪ್ರಭುವು ಬಾಂದಳದಂತೆ ಸರ್ವತ್ರ ವ್ಯಾಪ್ತನು ಮತ್ತು ಶಶ್ವದೇಕಪ್ರಕಾರನು. ॥೨೬॥

# ಪದ್ಯ (೨೭)

**ಮೂಲ :—**

**ಕಾದಕಬ್ಬಿಣ ಹಿಡಿದು ಬಡಿಯಲು ।**
**ವೇದನೆಯು ಲೋಹಗಳಿಗಲ್ಲದೆ ।**
**ಆದುದೇನೈ ಅನಳಗಾ ವ್ಯಥೆ ಏನು ಮಾಡಿದರು ॥**
**ಆದಿದೇವನು ಸರ್ವಜೀವರ ।**
**ಕಾದುಕೊಂಡಿಹನೊಳಹೊರಗೆ ದುಃ ।**
**ಖಾದಿಗಳು ಸಂಬಂಧವಾಗುವುದೇನೋ ಚಿನ್ಮಯಗೆ॥ ॥೨೭॥**

**ಅವತರಣಿಕೆ :—**

ಆದಿಮೂಲನಾದ ಶ್ರೀ ಪರಮಾತ್ಮನು ಸಮಸ್ತ ಜೀವರಾಶಿಗಳ ಒಳ ಹೊರಗೆ ಪೂರ್ಣನಾಗಿ ವ್ಯಾಪ್ತನಾಗಿದ್ದರೂ, ಆವನಿಗೆ ದೇಹಸಂಬಂಧವಾದ ಹಾಗೂ ಜೀವರ ಸ್ವರೂಪಯೋಗ್ಯತಾ ಸಂಬಂಧವಾದ ಸುಖ ದುಃಖಾದಿ ಗಳಾವುವೂ ಸಂಪರ್ಕವಿಲ್ಲ ಎಂಬ ತತ್ವಾರ್ಥವನ್ನು ಒಂದು ಸೂಕ್ತವಾದ ದೃಷ್ಟಾಂತದಿಂದ ವಿವರಿಸುತ್ತಾರೆ. ಕಬ್ಬಿಣದ ಸರಳನ್ನು ಕುಲುಮೆಯಲ್ಲಿ ಕೆಂಪಗೆ ಕಾಯಿಸಿ, ಅದನ್ನು ಚಮ್ಮಟಿಗೆಯಿಂದ ಹೊಡೆದಾಗ, ಕಬ್ಬಿಣವು ಆಕಾರದಲ್ಲಿ ವಿಕಾರವನ್ನು ಹೊಂದುವುದು. ಆದರೆ ಆ ಲೋಹಗತ ಅಗ್ನಿಗೆ ಚಮ್ಮಟಿಗೆಯ ಪೆಟ್ಟಿನ ದುಃಖವಾಗಲೀ ಅಥವಾ ಆಕೃತಿ ವಿಕಾರವಾಗಲೀ ಯಾವುದೂ ಆಗುವುದಿಲ್ಲ ಎಂಬ ಸುಂದರವಾದ ದೃಷ್ಟಾಂತಪೂರ್ವಕ ಹೇಳು ತ್ತಾರೆ. "ಕಾದ ಕಬ್ಬಿಣ" —ಎಂಬ ಈ ಪದ್ಯದಿಂದ ॥೨೭॥

**ಪ್ರತಿಪದಾರ್ಥ :—**

**ಕಾದ** = ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಿದ **ಕಬ್ಬಿಣ** = ಕಬ್ಬಿಣವನ್ನು

**ಹಿಡಿದು** = ಚಲಿಸದಂತೆ ಇಕ್ಕಳ ಮುಂತಾದ ಆಯುಧ ವಿಶೇಷದಿಂದ ಹಿಡಿದು ಕೊಂಡು **ಬಡಿಯಲು** = ಭಾರವಾದ ಚಮ್ಮಟಿಗೆಯಿಂದ ಹೊಡೆದಾಗ **ವೇದನೆಯು** = ಆ ಪೆಟ್ಟಿನಿಂದ ಆಗತಕ್ಕ ನೋವು **ಲೋಹಗಳಿಗಲ್ಲದೆ** = ಕಬ್ಬಿಣ ಮುಂತಾದ ಲೋಹ ವಿಶೇಷಗಳಿಗೇ ಹೊರತು **ಅನಳಗೆ** = ಆ ಲೋಹದಲ್ಲಿ ವ್ಯಾಪ್ತನಾದ ಅಗ್ನಿಗೆ ಆ **ವ್ಯಥೆ** = ಬಡಿತದಿಂದ ಉಂಟಾದ ಆ ಪೆಟ್ಟು **ಅದುದೇನೈ** = ಆಗುವುದೇನಯ್ಯ ? (ಎಂತ ಸಂಬೋಧನೆ) **ಏಸುಮಾಡಿದರೂ** = ಎಷ್ಟೆಷ್ಟು ಮಾಡಿದರೂ **ಆದಿದೇವನು** = ಅನಾದಿ ಕಾಲದಿಂದಲೂ ಶಶ್ವದೇಕ ಪ್ರಕಾರನಾಗಿರುವ ಸರ್ವಶ್ರೇಷ್ಠನಾದ ಶ್ರೀ ಪರಮಾತ್ಮನು **ಸರ್ವಜೀವರ** = ಸಮಸ್ತ ಜೀವರಾಶಿಗಳ (ತ್ರಿವಿಧ ಜೀವರಿಗೆ ಬಿಂಬನಾಗಿ) **ಒಳ ಹೊರಗೆ** = ಒಳಗೆ ಮತ್ತು ಹೊರಗೆ (ಅಂತರ್ಬಹಿಶ್ಚ) **ಕಾದು ಕೊಂಡಿಹ** = ಕಾಯುತ್ತಾ ಬೆಂಗಾವಲಾಗಿ ರಕ್ಷಕನಾಗಿದ್ದು **ಚಿನ್ಮಯಗೆ** = ಅಂತಹ ಚಿದಾನಂದಸ್ವರೂಪಿಯಾದ ಶ್ರೀ ಪರಮಾತ್ಮನಿಗೆ **ದುಃಖಾದಿಗಳು** ದೇಹಗತ ದುಃಖಗಳು (ವೇದನೆ) **ಸಂಬಂಧವಾಗುವುವೇನೋ** = ಎಂದಿಗಾದರೂ ಸಂಬಂಧವಾಗುತ್ತವೆಯೋ ? ಅಂದರೆ, ಎಂದೆಂದಿಗೂ ಇಲ್ಲ ಎಂದು ತಾತ್ಪರ್ಯ. ॥೨೭॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ದೇಹಗತನಾದ ಶ್ರೀ ಪರಮಾತ್ಮನಿಗೆ ದೇಹಗತನಾದ ಜೀವನೋಪಾದಿಯಲ್ಲಿ ದುಃಖಾದಿಗಳ ಸಂಬಂಧವಿಲ್ಲವೆಂದು ಹೇಳುತ್ತಾರೆ– "ಕಾದ ಕಬ್ಬಿಣವ" ಎಂಬ ಈ ಪದ್ಯದಿಂದ.

ಕಾದಂಥ ಕಬ್ಬಿಣವನ್ನು ಹಿಡಿದು, ಚಮ್ಮಟಿಗೆ ಆಯುಧದಿಂದ ಬಡಿದರೆ, ಅದರಿಂದ ಉಂಟಾಗುವ ವ್ಯಥೆಯ ರೂಪವಾದ ವಿಕಾರವು, ಲೋಹಗತ ಅಗ್ನಿಗೆ

ಹೇಗೆ ಸಂಬಂಧಿಸದೇ, ಲೋಹವನ್ನು ಮಾತ್ರ ವಿಕಾರಗೈಸುವುದೋ, ತದ್ವತ್ ದೇಹಗತನಾದ ಪರಮಾತ್ಮಗೆ ಜೀವರ ಕರ್ಮಫಲದಿಂದ ಉಂಟಾಗುವ ಸುಖದುಃಖಾದಿಗಳು ಜೀವಗೆ ಸಂಬಂಧಿಸೋದೇ ಹೊರತು, ಪರಮಾತ್ಮಗೆ ಸಂಬಂಧಿಸೋದಿಲ್ಲ. ಇಂಥಾ ನಿರಂಜನ ದೋಷಸಂಬಂಧವಾದ ಸುಖದುಃಖಾದಿಗಳು ಸಂಬಂಧವಾಗದೇ, ಸ್ವಾಖ್ಯವಿಷಯ ಸಂಬಂಧದಿಂದ ಪೂರ್ಣನಾಗಿದ್ದಾನೆ ಎಂತ ತಾತ್ಪರ್ಯ. ಇಲ್ಲಿ "ಒಳ ಹೊರಗೆ"—ಎಂಬ ಶಬ್ದ ಪ್ರಯೋಗದಿಂದ, "ಒಳಗೆ" —ಅಂದರೆ ಜೀವಾಂತರ್ಗತನಾಗಿ ಮತ್ತು ದೇಹಾಂತರ್ಗತನಾಗಿ ಎಂದು ಒಂದರ್ಥ. ಲಿಂಗಭಂಗಾನಂತರ (೧) ವೈಕುಂಠಾದಿ ಲೋಕಗಳಲ್ಲಿ (೨) ಸಾಂತಾನಿಕ ಲೋಕದೊಳಗೆ ಮತ್ತು (೩) ಅಂಧಃತಮೋಲೋಕದಲ್ಲಿ ಈ ಪ್ರಕಾರ ತ್ರಿಸ್ಥಾನಗತಜೀವರ ಎಂದು ಇನ್ನೊಂದರ್ಥ. "ಹೊರಗೆ"– ಎಂದರೆ, ತದ್ವ್ಯತಿರಿಕ್ತ ಹೊರಭಾಗವಾದ ಸ್ಥಿತಿಕಾಲವಾದ ಭೂಲೋಕದಲ್ಲಿ, ನರಕದಲ್ಲಿ ಮತ್ತು ಸ್ಥೂಲದೇಹದಲ್ಲಿ ಇರತಕ್ಕ ಎಂದರ್ಥ. ॥೨೭॥

## (೨) "ಭಾವಪ್ರಕಾಶಿಕೆ" –ವ್ಯಾಖ್ಯಾನ :—

ಕಾದ ಕಬ್ಬಿಣವನ್ನು ಉದ್ದವಾಗಿ ಮಾಡುವುದಕ್ಕಾಗಿ ಹೊಡೆದರೆ, ಆ ಹೊಡೆತವು ಕಬ್ಬಿಣಕ್ಕೆ ತಗುಲಿ ಉದ್ದವಾಗುವುದೇ ಹೊರತು, ಆ ಕಬ್ಬಿಣದಲ್ಲಿ ವ್ಯಾಪಿಸಿರುವ ಅಗ್ನಿಗೆ ಎಂದಿಗೂ ತಗಲದು. ಅದರಂತೆಯೇ ಪರಮಾತ್ಮನು ಸರ್ವಜೀವರ ಒಳ ಹೊರಗೆ ವ್ಯಾಪ್ತನಾಗಿದ್ದರೂ, ನಿರ್ಲಿಪ್ತನಾಗಿರುವುದರಿಂದ, ಜೀವರ ದೇಹಗಳಿಗಾಗುವ ದುಃಖಾದಿಗಳು ದೇಹಸ್ಥದನಾ ಪರಮಾತ್ಮನಿಗೆ ಸಂಬಂಧವಾಗದು ॥೨೭॥

## (೩) "ಭಾವದರ್ಪಣಟೀಕಾ"— ವ್ಯಾಖ್ಯಾನ :

ಶ್ರೀಹರಿ ದುಃಖೀ ಅಧಿಷ್ಠಾನದಲ್ಲಿದ್ದಾಗ್ಯೂ ಸರ್ವಥಾ ದುಃಖ ಸಂಬಂಧ ಇಲ್ಲವೆಂದು ಸದೃಷ್ಟಾಂತ ಹೇಳುತ್ತಾರೆ– "ಕಾದ" —ಎಂಬ ಪದ್ಯದಿಂದ. ಚಿನ್ಮಯ = ಜ್ಞಾನಪ್ರಚುರನಾದ ಪರಮಾತ್ಮ. ವೇದನಾ = ವ್ಯಥೆ ॥೨೭॥

## (ಳ) ಜಮುಖಂಡಿ ಶ್ರೀವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತಮೂಲ) :—

ನ ಮಾಂ ಕರ್ಮಾಣಿ ಲಿಂಪತೀತ್ಯಾದೇಃ ಕರ್ಮಾದಿಭಿಃ (ಸಂಬಂಧನಾಗದೇ) ಇತ್ಯುಕ್ತ್ಯೋಪಿ ಕರ್ದಮ ಸಂಪೃಕ್ತ ಪಾದವತ್ ಅವರ್ಜನೀಯಃ ಸ ಇತಿಚೇತ್ ತತ್ರ ದೃಷ್ಟಾಂತಮಾಹ ॥ ಕಾದೇತಿ ॥ ಆದುದೇನ್ನೈ—ಆದೀತೇನು ? ॥೨೭॥

**ಕನ್ನಡಾನುವಾದ :—**

"ಕರ್ಮಗಳು ಯಾವತ್ತೂ ನನಗೆ ಲೇಪವಾಗುವುದಿಲ್ಲ" —ಎಂಬ **ಗೀತಾವಾಕ್ಯದ** ಪ್ರಕಾರ "ಸಂಬಂಧವಾಗದೆ" ಎಂದು ಹೇಳಿದ್ದಾರೆ. "ಹರಿಗೆ ಕರ್ಮಲೇಪವು ಲವಲೇಶವಾದರೂ ಇಲ್ಲ" ಎಂದು ಸ್ಪಷ್ಟೋಕ್ತಿ ಇದೆ. ಆದರೆ ಒಂದು ಸಂಶಯ ಬರುತ್ತದೆ. ಕೆಸರಿನಲ್ಲಿ ಸಿಕ್ಕಿಬಿದ್ದಿರುವ ಒಬ್ಬನ ಕಾಲಿಗೆ ಕೊಳೆಯು ಬಿಡದೆ ಅಂಟೇ ಇರುವುದು. ಕೆಸರಿನ ಸಂಬಂಧದಿಂದ ಮಾಲಿನ್ಯದ ಲೇಪವು ಹ್ಯಾಗೋ, ತದ್ವತ್ ಜೀವರ ದೇಹಗತನಾಗಿರುವ ಶ್ರೀ ಪರಮಾತ್ಮನಿಗೆ ಕರ್ಮಲೇಪವು ತಟ್ಟಲಾರದಲ್ಲವೇ ? ಎಂದು ಸಂಶಯ ಮೂಡುವುದು ಸಹಜ. ಇದೇ ಪೂರ್ವಪಕ್ಷವು, ಈ ಸಂಶಯವನ್ನು ನಿವಾರಿಸಲು. "ಕಾದಕಬ್ಬಿಣ" ಎಂಬ ಈ ಪದ್ಯದಿಂದ ಶ್ರೀ ಪರಮಾತ್ಮನಿಗೆ ಕರ್ಮಲೇಪವಿಲ್ಲ ಎಂದು ಸದೃಷ್ಟಾಂತಪೂರ್ವಕ ವಿವರಿಸುತ್ತಾರೆ. ॥೨೭॥

## (ಱ) "ಗುರುಹೃದಯ ಪ್ರಕಾಶಿಕೆ"—ವ್ಯಾಖ್ಯಾನ :—

ವ್ಯಾಪ್ತನಾಗಿದ್ದರೂ ಸುಖ ದುಃಖ ಲೇಪವಿಲ್ಲವೆಂಬುದನ್ನು ದೃಷ್ಟಾಂತದಿಂದ ವಿವರಿಸುತ್ತಾರೆ—"ಕಾದ ಕಬ್ಬಿಣ" ಎಂಬ ಪದ್ಯದಿಂದ. ಕಾಸಿದ ಕಬ್ಬಿಣವನ್ನು ಬಡಿದರೆ. ಪೆಟ್ಟು ಲೋಹಕ್ಕೆ ತಗುಲಿ ವಿಕಾರವಾಗುವುದು. ಅಗ್ನಿಗೆ ಪೆಟ್ಟಿನ ಸಂಬಂಧವಿಲ್ಲದ್ದು ಸೂಕ್ಷ್ಮಬುದ್ಧಿಗೆ ತಿಳಿಯುವುದು. ಆದಿ

ದೇವನಾದ, ಶ್ರೀಹರಿಯು ಸರ್ವರನ್ನೂ ಒಳಹೊರಗೆ ರಕ್ಷಿಸುತ್ತ ವ್ಯಾಪ್ತ ನಾಗಿ ಕಾದಿದ್ದಾಗ್ಯೂ, ದುಃಖಾದಿಗಳು ಲೇಪವಿಲ್ಲವೆಂದು ತಿಳಿಯಬೇಕೆಂದು ತಾತ್ಪರ್ಯ. ॥೨೭॥

## ಸರ್ವವ್ಯಾಖ್ಯಾನಸಾರಸಂಗ್ರಹ :—

ಚೇತನಾಚೇತನಾತ್ಮಕವಾದ ಈ ಜಗತ್ತಿನಲ್ಲಿ ಸಮಸ್ತ ಜೀವರಾಶಿಗಳಲ್ಲಿ ಶ್ರೀಹರಿಯು ವ್ಯಾಪ್ತನಾಗಿದ್ದಾನೆ. ಜೀವರಲ್ಲಿ ಅಂತರ್ಯಾಮಿರೂಪದಿಂದ ಒಳಗೂ, ಸ್ಥೂಲದೇಹಾಂತರ್ಗತನಾಗಿ ಹೊರಗೂ ಬಿಡದೆ ವ್ಯಾಪಿಸಿದ್ದಾನೆ. ಹೀಗೆ ಒಳ ಹೊರಗೆ, ಎಡ ಬಲದಿ, ಸುತ್ತಮುತ್ತ ಎಲ್ಲೆಲ್ಲಿ ನೋಡಿದರಲ್ಲಿ ಆಕಾಶದಂತೆ ಸರ್ವತ್ರ ವ್ಯಾಪ್ತನಾಗಿದ್ದು ಜೀವರ ಬೆಂಬಲಿಗನಾಗಿ ರಕ್ಷಿಸು ತ್ತಿರುವ ಪರಮ ಕರುಣಾಳು ಆ ಜಗನ್ನಿಯಾಮಕನು. ದೇಹಗತ ಗೋಳಕ ಗಳಲ್ಲಿ, ಇಂದ್ರಿಯಗಳಲ್ಲಿ, ಕರಣಾಭಿಮಾನಿದೇವತೆಗಳಲ್ಲಿ. ದೈತ್ಯರಲ್ಲಿ ತಾನೇ ನಿಯಾಮಕನಾಗಿದ್ದು, ಬಿಂಬಂಕ್ರಿಯಾದ್ವಾರಾ ಸಕಲಕ್ರಿಯಾ ವಿಶೇಷಗಳನ್ನು ನಿರ್ವಹಿಸುತ್ತಿರುವನು. ಸ್ಥೂಲಶರೀರವು ಸಾಧನದೇಹವು. ಇದರ ದ್ವಾರಾ ಸತ್ಸಾಧನಾರೂಪವಾದ ಪುಣ್ಯ ಕಾರ್ಯಗಳೂ ಮತ್ತು ದುಸ್ಸಾಧನ ರೂಪ ವಾದ ಪಾಪಕಾರ್ಯಗಳೂ ನಡೆಯುತ್ತಿರುವುವು. ಈ ಕ್ರಿಯಾವಿಶೇಷಗಳಿಗೆ ಸಂಚಿತ ಮತ್ತು ಆಗಾಮಿರೂಪವಾದ ಕರ್ಮವೇ ಕಾರಣ. ಇದಕ್ಕೆ ಮೂಲಭೂತವಾದ ಅನಾದಿಕರ್ಮನಿಮಿತ್ತ ಮಾಡಿಕೊಂಡು, ಕರ್ಮನಿಯಾ ಮಕನಾಗಿ ಶ್ರೀ ಪರಮಾತ್ಮನೇ ಶ್ರೀ ಮುಖ್ಯಪ್ರಾಣರ ದ್ವಾರಾ ತತ್ವೇಶರ, ಜೀವರ ದ್ವಾರಾ ಸಕಲ ಕಾರ್ಯಗಳಿಗೂ ತಾನೇ ಮುಖ್ಯ ಪ್ರೇರಕನಾಗಿ ಸ್ಥೂಲದೇಹಗತ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು. ಆದ್ದ ರಿಂದ ಭಗವಂತನು ಕರ್ಮಸಾಕ್ಷಿಯು. ದೇಹಗತನಾಗಿ ಕರ್ಮಗಳನ್ನು ಮಾಡಿ ಮಾಡಿಸುತ್ತಿರುವುದರಿಂದ, ಕರ್ಮಜನ್ಯ ಫಲರೂಪವಾದ ಸುಖದುಃಖಾದಿ ಗಳ ಲೇಪವು ಶ್ರೀ ಪರಮಾತ್ಮನಿಗೆ ಉಂಟೇ ? ಎಂದರೆ, ಇಲ್ಲ ಎಂಬ ತತ್ತ್ವರಹಸ್ಯವನ್ನು ದಾಸರಾಯರು ಒಂದು ಸುಂದರವಾದ ದೃಷ್ಟಾಂತದಿಂದ ವಿವರಿಸುತ್ತಾರೆ. ಕಬ್ಬಿಣವನ್ನು ಕಮ್ಮಾರನು ಕುಲುಮೆಯಲ್ಲಿ ಕೆಂಪಗೆ ಕಾಯಿಸಿ,

ಕಾದ ಕಬ್ಬಿಣವನ್ನು ಅಡಿಗಲ್ಲಿನ ಮೇಲಿಟ್ಟು, ಇಕ್ಕಳದಿಂದ ಹಿಡಿದುಕೊಂಡು, ಭಾರವಾದ ಚಮ್ಮಟ್ಟಿಗೆ ಎಂಬ ಸಾಧನ ವಿಶೇಷದಿಂದ ಎತ್ತಿ ಹೊಡೆಯುವನು. ಆಗ ಅಗ್ನಿಸಂಬಂಧದಿಂದ ಮೃದುತ್ವವನ್ನು ಹೊಂದಿರುವ ಕಬ್ಬಿಣವು ವಿಕಾರ ವನ್ನು ಹೊಂದಿ, ಬೇಕಾದ ಆಕಾರವನ್ನು ತಾಳುವುದು. ಇದು ಅನುಭವ ಸಿದ್ಧವಾದ ಒಂದು ದೃಷ್ಟಾಂತ. ಇಲ್ಲಿ ಚಮ್ಮಟಿಗೆಯಿಂದ ಪೆಟ್ಟನ್ನು ತಿನ್ನು ವುದು ಕಬ್ಬಿಣವು ಮಾತ್ರ. ಅದರ ಪರಿಣಾಮವಾಗಿ ಅದರಲ್ಲಿ ವಿಕಾರವುಂಟಾ ಗುವುದು. ಆದರೆ ಆ ಕಬ್ಬಿಣದಲ್ಲಿ ವ್ಯಾಪಿಸಿದ ಅಗ್ನಿಗೆ ಹೊಡೆತವಾಗಲೀ ವಿಕಾರವಾಗಲೀ ಉಂಟಾಗುವುದೇ ? ಸರ್ವಥಾ ಇಲ್ಲ, ಲೋಹಗತ ಅಗ್ನಿಯು ನಿರ್ವಿಕಾರವಾಗಿ, ನಿರ್ಲೇಪವಾಗಿರುವುದು. ಅಂತೆಯೇ ಶ್ರೀ ಪರಮಾತ್ಮನು ಸೃಷ್ಟಿಕರ್ತನು ಮತ್ತು ಜಗನ್ನಿಯಾಮಕನು. ಬ್ರಹ್ಮಾಂಡದ ಅಂತರ್ಬಹಿರದಿ ವ್ಯಾಪ್ತನು. ಮಹಾಪ್ರಳಯಕಾಲದಲ್ಲಿ ಸಮಸ್ತ ಜಗ ತ್ತನ್ನೂ ಮತ್ತು ಅಖಂಡಜೀವರಾಶಿಗಳನ್ನೂ ತನ್ನ ಉದರದಲ್ಲಿ ಆಶ್ರಯ ಕೊಟ್ಟು ಇಟ್ಟುಕೊಂಡ ಆ ಜಗದುದರನ ಹೊರತಾಗಿ ಮತ್ತಾರೂ ಅಲ್ಲಿ ಪ್ರವರ್ತಕರಾಗಿರಲಿಲ್ಲ. ಅತಏವ, ಶ್ರೀಮನ್ನಾರಾಯಣನೇ ಆದಿಮೂಲ ಸ್ವರೂಪಿಯು. ಅಂತಹ ಆದಿದೇವನು ಸಮಸ್ತಜೀವರ ಒಳ ಮತ್ತು ಹೊರಗೆ ಸರ್ವತ್ರ ವ್ಯಾಪಿಸಿದ್ದರೂ ಜೀವರ ದೋಷವಾಗಲೀ, ದೇಹಗತ ವ್ಯಾಪಾರ ಗಳಿಂದ ಜನ್ಯವಾದ ಪುಣ್ಯ ಪಾಪ ಫಲಗಳ ರೂಪವಾದ ಸುಖ ದುಃಖಾದಿ ಗಳಾಗಲೀ ಅವನಿಗೆ ಸಂಬಂಧಿಸುವುದಿಲ್ಲ. ಅವುಗಳಿಂದ ಅವನು ನಿರ್ಲಿಪ್ತ ನಾಗಿ ಸರ್ವದೋಷವಿದೂರನಾಗಿದ್ದಾನೆ. ಏಕೆಂದರೆ, ಇಂತಹ ಕರ್ಮಸಾಕ್ಷಿ ಯಾದ ಶ್ರೀ ಪರಮಾತ್ಮನು ಜ್ಞಾನಾನಂದಸ್ವರೂಪಿಯು. ಅಂದರೆ ಚಿನ್ಮ ಯನು. ಹೀಗೆ ಅಪರಿಮಿತವಾದ ಜ್ಞಾನ ಮತ್ತು ಆನಂದದಿಂದ ನಿತ್ಯ ಉದ್ರಿಕ್ತನಾದ, ಸರ್ವಶ್ರೇಷ್ಠ ವಸ್ತುವೆಂದರೆ ಶ್ರೀ ಪರಮಾತ್ಮನೊಬ್ಬನೇ. ಅಂತಹ ಚಿತ್ಸುಖಸ್ವರೂಪಿಯಾದ ಭಗವಂತನಿಗೆ ದುಃಖಾದಿಗಳ ಲೇಪವಿಲ್ಲ. ಆದರೆ ಪರಮ ಕರುಣಾಳುವಾದ್ದರಿಂದ ಸ್ವಭಕ್ತರ ವಿಷಯದಲ್ಲಿ ಸದಾ ಜಾಗರೂಕನಾಗಿದ್ದು, ಅವರಿಗೆ ಸರ್ವಪ್ರಕಾರಗಳಲ್ಲಿಯೂ ರಕ್ಷಕನಾಗಿ ಅನಿಮಿತ್ತ ಬಂಧುವೆಂದೆನಿಸಿರುವನು. ಈ ದೃಷ್ಟಾಂತದಲ್ಲಿ ಜೀವರ ಸ್ಥೂಲ

ದೇಹ ಲೋಹಸದೃಶ. ನಿರ್ಲಿಪ್ತನಾದ ಶ್ರೀಪರಮಾತ್ಮನು, ಲೋಹಗತ ಅಗ್ನಿಸದೃಶ. ಅನಾದಿನಿತ್ಯನಾದ ಜೀವನಿಗೆ ಹೊದಿಕೆಯಂತಿರುವ ಈ ಸ್ಥೂಲ ದೇಹಗಳ ಉತ್ಪತ್ತಿ ಮತ್ತು ನಾಶವೇ ಜನನ ಮರಣಾಖ್ಯ ರೂಪವಾದ ಸಂಸಾರವೆಂಬ ಅಕ್ಷಯಸಾಗರ. ಈ ಭವಸಾಗರವನ್ನು ದಾಟಿಸಿ. ಜೀವರ ಉದ್ಧಾರಮಾಡುವುದೇ ಶ್ರೀಪರಮಾತ್ಮನ ಪರಮ ಪ್ರಸಾದರೂಪವಾದ ಕಾರುಣ್ಯವಿಶೇಷ ॥೨೭॥

## ಪದ್ಯ (೨೮)

**ಮೂಲ :—**

**ಮಳಲಮನೆಗಳ ಮಾಡಿ ಮಕ್ಕಳು ।**
**ಕೆಲವು ಕಾಲದಲಾಡಿ ಮೋದದಿ ।**
**ತುಳಿದು ಕೆಡಿಸುವ ತೆರದಿ ಲಕುಮೀರಮಣ ಲೋಕಗಳ ॥**
**ಹಲವು ಬಗೆಯಲಿ ನಿರ್ಮಿಸುವ ನಿ ।**
**ಶ್ಚಲನು ತಾನಾಗಿದ್ದು ಸಲಹುವ ।**
**ಎಲರುಣಿಯವೋಲ್ ನುಂಗುವಗೆ ಎಲ್ಲಿಹುದೋ ಸುಖ ದುಃಖ ॥**
**॥೨೮॥**

**ಅವತರಣಿಕೆ :—**

ರಮಾರಮಣನಾದ ಶ್ರೀಪರಮಾತ್ಮನು ಚರಾಚರಾತ್ಮಕವಾದ ಈ ಜಗತ್ತನ್ನು ನಾನಾಪ್ರಕಾರಗಳಲ್ಲಿ ತನ್ನ ಇಚ್ಛೆಯಿಂದಲೇ ಸೃಷ್ಟಿಸುವನು. ತನ್ನ ಸಂಕಲ್ಪಮಾತ್ರದಿಂದ ಲಯಮಾಡುವನು. ಜಗತ್ತಿನ ಸೃಷ್ಟಿ ಸ್ಥಿತಿ ಲಯಾದಿ ವ್ಯಾಪಾರ ವಿಶೇಷಗಳೆಲ್ಲವೂ ಆತನ ಕ್ರೀಡಾವಿಲಾಸವು. ಇದು ಶ್ರೀಪರಮಾತ್ಮನ ಸ್ವಭಾವ. ತಾನಿಟ್ಟಿರುವ ಮೊಟ್ಟೆಗಳನ್ನೇ ಹಾವು ತಿನ್ನುವಂತೆ.

ತನ್ನಿಂದ ನಿರ್ಮಿತವಾದ ಈ ಚಿತ್ರವಿಚಿತ್ರವಾದ ಜಗತ್ತನ್ನು ತಾನೇ ಲಯ ಗೊಳಿಸುವನು. ಆತನ ಲೀಲಾವೈಭವವನ್ನು ಮಕ್ಕಳು ಮರಳಿನಲ್ಲಿ ಗೂಡನ್ನು ಕಟ್ಟಿ. ಸ್ವಲ್ಪಕಾಲ ಆಟವಾಡಿ, ನಂತರ ತುಳಿದು ನಾಶಮಾಡುವಂತೆ ದೃಷ್ಟಾಂತಪೂರ್ವಕ ಹೇಳುತ್ತಾರೆ. "ಮಳಲ ಮನೆಗಳ" —ಎಂಬ ಈ ಪದ ದಿಂದ. ॥೨೮॥

**ಪ್ರತಿಪದಾರ್ಥ :—**

**ಮಕ್ಕಳು** = ಆಟದಲ್ಲಿ ಆಸಕ್ತರಾದ ಬಾಲಕರು **ಮಳಲ** = ಮರಳಿ ನಿಂದ (ಉಸುವು) ಅಥವಾ ಮಣ್ಣಿನಿಂದ **ಮನೆಗಳ ಮಾಡಿ** = ತಮ್ಮ ಕೈ ಗಳಿಂದ ಮನೆಗಳನ್ನಾಗಿಯೂ ಪಾದದಿಂದ ಗೂಡುಗಳನ್ನಾಗಿಯೂ ನಿರ್ಮಿಸಿ **ಕೆಲವು ಕಾಲದಲಾಡಿ** = ಸ್ವಲ್ಪಹೊತ್ತು ಮನೆಯ ಆಟವನ್ನಾಡಿ **ಮೋದದಿ** = ನಂತರ ಅಷ್ಟೇ ಸಂತೋಷದಿಂದ **ತುಳಿದು** = ತಮ್ಮ ಕಾಲಿನಿಂದ ತುಳಿದು **ಕೆಡಿಸುವ ತೆರದಿ** = ನಾಶಪಡಿಸುವ ರೀತಿಯಲ್ಲಿ (ಮಕ್ಕಳಿಗೆ ಮರಳಿನ ಗೂಡುಗಳನ್ನು ಕಟ್ಟುವ ಕಾಲದಲ್ಲಿ ಎಷ್ಟು ಸಂತೋಷವಿತ್ತೋ, ಅಷ್ಟೇ ಮೋದದಿಂದ, ಗೂಡುಗಳನ್ನು ತುಳಿದು ನಾಶಮಾಡುವರು. ಇದು ಬಾಲಕ ರಿಗೆ ಸಹಜವಾದ ಕ್ರೀಡಾವಿಶೇಷವು) **ಲಕುಮೀರಮಣ** = ಶ್ರೀ ಲಕ್ಷ್ಮೀಪತಿ ಯಾದ ಶ್ರೀ ಪರಮಾತ್ಮನು **ಲೋಕಗಳ** = ತನ್ನ ಉದರಗತ ಬ್ರಹ್ಮಾಂಡಾ ತ್ಮಕವಾದ ಹದಿನಾಲ್ಕು ಲೋಕಗಳನ್ನು **ಹಲವು ಬಗೆಯಲಿ** = ನಾನಾಪ್ರಕಾರ ವಾಗಿ (ಚಿತ್ರವಿಚಿತ್ರವಾಗಿ) **ನಿರ್ಮಿಸುವ** = ಸೃಷ್ಟಿಮಾಡುತ್ತಾನೆ. **ನಿಶ್ಚ ಲನು** = ಆದರೆ ತಾನುಮಾತ್ರ ಯಾವ ವಿಕಾರವನ್ನೂ ಹೊಂದದೆ, **ಸಲಹುವ** = ಸಂರಕ್ಷಣೆಮಾಡುತ್ತಾನೆ. **ಎಲರುಣಿಯವೋಲ್** = ಸರ್ಪದಂತೆ (ಎಲರ್ = ಗಾಳಿಯನ್ನು ಉಣಿ = ಉಣತಕ್ಕ ಸರ್ಪ. ಸರ್ಪಗಳಿಗೆ ಗಾಳಿಯೇ ಆಹಾರ) **ನುಂಗುವಗೆ** = ಜಗದ್ಭುಕ್ ಎಂದೆನಿಸಿ, ಜಗತ್ತನ್ನು ನುಂಗುವನಿಗೆ **ಸುಖ ದುಃಖ** = ದೇಹಗತವಾದ ಸುಖ ದುಃಖಗಳು **ಎಲ್ಲಿಹುದೊ** = ಎಲ್ಲಿ ಯಾದರೂ ಇರುವುದೇ ? ಅಂತ ಸಂಬೋಧನ. ಅಂದರೆ, ಇಲ್ಲವೆಂದು ತಾತ್ಪರ್ಯ ॥೨೮॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಮಕ್ಕಳು ಆಟಕ್ಕಾಗಿ ಅನಾಯಾಸವಾಗಿ ಉಸುವಿನಿಂದಾಗಲೀ ಇಲ್ಲವೇ ಮಣ್ಣಿನಿಂದಾಗಲಿ ಚಿಕ್ಕ ಚಿಕ್ಕ ಮನೆಗಳನ್ನು ಕಟ್ಟಿಕೊಂಡು, ಆ ಮನೆಯಿಂದ ಕೆಲವು ಕಾಲ ಆಟಗಳು ಆಡಿ, ಮುಗಿದ ಮೇಲೆ ಅನಾಯಾಸದಿಂದ ನಾಶ ಮಾಡುವಂತೆ, ಶ್ರೀ ಪರಮಾತ್ಮ, ತನ್ನ ಇಚ್ಛಾಮಾತ್ರದಿಂದ ಅನಾಯಾಸ ವಾಗಿ ಜಗತ್ಸೃಷ್ಟಿ ಮಾಡಿ, ತನ್ನ ಇಚ್ಛಾಮಾತ್ರದಿಂದ, ಜಗತ್ಸಂಹಾರ ಮಾಡಿ. ಸರ್ಪವು ಹೇಗೆ ಗಾಳಿಯನ್ನು ಅನಾಯಾಸದಿಂದ ಹೊಟ್ಟೆ ಒಳಗೆ ಸೆಳೆದುಕೊಳ್ಳುವುದೋ, ತದ್ವತ್ ಶ್ರೀಪರಮಾತ್ಮನು ಜಗತ್ತನ್ನು ತನ್ನ ಉದರದಲ್ಲಿಟ್ಟಿಕೊಂಡಿರುತಾನೆ (ಯಾವಾಗ ಎಂದರೇ, ಪ್ರಳಯ ಕಾಲದಲ್ಲಿ ಇಟ್ಟುಕೊಂಡು ಮಲಗತಾನೆ). ಇಂಥಾ ಪರಮಾತ್ಮನಿಗೆ ಸುಖ ದುಃಖಾದಿ ಗಳು ಎಲ್ಲಿ ಇದೆ ಎಂದರೆ ಇಲ್ಲವೇ ಇಲ್ಲ ಎಂತ ತಾತ್ಪರ್ಯ.

**ವಿಶೇಷಾರ್ಥ :—**

ಜೀವಾಂತರ್ಗತ ರೂಪಕ್ಕಾಗಲೀ, ದೇಹಾಂತರ್ಗತ ರೂಪಕ್ಕಾಗಲೀ ಅವ ತಾರಗಳು ಮಾಡಿದ ರೂಪಕ್ಕಾಗಲೀ, ಮೂಲರೂಪೀ ಶ್ರೀಮನ್ನಾರಾಯಣ ದೇವರಿಗಾಗಲೀ, ಯಾವ ಭಗವದ್ರೂಪಕ್ಕೇ ಆಗಲಿ, ಸುಖ ದುಃಖಾದಿಗಳು ಇಲ್ಲ, **ತದುಕ್ತಂ ಭಗವದ್ಗೀತಾಭಾಷ್ಯೇ :—**

**"ಅಚಿಂತ್ಯ ಶಕ್ತೇಃ ಪದಾರ್ಥ ವೈಚಿತ್ರ್ಯಾಚ್ಚೇತ್ಯುಕ್ತವ್ । ಕೃಷ್ಣರಾಮಾದಿರೂಪಾಣಿ ಪರಿಪೂರ್ಣಾನಿ ಸರ್ವದಾ ॥ ನ ಚಾಣು**

**ಮಾತ್ರಂ ಭಿನ್ನಾನಿ ತಥಾಪ್ಯಸ್ಮಾನ್ ವಿಮೋಹಸೀತ್ಯಾದೇಶ್ಚ ನಾರದೀಯೇ || ತತ್ಮಾತ್ಸರ್ವದಾ ರೂಪೇಷ್ವಪರಿಗಣಿತಾನಂತಗುಣಗಣಂ ನಿತ್ಯನಿರಸ್ತಾಶೇಷದೋಷಂ ಚ ನಾರಾಯಣಾಖ್ಯ ಬ್ರಹ್ಮ ಇತಿ ಸಿದ್ಧಮ್ ||"**

—ಎಂತ ಇರುವುದರಿಂದ ಪೂರ್ಣ ಸುಖಿನಾದವ ಶ್ರೀಪರಮಾತ್ಮನೆಂದು ತಾತ್ಪರ್ಯ. ||೨೮||

**(೨) "ಭಾವಪ್ರಕಾಶಿಕೆ"— ವ್ಯಾಖ್ಯಾನ :—**

ಮಕ್ಕಳು ಆಟವಾಡುವುದಕ್ಕಾಗಿ ಮರಳು ಮೊದಲಾದವುಗಳಿಂದ ಮನೆಯನ್ನು ಕಟ್ಟಿ, ಆಟವಾಡಿ ಸಾಕೆಂದು ತೋರಿದಾಗ ಆ ಮನೆಯನ್ನು ತುಳಿದು ಕೆಡಿಸಿಬಿಡುವರು. ಆ ಮಕ್ಕಳಿಗೆ ಮರಳು ಮನೆ ಕಟ್ಟುವಾಗಲೂ ಸಂತೋಷವೇ, ಅದರಲ್ಲಿ ಆಟವಾಡುವಾಗಲೂ ಸಂತೋಷವೇ, ಅದನ್ನು ತುಳಿದು, ಕೆಡಿಸುವಾಗಲೂ ಅಷ್ಟೇ ಸಂತೋಷ. ಕಟ್ಟುವಾಗ ಕಟ್ಟಬೇಕಲ್ಲ ಎಂಬ ಆಯಾಸವಿಲ್ಲ. ಕೆಡಿಸುವಾಗ ಹೋಯಿತಲ್ಲ ಎಂಬ ವ್ಯಸನವೂ ಇಲ್ಲ. ಅದರಂತೆಯೇ ಶ್ರೀ ಪರಮಾತ್ಮನು ಲೀಲೆಯಿಂದಲೇ ಗಜ ತುರಗಾದಿಗಳ ೮೪ ಲಕ್ಷ ಯೋನಿಗಳಲ್ಲಿ ಅಪರಿಮಿತ ಜೀವರಾಶಿಗಳನ್ನು ಸೃಷ್ಟಿಸುವನು. ಅಂದರೆ, ಗಜ, ತುರಗ, ಮನುಷ್ಯಾದಿ ಸ್ಥೂಲ ಶರೀರಗಳನ್ನು ಜೀವರ ಲಿಂಗ ಶರೀರಗಳ ಮೇಲೆ ಆವರ್ಣವನ್ನಾಗಿ ಸೃಷ್ಟಿಸುವನು. ಆ ದೇಹಗಳಲ್ಲಿ ಅವರಂತಿದ್ದು ಪ್ರೇರಿಸಿ, ಕರ್ಮಗಳನ್ನು ಮಾಡಿ ಮಾಡಿಸಿ ಲೀಲೆಯಿಂದಲೇ ಎಲ್ಲರನ್ನೂ ರಕ್ಷಿಸುವನು, ಕಟ್ಟಿದ ಮನೆಯನ್ನು ಮಕ್ಕಳು ಕೆಡಿಸುವಂತೆ ಲೀಲೆಯಿಂದ ತಾನೇ ನಾಶಗೊಳಿಸುವನು. ಮಕ್ಕಳು ಆಟಕ್ಕೆ ಉಪಕ್ರಮ ಮಾಡುವುದಕ್ಕಾಗಿ ಒಂದು ಸ್ಥಳವನ್ನು ಸೇರಿ, ಮನೆಯನ್ನು ಕಟ್ಟಲು ಉಪಕ್ರಮ ಮಾಡಿದ ಮೊದಲು ಕೆಡಿಸುವವರೆಗೂ ಒಂದೇ ವಿಧವಾದ ಆಟವಾಡುವ ಸಂತೋಷವೇ ಹೊರತು, ಮನೆ ಕಟ್ಟುವುದರಿಂದ ಹೆಚ್ಚು ಸಂತೋಷವಾಗಲೀ, ತುಳಿದು ಕೆಡಿಸುವುದರಿಂದ ದುಃಖವಾಗಲೀ ಇರುವುದಿಲ್ಲ. ಅದ

ರಂತೆಯೇ ಪೂರ್ಣಾನಂದ ಜ್ಞಾನಮಯನಾದ ಶ್ರೀ ಪರಮಾತ್ಮನಿಗೆ ಸೃಷ್ಟಿ ಮಾಡುವುದರಿಂದ ಸಂತೋಷವಾಗಲೀ, ನಾಶಮಾಡುವುದರಲ್ಲಿ ವ್ಯಸನವಾಗಲೀ ಇಲ್ಲ. ಇದಕ್ಕೆ ದಾಸರಾಯರು ಮತ್ತೊಂದು ಉಪಮಾನವನ್ನು ಹೇಳಿರುವರು, ಅದೆಂತೆಂದರೆ— "ಸರ್ಪವು ತಾನು ಗುಡ್ಡೆಗಳನ್ನಿಟ್ಟು, ಆ ಎಲ್ಲಾ ಗುಡ್ಡೆಗಳನ್ನೂ ತಾನೇ ನುಂಗಿಬಿಡುವುದು—ವಿಂದು ಪ್ರಖ್ಯಾತಿ ಇರುವುದು. ಆ ಸರ್ಪಕ್ಕೆ ಗುಡ್ಡೆಗಳನ್ನು ತಾನೇ ಪಡೆದು, ತಾನೇ ನುಂಗುವಾಗ ಸುಖ ದುಃಖಗಳ ಸಂಬಂಧ ಹೇಗೆ ಇಲ್ಲವೋ ಹಾಗೆಯೇ ಶ್ರೀಪರಮಾತ್ಮನು ಸೃಷ್ಟಿಸುವಾಗ ಆಗಲೀ. ಸಂಸಾರ ಮಾಡುವಾಗ ಆಗಲೀ ನಿರ್ಲಿಪ್ತನಾಗಿರುವುದರಿಂದ ಸುಖದುಃಖಗಳಿಗೆ ಒಳಗಾಗನು" —ಎಂತ ತಾತ್ಪರ್ಯ ॥೧೮॥

## (೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :—

ಈಗ ತಾನು ಸೃಷ್ಟಿ ಮಾಡಿದಂಥಾ ಚೇತನಾಚೇತನಾತ್ಮಕ ಜಗತ್ತನ್ನು ಮಹಾ ಪ್ರಳಯಕಾಲದಲ್ಲಿ ತಾನೇ ನಾಶಮಾಡಿ ಶ್ರೀಹರಿ ಸಂತೋಷದಿಂದ ನರ್ತನಮಾಡುತ್ತಾ ಇರುತ್ತಾನೆಂದು ಸದೃಷ್ಟಾಂತ ಹೇಳುತ್ತಾರೆ— "ಮಳಲ ಮನೆ" —ಎಂಬ ಪದ್ಯದಿಂದ.

ಎಲರುಣಿ = ಗಾಳಿಯನ್ನು ಭೋಜನ ಮಾಡತಕ್ಕ "ಸರ್ಪ"—ಎಂದರ್ಥ. ವೋಲ್ = ತದ್ವತ್ ॥೨೮॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ— (ಸಂಸ್ಕೃತಮೂಲ) :—

"ಬಾಲಃ ಕ್ರೀಡನಕೈರ್ಯದ್ವತ್" ಇತ್ಯುಕ್ತ ಲೋಕ ತೋಕ ಲೀಲಾಂ ವ್ಯನಕ್ತಿ ॥ ಮಳಲೇತಿ ॥ ಸ್ತ್ರೋತೃಹರ್ತೃತ್ವೇ ಸುತಹತ್ಯಾನಿರ್ಘೃಣತ್ವದಯಾ ಉತ್ಪಭಂಗಾಃ ಸ್ಯುಃ ॥ ಸ್ವಭಾವಹತೌ ನ ದೋಷಃ ॥ ಸಮಾನ ಕರ್ಮಾಚರಣೇ ಇತ್ಯಾದೇಃ ಇತ್ಯಭಿಪ್ರೇತ್ಯ ಸರ್ಪಭಾರ್ಯಾಂ ನಿದರ್ಶಯತಿ ॥ ಎಲರ್ವಿತಿ = ಗಾಳಿ ॥೨೮॥

**ಕನ್ನಡಾರ್ಥ :—**

"ಬಲಕನು ತನ್ನ ಆಟಪಾಟಗಳಿಂದ ಸಂತೋಷಪಡುತ್ತಾನೆ. ಅಂತೆಯೇ ಶ್ರೀ ಪರಮಾತ್ಮನು ಬ್ರಹ್ಮಾದಿಗಳನ್ನು ನಿಮಿತ್ತ ಮಾಡಿಕೊಂಡು ಕ್ರೀಡಿಸುತ್ತಾನೆ" —ಎಂದು **ಭಾಷ್ಯೋಕ್ತಿ.** ಇದರಂತೆ ಶ್ರೀಹರಿಯ ಲೀಲಾವಿಲಾಸಗಳನ್ನು ವಿವರಿಸಿಸುತ್ತಾರೆ– "ಮಳಲ" —ಎಂಬ ಪದ್ಯದಿಂದ. ತಾನೇ ಸೃಷ್ಟಿಸಿದುದನ್ನು ತಾನೇ ಸಂಹರಿಸಿದರೆ, ಪುತ್ರಹತ್ಯೆ, ನಿರ್ಘೃಣತ್ವ, ನಿಷ್ಕರುಣತ್ವ ಮುಂತಾದ ದೋಷಗಳು ಬರುವುವು. ಆದರೆ "ಆ ವಸ್ತುಗಳ ಸ್ವಭಾವದಿಂದಲೇ ಅವಕ್ಕೆ ನಾಶ" —ಎಂದು ಹೇಳಿದರೆ, ದೋಷಗಳ ಸಂಬಂಧವಿಲ್ಲ. ಆದುದರಿಂದ **"ಸಮಾನ ಕರ್ಮಾಚರಣೇ"** —ಎಂಬ ಪ್ರಮಾಣ ವಾಕ್ಯಗಳಗಳ ರೀತ್ಯಾ ಹೆಣ್ಣು ಹಾವಿನ ದೃಷ್ಟಾಂತ ಹೇಳುತ್ತಾರೆ— "ಎಲರುಣಿಯವೋಲ್" —ಎಂಬ ಪದಪ್ರಯೋಗದಿಂದ. ಎಲರುಣಿ ಎಂದರೆ "ಸರ್ಪ" (ಗಾಳಿಯನ್ನು ತಿಂದು ಬದುಕುವ ಪ್ರಾಣಿ) ತಾನು ಇಟ್ಟ ಮೊಟ್ಟೆಗಳನ್ನು ತಿನ್ನುವುದೇ ಸರ್ಪಕ್ಕೆ ಸ್ವಭಾವವಾಗಿರುವುದು. ಇದರಿಂದ ಸರ್ಪಕ್ಕೆ ದೋಷವಿಲ್ಲ. ಅಂತೆಯೇ ಶ್ರೀಪರಮಾತ್ಮನಿಗೆ ಸೃಷ್ಟಿ, ಸ್ಥಿತಿ, ಸಂಹಾರ ಕರ್ತೃತ್ವಗಳು ಸ್ವಭಾವವಾಗಿರುವುದರಿಂದಲೂ, ಜಗತ್ತಿಗೆ ಸೃಷ್ಟಿ ಮುಂತಾದವುಗಳು ಸ್ವಾಭಾವಿಕವಾಗಿರುವುದರಿಂದಲೂ, ಅವನಿಗೆ ಸಂಹಾರದಿಂದ ಯಾವ ದೋಷವೂ ಬರುವುದಿಲ್ಲವೆಂಬುದು ತಾತ್ಪರ್ಯ. ॥೨೮॥

**(ಆ) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ: —**

ಜಗತ್ಸೃಷ್ಟಿ, ಸ್ಥಿತಿ, ಸಂಹಾರಗಳಿಂದಲೂ ಶ್ರೀಹರಿಗೆ ಮೋಹ ಇಲ್ಲದ್ದರಿಂದ, ಸುಖದುಃಖ ಲೇಪವಿಲ್ಲವೆಂಬುದನ್ನು ದೃಷ್ಟಾಂತ ದ್ವಯದಿಂದ ಬೋಧಿಸುತ್ತಾರೆ. ಮಕ್ಕಳು ಉಸುಬಿನ ಮನೆಯನ್ನು ಕಟ್ಟಿ, ಸಂತೋಷದಿಂದ ಆಡಿದ ನಂತರ ಹರ್ಷದಿಂದಲೇ ತುಳಿದುಹಾಕಿ ವ್ಯಸನಪಡದೇ ಇರುವಂತೆ "ಎಲರುಣಿ" —ಎಂದರೆ ಗಾಳಿಯನ್ನೇ ಆಹಾರವಾಗಿ ಉಳ್ಳ

ಸರ್ಪವು ತಾನೇ ಪಡೆದ ಗುಡ್ಡೆಗಳನ್ನು ನುಂಗಿ ಸಂತೋಷದಿಂದಿರುವಂತೆ, ಲಕ್ಷ್ಮೀಪತಿಯು ಲೋಕಗಳನ್ನು ಅನೇಕ ವಿಧದಿಂದ ಸೃಷ್ಟಿಸಿ, ಸಂಹರಿಸಿ, ದುಃಖಾದಿಗಳಿಂದ ದೂರವಾಗಿರುವವನು. ಸರ್ಪ ದೃಷ್ಟಾಂತ ಸ್ಥೂಲಬುದ್ಧಿಗಳಿಗೆ ಗೊತ್ತಾಗದ್ದರಿಂದ, ಬಾಲಕರ ದೃಷ್ಟಾಂತ ತೋರಿಸಿದ್ದಾರೆ. ಇದರಿಂದ ದೇವರು ವ್ಯಾಪ್ತನಾಗಿ ನಿರ್ಲಿಪ್ತ ಕ್ರಿಯನೆಂದು ಹಿಂದೆ ಹೇಳಿದ ವಿಷಯವನ್ನೇ ವಿವರಿಸಿತು. ॥೨೮॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಸಂಹಾರ ಕಾರ್ಯವಿಶೇಷಗಳು ಶ್ರೀಪರಮಾತ್ಮನಿಗೆ ಸ್ವಾಭಾವಿಕವಾದದ್ದು. ತನ್ನ ಇಚ್ಛಾಮಾತ್ರದಿಂದಲೇ ಈ ವ್ಯಾಪಾರಗಳನ್ನು ಮಾಡುವ ಸನ್ಮಹಿಮಾಸಂಪನ್ನನು. ಜೀವರಾಶಿಗಳ ಸೃಷ್ಟಿ. ಪಾಲನೆ ಮತ್ತು ಸಂಹಾರ ಎಲ್ಲವೂ ಶ್ರೀ ಪರಮಾತ್ಮನ ಕ್ರೀಡಾರೂಪ ವಾದಲೀಲಾವಿಲಾಸವು. ಈ ತತ್ವಾರ್ಥವನ್ನು ದಾಸರಾಯರು ಎರಡು ಸುಂದರ ವಾದ ದೃಷ್ಟಾಂತಗಳಿಂದ ಉಪಪಾದಿಸುತ್ತಾರೆ. ಸ್ವಾಭಾವಿಕವಾಗಿ ಮಕ್ಕಳು ಮರಳಿನಲ್ಲಿ ಮನೆ ಅಥವಾ ಗೂಡುಗಳನ್ನು ಕಟ್ಟುವರು. ಆಗ ಅವರಿಗೆ ಪರಮ ಉತ್ಸಾಹ ಮತ್ತು ಸಂತೋಷ. ಅಷ್ಟೇ ಉತ್ಸಾಹದಿಂದ ಮನೆಯ ಆಟಗಳನ್ನು ನಾನಾ ಪ್ರಕಾರದಿಂದ ಆಡುವರು. ಕೊನೆಯಲ್ಲಿ ಅಷ್ಟೇ ಸಹಜ ವಾಗಿ ತಾವು ನಿರ್ಮಿಸಿದ ಮನೆಗಳನ್ನು ತಾವೇ ಕಾಲಿನಿಂದ ತುಳಿದು ನಾಶ ಪಡಿಸುವರು. ನಾಶಪಡಿಸುವಾಗ ಅವರಿಗೆ ಲೇಶದಪಿ ದುಃಖವಿಲ್ಲ. ಗೂಡು ಗಳನ್ನು ನಿರ್ಮಿಸುವಾಗ. ಆಟವಾಡುವಾಗ ಮತ್ತು ನಾಶಪಡಿಸುವಾಗ, ನಿರ್ವಿಕಾರವಾಗಿ ಕಾರ್ಯಗಳನ್ನೆಸಗುವರು. ನಿರ್ವಿಣ್ಣರಾಗಿರುವುದು ಆ ಬಾಲಕರ ಸಹಜಗುಣ. ಅಂತೆಯೇ ಶ್ರೀಪರಮಾತ್ಮನು ಸ್ವಪ್ರಯೋಜನ ರಹಿತನು. ಜಗತ್ತಿನ ಸೃಷಿ, ಪಾಲನೆ ಮತ್ತು ಲಯ ಇವುಗಳಿಂದ ಅವನಿಗೆ ಆಗುವ ಪ್ರಯೋಜನವಾದರೂ ಏನು ? ಅವುಗಳನ್ನು ನಿರ್ವಿಕಾರವಾಗಿ, ಯಾವ ದುಃಖಾದಿಗಳ ಸಂಪರ್ಕವೂ ಇಲ್ಲದಂತೇ ಸಹಜವಾಗಿ ನಿರ್ವಹಿಸು ವನು. **ಸೃಷ್ಟ್ಯಾದಿ ವ್ಯಾಪಾರಗಳು ಶ್ರೀ ಪರಮಾತ್ಮನಿಗೆ ಸ್ವಾಭಾವಿಕ ಗುಣ.**

ಆದಕ್ಕೆ ಪ್ರಯತ್ನವಾಗಲೀ, ಶ್ರಮವಾಗಲೀ ಏನೂ ಇಲ್ಲ. ನಿರ್ನಿಮಿತ್ತ ನಾಗಿ ಮಾಡುವನು. ನಿರಾಯಾಸದಿಂದ ಸೃಷ್ಟಿ, ಸ್ಥಿತಿ ಲಯಕಾರ್ಯಗಳು ನಡೆಯುವುವು. ಇದೊಂದು ಶ್ರೀ ಪರಮಾತ್ಮನ ಲೀಲಾವಿಲಾಸದ ವೈಭವ. ಇಂತಹ ಕ್ರೀಡಾವಿಶಿಷ್ಟನಾದ ಶ್ರೀ ಪರಮಾತ್ಮನು ಜೀವರ ನಿಜಗತಿಗಳನ್ನು ನೀಡ ಲೋಸುಗ ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡುವನು. ಈ ದೃಷ್ಟಿಯಿಂದ ಮಕ್ಕಳು ಮರಳಿನ ಮನೆಯನ್ನು ಮಾಡಿ, ಕೆಲವುಕಾಲ ಆಟವಾಡಿ, ಮುಕ್ತಾ ಯದಲ್ಲಿ ಅಷ್ಟೇ ಸಂತೋಷದಿಂದ ಅವುಗಳನ್ನು ತುಳಿದು ನಾಶಪಡಿಸುವ ದೃಷ್ಟಾಂತವನ್ನು ಕೊಟ್ಟಿರುತ್ತಾರೆ. ಮರಳು ಮುಂತಾದ ದ್ರವ್ಯಗಳು ಮನೆಯ ನಿರ್ಮಾಣಕ್ಕೆ ಕಾರಣ. ಅಂತೆಯೇ ಶ್ರೀ ಪರಮಾತ್ಮನು ಪ್ರಕೃತಿ ಯನ್ನು ಉಪಾದಾನಕಾರಣ ಮಾಡಿ, ಗುಣವೈಷಮ್ಯದಿಂದ ಸೃಷ್ಟಿಯನ್ನು ಮಾಡುತ್ತಾನೆ. ಶ್ರೀ ಮಹಾಲಕ್ಷ್ಮೀದೇವಿಯರು ತ್ರಿಗುಣಾಭಿಮಾನಿಗಳು. ಮೂಲಪ್ರಕೃತಿಗೆ ಅಭಿಮಾನಿಗಳು. ಈ ಕಾರಣದಿಂದ "ಲಕುಮೀರಮಣ" ಎಂಬ ಪದಪ್ರಯೋಗ ದೂಡಿದ್ದಾರೆ. ಲಕುಮೀರಮಣನಿಂದ ನಿರ್ಮಿತವಾದ ಈ ಜಗತ್ತು ನಾನಾಪ್ರಕಾರವಾದದ್ದು. ಅತಿ ಚಿತ್ರವಿಚಿತ್ರವಾದ ಪ್ರಪಂಚವು ವೈವಿಧ್ಯಮಯವಾಗಿದೆ. ಸೃಷ್ಟಿಕರ್ತನಾದ ರಮಾರಮಣನು ತಾನು ನಿರ್ವಿ ಕಾರನಾಗಿದ್ದು, ಏಕಪ್ರಕಾರನಾಗಿರುತ್ತಾನೆ. ಶಶ್ವದೇಕಪ್ರಕಾರನಾಗಿರುವ ಜಗತ್ಪ್ರಭುವು ನಿಶ್ಚಲನು. ಸೃಷ್ಟಿಮಾಡುವುದು ಮಹತ್ವವೇನಲ್ಲ. ಸೃಷ್ಟ ವಾದ ಚೇತನಾಚೇತನಾತ್ಮಕವಾದ ಈ ಜಗತ್ತನ್ನು ಉತ್ತಮ ರೀತಿಯಲ್ಲಿ ವ್ಯವಸ್ಥೆ ಮಾಡಿ ಪಾಲಿಸುವುದು ಮಹತ್ವಪೂರ್ಣವಾದ ಕಾರ್ಯವು, ಅಂತಹ ಜಗತ್ತಿನ ರಕ್ಷಣಾ ಕಾರ್ಯವನ್ನು ತಾನೇ ನಿರ್ವಹಿಸುತ್ತಿರುವ ಜಗನ್ನಿಯಾಮಕನ ಮಹತ್ವವೆಂತಹುದು ! ದಾಸರಾಯರು ಇನ್ನೊಂದು ಸೂಕ್ತವಾದ ದೃಷ್ಟಾಂತ ವನ್ನು ಕೊಟ್ಟಿರುತ್ತಾರೆ. ಎಲರ್ ಅಂದರೆ ಗಾಳಿಯನ್ನು ಉಣೆ ಅಂದರೆ ಸೇವಿಸುವ ವಿಚಿತ್ರ ಪ್ರಾಣಿ ಎಂದರೆ ಸರ್ಪವು. ಇದರಿಂದಲೇ ಸರ್ಪಕ್ಕೆ "ಎಲರುಣಿ" ಎಂದು ಹೆಸರು. ಸರ್ಪವು ಮೊಟ್ಟೆಗಳನ್ನು ಇಟ್ಟು, ಕ್ರಮವಾಗಿ ಅವುಗಳನ್ನು ತಾನೇ ತಿಂದು ನಾಶಮಾಡುವುದು. ಈ ಗುಣವು ಸರ್ಪಜಾತಿಗೆ ಸಹಜವಾದದ್ದು. ಇದರಿಂದ ಹಾವಿಗೆ ಪುತ್ರಹತ್ಯೆ, ನೈರ್ಘೃಣ್ಯ ಮುಂತಾದ ದೋಷಗಳ ಲೇಪವಿಲ್ಲ. ಅಂತೆಯೇ ಶ್ರೀ ಪರಮಾತ್ಮನು ತನ್ನಿಂದ ನಿರ್ಮಿತ

ವಾದ ಜಗತ್ತನ್ನು ಪರಿಪಾಲಿಸಿ, ಕೊನೆಗೆ ಪ್ರಳಯಕಾಲದಲ್ಲಿ "ಜಗದ್ಭುಕ್" ಎಂದೆನಿಸಿ, ಆ ಜಗತ್ತನ್ನೇ ನುಂಗಿ, ಜಯಾಪತಿ ಸಂಕರ್ಷಣಾಭಿನ್ನ ನರಸಿಂಹ ರೂಪಾತ್ಮಕನಾಗಿ ಸಂತೋಷದಿಂದ ನರ್ತನ ಮಾಡುತ್ತಾ. ನುಂಗಿದ ಜಗತ್ತನ್ನು ತನ್ನ ಉದರದಲ್ಲಿಟ್ಟುಕೊಳ್ಳುವನು. ಗುಣಸಾಮ್ಯವೇ ಲಯವು. ಪ್ರಪಂಚವು ಚತುರ್ವಿಂಶತಿ ತತ್ತ್ವಗಳಿಂದ ನಿರ್ಮಿತವಾಗಿದೆ. ಆಯಾಯಾ ಗುಣ ವಿಶೇಷ ಗಳನ್ನು ಮೂಲಪ್ರಕೃತಿಯಲ್ಲಿ ಲೀನಗೊಳಿಸುವನು. ಇಂತಹ ನಿರ್ಲಿಪ್ತನಾದ ಜಗದ್ವಿಲಕ್ಷಣನಾದ ಶ್ರೀಹರಿಗೆ ಜಗತ್ಸಂಬಧವಾದ ಸುಖ ದುಃಖಾದಿಗಳ ಲೇಪವು ಎಲ್ಲಿಯಾದರೂ ಉಂಟೇ ? ಅಂದರೆ ಇಲ್ಲವೇ ಇಲ್ಲವೆಂದು ತಾತ್ಪರ್ಯ. ॥೨೮॥

## ಪದ್ಯ (೨೯)

**ಮೂಲ :—**

**ವೇಷ ಭಾಷೆಗಳಿಂದ ಜನರ ಪ್ರ ।**
**ತೋಷಗೈಸುವ ನಟಪುರುಷನೋಲ್ ।**
**ದೋಷದೂರನು ಲೋಕದೊಳು ಬಹುರೂಪ ಮಾತಿನಲಿ ॥**
**ಪೋಷಿಸುವನವರವರ ಮನದಭಿ ।**
**ಲಾಷೆಗಳ ಪೂರೈಸುತನುದಿನ ।**
**ಪೋಷಿಸುವ ಪೂತಾತ್ಮ ಪೂರ್ಣಾನಂದ ಜ್ಞಾನಮಯ ॥೨೯॥**

**ಅವತರಣಿಕೆ:—**

ಅನೇಕ ಚಿತ್ರ ವಿಚಿತ್ರ ವೇಷಗಳನ್ನು ಧರಿಸಿ, ಮಾತಿನ ಚಮತ್ಕಾರ ದಿಂದ ಜನವೃಂದವನ್ನು ಸಂತೋಷಪಡಿಸಿ, ಮನಸ್ಸಿಗೆ ರಂಜನೆಯನ್ನುಂಟು ಮಾಡುವ ನಟಶ್ರೇಷ್ಠನಂತೆ, ಕಪಟನಾಟಕ ಸೂತ್ರಧಾರಿಯಾದ, ಜಗತ್ತಿನ

ಸೂತ್ರವನ್ನೇ ತನ್ನ ಕೈಯ್ಯಲ್ಲಿ ಹಿಡಿದು, ತ್ರಿಲೋಕಗಳನ್ನೂ ಕುಣಿಸುತ್ತಿರುವ ಶ್ರೀ ಪರಮಾತ್ಮನು ನಾನಾ ಪ್ರಕಾರವಾಗಿ ತನ್ನಿಂದ ಸೃಷ್ಟರಾದ ಜನರನ್ನು ಮೋದಪಡಿಸುವನು. ಅವರ ಮನದಭಿಲಾಷೆಗಳನ್ನು ಸಲಿಸುತ್ತಾ, ಅವರಿಗೆ ಸಂರಕ್ಷಕನಾಗಿರುವನು. ಸಮಸ್ತದೋಷವಿದೂರನಾದ ಮತ್ತು ಮಂಗಳಾಂಗನಾದ ಶ್ರೀಹರಿಯು ಪೂರ್ಣಾನಂದ ಜ್ಞಾನಮಯನಾಗಿದ್ದು, ನಿತ್ಯಾನಂದ ಉದ್ರಿಕ್ತನಾಗಿದ್ದಾನೆ. ಎಂದು ಶ್ರೀಹರಿಯ ವ್ಯಾಪ್ತಿಮಹಿಮಾವಿಶೇಷವನ್ನು ಹೇಳುತ್ತಾರೆ. "ವೇಷಭಾಷೆ" — ಎಂಬ ಈ ಪದ್ಯದಿಂದ ॥೨೯॥

**ಪ್ರತಿಪದಾರ್ಥ:—**

**ವೇಷ** = ನಾಟಕದಲ್ಲಿ ರಂಗಮಂಟಪದಮೇಲೆ ಸಮಯೋಚಿತವಾದ ವಸ್ತ್ರ ಮತ್ತು ಆಭರಣಗಳಿಂದ ಅಲಂಕೃತನಾಗಿ ರಾಮ ಕೃಷ್ಣಾದಿ ವೇಷಗಳನ್ನು ಧರಿಸಿಕೊಂಡು **ಭಾಷೆಗಳಿಂದ** = ಆಯಾಯಾ ಪಾತ್ರಗಳಿಗೆ ಮತ್ತು ಸನ್ನಿವೇಶಗಳಿಗೆ ಅನುಗುಣವಾದ ಮಾತುಗಳಿಂದ (ಮತ್ತು ಹಾಡುಗಳಿಂದ) **ಜನರ** = ನಾಟಕವನ್ನು ನೋಡುತ್ತಿರುವ ಪ್ರೇಕ್ಷಕ ವರ್ಗದವರ **ಪ್ರಮೋದಗೈಸುವ** = ಮನಸ್ಸನ್ನು ಚೆನ್ನಾಗಿ ಆಕರ್ಷಿಸುವ (ಮನರಂಜನೆಯ ದ್ವಾರ) **ನಟಪುರುಷನವೋಲ್** = ವೇಷಧಾರಿ ಪುರುಷನಂತೆ (ಪಾತ್ರಧಾರಿಯೋಪಾದಿಯಲ್ಲಿ) **ದೋಷದೂರನು** = ಸಮಸ್ತದೋಷಗಳಿಂದ ರಹಿತನಾದ ಶ್ರೀ ಪರಮಾತ್ಮನು **ಲೋಕದೊಳು** = ಚರಾಚರಾತ್ಮಕವಾದ ಈ ಜಗತ್ತಿನಲ್ಲಿ **ಬಹುರೂಪ ಮಾತಿನಲಿ** = ರಾಮಕೃಷ್ಣಾದ್ಯವತಾರ ವಿಶೇಷಗಳಿಂದ ಮತ್ತು ಆಯಾಯಾ ಅವತಾರಕ್ಕೆ ತಕ್ಕಂತೆ ಮಾತುಗಳಿಂದ (ವಾಗ್ವಿಲಾಸರೂಪವಾದ ಚಮತ್ಕಾರ ವಿಶೇಷಗಳಿಂದ) **ಪೋಷಿಸುವ** = ಜನರನ್ನು ಸಂತೋಷಪಡಿಸುವನು, **ಅವರವರ** = ತ್ರಿವಿಧಜೀವರ ಸ್ವರೂಪಯೋಗ್ಯತಾನುಸಾರ **ಮನದಭಿಲಾಷೆಗಳ** = ಮನಸ್ಸಿನಲ್ಲಿರುವ ಇಷ್ಟಾರ್ಥಗಳನ್ನು (ಅಪೇಕ್ಷಿತವಾದುದನ್ನು) **ಪೂರೈಸುತ** = ಪೂರ್ಣಮಾಡುತ್ತಾ (ಈಡೇರಿಸಿ) **ಅನುದಿನ** = ಪ್ರತಿದಿನದಲ್ಲಿಯೂ (ನಿರಂತರದಲ್ಲಿ) **ಪೂತಾತ್ಮ** = ಪರಮಪವಿತ್ರಾತ್ಮಕನಾದ **ಪೂರ್ಣಾನಂದಜ್ಞಾನಮಯ** = ಪರಿಪೂರ್ಣವಾದ (ನ್ಯೂನಾತಿರಹಿತನಾದ)

ಜ್ಞಾನ ಮತ್ತು ಆನಂದ ಸ್ವರೂಪಿಯಾದ ಶ್ರೀ ಪರಮಾತ್ಮನು **ಪೋಷಿಸುವ** = ಸಂರಕ್ಷಿಸುವವನು. ॥೨೯॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ನಟಪುರುಷನಾದವ, ಅನ್ಯವಾದ ವೇಷಗಳನ್ನು ಧರಿಸಿದವನಾದಾಗ್ಯೂ, ಅಂದರೆ, ಬಹಿರ್ವೇಷದಿಂದ, ತನ್ನ ನೈಜದೇಹ ವಿಕಾರ ಹೊಂದದೇ, ಆಯಾಯಾ ವೇಷಕ್ಕೆ ಅನುಗುಣವಾದ ಮಾತುಗಳನ್ನಾಡುತ್ತಾ, ಜನರನ್ನ ಸಂತೋಷ ಪಡಿಸುವ ರೀತಿಯಾಗಿ, ಶ್ರೀಪರಮಾತ್ಮನು ವಿವಿಧವಾದ, ಸ್ಥಾವರ ಜಂಗಮಾತ್ಮಕ ಪ್ರಾಣಿಗಳಲ್ಲಿ ಇದ್ದರೂ, ನಿರ್ಲಿಪ್ತನಾಗಿ, ಅವರವರ ಬಾಹ್ಯ ಕರ್ಮಾನುಸಾರ, ಭಾಗ್ಯ, ಬಡತನ, ಅನ್ಯೋದಕಗಳನ್ನು ಕೊಟ್ಟು. ಸುಖ ದುಃಖಾದಿಗಳನ್ನು ಅನುಭವಕ್ಕೆ ತಂದುಕೊಡತಾನೆ. ಸ್ವರೂಪಕರ್ಮಗಳು ವ್ಯತ್ಯಾಸವಾದ್ದರಿಂದ, ಲಿಂಗಭಂಗಾನಂತರ ತ್ರಿವಿಧ ಜೀವರಿಗೂ ತ್ರಿವಿಧ ಪ್ರಕಾರ ಭೋಗಗಳ ಕೊಡತಾನೆ.

ವೇಷಧಾರಿಯಾದ ನಟಶ್ರೇಷ್ಠನು ತನ್ನ ದೇಹದ ಒಳಗೆ ವೇಷಸಂಬಂಧ ವಾದ ತನಗೆ ಲೇಪವಿಲ್ಲದೆ, ತನ್ನ ನೈಜಸ್ವಭಾವದಿಂದ ಹೇಗೆ ಇರುತ್ತಾನೋ ಹಾಗೆ, ಚರಾಚರಗಳಿಂದ ವೇಷಧರಿಸಿಕೊಂಡು, ಅಂತರ್ಗತನಾಗಿ, ಏತಾ ದೃಶ ವೇಷದೋಷಸಂಬಂಧದಿಂದ ದೂರ ಇರೋವವನಾಗಿದ್ದಾನೆ ಎಂತ ಅರ್ಥ. ಇಂಥಾ ವೇಷಧಾರಿಯಾದ ಶ್ರೀ ಪರಮಾತ್ಮ ಇಂಥಾ ವೇಷಗಳಿಂದ, ಅವುಗ ಳಿಗೆ ತಕ್ಕಂತೆ ಬಹು ಪ್ರಕಾರಗಳಿಂದ ಜಗತ್ಕಾರ್ಯ, ತಾರತಮ್ಯ, ಪಂಚ ಭೇದ ಸತ್ಯವೆಂತಲೂ, ಪಂಚಭೇದ ತಾರತಮ್ಯ ಮಿಥ್ಯಾ ಎಂತಲೂ— "ಸರ್ವಂ ಮಿಥ್ಯಾ, ಅಹಂ ಬ್ರಹ್ಮಾಸ್ಮಿ" —ಎಂತಲೂ, ಇತ್ಯಾದಿ ಆಯಾ ವೇಷಗಳಿಗೆ ಅನುಗುಣವಾದ, ದೋಷಗಳಾದ, ಮಾತುಗಳಿಗೆ ಸಂಬಂಧಿ

ಸದೆ, ಮಾತುಗಳ ಆಡಿದಂತಾವನಾಗಿ, ಆಯಾ ಜೀವರನ್ನ ಅವರಿಂದಲೇ ಸಂತೋಷಪಡಿಸುತ್ತಾನೆ. ವೇಷಧಾರಿಯಾದವನು ತಾನು ನೈಜ ಸಂತೋಷ ದಿಂದ ಹ್ಯಾಂಗಿರುತಾನೋ, ತದ್ವತ್, ತಾನು ನಿರ್ಲಿಪ್ತನಾಗಿ, ತಾನು ಸಂತೋಷವಾಗಿರುತಾನೆ. ವೇಷಧಾರಿಯಾದವ ಪರಮಾತ್ಮ, ತ್ರಿವಿಧ ಜೀವರ ಸ್ವರೂಪ ಯೋಗ್ಯತಾನುಸಾರ. ಅವರವರ ಮನಸ್ಸಿನಲ್ಲಿ ಇಚ್ಛಾ ಹುಟ್ಟಿಸಿ ಕೊಟ್ಟು, ಅದರಂತೆ ತಾನೂ ಮಾತುಗಳನ್ನಾಡಿ, ಅವರ ಅಪೇಕ್ಷೆಯನ್ನು ಪ್ರತಿದಿನದಲ್ಲಿಯೂ ಪೂರ್ಣಮಾಡುತ್ತಾ, ಬಾಹ್ಯ ಕರ್ಮಾನುಸಾರ, ಆಯಾ ಕರ್ಮಗಳಿಗೆ ಫಲರೂಪವಾದ. ಭಾಗ್ಯ, ಬಡತನಗಳು, ಅನ್ನೋದಕಾದಿ ಗಳ ಕೊಟ್ಟು ಸಂರಕ್ಷಣೆ ಮಾಡುತಾನೆ. ಬಾಹ್ಯ ಕರ್ಮಾನುಸಾರ, ಶಿಕ್ಷಣ ವಿಷಯದಲ್ಲಿ, ತ್ರಿವಿಧರಿಗೂ ಒಂದೇ ಪ್ರಕಾರವೇ. ಸ್ವರೂಪಕರ್ಮವ್ಯತ್ಯಾಸ ವಾದ್ದರಿಂದ ತ್ರಿವಿಧರಿಗೆ, ತ್ರಿವಿಧಪ್ರಕಾರ, ಫಲಗಳ ಲಿಂಗಭಂಗಾನಂತರ ಕೊಡತಾನೆ. ಅಪವಿತ್ರಕರವಾದ ಅಧಿಷ್ಠಾನದಲ್ಲಿದ್ದಾಗ್ಯೂ, ಅದರಿಂದ ಅಪೂತನಾಗದೇ ಪವಿತ್ರನಾಗಿ ಇದ್ದಾನೆ (ಪೂತಾತ್ಮ). ಶ್ರೀಹರಿಯು ಅನ್ಯೂನ ವಾದ ಆನಂದವೇನು, ಜ್ಞಾನವೇನು ಇವುಗಳಿಂದ ಸಂಪೂರ್ಣ ಪ್ರಾಚುರ್ಯ ವುಳ್ಳವನು ॥೨೯॥

## (೨) "ಭಾವಪ್ರಕಾಶಿಕೆ" –ವ್ಯಾಖ್ಯಾನ :—

ನಾಟಕದಲ್ಲಿ ರಾಮಾಯಣಾದಿ ನಾಟಕವನ್ನಭಿನಯಿಸುವರು ರಂಗಮಧ್ಯ ದಲ್ಲಿ ರಾಮಾದಿವೇಷಗಳನ್ನು ಧರಿಸಿದವರಾಗಿ, ರಾಮನೇ ಇವನೆಂದು ಪ್ರೇಕ್ಷ ಕರಿಗೆ ತೋರುವಂತೆ ವೇಷಭಾಷೆಗಳಿಂದ ಆ ಜನರನ್ನು ವಂಚಿಸಿ, ಅವರ ಮನಸ್ಸನ್ನು ಆಕರ್ಷಿಸುವಂತೆ ನಿರ್ದೋಷಿಯೂ, ಮಂಗಳಾತ್ಮನೂ ಪೂರ್ಣಾ ನಂದ ಜ್ಞಾನಸ್ವರೂಪನೂ ಆದ ಶ್ರೀ ಪರಮಾತ್ಮನು ರಾಮಕೃಷ್ಣಾದಿ ಪ್ರಾಕೃತ ರೂಪಗಳನ್ನು ಧರಿಸಿ, ಕೌಸಲ್ಯಾ ಮೊದಲಾದವರಿಗೆ ಇವನು ನನ್ನ ಮಗನು —ಎಂಬ ಭ್ರಾಂತಿ ಬರುವಂತೆ ವೇಷ ಭಾಷೆಗಳಿಂದ ಅವರನ್ನು ಸಂತೋಷ ಪಡಿಸುವಂತೆಯೂ, ಬಿಂಬರೂಪದಿಂದ ಸರ್ವ ಪ್ರಾಣಿಗಳ ಅಂತರ್ಯಾಮಿ ಯಾಗಿದ್ದು, ಜೀವ ಜೀವರಿಗೆ ಪರಸ್ಪರ ಸಂಬಂಧವಿಲ್ಲದಿದ್ದರೂ. ದೇಹ

ಸಂಬಂಧದಿಂದ ಈಕೆಯು ನನ್ನ ಹೆಂಡತಿ, ಇವನೇ ನನ್ನ ಪತಿಯು, ಇವನು ನನ್ನ ಸುತನು —ಎಂಬೀ ವಿಧವಾದ ಅಭಿಮಾನವನ್ನು ಹುಟ್ಟಿಸಿ (ವೇಷ) ರೂಪ ಭಾಷೆಗಳಿಂದ ಒಬ್ಬರಿಗೊಬ್ಬರು ಸಂತೋಷಪಡುವಂತೆ ಮಾಡುವನು. ರಾಮಕೃಷ್ಣಾದಿ ರೂಪಗಳಿಂದ ಭಜಕರಿಗೆ ಇಷ್ಟಾರ್ಥವನ್ನು ಪೂರೈಸುವನು. ಪತಿ, ಸತಿ ಮೊದಲಾದವರಲ್ಲಿದ್ದು, ಪರಸ್ಪರ ಇಷ್ಟಾರ್ಥಗಳನ್ನು ಪೂರ್ಣ ಮಾಡುವನು. ಅಂತೂ, ಸರ್ವಪ್ರಕಾರದಿಂದಲೂ ಜನರನ್ನು ಸಂರಕ್ಷಿಸುವನು. ॥೨೯॥

## (೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :—

**"ಆಕೇಶಾದಿ ನಖಾಗ್ರಾಂಶ್ಚ ಪೂರ್ಣಾತ್ಪೂರ್ಣತರೋ ಹರಿಃ" ಎಂಬ ಸತ್ತತ್ವರತ್ನಮಾಲಾನುಸಾರ** ತಾನು ಪೂರ್ಣನಾದರೂ, ನಾನಾರೂಪ ಧಾರಣಮಾಡಿ, ಮೋಹನ ಪಾಲನ ಸಹ ಮಾಡುವನೆಂದು ಹೇಳುತ್ತಾರೆ– "ವೇಷ" —ಎಂಬ ಪದ್ಯದಿಂದ.

ಪ್ರದೋಷ = ಮೋಸ, ಗೈಯ್ಯುವ = ಮಾಡುವ. ನಟಪುರುಷ = ವೇಷಧಾರಿ, ಪೋಲ್ = ಅದರಂತೆ ॥೨೯॥

## (೪) ಶ್ರೀ ಜಮಖಂಡಿವಾದಿರಾಜಾಚಾರ್ಯರ ವ್ಯಾಖ್ಯಾನ -

ನಾನಾಪ್ರಕಾರವಾದ ವೇಷ ಮತ್ತು ಭಾಷಾ ಪ್ರಯೋಗಗಳಿಂದ ಶ್ರೀ ಪರಮಾತ್ಮನು ಜನರನ್ನು ಮೋಹಗೊಳಿಸುವನು. ಅವರವರ ಅಪೇಕ್ಷಿತ ಪದಾರ್ಥಗಳನ್ನು ಕೊಟ್ಟು, ಕಾಮಿತಾರ್ಥಪ್ರದನಾಗಿ ಅವರ ಮನಸ್ಸನ್ನು ಸಂತೋಷಪಡಿಸಿ, ಪರಿಪಾಲಿಸುವನು. ಅವರವರಿಗೆ ಹಿತವಾದ ನುಡಿಗಳು, ವಾಕ್ಯತಾರೂಪವಾದ ಅವರವರ ವಾಣಿಯು ಯಾವಾಗಲೂ ಭಗವದಧೀನವೇ. ಈ ಜಗತ್ತಿನಲ್ಲಿ ಸರ್ವರ ವಾಗಿಂದ್ರಿಯವೂ ಮತ್ತು ಮಾತುಗಳೂ ಶ್ರೀ ಪರಮಾತ್ಮನಿಂದಲೇ ಪ್ರೇರಿತವಾಗಿವೆ.

"ಯೇನೇರಿತಾ ವಾಗ್ರುಚನಾಶ್ಚರಂತಿ" —ಎಂಬ ಭಾಗವತವಚನವು ಇದೇ ಅಭಿಪ್ರಾಯವನ್ನೇ ಪುಷ್ಟೀಕರಿಸುವುದು. ಅಂದರೆ, "ಯಾವಾತನ ಪ್ರೇರಣೆಯಿಂದ ವಾಗ್ವ್ಯಾಪಾರಾದಿಗಳು ನಡೆಯುತ್ತವೆಯೋ, ಅಂಥಹ ಶ್ರೀಹರಿಯು" —ಎಂತ ತಾತ್ಪರ್ಯ. ಮೇಲಿನ ವಚನದ ಅಭಿಪ್ರಾಯ ವನ್ನೇ ಈ ಪದ್ಯದಿಂದ ದಾಸರಾಯರು ವಿವರಿಸುತ್ತಾರೆ. ॥೨೯॥

## (ಔ) "ಗುರುಹೃದಯಪ್ರಕಾಶಿಕೆ" —ವ್ಯಾಖ್ಯಾನ :—

ಶ್ರೀ ಪರಮಾತ್ಮನ ನಿರ್ಲೇಪತ್ವವನ್ನೇ ಅತಿಸ್ಥೂಲಬುದ್ಧಿಗಳಿಗೆ ತಿಳಿಯು ವಂತೆ ವೇಷಧಾರಿ ದೃಷ್ಟಾಂತದಿಂದ ಬೋಧಿಸುತ್ತಾರೆ— "ವೇಷ" —ಎಂಬ ಪದ್ಯದಿಂದ.

ಆಟಗಾರನು ರಾಮದೇವರೇ ಮೊದಲಾದ ಆಕಾರಗಳನ್ನು ಧರಿಸಿ, ಆಯಾಯಾ ಮಾತಿನಂತೆ ಪ್ರಲಾಪದಂತೆ ನಟಿಸಿ, ನೋಡುವವರಿಗೆ ತಾನು ದುಃಖಪಡುವನಂತೆ ಮೋಹಗೊಳಿಸಿ, ತಾನು ನಿರ್ದುಃಖನಾಗಿರುವಂತೆ, ಪೂರ್ಣಾನಂದ ಜ್ಞಾನಮಯನಾದ ಪರಿಶುದ್ಧನಾದ ಶ್ರೀಹರಿಯು ಜೀವರಿಗೆ ಮನಸ್ಸಿನಲ್ಲಿ ಅನಾದಿ ಕರ್ಮವಾಸನೆಯ ಕೋರಿಕೆಗಳನ್ನು ನೆರವೇರಿಸುತ್ತಾ, ಆಯಾಯಾ ದೇಶಭಾಷಾವ್ಯಾಪ್ತರೂಪಗಳಿಂದ ಪೋಷಿಸುವನು. ಮಾತಿನಲ್ಲಿ —ಎಂಬ ಸಪ್ತಮೀ ವಿಭಕ್ತಿಗೆ "ಮಾತಿನಿಂದ" —ಎಂಬ ತೃತೀಯಾ ವಿಭಕ್ತ್ಯರ್ಥ. ಹಲ್ಲಿನಲ್ಲಿ–ಆಗಿದೆ ಎಂಬ ಪ್ರಯೋಗಾನುಸಾರ ತಿಳಿಯಬೇಕು. ॥೨೯॥

## ಸರ್ವವ್ಯಾಖ್ಯಾನಸಾರಸಂಗ್ರಹ :—

ಈ ಕಲಾಪ್ರಪಂಚದಲ್ಲಿ, ಉತ್ತಮ ದರ್ಜೆಯ ನಟನೊಬ್ಬನು, ನಾಟಕ ದಲ್ಲಿ ಪಾತ್ರಧಾರಿಯಾಗಿ, ಅತ್ಯುತ್ತಮ ರೀತಿಯಿಂದ ತನ್ನ ಕಲಾಕೌಶಲ್ಯ ವನ್ನು ಜನರಿಗೆ ಪ್ರದರ್ಶಿಸಿ, ತಲೆದೂಗುವಂತೆ ಮಾಡುವನು. ಆ ನಟನು ಪಾತ್ರಧಾರಿಯಾದ ವೇಷಧಾರಿಯೇ ಹೊರತು, ನೈಜ ಜೀವನದಲ್ಲಿ ಆ

ಪಾತ್ರವೇ ಅವನದ್ದಲ್ಲ. ನಟನೆ ಮಾಡುತ್ತಿರುವಾಗ ಮಾತ್ರ ಆಯಾಯಾ ಪಾತ್ರಕ್ಕೆ ತಕ್ಕ ವೇಷ ಭೂಷಣಗಳನ್ನು ಧರಿಸಿ, ಆ ಪಾತ್ರಗತ ವ್ಯಕ್ತಿಗಳೇ ಮೂರ್ತಿವೆತ್ತಂತಾಗಿ ನಮ್ಮ ಮುಂದೆ ಬಂದು ವ್ಯಾಪಾರಗಳನ್ನು ನಡೆಸುತ್ತಿದ್ದಾರೆಯೋ ಎಂಬುವಂತೆ ನಮ್ಮ ಅನುಭವಕ್ಕೆ ಬರುವುದು. ಇದು ಆ ನಟ ಶ್ರೇಷ್ಠನ ಅಭಿನಯಸಾಮರ್ಥ್ಯ ಹಾಗೂ ಕಲಾಕೌಶಲ್ಯದ್ಯೋತಕ. ಆಯಾಯಾ ಪಾತ್ರಗಳಿಗೆ ತಕ್ಕಂತೆ ಭಾಷೆ. ಶಬ್ದಪ್ರಯೋಗ, ಪಾತ್ರ ಸನ್ನಿವೇಶ, ಇವುಗಳಿಂದ ಪ್ರೇಕ್ಷಕರನ್ನು ಮೋಹಗೊಳಿಸುವನು (ಪ್ರದೋಷಗೈಸುವ), ಅಂತೆಯೇ ಜಗನ್ಮೋಹಕನಾದ ಶ್ರೀಪರಮಾತ್ಮನು ಈ ಜಗತ್ತೆಂಬ ರಂಗ ಮಂಟಪದಲ್ಲಿ ಪಾತ್ರವಹಿಸುವ ಜೀವವರ್ಗಕ್ಕೆಲ್ಲಾ ಸೂತ್ರಧಾರನಂತಿದ್ದು, ನಿಯಾಮಕನಾಗಿ ಜಗನ್ನಾಟಕವನ್ನು ಆಡಿಸುತ್ತಿರುವನು, ಶ್ರೀ ಪರಮಾತ್ಮನು ಸಮಸ್ತ ದೋಷವಿದೂರನು. ನಿರ್ದುಃಖನು. ಆದರೂ ರಾಮ ಕೃಷ್ಣಾದ್ಯವತಾರರೂಪವಾದ ತನ್ನ ವಿಡಂಬನದಲ್ಲಿ ದುಃಖಪಟ್ಟಂತೆ, ವ್ಯಸನದಿಂದ ಗ್ರಸ್ತನಾದಂತೆ, ಚಿಂತಾ ಸಂತಾಪಗಳಿಂದ ಬಳಲಿದವನಂತೆ ತೋರಿಸಿದ್ದಾನೆ. ಇದೆಲ್ಲವೂ ಕಪಟನಾಟಕಸೂತ್ರಧಾರಿಯಾದ ಆ ಶ್ರೀಹರಿಯ ವಿಡಂಬನವಲ್ಲದೇ ಅನ್ಯಥಾ ಅಲ್ಲ. ಅಸುರರ ಮೋಹನಾರ್ಥವಾಗಿ ಇಂತಹ ವಿಡಂಬನಾತ್ಮಕವಾದ ನಟನೆಯನ್ನು ಮಾಡುವನು. ಜ್ಞಾನಿಗಳು ಅದನ್ನು ಶ್ರೀಹರಿಯು ವಿಡಂಬನರೂಪವಾದ ಲೀಲಾ ವಿಲಾಸಗಳೆಂದು ತಿಳಿಯುವರು. ಅಸುರರು ಮತ್ತು ಅಜ್ಞಾನಿಗಳು ಶ್ರೀ ಪರಮಾತ್ಮನು ನಿಜವಾಗಿ ದುಃಖಿ, ಪತ್ನೀವಿಯೋಗದಿಂದ ಕಂಗೆಟ್ಟಿರುವ ಇತ್ಯಾದಿ ಅನ್ಯಥಾಜ್ಞಾನವನ್ನು ಹೊಂದಿ ತದ್ವಾರಾ ದುರ್ಗತಿಯನ್ನೈದುವರು. ಇದಕ್ಕಾಗಿಯೇ ಭಗವತ್ಸ್ವರೂಪದ ಸ್ಪಷ್ಟವಾದ ಪರಿಚಯ ನಮಗಾಗಬೇಕು, ಅದನ್ನು ತಿಳಿಸಿಕೊಡುವುದಕ್ಕಾಗಿಯೇ ವೇದೋಪನಿಷತ್ತುಗಳು, ಬ್ರಹ್ಮಸೂತ್ರಗಳು ಇತ್ಯಾದಿ ಸಚ್ಛಾಸ್ತ್ರಗಳು ಪ್ರವೃತ್ತವಾಗಿವೆ. ಅವುಗಳಿಂದ ತಿಳಿದುಬರುವುದೇನು ? ಶ್ರೀಹರಿಯು ಪೂತಾತ್ಮನು. ಪವಿತ್ರತಮವಸ್ತು, ಪಾವಿತ್ರ್ಯ ಎಂಬ ಗುಣಕ್ಕೆ ಪವಿತ್ರತೆಯನ್ನುಂಟುಮಾಡುವವನು. ಅವನ ನಾಮ ಸಂಸ್ಮರಣೆ, ಧ್ಯಾನ ಉಪಾಸನಾದಿಗಳೇ ಸಮಸ್ತ ಪಾಪಗಳನ್ನೂ ಕ್ಷಾಳನಮಾಡಿ, ಭಕ್ತರ ಮನಸ್ಸನ್ನೂ ದೇಹವನ್ನೂ ಬುದ್ಧಿಯನ್ನೂ ಪವಿತ್ರಗೊಳಿಸುವುವು. ಜ್ಞಾನಾನಂದಸ್ವರೂಪಿಯು. ನಿತ್ಯಾನಂದ

ಉದ್ರಿಕ್ತ ವಸ್ತು ಶ್ರೀಹರಿ. ಅವನ ಆನಂದ ಮತ್ತು ಜ್ಞಾನ ಅಪರಿಮಿತ ಮತ್ತು ಯಾವ ನ್ಯೂನಾತಿರೇಕಗಳೂ ಇಲ್ಲದ್ದು. ಇದರಿಂದಲೇ ಪರಿಪೂರ್ಣನು". ಆತನ ಸ್ವರೂಪವೇ (ದೇಹ) ಪೂರ್ಣಾನಂದಜ್ಞಾನಮಯವಾದದ್ದು. ಸಚ್ಚಿದಾನಂದ ಮಂಗಳವಿಗ್ರಹನು. ಯಾವವಿಧವಾದ ದೋಷವೂ ಆತನಲ್ಲಿಲ್ಲ. ಅನಂತಕಲ್ಯಾಣಗುಣಗಣರತ್ನಾಕರನು. ಇಂತಹ ಕರುಣಾಮಯನಾದ ಶ್ರೀಪರಮಾತ್ಮನು ಅವತಾರಗಳನ್ನು ಎತ್ತುವ ಉದ್ದೇಶ್ಯವಾದರೂ ಏನು ? ಸ್ವಭಕ್ತಜನರ ಪ್ರಾರ್ಥನೆಯನ್ನು ಮನ್ನಿಸಿ, ರಾಮಕೃಷ್ಣಾದ್ಯವತಾರಗಳನ್ನೆತ್ತಿ ದುಷ್ಟ ಶಿಕ್ಷಣ, ಶಿಷ್ಟಪರಿಪಾಲನ ಮತ್ತು ಧರ್ಮಸಂರಕ್ಷಣೆ ಇತ್ಯಾದಿ ಕಾರ್ಯ ವಿಶೇಷಗಳನ್ನು ತಾನೇ ಮಾಡಿ ಆದರ್ಶರೂಪನಾಗಿ ತೋರಿಸಿ ವಿರಾಜಮಾನನಾಗಿದ್ದಾನೆ. ಕಪಿಲ ವೇದವ್ಯಾಸಾದಿರೂಪಗಳಿಂದ ಸಜ್ಜನರಿಗೆ ದಿವ್ಯಜ್ಞಾನ ಬೋಧನೆಮಾಡಿದ್ದಾನೆ. ಬುದ್ಧಾದಿ ಅವತಾರ ವಿಶೇಷಗಳಿಂದ ದೈತ್ಯವರ್ಗವನ್ನೇ ಮೋಹಗೊಳಿಸಿ, ವಂಚಿಸಿ, ಅವರು ದುರ್ಗತಿಯನ್ನೈದುವಂತೆ ವ್ಯಾಪಾರ ವಿಶೇಷಗಳನ್ನು ನಡೆಯಿಸಿದ್ದಾನೆ. ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸಿ ತನ್ನ ವೇಷ ಭೂಷಣ ಭಾಷೆಗಳಿಂದ ಅವರ ಮನಸ್ಸನ್ನು ಸಂತೋಷಗೊಳಿಸುವ ತೆರನಂತೆ. ಜಗನ್ನಾಟಕಸೂತ್ರಧಾರಿಯಾದ ಶ್ರೀ ಪರಮಾತ್ಮನು ತನ್ನ ಅವತಾರವಿಶೇಷಗಳಲ್ಲಿ ಸ್ವಭಕ್ತರ ಕಾಮಿತಾರ್ಥಗಳನ್ನು ಈಡೇರಿಸಿದವನಾಗಿ (ಮನದಭಿಲಾಷೆಗಳ ಪೂರೈಸುತ) ಅವರನ್ನು ಅನುಗ್ರಹಿಸುತ್ತಿರುವನು. ಶ್ರೀ ಹರಿಯ ಈ ಮಹಿಮಾತಿಶಯವನ್ನು ವಿವರಿಸುವ ಸಲುವಾಗಿ ದಾಸರಾಯರು "ನಟಶ್ರೇಷ್ಠ"ನ ದೃಷ್ಟಾಂತವನ್ನು ತೆಗೆದುಕೊಂಡಿದ್ದಾರೆ. ॥೨೯॥

# ಪದ್ಯ (೩೦)

ಮೂಲ :—

ಅಧಮ ಮಾನವನೋರ್ವ ಮಂತ್ರೌ ।
ಷಧಗಳನು ತಾನರಿತು ಪಾವಕ ।
ಉದಕಗಳ ಸಂಬಂಧವಿಲ್ಲದೆ ಇಪ್ಪನದರೊಳಗೆ ॥
ಪದುಮಜಾಂಡೋದರನು ಸರ್ವರ ।
ಹೃದಯದೊಳಗಿರೆ ಕಾಲಗುಣಕ ।
ರ್ಮದ ಕಲುಷ ಸಂಬಂಧವಾಗುವದೇ ನಿರಂಜನಗೆ ॥ ॥೩೦॥

ಅವತರಣಿಕೆ :—

ಮಂತ್ರ ಮತ್ತು ಕೆಲವು ಔಷಧಿಗಳ ಸಿದ್ಧಿಯನ್ನು ಪಡೆದಿರುವ ಸಾಮಾನ್ಯ ಮನುಷ್ಯನೋರ್ವನು, ಅವುಗಳ ಸಹಾಯ ಮತ್ತು ಶಕ್ತಿ ವಿಶೇಷ ದಿಂದ ಬೆಂಕಿ ಮತ್ತು ನೀರಿನಲ್ಲಿದ್ದು, ಅವುಗಳ ಸಂಭಂದವಿಲ್ಲದೇ ಅಗ್ನಿಯಿಂದ ಸುಡುವುದಾಗಲೀ, ನೀರಿನಲ್ಲಿ ಮುಳುಗಿ ಉಸಿರು ಕಟ್ಟುವುದಾಗಲೀ ಯಾವ ಪರಿಣಾಮವೂ ಉಂಟಾಗದಂತೆ ಇರುವನು. ಇದು ಆತನು ಕಲಿತಿರುವ ಮಂತ್ರ ಮತ್ತು ಔಷಧಿ (ವನಸ್ಪತಿ)ಗಳ ಮಹಿಮಾವಿಶೇಷ. ಅಂತೆಯೇ ಚತುರ್ಮುಖಬ್ರಹ್ಮದೇವರನ್ನು ಪಡೆದ ಪದ್ಮನಾಭರೂಪೀ ಪರಮಾತ್ಮನು ಸಮಸ್ತ ಚೇತನರ (ತ್ರಿವಿಧರ) ಹೃದಯಕಮಲದಲ್ಲಿ ನಿವಾಸಿಯಾಗಿದ್ದು, ಕಾಲ, ಗುಣ, ಕರ್ಮ ಇತ್ಯಾದಿಗಳಿಂದ ಜನ್ಯವಾದ ದೋಷಗಳಿಂದ ನಿರ್ಲಿಪ್ತ ನಾಗಿರುವನು —ಎಂದು ಹೇಳುತ್ತಾರೆ. "ಅಧಮ ಮಾನವ" —ಎಂಬ ಈ ಪದ್ಯದಿಂದ. ॥೩೦॥

**ಪ್ರತಿಪದಾರ್ಥ :—**

**ಅಘವು** = ಕ್ಷುದ್ರನಾದ (ಅಲ್ಪ) **ಮಾನವನೋರ್ವ** = ಮನುಷ್ಯನೊಬ್ಬನು **ಮಂತ್ರ** = ಮಂತ್ರಶಕ್ತಿಪ್ರಯೋಗ **ಔಷಧಗಳನು** = ಕೆಲವು ಕ್ಷುದ್ರವಾದ ಔಷಧಗಳ ಪ್ರಯೋಗ ಇವುಗಳನ್ನು **ತಾನರಿತು** = ತಾನು ತಿಳಿದವನಾಗಿ **ಪಾವಕ** = ಅಗ್ನಿ **ಉದಕಗಳ** = ನೀರು ಮುಂತಾದವುಗಳ **ಸಂಬಂಧವಿಲ್ಲದೆ** = ಸಂಪರ್ಕದಿಂದ ನಿರ್ಲಿಪ್ತನಾಗಿ (ಅವು ಆತನ ಮೇಲೆ ಯಾವ ಪರಿಣಾಮವನ್ನೂ ಮಾಡದಹಾಗೆ) **ಅದರೊಳಗೆ** = ಅಗ್ನಿ ಮತ್ತು ಜಲಸ್ತಂಭನಾದಿ ವಿದ್ಯೆಗಳಿಂದ ಅಗ್ನಿ ಮತ್ತು ನೀರಿನಲ್ಲಿ **ಇಪ್ಪನು** = ಇರುತ್ತಾನೆ. **ಪದುಮಜಾಂಡೋದರನು** = ಅನೇಕ ಬ್ರಹ್ಮಾಂಡಗಳನ್ನು ತನ್ನ ಉದರದಲ್ಲಿಟ್ಟುಕೊಂಡಿರುವಂಥ ಶ್ರೀ ಪರಮಾತ್ಮನು (ಪದುಮ = ನಾಭಿಕಮಲ ; ಪದುಮಜ = ನಾಭೀಕಮಲದಿಂವ ಉತ್ಪನ್ನರಾದ ಚತುರ್ಮುಖ ಬ್ರಹ್ಮದೇವರು , ಪದುಮಜಾಂಡ = ಬ್ರಹ್ಮಾಂಡ; ಉದರನು = ಅಂತಹ ಬ್ರಹ್ಮಾಂಡವನ್ನೇ ಉದರದಲ್ಲಿ ಉಳ್ಳವನು) **ಸರ್ವರ** = ಸಮಸ್ತ ಪ್ರಾಣಿಗಳ (ತ್ರಿವಿಧಜೀವರಾಶಿಗಳ) **ಹೃದಯದೊಳಗಿರೆ** = ಹೃದಯದಲ್ಲಿರುತಿರಲಾಗಿ **ಕಾಲ** = ಕೃತಾದಿ ಯುಗಗಳು ಮನ್ವಂತರಾದಿಗಳು ಇತ್ಯಾದಿ ಅನಂತಕಾಲ ಪ್ರವಾಹ **ಗುಣ** = ಗುಣತ್ರಯಗಳು (ಸತ್ವರಜಸ್ತಮೋಗುಣಗಳು) **ಕರ್ಮದ** = ಗುಣಜನ್ಯವಾದ ಕರ್ಮಪ್ರವಾಹ ಇವುಗಳ **ಕಲುಷ** = ಸಂಬಂಧವಾದ ದೋಷಗಳು **ನಿರಂಜನಗೆ** = ನಿರ್ದೋಷಿಯಾದ, ಅತಏವ ಗುಣಪರಿಪೂರ್ಣನಾದ ಶ್ರೀಪರಮಾತ್ಮನಿಗೆ **ಸಂಬಂಧವಾಗುವದೇ** = ಲೇಪವಾಗುವುವೇ ? ಅಂದರೆ, ಎಂದೆಂದಿಗೂ ಇಲ್ಲವೆಂದು ತಾತ್ಪರ್ಯ. ॥೩೦॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಅಲ್ಪ ಮನುಷ್ಯನು ಕ್ಷುದ್ರಮಂತ್ರ, ಕ್ಷುದ್ರ ಔಷಧಗಳ ತಿಳಿದವನಾಗಿ,

ಪ್ರತ್ಯಕ್ಷವಾಗಿ ಅಗ್ನಿ ಉದಕಗಳ ಪ್ರವೇಶ ಮಾಡಿ, ಅವುಗಳ ನೈಜ ಸ್ವಭಾವ ಗುಣಗಳಿಂದ ವಿಕಾರ ಹೊಂದದೇ. ನಿರ್ಲಿಪ್ತನಾಗಿ ಹೊರಗೆ ಬರುವಂತೆ, ಇಂಥಾ ಅನೇಕ ಮಂತ್ರಗಳೇನು, ಔಷಧಗಳೇನು, ತತ್ವಾಭಿಮಾನಿ ದೇವತೆಗಳೇನು, ಇನ್ನೂ ಅನೇಕವಾದಂಥಾ ಸ್ಥಾವರಜಂಗಮ ಜೀವರುಗಳು ತುಂಬಿದ ಅನೇಕ ಬ್ರಹ್ಮಾಂಡಗಳನ್ನು ಸೃಷ್ಟಿ ಮಾಡಿ, ಅದರಲ್ಲಿದ್ದು, ಅದರದರ ಸಾಮರ್ಥ್ಯಗಳನ್ನು ತನ್ನ ಅಧೀನ ಮಾಡಿಕೊಂಡು, ವ್ಯಕ್ತ ಮಾಡುತ್ತಾ ತನ್ನ (ಶ್ರೀ ಪರಮಾತ್ಮನ) ಉದರದಲ್ಲಿ ಧರಿಸಿದ ಜೀವರುಗಳ ಆಯುಃಪರಿಮಿತಿ, ಕರ್ಮಫಲಗಳು, ಪ್ರಾಕೃತ ಕರ್ಮಫಲಗಳು, ತಜ್ಜನಿತ ವಿಷಯ ಕರ್ಮಗಳಿಂದ ಹುಟ್ಟುವ ದೋಷಗಳಿಗೆ ಬಿಂಬನಾಗಿದ್ದರೂನೂ, ಪೂರ್ವೋಕ್ತ ಪ್ರಕಾರ ಮಂತ್ರ ಔಷಧ ತಿಳಿದ ಮನುಷ್ಯನು ಅಗ್ನಿ ಉದಕಗಳಲ್ಲಿ ಸಂಬಂಧಪಡದೇ ಹ್ಯಾಂಗೆ ಇದ್ದಾನೋ ತದ್ವತ್ ಗುಣಪೂರ್ಣನಾದ ಶ್ರೀಪರಮಾತ್ಮನಿಗೆ ಜೀವರ ದೋಷಗಳು ಸಂಬಂಧವಾಗೋದಿಲ್ಲ ಎಂತ ತಾತ್ಪರ್ಯ ॥೩೦॥

## (೨) "ಭಾವಪ್ರಕಾಶಿಕೆ" –ವ್ಯಾಖ್ಯಾನ :—

ಅಧಮನಾದ ಒಬ್ಬ ಮನುಷ್ಯನು ಮಂತ್ರ, ಔಷಧಗಳನ್ನು ತಾನು ಸ್ವಾಧೀನಪಡಿಸಿಕೊಂಡು, ಅದರ ಬಲದಿಂದ ಅಗ್ನಿಸ್ತಂಭನ ಮಾಡಿ, ಅದರ ಮಧ್ಯದಲ್ಲಿರೋಣ, ಅಥವಾ ಕೆಲವು ಔಷಧಿಗಳ ಸಹಾಯದಿಂದ ಅಗ್ನಿಯನ್ನು ಕೈಯಲ್ಲಿ ಧರಿಸುವುದು, ಜಲಸ್ತಂಭನ ಮಾಡಿಕೊಂಡು ನೀರಿನಮೇಲೆ ನಡೆಯುವುದು. ಇವೇ ಮೊದಲಾದವುಗಳನ್ನು ಜನರಿಗೆ ತೋರ್ಪಡಿಸಿ, ಬೆಂಕಿಯ ಸಂಬಂಧದಿಂದಾಗುವ ಸುಡುವಿಕೆ, ನೀರು ಸಂಬಂಧದಿಂದ ತೋಯುವುದು ಇವುಗಳು ಇಲ್ಲದಿರುವನು. ಹೀಗಿರಲು ಬ್ರಹ್ಮಾಂಡವನ್ನೇ ತನ್ನ ಉದರದಲ್ಲಿಟ್ಟುಕೊಂಡಿರುವ ನಿರ್ದೋಷಿಯಾದ ಶ್ರೀಪರಮಾತ್ಮನು ಸರ್ವಜೀವರ ಹೃದಯದೊಳಗಿರಲು, ಪರಮಾಣು ಮೊದಲು ದ್ವಿಪರಾರ್ಧಾವಸಾನದವರೆವಿಗೂ ಇರುವ ಕಾಲವನ್ನು ಸಂಬಂಧಿಸಿ ಜನಿಸಿದನು. ಜನಿಸಿ, ಇಷ್ಟುವರ್ಷಗಳಿದ್ದನು. ಮುದುಕನಾದನು. ಸತ್ತನು. ಇದುವರೆವಿಗೂ ರಾಜ್ಯಪರಿಪಾಲನ

ಮಾಡಿದನು, ಯುದ್ಧದಲ್ಲಿ ಮೂರ್ಛಿತನಾದನು, ಸೋತುಹೋದನು, ಬಿಸಿಲಿನಿಂದ ತಪ್ತನಾದನು, ನೀರಡಿಕೆಯಿಂದ ಬಳಲಿದನು, ಎಂಬಿವೇ ಮೊದ ಲಾದ ಕಾಲ, ಗುಣ, ಕರ್ಮದ ಕಲ್ಮಷಗಳು ಆ ಪರಮಾತ್ಮನಿಗೆ ಲೇಪವಾಗು ವುವೇ ? ಎಂದೆಂದಿಗೂ ಆಗಲಾರವು. ॥೩೦॥

## (೩) **"ಭಾವದರ್ಪಣಟೀಕಾ"— ವ್ಯಾಖ್ಯಾನ :**

ಸಮಸ್ತ ಜೀವರ ಹೃದ್ಗತನಾದಂಥ ಶ್ರೀಕಾಂತಗೆ ಜೀವಸಂಬಂಧಿ ಕರ್ಮ ಲೇಪವಿಲ್ಲೆಂದು ಸದೃಷ್ಟಾಂತ ಹೇಳತ್ತಾರೆ- "ಅಧಮು" —ಎಂಬ ಪದ್ಯ ದಿಂದ.

ಓರ್ವ = ಒಬ್ಬ. **ಉಕ್ತಂಚ ಗೀತಾಯಾಂ—"ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇಸ್ಪೃಹೇತಿ"** ॥೩೦॥

## (೪) **ಜಮಖಂಡಿ ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತಮೂಲ) :—**

ನನು ದಹ್ಯಮಾನಗೇಹಗತಾನ್ಯತರದಾಷವತ್ । ನ ಅಲೇಪೋಹರೇಃ ಇತಿಚೇತ್ ಟೀಕೋಕ್ತ ನಿದರ್ಶನಮಾಹ ॥ ಅಧಮೇತಿ ॥ ಓರ್ವ = ಒಬ್ಬ.

**ಕನ್ನಡಾರ್ಥ :—**

ಮನೆಗೆ ಬೆಂಕಿ ತಗುಲಿದರೆ, ಆ ಮನೆಗೂ ಮತ್ತೆ ಅಲ್ಲಿ ವಾಸ ಮಾಡುವ ವರಿಗೂ ಹಾನಿ ತಪ್ಪಿದ್ದಲ್ಲ. ಮನೆಯೂ ಮತ್ತು ಜನರೂ ಅಗ್ನಿಗೆ ತುತ್ತಾ ಗುವರು. ಅಂತೆಯೇ ದೇಹಿಗಳಾದ ಚೇತನರು ಕರ್ಮಲಿಪ್ತರು. ಇಂತಹ ದೇಹಿಗಳಲ್ಲಿ ಅಂತರ್ಯಾಮಿಯಾಗಿರುವ ಶ್ರೀಪರಮಾತ್ಮನಿಗೆ ಕರ್ಮಲೇಪವು ತಪ್ಪಿದ್ದಲ್ಲ—ಎಂಬ ಈ ಆಕ್ಷೇಪವು ಹುಟ್ಟಿದರೆ, ಈ ಆಕ್ಷೇಪವನ್ನು ಟೀಕೆ ಯಲ್ಲಿ ಹೇಳಿರುವ ದೃಷ್ಟಾಂತವನ್ನು ಕೊಟ್ಟು ಪರಿಹರಿಸುತ್ತಾರೆ— "ಅಧಮು ನೋರ್ವನು" —ಎಂಬ ಪದ್ಯದಿಂದ. ॥೩೦॥

## (೫) "ಗುರುಹೃದಯ ಪ್ರಕಾಶಿಕೆ"—ವ್ಯಾಖ್ಯಾನ :—

ಮನಸಿನಲ್ಲಿದ್ದ ದುಃಖವನ್ನು ಆಟಗಾರ ಹೇಗೆ ಆಡಿ ತೋರಿಸುವನೆಂಬ, ಅತಿ ಸ್ಥೂಲಬುದ್ಧಿಗಳ ಆಕ್ಷೇಪ ಪರಿಹರಿಸುವುದಕ್ಕೆ ಮಂತ್ರೌಷಧಿಗಳನ್ನು ಬಲ್ಲವರ ದೃಷ್ಟಾಂತ ಹೇಳಿ ತಿಳಿಸುತ್ತಾರೆ— "ಅಧಮ —ಎಂಬ ಪದ್ಯದಿಂದ.

ನಿಕೃಷ್ಟನಾದ ಒಬ್ಬ ಮನುಷ್ಯನು ಜಲಸ್ಥಂಭ, ಅಗ್ನಿಸ್ಥಂಭ ಮಂತ್ರಗಳನ್ನೂ, ಔಷಧಿಗಳನ್ನೂ ತಿಳಿದು, ಬೆಂಕಿಯು ಹಾಗೂ ನೀರಿನ ಬಾಧೆ ತಗಲದೆ ಹಾಗೆ ಅವುಗಳಲ್ಲಿರುವನು. ಪದುಮಜಾಂಡೋದರನು, ಎಂದರೆ, ಬ್ರಹ್ಮಾಂಡವನ್ನು ಅತಿಸೂಕ್ಷ್ಮ ಅಪ್ರಾಕೃತಜ್ಞಾನರೂಪವಾದ ತನ್ನ ಉದರದಲ್ಲಿ ಅಚಿಂತ್ಯಶಕ್ತಿಯಿಂದ ಇಟ್ಟುಕೊಂಡಿರುವ ದೇವರು, ಸರ್ವರ ಹೃದಯದಲ್ಲಿ ಇದ್ದಾಗ್ಯೂ, ಕಾಲ ಕರ್ಮಾದಿ ದೋಷಗಳ ಸಂಬಂಧವು ಜ್ಞಾನರೂಪಗೆ ಇಲ್ಲವೆಂದು ಹೇಳತಕ್ಕದ್ದೇನು ಎಂದರ್ಥ. ॥೩೦॥

## ಸರ್ವವ್ಯಾಖ್ಯಾನಸಾರಸಂಗ್ರಹ :—

ಜಗತ್ತಿನಲ್ಲಿ ಅಲ್ಪನಾದ ಮನುಷ್ಯನೊಬ್ಬನು ಮಂತ್ರಸಿದ್ಧಿಯನ್ನು ಪಡೆದು, ಕೆಲವು ಔಷಧಿಗಳ ಲೇಪನದ ಸಹಾಯದಿಂದ, ಉರಿಯುತ್ತಿರುವ ಬೆಂಕಿಯಲ್ಲಿ ಪ್ರವೇಶಿಸಿ, ಅದರಲ್ಲಿರುವನು. ನೀರಿನಲ್ಲಿ ಮುಳುಗಿರುವನು. ನೀರಿನಮೇಲೆ ನಡೆಯಬಲ್ಲನು. ಇದಕ್ಕೆ ಅಗ್ನಿಸ್ಥಂಭನ ಮತ್ತು ಜಲಸ್ಥಂಭನಾದಿ ಮಂತ್ರವಿದ್ಯೆಗಳನ್ನು ಕಲಿತು, ಕೆಲವು ವನಸ್ಪತಿಗಳ ರಸವನ್ನು ತನ್ನ ಶರೀರಕ್ಕೆ ಲೇಪನಮಾಡಿಕೊಂಡು, ಅಗ್ನಿಯಿಂದ ಸುಡದೆ ಇರುವನು. ಅಗ್ನಿಯ ಸಂಪರ್ಕದಲ್ಲಿದ್ದರೂ, ಅಗ್ನಿಯ ಸ್ವಾಭಾವಿಕ ದಾಹಕಗುಣ (ಸುಡುವಿಕೆ)ದಿಂದ ಯಾವ ಪರಿಣಾಮವು ಆಗದೆ, ನಿರ್ವಿಕಾರವಾಗಿರುವನು. ಅಂತೆಯೇ ನೀರಿನ ಸ್ವಾಭಾವಿಕ ಗುಣವಾದ ಮುಳುಗಿಸುವುದು, ತೋಯಿಸುವುದು ಇವುಗಳಿಂದ ನಿರ್ಲೇಪನಾಗಿರುವನು. ಇದಕ್ಕೆ ಆತನು ಕಲಿತಿರುವ ಮಂತ್ರವಿದ್ಯೆಯ ಮಹಾತ್ಮೆ ಹಾಗೂ ಲೇಪಿಸಿಕೊಂಡಿರುವ ಔಷಧಿಗಳ ರಸವಿಶೇಷಗಳೇ ಮುಖ್ಯ ಕಾರಣ. ಕ್ಷುದ್ರನಾದ ಮನುಷ್ಯನೊಬ್ಬನು ಇಂತಹ ವಿಚಿತ್ರ

ವ್ಯಾಪಾರಗಳನ್ನು ಮಾಡಬಲ್ಲವನಾದರೆ, ಸರ್ವೋತ್ತಮನಾದ, ಜಗನ್ನಿಯಾಮಕನಾದ ಶ್ರೀ ಪರಮಾತ್ಮನ ಮಹಿಮಾತಿಶಯವೆಂತಹುದು ? ಮಂತ್ರಸಿದ್ಧಿ ಇರುವವರೆಗೆ ಮಾತ್ರ ಮತ್ತು ಔಷಧಿಗಳ ಪ್ರಭಾವವಿರುವವರೆಗೆ ಮಾತ್ರ, ಅಧಮ ಮಾನವನೋರ್ವನ ಮಹಿಮಾಪ್ರದರ್ಶನ ಮತ್ತು ಚಮತ್ಕಾರ. ಆದರೆ ಸಮಸ್ತವನ್ನೂ ತನ್ನ ಅಧೀನದಲ್ಲಿಯೇ ಇಟ್ಟುಕೊಂಡಿರುವ, ಚೇತನಾಚೇತನಾತ್ಮಕವಾದ ಈ ಸಕಲ ಜಗತ್ತನ್ನೂ ಸ್ವಸಾಮರ್ಥ್ಯದಿಂದಲೇ ನಿಯಂತ್ರಿಸುವ ಶ್ರೀ ಪರಮಾತ್ಮನ ಶಕ್ತಿ ಸಾಮರ್ಥ್ಯಗಳು ಅಚಿಂತ್ಯ ಮತ್ತು ಅಪರಿಮಿತ. ಪದ್ಮನಾಭರೂಪಿಯಾದ ಶ್ರೀ ಪರಮಾತ್ಮನು ತನ್ನ ನಾಭಿಯಿಂದ ಉತ್ಪನ್ನವಾದ ಚತುರ್ದಶದಳಾತ್ಮಕವಾದ ಹಿರಣ್ಮಯರೂಪವಾದ ಕಮಲದಲ್ಲಿ ಚತುರ್ಮುಖ ಬ್ರಹ್ಮದೇವರು ಜನಿಸಿದರು. ಮಹತತ್ವಾತ್ಮಕವಾದ ಬ್ರಹ್ಮದೇವರ ಶರೀರವೇ ಬ್ರಹ್ಮಾಂಡವು. ಇಂತಹ ಬ್ರಹ್ಮಾಂಡಕ್ಕೆ "ಪದುಮಜಾಂಡ" ಎಂದು ಹೆಸರು. ಇಂತಹ ಬ್ರಹ್ಮಾಂಡವನ್ನು ಕೇವಲ ತನ್ನ ಇಚ್ಛಾಮಾತ್ರದಿಂದ ಸೃಷ್ಟಿಸಿ, ಪರಿಪಾಲಿಸಿ, ಪ್ರಳಯಕಾಲದಲ್ಲಿ ತನ್ನ ಉದರದಲ್ಲಿಟ್ಟುಕೊಂಡು ಗುಣಸಾಮ್ಯಕ್ರಮದಿಂದ ಲಯಗೊಳಿಸಿ, ಸರ್ವಚೇತನರಿಗೂ ಆಶ್ರಯ ಕೊಡುವನು. ಈ ಅಭಿಪ್ರಾಯವನ್ನು ಶ್ರೀ ದಾಸರಾಯರು "ಪದುಮಜಾಂಡೋದರನು" ಎಂಬ ಶಬ್ದಪ್ರಯೋಗದಿಂದ ನಿರೂಪಿಸಿರುವರು. ಏತಾದೃಶಮಹಿಮೋಪೇತನಾದ ಸೃಷ್ಟಿಕರ್ತನು ಸಮಸ್ತ ಜೀವರಾಶಿಗಳ ಹೃದಯದಲ್ಲಿ ವಾಸವಾಗಿರುವನು. ಸಮಸ್ತರ ಹೃತ್ಕಮಲನಿವಾಸಿಯಾದ ಪದುಮಜಾಂಡೋದರನು, ಆಯಾಯಾ ಜೀವರ ದೇಹಗಳ ಸಂಬಂಧವಾದ ಗುಣ ಮತ್ತು ಕರ್ಮಗಳಿಂದ ಸಂಬಂಧವಾಗದೇ ನಿರ್ಲಿಪ್ತನಾಗಿರುವನು. ಅತಿಸೂಕ್ಷ್ಮವಾದ ಕಾಲದಿಂದ ಪ್ರಾರಂಭಿಸಿ, ಬ್ರಹ್ಮದೇವರ ಆಯುಃಪರಿಮಾಣದವರೆಗೆ ಇರುವ ಮಹಾಕಾಲಗಳಲ್ಲಿ ವ್ಯಾಪಿಸಿಕೊಂಡು, ಕಾಲಾಂತರ್ಗತನಾಗಿ, ಕಾಲನಿಯಾಮಕನಾಗಿರುವ ಶ್ರೀ ಪರಮಾತ್ಮನು ತ್ರಿಕಾಲಾಬಾಧಿತನು. ಕಾಲಾತೀತನಾದ ಅವನು ಕಾಲಪ್ರವಾಹದ ಪ್ರಭಾವಕ್ಕೆ ಸಿಲುಕಿದವನಲ್ಲ. ಕಾಲಚಕ್ರವು ಭಗವದಧೀನವಾದದ್ದು. ಯುಗಗಳು, ಮನ್ವಂತರಾದಿಗಳು ಅವನ ನಿಯಂತ್ರಣಕ್ಕೆ ಒಳಪಟ್ಟಿವೆ. ಅಂತೆಯೇ, ಕ್ಷಣ, ಘಂಟೆ, ದಿನ, ಪಕ್ಷ,

ಮಾಸ, ಋತುಗಳು, ಅಯನ ಮತ್ತು ಸಂವತ್ಸರಾದಿ ಅಂಶಯುಕ್ತವಾದ ಮಹಾಕಾಲಗಳೂ ಆತನ ನಿಯಂತ್ರಣಕ್ಕೆ ಒಳಪಟ್ಟಿರುವುವೇ ಹೊರತು, ಅನ್ಯಥಾ ಇಲ್ಲ. ಚತುರ್ವಿಂಶತಿ ತತ್ತ್ವಗಳಿಂದ ನಿರ್ಮಿತವಾದ ಈ ಪಾಂಚಭೌತಿಕ ಶರೀರ. ಅದರ ಮೂಲರೂಪವಾದ ಪ್ರಾಕೃತ ಗುಣತ್ರಯಗಳು. ಇವುಗಳ ಲೇಪವೂ ಶ್ರೀ ಪರಮಾತ್ಮನಿಗಿಲ್ಲ, ಗುಣಜನ್ಯವಾದ ಕರ್ಮಪ್ರವಾಹದ ಸಂಬಂಧವೂ ಸಹ ದೇಹದಲ್ಲಿ ಮತ್ತು ಸರ್ವತ್ರ ವ್ಯಾಪ್ತನಾದ ಶ್ರೀಹರಿಗೆ ಇಲ್ಲವೇ ಇಲ್ಲ. ಈ ಕಾರಣದಿಂದಲೇ ದಾಸರಾಯರು ನಿರ್ದೋಷಿಯಾದ, ಸರ್ವತಂತ್ರಸ್ವತಂತ್ರನಾದ, ಅನಂತಕಲ್ಯಾಣಗುಣಗಣರತ್ನಾಕರನಾದ ಶ್ರೀ ಪರಮಾತ್ಮನಿಗೆ "ನಿರಂಜನ" ಎಂದು ಕರೆದಿರುವರು. ॥೩೦॥

# ಪದ್ಯ (೩೧)

**ಮೂಲ :—**

**ಒಂದುಗುಣದೊಳೊಳಗನಂತ ಗುಣಗಳು ।**
**ಒಂದು ರೂಪದೊಳಿಹವು ಲೋಕಗ ।**
**ಳೊಂದು ರೂಪದಿ ಧರಿಸಿ ತದ್ಗತ ಪದಾರ್ಥದೊಳಹೊರಗೆ ॥**
**ಬಾಂದಳದವೊಲಿದ್ದು ಬಹು ಹೆಸ ।**
**ರಿಂದ ಕರೆಸುತ ಪೂರ್ಣಜ್ಞಾನಾ ।**
**ನಂದಮಯ ಪರಿಪರಿ ವಿಹಾರವ ಮಾಡಿ ಮಾಡಿಸುವ ॥ ॥೩೧॥**

**ಅವತರಣಿಕೆ :—**

ಶ್ರೀ ಪರಮಾತ್ಮನ ರೂಪಗುಣಕ್ರಿಯಾದಿ ವಿಶೇಷಗಳೆಲ್ಲವೂ ಅನಂತಾನಂತ ಮತ್ತು ನಿರವಧಿಕ. ಒಂದೊಂದು ಗುಣದಲ್ಲಿಯೂ ಅಪರಿಮಿತ ಗುಣಗಳು ಅಪರಿಚ್ಛಿನ್ನವಾಗಿವೆ. ಒಂದೊಂದು ಗುಣದಿಂದಲೂ, ರೂಪದಿಂದಲೂ

ಕ್ರಿಯಾದಿಂದಲೂ ಪರಿಪೂರ್ಣನು. ಒಂದು ರೂಪದಿಂದ ಅಪರಿಚ್ಛಿನ್ನ ಮತ್ತು ವಿಲಕ್ಷಣವಾದ ಅನಂತಾನಂತರೂಪಗಳು ಅಡಕವಾಗಿವೆ. ಇಂತಹ ಗುಣರೂಪ ಕ್ರಿಯಾವಿಶಿಷ್ಟನಾಗಿ ಜಗದ್ಭರಿತನಾದ ಶ್ರೀಹರಿಯು ಸ್ಥಾವರ ಜಂಗಮಾತ್ಮಕ ಜಗತ್ತಿನ ಒಳಗೂ ಹೊರಗೂ ಸರ್ವತ್ರ ವ್ಯಾಪ್ತನಾಗಿ, ಆಕಾಶದೋಪಾದಿಯಲ್ಲಿ ನಿರ್ಲಿಪ್ತನಾಗಿ ತನ್ನಾಮಕನಾಗಿ, ತಚ್ಛಬ್ದವಾಚ್ಯನಾಗಿದ್ದು, ತಾನು ಮಾತ್ರ ಪೂರ್ಣಾನಂದಜ್ಞಾನಸ್ವರೂಪನಾಗಿದ್ದಾನೆಂದು ತಿಳಿಸುತ್ತಾರೆ— "ಒಂದೊಂದು" —ಎಂಬ ಪದ್ಯದಿಂದ. ॥೩೦॥

**ಪ್ರತಿಪದಾರ್ಥ :—**

**ಒಂದು ಗುಣದೊಳಗೆ** = ಶ್ರೀ ಪರಮಾತ್ಮನ ಅನಂತಾನಂತ ಅಪರಿಚ್ಛಿನ್ನ ಗುಣರಾಶಿಗಳಲ್ಲಿ ವಿದ್ಯಮಾನವಾದ ಯಾವುದಾದರೊಂದು ಗುಣವಿಶೇಷದಲ್ಲಿ **ಅನಂತ ಗುಣಗಳು** = ಅಪರಿಮಿತವಾದ ಗುಣಸಮೂಹಗಳು ಅಪರಿಚ್ಛಿನ್ನವಾಗಿ ಇವೆ (ಅಡಕವಾಗಿವೆ) **ಒಂದು ರೂಪದೊಳಿಹವು** = ಪೂರ್ವೋಕ್ತ ಪ್ರಕಾರ ಶ್ರೀ ಪರಮಾತ್ಮನ ಅನಂತಾನಂತ ನಿರವಧಿಕ ರೂಪಗಣಗಳಲ್ಲಿ ವಿದ್ಯಮಾನವಾದ ಒಂದೊಂದು ರೂಪದಲ್ಲಿಯೂ ಅನಂತಾನಂತ ರೂಪ ಸಮೂಹಗಳು ಅಪರಿಚ್ಛಿನ್ನವಾಗಿವೆ. **ಲೋಕಗಳ** = ಬ್ರಹ್ಮಾಂಡಂತರ್ಗತವಾದ ಹದಿನಾಲ್ಕು ಲೋಕಗಳನ್ನು **ಒಂದು ರೂಪದಿ ಧರಿಸಿ** = ಅನಂತಾನಂತರೂಪಗಳದಲ್ಲಿ ವಿದ್ಯಮಾನವಾದ ಪ್ರತಿಯೊಂದು ರೂಪದಲ್ಲಿಯೂ ಧರಿಸಿದವನಾಗಿ **ತದ್ಗತ** = ಹಾಗೆ ಧಾರಣಮಾಡಿರುವ ಲೋಕದಲ್ಲಿ ವಿದ್ಯಮಾನವಾದ ಸ್ಥಾವರ ಜಂಗಮಾತ್ಮಕವಾದ (ಲೋಕಾಂತರ್ಗತ) **ಪದಾರ್ಥಗಳ** = ಜಡ ಮತ್ತು ಚೇತನವಸ್ತುಗಳ **ಒಳ ಹೊರಗೆ** = ಒಳಗೂ ಮತ್ತು ಹೊರಗೂ (ಅಂತರ್ಬಹಿಶ್ಚ) **ಬಾಂದಳದವೋಲಿದ್ದು** = ಆಕಾಶದಂತೆ ಸರ್ವತ್ರ ವ್ಯಾಪ್ತನಾಗಿದ್ದು **ಬಹು ಪೆಸರಿಂದ ಕರೆಸುತ** = ಅನಂತಾನಂತ ನಾಮಧೇಯಗಳಿಂದ ಕರೆಯಿಸಿಕೊಳ್ಳುತ್ತಾ (ತನ್ನಾಮಕನಾಗಿ) **ಪೂರ್ಣಜ್ಞಾನಾನಂದಮಯ** = ಆಯಾಯಾ ಅಧಿಷ್ಠಾನಗಳು ಅಪೂರ್ಣವಾಗಿದ್ದರೂ, ತದ್ಗತವಾದ ತಾನು ಪರಿಪೂರ್ಣವಾದ ಜ್ಞಾನ ಮತ್ತು ಆನಂದಸ್ವರೂಪನಾಗಿದ್ದು **ಪರಿಪರಿ**

ರೂಪವಾದ ಕ್ರಿಯಾದಿಗಳು) **ಮಾಡಿ** = ತಾನೇ ಬಿಂಬರೂಪದಿಂದ ನಡೆಯಿಸಿ **ಮಾಡಿಸುವ** = ಜೀವರ ದ್ವಾರಾ ಮಾಡಿಸುತ್ತಾನೆ. (ಬಿಂಬಕ್ರಿಯಾ ವ್ಯಾಪಾರ ವಿಶೇಷ) ॥೩೧॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಶ್ರೀ ಪರಮಾತ್ಮನ ಅನಂತಾನಂತ ಅಪರಿಚ್ಛಿನ್ನ ಗುಣಗಳಿಗೆ ವಿದ್ಯಮಾನ ವಾದ ಒಂದು ಗುಣದೊಳಗೆ ಅಪರಿಮಿತ ಗುಣಗಳು ಅಪರಿಚ್ಛಿನ್ನವಾಗಿ ಇರೋದಾಗಿ ಅವೆ. ದೃಷ್ಟಾಂತ:— ಭೋಜನ ಮಾಡತಕ್ಕ ದ್ರವರೂಪ ಪದಾರ್ಥ ಒಂದು. ಅದರಲ್ಲಿ ಷಡ್ರಸಗಳು, ಧನಿಯಾ, ಬೇಳೆ ಮೊದಲಾದ ಅನೇಕ ದ್ರವ್ಯಗಳು ಸೇರಿ ಒಂದು ಸಾರು ಎನತಕ್ಕ ದ್ರವರೂಪ ಪದಾರ್ಥ ವಾಗುತ್ತದೆ. ಆ ಪದಾರ್ಥದಲ್ಲಿ ವಿದ್ಯಮಾನವಾದ ರಸೋಪೇತ ಅಖಂಡ ಗುಣ ಒಂದು. ತದ್ಗತ ಖಂಡಾಖಂಡ ಪದಾರ್ಥಗಳ ರಸಗಳ ಗುಣಗಳು ಅನೇಕ. ಈ ರೀತ್ಯಾ ಅಪರಿಚ್ಛಿನ್ನ ಗುಣಗಳು ಸ್ವಾಖ್ಯಗುಣಗಳು. ಪೂರ್ವೋಕ್ತ ಪ್ರಕಾರ, ಒಂದು ರೂಪದೊಳಗೆ ಅನಂತಾನಂತ ರೂಪಗಳು ಇರೋದಾಗಿ ಅವೆ. ಇದಕ್ಕೆ ದೃಷ್ಟಾಂತ. ಪದಾರ್ಥಕ್ಕೂ ಪದಾರ್ಥಗತ ಆಮ್ಲಾದಿ ರಸಕ್ಕೂ ಅವಿಯೋಗವು. ಪೂರ್ವೋಕ್ತವಾದ ದ್ರವರೂಪ ಪದಾರ್ಥ ಒಂದು. ತದ್ಗತ ಗುಣಸಾಂಕೇತ ರಸವಿಶೇಷಗಳು ಸೇರಿ ಒಂದು. ಎರಡು ಏಕತ್ರವಿವೆ. ದ್ರವರೂಪವಾದ ಒಂದು ಪದಾರ್ಥದಲ್ಲಿ ಅನೇಕ ಪದಾರ್ಥಗಳು ಸೇರಿ ಒಂದು ಪದಾರ್ಥವೆಂದು ಹೇಗೆ ಕರೆಸುವುದೋ ತದ್ವತ್ ಒಂದು ರೂಪದಲ್ಲಿ ಅಪರಿಚ್ಛಿನ್ನ ವಿಲಕ್ಷಣವಾದ ಅನೇಕ ರೂಪಗಳು ಇರೋದಾಗಿ ಅವೆ. ಈ ದೃಷ್ಟಾಂತದಿಂದ ಒಂದು ಗುಣದಲ್ಲಿ ಅನಂತ ಗುಣ ಗಳು. ಒಂದು ರೂಪದಲ್ಲಿ ಅಪರಿಚ್ಛಿನ್ನ ವಿಲಕ್ಷಣವಾದ ಅನೇಕ ರೂಪಗಳು ಧರಿಸಿದವನಾಗಿ ಸ್ಥಾವರ ಜಂಗಮಾತ್ಮಕ ಪದಾರ್ಥಗಳ ಒಳಗೂ ಮತ್ತು

ಹೊರಗೂ, ಆಕಾಶದೋಪಾದಿಯಲ್ಲಿ ನಿರ್ಲಿಪ್ತನಾಗಿ ಇದ್ದು, ಆಯಾಯಾ ಪದಾರ್ಥಗಳ ನಾಮಗಳಾದ ತನ್ನಾಮಗಳಿಂದಲೇ ಕರೆಸುತ್ತಾ, ಆಯಾ ಅಧಿಷ್ಠಾನಗಳು ಅಪೂರ್ಣವು ಅಲ್ಪಾನಂದಗಳಾಗಿದ್ದರೂ, ತಾನು ಪೂರ್ಣಾನಂದ ಜ್ಞಾನಮಯಸ್ವರೂಪನಾಗಿ, ಅವರವರ ಸ್ವರೂಪಸ್ವಭಾವ ಕರ್ಮಗಳನ್ನನು ಸರಿಸಿ, ಕರ್ಮಸಾಂಕೇತವಾದ ಆಟಗಳು ತಾನು ಆಡಿ, ಜೀವರಿಂದಲೂ ಆಡಿಸುತ್ತಾನೆ –ಎಂತ ತಾತ್ಪರ್ಯ.

"ನಾಮಾನಿ ಸರ್ವಾಣಿ ಯಮಾವಿಶಂತಿ ತುನ್ವೈವಿಷ್ಣುಂ ಪರಮ ಮುದಾಹರಂತಿ" —ಎಂಬ ಶ್ರೀ ಬ್ರಹ್ಮಸೂತ್ರ ವಚನರೀತ್ಯಾ, ಶ್ರೀ ಪರಮಾತ್ಮನು ಆಯಾ ಅಧಿಷ್ಠಾನಗತವಾಗಿದ್ದು, ಆಯಾಯಾ ನಾಮಗಳಿಂದಲೇ ಕರೆಯಿಸಿಕೊಳ್ಳುತ್ತಾ. ತನ್ನಾಮಕನಾಗಿದ್ದಾನೆ ಎಂದು ತಾತ್ಪರ್ಯ. ॥೩೧॥

## (೨) "ಭಾವಪ್ರಕಾಶಿಕೆ" –ವ್ಯಾಖ್ಯಾನ :–

ಶ್ರೀಪರಮಾತ್ಮನ ಅನಂತಗುಣಗಳ ಪೈಕಿ, ಒಂದೊಂದು ಗುಣವನ್ನು ತೆಗೆದುಕೊಂಡು ನೋಡಿದರೆ, ಆ ಒಂದು ಗುಣದಲ್ಲಿ ಅನಂತಾನಂತ ಗುಣ ರೂಪಗಳಡಗಿರುವುವು. ಅದರಲ್ಲಿನ ಒಂದು ರೂಪವನ್ನು ತೆಗೆದುಕೊಂಡು ಯೋಚಿಸಿದರೆ, ಅದರಲ್ಲಿ ಅನಂತಾನಂತ ಲೋಕಗಳು ಕಾಣುವುವು. ಅಂತಹ ಲೋಕಗಳನ್ನು ಒಂದು ರೂಪದಿಂದ ಧರಿಸಿ, ಆ ಲೋಕಗಳಲ್ಲಿರುವ ಸಕಲ ಪದಾರ್ಥಗಳ ಒಳಗೂ ಹೊರಗೂ, ಆಕಾಶವು ಸರ್ವತ್ರ ವ್ಯಾಪಿಸಿಕೊಂಡಿರುವಂತೆ ನಿರ್ಲಿಪ್ತನಾಗಿ, ವ್ಯಾಪ್ತನಾಗಿ, ಸ್ವಯಂ ಪೂರ್ಣಾನಂದಜ್ಞಾನಮಯನಾದರೂ, ಸಕಲ ಪದಾರ್ಥಗಳ ನಾಮಧೇಯದಿಂದ ನಾನಾಪ್ರಕಾರ ವಿಹಾರವನ್ನು ಮಾಡಿ ಮಾಡಿಸುತ್ತಿರುವನು. ಅಂದರೆ. ಮನುಷ್ಯರಲ್ಲಿ ಮನುಷ್ಯಾಕಾರನಾಗಿದ್ದು ಮನುಷ್ಯನಾಮಗಳನ್ನು ಧರಿಸಿ, ಗಜತುರಗಾದಿಗಳಲ್ಲಿ ಗಜತುರಗಾದಿ ನಾಮದಿಂದ ಇದ್ದು ಮನುಷ್ಯಾದಿಗಳಿಗೆ ವಾಹನಾದಿಗಳಾಗುವನು. ಮನುಷ್ಯನಾಗಿ ಕೂತುಕೊಳ್ಳುವನು. ಗಜತುರಗಾದಿಗಳಲ್ಲಿದ್ದು

ಹೊತ್ತುಕೊಳ್ಳುವನು. ಮನುಷ್ಯಾದಿಗಳನ್ನು ಗಜತುರಗಾದಿಗಳ ಮೇಲೆ ಕೂಡುವಂತೆ ಮಾಡುವನು. ಹೀಗೆ ನಾನಾಪ್ರಕಾರವಾದ ಕಾರ್ಯಗಳನ್ನು ಸಕಲ ಪ್ರಾಣಿಗಳಲ್ಲಿದ್ದು, ತಾನೂ ಮಾಡಿ, ಅವರಿಂದಲೂ ಮಾಡಿಸುವನು. ॥೩೦॥

(೩) **"ಭಾವದರ್ಪಣ ಟೀಕಾ"—ವ್ಯಾಖ್ಯಾನ :—**

ಈಗ **"ಜ್ಞಾನಾನಂದಾದ್ಯ ಸಂಖ್ಯೇಯ ಗುಣ ಸಾಂದ್ರಾಕೃತೀ ನಿಜ॥ ಪೃಥಕ್ ಪೃಥಗನಂತಾನಿ ಪೃಥಕಪೂರ್ಣತಮಾನಿಚ—" ಎಂತ ಸತ್ತತ್ವರತ್ನಮಾಲಾ** ವಚನ ಇರೋಣದರಿಂದಲೂ ಮತ್ತು

**"ಸ ಏವ ಶತಧಾ ಪ್ರೋಕ್ತೋ ವಿಷ್ಣುರ್ಮತ್ಸ್ಯಾದಿ ರೂಪಕಃ ॥ ಶತಂ ನಾರಾಯಣಾದ್ಯಾತ್ಮ ವಿಶ್ವಾದ್ಯಾತ್ಮ ಸಹಸ್ರಕಃ॥ ಪರಾದಿರೂಪೋ ಬಹುಧಾ ಸೋಽನಂತಾತ್ಮಾ ಜಿತಾದಿಕಃ ॥ —ಎಂತ ಬೃಹದ್ಭಾಷ್ಯ** ಇರುವದರಿಂದ ಬಹುರೂಪನಾಗಿ, ಬಹುಜೀವರಲ್ಲಿ ಇದ್ದು ಕ್ರೀಡಿಸುವನೆಂದು ಹೇಳುತ್ತಾರೆ- "ಒಂದು" ಎಂಬ ಪದ್ಯದಿಂದ.

ಬಾಂದಳ = ಆಕಾಶ, ಮಾಡಿ = ಸ್ವಯಂ ಮಾಡತಕ್ಕ ಲಕ್ಷಣ ಹ್ಯಾಗೆಂದರೆ,

**"ಯಥಾ ಪ್ರವಿಷ್ಟಃ ಕುರುತೇ ಪುಮಾನ್ ದಾರುಮಯಾಕೃತಾ ॥ ಚೇಷ್ಟಾಂ ತದಂಗಸಂಶ್ಲಿಷ್ಟೈಃ ಸ್ವಾಂಗೈಸ್ತದ್ವತ್ಸರ್ವಂ ಹರಿಃ ॥" ಎಂಬ ಭಾಷ್ಯೋಕ್ತಿ** ಯಿಂದ ದಾರ್ಢ್ಯಮಾಡತಕ್ಕವು ॥೩೦॥

(೪) **ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ—**

ಶ್ರೀಹರಿಯ ಸಮಸ್ತ ಗುಣರಾಶಿಗಳೂ ಸಮಸ್ತ ಗುಣರೂಪವಾಗಿರುತ್ತವೆ **"ಸರ್ವೇ ಸರ್ವ ಗುಣಾತ್ಮಾನಃ ಇತ್ಯುಕ್ತೇಃ" ॥** ಅಂದರೆ, ಇದರ ತಾತ್ಪರ್ಯ :— ಒಂದೊಂದು ಗುಣವೂ **ಅನಂತಗುಣಯುಕ್ತವೇ.**

ಗುಣಗಳಿಗೆ ಪರಸ್ಪರ ಭೇದವಿಲ್ಲ. ಶ್ರೀಹರಿಯು ಸ್ವಗತಭೇದವಿವರ್ಜಿತತ್ವ ಗುಣವಿಶೇಷದಿಂದಾಗಿ, ಜ್ಞಾನದಲ್ಲಿ ಆನಂದವೂ, ಆನಂದದಲ್ಲಿ ಜ್ಞಾನವೂ ಇರುತ್ತದೆ. ಇಷ್ಟಿದು, ಒಂದರಲ್ಲಿ ಒಂದಾಗಿ ಸಮಸ್ತ ಗುಣರಾಶಿಗಳೂ ತಮ್ಮ ತಮ್ಮಲ್ಲಿ ಅಡಕವಾಗಿರುವುವು —ಎಂಬುದೇ ಮುಖ್ಯ ತಾತ್ಪರ್ಯ. ॥೨೦॥

## (ಇ) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ: —

ದೇವರ ಜ್ಞಾನವೆಂಬ ಒಂದು ಗುಣದಲ್ಲಿ ಆನಂದ, ಬಲ, ಸೌಂದರ್ಯಾದ್ಯನಂತ ಗುಣಗಳು ರೂಪದಲ್ಲಿರುವುವು. ಆ ಒಂದು ರೂಪದಲ್ಲೇ ಸಕಲ ಲೋಕಗಳನ್ನೂ ಧರಿಸಿ, ಆ ಲೋಕದಲ್ಲಿರುವ ಸಮಸ್ತಪದಾರ್ಥಗಳ ಒಳ ಹೊರಗೂ ಸಹ ಆಕಾಶದಂತೆ ವ್ಯಾಪ್ತನಾಗಿದ್ದು, ಅನೇಕ ನಾಮರೂಪಗಳಿಂದ ಕರೆಸುತ್ತ, ಜ್ಞಾನಾನಂದರೂಪನು ಬಗೆಬಗೆಯ ಕ್ರೀಡೆಯನ್ನಾಡಿ, ಜೀವರನ್ನಾಡಿಸುವನು.

"ಮಯ್ಯನಂತ ಗುಣೇನಂತೇ ॥" ಮತ್ತು "ಇಹೈಕಸ್ಥಂ ಜಗತ್ಸರ್ವಂ ಪಶ್ಯಾದ್ಯಸಚರಾಚರಮ್ ॥" —ಎಂಬ ಭಾಗವತ ಮತ್ತು ಗೀತಾರ್ಥ ಸಹ ಇದರಿಂದ ವಿವರಿಸಿತು. ॥೩೦॥

## ಸರ್ವವ್ಯಾಖ್ಯಾನಸಾರಸಂಗ್ರಹ :—

ಅಪರಿಮಿತ ಮಹಿಮನಾದ ಶ್ರೀ ಪರಮಾತ್ಮನ ಗುಣ, ರೂಪ, ಕ್ರಿಯಾದಿಗಳು ಅಪಾರ ಹಾಗೂ ಅನಂತಾನಂತ, ನಿರವಧಿಕ ಗುಣಾತಿಶಯಗಳುಳ್ಳವನು. ಅನಂತಕಲ್ಯಾಣಗುಣಗಣರತ್ನಾಕರನಾದ ಶ್ರೀಹರಿಯ ಒಂದು ಗುಣದಲ್ಲಿ ಅನಂತಾನಂತಗುಣಗಳು ಅಡಗಿವೆ. ಒಂದೊಂದು ಗುಣವೂ ಅಪರಿಚ್ಛಿನ್ನ ಮತ್ತು ಪರಿಪೂರ್ಣವೇ, ಆತನ ಯಾವುದಾದರೊಂದು ಗುಣವನ್ನು ಧ್ಯಾನಿಸಿದರೆ, ಅದರಲ್ಲಿ ಆನಂದ ಜ್ಞಾನ, ಬಲ, ಸೌಂದರ್ಯ ಇತ್ಯಾದಿ ಇತರ ಗುಣಗಳೆಲ್ಲವೂ ಪರಿಪೂರ್ಣ ಪ್ರಮಾಣದಲ್ಲಿವೆ. ಹಾಗೂ ಅನಂತಾನಂತ ಸಂಖ್ಯೆಯಲ್ಲಿವೆ. ಅಂತೆಯೇ ಒಂದು ರೂಪದಲ್ಲಿ ಅನಂತಾನಂತರೂಪಗಳು.

ಒಂದು ಕ್ರಿಯೆಯಲ್ಲಿ ಅನಂತಾನಂತ ಕ್ರಿಯಾ ವಿಶೇಷಗಳು ರಾಶಿರಾಶಿಯಾಗಿವೆ. ಇಂತಹ ಅಚಿಂತ್ಯಾದ್ಭುತಶಕ್ತನೂ, ಅಘಟಿತಘಟನಾ ಸಾಮರ್ಥ್ಯವುಳ್ಳವನೂ ಆದ ಭಗವದ್ವಸ್ತುವು ಅತ್ಯಾಶ್ಚರ್ಯಕರನು ಮತ್ತು ಅಪ್ರಮೇಯನು. ಶ್ರೀ ಪರಮಾತ್ಮನು ಸ್ವಗತಭೇದವಿವರ್ಜಿತನು. ಅಂದರೆ, ಅವನ ಗುಣಗಳಲ್ಲಿ ರೂಪ, ಕ್ರಿಯಾದಿಗಳು, ಅವತಾರವಿಶೇಷಗಳು, ಅಂಗೋಪಾಂಗಗಳು ಇತ್ಯಾದಿಗಳಿವೆ. ಅನ್ಯೋನ್ಯ ಭೇದವಿಲ್ಲ. ಈ ಕಾರಣದಿಂದಲೇ ಪ್ರತಿಗುಣ ರೂಪ, ಕ್ರಿಯಾ, ಅವತಾರ, ಅಂಗ. ಉಪಾಂಗಗಳೆಲ್ಲವೂ ಪರಿಪೂರ್ಣವೇ. ಒಂದಂಶದಲ್ಲಿಯೂ ನ್ಯೂನಾತಿರಿಕ್ತವೇ ಇಲ್ಲ. ಇಂತಹ ಮಹಿಮಾ ಸಂಪನ್ನನಾದ ಶ್ರೀ ಪರಮಾತ್ಮನು ಒಂದು ರೂಪದಿಂದ ಸಕಲ ಲೋಕಗಳನ್ನು ಧರಿಸಿದ್ದಾನೆ. ಚತುರ್ದಶಭುವನಾತ್ಮಕವಾದ ಈ ಬ್ರಹ್ಮಾಂಡವನ್ನು ತನ್ನ ವಿಶ್ವರೂಪದಿಂದ ಧಾರಣಮಾಡಿ, ಸಮಸ್ತ ಜಗತ್ತನ್ನೂ ತನ್ನ ಕರುಣಾತಿಶಯದಿಂದ ಪರಿಪಾಲನೆ ಮಾಡುತ್ತಿರುವನು. ಸ್ಥಾವರ ಜಂಗಮಾತ್ಮಕವಾದ ಈ ಪ್ರಪಂಚದಲ್ಲಿರುವ ಸಮಸ್ತ ಪದಾರ್ಥಗಳಲ್ಲಿ ಒಳಗೂ, ಹೊರಗೂ, ಸುತ್ತಮುತ್ತಲೂ ಸರ್ವತ್ರ ವ್ಯಾಪ್ತನಾಗಿದ್ದಾನೆ. ಜಗದ್ವ್ಯಾಪಕನಾದ ಅವನ ಮಹಿಮೆ ಆಕಾಶದಂತೆ ಸರ್ವತ್ರ ವ್ಯಾಪ್ತ. ದೃಷ್ಟಾಂತಕ್ಕೆ ಒಂದು ಘಟವನ್ನು ಪರಿಶೀಲಿಸೋಣ. ಖಾಲಿ ಕೊಡದಲ್ಲಿ ಒಳಗೆ ಅವಕಾಶಪ್ರದವಾದ ಪ್ರದೇಶವಿದೆ. ಇದೇ ಆಕಾಶವು. ಕೊಡದ ಹೊರಗೆ ಸುತ್ತಲೂ ವ್ಯಾಪಿಸಿದೆ. ಅಂತೆಯೇ ಬಾಂದಳದಂತೆ ಶ್ರೀಪರಮಾತ್ಮನು ಸರ್ವತ್ರ ವ್ಯಾಪ್ತನು. ಆಯಾಯಾ ವಸ್ತುಗಳಲ್ಲಿ ವ್ಯಾಪ್ತನಾಗಿದ್ದು, ಆಯಾಯಾ ಪದಾರ್ಥಗಳ ಹೆಸರುಗಳಿಂದಲೇ ಕರೆಯಿಸಿಕೊಳ್ಳುತ್ತಾನೆ. ಸರ್ವಶಬ್ದ ವರ್ಣ ಸ್ವರವಾಚ್ಯನಾದ ಶ್ರೀ ಪರಮಾತ್ಮನು ತನ್ನಾಮಕನಾಗಿ, ತದ್ವಾಚ್ಯನಾಗಿ, ವಿರಾಜಮಾನನಾಗಿದ್ದಾನೆ. ಶ್ರೀ ಪರಮಾತ್ಮನು ವ್ಯಾಪ್ತನಾಗಿರುವ ಅಧಿಷ್ಠಾನಗಳು (ಜಡ ಮತ್ತು ಜೀವನವರ್ಗ) ಅಲ್ಪಶಕ್ತಿ, ಅಲ್ಪಾನಂದ, ಅಲ್ಪಜ್ಞಾನವುಳ್ಳವಾಗಿದ್ದರೂ, ತದ್ಗತ ಶ್ರೀ ಪರಮಾತ್ಮನು ಮಾತ್ರ ತದ್ಭಿನ್ನನಾಗಿ ವಿಲಕ್ಷಣ ಶಕ್ತಿ ಸಾಮರ್ಥ್ಯಗಳಿಂದ ಪೂರ್ಣಾನಂದಜ್ಞಾನಸ್ವರೂಪನಾಗಿದ್ದಾನೆ, ಜಗದ್ವ್ಯಾಪಕನಾಗಿದ್ದರೂ, ನಿರ್ಲೇಪನು, ತನ್ನ ವ್ಯಾಪ್ತಿ ಗುಣವಿಶೇಷದಿಂದ ಆತನ

ಜ್ಞಾನಾನಂದಾದಿಗಳಿಗೆ ಕುಂದಿಲ್ಲ. ನಿತ್ಯಾನಂದ ಉದ್ರಿಕ್ತ ವಸ್ತು ಆತ. ಪ್ರತಿ ಅಂಶ ಮತ್ತು ವಿಷಯದಲ್ಲಿ ಪರಿಪೂರ್ಣನು, ಏತಾದೃಶಮಹಿಮಾನ್ವಿತನಾದ ಜ್ಞಾನಾನಂದಸ್ವರೂಪಿಯು ಆಯಾಯಾ ಪದಾರ್ಥಗಳ ಸ್ವಭಾವ, ಚೇತನರ ಸ್ವರೂಪಯೋಗ್ಯತೆ, ಅನಾದಿ ಕರ್ಮಪ್ರವಾಹ ಇವುಗಳಿಗನುಗುಣವಾಗಿ, ಅವುಗಳಲ್ಲಿ ತಾನು ಅಂತರ್ಯಾಮಿತ್ವೇನ ನಿಂತು. ನಿಯಾಮಕನಾಗಿ, ನಾನಾ ಪ್ರಕಾರವಾಗಿ ಕ್ರೀಡೆಗಳನ್ನು ತಾನು ಮಾಡಿ (ಬಿಂಬಕ್ರಿಯಾದ್ವಾರಾ) ತನ್ನ ಸ್ವಾಖ್ಯರಸವಿಶೇಷಗಳಾದ ಭಗವದ್ರೂಪಗಳಲ್ಲಿ ರಮಿಸಿ, ತದ್ವಾರಾ ಜೀವರ ನ್ನಾಡಿಸುವನು. ಬಿಂಬದಿಂದ ಪ್ರತಿಬಿಂಬದ ಕ್ರಿಯೆ. ಶ್ರೀ ಪರಮಾತ್ಮನು ಒಂದು ಕ್ರೀಡೆಯನ್ನು ತಾನು ಮಾಡಿದರೇ, ಪ್ರತಿಬಿಂಬರಾದ ಜೀವರು ಅದ ರಂತೆ ಮಾಡುವರು. ಶ್ರೀ ಪರಮಾತ್ಮನು ಸರ್ವತಂತ್ರ ಸ್ವತಂತ್ರನು. ಜೀವರು ಪರಾಧೀನ ಕರ್ತೃತ್ವವುಳ್ಳವರು. ಅವರ ಕರ್ತೃತ್ವ ಭಗವಧೀನ ವಾದದ್ದು. ಇಂತಹ ಪರಮ ಮಹಿಮೋಪೇತನಾದ ಜಗದುದರನಾದ ಪೂರ್ಣಾನಂದಜ್ಞಾನಸ್ವರೂಪಿಗೆ ಅನಂತಾನಂತ ನಮಸ್ಕಾರಗಳು ॥೩೧॥

## ಪದ್ಯ (೩೨)

ಮೂಲ :—

ಎಲ್ಲರೊಳು ತಾನಿಪ್ಪ ತನ್ನೊಳ ।
ಗೆಲ್ಲರನು ಧರಿಸಿಹನು ಅಪ್ರತಿ ।
ಮಲ್ಲ ಮನ್ಮಥಜನಕ ಜಗದಾದ್ಯಂತ ಮಧ್ಯಗಳ ॥
ಬಲ್ಲ ಬಹುಗುಣಭರಿತ ದಾನವ ।
ದಲ್ಲಣ ಜಗನ್ನಾಥವಿಠ್ಠಲ ।
ಸೊಲ್ಲಲಾಲಿಸಿ ಸ್ತಂಭದಿಂದಲಿ ಬಂದ ಭಕುತನಿಗೆ ॥ ॥೩೨॥

**ಅವತರಣಿಕೆ :—**

ಸಮಸ್ತ ಚೇತನವರ್ಗದಲ್ಲಿ ತಾನು ಅಂತರ್ಗತನಾಗಿದ್ದು. ಸಕಲ ಜಗತ್ತನ್ನು ತನ್ನ ಉದರವಲ್ಲಿ ಧರಿಸಿರುವ ಅಸದೃಶಮಹಿಮನಾದ ರತಿಪತಿಪಿತನು ತನ್ನಿಂದ ಸೃಷ್ಟವಾದ ಜಗತ್ತಿನ ಆದಿ, ಮಧ್ಯ ಮತ್ತು ಅಂತಗಳನ್ನು ಬಲ್ಲವನು. ಅನಂತಕಲ್ಯಾಣಗುಣಾಕರನು. ಅಂತಹ ಭಕ್ತಪರಾಧೀನನಾದ ಸರ್ವತ್ರ ವ್ಯಾಪ್ತ ಶ್ರೀ ಪರಮಾತ್ಮನು ಪ್ರಹ್ಲಾದವರದನಾಗಿ ಸ್ತಂಭವನ್ನು ಸೀಳಿಕೊಂಡು ಬಂದು ದುಷ್ಟನಾದ ಹಿರಣ್ಯಕಶಿಪುವನ್ನು ಸಂಹರಿಸಿ, ಬಾಲಕ ಪ್ರಹ್ಲಾದನನ್ನು ಸಲಹಿದನೆಂದು, ಶ್ರೀ ಪರಮಾತ್ಮನ ಸರ್ವತ್ರ ವ್ಯಾಪ್ತರೂಪವಾದ ಭಗವನ್ಮಹಿಮಾ ವಿಶೇಷಗಳನ್ನು ಈ ಕೊನೆಯ ಪದ್ಯದಿಂದ ಉಪಸಂಹಾರ ಮಾಡುತ್ತಾ, ತೃತೀಯ ಸಂಧ್ಯಾತ್ಮಕವಾದ "ವ್ಯಾಪ್ತಿಸಂಧಿ"ಯನ್ನು ಮುಕ್ತಾಯಗೊಳಿಸುತ್ತಾರೆ. ॥೩೨॥

**ಪ್ರತಿಪದಾರ್ಥ :—**

**ಎಲ್ಲರೊಳು** = ಸಮಸ್ತ ಜೀವರಾಶಿಗಳಲ್ಲಿ **ತಾನಿಪ್ಪ** = ಶ್ರೀಪರಮಾತ್ಮನು ಬಿಂಬರೂಪಿಯಾಗಿ ಎಡಬಿಡದೆ ಇದ್ದಾನೆ. **ತನ್ನೊಳಗೆ** = ತನ್ನ ಉದರದಲ್ಲಿ **ಎಲ್ಲರನು** = ಮುಕ್ತಾಮುಕ್ತ ಹಾಗೂ ಅಸೃಜ್ಯರಾಶಿಯಲ್ಲಿರುವ ಸಕಲ ಪ್ರಾಣಿಗಳನ್ನೂ **ಧರಿಸಿಹನು** = ಧಾರಣೆ ಮಾಡಿದ್ದಾನೆ (ಆಶ್ರಯದಾತನಾಗಿ) **ಅಪ್ರತಿಮಲ್ಲ** = ಏತಾದೃಶಮಹಿಮಾ ಸಂಪನ್ನನಾದ ಶ್ರೀ ಪರಮಾತ್ಮನು ಅಸದೃಶವಾದ ಸ್ವಸಾಮರ್ಥ್ಯದಿಂದಯುಕ್ತನಾದವನಾಗಿ ಜಗದೇಕಶೂರನಿದ್ದಾನೆ. **ಮನ್ಮಥಜನಕ** = ಮನ್ಮಥನ ತಂದೆಯಾದ (ರುದ್ರದೇವರಿಂದ ಭಸ್ಮನಾದ ಅನಂಗನೆಂದು ಪ್ರಸಿದ್ಧನಾದ ಮನ್ಮಥನನ್ನು ಕೃಷ್ಣಾವತಾರಕಾಲದಲ್ಲಿ (1) ಜಾಂಬುವತಿಯಿಂದ ಸಾಂಬನಾಗಿ ಪುತ್ರತ್ವೇನ ಪಡೆದನು) **ಜಗದ** = ಪ್ರಸಕ್ತ ಜಗತ್ತಿನ ಹಾಗೂ ಅನಂತಾನಂತ ಬ್ರಹ್ಮಾಂಡಗಳ **ಆದಿ** = ಸೃಷ್ಟಿ **ಮಧ್ಯ** = ಸ್ಥಿತಿಕಾಲ **ಅಂತ್ಯಗಳ** = ಪ್ರಳಯರೂಪವಾದ ಲಯ ಇತ್ಯಾದಿ ಸಮಸ್ತ ವಿಷಯಗಳನ್ನೂ **ಬಲ್ಲ** = ತಿಳಿದಿರುವವನು (ಸಷ್ಟ್ಯಾದ್ಯಷ್ಟಕರ್ತೃತ್ವ ಪ್ರಭು)

**ಬಹುಗುಣಭರಿತ**= ಅಪರಿಚ್ಛಿನ್ನವಾದ ಅನಂತಾನಂತ ಕಲ್ಯಾಣಗುಣಗಣಧಾಮ ನಾದ (ಗುಣಪರಿಪೂರ್ಣನಾದ) **ದಾನವದಲ್ಲಣ**= ದೈತ್ಯರ ಸಂಹಾರಕನಾದ (ದಾನವರ ಪಾಲಿಗೆ ಅತಿಭಯಂಕರನು) **ಜಗನ್ನಾಥವಿಠ್ಠಲ**= ಸರ್ವಜಗ ತ್ತಿಗೂ ಸ್ವಾಮಿಯಾದ ಶ್ರೀ ದಾಸರಾಯರ ಅಂಕಿತನಾಮಕನಾದ ಶ್ರೀ ಜಗ ನ್ನಾಥವಿಠ್ಠಲಾತ್ಮಕ ಪರಮಾತ್ಮನು **ಸೊಲ್ಲ ಲಾಲಿಸಿ** = ಸ್ವಭಕ್ತನಾದ ಪ್ರಹ್ಲಾದ ರಾಜರ ಪ್ರಾರ್ಥನೆಯನ್ನು ಕೇಳಿದವನಾಗಿ **ಭಕುತನಿಗೆ**= ಸ್ವಭಕ್ತನಾದ ಪ್ರಹ್ಲಾದರಾಜರನ್ನು ಉದ್ಧಾರಮಾಡುವುದಕ್ಕೋಸ್ಕರ **ಸ್ತಂಭದಿಂದಲಿ ಬಂದ**= ರಾಜಸಭಾಭವನದಲ್ಲಿದ್ದ ಕಂಭವನ್ನೇ ಸೀಳಿಕೊಂಡು ನರಸಿಂಹರೂಪ ದಿಂದ ಪ್ರತ್ಯಕ್ಷನಾದನು ॥೩೧॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಶ್ರೀ ಪರಮಾತ್ಮನಾದ ತಾನು ರಮಾಸಮೇತನಾಗಿ ಸಮಸ್ತ ಪ್ರಾಣಿಗಳ ಸ್ವರೂಪದಲ್ಲೀನು, ಹಾಗೆ ಸ್ಥೂಲದೇಹದಲ್ಲಿ ತತ್ವದೇವತಾ ಸಹಿತನಾಗಿರು ವನು. ಪ್ರಳಯಕಾಲದಲ್ಲಿ ಮುಕ್ತಾಮುಕ್ತ ಸಕಲ ಪ್ರಾಣಿಗಳ ತನ್ನ ಉದರ ದಲ್ಲಿ ಧರಿಸಿದವನಾಗಿ, ಲಕ್ಷ್ಮ್ಯಾತ್ಮಕ ಉದಕದಲ್ಲಿ ಭೂದೇವಿಯರೆಂಬ ವಟಪತ್ರ ದಲ್ಲಿ, ದುರ್ಗಾದೇವಿಯರೆಂಬ ಅಂಧಕಾರದಲ್ಲಿ, ಸೃಷ್ಟಿಕಾಲ ಪ್ರಾಪ್ತವಾಗೋ ವರೆವಿಗೂ ಮಲಗಿರತಾನೆ. ಆಗ್ಗೆ ರಮಾಸಮೇತ ತಾನೊಬ್ಬನೇ ಹೊರತು ಇತರರಾದವರು ಯಾರೂ ಇಲ್ಲ. ಈ ಪ್ರಕಾರ. ರಮಾದೇವಿಯರು ಸಮ ಳಾದ ಕಾಲಕ್ಕೂ ಗುಣತಃ ಅಸಮಳಾದಪ್ರಯುಕ್ತ ಇಂಥಾ ರಮಾದೇವಿಯ ರಿಗೂ ಅಸದೃಶನಾಗಿ (ಅಪ್ರತಿಮಲ್ಲ) ಸ್ವಸಾಮರ್ಥ್ಯದಿಂದ ಯುಕ್ತನಾಗಿ ಇರುವನು, ಇನ್ನು ಮಹರುದ್ರದೇವರಿಂದ ಭಸ್ಮನಾದ, ಅನಂಗನಾದ ಮನ್ಮಥ ನನ್ನು, ಕೃಷ್ಣಾವತಾರದಲ್ಲಿ ಸಾಂಬನಾಗಿ ಪುತ್ರತ್ವೇನ ಪಡೆದು ಮನ್ಮಥ ಜನಕ ನೆಂದೆನಿಸಿವ. ಲಾವಣ್ಯಾದಿಗಳಿಗೆ ಮನ್ಮಥಗೆ ಜನಕಸ್ಥಾನಾಪನ್ನನಾದವನಾಗಿ

ಲಾವಣ್ಯವನ್ನುಂಟುಮಾಡಿದವ. ಅನೇಕ ಬ್ರಹ್ಮಾಂಡಗಳ ಸೃಷ್ಟ್ಯಾದಿ ಅಷ್ಟ ಕರ್ತೃತ್ವದ ಆದ್ಯಂತಮಧ್ಯಗಳ ತಿಳಿದವ. ಅಪರಿಚ್ಛಿನ್ನವಾದ, ಬಹಳ ವಾದ ಕಲ್ಯಾಣಗುಣಗಳಿಂದ ಪೂರ್ಣನಾದವ (ಬಹುಗುಣಭರಿತ) ಇನ್ನೊಂದು ಪ್ರಕಾರ ದೃಷ್ಟಾಂತ:— ಒಂದು ಬೀಜವನ್ನು ವೃಕ್ಷವನ್ನಾಗಿ ಮಾಡಿದರೆ, ಅದರಿಂದ ಅಸಂಖ್ಯಾತವಾದ ಬೀಜಗಳು ಆದಂತೆ, ಆ ವೃಕ್ಷದ ಬೀಜದ ಗುಣ ಗಳು ಹ್ಯಾಗೆ ಅನವಸ್ಥವೋ, ಅದರಂತೆ ಒಂದರೊಳಗೆ ಒಂದು, ಅದರೊಳಗೆ ಅನಂತಾನಂತರೂಪಗಳು, ಗುಣಗಳು ಇದ್ದಂತೆ, ಈ ಪ್ರಕಾರ ಬಹುರೂಪ ಗುಣಗಳಿಂದ ಭರಿತನಾಗಿ ಇರೋವನಾಗಿದ್ದಾನೆ. ಭಕ್ತರ ಕಾರ್ಯಗಳಿಗೆ ವಿರೋಧಿಗಳಾದ ದೈತ್ಯರ ಸಂಹಾರಮಾಡಿದವ. ಸರ್ವಜಗತ್ತಿಗೂ ಸ್ವಾಮಿ ಯಾದವ (ಜಗನ್ನಾಥವಿಠ್ಠಲ) ವಿಠ್ಠಲರೂಪಿಯಾದ ಶ್ರೀ ನರಸಿಂಹದೇವರು ಭಕ್ತನಾದ ಪ್ರಹ್ಲಾದನ ಪ್ರಾರ್ಥನೆ ಕೇಳಿದವನಾಗಿ (ಸೊಲ್ಲಲಾಲಿಸಿ), ಸಭಾದ ದಲ್ಲಿ ಕಂಭವನ್ನು ಭೇದಿಸಿಕೊಂಡು ಬರೋವನಾಗಿ, ತನ್ನ ಭಕ್ತನಾದ ಪ್ರಹ್ಲಾದನನ್ನು ಉದ್ಧಾರಮಾಡೋವನಾಗಿದ್ದಾನೆ. ಶ್ರೀ ನರಸಿಂಹದೇವರ ದೃಷ್ಟಾಂತ ಯಾಕೆ ಹೇಳಬೇಕೆಂದರೆ ಪ್ರಮಾಣ :—

**✓"ಸತ್ಯಂ ವಿಧಾತುಂ ನಿಜಭೃತ್ಯಭಾಷಿತಂ । ವ್ಯಾಪ್ತಿಂಚ ಭೂತೇಷ್ವ ಖಿಲೇಷು ಚಾತ್ಮನಃ ॥ ಅದೃಶ್ಯತಾತ್ಯದ್ಭುತರೂಪಮುದ್ವಹನ್ ಸ್ತಂಭೇ ಸಭಾಯಾಂ ನ ಮೃಗಂ ನ ಮಾನುಷಮ್"**

**—ಎಂತ ಭಾಗವತ ಸಪ್ತಮಸ್ಕಂಧ ವಚನರೀತ್ಯಾ ವ್ಯಾಪ್ತತ್ವ** ಶ್ರೀಹರಿಗೆ ಹೇಳಿ, ಶ್ರೀನರಸಿಂಹದೇವರ ದೃಷ್ಟಾಂತ ಹೇಳೋವರಾಗಿ ದ್ದಾರೆ. ॥೩೨॥

**॥ ಇತಿ ಶ್ರೀಮತ್ಸತ್ಯಪರಾಯಣತೀರ್ಥ ಕರಕಮಲಸಂಜಾತ ಶ್ರೀಮತ್ಸಂಕರ್ಷಣತೀರ್ಥ ವಿರಚಿತಾಯಾಂ ಶ್ರೀಮದ್ಧರಿಕಥಾಮೃತ ಸಾರ ಕನ್ನಡ ಭಾಷಾ ಟೀಕಾಯಾಂ ವ್ಯಾಪ್ತಿಸಂಧಿ ವ್ಯಾಖ್ಯಾನಂ ಸಂಪೂರ್ಣಮ್ ॥**

॥ ಶ್ರೀ ಕೃಷ್ಣಾರ್ಪಣಮಸ್ತು ॥

## (೨) ಶ್ರೀ ಜಮಖಂಡಿವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತಮೂಲ) :—

ಉಪಸಂಹಾರೇತಿ—ಎಲ್ಲೇತಿ ॥ ಸರ್ವಭೂತೇಷುಚಾತ್ಮನಿ ಇತ್ಯುಕ್ತೇಃ ॥ ಸೊಲ್ಲು = ವಾಕ್ ॥೩೨॥

ಇತಿ ಟೀಕಾಯಾಂ ವ್ಯಾಪ್ತಿಸಂಧಿಃ ಸಮಾಪ್ತಃ

**ಕನ್ನಡಾರ್ಥ :—**

ಪ್ರಸಕ್ತ ಸಂಧಿಯನ್ನು ಉಪಸಂಹಾರ ಮಾಡುತ್ತಾರೆ— "ಎಲ್ಲರೊಳು" —ಎಂಬ ಪದ್ಯದಿಂದ.

ಸರ್ವ ವಸ್ತುಗಳಲ್ಲಿ ಹರಿಯು ವ್ಯಾಪ್ತರೂಪದಿಂದ ಇದ್ದಾನೆ. ಹರಿಯಲ್ಲಿಯೇ ಸಕಲ ವಸ್ತುಗಳೂ ಇವೆ. ಇದರಿಂದ "ಎಲ್ಲರೊಳು ತಾನಿಪ್ಪ, ತನ್ನೊಳಗೆಲ್ಲರನು ಧರಿಸಿಹನು" ಎಂಬ ವಾಕ್ಯಪ್ರಯೋಗವು ಅತ್ಯಂತ ಸೂಕ್ತವಾಗಿದೆ. ಸೊಲ್ಲು = ನುಡಿ (ಮಾತು) ॥೩೨॥

**॥ ಇತಿ ಶ್ರೀಮದ್ಧರಿಕಥಾಮೃತ ಟೀಕಾ ವ್ಯಾಸದಾಸ ಸಿದ್ಧಾಂತ ಕೌಮುದೀ ಗ್ರಂಥದ ಅನುವಾದದಲ್ಲಿ "ವ್ಯಾಪ್ತಿಸಂಧಿ"ಯು ಮುಗಿಯಿತು ॥**

॥ ಶ್ರೀ ಕೃಷ್ಣಾರ್ಪಣಮಸ್ತು ॥

## (೩) "ಭಾವದರ್ಪಣ ಟೀಕಾ"—ವ್ಯಾಖ್ಯಾನ :—

"ಎಲ್ಲರೊಳು ತಾನಿಪ್ಪ ತನ್ನೊಳಗೆಲ್ಲರನು" —ಎಂದು ದಾಸರಾಯರು ಈ ಸಂಧಿಯ ಕಡೆಯ ಪದ್ಯದಲ್ಲಿ ಹೇಳಿರುವರು. ಇದರಿಂದ ಶ್ರೀಪರಮಾತ್ಮನನ್ನು ಉಪಾಸನೆ ಮಾಡಿ ಗತಿಯನ್ನು ಹೊಂದುವವರು ಅಂತ್ಯಕಾಲದಲ್ಲಿ ಹೀಗೆ

ಉಪಾಸನೆ ಮಾಡಿಯೇ ಸದ್ಗತಿಯನ್ನು ಹೊಂದಬೇಕೆಂದು ಸೂಚಿಸುವುದಕ್ಕಾಗಿ ಈ ಪದ್ಯದಲ್ಲಿ ಹೀಗೆ ಹೇಳಿರುವರು, ಭಾಗವತ ತೃತೀಯಸ್ಕಂಧದಲ್ಲಿ ಕರ್ದಮರು ಅವಸಾನಕಾಲದಲ್ಲಿ ಧ್ಯಾನಮಾಡಿದ ಪ್ರಕರಣದಲ್ಲಿ—

**"ಆತ್ಮಾನಂ ಸರ್ವಭೂತೇಷು ಭಗವಂತಮವಸ್ಥಿತಂ । ಅಪಶ್ಯತ್ಸರ್ವಭೂತಾನಿ ಭಗವತ್ಯಪಿಚಾತ್ಮನಿ॥ ವಾಸುದೇವೇ ಭಗವತಿ ಸರ್ವಜ್ಞೇ ಪ್ರತ್ಯಗಾತ್ಮನಿ ಪರೇಣ ಭಕ್ತಿಭಾವೇನ ಲಬ್ಧಾತ್ಮಾ ಮುಕ್ತಬಂಧನಃ ॥ ಇಚ್ಛಾದ್ವೇಷ ವಿಹೀನೇನ ಸರ್ವತ್ರ ಸಮಚೇತಸಾ । ಭಗವದ್ಭಕ್ತಿಯೋಗೇನ ಪ್ರಾಪ್ತೋ ಭಾಗವತೀಂ ಗತಿಮ್ ॥"**

ಸರ್ವಪ್ರಾಣಿಗಳಲ್ಲಿ ಶ್ರೀಪರಮಾತ್ಮನು ವಾಸವಾಗಿರುವುದನ್ನೂ ಮತ್ತು ಸರ್ವಪ್ರಾಣಿಗಳಿಗೂ ಪರಮಾತ್ಮನಲ್ಲಿ ಇರುವಿಕೆಯನ್ನೂ, ಆ ಪರಮಾತ್ಮನು ತಮ್ಮೊಳಗಿರುವುದನ್ನೂ ಧ್ಯಾನಯೋಗದಿಂದ ತಿಳಿದರು. ಹೀಗೆ ಸರ್ವಜ್ಞನಾದ ತಮ್ಮ ಜೀವನಿಂದ ಭಿನ್ನನಾದ, ತಮ್ಮೊಳಗೆ ವಾಸಮಾಡಿಕೊಂಡಿರುವ ವಾಸುದೇವನಾಮಕ ಶ್ರೀಪರಮಾತ್ಮನಲ್ಲಿ ಉತ್ಕೃಷ್ಟವಾದ ಭಕ್ತಿಭಾವದಿಂದ ಭಗವತ್ಸ್ವರೂಪವನ್ನು ತಿಳಿದು, ಬಂಧಮುಕ್ತರಾಗಿ. ಇಚ್ಛಾ ದ್ವೇಷಾದಿಗಳನ್ನು ಬಿಟ್ಟು ಸರ್ವತ್ರವ್ಯಾಪ್ತನಾದ ಭಗವಂತನ ರೂಪಗಳಲ್ಲಿ ಸಮಬುದ್ಧಿಯನ್ನು ಇಟ್ಟು, ಭಗವಂತನ ಭಕ್ತಿಯೋಗದಿಂದ ಪರಮಾತ್ಮನ ಲೋಕವನ್ನು ಹೊಂದಿದರು —ಎಂದು ಹೇಳಿರುವರು. ಆದುದರಿಂದ ಪರಮಾತ್ಮನನ್ನು ಎಲ್ಲರಲ್ಲಿಯೂ, ಪರಮಾತ್ಮನೊಳಗೆ ಸರ್ವರನ್ನೂ, ಆ ಪರಮಾತ್ಮನನ್ನು ತಮ್ಮೊಳಗೂ ತಿಳಿಯಬೇಕೆಂದು ಈ ಪದ್ಯದಿಂದ ಹೇಳಿರುವರು.

ಸಮರಹಿತಶೂರನೂ, ಮನ್ಮಥನ ತಂದೆಯೂ ಆಗಿ, ಈ ಜಗತ್ತಿನಲ್ಲಿ ಆದಿ. ಅಂತ್ಯ, ಮಧ್ಯ ಹೀಗೆ ಎಲ್ಲಾ ಪ್ರದೇಶದಲ್ಲಿಯೂ ಇರತಕ್ಕವನಾಗಿ, ಆದಿ ಮಧ್ಯ ಅಂತ್ಯ ಮೊದಲಾದ ಎಲ್ಲಾ ಕಾಲವನ್ನೂ ಚೆನ್ನಾಗಿ ತಿಳಿದವನೂ ಅಗಿ ಮತ್ತು

**"ಎನ್ನಪಶ್ಯಂತಿ ಪಶ್ಯಂತಂ ಚಕ್ಷುರ್ಯಸ್ಯನರಿಷ್ಯತಿ ||  ತಂ ಭೂತ ನಿಲಯಂ ದೇವಂ ಸುಪರ್ಣಮುಪಧಾವತ||"–ಎಂಬ ಭಾಗವತ ವಾಕ್ಯಾನು ಸಾರ** ಜಗತ್ತೆಲ್ಲವನ್ನೂ, ಅನೇಕ ಸೂರ್ಯರನ್ನೂ ಸಹ ಒಂದೇ ಕಾಲದಲ್ಲಿ ಶ್ರೀಪರಮಾತ್ಮನು ನೋಡುತ್ತಿದ್ದರೂ, ಪರಮಾತ್ಮನ ನೇತ್ರವು ಕುಂದಲಾರದು. ಇತರರು ಒಬ್ಬ ಸೂರ್ಯನನ್ನು ನೋಡಲು ಕಣ್ಣು ಮುಚ್ಚಿ ಹೋಗುವುದು. ಸೂರ್ಯನು ಪರಮಾತ್ಮನನ್ನು ನೋಡಬೇಕಾದರೂ ಅವನಿಗೆ ಕಣ್ಣು ಮುಚ್ಚಿ ಹೋಗುವುದು. ಪರಮಾತ್ಮನು ಇಂತಹ ಅನೇಕ ಕೋಟಿ ಸೂರ್ಯಪ್ರಕಾಶ ನಾಗಿರುವನೆಂದು ಭಾವವು. ಅಲ್ಲದೆ ಅನಂತಗುಣಪೂರ್ಣನೂ, ದಾನವ ಸಂಹಾರಕನೂ ಆಗಿರುವನು. ದಾಸರಾಯರ ಉಪಾಸ್ಯಮೂರ್ತಿಯು ನಾರ ಸಿಂಹದೇವರಾದುದರಿಂದ ಸಂಧಿಯ ಕಡೆಯ ಪದ್ಯದಲ್ಲಿ ನಾರಸಿಂಹನನ್ನೇ ಕೊಂಡಾಡುತ್ತಾರೆ. ತಮ್ಮ ಬಿಂಬಮೂರುತಿಯಾದ ಜಗನ್ನಾಥವಿಠ್ಠಲನು, ತನ್ನ ಭಕ್ತನಾದ ಪ್ರಹ್ಲಾದನು ಹಿರಣ್ಯಕಶಿಪುವಿನ ಪ್ರಶ್ನೆಗೆ ಉತ್ತರರೂಪಾಗಿ ಹೇಳಿದ ವಾಕ್ಯ:— **"ಕ್ವಾ ಸೌ ಯದಿ ಸರ್ವತ್ರ ಕಸ್ಮಾತ್ಸ್ತಂಭೇನ ದೃಶ್ಯತೇ ?"** —ಎಂದರೆ— "ನನಗಿಂತಲೂ ಈಶ್ವರನಿರುವನೆಂದು ಹೇಳು ತ್ತಿರುವಿಯಲ್ಲ ? ಅವನೆಲ್ಲಿರುವನು ? ಈ ಸ್ತಂಭದಲ್ಲಿ ಕಾಣಿಸುವುದಿಲ್ಲ ವೇಕೆ?" —ಎಂದು ಹಿರಣ್ಯಕಶಿಪು ಪ್ರಶ್ನಿಸಿರಲಾಗಿ, ಪ್ರಹ್ಲಾದನು ಅವನು ಸರ್ವತ್ರ ವ್ಯಾಪ್ತನೆಂದನು. ಹಿರಣ್ಯಕಶಿಪು :—"ಹಾಗೆ ಎಲ್ಲಾ ಕಡೆಯಲ್ಲಿಯೂ ಇರುವುದಾದರೆ, ಈ ಸ್ತಂಭದಲ್ಲಿ ಏಕೆ ಇಲ್ಲ ? ಪ್ರಹ್ಲಾದ :– "ಎಲೈ ಸ್ತಂಭನೇ ! (ಅಂದರೆ ಜಡದ ಅರಸನೆ ಎಂದರ್ಥ) ನೀನು ಜಡದಂತಿರುವೆ. ಏಕೆಂದರೆ, ಸರ್ವತ್ರ ಇದ್ದಾನೆಂದು ಹೇಳಿದ ಮೇಲೆ, ಸ್ತಂಭವೂ ಅದರಲ್ಲಿ ಸೇರಿಕೊಂಡಿರಲು, ಸ್ತಂಭದಲ್ಲಿ ಏಕಿಲ್ಲವೆಂದು ಕೇಳಿದುದೇ ಜಡತ್ವಕ್ಕೆ ಕಾರಣವು —ಎಂಬ ಅಭಿಪ್ರಾಯದಿಂದ "ಜಡೇಶ" —ಎಂದು ಸಂಬೋಧನೆ ಮಾಡಿ, ಅಲ್ಲಿಯೂ ಇದ್ದೇ ಇರುವನು ಎಂದನು.

ಹಿರಣ್ಯಕಶಿಪು :— ನಾನು ಈಗಲೇ ನಿನ್ನನ್ನು ಈ ಖಡ್ಗದಿಂದ ಸಂಹರಿ ಸುವೆನು. ಆ ಹರಿಯು ಇದ್ದುದ್ದೇ ನಿಜವಾದರೆ, ನಿನ್ನನ್ನು ರಕ್ಷಿಸಲಿ" ಎಂದು ಪ್ರಹ್ಲಾದನನ್ನು ಸಂಹರಿಸುವ ಉದ್ದೇಶದಿಂದ ಬರುತ್ತಿರಲು, **"ಸತ್ಯಂ**

**ವಿಧಾತುಂ ನಿಜಭೃತ್ಯ ಭಾಷಿತಂ"** –ಎಂಬಂತೆ, ನಿಜಭೃತ್ಯನಾದ ಪ್ರಹ್ಲಾದನ ವಾಕ್ಯವನ್ನು ಸತ್ಯ ಮಾಡುವುದಕ್ಕಾಗಿ ಸ್ತಂಭದಿಂದಲೇ ನರಸಿಂಹರೂಪದಿಂದ ಬಂದನು —ಎಂಬ **ಭಾಗವತವಾಕ್ಯ**ವನ್ನು ಇಲ್ಲಿ ಸೂಚಿಸಿರುವರು. ಇಂತಹ ಕರುಣಾಸಮುದ್ರನಾದ ಶ್ರೀ ಪರಮಾತ್ಮನನ್ನು ವಂದಿಸುವೆನೆಂದು ಭಾವವು.

ಈ ಸಂಧಿಯಲ್ಲಿ ಶ್ರೀ ಪರಮಾತ್ಮನ ವ್ಯಾಪ್ತಿಯನ್ನೇ ವರ್ಣಿಸಿರುವುದರಿಂದ ಈ ಕಡೆಯ ಪದ್ಯದಿಂದಲೂ ಆ ವ್ಯಾಪ್ತಿಯನ್ನೇ ಹೇಳಿ, ಭಗವನ್ಮಹಿಮೆಯನ್ನು ಕೊಂಡಾಡಿ, ಪ್ರಸಕ್ತ ಸಂಧಿಯನ್ನು ಉಪಸಂಹರಿಸುತ್ತಾರೆ. ॥೩೨॥

**॥ಇಂತು ಶ್ರೀ ಪದ್ಮನಾಭದಾಸರಿಂದ ವಿರಚಿತ "ಭಾವಪ್ರಕಾಶಿಕಾ" —ಎಂಬ ವ್ಯಾಖ್ಯಾನದಲ್ಲಿ ತೃತೀಯಸಂಧಿ "ವ್ಯಾಪ್ತಿಸಂಧಿ"ಯ ಟಿಪ್ಪಣಿ ಮುಗಿದುದು॥**

**(೪) "ಭಾವದರ್ಪಣ ಟೀಕಾ" —ವ್ಯಾಖ್ಯಾನ :—**

ಈಗ **"ತಸ್ಯೋದರಸ್ಯ ಜಗತಃ"** —ಎಂಬ ನಿರ್ಣಯಾನುಸಾರ ಸಮಸ್ತರನ್ನೂ ತಾನು ಧಾರಣಮಾಡಿಕೊಂಡಿದ್ದಾನೆಂತಲೂ **"ನಿವಿಷ್ಟೋ ಹೃದಯೇ ನಿತ್ಯಂ"** —ಎಂಬ **ಸೂತ್ರಭಾಷ್ಯಾನುಸಾರ** ಜೀವರ ಹೃದಯಾಕಾಶದಲ್ಲಿ ತಾನು ವ್ಯಾಪ್ತನೆಂತಲೂ ವಿವರಿಸಿ ಹೇಳುತ್ತಾರೆ. "ಎಲ್ಲರೊಳು" —ಎಂಬ ಪದ್ಯದಿಂದ.

ಏತಾದೃಶಹರಿ ದೈತ್ಯನಾಶಕ, ಭಕ್ತಪಾಲಕನೆಂದು ಹೇಳುತ್ತಾ ಸಂಧಿ ಉಪಸಂಹಾರಮಾಡುತ್ತಾರೆ

**"ಇತಿ ಶ್ರೀಮತ್ಕವಿ ಶ್ರೀ ಜಗನ್ನಾಥದಾಸ ಶ್ರೀಮದ್ಧರಿಕಥಾ "ಭಾವದರ್ಪಣ" ಕಮಲಾಪತಿದಾಸ ಹೃದ್ರತೇನ ಶ್ರೀಹರಿಗಾಕೃತಾಯಾಂ ವ್ಯಾಪ್ತಿಸಂಧಿ ಪರಿಯಮವಸಿತಃ ॥**

॥ ಶ್ರೀಕೃಷ್ಣಾರ್ಪಣಮಸ್ತು ॥

**(೫) "ಗುರುಹೃದಯಪ್ರಕಾಶಿಕೆ" —ವ್ಯಾಖ್ಯಾನ :—**

ವ್ಯಾಪ್ತಿಮಹಿಮೆಯನ್ನು ಅಧ್ಯಾಯದ ಕೊನೆಯಲ್ಲಿ ಸಂಗ್ರಹಿಸಿ ಹೇಳುತ್ತಾರೆ—"ಎಲ್ಲರೊಳು"—ಎಂದು.

ಸರ್ವರಲ್ಲಿ ತಾನು ವ್ಯಾಪ್ತನಾದಾಗ್ಯೂ, ದೇವರು ತನ್ನಲ್ಲಿ ಎಲ್ಲರನ್ನೂ ಧರಿಸಿಹನು. ಅಸದೃಶ ಪೌರುಷವುಳ್ಳವನು. ಮನ್ಮಥನ ತಂದೆಯು. ಬಹುಗುಣಪೂರ್ಣನು, ಜಗತ್ತಿನ ಆದ್ಯಂತಮಧ್ಯಕಾಲಗಳನ್ನರಿತವನು. ದೇವರು ವ್ಯಾಪ್ತನಾದರೆ ಕಾಣಿಸಲಿ, ಎಂದ ಅಸುರಗೆ ತಲ್ಲವೆಂಬ ಪ್ರಾಣ ಸಂಕಟವನ್ನು ಕೊಟ್ಟವನು, ಜಗನ್ನಾಥನಾದ ಜ್ಞಾನದ ಸ್ವಾಮಿ, ಪ್ರಹ್ಲಾದನ ವಾಕ್ಯಲಾಲಿಸಿ, ಭಕ್ತಗೋಸ್ಕರ ಸ್ತಂಭದಿಂದ ಬಂದದ್ದರಿಂದ ವ್ಯಾಪ್ತಿ ಜ್ಞಾನ ಪ್ರತ್ಯಕ್ಷವೆಂದಭಿಪ್ರಾಯ.

(೧) **"ವ್ಯಾಪ್ತಿಂಚ ಭೂತೇಷ್ವಖಿಲೇಷು ಚಾತ್ಮನಃ। ದರ್ಶಯನ್ ಅದೃಶ್ಯತಾತ್ಯದ್ಭುತರೂಪಮುದ್ವಹನ್ । ಸ್ತಂಭೇ ಸಭಾಯಾಂ ನಮೃಗಂ ನ ಮಾನುಷಮ್" ॥ —ಎಂಬ ಭಾಗವತಾರ್ಥ**

(೩) **"ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ತ ನಾರಾಯಣಸ್ಥಿತಃ"— ಎಂಬ ಶೃತ್ಯರ್ಥ**ವೂ ಸಹ ಇದರಿಂದ ವಿವರಿಸಲ್ಪಟ್ಟಿತು ॥೩೨॥

ಈ ವ್ಯಾಪ್ತಿಸಂಧಿಯಲ್ಲಿ **ಶ್ರೀ ಬ್ರಹ್ಮಸೂತ್ರದ ಸಮನ್ವಯಾಧ್ಯಾಯದಲ್ಲಿ "ಓಂ ಸರ್ವತ್ರ ಪ್ರಸಿದ್ಧೋಪದೇಶಾತ್ ಓಂ"**— ಎಂಬುದೇ ಮೊದಲಾದ ಸೂತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ಪರಮಾತ್ಮನ ಸರ್ವಗತತ್ವ ರೂಪ —ಎಂದರೆ, ಸರ್ವತ್ರದಲ್ಲೂ ನಾನೇ ನಿಂತು, ಅನಂತಾನಂತರೂಪಗಳಿಂದ ಕರ್ತೃತ್ವ ಭೋಕ್ತೃತ್ವ ನಿಯಂತ್ರತ್ವವೇ ಮೊದಲಾದ **"ಶ್ರೋತಾ ಮಂತಾ ದ್ರಷ್ಟಾ ದೇಷ್ಟಾ ವಿಜ್ಞಾತಾ ಸರ್ವೇಷಾಂ ಭೂತನಾಮಂತರ**

ಪುರಷಃ" ಎಂಬುದಾಗಿ ಐತರೇಯ ಉಪನಿಷತ್ತಿನ ಆರಣ್ಯಕದಲ್ಲಿ ವರ್ಣಿಸಲ್ಪಟ್ಟಿರುವ ಮಹಾಮಹಿಮೆಗಳನ್ನು ಬಹು ಉಪಮಾನಗಳ ಸಮೇತ ಅಧಿಕಾರಿಗಳಿಗೆ ಧ್ಯಾನಕ್ಕೆ ಅನುಕೂಲವಾಗುವಂತೆ ವರ್ಣಿಸಿದ್ದಾರೆ. ಪರಮಾತ್ಮನು ಯಾವ ವಿಧವಾದ ಪ್ರಯೋಜನವು ಇಲ್ಲದಿದ್ದರೂ ನಮಗೋಸ್ಕರ ಸರ್ವತ್ರ ಆಡುತ್ತಿದ್ದರೂ "ಪ್ರಕೃತಿಸ್ಥೋಽಪಿ ಪುರುಷಃ ನಾಜ್ಯತೇ ಪ್ರಾಕೃತೈರ್ಗುಣೈಃ" —ಎಂಬ ವಚನಾನುಸಾರ ಎಲ್ಲಿದ್ದರೂ ಪ್ರಕೃತಿ ಗುಣಬದ್ಧನಾಗದೆ ಆಕಾಶದಂತೆ ನಿರ್ಲಿಪ್ತನೆಂತ ವರ್ಣಿಸುತ್ತಾರೆ. ಅತ್ಯಾವಶ್ಯಕವಾಗಿ ಯೋಗ್ಯಜೀವರು ಸದಾ ಅನುಸಂಧಾನಕ್ಕೆ ತರಬೇಕಾದ ಬಹುಪ್ರಮೇಯಗಳು ಈ ಸಂಧಿಯಲ್ಲಿ ಅಡಗಿರುತ್ತವೆ, ॥೩೨॥

**॥ ಇಂತು "ಗುರುಹೃದಯಪ್ರಕಾಶಿಕಾ" —ಎಂಬ ವ್ಯಾಖ್ಯಾನ ಸಹಿತ ಶ್ರೀಮದ್ಧರಿಕಥಾಮೃತಸಾರದಲ್ಲಿ ಮೂರನೆಯ ಸಂಧಿ ಸಂಪೂರ್ಣಂ ॥**

॥ ಶ್ರೀ ಕೃಷ್ಣಾರ್ಪಣಮಸ್ತು ॥

**ಸರ್ವವ್ಯಾಖ್ಯಾನಸಾರಸಂಗ್ರಹ :—**

ಶ್ರೀ ಪರಮಾತ್ಮನು ವಿಚಿತ್ರ ಶಕ್ತಿಸಂಪನ್ನನು. ಬ್ರಹ್ಮಾಂಡಗತ ಸಮಸ್ತ ಚೇತನ ಹಾಗೂ ಅಚೇತನ ಪದಾರ್ಥಗಳಲ್ಲಿ ತಾನು ಪೂರ್ಣರೂಪದಿಂದ ವ್ಯಾಪ್ತನಾಗಿದ್ದಾನೆ. ಆತನಿಲ್ಲದ ಸ್ಥಳವಿಲ್ಲ. ಅಂತಹ ಜಗದ್ಭರಿತನಾದ ಪ್ರಭುವು ತನ್ನಲ್ಲಿ ಎಲ್ಲರನ್ನೂ ಧರಿಸಿದ್ದಾನೆ. ಮಹಾಪ್ರಳಯಕಾಲದಲ್ಲಿ

ಚತುರ್ವಿಂಶತಿ ತತ್ತ್ವಗಳಿಂದ ನಿರ್ಮಿತವಾದ ಈ ಬ್ರಹ್ಮಾಂಡವನ್ನು ಗುಣ ಸಾಮ್ಯದಿಂದ ಲಯಗೊಳಿಸಿ, ಆಯಾಯಾ ಗುಣಗಳನ್ನು ಮೂಲ ಅಂಶಳಗಲ್ಲಿ ಸೂಕ್ಷ್ಮರೂಪದಿಂದ ಅಂತರ್ಗತಗೊಳಿಸುತ್ತಾ, ಕೊನೆಯಲ್ಲಿ ತ್ರಿಗುಣಗಳು. ಅದಕ್ಕೆ ಮೂಲರೂಪವಾವ ಈ ಜಗದುಪಾದಾನಕಾರಣವಾದ ಪ್ರಕೃತಿಯಲ್ಲಿ ಲಯಗೊಳಿಸುವನು. ಲಿಂಗಭಂಗವನ್ನು ಹೊಂದಿ ಮುಕ್ತರಾದ ಜೀವವರ್ಗ ಮುಂದಿನ ಕಲ್ಪಗಳಲ್ಲಿ ಮುಕ್ತರಾಗಲಿರುವ ಜೀವರು, ಇತ್ಯಾದಿ ಸಮಗ್ರ ಜೀವವರ್ಗವನ್ನು ತನ್ನ ಉದರದಲ್ಲಿಟ್ಟುಕೊಂಡು, ಆಶ್ರಯದಾತನಾಗಿ ಜಗದುದರನಾಗಿದ್ದಾನೆ. ಇಂತು ಎಲ್ಲರಲ್ಲೂ ತಾನು ವ್ಯಾಪ್ತರೂಪದಿಂದ ಇದ್ದು, ಎಲ್ಲರನ್ನೂ ತನ್ನಲ್ಲಿ ಧಾರಣೆಮಾಡುವ ಜಗತ್ಸ್ವಾಮಿಯು ಸಮಾಭ್ಯಧಿಕಶೂನ್ಯನು. ಅಸದೃಶಶೂರನು. ಏತಾದೃಶಮಹಿಮಾಸಂಪನ್ನನಾದ ಅಪ್ರತಿಮಲ್ಲನಾದ ಶ್ರೀ ಪರಮಾತ್ಮನು ಜಗತ್ತನ್ನೇ ತನ್ನ ಲಾವಣ್ಯಾತಿಶಯು ದಿಂದ ಮೋಹಿಸುತ್ತಿರುವ ಮನ್ಮಥನ ತಂದೆಯು. ಶ್ರೀ ಮಹರುದ್ರದೇವರ ಫಾಲನೇತ್ರಾಗ್ನಿಯಿಂದ ಭಸ್ಮೀಭೂತನಾದ ಮನ್ಮಥನನ್ನು ಪರಮಾನುಗ್ರಹ ಮಾಡಿ, ಕೃಷ್ಣಾವತಾರದಲ್ಲಿ ಶ್ರೀ ಜಾಂಬುವತಿಯಿಂದ ಸಾಂಬನೆಂಬ ಹೆಸರಿನಿಂದ ಪುತ್ರತ್ವೇನ ಪಡೆದನು. ಅಂತೆಯೇ ಮನ್ಮಥಜನಕನು. ಪ್ರವಾಹತೋ ನಿತ್ಯವಾದ ಜಗತ್ತಿನ ಆದಿಕಾಲ (ಸೃಷ್ಟಿ), ಮಧ್ಯಕಾಲ (ಸ್ಥಿತಿ) ಮತ್ತು ಅಂತ್ಯಕಾಲ (ಲಯ) ಈ ಸರ್ವಕಾಲಗಳಲ್ಲಿಯೂ ತಾನು ಕಾಲನಿಯಾಮಕ ನಾಗಿದ್ದು, ಜಗತ್ತಿನ ಆದಿಮಧ್ಯಾಂತ ವಿಷಯಗಳನ್ನು ತಾನು ತಿಳಿದವನಾಗಿ, ಸರ್ವಜ್ಞನಾದ ಈಶನು ಈ ಜಗತ್ತಿನ ಸೃಷ್ಟ್ಯಾದಿ ವ್ಯಾಪಾರಗಳಿಗೆ ತಾನೇ ನಿಯಾಮಕನಾಗಿ, ಅಷ್ಟಕರ್ತೃವೆಂದು ವಿರಾಜಮಾನನಾಗಿದ್ದಾನೆ. ಜಗದಾದ್ಯಂತ ಮಧ್ಯಗಳೆ ಬಲ್ಲ ಶ್ರೀ ಪರಮಾತ್ಮನು ಅನಂತಾನಂತ ಗುಣಗಳಿಂದ ಪರಿಪೂರ್ಣನಾಗಿದ್ದಾನೆ. ಆತನ ಗುಣಸಮೂಹಗಳು ಅನಂತಾನಂತ, ಅಪಾರ, ಅಪರಿಚ್ಛಿನ್ನ ಮತ್ತು ನಿರವಧಿಕ. ಬಹುಗುಣಗಣಭರಿತನಾದ ಜಗತ್ಪ್ರಭುವು ದೈತ್ಯರ ಪಾಲಿಗೆ ಸಿಂಹಪ್ರಾಯನು. ದಾನವವರ್ಗವೇ ಆತನ ಹೆಸರನ್ನು ಕೇಳಿದರೆ, ಭಯದಿಂದ ತಲ್ಲಣಿಸಿ ನಡಗುವುದು. ಅಂತಹ ದಾನವದಲ್ಲಣನಾದ ಶ್ರೀ

ಪರಮಾತ್ಮನು ಸ್ವಭಕ್ತನಾದ ಪ್ರಹ್ಲಾದ ಬಾಲಕನ ಮಾತುಗಳನ್ನು ಲಾಲಿಸಿ, ಆತನ ಪ್ರಾರ್ಥನೆಗೆ ಓಗೊಟ್ಟು, ಸಭಾಮಧ್ಯದಲ್ಲಿದ್ದ ಮಹಾಸ್ತಂಭವನ್ನು ಸೀಳಿಕೊಂಡು, ನರಸಿಂಹರೂಪದಿಂದ ಜಿಗಿದು ಬಂದು, ದಾನವಶ್ರೇಷ್ಠನೂ, ಅತ್ಯಂತ ಕ್ರೂರಿಯೂ ಆಗಿದ್ದ ಹಿರಣ್ಯಕಶಿಪುವನ್ನು ತನ್ನ ತೊಡೆಯಮೇಲೆ ಹಾಕಿಕೊಂಡು, ವಜ್ರಸದೃಶವಾದ ತನ್ನ ನಖಾಗ್ರಗಳಿಂದ, ಮೃಗರಾಜನಾದ ಸಿಂಹವು ಆನೆಯ ಕುಂಭಸ್ಥಳವನ್ನು ಸೀಳುವಂತೆ, ವಿದಾರಣಗೈದು, ದಾನವ ನನ್ನು ಸಂಹರಿಸಿ, ದನುಜದಲ್ಲಣನೆಂದೆನಿಸಿದನು. "ಶ್ರೀಹರಿಯು ಇಲ್ಲದ ಸ್ಥಳವೇ ಇಲ್ಲ. ಈ ಜಗತ್ತಿನ ಎಲ್ಲಾ ಎಡೆಗಳಲ್ಲಿಯೂ ತುಂಬಿರುವನು."

ಎಂಬುದಾಗಿ ಶ್ರೀಪರಮಾತ್ಮನ ಸರ್ವತ್ರವ್ಯಾಪ್ತಿತ್ವವನ್ನು ತಂದೆಯನ್ನು ನಿಮಿತ್ತೀಕರಿಸಿಕೊಂಡು, ಸಮಗ್ರ ಜಗತ್ತಿಗೇ ಸಾರಿದ ಭಾಗವತೋತ್ತಮನಾದ ಪ್ರಹ್ಲಾದನ ಮಾತುಗಳನ್ನು ಸತ್ಯವೆಂದು ತೋರಿಸುವುದಕ್ಕೋಸ್ಕರ ಅಣು ರೇಣುತೃಣಕಾಷ್ಠಪರಿಪೂರ್ಣನಾದ ಜಗತ್ತಿಗೇ ಸ್ವಾಮಿಯಾದ ಶ್ರೀ ಜಗನ್ನಾಥವಿಠ್ಠಲನು ಸ್ತಂಭದಂತೆ ಜಡಮತಿಯಾಗಿದ್ದ ಹಿರಣ್ಯಕಶಿಪುವನ್ನು ಸಂಹರಿಸುವ ಸಲುವಾಗಿ, ದುಷ್ಟಶಿಕ್ಷಣ ಮತ್ತು ಶಿಷ್ಟಪರಿಪಾಲನಾ ಕಾರ್ಯದಲ್ಲಿ ದಕ್ಷನಾದ ಅಧೋಕ್ಷಜನು ತಕ್ಷಣವೇ ಸ್ತಂಭವನ್ನು ಸೀಳಿ, ನರಸಿಂಹರೂಪ ದಿಂದ ಪ್ರಕಟನಾದನು. ಸಮಸ್ತ ದೇವತಾವರ್ಗದವರ ಪ್ರಾರ್ಥನೆಯನ್ನು ಲಾಲಿಸಿ, ಶ್ರೀ ಪರಮಾತ್ಮನು ಮತ್ಸ್ಯಾದಿ ಅವತಾರಗಳನ್ನೆತ್ತಿರುವನು. ಆದರೆ ಕೇವಲ ಒಬ್ಬ ಬಾಲಕನ ಸೊಲ್ಲನ್ನು ಲಾಲಿಸಿ, ಅವನ ವಾಕ್ಯವನ್ನು ಸತ್ಯಮಾಡುವುದಕ್ಕಾಗಿ, ಅನುಗ್ರಹಿಸಿದ ರೂಪವೆಂದರೆ ಶ್ರೀ ನರಸಿಂಹ ಪ್ರಾಧುರ್ಭಾವರೂಪವು, ಇಷ್ಟೇ ಸಾಲದೇ, ಭಕ್ತಪರಾಧೀನನಾದ ಆ ಶರಣಾಗತವತ್ಸಲನ ಕಾರುಣ್ಯಾತಿಶಯದ ಮಹಿಮೆಗೆ ದೃಷ್ಟಾಂತ! ಈ ಕೊನೆಯ ಪದ್ಯದಿಂದ ಜ್ಞಾನಿಶ್ರೇಷ್ಟರಾದ ಶ್ರೀ ದಾಸವರ್ಯರು "ವ್ಯಾಪ್ತಿಸಂಧಿ" ಗತ ವಿಷಯವನ್ನು ಉಪಸಂಹಾರಗೊಳಿಸುತ್ತಾ. ತಮ್ಮ ಬಿಂಬಮೂರ್ತಿ ಜಗನ್ನಾಥವಿಠ್ಠಲನ ಪಾದಪದ್ಮಗಳಿಗೆ ಅರ್ಪಿಸುತ್ತಾ, ತಮ್ಮ ಕುಲದೈವನೂ

ಹಾಗೂ ಉಪಾಸ್ಯಮೂರ್ತಿಯೂ ಆದ ಶ್ರೀ ಲಕ್ಷ್ಮೀನರಸಿಂಹದೇವರನ್ನು "ಸೊಲ್ಲಲಾಲಿಸಿ ಸ್ತಂಭದಿಂದಲಿ ಬಂದ ಭಕುತನಿಗೆ" ಎಂದು ಮನಸಾರೆ ಸ್ಮರಣೆ ಮಾಡಿಕೊಂಡು, ಪ್ರಸಕ್ತಸಂಧಿಯನ್ನು ಮುಕ್ತಾಯಗೊಳಿಸುತ್ತಾರೆ. ॥೩೨॥

ಇಂತು, "ಸರ್ವವ್ಯಾಖ್ಯಾನುಸಾರಸಂಗ್ರಹ" —ಎಂಬ ಮಾಲಿಕೆಯಲ್ಲಿ ಶ್ರೀಮದ್ಧರಿಕಥಾಮೃತಸಾರದಲ್ಲಿ "ವ್ಯಾಪ್ತಿಸಂಧಿ" ಎಂಬ ತೃತೀಯ ಸಂಧಿಯು ಸಮಾಪ್ತವಾಯಿತು.

॥ ಶ್ರೀಮಧ್ವೇಶಾರ್ಪಣಮಸ್ತು ॥

ಮುಂದಿನ ಪ್ರಕಟಣೆ (ಚತುರ್ಥಸಂಪುಟ)

ಶ್ರೀಮದ್ಧರಿಕಥಾಮೃತಸಾರದ

"ಸರ್ವವ್ಯಾಖ್ಯಾನಸಾರಸಂಗ್ರಹ"ದ ಮಾಲಿಕೆಯಲ್ಲಿ

"ಭೋಜನರಸವಿಭಾಗಸಂಧಿ"

(ಚತುರ್ಥ ಸಂಧಿ)